ವಸಾಹತುಶಾಹಿ ಮತ್ತು ದೇಶೀಯ ಆರ್ಥಿಕತೆಗಳ ಮುಖಾಮುಖಿ:

ಕೊಡಗು - ಕೆನರಾ ಆರ್ಥಿಕ ಬಂಡಾಯ

ಅರ್ಥಶಾಸ್ತ್ರದಲ್ಲಿ ಪಿ.ಎಚ್.ಡಿ. ಪದವಿಗಾಗಿ
ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ
ಮಹಾಪ್ರಬಂಧ

ಮೂಲಕ - ಡಾ| ಹಾ.ಮಾ.ನಾ ಸಂಶೋಧನಾ ಕೇಂದ್ರ
ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು, ಉಜಿರೆ. ದ.ಕ.

ಸಂಶೋಧಕರು
ಪ್ರತಿಮಾ ಪಿ. ಎಸ್, ಎಂ. ಎ.

ಮಾರ್ಗದರ್ಶಕರು
ಡಾ| ಬಿ. ಪ್ರಭಾಕರ ಶಿಶಿಲ, ಎಂ. ಎ. ಪಿ.ಎಚ್.ಡಿ.

ಕನ್ನಡ ವಿಶ್ವವಿದ್ಯಾಲಯ ಹಂಪಿ
ವಿದ್ಯಾರಣ್ಯಪುರ, ೫೮೩ ೨೭೬

ನವೆಂಬರ್ ೨೦೧೧

ವಸಾಹತುಶಾಹಿ ಮತ್ತು ದೇಶೀಯ ಆರ್ಥಿಕತೆಗಳ ಮುಖಾಮುಖಿ: ಕೊಡಗು – ಕೆನರಾ ಆರ್ಥಿಕ ಬಂಡಾಯ

ಅರ್ಥಶಾಸ್ತ್ರದಲ್ಲಿ ಪಿ.ಎಚ್.ಡಿ. ಪದವಿಗಾಗಿ
ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ
ಮಹಾಪ್ರಬಂಧ

ಮೂಲಕ - ಡಾ| ಹಾ.ಮಾ.ನಾ ಸಂಶೋಧನಾ ಕೇಂದ್ರ
ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು, ಉಜಿರೆ. ದ.ಕ.

ಸಂಶೋಧಕರು
ಪ್ರತಿಮಾ ಪಿ. ಎಸ್, ಎಂ. ಎ.

ಮಾರ್ಗದರ್ಶಕರು
ಡಾ| ಬಿ. ಪ್ರಭಾಕರ ಶಿಶಿಲ, ಎಂ. ಎ, ಪಿ.ಎಚ್.ಡಿ.

ಕನ್ನಡ ವಿಶ್ವವಿದ್ಯಾಲಯ ಹಂಪಿ
ವಿದ್ಯಾರಣ್ಯಪುರ, ೫೮೩೨೭೬

ನವೆಂಬರ್ ೨೦೧೧.

ದೃಢೀಕರಣ ಪತ್ರ

ವಸಾಹತುಶಾಹಿ ಮತ್ತು ದೇಶೀಯ ಆರ್ಥಿಕತೆಗಳ ಮುಖಾಮುಖಿ: ಕೊಡಗು ಕೆನರಾ ಆರ್ಥಿಕ ಬಂಡಾಯ – ಇದು ನಾನು ಉಜಿರೆಯ ಹಾಮಾನಾ ಸಂಶೋಧನಾ ಕೇಂದ್ರದಲ್ಲಿ ಡಾ। ಪ್ರಭಾಕರ ಶಿಶಿಲ ಇವರ ಮಾರ್ಗದರ್ಶನದಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯದ ಪಿ. ಎಚ್.ಡಿ. ಪದವಿಗಾಗಿ ಸಿದ್ಧಪಡಿಸಿದ ನಿಬಂಧವಾಗಿರುತ್ತದೆ. ಇದು ನನ್ನ ಮೂಲ ಮತ್ತು ಸ್ವತಂತ್ರ ರಚನೆಯಾಗಿದ್ದು, ಇದರ ಯಾವುದೇ ಭಾಗ ಎಲ್ಲೂ ಪ್ರಕಟವಾಗಿಲ್ಲ ಮತ್ತು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲ ಎಂದು ದೃಢೀಕರಿಸುತ್ತೇನೆ.

ಉಜಿರೆ

ನವೆಂಬರ್೨೦೧೧

ಪ್ರತಿಮಾ

ಪ್ರತಿಮಾ ಪಿ.ಎಸ್

(ಸಂಶೋಧಕರು)

ಪ್ರಮಾಣ ಪತ್ರ

ವಸಾಹತುಶಾಹಿ ಮತ್ತು ದೇಶೀಯ ಆರ್ಥಿಕತೆಗಳ ಮುಖಾಮುಖಿ: ಕೊಡಗು ಕೆನರಾ ಆರ್ಥಿಕ ಬಂಡಾಯ ಎಂಬ ಮಹಾ ಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯ ಹಂಪಿಗೆ ಪಿ. ಎಚ್.ಡಿ. ಪದವಿಗಾಗಿ ಪ್ರತಿಮಾ ಪಿ.ಎಸ್. ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಈ ಮಹಾ ಪ್ರಬಂಧವು ಮೂಲರೂಪದಾಗಿದ್ದು, ಇದರ ಯಾವುದೇ ಭಾಗ ಎಲ್ಲೂ ಪ್ರಕಟವಾಗಿಲ್ಲ ಮತ್ತು ಈ ಮೊದಲು ಯಾವುದೇ ಪದವಿಗಾಗಿ ಇದನ್ನು ಸಲ್ಲಿಸಿರುವುದಿಲ್ಲ ಎಂದು ಪ್ರಮಾಣೀಕರಿಸುತ್ತೇನೆ.

ಸುಳ್ಯ ಡಾ|. ಬಿ.ಪ್ರಭಾಕರ ಶಿಶಿಲ

ನವೆಂಬರ್೨೦೧೧ (ಮಾರ್ಗದರ್ಶಕರು)

ಅನುಕ್ರಮಣಿಕೆ

ಅಧ್ಯಾಯ – ೧ ಪ್ರಸ್ತಾವನೆ ಮತ್ತು ವಿನ್ಯಾಸ	೧
ಅಧ್ಯಾಯ- ೨ ವಸಾಹತುಪೂರ್ವದ ಕೆನರಾ ಆರ್ಥಿಕತೆ	೩೧
ಅಧ್ಯಾಯ- ೩ ವಸಾಹತು ಪೂರ್ವದ ಕೊಡಗು ಆರ್ಥಿಕತೆ	೭೪
ಅಧ್ಯಾಯ - ೪ ವಸಾಹತುಶಾಹಿ ಕೆನರಾ ಆರ್ಥಿಕತೆ	೧೧೬
ಅಧ್ಯಾಯ - ೫ ವಸಾಹತುಶಾಹಿ ಕೊಡಗು ಆರ್ಥಿಕತೆ	೧೫೮
ಅಧ್ಯಾಯ - ೬ ಕೊಡಗು ಕೆನರಾ ಆರ್ಥಿಕ ಬಂಡಾಯದ ಹಿನ್ನೋಟ	೧೮೪
ಅಧ್ಯಾಯ – ೭ ಕೊಡಗು ಕೆನರಾ ಆರ್ಥಿಕ ಬಂಡಾಯ	೨೦೪
ಅಧ್ಯಾಯ - ೮ ಸಮೀಕ್ಷೆ – ವಿಶ್ಲೇಷಣೆ ಮತ್ತು ಫಲಿತಗಳು	೨೩೮
ಅಧ್ಯಾಯ – ೯ ಉಪಸಂಹಾರ	೨೭೦

ಅನುಬಂಧ

1.	ಸಮೀಕ್ಷೆಯ ಪ್ರಶ್ನಾವಳಿ	೧
2.	ಪಾರಿಭಾಷಿಕ ಪದಕೋಶ	೯
3.	ಛಾಯಾಚಿತ್ರಗಳು	೧೮

ಪರಾಮರ್ಶನ ಗ್ರಂಥ ಸೂಚಿ	೨೪

ಕೋಷ್ಟಕಗಳು

೨.೧. ಇಂದಿನ ದ.ಕ. ಜಿಲ್ಲೆ ೩೨

೩.೧. ಇಂದಿನ ಕೊಡಗು ಜಿಲ್ಲೆ. ೭೫

೩.೨. ದೊಡ್ಡವೀರರಾಜ ಮತ್ತು ಲಿಂಗರಾಜನ ಭೂಮಾಪಕ ೯೮

೩.೩. ಲಿಂಗರಾಜನ ಹುಕುಂನಾಮೆ ೯೯

೩.೪. ಲಿಂಗರಾಜನ ವೃತ್ತಿ ಸ್ವರೂಪ ೧೦೧

೩.೫. ಲಿಂಗರಾಜನ ಅಳತೆಯ ಮಾನ ೧೦೩

೪.೧. ದ.ಕ. ಜಿಲ್ಲಾಧಿಕಾರಿಗಳ ವಿವರ ೧೨೧

೪.೨. ಒಟ್ಟು ಆದಾಯದಲ್ಲಿ ಭೂ ಕಂದಾಯದ ಪಾಲು ೧೨೮

೪.೩. ಉಪ್ಪಿನ ಕೊಳ್ಳುವ ಮತ್ತು ಮಾರಾಟ ಬೆಲೆ ೧೩೫

೪.೪. ಉಪ್ಪಿನ ಏಕಸ್ವಾಮ್ಯದಿಂದ ಆದಾಯ ೧೩೫

೪.೫. ತಂಬಾಕಿನ ಏಕಸ್ವಾಮ್ಯದ ಆದಾಯ ೧೩೮

೪.೬. ಒಟ್ಟು ಕಂದಾಯದಲ್ಲಿ ಉಪ್ಪು – ತಂಬಾಕು ಏಕಸ್ವಾಮ್ಯದ ಪಾಲು ೧೩೮

೪.೭. ಒಟ್ಟು ಕಂದಾಯದಲ್ಲಿ ಅಬಕಾರಿಯ ಪಾಲು ೧೪೧

೪.೮. ಒಟ್ಟು ಕಂದಾಯದಲ್ಲಿ ಭೂಕಸ್ಟಂಸ್ ಪಾಲು ೧೪೫

೪.೯. ಒಟ್ಟು ಕಂದಾಯದಲ್ಲಿ ಸಮುದ್ರ ಕಸ್ಟಂಸ್ ನ ಪಾಲು ೧೪೯

೮.೧. ವಕ್ತ್ರಗಳ ವಿವರ ೨೩೮

೮.೨. ವಕ್ತ್ರಗಳ ಪ್ರಾದೇಶಿಕ ವಿತರಣೆ ೨೩೯

೮.೩. ವಕ್ತ್ರಗಳ ವೃತ್ತಿ ವಿತರಣೆ ೨೪೦

೮.೪. ವಕ್ತ್ರಗಳ ತಿಳಿವಳಿಕೆಯ ಮೂಲ ೨೪೧

೮.೫. ಬಂಡಾಯದ ಪ್ರಮುಖ ಕಾರಣ. ೨೪೩

೮.೬. ವಕ್ತ್ರಗಳ ಕೃತಿಗಳು. ೨೫೧

ನಕ್ಷೆಗಳು

೨.೧. ಬಾರಕೂರು ರಾಜ್ಯ ೩೮

೨.೨. ಕುಂಬಳೆ ರಾಜ್ಯ ೩೮

೩.೧. ಹಾಲೇರಿ ವಂಶನಕ್ಷೆ ೮೪

೩.೨. ತಕ್ಕರ ವ್ಯವಸ್ಥೆ ೯೦

೪.೧. ದ.ಕ. ದ ವಸಾಹತುಶಾಹಿ ಮುಂಗಡ ಪತ್ರದ ಸ್ವರೂಪ ೧೨೨

೪.೨. ದ.ಕ. ದ ಭೂಮಿಯ ಪ್ರಕಾರಗಳು ೧೨೪

೪.೩. ದ.ಕ. ದ ಆಂತರಿಕ ವ್ಯಾಪಾರ ಸಂಯೋಜನೆ ೧೪೩

೪.೪. ದ.ಕ. ದ ಬಾಹ್ಯ ವ್ಯಾಪಾರ ಸಂಯೋಜನೆ ೧೪೭

ಚಿತ್ರಗಳು

೨.೧. ಹರಿಹರನ ಕಂದಾಯ ವ್ಯವಸ್ಥೆ ೪೫

೨.೨. ಸರಕಾರದ ಕಂದಾಯ ವ್ಯವಸ್ಥೆ ೪೬

೪.೧. ದ.ಕ. ದ ಭೂಕಂದಾಯದ ಪಾಲಿನ ಕುಸಿತ ೧೨೯

೪.೨. ಗೇಣಿ ವ್ಯವಸ್ಥೆಯಲ್ಲಿ ರೈತನ ಪಾಲು ೧೩೨

೪.೩. ಒಟ್ಟು ಕಂದಾಯದಲ್ಲಿ ಉಪ್ಪು – ತಂಬಾಕು ಏಕಸ್ವಾಮ್ಯದ ಪಾಲು ೧೩೯

೪.೪. ದ.ಕ. ಜಿಲ್ಲೆಯ ಕಂದಾಯ ಸಂಯೋಜನೆ (೧೭೯೯-೦೦) ೧೫೦

೪.೫. ದ.ಕ. ಜಿಲ್ಲೆಯ ಕಂದಾಯ ಸಂಯೋಜನೆ (೧೮೩೬-೩೭) ೧೫೧

೮.೧. ಬಂಡಾಯದಲ್ಲಿ ಹಿರಿಯರ ಪಾಲ್ಗೊಳ್ಳುವಿಕೆ ೨೪೨

೮.೨. ಆರಂಭಿಕ ಯಶಸ್ಸಿನ ಕಾರಣಗಳು ೨೪೫

೮.೩. ಬಂಡಾಯದ ಸೋಲಿಗೆ ಕಾರಣಗಳು ೨೪೬

೮.೪. ಅಮರ ಸುಳ್ಯದ ಅಲಕ್ಷ್ಯಕ್ಕೆ ಕಾರಣಗಳು ೨೪೭

೮.೫. ಬಂಡಾಯದ ನೆನಪಿನ ಕಾರಣಗಳು ೨೪೮

೮.೬. ರೈತ ಬಂಡಾಯಕ್ಕೆ ಪ್ರಚೋದನೆ ೨೫೨

೮.೭. ರೈತರ ಪ್ರಮುಖ ಸಮಸ್ಯೆಗಳು ೨೫೩

೮.೮. ರೈತರ ಹೋರಾಟದ ಸೋಲಿಗೆ ಕಾರಣಗಳು ೨೫೪

೮.೯. ರೈತರ ಸಮಸ್ಯೆಗೆ ಪರಿಹಾರಗಳು ೨೫೫

ಭೂಪಟಗಳು

೧.೧ ಭಾರತದಲ್ಲಿ ಐರೋಪ್ಯ ನೆಲೆಗಳು	೪
೨.೧. ವಸಾಹತು ಕಾಲದ ದಕ್ಷಿಣ ಕನ್ನಡ	೩೩
೨.೨. ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆ	೩೪
೩.೧. ಇಂದಿನ ಕೊಡಗು	೭೬
೩.೨. ೧೭೭೩ರ ಹಿಂದಿನ ಕೊಡಗು	೮೯
೩.೩. ೧೭೭೩ -೧೮೦೪ ರವರೆಗಿನ ಕೊಡಗು	೯೫
೪.೧. ದ.ಕ.ದಲ್ಲಿ ವಸಾಹತುಶಾಹಿಗೆ ಪ್ರತಿರೋಧ	೧೧೮
೪.೨. ದ.ಕ. ದ ಉಪ್ಪು ಕೇಂದ್ರಗಳು	೧೩೬
೪.೩. ಬ್ರಿಟಿಷ್ ಕಾಲದ ಕಸ್ಟಂಸ್ ಕೇಂದ್ರಗಳು	೧೪೮
೫.೧. ೧೮೦೪ ರಿಂದ ೧೮೩೪ ರವರೆಗಿನ ಕೊಡಗು	೧೬೬
೬.೧. ಕೂಟು ದಂಗೆ ನಡೆದ ಸ್ಥಳಗಳು	೧೯೪
೭.೧. ಕಲ್ಯಾಣ ಸ್ವಾಮಿಯ ದಂಗೆ ನಡೆದ ಸ್ಥಳಗಳು	೨೨೦

ಅಧ್ಯಾಯ ೧
ಪ್ರಸ್ತಾವನೆ ಮತ್ತು ವಿನ್ಯಾಸ

೧.೧ ವಿಷಯ ಪ್ರವೇಶಿಕೆ

ಇತಿಹಾಸವನ್ನು ವರ್ಗ ಸಂಘರ್ಷದ ದಾಖಲೆ ಎಂಬ ಕಾರ್ಲ್‌ಮಾರ್ಕ್ಸ್‌ನ ವ್ಯಾಖ್ಯಾನವನ್ನು ಸಮರ್ಥಿಸುವ ಆರ್ಥಿಕ ಹೋರಾಟಗಳು ವಸಾಹಾತುಶಾಹಿ ಆಡಳಿತ ಕಾಲದಲ್ಲಿ ಈ ದೇಶದಲ್ಲಿ ಅಲ್ಲಲ್ಲಿ ನಡೆದಿವೆ. ಭಾರತದಲ್ಲಿ ನಡೆದದ್ದು ವಸಾಹಾತುಶಾಹಿ ಮತ್ತು ರೈತರ ನಡುವಣ ವರ್ಗ ಸಂಘರ್ಷ. ತಮ್ಮ ಬದುಕನ್ನು ಕಳಕೊಳ್ಳುವ ಭೀತಿ ರೈತರು ಬಂಡೇಳಲು ಕಾರಣ. ಸ್ವಾತಂತ್ರ್ಯೋತ್ತರ ಭಾರತದಲ್ಲೂ ರೈತರು ತಮ್ಮ ಅಸ್ತಿತ್ವಕ್ಕಾಗಿ ಹೋರಾಟ ಮಾಡಬೇಕಾದ ಪ್ರಸಂಗಗಳು ಸಾಕಷ್ಟಿವೆ. ಜಾಗತೀಕರಣ ಪ್ರಕ್ರಿಯೆಯು ಅಭಿವೃದ್ಧಿಯೆಂಬ ಕಬಂಧ ಬಾಹುಗಳನ್ನು ಚಾಚಿ ರೈತರನ್ನು ಶೋಷಿಸುತ್ತಿರುವ ವರ್ತಮಾನದಲ್ಲಿ ರೈತ ಸಂಘರ್ಷ ಅನಿವಾರ್ಯವಾಗಿ ಚಿಟ್ಟಿದೆ. ಪ್ರಭುತ್ವ ಮತ್ತು ರೈತರ ನಡುವಣ ತಿಕ್ಕಾಟಕ್ಕೆ ಸಾರ್ವಕಾಲಿಕತೆಯ ಮತ್ತು ಸಾರ್ವತ್ರಿಕತೆಯ ಸ್ವರೂಪ ಲಭ್ಯವಾಗಿದೆ.

ಅಲೆಮಾರಿ ಜೀವನಕ್ಕೆ ಅಂತ್ಯ ಹಾಡಿ ಮಾನವ ಒಂದೆಡೆ ನೆಲೆನಿಂತು ಕೃಷಿ ಚಟುವಟಿಕೆಗಳನ್ನು ಆರಂಭಿಸಿದ ತರುವಾಯ ಸಹಜವಾಗಿ ಕೃಷಿಪರ ಚಿಂತನೆಗಳು ಹುಟ್ಟಿಕೊಂಡವು.ಊಳಿಗಮಾನ್ಯ ವ್ಯವಸ್ಥೆಯ (Feudalism) ಕಾಲದಲ್ಲಿ ಮತ್ತು ಆ ಬಳಿಕ ಹದಿನಾರನೆಯ ಶತಮಾನದವರೆಗೂ ಬಲಾಢ್ಯರು ಭೂಮಾಲಿಕರಾಗಿ ,ಬಲಹೀನರು ರೈತರಾಗಿ ಅಥವಾ ಗುಲಾಮರಾಗಿ ಬದುಕು ಕಂಡುಕೊಂಡರು. ಮಧ್ಯಮ ವರ್ಗೀಯರು ಸಣ್ಣರೈತರಾಗಿ ವರ್ಣಾಂತರ ಹೊಂದಿದರು.ಹದಿನೈದು ಮತ್ತು ಹದಿನಾರನೆಯ ಶತಮಾನಗಳ ಪುನರುಜ್ಜೀವನ (Renaissance) ಮತ್ತು ಧರ್ಮಸುಧಾರಣಾ (Reformation) ಚಳುವಳಿಗಳು ಆರ್ಥಿಕ ಜೀವನದಲ್ಲಿ ಮಾರ್ಪಾಡಿಗೆ ಕಾರಣವಾದವು.ಪರಿಣಾಮವಾಗಿ ಯುರೋಪಿನಲ್ಲಿ ವಾಣಿಜ್ಯ ಪಂಥವೆಂಬ (Mercantilism) ಹೊಸ ಆರ್ಥಿಕ ಚಿಂತನೆಯ ಆವಿರ್ಭಾವವಾಯಿತು. ವಾಣಿಜ್ಯ ಪಂಥವು, ವ್ಯಾಪಾರದಿಂದ ಬಲಿಷ್ಠ ದೇಶವನ್ನು ಕಟ್ಟುವ ವ್ಯಾಪಾರ ರಾಷ್ಟ್ರೀಯತೆಯ [Trade Nationalism] ಪರಿಕಲ್ಪನೆಯನ್ನು ಹುಟ್ಟು ಹಾಕಿ ಅಧಿಕ ಚಿನ್ನ, ಅಧಿಕ ಸಂಪತ್ತು, ಅಧಿಕ ಅಧಿಕಾರ ಎಂಬ ಘೋಷಣೆಯೊಡನೆ ಪ್ರಭುತ್ವಕ್ಕೆ ಅಪರಿಮಿತ ಅಧಿಕಾರವನ್ನು ಒದಗಿಸಿಕೊಟ್ಟಿತು.[೧] ಆರ್ಥಿಕ ಅಭಿವೃದ್ಧಿಗೆ ಬಂಡವಾಳ ಸಂಚಯನದ ಅಗತ್ಯವನ್ನು ಮನವರಿಕೆ ಮಾಡಿಕೊಡಲು ವಾಣಿಜ್ಯ ಪಂಥಕ್ಕೆ ಸಾಧ್ಯವಾದುದರಿಂದ ಯುರೋಪಿನಲ್ಲಿ ಕೂಡು ಬಂಡವಾಳ ಸಂಸ್ಥೆಗಳು ಹುಟ್ಟಿಕೊಂಡು ವ್ಯಾಪಾರ ವಿಸ್ತರಣೆಯಿಂದ ತಮ್ಮ ಶೇರುದಾರರಿಗೆ ಅಧಿಕ

ಲಾಭಾಂಶ ನೀಡಲು ಪೈಪೋಟಿ ನಡೆಸತೊಡಗಿದವು. ಈಸ್ಟ್ ಇಂಡಿಯಾ ಕಂಪೆನಿ ಭಾರತಕ್ಕೆ ಬಂದು ತನ್ನ ಚಟುವಟಿಕೆಗಳನ್ನು ಆರಂಭಿಸಿದುದ್ದನ್ನು ಈ ಹಿನ್ನೆಲೆಯಲ್ಲಿ ಪರಿಭಾವಿಸಬೇಕಾಗುತ್ತದೆ.[೨]

ಈಸ್ಟಿಂಡಿಯಾ ಕಂಪೆನಿ ಒಂದು ಪ್ರತಿಪಕ್ಷವಾಗಿ (Anti Thesis) ಭಾರತದ ಆರ್ಥಿಕ, ಸಾಂಸ್ಕೃತಿಕ ಜೀವನದ ಮೇಲೆ ಪ್ರಭಾವ ಬೀರತೊಡಗಿದಾಗ ಸ್ಥಳೀಯ ಪ್ರಭುತ್ವ ಅದರ ಪರಿಣಾಮಗಳ ಬಗ್ಗೆ ಹೆಚ್ಚು ಯೋಚಿಸಲಿಲ್ಲವೆನ್ನುವುದಕ್ಕೆ ದೆಹಲಿ ಸುಲ್ತಾನ ಜಹಂಗೀರನು ಇಂಗ್ಲೀಷರಿಗೆ ಸೂರತ್‌ನಲ್ಲಿ ಕ್ರಿ.ಶ ೧೬೧೩ ರಲ್ಲಿ ವ್ಯಾಪಾರ ಕೋಠಿಯನ್ನು ಸ್ಥಾಪಿಸಲು ಅನುಮತಿ ನೀಡಿದ್ದು ದೃಷ್ಟಾಂತವಾಗಿದೆ.[೩] ಈ ಆರಂಭಿಕ ಯಶಸ್ಸಿನಿಂದ ತೃಪ್ತಿ ಹೊಂದಿದ ಇಂಗ್ಲೆಂಡಿನ ಮಹಾರಾಜ ೧ನೇ ಜೇಮ್ಸ್ ಸರ್ ಥಾಮಸ್ ರೋನನ್ನು ವ್ಯಾಪಾರ ರಿಯಾಯತಿಗಳನ್ನು ಪಡೆಯುವುದಕ್ಕಾಗಿ ತನ್ನ ರಾಯಭಾರಿಯಾಗಿ ಭಾರತಕ್ಕೆ ಕಳುಹಿಸಿಕೊಟ್ಟ.[೪] ಪರಿಣಾಮವಾಗಿ ಅಹಮದಾಬಾದ್ ಮತ್ತು ಬ್ರೋಚ್‌ಗಳಲ್ಲಿ ವ್ಯಾಪಾರ ಕೋಠಿಗಳು ಸ್ಥಾಪನೆಗೊಂಡವು. ಫ್ರಾನ್ಸಿಸ್ ಡೇ. ಕ್ರಿ.ಶ ೧೬೩೯ ರಲ್ಲಿ ಚಂದ್ರಗಿರಿ ರಾಜನಿಂದ ಒಂದು ನಿವೇಶನವನ್ನು ಕೊಂಡುಕೊಂಡು ಸೈಂಟ್ ಜಾರ್ಜ್ ಕೋಟೆಯನ್ನು ನಿರ್ಮಿಸಿ ಮದ್ರಾಸ್ ನಗರವನ್ನು ಸ್ಥಾಪಿಸಿದನು. ಕ್ರಿ.ಶ 1684 ರಲ್ಲಿ ಅದು ದೊಡ್ಡ ನಗರವಾಗಿ ಪೂರ್ವ ಭಾರತದ ಪ್ರಮುಖ ವ್ಯಾಪಾರ ಕೇಂದ್ರವಾಯಿತು.[೫]


ಕ್ರಿ.ಶ. ೧೬೬೮ ರಲ್ಲಿ ಇಂಗ್ಲೆಂಡಿನ ರಾಜ ೨ ನೇ ಚಾರ್ಲ್ಸ್‌ನು ಮುಂಬಯಿಯನ್ನು ವಾರ್ಷಿಕ ಹತ್ತು ಪೌಂಡ್ ಗುತ್ತಿಗೆಯ ಆಧಾರದ ಮೇಲೆ ಈಸ್ಟ್ ಇಂಡಿಯಾ ಕಂಪೆನಿಗೆ ಬಿಟ್ಟು ಕೊಟ್ಟ. ಅವನಿಗೆ ಅದು ಪೋರ್ಚುಗಲ್ ದೊರೆಯ ಸೋದರಿಯಾದ ಕ್ಯಾಥರೀನ್‌ಳನ್ನು ವಿವಾಹವಾದುದಕ್ಕೆ ವರದಕ್ಷಿಣೆ ರೂಪದಲ್ಲಿ ದೊರೆತ ಸ್ಥಳವಾಗಿತ್ತು.[೬] ಈಸ್ಟಿಂಡಿಯಾ ಕಂಪೆನಿಯ ವಶವಾದ ಮೇಲೆ ಅದುವರೆಗೆ ಕೇವಲ ಒಂದು ಮೀನುಗಾರರ ಹಳ್ಳಿಯಾಗಿದ್ದ ಮುಂಬೈ ಸೂರತ್‌ಗಿಂತ ದೊಡ್ಡ ಪ್ರೆಸಿಡೆನ್ಸಿಯಾಗಿ ಪಶ್ಚಿಮದಲ್ಲಿ ಬಹುದೊಡ್ಡ ವ್ಯಾಪಾರ ಕೇಂದ್ರವಾಯಿತು.

ಕ್ರಿ.ಶ ೧೬೯೬ ರಲ್ಲಿ ಈಸ್ಟ್ ಇಂಡಿಯಾ ಕಂಪೆನಿ ಹೂಗ್ಲಿ ನದಿಯ ತೀರದ ಸುತಮತಿ, ಕಾಳಿಕಟ್ ಮತ್ತು ಗೋವಿಂದಪುರ ಎಂಬ ಮೂರು ಹಳ್ಳಿಗಳನ್ನು ರೈತರುಗಳಿಂದ ತೆಗೆದುಕೊಂಡು ಕಲ್ಕತ್ತ ನಗರವನ್ನು ಬೆಳೆಸಿತು.[೭] ಅದಕ್ಕೆ ಮೊದಲೇ ಮೊಘಲ್ ಚಕ್ರವರ್ತಿ ಷಹಜಹಾನನು ಬಂಗಾಳದಲ್ಲಿ ವ್ಯಾಪಾರ ಕೋಠಿಗಳನ್ನು ಆರಂಭಿಸಲು ಬ್ರಿಟಿಷರಿಗೆ ಅನುಮತಿ ನೀಡಿದ್ದನು. ಕ್ರಿ.ಶ. ೧೬೯೬ ರಲ್ಲಿ ಜಾಬ್‌ಚಾರ್‌ನಾಕ್ ಕಲ್ಕತ್ತದ ಸುತ್ತ ಪೋರ್ಟ್‌ವಿಲಿಯಂ ಕೋಟೆಯನ್ನು ಕಟ್ಟಿದ. ಅದು ಕ್ರಿ.ಶ ೧೭೧೧ ರವರೆಗೆ ಬ್ರಿಟಿಷ್ ಭಾರತದ ರಾಜಧಾನಿಯಾಗಿತು[೮]. ಕ್ರಿ.ಶ ೧೭೧೭ರಲ್ಲಿ ಮೊಘಲ್ ಚಕ್ರವರ್ತಿ ಫರುಕ್ಸಿಯಾರ್ ಈಸ್ಟ್

ಇಂಡಿಯಾ ಕಂಪೆನಿಗೆ ವರ್ಷಕ್ಕೆ ಕೇವಲ ರೂ ೩೦೦ ರ ಪ್ರತಿಫಲದ ಆಧಾರದಲ್ಲಿ ಬಂಗಾಳದಲ್ಲಿ ಸುಂಕರಹಿತ ವ್ಯಾಪಾರ ನಡೆಸಲು ಅನುಮತಿ ನೀಡಿದ. ಈ ಒಪ್ಪಂದವು ಕಂಪೆನಿಯ ಮ್ಯಾಗ್ನಾಕಾರ್ಟ್ ಎನಿಸಿಕೊಂಡಿದೆ. ಅದಾಗಲೇ ಭಾರತದಲ್ಲಿ ಅಲ್ಲಲ್ಲಿ ಐರೋಪ್ಯ ನೆಲೆಗಳು ಸ್ಥಾಪನೆಯಾಗಿದ್ದವು (ನೋಡಿ ಭೂಪಟ ೧.೧) ಅದುವರೆಗೆ ಯುರೋಪಿಯನ್ನರಿಗೆ ಯಾವುದೇ ಪ್ರತಿರೋಧ ಎದುರಾಗದೇ ಇದ್ದುದ್ದು ಅವರು ತಮ್ಮ ನೆಲೆಗಳನ್ನು ವಿಸ್ತರಿಸಿಕೊಳ್ಳಲು ಕಾರಣವಾಯಿತು. ಪ್ರತಿರೋಧ ಕಂಡು ಬಂದದ್ದು ಈಸ್ಟಿಂಡಿಯಾ ಕಂಪೆನಿ ಒಂದು ವಸಾಹತುಶಾಹಿ ಶಕ್ತಿಯಾಗಿ ಬೆಳೆದು ತನ್ನ ವಾಣಿಜ್ಯ ನೀತಿಯಿಂದ [Commercial Policy] ರೈತರ ಶೋಷಣೆ ನಡೆಸ ಹೊರಟಾಗ ಮಾತ್ರ. ಬ್ರಿಟಿಷ್ ವಸಾಹತುಶಕ್ತಿಯನ್ನು ರಾಜರುಗಳು ಎದುರಿಸಿದ್ದರೆ ಅದಕ್ಕೆ ತಮ್ಮ ರಾಜತ್ವ ಕಳಕೊಳ್ಳುವ ಭೀತಿ ಕಾರಣವಾಗಿತ್ತೇ ಹೊರತು ಪ್ರಜೆಗಳ ಕಲ್ಯಾಣ ನಷ್ಟವಾದುದು [Welfare loss] ಕಾರಣವಾಗಿರಲಿಲ್ಲ ಎನ್ನುವುದನ್ನು ಗಮನಿಸಬೇಕು. ಇತಿಹಾಸದಲ್ಲಿ ಹೆಚ್ಚು ದಾಖಲಾಗದ ರೈತ ಹೋರಾಟಗಳೇ ಇತಿಹಾಸವನ್ನು ನಿರ್ಮಿಸಿದ್ದು ಮತ್ತು ವಸಾಹತುಶಾಹಿ ಶಕ್ತಿಯನ್ನು ೧೯೪೭ರವರೆಗೂ ಕಾಡಿದ್ದು ಎನ್ನುವುದು ಉಲ್ಲೇಖಿಸಲೇಬೇಕಾದ ಬಹುಮುಖ್ಯ ಅಂಶವಾಗಿದೆ. ಅಂತಹ ರೈತ ಹೋರಾಟಗಳಲ್ಲಿ ೧೮೩೭ರ ಕೊಡಗು - ಕೆನರಾ ಆರ್ಥಿಕ ಬಂಡಾಯ ಅತ್ಯಂತ ಪ್ರಮುಖವಾದುದು.[೧೦]

ಹದಿನೇಳನೆಯ ಶತಮಾನದ ಆದಿಯಲ್ಲಿ ಉತ್ತರ ಭಾರತದಲ್ಲಿ ತನ್ನ ಬೇರುಗಳನ್ನು ಗಟ್ಟಿಗೊಳಿಸಿದ ಈಸ್ಟಿಂಡಿಯಾ ಕಂಪೆನಿ ದಕ್ಷಿಣ ಕನ್ನಡವನ್ನು ಕ್ರಿ.ಶ ೧೭೯೯ರ ತನ್ನ ತೆಕ್ಕೆಗೆ ತೆಗೆದುಕೊಂಡು ಮೂವತ್ತೈದು ವರ್ಷಗಳ ಬಳಿಕ ಕ್ರಿ.ಶ ೧೮೩೪ ರಲ್ಲಿ ಕೊಡಗಿನಲ್ಲಿ ರಾಜತ್ವವನ್ನು ಕೊನೆಗೊಳಿಸಿ ಅದು ವಸಾಹತುಶಾಹಿ ಆಳ್ವಿಕೆಯನ್ನು ಆರಂಭಿಸಿತು. ಸ್ಥಳೀಯ ರಾಜರುಗಳನೇ ಪೂರ್ವಪಕ್ಷ [Thesis] ಮತ್ತು ಪ್ರತಿಪಕ್ಷ [Antithesis] ವನ್ನಾಗಿಸಿ ಅವರ ನಡುವಣ ಸಂಘರ್ಷದಲ್ಲಿ ತಾನೊಂದು ಪಕ್ಷ ವಹಿಸಿ ಆ ಬಳಿಕ ಗೆದ್ದ ರಾಜನನ್ನು ನಿಧಾನವಾಗಿ ಮಣಿಸಿ ವಸಾಹತು ಶಕ್ತಿ ವಿಸ್ತರಣೆಗೊಂಡಿತು. ಕ್ರಿ.ಶ ೧೬೦೦ ರಿಂದ ಕ್ರಿ.ಶ.೧೮೩೪ ನಡುವಣ ಅವಧಿಯಲ್ಲಿ ಯುರೋಪಿನಲ್ಲಾದ ಆರ್ಥಿಕ ಚಿಂತನಾ ಪಲ್ಲಟಗಳು ವಸಾಹತು ನೀತಿಯಲ್ಲಿ ಕೆಲವು ಅನಿವಾರ್ಯ ಮಾರ್ಪಾಡುಗಳನ್ನು ಉಂಟುಮಾಡಿದವು.

೧.೧. ಭಾರತದಲ್ಲಿ ಐರೋಪ್ಯ ನೆಲೆಗಳು



೧೮ ನೇ ಶತಮಾನದಲ್ಲಿ ಯುರೋಪಿನಲ್ಲಿ ವಾಣಿಜ್ಯ ಪಂಥಕ್ಕೆ ಪ್ರತಿಪಕ್ಷವಾಗಿ ಕೃಷಿ ಪಂಥವು (Physiocracy) ಹುಟ್ಟಿಕೊಂಡಿತು.[೧೧] ಫ್ರೆಂಚ್ ಕೃಷಿಕರು ಆವಿಷ್ಕಾರಿ ರೈತ ವಿಜ್ಞಾನಿಗಳಾಗಿ ಕೃಷಿಯು ಒಂದು ಲಾಭದಾಯಕ ಉದ್ದಿಮೆಯಾಗಬಲ್ಲದು ಎನ್ನುವುದನ್ನು ಪ್ರಯೋಗಸಿದ್ಧ ಎಂದು ಮಾಡಿ ತೋರಿಸಿದ್ದರು. ಅವರ ಸಹಜ ವ್ಯವಸ್ಥೆ (Natural order) ಪರಿಕಲ್ಪನೆಯಿಂದ ಸ್ಫೂರ್ತವಾಗಿ ಸೃಷ್ಟಿಯಾದ ಹಸ್ತಕ್ಷೇಪ ರಾಹಿತ್ಯ ನೀತಿ (Laissez Faire policy] ವಾಣಿಜ್ಯ.ಪಂಥದ ಬಲಾಢ್ಯ ಪ್ರಭುತ್ವ ಪರಿಕಲ್ಪನೆಗೆ ತದ್ವಿರುದ್ಧವಾದುದಾಗಿತ್ತು.[೧೨] ಹಸ್ತಕ್ಷೇಪರಾಹಿತ್ಯ ನೀತಿಯಿಂದಾಗಿ ಈಸ್ಟಿಂಡಿಯಾ ಕಂಪೆನಿಯ ವ್ಯವಹಾರ ಮತ್ತು ಅವ್ಯವಹಾರಗಳಲ್ಲಿ ಬ್ರಿಟನಿನ ರಾಣಿಗೆ ಮೂಗು ತೂರಿಸುವುದು ಸುಲಭ ಸಾಧ್ಯವಾಗಿರಲಿಲ್ಲ. ಆಡಂಸ್ಮಿತ್ ಈ ನೀತಿಯ ಅತಿ ಸಮರ್ಥ ಹರಿಕಾರನಾಗಿ ಶ್ರಮ ವಿಭಜನೆಯನ್ನು (Division of labour) ಸಹಜ ವ್ಯವಸ್ಥೆಯೆಂದು ಪರಿಗಣಿಸಿ ಅದು ವೆಚ್ಚ ವ್ಯತ್ಯಾಸಕ್ಕೆ ಮತ್ತು ವೆಚ್ಚ ವ್ಯತ್ಯಾಸವು ವ್ಯಾಪಾರಕ್ಕೆ ಕಾರಣವೆಂದು ಪ್ರತಿಪಾದಿಸಿ , ಅಂತಾರಾಷ್ಟ್ರೀಯ ವ್ಯಾಪಾರವನ್ನು ಶ್ರಮ ವಿಭಜನೆಯ ಅಂತಾರಾಷ್ಟ್ರೀಯ ವಿಸ್ತರಣೆ ಎಂದು ಕರೆದದ್ದನ್ನು ಈಸ್ಟಿಂಡಿಯಾ ಕಂಪೆನಿಯು ತನ್ನ ಶೋಷಕ ನೀತಿಗೆ ತಾತ್ವಿಕ ಸಮರ್ಥನೆಯನ್ನಾಗಿ ಬಳಸಿಕೊಂಡಿತು.[೧೩]

ಆಡಂಸ್ಮಿತ್‌ನ ವೆಲ್ತ್ ಓಫ್ ನೇಷನ್ಸ್ ಕೃತಿ ಪ್ರಕಟನೆಗೊಂಡಾಗ ಬ್ರಿಟನ್ ಕೈಗಾರಿಕಾ ಕ್ರಾಂತಿಯ ಯುಗವನ್ನು ಪ್ರವೇಶಿಸಿತ್ತು[೧೪]. ವಸಾಹತುಶಾಹಿಯು ಈಗ ಕೇವಲ ಕೃಷಿ ಸರಕು ಆಯಾತ - ನಿರ್ಯಾತಕ್ಕಷ್ಟೇ ತನ್ನನ್ನು ಸೀಮಿತಗೊಳಿಸದೆ ಬ್ರಿಟನ್ನಿನ ಕೈಗಾರಿಕೆಗಳಿಗೆ ಕಚ್ಚಾ ಸರಕುಗಳನ್ನು ಪೂರೈಕೆ ಮಾಡುವ ಕಾರ್ಯವನ್ನು ಹಾಗೂ ಬ್ರಿಟನ್ನಿನ ತಯಾರಿಕಾ ಸರಕುಗಳಿಗೆ (Manufactured Items) ಮಾರುಕಟ್ಟೆ ಹುಡುಕುವ ಮುತಾಲಿಕನ (agent) ಪಾತ್ರವನ್ನು ವಹಿಸತೊಡಗಿತು. ಬ್ರಿಟನ್ನಿನ ವಸಾಹತುಶಾಹಿತ್ವ (Colonialism), ಸಾಮ್ರಾಜ್ಯಶಾಹಿತ್ವವಾಗಿ (Imperlialism) ಪರಿವರ್ತನೆಗೊಂಡದ್ದು ಇದೇ ಉದ್ದೇಶದಿಂದ. ತೋರಿಕೆಗೆ ಈಸ್ಟಿಂಡಿಯಾ ಕಂಪೆನಿ ಭಾರತದಲ್ಲಿ ಸಾಮ್ರಾಜ್ಯದ ವಿಸ್ತರಣೆ ಮಾಡಿದಂತೆ ಕಂಡುಬಂದರೂ ಅದರ ಹಿಂದೆ ಇದ್ದುದ್ದು ಬ್ರಿಟನ್ನಿನ ರಾಣಿಯ ರಕ್ಷಾ ಕವಚ ಎನ್ನುವುದನ್ನು ಮರೆಯುವಂತಿಲ್ಲ. ಕೊಡಗು ಬ್ರಿಟನ್ನಿನ ಸಾಮ್ರಾಜ್ಯ ವಿಸ್ತರಣಾ ದಾಹಕ್ಕೆ ಬಲಿಯಾಗಿ ತನ್ನ ದೇಶೀಯತೆಯನ್ನು ಕಳಕೊಂಡದನ್ನು ಈ ಹಿನ್ನೆಲೆಯಲ್ಲಿ ಪರಿಭಾವಿಸಬೇಕಾಗುತ್ತದೆ. [೧೫]

ಭಾರತವನ್ನು ತನ್ನ ವಸಾಹತನ್ನಾಗಿ ಈಸ್ಟ್-ಇಂಡಿಯಾ ಕಂಪನಿ ಪರಿವರ್ತಿಸುವಾಗ ಅದಕ್ಕೆ ತಾತ್ವಿಕ ಸಮರ್ಥನೆಯೊದಗಿಸಿದ್ದು ಡೇವಿಡ್ ರಿಕಾರ್ಡೋನ ತುಲನಾತ್ಮಕ ವೆಚ್ಚ ವ್ಯತ್ಯಾಸ ಸಿದ್ಧಾಂತ (Theory of Comparative Costs)[೧೬] ಉತ್ಪಾದನಾ ವೆಚ್ಚದ ತುಲನಾತ್ಮಕ ವ್ಯತ್ಯಾಸವು ನಿರ್ಯಾತ ಆಯಾತಗಳಿಗೆ ಕಾರಣವೆನ್ನುವ ಈ ಸಿದ್ಧಾಂತವು ಕೂಲಿ ಮತ್ತು ಲಾಭಗಳ ಸಂಘರ್ಷವನ್ನು ಬಿಂಬಿಸುತ್ತದೆ. ಉತ್ಪಾದನಾ ವೆಚ್ಚ ಕಡಿಮೆಯಾದರೆ ನಿರ್ಯಾತ

ಹೆಚ್ಚಾಗಿ ವ್ಯಾಪಾರ ಶಿಲ್ಕು (Balance of Trade) ಅನುಕೂಲಕರವಾಗುವುದರಿಂದ ಉತ್ಪಾದಕರು ವೆಚ್ಚ ನಿಯಂತ್ರಣ ಕ್ರಮಗಳಿಗೆ ಮೊರೆಹೋಗುವುದು ಸಹಜ. ಕೂಲಿಯು ವೆಚ್ಚದ ಅತಿ ಪ್ರಮುಖ ನಿರ್ಧಾರಕವಾಗಿರುವುದರಿಂದ ಕೂಲಿಯನ್ನು ಕಡಿಮೆ ಮಾಡಿ ವೆಚ್ಚವನ್ನು ಇಳಿಸಲು ಉತ್ಪಾದಕರು ಯತ್ನಿಸುತ್ತಾರೆ. ಹಿತಾಸಕ್ತಿಗಳ ಸಾಮರಸ್ಯವನ್ನು ಪ್ರತಿಪಾದಿಸಿದ್ದರೂ ಆಡಂಸ್ಮಿತ್ ಕೂಲಿ ಮತ್ತು ಲಾಭಗಳ ನಡುವೆ ಸಂಘರ್ಷವಿರುವುದನ್ನು ಸ್ಪಷ್ಟವಾಗಿ ಗುರುತಿಸಿದ್ದ[೧೭]. ಇದರ ಮುಂದುವರಿಕೆಯಾಗಿ ಪ್ರತಿಪಾದನೆಗೊಂಡ ಕಾರ್ಲ್‌ಮಾರ್ಕ್ಸ್‌ನ ಮಿಗುತೆ ಮೌಲ್ಯ ಸಿದ್ಧಾಂತ (Theory of Surplus Value) ಲಾಭವನ್ನು ಹೆಚ್ಚಿಸಲು ಉತ್ಪಾದಕರು ಕೈಗೊಳ್ಳುವ ಕ್ರಮಗಳ ವಿವರ ನೀಡುತ್ತದೆ.[೧೮] ವಸಾಹತು ದೇಶಗಳಿಂದ ಕಚ್ಚಾ ಸರಕುಗಳನ್ನು ಬ್ರಿಟನ್ನಿಗೆ ಒಯ್ದು ಅಲ್ಲಿಂದ ಸಿದ್ಧ ಸರಕುಗಳನ್ನು ತಂದು ವಸಾಹತು ದೇಶಗಳಲ್ಲಿ ಮಾರಾಟ ಮಾಡುವುದು, ತನ್ನ ಶೇರುದಾರರಿಗೆ ಹೆಚ್ಚು ಲಾಭಾಂಶ (Dividend) ನೀಡಲು ಈಸ್ಟಿಂಡಿಯಾ ಕಂಪೆನಿ ಕಂಡುಕೊಂಡ ರಾಜಮಾರ್ಗ. ಆದರೆ ಅದಕ್ಕಿಂತಲೂ ಹೆಚ್ಚು ಮಹತ್ವವನ್ನು ವಸಾಹತು ಶಕ್ತಿ ನೀಡಿದ್ದು ಭೂಕಂದಾಯದ ಹೆಚ್ಚಳಕ್ಕೆ. ಭೂಕಂದಾಯದ ಹೆಚ್ಚಳಕ್ಕೂ ರೈತಬಂಡಾಯಗಳಿಗೂ ನೇರ ಸಂಬಂಧವಿರುವುದನ್ನು (Functional relationship) ಹತ್ತೊಂಬತ್ತನೆಯ ಶತಮಾನದ ಪೂರ್ವಾರ್ಧದ ರೈತ ಬಂಡಾಯದ ಅಧ್ಯಯನಗಳು ಸ್ಪಷ್ಟಪಡಿಸುತ್ತವೆ. [೧೯]

ಹತ್ತೊಂಬತ್ತನೆಯ ಶತಮಾನದ ಪೂರ್ವಾರ್ಧದಲ್ಲಿ ಕರ್ನಾಟಕದ ಉದ್ದಗಲಕ್ಕೆ ನಡೆದ ವಸಾಹತು ವಿರೋಧಿ ದಂಗೆಗಳಲ್ಲಿ ೧೮೩೭ರ ಅಮರ ಸುಳ್ಯ ರೈತ ಬಂಡಾಯ ತೀರಾ ಭಿನ್ನವಾದುದು ಮತ್ತು ಪ್ರತ್ಯೇಕ ಅಧ್ಯಯನಕ್ಕೆ ಅರ್ಹವಾದುದು[೨೦]. ರಾಜವಂಶೀಯ ನಾಯಕರುಗಳಿಲ್ಲದೆ ಕೇವಲ ರೈತರ ನಾಯಕತ್ವದಲ್ಲಿ ನಡೆದ ಈ ಬಂಡಾಯ ಬ್ರಿಟಿಷರನ್ನು ಎರಡು ವಾರಗಳ ಪರ್ಯಂತ ದಕ್ಷಿಣ ಕನ್ನಡದಿಂದ ಹೊರಗಿಡುವುದರಲ್ಲಿ ಯಶಸ್ವಿಯಾಯಿತು. ಬಂಡಾಯ ಆರಂಭವಾದದ್ದು ಈಗಿನ ಸುಳ್ಯ ತಾಲೂಕಿನ ಬೆಳ್ಳಾರೆಯಲ್ಲಿ. ಬಂಡಾಯದ ಪರಿಣಾಮದ ದೃಷ್ಟಿಯಿಂದ ಇದನ್ನು ಕೊಡಗು - ಕೆನರಾ ಬಂಡಾಯವೆಂದು ಸ್ವತಃ ಬ್ರಿಟಿಷರೇ ಕರೆದದ್ದಲ್ಲದೆ ಅದರ ಕಾರಣಗಳನ್ನು ಶೋಧಿಸಿ ದೂರಗಾಮಿ ಪರಿಣಾಮಗಳನ್ನು ಅಂದಾಜಿಸಲು ಎರಡು ಸಮಿತಿಗಳನ್ನು ಕೂಡಾ ರಚಿಸಿದರು[೨೧]. ೧೮೩೭ ರ ಈ ಬಂಡಾಯಕ್ಕೆ ಯಾರಾದರೊಬ್ಬ ಬಲಾಢ್ಯ ರಾಜನ ನಾಯಕತ್ವ ಲಭಿಸುತ್ತಿದ್ದರೆ ಇದು ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವೆಂದು ಪರಿಗಣಿತವಾಗುವ ಎಲ್ಲಾ ಸಾಧ್ಯತೆಗಳಿದ್ದವು. ಕೊಡಗನ್ನು ಬ್ರಿಟಿಷರು ವಶಪಡಿಸಿಕೊಳ್ಳದಿರುತ್ತಿದ್ದರೆ ಅಥವಾ ಕೊಡಗಿನಿಂದ ಅಮರಸುಳ್ಯ ಮಾಗಣೆಯನ್ನು ವಿಭಜಿಸಿ ಒಡೆದು ಆಳುವ ನೀತಿಯನ್ನು ಅನುಷ್ಠಾನಗೊಳಿಸದಿರುತ್ತಿದ್ದರೆ, ಶೋಷಣಾತ್ಮಕ ಕಂದಾಯನೀತಿ ಅಮರ ಸುಳ್ಯ ಮಾಗಣೆಯಲ್ಲಿ ಜಾರಿಗೆ ಬಾರದಿರುತ್ತಿದ್ದರೆ ಈ ಬಂಡಾಯ ಸಂಭವಿಸುವ ಸಾಧ್ಯತೆ

ಇರಲಿಲ್ಲ. ಆದುದರಿಂದ ಕೊಡಗು ಕೆನರಾ ಆರ್ಥಿಕ ಬಂಡಾಯವು ಕಂದಾಯ ನೀತಿಗೂ ರೈತ ದಂಗೆಗೂ ನೇರ ಸಂಬಂಧವಿರುವ ಒಂದು ಅರ್ಥಾಧರಿತ ಐತಿಹಾಸಿಕ ಘಟನೆಯಾಗಿ ಅಧ್ಯಯನ ಮಹತ್ವವನ್ನು ಪಡೆದುಕೊಳ್ಳುತ್ತದೆ.

೧.೨ ಸಾಹಿತ್ಯ ಸಮೀಕ್ಷೆ

ಕೊಡಗು-ಕೆನರಾ ರೈತ ಬಂಡಾಯದ ಬಗ್ಗೆ ಸಮಗ್ರವಾದ ಮತ್ತು ಪರಿಪೂರ್ಣವಾದ ಅಧ್ಯಯನವೊಂದು ಈವರೆಗೆ ನಡೆದಿಲ್ಲವೆನ್ನುವುದು ಲಭ್ಯ ಸಾಹಿತ್ಯ ಸಮೀಕ್ಷೆಯಿಂದ ವ್ಯಕ್ತವಾಗುತ್ತದೆ. ನಡೆದಿರುವಂತಹ ಬಹುತೇಕ ಅಧ್ಯಯನಗಳಲ್ಲಿ ಕೆಲವು ದಕ್ಷಿಣ ಕನ್ನಡಕಷ್ಟೇ ಸೀಮಿತವಾದರೆ ಇನ್ನು ಕೆಲವು ಕೊಡಗನ್ನು ಮಾತ್ರ ಪ್ರಧಾನವಾಗಿ ಪರಿಗಣಿಸಿವೆ. ಸ್ವಾತಂತ್ರ್ಯ ಪೂರ್ವಕಾಲದ ಅಧ್ಯಯನಗಳಲ್ಲಿ ವಸ್ತು ನಿಷ್ಠತೆಗಿಂತ ವ್ಯಕ್ತಿ ನಿಷ್ಠತೆ ವಿಜೃಂಭಿಸಿರುವುದು ಕಂಡುಬರುತ್ತದೆ.

ತುಳುನಾಡಿನ ಇತಿಹಾಸಕಾರರಲ್ಲಿ ಪ್ರಥಮರೆಂದು ಪರಿಗಣಿತರಾಗಿರುವ ಪೊಳಲಿ ಶೀನಪ್ಪ ಹೆಗ್ಗಡೆಯವರ 'ದಕ್ಷಿಣ ಕನ್ನಡ ಜಿಲ್ಲೆಯ ಚರಿತ್ರೆ ಮತ್ತು ಭೂತಾಳ ಪಾಂಡ್ಯರಾಯನ ಅಳಿಯಕಟ್ಟು'[೨೨] ಸಂಶೋಧನಾಕಾರರಿಗೆ ಆರಂಭಿಕ ಹಾದಿ ತೋರಿಸಿದ ಕೃತಿ. ಇದೇ ಕಾರಣಕ್ಕೆ ಅವರು ಎನ್. ಎಸ್ ಕಿಲ್ಲೆಯವರೊಡನೆ ಸೇರಿ ರಚಿಸಿದ ಕೃತಿ. 'ಪ್ರಾಚೀನ ತುಳುನಾಡು'[೨೩] ಕೂಡ ಮಹತ್ವವನ್ನು ಪಡಕೊಳ್ಳುತ್ತದೆ. ಇವೆರಡು ಕೃತಿಗಳಲ್ಲಿ ಚಾರಿತ್ರಿಕ ಅಂಶಗಳು ಮತ್ತು ರಾಜಕೀಯ ಇತಿಹಾಸ ತೀರಾ ಕಡಿಮೆ. ಅದರೆ ಸಾಂಪ್ರದಾಯಿಕ ಇತಿಹಾಸದ ಆಕರಗಳ ಹೊರತಾಗಿ ಐತಿಹ್ಯ ಮತ್ತು ಪಾಡ್ದನಗಳ ಆಧಾರದಿಂದ ಇತಿಹಾಸವನ್ನು ಕಟ್ಟುವ ಪ್ರಯತ್ನವನ್ನು ಶೀನಪ್ಪ ಹೆಗ್ಡೆಯವರು ಮಾಡಿರುವುದು ಹೊಸ ಐತಿಹಾಸಿಕ ದೃಷ್ಟಿಕೋನಕ್ಕೆ ನಾಂದಿ ಹಾಡಿದಂತಿದೆ. ಶೀನಪ್ಪಹೆಗ್ಡೆಯವರ ಕೃತಿಯಲ್ಲಿ ಕೊಡಗು – ಕೆನರಾ ಬಂಡಾಯ ಕಲ್ಯಾಣಪ್ಪನ ಕಾಟಕಾಯಿಯಾಗಿ ಚಿತ್ರಿತವಾಗಿದೆ. ನವೋದಯದ ಕಾಲದ ಅನೇಕ ಬರಹಗಾರರಿಗೆ ಇಂಗ್ಲೀಷರ ಬಗ್ಗೆ ಒಂದು ಒಲವು ಇದ್ದದ್ದು ಇದಕ್ಕೆ ಕಾರಣ. ಬಿ.ಎಂ ಶ್ರೀಕಂಠಯ್ಯ ಮತ್ತು ರಾಷ್ಟ್ರ ಕವಿ ಕುವೆಂಪು ಕೂಡಾ ಈ ಮಾತಿಗೆ ಹೊರತಲ್ಲ. ಶೀನಪ್ಪ ಹೆಗ್ಡೆಯವರಂತೂ ಬ್ರಿಟೀಷ್ ಆಳ್ವಿಕೆಯನ್ನು ಅತ್ಯುತ್ಸಾಹದಿಂದ ಹೊಗಳಿಬಿಟ್ಟಿದ್ದಾರೆ. ಶ್ರೀಕಂಠಯ್ಯನವರು ಕೃತಿ ರಚನೆಗೆ ಪ್ರೇರಣೆಯನ್ನು ಆಂಗ್ಲ ಸಾಹಿತ್ಯದಿಂದ ಪಡೆದಿದ್ದರು. ಭಾರತದ ಬ್ರಾಹ್ಮಣ-ಶೂದ್ರ ಸಾಂಸ್ಕೃತಿಕ ಸಂಘರ್ಷ ನವೋದಯ ಕಾಲದ ಕೆಲವು ಶೂದ್ರ ಬರಹಗಾರರನ್ನು ಬ್ರಿಟಿಷ್ ಪರರನ್ನಾಗಿಸಿದ್ದರೆ ಅದರಲ್ಲಿ ಆಶ್ಚರ್ಯವಿಲ್ಲವೆನಿಸುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಯ ಇತಿಹಾಸ ರಚನೆಗೆ ಒಂದು ಕ್ರಮಬದ್ಧತೆಯನ್ನು ರೂಢಿಸಿಕೊಟ್ಟ ಗಣಪತಿ ರಾವ್ ಐಗಳ 'ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ' ಇತಿಹಾಸ,[೨೪] ಪುರಾಣ,

ಐತಿಹ್ಯಗಳ ಜತೆಯಲ್ಲಿ ವಿದೇಶಿಯರ ಕೃತಿಗಳನ್ನು ಜಿಲ್ಲಾ ಗಜೆಟಿಯರುಗಳನ್ನು ಎಫಿಗ್ರಾಫಿಕಲ್ ರಿಪೋರ್ಟು ಗಳನ್ನು, ಸ್ಥಳ-ಪುರಾಣಗಳನ್ನು, ಪಾಡ್ದನಗಳನ್ನು, ಶಾಸನಗಳನ್ನು ಮತ್ತು ಕರಾರು ಪತ್ರಗಳನ್ನು ಆಧರಿಸಿ ರೂಪುಗೊಂಡ ಅಪೂರ್ವ ಗ್ರಂಥಗಳಿಗೆ ಇತಿಹಾಸದ ಆರಂಭ ಕಾಲದಿಂದ ತೊಡಗಿ ಬ್ರಿಟಿಷರ ಆಳ್ವಿಕೆಯ ಕಾಲದವರೆಗಿನ ರಾಜಕೀಯ ವಿವರಗಳನ್ನು ಧಾರ್ಮಿಕ ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಯ ವಿವರಗಳೊಡನೆ ಸಮನ್ವಯಗೊಳಿಸಿ ನೀಡಲು ಸಾಧ್ಯವಾಗಿದೆ. ತುಳುನಾಡಿನ ಹದಿನೈದು ಪ್ರಮುಖ ಅರಸುಮನೆತನಗಳ ಇತಿಹಾಸವನ್ನು ಕ್ಷೇತ್ರ ಕಾರ್ಯದ ಮೂಲಕ ನೀಡಿರುವುದು ಐಗಳ ಸಾಧನೆ. ಅವರದು ತುಳುನಾಡಿನ ಇತಿಹಾಸ ಸೌಧಕ್ಕೆ ಭದ್ರವಾದ ಪಂಚಾಂಗವನ್ನು ನಿರ್ಮಿಸಿದ ಶ್ಲಾಘನೀಯ ಕಾರ್ಯ. ಐಗಳ ಕೃತಿಯಲ್ಲಿ ಕೊಡಗು - ಕೆನರಾ ಬಂಡಾಯದ ವಿವರಗಳು ಕ್ವಚಿತ್ತಾಗಿ ಕಾಣಿಸಿಕೊಂಡಿವೆ. ದಕ್ಷಿಣ ಕನ್ನಡದ ಸಮಗ್ರ ಇತಿಹಾಸದಲ್ಲಿ ಈ ಘಟನೆಗೆ ಅಷ್ಟು ಮಹತ್ವ ನೀಡಿದರೆ ಸಾಕೆಂದು ಐಗಳು ಭಾವಿಸಿದರೋ ಅಥವಾ ಅವರಿಗೆ ವಿಶ್ಲೇಷಣೆಗೆ ಹೆಚ್ಚು ಆಕರಗಳು ಲಭ್ಯವಾಗಲಿಲ್ಲವೋ ಎನ್ನುವುದು ಖಚಿತವಿಲ್ಲ. ಆದರೆ ಐಗಳ ವಿವರಣೆಯು ಕೊಡಗು- ಕೆನರಾ ರೈತ ಬಂಡಾಯದ ಬಗ್ಗೆ ತಲಸ್ಪರ್ಶಿ ಅಧ್ಯಯನ ಮಾಡುವವರಿಗೆ ತೋರು ಬೆರಳಾಗಿದೆ ಎನ್ನುವುದನ್ನು ಉಲ್ಲೇಖಿಸಿದಿರಲು ಸಾಧ್ಯವಿಲ್ಲ.

ಕ್ರಿ.ಶ ೧೯೨೭ ರಿಂದ ೧೯೪೫ ರ ಅವಧಿಯಲ್ಲಿ ರಾಷ್ಟ್ರ ಕವಿ ಮಂಜೇಶ್ವರ ಗೋವಿಂದ ಪೈಗಳು ಶಾಸನಗಳು, ಐತಿಹಾಸಿಕ ದಾಖಲೆಗಳು, ವಿದೇಶಿ ಆಕರಗಳು, ಪುರಾಣಗಳು, ಐತಿಹ್ಯ ಮತ್ತು ಪಾಡ್ದನಗಳನ್ನು ಆಧರಿಸಿ ತುಳುನಾಡಿನ ಇತಿಹಾಸಕ್ಕೆ ಸಂಬಂಧಿಸಿದಂತೆ ಪ್ರಕಟಿಸಿದ ೨೧ ಲೇಖನಗಳಲ್ಲಿ ತುಳುನಾಡು – ಪೂರ್ವ ಸ್ಮೃತಿ[೧೫] ಅತ್ಯಂತ ಮಹತ್ವಪೂರ್ಣವಾದ ಒಳನೋಟಗಳನ್ನು ಒಳಗೊಂಡಿದೆ. ತುಳುನಾಡು ಪದೋತ್ಪತ್ತಿಗೆ ಮೀನುಗಾರರು ಕಾರಣವೆಂದು ಅವರು ಅಭಿಪ್ರಾಯ ಪಟ್ಟಿರುವುದನ್ನು, ಅಶೋಕನ ಎರಡನೇ ಶಿಲಾಶಾಸನದಲ್ಲಿರುವ 'ಸತಿಯ ಪುತ್ರವೇ' ತುಳುನಾಡು ಎಂಬ ಅವರ ವಾದವನ್ನು, ಗ್ರೀಕ್ ಪ್ರಹಸನಗಳಲ್ಲಿನ ತುಳು ಕನ್ನಡ ಪದಗಳನ್ನು ಹೆಕ್ಕಿ ತುಳುನಾಡಿನ ಪ್ರಾಚೀನತೆಯ ಶೋಧಕ್ಕೆ ಅವರು ಮಾಡಿದ ಪ್ರಯತ್ನವನ್ನು ಶ್ಲಾಘಿಸದಿರಲು ಸಾಧ್ಯವಿಲ್ಲ. ಕನ್ನಡ ಸಾಹಿತಿಗಳಲ್ಲಿ ಗೋವಿಂದ ಪೈಗಳಂತಹ ಸಂಶೋಧನಾ ಪ್ರತಿಭೆ ಬೇರೊಬ್ಬರಿಲ್ಲ. ಕೊಡಗು - ಕೆನರಾ ರೈತ ಬಂಡಾಯದ ಬಗ್ಗೆ ಗೋವಿಂದ ಪೈಗಳು ಎಲ್ಲೂ ಪ್ರಸ್ತಾಪಿಸಿಲ್ಲ. ಪ್ರಾಯ: ಈ ಘಟನೆ ಅವರ ಗಮನವನ್ನು ಸೆಳೆಯಲಿಲ್ಲವೆಂದು ಕಾಣುತ್ತದೆ.

ರಾಷ್ಟ್ರೀಯ ಪತ್ರಾಗಾರದ ನಿರ್ದೇಶಕರಾಗಿ ಮತ್ತು ಇತಿಹಾಸ ಸಂಶೋಧನಾ ಸಂಸ್ಥೆಯ ಮುಖ್ಯಸ್ಥರಾಗಿ ಅಧ್ಯಯನ - ಸಂಶೋಧನೆಗಳಲ್ಲಿ ಅಪಾರ ಅನುಭವ ಹೊಂದಿದ ಭಾಸ್ಕರ ಆನಂದ ಸಾಲೆತ್ತೂರರ (೧೯೦೨ – ೧೯೭೨) 'ಹಿಸ್ಟರಿ ಆಫ್ ತುಳುವ'[೧೬] ಕೃತಿಯು ಒಂದಕ್ಕಿಂತ ಹೆಚ್ಚು ಕಾರಣಗಳಿಂದಾಗಿ ಅಧ್ಯಯನಶೀಲರಿಗೆ ಮುಖ್ಯವಾಗುತ್ತದೆ. ಇದು ಇತಿಹಾಸಾರಂಭ ಕಾಲದಿಂದ

ಆಳುಪರ ಆಡಳಿತ ಅಂತ್ಯದವರೆಗಿನ ಚರಿತ್ರೆಯನ್ನು, ಪ್ರಕಟಿತ ಶಾಸನಗಳನ್ನು ಪ್ರಮುಖ ಆಕರವನ್ನಾಗಿಸಿಕೊಂಡು ದಾಖಲಿಸುತ್ತದೆ. ಇದನ್ನು ಒಂದು ಅಧಿಕೃತ ದಾಖಲೆಯೆಂದು ಈಗಿನ ಇತಿಹಾಸಕಾರರು ಭಾವಿಸುತ್ತಾರೆ. ಆಳುಪರ ಬಳಿಕಿನ ರಾಜರುಗಳ ಮತ್ತು ಸ್ಥಳೀಯ ಆಡಳಿತಗಾರರ ಬಗೆಗಿನ ಉಲ್ಲೇಖವಿಲ್ಲದಿರುವುದು ಈ ಕೃತಿಯ ಒಂದು ಕೊರತೆಯೆಂದು ಭಾವಿಸಲಾಗುತ್ತದೆ. ಸಾಲೆತ್ತೂರರು ತಮ್ಮ ಕೃತಿಯನ್ನು ಇಂಗ್ಲೀಷಿನಲ್ಲಿ ಹೊರತಂದುದರಿಂದ ಕರ್ನಾಟಕದ ಹೊರಗಿನವರಿಗೆ ತುಳುನಾಡಿನ ಇತಿಹಾಸದ ಪರಿಚಯವಾದದ್ದು ಒಂದು ಲಾಭವಾದರೆ, ಆಂಗ್ಲಭಾಷೆಯಲ್ಲಿ ಬಂದ ಮೊತ್ತ ಮೊದಲ ತುಳುನಾಡ ಇತಿಹಾಸ ಸಂಬಂಧೀ, ಕೃತಿಯೆಂಬುದು ಇದರ ಹೆಗ್ಗಳಿಕೆಯಾಗಿದೆ. ಗ್ರಾಮ ಪದ್ಧತಿ ಮತ್ತು ಪಾಡ್ದನಗಳನ್ನು ಕೂಡಾ ಸಾಲೆತ್ತೂರರು ತಮ್ಮ ಕಾಣ್ಕೆಯ ಅಧಿಕೃತತೆ ಬಳಸಿಕೊಂಡಿದ್ದಾರೆ. ಇದರಲ್ಲಿ ಕೊಡಗು ಕೆನರಾ ಬಂಡಾಯದ ಉಲ್ಲೇಖವಿಲ್ಲ. ಆಳುಪರ ಆಳ್ವಿಕೆಯ ಅಂತ್ಯದವರೆಗಿನ ಇತಿಹಾಸವನ್ನು ಮಾತ್ರ ದಾಖಲಿಸಿ ಅಲ್ಲಿಗೆ ನಿಲ್ಲಿಸದೆ ಮುಂದುವರೆಸುತ್ತಿದ್ದರೆ ಇದೊಂದು ಅತ್ಯಂತ ಮಹತ್ವದ ಸಂಶೋಧನಾತ್ಮಕ ಕೃತಿಯಾಗಿ ಬಿಡುತ್ತಿತ್ತು.

ರೆವಿನ್ಯೂ ಇನ್‌ಸ್ಪೆಕ್ಟರ್ ಮತ್ತು ತಹಶೀಲ್ದಾರರಾಗಿದ್ದು ಸ್ಥಳೀಯ ಇತಿಹಾಸದಲ್ಲಿ ಅಪರಿಮಿತ ಆಸಕ್ತಿ ತೋರಿದ ಕೇಶವಕೃಷ್ಣ ಕುಡ್ವರ (೧೮೯೨-೧೯೪೫) 'ದಕ್ಷಿಣ ಕನ್ನಡದ ಇತಿಹಾಸವು'[೨೨] ಗಣಪತಿರಾವ್ ಐಗಳ ಮತ್ತು ಸಾಲೆತ್ತೂರರ ಅಧ್ಯಯನಗಳ ಪರಿಷ್ಕೃತ ರೂಪದಂತಿದ್ದು ತುಳುನಾಡಿನ ಇತಿಹಾಸವನ್ನು ಸಂಕ್ಷಿಪ್ತವಾಗಿ ಮತ್ತು ಸಮಗ್ರವಾಗಿ ಪರಿಚಯಿಸುತ್ತದೆ. ಅದು ಇತಿಹಾಸಾರಂಭ ಕಾಲದಿಂದ ಬ್ರಿಟಿಷರ ಆಳ್ವಿಕೆಯ ಕೊನೆಯವರೆಗಿನ ಚರಿತ್ರೆಯನ್ನು ಅತ್ಯಂತ ಸರಳವಾಗಿ ದಾಖಲಿಸುತ್ತದೆ. ವಿಶ್ಲೇಷಣೆಗಿಂತ ವಿವರಣೆಗೆ ಹೆಚ್ಚು ಮಹತ್ವ ನೀಡಿರುವ ಕುಡ್ವರು ಕೊಡಗು - ಕೆನರಾ ಬಂಡಾಯದ ಬಗ್ಗೆ ಕೇವಲ ಎರಡು ಪುಟಗಳ ವಿವರವನ್ನು ಮಾತ್ರ ನೀಡಿರುತ್ತಾರೆ. ಕೊಡಗಿನಲ್ಲಾಗಲೀ, ಮಂಗಳೂರಿನ ಉತ್ತರಕ್ಕಾಗಲೀ, ಅದೇ ಸಮಯದಲ್ಲಿ ಜನರು ದಂಗೆ ಎದ್ದಿದ್ದರೆ ಇಂಗ್ಲೀಷರು ಸೋಲುತ್ತಿದ್ದರೆಂಬ ಅವರ ಅಭಿಪ್ರಾಯ ರೈತ ಬಂಡಾಯದ ಸೋಲಿಗೆ ಪ್ರಮುಖ ಕಾರಣವೊಂದನ್ನು ನೀಡುತ್ತದೆ.

ಕೊಡಗು - ಕೆನರಾ ರೈತ ಬಂಡಾಯದ ವಸ್ತುವನ್ನು ಆಧರಿಸಿ ಬಂದ ಮೊತ್ತಮೊದಲ ಕೃತಿ ಆಲೆಟ್ಟಿ ರಾಮಣ್ಣ ಶಗ್ರಿತ್ತಾಯರ 'ಕಲ್ಯಾಣಪ್ಪನ ಕಾಟಕಾಯಿ' ಎಂಬ ಯಕ್ಷಗಾನ ಪ್ರಸಂಗ.[೨೮] ಇದರಲ್ಲಿ ರೈತರು ಇಂಗ್ಲಿಷರ ವಿರುದ್ಧ ಬಂಡಾಯವೆದ್ದು ಆರಂಭದಲ್ಲಿ ಯಶಸ್ವಿಯಾದರೂ ಕೊನೆಯಲ್ಲಿ ಸೋತುದರ ವಿವರಣೆಯಿದೆ. ತಾನು ಐತಿಹ್ಯಗಳನ್ನು ಆಧರಿಸಿ ಈ ಕೃತಿಯನ್ನು ರಚಿಸಿದ್ದಾಗಿ ಶಗ್ರಿತ್ತಾಯರು ಹೇಳಿಕೊಂಡಿದ್ದಾರೆ. ರೈತ ಪಡೆ ಉದ್ದಕ್ಕೂ ಲೂಟಿ, ಅನಾಚಾರ ಮಾನಹರಣಗಳಲ್ಲಿ ತೊಡಗಿತ್ತೆಂದು ಶಗ್ರಿತ್ತಾಯರು ಚಿತ್ರಿಸಿರುವುದಕ್ಕೆ ಖಚಿತವಾದ ಆಧಾರಗಳನ್ನು ನೀಡಲು ಅವರಿಂದ ಸಾಧ್ಯವಾಗಿಲ್ಲ. ತನ್ನ ವಿರುದ್ಧ ನಿಂತವರನ್ನು

ದರೋಡೆಕೋರರೆಂಬಂತೆ ಬ್ರಿಟಿಷರು ಬಿಂಬಿಸಿದ್ದನ್ನು ನಂಬಿರುವ ಶಿಲ್ಪಿತ್ತಾಯರು ಈ ಕೃತಿಯನ್ನು ರಚಿಸಿರುವಂತಿದೆ. ಬ್ರಿಟಿಷರ ವಿರುದ್ಧ ಹೋರಾಟ ಮಾಡಿದ ಸ್ಥಳೀಯ ರೈತರನ್ನು ಕೊತ್ತಳಿಂಗೆ ಭಂಟರು ಎಂದು ಕರೆದಿರುವುದರ ಹಿನ್ನೆಲೆ ಅರ್ಥವಾಗುವುದಿಲ್ಲ. ಕಥಾ ಪೂರ್ವದಲ್ಲಿ ಬ್ರಿಟಿಷರ ಕಾಲದ ಆಡಳಿತ ವ್ಯವಸ್ಥೆಯನ್ನು ವಿಶ್ಲೇಷಿಸಲಾಗಿದೆ. ಅದು ಕೊಡಗು ಕೆನರಾ ರೈತ ಬಂಡಾಯದ ಬಗ್ಗೆ ಸ್ವಾತಂತ್ರ್ಯೋತ್ತರ ಭಾರತದಲ್ಲಿ ಆರಂಭಿಕ ಜಾಗೃತಿ ಮೂಡಿಸಿದ ಕೃತಿ ಎಂಬ ಕಾರಣಕ್ಕೆ ಮಹತ್ವವನ್ನು ಪಡೆದುಕೊಳ್ಳುತ್ತದೆ.

ಅಧಿಕೃತ ಮೂಲಗಳನ್ನು ಆಧರಿಸಿ ಸಂಶೋಧನಾತ್ಮಕವಾಗಿ ಪ್ರಸ್ತುತಪಡಿಸಿರುವ ತಿ.ತಾ. ಶರ್ಮರ 'ಕರ್ನಾಟಕದಲ್ಲಿ ಸ್ವಾತಂತ್ರ್ಯ ಸಂಗ್ರಾಮ'[೨೯] ಹತ್ತೊಂಬತ್ತನೆಯ ಶತಮಾನದ ಆದಿಯಿಂದ ಮೊದಲ ಸ್ವಾತಂತ್ರ್ಯ ಸಮರದ ಅವಧಿಯವರೆಗೆ ಕರ್ನಾಟಕದಲ್ಲಿ ಬ್ರಿಟಿಷರ ವಿರುದ್ಧ ಸ್ಥಳೀಯರು ನಡೆಸಿದ ದಂಗೆಗಳ ಸಮಗ್ರ ಚಿತ್ರಣವನ್ನು ನೀಡುತ್ತದೆ. ತಮ್ಮ ವಿವರಣೆಗೆ ಬಹುತೇಕವಾಗಿ ಬ್ರಿಟಿಷ್ ಸರಕಾರ ರಚಿಸಿದ ಆಯೋಗಗಳ ವರದಿಯನ್ನು ಆಧರಿಸಿ ಈ ಕೃತಿಯನ್ನು ರೂಪಿಸಲಾಗಿದೆ. ಇದು ಕೊಡಗು- ಕೆನರಾ ರೈತ ಬಂಡಾಯದ ಬಗ್ಗೆ ಲೆವಿನ್, ಕಬ್ಬನ್ ಮತ್ತು ಮತ್ತು ರಿಕ್ಟರ್ ತಯಾರಿಸಿದ ವರದಿಗಳನ್ನು ಆಧರಿಸಿದ ವಿಶ್ಲೇಷಣೆಯಾಗಿದೆ. ರೈತ ಬಂಡಾಯ ಪೂರ್ವದ ಸ್ಥಿತಿಗತಿಗಳ ಮತ್ತು ಬಂಡಾಯದ ಬಳಿಕಿನ ಬೆಳವಣಿಗೆಗಳ ವಸ್ತುನಿಷ್ಠ ಚಿತ್ರಣ ನೀಡಲು ಈ ಕೃತಿಗೆ ಸಾಧ್ಯವಾಗಿರುತ್ತಿದ್ದರೆ ಇದೊಂದು ಅಪೂರ್ವ ಸಂಶೋಧನಾ ಕೃತಿಯಾಗಿ ಬಿಡುತ್ತಿತ್ತು.

ತುಳುನಾಡ ಇತಿಹಾಸಕ್ಕೆ ಸಂಬಂಧಿಸಿದ ಅಧಿಕೃತ ಸಂಶೋಧನೆ ನಡೆಸಿದವರಲ್ಲಿ ಕೆ.ವಿ ರಮೇಶ್, ಸೂರ್ಯನಾಥ ಕಾಮತ್ ಮತ್ತು ಗುರುರಾಜ ಭಟ್ ಪ್ರಮುಖರು. ರಮೇಶ್ ತಮ್ಮ ಅಧ್ಯಯನಕ್ಕೆ ಸಂಪೂರ್ಣವಾಗಿ ಶಾಸನಗಳನ್ನು ಅವಲಂಬಿಸಿದ್ದಾರೆ.[೩೦] ಸೂರ್ಯನಾಥ ಕಾಮತರು ವಿಜಯನಗರದ ಆಳ್ವಿಕೆಯ ಕಾಲದ ತುಳುನಾಡಿನ ಇತಿಹಾಸದ ವಿಶ್ಲೇಷಣೆಗೆ ತಮ್ಮ ಅಧ್ಯಯನವನ್ನು ಸೀಮಿತಗೊಳಿಸಿದ್ದಾರೆ.[೩೧] ಗುರುರಾಜ ಭಟ್ಟರ ಮೊದಲ ಕೃತಿಯು ಇತಿಹಾಸದ ಆರಂಭಕಾಲದಿಂದ ವಿಜಯನಗರದ ಆಳ್ವಿಕೆಯ ಅಂತ್ಯದವರೆಗಿನ ತುಳುನಾಡಿನ ರಾಜಕೀಯ ಮತ್ತು ಸಾಂಸ್ಕೃತಿಕ ಇತಿಹಾಸವನ್ನು ದಾಖಲಿಸುತ್ತದೆ.[೩೨] ಅವರ ಎರಡನೆಯ ಕೃತಿಯು ವಸ್ತುಶಃ ತುಳುನಾಡಿನ ಇತಿಹಾಸ, ಕಲೆ,ಸಂಸ್ಕೃತಿ ವಾಸ್ತುಶಿಲ್ಪಗಳ ಸಮಗ್ರ ವಿಶ್ವಕೋಶದಂತಿದೆ.[೩೩] ಈ ನಾಲ್ವರು ವಿದ್ವಾಂಸರು ವಿಜಯನಗರದ ಆಳ್ವಿಕೆಯ ಉತ್ತರ ಭಾಗಕ್ಕೆ ಪ್ರಾಶಸ್ತ್ಯ ನೀಡದಿರುವುದರಿಂದ ಸಹಜವಾಗಿ ಕೊಡಗು-ಕೆನರಾ ರೈತ ಬಂಡಾಯ ಇವರ ಅಧ್ಯಯನದ ವ್ಯಾಪ್ತಿಯಿಂದ ಹೊರಗುಳಿದು ಬಿಟ್ಟಿದೆ.

ತುಳುನಾಡಿನ ಇತಿಹಾಸದ ಬಗ್ಗೆ ನಡೆದಷ್ಟು ಅಧ್ಯಯನಗಳು ಕೊಡಗಿನ ಇತಿಹಾಸದ ಬಗ್ಗೆ ನಡೆಯದಂತೆ ಕಂಡು ಬರುವುದಿಲ್ಲ ಡಿ.ಎನ್ ಕೃಷ್ಣಯ್ಯನವರ 'ಕೊಡಗಿನ ಇತಿಹಾಸ[೩೪] ಎಂಬ ಕೃತಿಯು ತುಂಬಾ ಮಹತ್ವಪೂರ್ಣದ್ದಾಗಿದ್ದು ಇದನ್ನು ಕೊಡಗಿನ ಚರಿತ್ರೆಯ ಮೊಟ್ಟಮೊದಲ ಅಧಿಕೃತ ದಾಖಲೆಯೆಂದು ಪರಿಗಣಿಸಬೇಕಾಗುತ್ತದೆ.ನಿಗೂಢ ಕೊಡಗಿನ ಇತಿಹಾಸವನ್ನು ನಾಲ್ಕನೇ ಶತಮಾನಕ್ಕೆ ಒಯ್ದು ಇಪ್ಪತ್ತನೇ ಶತಮಾನದವರೆಗೆ ವಿಸ್ತರಿಸಿದ ಅವರ ಕೃತಿಯ ಹರಹು ಅಗಾಧವಾದದ್ದು.ಲಭ್ಯವಿರುವ ಎಲ್ಲಾ ಖಚಿತ ಮಾಹಿಗಳಲ್ಲದೆ ಐತಿಹ್ಯಗಳನ್ನು, ಬಾಯ್ದರೆ ಮಾಹಿತಿಗಳನ್ನು, ಜಾನಪದ ಗೀತೆಗಳನ್ನು, ಮತ್ತು ಜನರ ನಂಬಿಕೆಗಳನ್ನು ಆಧರಿಸಿ ಅವರು ಕೊಡಗಿನ ಇತಿಹಾಸವನ್ನು ದಾಖಲೀಕರಿಸಿದ ರೀತಿ ಅನನ್ಯವಾದುದು. ಅವರ ಹಿರಿಯರು ಕೊಡಗಿನ ರಾಜನ ಆಸ್ಥಾನದಲ್ಲಿ ಉದ್ಯೋಗಿಗಳಾಗಿದ್ದುದರಿಂದ ಅವರಿಗೆ ಕೊಡಗಿನ ಇತಿಹಾಸದ ಬಗೆಗಿನ ಎಷ್ಟೋ ಆಕರಗಳು ಸುಲಭವಾಗಿ ಲಭ್ಯವಾದಂತಿದೆ. ಕೃಷ್ಣಯ್ಯರ ಕೃತಿಯಲ್ಲಿ ಕೊಡಗು ಕೆನರಾ ಬಂಡಾಯ ಒಂದು ಪುಟ್ಟ ಬರಹವಾಗಿ ಕಾಣಿಸಿಕೊಂಡಿದೆ. ಇದಕ್ಕೆ ಕೊಡಗಿನ ಇತಿಹಾಸಕ್ಕೆ ಅವರು ಹೆಚ್ಚು ಮಹತ್ವ ನೀಡಿರುವುದು ಮತ್ತು ೧೮೩೭ ರ ರೈತ ಬಂಡಾಯ ನಡೆದ ಪ್ರದೇಶವು ಮೂರು ವರ್ಷಗಳ ಹಿಂದೆಯೇ ಕೊಡಗಿನಿಂದ ಪ್ರತ್ಯೇಕಗೊಂಡದ್ದು ಕಾರಣವಾಗಿರಬಹುದು. ಕೊಡಗಿನ ಬಗೆಗಿನ ಯಾವುದೇ ಐತಿಹಾಸಿಕ ಸಂಶೋಧನೆಗೆ ಕೃಷ್ಣಯ್ಯರ ಕೃತಿ ಮೂಲ ಆಕರ ಗ್ರಂಥವಾಗಿರುವುದು ಕೃತಿಯ ಹೆಚ್ಚುಗಾರಿಕೆಯಾಗಿದೆ.

ಅಧ್ಯಯನಕ್ಕೆ ಲಭ್ಯವಾದ ಮೂರು ಪಿ.ಎಚ್. ಡಿ. ನಿಬಂಧಗಳಲ್ಲಿ ಕೊಡಗು - ಕೆನರಾ ರೈತ ಬಂಡಾಯದ ಬಗೆಗಿನ ಅಧ್ಯನಕ್ಕೆ ಲಭ್ಯವಾದ ಕೆಲವು ವಿವರಣೆಗಳಿವೆ. ಪುರುಷೋತ್ತಮ ಬಿಳಿಮಲೆ ತಮ್ಮ ನಿಬಂಧದಲ್ಲಿ[೩೫] ಈ ರೈತ ಬಂಡಾಯದ ಕಾರಣಗಳ ಬಗ್ಗೆ ಒಂದು ಸಾಂಧರ್ಭಿಕ ವಿವರಣೆ ನೀಡಿದ್ದಾರೆ. ರೈತ ಬಂಡಾಯದ ಮುಂಚೂಣಿ ನಾಯಕರುಗಳಾಗಿದ್ದವರು ಕೊಡಗಿನ ರಾಜಮನೆತನದವರೊಡನೆ ಸಂಬಂಧ ಹೊಂದಿದ್ದ ಸುಳ್ಯದ ಗೌಡ ಜನಾಂಗಕ್ಕೆ ಸೇರಿದ ರೈತರುಗಳು. ೧೮೩೪ ರಲ್ಲಿ ಕೊಡಗಿನ ರಾಜನನ್ನು ಪದಚ್ಯುತಗೊಳಿಸಿ ಅಮರ ಸುಳ್ಯ ಸೀಮೆಯನ್ನು ಕೊಡಗಿನಿಂದ ಬೇರ್ಪಡಿಸಿ ದಕ್ಷಿಣ ಕನ್ನಡಕ್ಕೆ ಸೇರಿಸಿದ್ದು ರೈತ ಬಂಡಾಯಕ್ಕೆ ಪ್ರಮುಖ ಕಾರಣವೆಂಬ ಧ್ವನಿಯನ್ನು ಬಿಳಿಮಲೆಯವರ ನಿಬಂಧದಲ್ಲಿ ಕಾಣಬಹುದು. ಜನಾಂಗವೊಂದರ ಸಾಂಸ್ಕೃತಿಕ ಅಧ್ಯಯನ ಈ ನಿಬಂಧದ ಪ್ರಮುಖ ಉದ್ದೇಶವಾದುದರಿಂದ ಸಹಜವಾಗಿ ರೈತ ಬಂಡಾಯದ ಅಲ್ಪಸ್ವಲ್ಪ ವಿವರಗಳು ಈ ಅಧ್ಯಯನದಲ್ಲಿ ಅಲ್ಲಲ್ಲಿ ಕಾಣಿಸಿಕೊಂಡಿವೆ.

ಶ್ಯಾಮಭಟ್ಟರ ನಿಬಂಧದಲ್ಲಿ[೩೬] ಕೊಡಗು - ಕೆನರಾ ಬಂಡಾಯಕ್ಕೆ ಒಂದು ಪ್ರತ್ಯೇಕ ಅಧ್ಯಾಯವನ್ನು ಮೀಸಲಿಡಲಾಗಿದೆ. ಟಿಪ್ಪು ಮರಣದ ಬಳಿಕ ಬ್ರಿಟಿಷ್ ಆಡಳಿತಕ್ಕೆ ಒಳಪಟ್ಟ

ದಕ್ಷಿಣಕನ್ನಡ ಜಿಲ್ಲೆಯು ಅರುವತ್ತು ವರ್ಷಗಳಲ್ಲಿ ಬ್ರಿಟಿಷರಿಗೆ ತೋರಿದ ಪ್ರತಿರೋಧ, ಅದನ್ನು ಅಡಗಿಸಲು ಬ್ರಿಟಿಷರು ಬಳಸಿದ ಸಾಮ, ದಾನ, ಭೇದ, ದಂಡೋಪಾಯ, ಬ್ರಿಟಿಷರ ಆಡಳಿತ ಮತ್ತು ಕಂದಾಯ ವ್ಯವಸ್ಥೆ ಇತ್ಯಾದಿ ವಿವರಗಳನ್ನು ಶ್ಯಾಮಭಟ್ಟರು ನೀಡಿದ್ದಾರೆ. ದೇಶದ ಎಲ್ಲೆಡೆ ಜಮೀನುದಾರಿ ವ್ಯವಸ್ಥೆ ಇದ್ದರೂ ದಕ್ಷಿಣಕನ್ನಡದಲ್ಲಿ ರೈತವಾರಿ ಪದ್ಧತಿಯನ್ನು ಅಳವಡಿಸಿದುದನ್ನು ಈ ಅಧ್ಯಯನವು ತಿಳಿಸುತ್ತದೆ. ವಾಸ್ತವವಾಗಿ ರೈತವಾರಿ ವ್ಯವಸ್ಥೆಯಾಗಿ ಮಾರ್ಪಡುತ್ತಿರುವುದಕ್ಕೆ ರೈತರು ತೋರಿದ ಪ್ರತಿರೋಧವೇ ಕೊಡಗು – ಕೆನರಾ ಬಂಡಾಯ ಎನ್ನುವುದು ಈ ಕೃತಿಯಲ್ಲಿ ಉಲ್ಲೇಖಿತವಾಗಿದೆ. ದಕ್ಷಿಣ ಕನ್ನಡ ಎಂದೂ ಒಬ್ಬನೇ ಸ್ಥಳೀಯ ಅರಸನ ಆಳ್ವಿಕೆಗೆ ಒಳಪಟ್ಟಿರಲಿಲ್ಲ. ಹಾಗಾಗಿ ಈ ಜಿಲ್ಲೆಯಲ್ಲಿ ಬ್ರಿಟಿಷರ ವಿರುದ್ಧದ ಪ್ರತಿರೋಧಗಳಿಗೆ ಸಾಮುದಾಯಿಕ ಬೆಂಬಲ ದೊರೆಯದೆ ಅವು ವಿಫಲವಾದುದನ್ನು ದಾಖಲಿಸುವ ಅವಕಾಶ ಈ ಅಧ್ಯಯನಕಾರರಿಗಿತ್ತು. ಕೃಷ್ಣಯ್ಯ, ಬಿಳಿಮಲೆ, ಲೆನಿನ್, ರಿಕ್ಟರ್‌ರ ಅಧ್ಯಯನಗಳನ್ನು ಅವಲಂಬಿಸಿ ಶಿಸ್ತುಬದ್ಧ ಅಧ್ಯಯನ ನಡೆಸಿ ವಸಾಹತುಶಾಹಿ ಆಡಳಿತದ ಸಮಗ್ರ ಚಿತ್ರಣವೊಂದನ್ನು ನೀಡುವಲ್ಲಿ ಅಧ್ಯಯನಕಾರರು ಸಫಲರಾಗಿದ್ದಾರೆ.

೧೭೯೯ರಿಂದ ೧೮೬೦ ರವರೆಗಿನ ದಕ್ಷಿಣ ಕನ್ನಡದಲ್ಲಿ ಈಸ್ಟಿಂಡಿಯಾ ಕಂಪೆನಿ ಅಳವಡಿಸಿದ ವಸಾಹತುಶಾಹಿ ವಾಣಿಜ್ಯ ಮತ್ತು ವ್ಯಾಪಾರ ನೀತಿಯನ್ನು ತಮ್ಮ ಅಧ್ಯಯನದ ಕೇಂದ್ರ ವಿಷಯವನ್ನಾಗಿ ಮಾಲತಿ ಮೂರ್ತಿಯವರು ಮಾಡಿಕೊಂಡಿದ್ದಾರೆ.[೩೭] ಉಪ್ಪು ಮತ್ತು ಹೊಗೆಸೊಪ್ಪಿನ ಏಕಸ್ವಾಮ್ಯ ಈ ಜಿಲ್ಲೆಯಲ್ಲಿ ಉಂಟುಮಾಡಿದ ಅಲ್ಲೋಲ-ಕಲ್ಲೋಲ, ವಸಾಹತುಶಾಹಿ ತೆರಿಗೆ, ಸುಂಕ ಮತ್ತು ಕಂದಾಯ ವ್ಯವಸ್ಥೆ, ನಾಣ್ಯ ಪದ್ಧತಿ, ಅಳತೆ ಮತ್ತು ತೂಕ ವ್ಯವಸ್ಥೆ, ಭೂ ಇತ್ಯರ್ಥ ಕ್ರಮ, ಬೆಲೆ ಪದ್ಧತಿ, ಆಯಾತ-ನಿರ್ಯಾತ ಪ್ರವೃತ್ತಿ, ರಸ್ತೆ ಸಾರಿಗೆ ವ್ಯವಸ್ಥೆ – ಇತ್ಯಾದಿಗಳ ಬಗ್ಗೆ ಮಾಲತಿ ಮೂರ್ತಿ ಕೂಲಂಕುಷ ವಿವರಣೆ ನೀಡಿದ್ದಾರೆ.

ರೈತ ಬಂಡಾಯದ ಹಿನ್ನೆಲೆ ಮತ್ತು ಮುನ್ನೆಲೆಗಳನ್ನು ಕೆಲವುದಾಖಲೆಗಳ ಆಧಾರಗಳ ನೆರವಿನಿಂದ ಜನರ ಮುಂದಿಡುವ ಕಾರ್ಯವನ್ನು ದೇವಿಪ್ರಸಾದರ ಕೃತಿ'ಅಮರ ಸುಳ್ಯದ ಸ್ವಾತಂತ್ರ್ಯ ಸಮರ' ಮಾಡುತ್ತದೆ.[೩೮] ಸೂತ್ರ ಬದ್ಧತೆಯ ಕೊರತೆಯ ಹೊರತಾಗಿಯೂ ವಿಪುಲ ಮಾಹಿತಿಗಳು, ಅವುಗಳನ್ನು ಕಲೆಹಾಕಲು ಪಟ್ಟ ಪರಿಶ್ರಮವನ್ನು ಶ್ಲಾಘಿಸದಿರಲು ಸಾಧ್ಯವಾಗುವುದಿಲ್ಲ. ಲೆವಿನ್, ಕಬ್ಬನ್, ಮತ್ತು ರಿಕ್ಟರ್ ವರದಿಗಳನ್ನು ಹಾಗೂ ಬಂಡುಕೋರ ರೈತರ ವಿಚಾರಣೆಯ ನ್ಯಾಯಾಂಗ ಸೂಚಿಯನ್ನು (Judicial Index) ಆಧಾರವಾಗಿರಿಸಿಕೊಂಡು ಈ ಕೃತಿಯ ಬಹುತೇಕ ಪ್ರಬಂಧಗಳು ರಚನೆಗೊಂಡಿವೆ. ತಿ. ತಾ. ಶರ್ಮರ 'ಕರ್ನಾಟಕದಲ್ಲಿ ಸ್ವಾತಂತ್ರ್ಯ ಸಂಗ್ರಾಮ' ಕೃತಿಯಲ್ಲಿನ ಅಮರ ಸುಳ್ಯ ರೈತ ಬಂಡಾಯಕ್ಕೆ ಸಂಬಂಧಿಸಿದ ಅಧ್ಯಾಯವನ್ನು ಮತ್ತು ಪ್ರಭಾಕರ ಶಿಶಿಲರ ಬಂಡಾಯಕ್ಕೆ ಸಂಬಂಧಿಸಿದಂತೆ ರಚಿಸಿದ ಲಾವಣಿ ಸಹಿತದ ಬೀದಿನಾಟಕವನ್ನು ಇದರಲ್ಲಿ ಯಥಾವತ್ತಾಗಿ

ಮುದ್ರಿಸಲಾಗಿದೆ. ಐಗೂರು ವೆಂಕಟಾದ್ರಿ ನಾಯಕನ ಲಾವಣಿ, ಅಮರಕ್ರಾಂತಿ ಜಾಥಾ, ಮತ್ತಿತರ ವಿವರಣೆಗಳಿಂದ ಈ ಕ್ರತಿ ಸಂಶೋಧನಾಕಾರರಿಗೆ ವಿಪುಲ ಮಾಹಿತಿಯನ್ನು ಒದಗಿಸುತ್ತದೆ. ದೊಡ್ಡ ವೀರ ರಾಜನ ಮೂಲದ ಬಗ್ಗೆ ಮತ್ತು ರಾಜೇಂದ್ರ ನಾಮೆಯ ಸಾಚಾತನದ ಬಗ್ಗೆ ಸಂದೇಹಗಳನ್ನು ಎತ್ತುವ ಮೂಲಕ ದೇವಿಪ್ರಸಾದರು ಸಂಶೋಧನಾಕಾರರಿಗೆ ಹೊಸ ಅವಕಾಶಗಳನ್ನು ತೆರೆದಿಟ್ಟಿದ್ದಾರೆ. ಈ ಕೃತಿಯ ಮುಂದುವರಿದ ಪ್ರಯತ್ನದಂತಿರುವ 'ಕೊಡಗಿನಲ್ಲಿ ಭಾಷಾ ಸಾಂಸ್ಕೃತಿಕ ಸಾಮರಸ್ಯ'[೩೯] ಎಂಬ ಕೃತಿಯು ಕೊಡಗಿನ ಇಂದಿನ ಸಮಸ್ಯೆಗಳಿಗೆ ಸಾಂಸ್ಕೃತಿಕ ಕಾರಣಗಳನ್ನು ಹುಡುಕುವುದರಿಂದಾಗಿ ಮಹತ್ವ ಪಡಕೊಳ್ಳುತ್ತದೆ. ಈ ಕೃತಿಯಲ್ಲಿನ ಮಲೆಯಾಳ- ಕೊಡವ ಭಾಷಾ ಬಾಂಧವ್ಯ ಎಂಬ ಲೇಖನದಲ್ಲಿ ಕೊಡವರ ಮೂಲ ಶೋಧನೆಯ ಗಂಭೀರ ಪ್ರಯತ್ನವಿದೆ.[೪೦]

ಕೊಡಗಿನ ಬಗೆಗಿನ ಅತ್ಯಂತ ಆಳ ಮತ್ತು ಹರಹಿನ ಅಧ್ಯಯನವನ್ನು ಎಂ.ಜಿ. ನಾಗರಾಜರ ಹಾಲೇರಿ ರಾಜವಂಶವು ಎಂಬ ಎರಡು ಸಂಪುಟಗಳ ಬೃಹತ್ ಕೃತಿಯಲ್ಲಿ ಕಾಣಬಹುದು.[೪೧] ಕ್ರಿ.ಶ ೧೬೦೦ರಿಂದ ಕ್ರಿ.ಶ. ೧೮೩೪ರ ವರೆಗೆ ಕೊಡಗನ್ನು ಆಳಿದ ಹನ್ನೆರಡು ಹಾಲೇರಿ ರಾಜರುಗಳ ಆಡಳಿತಾವಧಿಯ ರಾಜಕೀಯ, ಇತಿಹಾಸ, ಧಾರ್ಮಿಕ, ಸಾಮಾಜಿಕ ಕಟ್ಟುಕಟ್ಟಳೆ, ಆರ್ಥಿಕ ನೀತಿಗಳ ಸಮಗ್ರ ವಿವರಗಳು ಈ ಕೃತಿಯಲ್ಲಿ ದಾಖಲಾಗಿವೆ. ಕೊಡಗಿನ ಬಗ್ಗೆ ಇಷ್ಟೊಂದು ಸವಿಸ್ತಾರವಾದ ಅಧ್ಯಯನ ಇದುವರೆಗೆ ನಡೆದಿಲ್ಲ. ಡಿ.ಎನ್. ಕೃಷ್ಣಯ್ಯನವರ ಕೃತಿಯನ್ನು ಆಧಾರವಾಗಿರಿಸಿ, ವ್ಯಾಪಕ ಕ್ಷೇತ್ರ ಕಾರ್ಯ ನಡೆಸಿ,ಐತಿಹ್ಯ, ಜಾನಪದ ಹಾಡು- ಮೌಖಿಕ ಮೂಲಗಳನ್ನು ಹಾಗೂ ಶಾಸನಗಳನ್ನು ಆಧಾರವಾಗಿಟ್ಟುಕೊಂಡು ರಚನೆಗೊಂಡ ಈ ಸಂಪುಟಗಳು ಕೊಡಗಿನ ಇತಿಹಾಸದ ಪುನಾರಚನೆಯಲ್ಲಿ ಅಮೂಲ್ಯ ಪಾತ್ರ ವಹಿಸುವ ಸಾಧ್ಯತೆಗಳಿವೆ. ಕೊಡಗಿನ ಬಗ್ಗೆ ಅಧ್ಯಯನ ಮಾಡುವವರಿಗೊಂದು ಸಂವಿಧಾನವನ್ನು ಇದು ಒದಗಿಸಿ ಕೊಡುತ್ತದೆ.

ಕೊಡಗಿನ ಬಗೆಗಿನ ಸಂಶೋಧನೆಗಳಿಗೆ ನೆರವಾಗುವ ಕೃತಿಗಳನ್ನು ರಚಿಸಿದವರಲ್ಲಿ ಸಾಕಿ ಮತ್ತು ತಂಬಂಡ ವಿಜಯ ಪ್ರಮುಖರು ಕ್ರಿ.ಶ. ೧೮೦೦ರಿಂದ ೧೮೫೭ ರವರೆಗೆ ಬ್ರಿಟಿಷ್ ವಸಾಹತುಶಾಹಿ ಆಡಳಿತದ ಪರಿಣಾಮಗಳನ್ನು ಮತ್ತು ಅದರ ವಿರುದ್ಧದ ಪ್ರತಿಭಟನೆಗಳನ್ನು ಸಾಕಿ ಅವರ ಕೃತಿ ದಾಖಲಿಸುತ್ತದೆ.[೪೨] ಕೊಡಗು- ಕೆನರಾ ಬಂಡಾಯಕ್ಕೆ ಈ ಕೃತಿಯು ಆರು ಪುಟಗಳನ್ನು ಮೀಸಲಾಗಿರಿಸಿರುವುದರಿಂದ ಈ ವಿದ್ಯಮಾನವು ಅಖಿಲ ಭಾರತ ಮಟ್ಟದ ಇತಿಹಾಸಕಾರರ ಗಮನವನ್ನು ಸೆಳೆಯುವಂತಾಗಿದೆ. ಕೃತಿಯು ಬ್ರಿಟಿಷರ ವಿರುದ್ಧ ರೈತರು

ಅಲ್ಲಲ್ಲಿ ನಡೆಸಿದ ಪ್ರತಿಭಟನೆಗಳನ್ನು ದಾಖಲಿಸುವುದರಿಂದ ಅವುಗಳನ್ನು ಕೊಡಗು ಕೆನರಾ ಬಂಡಾಯದೊಡನೆ ತುಲನೆ ಮಾಡಲು ಪ್ರೇರೇಪಣೆ ನೀಡುತ್ತದೆ.

ತಂಬಂಡ ವಿಜಯ ಪೂಣಚ್ಚರು ಕೊಡಗಿಗೆ ಸಂಬಂಧಿಸಿದಂತೆ ರಚಿಸಿರುವ ಎರಡು ಕೃತಿಗಳು ಪ್ರಸಕ್ತ ಅಧ್ಯಯನದ ದೃಷ್ಟಿಯಿಂದ ಮಹತ್ವವನ್ನು ಪಡೆದುಕೊಳ್ಳುತ್ತವೆ. ಮೊದಲನೆಯ ಕೃತಿ ಜನಪದ ಕಾವ್ಯಗಳ ಮೂಲಕ ಕೊಡಗಿನ ಸಾಂಸ್ಕೃತಿಕ ಚರಿತ್ರೆಗೆ ಭಿನ್ನ ದೃಷ್ಟಿಕೋನ ಒದಗಿಸುವ ಪ್ರಯತ್ನದ ಫಲಮೆ.[೪೩] ಇದು ಕೊಡಗಿನ ಕೊಡವ ಜನಾಂಗ ತನ್ನ ಬೈಬಲ್ಲು ಎಂದು ಪರಿಗಣಿಸುವ ಪಟ್ಟೋಳೆ ಪಳಮೆಯನ್ನು ಆಧಾರವಾಗಿರಿಸಿಕೊಂಡು ಕೊಡಗಿನ ಸಾಂಸ್ಕೃತಿಕ ಇತಿಹಾಸವನ್ನು ವಿಶ್ಲೇಷಿಸುತ್ತದೆ. ಜತೆಗೆ ಅದು ಸಾಂಸ್ಕೃತಿಕ ಹೆಜೆಮೊನಿಗೆ ಕಾರಣವಾದುದನ್ನು ಧೈರ್ಯದಿಂದ ದಾಖಲಿಸುತ್ತದೆ. ಕೊಡಗು-ಕೆನರಾ ರೈತ ಬಂಡಾಯದ ಮೂಲವನ್ನು ಅದು ಚಿಕ್ಕವೀರರಾಜ ಮತ್ತು ಕುಂಟ ಬಸವರನ್ನು ಸಮಾಜ ಮತ್ತು ಇಂಗ್ಲಿಷರು ನಡೆಸಿಕೊಂಡ ರೀತಿಯಲ್ಲಿ ಹುಡುಕುವ ಯತ್ನವನ್ನು ಮಾಡುತ್ತದೆ. ಎರಡನೆಯ ಕೃತಿ ಇದೇ ಲೇಖಕರು ಅನುವಾದಿಸಿದ ಮಾರ್ಸ್‌ಡೆನ್‌ನ 'ಕೊಡಗು ವಿವರಣೆ'.[೪೪] ಈ ಕೃತಿಯು ಕೊಡಗಿನ ಭೌತಿಕತೆ, ಇತಿಹಾಸ ಮತ್ತು ಇತರ ಸಮಗ್ರ ವಿವರಣೆಯೊಂದಿಗೆ ಕೊಡಗಿನ ಆಳರಸರ ಪರಿಚಯವನ್ನು ನೀಡುತ್ತದೆ. ಅಮರ ಸುಳ್ಯದಲ್ಲಿ ನಡೆದ ರೈತ ಬಂಡಾಯದ ಕಾರಣ ಮತ್ತು ಪರಿಣಾಮಗಳನ್ನು ಸಂಕ್ಷಿಪ್ತ ಮಾಹಿತಿ ರೂಪದಲ್ಲಿ ಈ ಕೃತಿಯು ನೀಡುವುದರಿಂದ ಇತಿಹಾಸದ ಪುನಾರಚನೆಗಿದು ನೆರವಾಗುತ್ತದೆ.

ಪ್ರತಿಭಾವಂತ ಸಂಸದೀಯ ಪಟು ಪುಸ್ತಕ ಮಾಲಿಕೆಯಲ್ಲಿ ಡಾ. ಎಂ.ಜಿ ನಾಗರಾಜ್ 'ಕನಾಟಕ ರೈತ ಚಳುವಳಿ - ಸತ್ಯಾಗ್ರಹಗಳು' ಎಂಬ ಶೀರ್ಷಿಕೆಯಲ್ಲಿ ಮೂರು ಸಹಸ್ರಮಾನ ಸಂಪುಟಗಳನ್ನು ಹೊರ ತಂದಿದ್ದಾರೆ.[೪೫] ಮೊದಲನೆಯ ಸಂಪುಟದಲ್ಲಿ ಪ್ರಾಚೀನ ಮತ್ತು ಕರ್ನಾಟಕ ಏಕೀಕರಣ ಪೂರ್ವ ರೈತ ಚಳುವಳಿಗಳ ವಿವರಣೆ ನೀಡಲಾಗಿದೆ. ಈ ಕೃತಿಯ ೫೩ ಮತ್ತು ೫೪ನೇ ಪುಟಗಳು ಕೊಡಗು – ಕೆನರಾ ಬಂಡಾಯಕ್ಕೆ ಮೀಸಲಾಗಿವೆ. ನಾಗರಾಜರು ಅದನ್ನು ಕೊಡಗು ಮತ್ತು ಅಮರ ಸುಳ್ಯದ ಬಂಡಾಯ ಅಥವಾ ಅಪರಂಪಾರ, ಕಲ್ಯಾಣ ಸ್ವಾಮಿ, ಪುಟ್ಟ ಬಸಪ್ಪನ ನೇತೃತ್ವದ ಬಂಡಾಯವೆಂದು ಕರೆದಿದ್ದಾರೆ ಈ ಬಂಡಾಯಕ್ಕೆ ಭೂ ಕಂದಾಯದ ಹೆಚ್ಚಳ ಮತ್ತು ಕೃಷಿ ಉತ್ಪನ್ನಗಳ ಕೃತಕ ಬೆಲೆ ಇಳಿಕೆ ಮುಖ್ಯ ಕಾರಣವೆಂದು ಗುರುತಿಸಿರುವ ನಾಗರಾಜರು ಅದುಮಿಟ್ಟ ನೋವುಗಳು ಸಂದರ್ಭ ದೊರತಾಗ ಚಿಮ್ಮುವ ಸ್ಫೋಟಕಗಳಾಗುತ್ತವೆ ಎನ್ನುವ ಮೂಲಕ ಬಂಡಾಯವನ್ನು ಮನೋವೈಜ್ಞಾನಿಕವಾಗಿ ವಿಶ್ಲೇಷಿಸಲು ಯತ್ನಿಸಿದ್ದಾರೆ. ಎರಡನೆಯ ಸಂಪುಟದಲ್ಲಿ ಕರ್ನಾಟಕದ ಏಕೀಕರಣೋತ್ತರ ಮತ್ತು ಸಹಸ್ರಮಾನ ಪೂರ್ವ ರೈತ ಚಳುವಳಿಗಳ ವಿವರಣೆ ಇದೆ. ಪು.೪೩೭ರಲ್ಲಿ ೧೯೭೦ ರಿಂದ ೨೦೦೦ದ ವರೆಗಿನ ದ.ಕ ಜಿಲ್ಲೆಯ ರೈತ ಚಳುವಳಿಗಳ ಮತ್ತು ೪೫೮ ರಲ್ಲಿ ಸುಳ್ಯದಲ್ಲಿ ಕೃಷಿ ಉತ್ಪನ್ನಗಳ ಬೆಲೆ ಇಳಿಕೆ ವಿರುದ್ಧದ

ರ್‍ಯಾಲಿಯ ವಿಶ್ಲೇಷಣೆ ಮಾಡಲಾಗಿದೆ. ಸಂಪುಟ ಮೂರರಲ್ಲಿ ಸಹಸ್ರಮಾನ ಪೂರ್ವದ ವಿವಿಧ ರೈತ ಚಳುವಳಿಗಳ ಸಂಕ್ಷಿಪ್ತ ವಿವರಣೆ ಇದೆ. ಇದರ ಪುಟ ೬೫೬ ರಲ್ಲಿ ೨೦೦೧ ರಲ್ಲಿ ಸುಳ್ಯದಿಂದ ಅಡಿಕೆ ಬೆಳೆಗಾರರ ಕಾಲ್ನಡಿಗೆ ಜಾಥಾ ಪುತ್ತೂರು ಮತ್ತು ಮಂಗಳೂರುಗಳಿಗೆ ಹೋದ ವಿವರಣೆ ಇದೆ. ಕ್ರಿ.ಶ ೧೯೯೮ ರಲ್ಲಿ ಸುಳ್ಯದ ಅಮರ ಕ್ರಾಂತಿ ಉತ್ಸವ ಸಮಿತಿಯವರು ಸಂಘಟಿಸಿದ ಸುಳ್ಯ ಮಂಗಳೂರು ಕಾಲ್ನಡಿಗೆ ಜಾನಾಥದ ಉಲ್ಲೇಖ ಈ ಸಂಪುಟಗಳಲ್ಲಿ ಸೇರ್ಪಡೆಯಾಗಿಲ್ಲ. ಕರ್ನಾಟಕದ ಕೃಷಿಕರ ಹೋರಾಟಗಳ ಬಗ್ಗೆ ಇದೊಂದು ಚಾರಿತ್ರಿಕ ಶಾಸ್ತ್ರ ಗ್ರಂಥ. ಇದರಲ್ಲಿ ರೈತ ಹೋರಾಟದೊಡನೆ ಸಂಬಂಧ ಇರುವ ಇತರ ಚಳುವಳಿಗಳನ್ನು ಕೂಡ ಅಳವಡಿಸಿ ಒಂದು ಸಾರ್ವಕಾಲಿಕ ದಾಖಲೆಯನ್ನು ನಾಗರಾಜರು ಒದಗಿಸಿದ್ದಾರೆ.

ಮುಜಾಫರ್ ಅಸ್ಸಾದಿಯವರ, ರೈತ ಹೋರಾಟ ಮತ್ತು ಸಾಮಾಜಿಕ ಚಳುವಳಿ ಕೃತಿಯು ಕ್ರಿ. ಶ ೧೯೮೦ ರಿಂದ ೧೯೯೪ ರವರೆಗಿನ ರೈತ ಚಳುವಳಿಗಳನ್ನು ಕೇಂದ್ರವಾಗಿಟ್ಟುಕೊಂಡು ರಚಿತವಾಗಿದೆ.[೪೬] ಇದು ಭಾರತ ಮತ್ತು ಕರ್ನಾಟಕದಲ್ಲಿ ನಡೆದ ರೈತ ಹೋರಾಟಗಳ ಬಗ್ಗೆ ಒಂದು ಐತಿಹಾಸಿಕ ನೋಟವನ್ನು ನೀಡುತ್ತದೆ. ಅಭಿವೃದ್ಧಿ ಪ್ರಕ್ರಿಯೆಗಳು ರೈತರ ಹೋರಾಟಕ್ಕೆ ಕಾರಣವಾಗಿರುವುದನ್ನು ಮತ್ತು ಜಾಗತೀಕರಣದಿಂದಾಗಿ ರೈತರ ಆತ್ಮಹತ್ಯೆಯ ಪ್ರಮಾಣ ಹೆಚ್ಚುತ್ತಿರುವುದನ್ನು ಇದು ವಿಶ್ಲೇಷಣಾತ್ಮಕವಾಗಿ ದಾಖಲಿಸುತ್ತದೆ. ರೈತ ಹೋರಾಟಗಳನ್ನು ಒಂದು ಬಗೆಯ ಐಡೆಂಟಿಟಿ ರಾಜಕೀಯವೆಂದು ಈ ಕೃತಿ ಪರಿಗಣಿಸುತ್ತದೆ. ರೈತ ಸಂಘದ ಸದಸ್ಯರು ಚುನಾವಣೆಗಳನ್ನು ಗೆಲ್ಲಲು ವಿಫಲವಾದುದನ್ನು ದಾಖಲಿಸುವ ಈ ಕೃತಿಯು ರೈತರು ಒಂದು ರಾಜಕೀಯ ಪಕ್ಷ ಕಟ್ಟಲು ಸಾಧ್ಯವಿಲ್ಲವೆಂಬ ವಾದವನ್ನು ಪುಷ್ಟೀಕರಿಸುತ್ತದೆ. ೧೮೫೭ ರ ಸಿಪಾಯಿ ದಂಗೆಯನ್ನು ಈ ಕೃತಿಯು ರೈತರ ದಂಗೆಯೆಂದು ಪರಿಗಣಿಸುತ್ತದೆ.

೧೮೩೭ರ ರೈತ ಬಂಡಾಯವನ್ನು ನಾಟಕದ ರೂಪದಲ್ಲಿ ಜನರಿಗೆ ತಲುಪಿಸುವ ಮೂರು ಪ್ರಯತ್ನಗಳಾಗಿವೆ. ನಿರಂಜನರ 'ಕಲ್ಯಾಣಸ್ವಾಮಿ' ಕಾದಂಬರಿಯ ಆಧಾರದಲ್ಲಿ ಬೂನಳ್ಳಿ ಜವರೇಗೌಡರು ರಚಿಸಿದ ಅದೇ ಹೆಸರಿನ ನಾಟಕ[೪೭] ರಂಗಕೃತಿಯಾಗಿ ಅಭಿನಯ ಸುಳ್ಯದವರಿಂದ ಕನ್ನಡ ಸಂಸ್ಕೃತಿ ಇಲಾಖೆಯ ಆಶ್ರಯದಲ್ಲಿ ದಕ್ಷಿಣ ಕನ್ನಡದ ಸುಳ್ಯ, ಪುತ್ತೂರು, ಮತ್ತು ಬೆಳ್ತಂಗಡಿ ತಾಲೂಕಿನ ಹಲವಾರು ಸ್ಥಳಗಳಲ್ಲಿ ಪ್ರದರ್ಶನಗೊಂಡಿದೆ. ಪ್ರಭಾಕರ ಶಿಶಿಲರ 'ಅಮರ ಕ್ರಾಂತಿ ವೀರರು'[೪೮] ಅಮರಕ್ರಾಂತಿ ಉತ್ಸವ ಸಮಿತಿ ೧೯೯೮ ರಲ್ಲಿ ಸುಳ್ಯದಿಂದ ಮಂಗಳೂರುವರೆಗೆ ನಡೆಸಿದ ಕಾಲ್ನಡಿಗೆ ಜಾಥಾ ಕಾಲದಲ್ಲಿ ಜನಜಾಗೃತಿಗೆಂದೇ ರಚಿಸಿದ ಬೀದಿನಾಟಕ. ಸಂಶೋಧನಾ ಬದ್ಧತೆಯ ಕೊರತೆಯನ್ನು ಇಂಥ ಕೃತಿಗಳಲ್ಲಿ ಧಾರಾಳವಾಗಿ ಗಮನಿಸಬಹುದು. ಇದೇ ಮಾತು ವಿದ್ಯಾಧರ ಬಡ್ಡಡ್ಕರ ಕೆದಂಬಾಡಿ ರಾಮಗೌಡ[೪೯] ನಾಟಕಕ್ಕೂ

ಅನ್ವಯಿಸುತ್ತದೆ. ಸಾಂದರ್ಭಿಕ ಉಪಯೋಗಕ್ಕಾಗಿ ವ್ಯಕ್ತಿ ನಿಷ್ಠತೆಯಿಂದ ಇಂತಹ ನಾಟಕಗಳು ರಚಿತವಾದರೂ ಅವುಗಳು ಉಂಟುಮಾಡುವ ಎಚ್ಚರವನ್ನು ಮತ್ತು ಸಂಶೋಧನಾ ಪಥ ದರ್ಶನವನ್ನು ಅಲ್ಲಗಳೆಯುವಂತಿಲ್ಲ.

ಸಾಹಿತ್ಯ ಸಮೀಕ್ಷೆಯಲ್ಲಿ ವಿಭಿನ್ನ ಕಾರಣಗಳಿಗಾಗಿ ಆರು ಕಾದಂಬರಿಗಳನ್ನು ಅಳವಡಿಸಿಕೊಳ್ಳಲಾಗಿದೆ. ಮೂಲತಃ ಸುಳ್ಯದವರಾದ ಕುಳಕುಂದ ಶಿವರಾಯ ನಾಮಾಂಕಿತ ನಿರಂಜನರು ರಚಿಸಿದ ಅಪರಂಪಾರ ಕಾದಂಬರಿಯು[೫೦] ಕೊಡಗಿನ ಕೊನೆಯರಾಜ ಚಿಕ್ಕವೀರ ರಾಜನ ಕಾಲದಲ್ಲಿ ನಡೆಯಿತೆನ್ನಲಾದ ಕಥಾನಕವೊಂದನ್ನು ವಿಸ್ತರಿಸುತ್ತದೆ. ಕೊಡಗು- ಕೆನರಾ ರೈತ ಬಂಡಾಯದ ಮೂಲ ಬೀಜವನ್ನು ನೆಟ್ಟವನು ಇದೇ ಅಪರಂಪಾರ. ನಿರಂಜನರ ಈ ಕೃತಿಯಲ್ಲಿ ಇತಿಹಾಸಕ್ಕೆ ದೂರವಾದ ಕೆಲವು ಸಂಗತಿಗಳಿವೆ. ಇದೇ ಲೇಖಕರ 'ಕಲ್ಯಾಣಸ್ವಾಮಿ' ಕಾದಂಬರಿಯು[೫೧] ಕೊಡಗು ಕೆನರಾ ಬಂಡಾಯದ ನಾಯಕ ಪುಟ್ಟಬಸವನನ್ನು ಕೇಂದ್ರವಾಗಿರಿಸಿ ಹೆಣೆದ ಕತೆ. ಕಾದಂಬರಿಯ ಆರಂಭದ ಭಾಗದ ಆಕರ್ಷಕ ಶೈಲಿಯು, ಓದುಗರನ್ನು ಸೆರೆಹಿಡಿಯುವಲ್ಲಿ ಯಶಸ್ವಿಯಾಗುತ್ತದೆ. .ಆದರೆ ಕಾದಂರಿಯ ಬೆಳವಣಿಗೆ ಮತ್ತು ಅಂತ್ಯ ಇವುಗಳಲ್ಲಿ ಸಮಪ್ರಮಾಣತೆ ಇಲ್ಲದೆ ಅವಸರ ಪ್ರವೃತ್ತಿ ಕಂಡುಬರುತ್ತದೆ. ಕಾದಂಬರಿಕಾರರು ಡಿ.ಎನ್.ಕೃಷ್ಣಯ್ಯನವರ ಕೃತಿಯ ಆಧಾರದಲ್ಲಿ ಮುಂದುವರಿದರೂ ಇನ್ನಿತರ ಸಾಕಷ್ಟು ಸಮರ್ಪಕ ಆಧಾರಗಳು ದೊರೆಯದ ಕಾರಣ ನಿರಂಜನರ ಕೃತಿಯಲ್ಲಿ ವಸ್ತು ನಿಷ್ಠತೆಯ ಬದಲು ವ್ಯಕ್ತಿನಿಷ್ಠತೆ ವಿಜೃಂಭಿಸಿದೆ. ಮಾಸ್ತಿಯವರ ಜ್ಞಾನಪೀಠ ಪ್ರಶಸ್ತಿ ವಿಜೇತ ಕಾದಂಬರಿ 'ಚಿಕ್ಕವೀರರಾಜೇಂದ್ರ' [೫೨] ಕನ್ನಡದಲ್ಲಿ ಸಾಕಷ್ಟು ವಿವಾದಗಳನ್ನು ಉಂಟು ಮಾಡಿದ ಕೃತಿ. ಇದಕ್ಕೆ ಕಾದಂಬರಿಯ ನಾಯಕ ಚಿಕ್ಕವೀರನನ್ನು ದುರುಳ ಖಳನಾಯಕನಂತೆ ಚಿತ್ರಿಸಿ ಆತನನ್ನು ಪ್ರಜಾಕಂಟಕನನ್ನಾಗಿ ಜನರೆದುರು ನಿಲ್ಲಿಸಿದ್ದು ಕಾರಣ. ಮಾಸ್ತಿಯವರು ಹೀಗೆ ಮಾಡಲು ಅವರಲ್ಲಿ ತೀರಾ ಸುಪ್ತವಾಗಿ ಇದ್ದಿರಬಹುದಾದ ಬ್ರಿಟಿಷ್ ನಿಷ್ಠೆ ಕಾರಣವಾಗಿದ್ದಿರಬೇಕೆಂಬ ವಿಮರ್ಶಕರ ಊಹೆ ಈ ಕೃತಿಯ ಅಂತಃಸತ್ತ್ವವನ್ನು ಪ್ರಶ್ನಿಸುವಂತೆ ಮಾಡಿದೆ. ಆದರೆ ಚಿಕ್ಕವೀರ ರಾಜೇಂದ್ರ ಕೃತಿಯು ಕೊಡಗಿನ ಇತಿಹಾಸಕ್ಕೆ ಒಂದು ನೂತನ ಭಾಷ್ಯ ಎಂದು ಪರಿಗಣಿಸುವ ವಿಮರ್ಶಕರು ಸಾಕಷ್ಟಿದ್ದಾರೆ.

ಪ್ರಭಾಕರ ನೀರಮಾರ್ಗರ 'ಮಂಗಳೂರ ಕ್ರಾಂತಿ'[೫೩] ೧೮೩೭ ರ ಅಮರ ಸುಳ್ಯ ಬಂಡಾಯವು ಮಂಗಳೂರಿನ ಸುತ್ತಮುತ್ತ ಉಂಟುಮಾಡಿದ ಪರಿಣಾಮಗಳ ಮೇಲೆ ಹೆಣೆದ ಕಾದಂಬರಿಯಾಗಿದೆ. ಒಂದು ಸಾಹಿತ್ಯಕೃತಿಯಾಗಿ ಇದು ತಕ್ಕಮಟ್ಟಿಗೆ ಪರಿಣಾಮಕಾರಿಯಾಗಿದೆ. ಕೃತಿಕಾರರಿಗೆ ಸಾಕಷ್ಟು ಖಚಿತ ಐತಿಹಾಸಿಕ ಆಧಾರಗಳು ದೊರೆಯದ ಕಾರಣ ಕೃತಿಯನ್ನು ಒಂದು ಆಕರವಾಗಿ ಬಳಸುವಲ್ಲಿ ಸಾಕಷ್ಟು ತೊಡಕುಗಳಿವೆ. ಆದರೂ ೧೮೩೭ ರೈತ

ಬಂಡಾಯವು ಸಾಹಿತ್ಯ ಕೃತಿಗಳಿಗೆ ಈಗಲೂ ಸಾಮಗ್ರಿ ಒದಗಿಸುವುದನ್ನು ಉಲ್ಲೇಖಿಸಲೇಬೇಕಾಗುತ್ತದೆ.

ರೈತ ಬಂಡಾಯದ ಕಾರಣ ಮತ್ತು ಪರಿಣಾಮಗಳ ಬಗ್ಗೆ ಪ್ರಭಾಕರ ಶಿಶಿಲರ[೫೪] ೨೦೦೧[೫೫] ಮತ್ತು ೨೦೦೨ [೫೬] ರಲ್ಲಿ ಪ್ರಕಟಿಸಿದ ಲೇಖನಗಳು ಕಳೆದು ಹೋದ ಘಟನೆಯೊಂದರ ಬಗ್ಗೆ ಜನ ಸಾಮಾನ್ಯರಲ್ಲಿ ಅರಿವುಂಟು ಮಾಡುವ ಪ್ರಯತ್ನವೆನಿಸುತ್ತದೆ. ೧೮೩೭ರ ರೈತಬಂಡಾಯದ ತವರು ನೆಲವಾದ ಸುಳ್ಯದಲ್ಲಿ ಆ ನೆನಪನ್ನು ಗಟ್ಟಿಗೊಳಿಸುವ ಉದ್ದೇಶದಿಂದ ಅಮರ ಕ್ರಾಂತಿ ಉತ್ಸವ ಸಮಿತಿ ಹುಟ್ಟಿಕೊಂಡು ಮಂಗಳೂರವರೆಗೆ ಕಾಲ್ನಡಿಗೆ ಜಾಥಾ ನಡೆಸಿ ಕೆಲವು ಬೇಡಿಕೆಗಳನ್ನು ಸರಕಾರದ ಮುಂದಿರಿಸಿತು. ಆ ಬಳಿಕ ಸಮಿತಿ ಪ್ರತಿ ವರ್ಷ ಉತ್ಸವ ನಡೆಸಿ ಹಿಂದೆ ತಾನು ಸರಕಾರದ ಮುಂದಿರಿಸಿದ ಬೇಡಿಕೆಗಳನ್ನು ಪುನರುಚ್ಚರಿಸಬೇಕಾಗಿ ಬಂತು. ಭರವಸೆ ಕೊಡುವುದನ್ನು ಬಿಟ್ಟರೆ ಸ್ಥಳೀಯ ಜನಪ್ರತಿನಿಧಿಗಳು ಬೇರೇನನ್ನೂ ಮಾಡದ ನೋವು ಕೊನೆಯೆರಡು ಲೇಖನಗಳಲ್ಲಿ ವಿಷಾದ ಸ್ಥಾಯಿಯಾಗಿ ಮೂಡಿದೆ. ಸೀಮಿತ ಉದ್ದೇಶವಿರುವ ಈ ಲೇಖನಗಳಲ್ಲಿ ಅಧ್ಯಯನದ ಶಿಸ್ತು ಬದ್ಧತೆಯನ್ನು ನಿರೀಕ್ಷಿಸಲು ಸಾಧ್ಯವಿಲ್ಲ.

ಇದೇ ಲೇಖಕರು ತಮ್ಮೆರಡು ಕಾದಂಬರಿಗಳನ್ನು ಲಭ್ಯವಿರುವ ಐತಿಹಾಸಿಕ ಆಧಾರಗಳನ್ನು ಬಳಸಿ ರಚಿಸಿರುವುದರಿಂದ ಪ್ರಕೃತ ಅಧ್ಯಯನಕ್ಕೆ ನೆರವಾಗುತ್ತದೆ. ಇವರ ಮಾಸ್ತಿ ಪ್ರಶಸ್ತಿ ವಿಜೇತ ಕಾದಂಬರಿ 'ನದಿಯ ಎರಡರ ನಡುವೆ'[೫೭] ಕೃತಿಯ ಮೊದಲ ಭಾಗವು ಹಾಲೇರಿ ರಾಜವಂಶೀಯರು ಕೊಡಗು ಎಂಬ ನಾಡನ್ನು ಕಟ್ಟಿ ಬೆಳೆಸಿದ ಕಥಾವಸ್ತುವನ್ನು ಹೊಂದಿದೆ. ಅದರ ಎರಡನೆಯ ಭಾಗವು ರೈತರು ಇಂಗ್ಲೀಷರಿಂದ ನಾಡನ್ನು ವಿಮುಕ್ತಿಗೊಳಿಸಲು ನಡೆಸಿದ ಹೋರಾಟದ ಸುತ್ತ ಹೆಣೆದ ಕಥೆಯಾಗಿದೆ. ಇವರ ಇನ್ನೊಂದು ಕಾದಂಬರಿ 'ಮೂಡಣದ ಕೆಂಪು ಕಿರಣ'[೫೮] ಕಥಾ ವಸ್ತು ಕೊಡಗು - ಕೆನರಾ ಬಂಡಾಯ. ಅದರ ಹಿನ್ನೆಲೆ, ಮುನ್ನೆಲೆ, ಮತ್ತು ಪರಿಣಾಮಗಳನ್ನು ಅಧಿಕೃತ ದಾಖಲೆಗಳ ಆಧಾರದಲ್ಲಿ ಕಲಾತ್ಮಕವಾಗಿ ಅಭಿವ್ಯಕ್ತಿಸಲು ಈ ಕೃತಿಗೆ ಸಾಧ್ಯವಾಗಿದೆ. ಐತಿಹ್ಯಗಳ ಆಧಾರದಲ್ಲಿ ಇತಿಹಾಸವನ್ನು ಪುನಾರಚಿಸಲು ಇದೇ ಲೇಖಕರ ಹತ್ತು ಕತೆಗಳ ಸಂಕಲನ 'ಕೊಡಗಿನ ಐತಿಹ್ಯ ಕತೆಗಳು' [೫೯] ನೆರವಾಗುತ್ತದೆ.

೧.೩. ಅಧ್ಯಯನದ ಮಹತ್ವ

ಈವರೆಗಿನ ಅಧ್ಯಯನಗಳು ಕೊಡಗು - ಕೆನರಾ ಬಂಡಾಯದ ಬಗ್ಗೆ ಸಮಗ್ರವಾದ ಹಿನ್ನೋಟ ಮತ್ತು ಮುನ್ನೋಟ ಸಹಿತದ ಸಂಪೂರ್ಣ ವಿವರಣೆ ನೀಡದಿರುವುದು ಪ್ರಸಕ್ತ ಅಧ್ಯಯನಕ್ಕೆ ತಾರ್ಕಿಕ ನೆಲೆಗಟ್ಟನ್ನು ಒದಗಿಸಿದೆ. ೧೮೩೭ ರ ರೈತ ಬಂಡಾಯ ಸಮಗ್ರ ಕೊಡಗು- ಕೆನರಾಗಳ ಇತಿಹಾಸದಲ್ಲಿ ಒಂದು ತಿರುವು. ಅದು ಇವೆರಡು ಜಿಲ್ಲೆಗಳ ಅಭಿವೃದ್ಧಿಯೊಡನೆ ತಳುಕು ಹಾಕಿಕೊಂಡಿದೆ. ಬಂಡಾಯದ ಅವಧಿ ಕೇವಲ ಒಂದು ವಾರ ಮತ್ತು

ಬಂಡುಕೋರರ ಆಡಳಿತ ಅವಧಿ ಹದಿನಾಲ್ಕೇ ದಿನಗಳಾದರೂ ಅದರ ಹಿನ್ನೆಲೆಯಲ್ಲಿ ಅನೇಕ ಹಿತಾಸಕ್ತಿಗಳು ಕೆಲಸ ಮಾಡಿವೆ. ಅದನ್ನು ಅಡಗಿಸಲು ಅನೇಕರು ತಮ್ಮ ಸ್ವಾರ್ಥ ಸಾಧನೆಗಾಗಿ ಬ್ರಿಟಿಷರೊಡನೆ ಕೈ ಜೋಡಿಸಿದ್ದಾರೆ. ಬಂಡಾಯದ ಬಳಿಕ ಬಂಡಾಯಗಾರರ ಪ್ರದೇಶಗಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಾಗಿದೆ. ವಸಾಹತುಶಾಹಿಯ ನಿಜವಾದ ಉದ್ದೇಶವೇನು ಎನ್ನುವುದರ ಅರಿವಾಗುವುದು ಇಂತಹ ಸಂಧರ್ಭಗಳಲ್ಲಿ. ಇತಿಹಾಸವನ್ನು ಮರೆತರೆ ಭವಿಷ್ಯವನ್ನು ರೂಪಿಸಲು ಸಾಧ್ಯವಿಲ್ಲ. ಆದುದರಿಂದ ಪ್ರಸಕ್ತ ಅಧ್ಯಯನವು ಮಹತ್ವವನ್ನು ಪಡೆದುಕೊಳ್ಳುತ್ತದೆ.

೧೮೩೭ರ ಬಂಡಾಯಕ್ಕೆ ರೈತರು ಅನುಭವಿಸಿದ ಸಂಕಷ್ಟಗಳು ಕಾರಣ. ಉತ್ಪನ್ನಗಳ ಬೆಲೆ ಕುಸಿತ, ಕಂದಾಯ ಏರಿಕೆ ಮತ್ತು ರೈತರ ಅಗತ್ಯದ ಸರಕುಗಳ ಬೆಲೆ ಹೆಚ್ಚಳವು ೧೮೩೭ರಲ್ಲಿ ರೈತರು ಬ್ರಿಟಿಷರ ವಿರುದ್ಧ ಆಯುಧ ಹಿಡಿಯುವಂತೆ ಮಾಡಿತು. ಬ್ರಿಟಿಷ್ ವಸಾಹತುಶಾಹಿಯಿಂದ ಹೆಚ್ಚು ತೊಂದರೆಗೊಳಗಾದದ್ದು ರೈತರು. ೧೯೯೫ರಲ್ಲಿ ವಿಶ್ವವ್ಯಾಪಾರ ಸಂಘಟನೆ ಅಸ್ತಿತ್ವಕ್ಕೆ ಬಂದಾಗ ಭಾರತವೂ ಸೇರಿದಂತೆ ಹಿಂದುಳಿದ ದೇಶಗಳು ರೈತ ವಿರೋಧಿಯಾದ ಡಂಕೆಲ್ಲು ಪ್ರಸ್ತಾವನೆಗಳನ್ನು ಒಪ್ಪಿಕೊಳ್ಳಬೇಕಾಗಿ ಬಂತು. ವಿಶ್ವವ್ಯಾಪಾರ ಸಂಸ್ಥೆಯ ಉದ್ದೇಶ ಅಮೇರಿಕಾದ ವಾಣಿಜ್ಯ ವಸಾಹತುವಾದವನ್ನು ಹಿಂದುಳಿದ ದೇಶಗಳಲ್ಲಿ ಪಸರಿಸುವುದು. ಪರಿಣಾಮವಾಗಿ ಕೃಷಿ ಪರವಾದ ಎಲ್ಲಾ ನೀತಿಗಳಿಗೆ ಹಿಂದುಳಿದ ದೇಶಗಳು ತಿಲಾಂಜಲಿ ನೀಡಬೇಕಾಗಿ ಬಂದಿದೆ. ಇದರಿಂದಾಗಿ ಭಾರತವೂ ಸೇರಿದಂತೆ ಹಿಂದುಳಿದ ದೇಶಗಳ ಕೃಷಿಕರು ತೀವ್ರ ಸಂಕಷ್ಟಗಳನ್ನು ಎದುರಿಸುತ್ತಿದ್ದಾರೆ.[೬೦] ವಿಶೇಷ ಆರ್ಥಿಕ ವಲಯಗಳು, ಕೈಗಾರಿಕೆಗಳಿಗೆ ಭೂಮಿ ನೀಡಿಕೆ ಇತ್ಯಾದಿಗಳು ಹೊರನೋಟಕ್ಕೆ ಅಭಿವೃದ್ಧಿ ಮಂತ್ರದಂತೆ ಇಂಪಾಗಿ ಕೇಳಿಸುತ್ತವೆ. ವಾಸ್ತವವಾಗಿ ಅವು ಭಾರತದ ಬೆನ್ನೆಲುಬನ್ನು (ಕೃಷಿರಂಗ) ಮುರಿಯುವ ಮತ್ತು ಭಾರತವು ಆಹಾರಕ್ಕಾಗಿ ಅಮೇರಿಕವನ್ನು ಅವಲಂಬಿಸಬೇಕಾದ ಪರಿಸ್ಥಿತಿಯನ್ನು ನಿರ್ಮಾಣ ಮಾಡುವ ಕಾರ್ಯತಂತ್ರಗಳಾಗಿವೆ. "ನೀವು ನಿಮ್ಮ ದೇಶದ ತೃತೀಯ ರಂಗವನ್ನು ಬಲಪಡಿಸಿ. ನಾವು ನಿಮಗೆ ಆಹಾರ ಪೂರೈಕೆ ಮಾಡುತ್ತೇವೆ" ಎಂದು ಭಾರತವು ಡಂಕೆಲ್ ಪ್ರಸ್ತಾವನೆಗಳಿಗೆ ಸಹಿ ಹಾಕಲು ಮೀನಮೇಷ ಎಣಿಸುತ್ತಿದ್ದಾಗ ಅಮೇರಿಕ ಹೇಳಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.[೬೧]

೧೮೩೭ರ ವಸಾಹತುಶಾಹಿತ್ವದ ಮುಂದುವರಿದ ಭಾಗವಾದ ಇಂದಿನ ಜಾಗತೀಕರಣ ಉಂಟುಮಾಡಿರುವ ಕೃಷಿ ಸಮಸ್ಯೆಗಳಿಗೆ ನಾವು ಇತಿಹಾಸದಲ್ಲಿ ಹಿಂದಕ್ಕೆ ಕಾಲಪಯಣ ಮಾಡಿ ಪರಿಹಾರ ಕಂಡುಕೊಳ್ಳಬೇಕಾಗಿದೆ. ಕೊಡಗು-ಕೆನರಾ ರೈತ ಬಂಡಾಯದ ಸಮಗ್ರ

ಅಧ್ಯಯನದಿಂದ ಭಾರತದ ಕೃಷಿರಂಗವು ಇಂದು ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಸಾಧ್ಯವಿದೆ ಎನ್ನುವುದು ಈ ಅಧ್ಯಯನದ ಮಹತ್ವವನ್ನು ತಿಳಿಯಪಡಿಸುತ್ತದೆ.

ಕೊಡಗಿನಲ್ಲಿ ಪ್ರತ್ಯೇಕತೆಯ ಕೂಗು ಕೆಲವು ವರ್ಷಗಳಿಂದ ಕೇಳಿ ಬರುತ್ತಿದೆ. ಕೆನರಾ ೧೭೯೯ರಲ್ಲಿ ಮತ್ತು ಕೊಡಗು ೧೮೩೪ರಲ್ಲಿ ಮದರಾಸು ಪ್ರಾಂತ್ಯದ ಆಡಳಿತಕ್ಕೆ ಒಳಪಟ್ಟಿತು. ದ.ಕ. ಜಿಲ್ಲೆಯಲ್ಲಿ ಮೂರುಬಾರಿ ರೈತರು ವಸಾಹತುಶಕ್ತಿಗೆ ತಿರುಗಿಬಿದ್ದರು. ಈ ಅವಧಿಯಲ್ಲಿ ಕೊಡಗಿನಲ್ಲಿ ರೈತ ಬಂಡಾಯ ನಡೆಯಲ್ಲಿಲ್ಲ. ಬಂಡಾಯವನ್ನು ಹತ್ತಿಕ್ಕಿದ ಬಳಿಕ ದ.ಕ.ದ ಅಭಿವೃದ್ಧಿಯನ್ನು ವಸಾಹತುಶಾಹಿ ಆಡಳಿತವು ನಿರ್ಲಕ್ಷಿಸಿತು. ಆದರೆ ಕೊಡಗಿನ ಬಗ್ಗೆ ವಿಶೇಷ ಮಮತೆಯನ್ನು ತೋರಿತು. ಈಗಲೂ ದ.ಕ. ಜಿಲ್ಲೆಯ ಬಗ್ಗೆ ರಾಜ್ಯಕ್ಕೆ ಮತ್ತು ಕೇಂದ್ರಕ್ಕೆ ಹೆಚ್ಚು ಒಲವಿದ್ದಂತೆ ಕಾಣುವುದಿಲ್ಲ. ಕೊಡಗಿನ ಬಗ್ಗೆ ಮಾತ್ರ ವಿಶೇಷ ಅಕ್ಕರೆಯಿದ್ದಂತೆ ಕಾಣಿಸುತ್ತದೆ. ಹಾಗಿದ್ದೂ ಕೊಡಗಿನಲ್ಲಿ ಪ್ರತ್ಯೇಕತೆಯ ಕೂಗು ಕೇಳಿ ಬಂತು. ದ.ಕ. ದಲ್ಲಿ ಕೇಳಿ ಬರಲಿಲ್ಲ. ಕೊಡಗು ಒಂದು ಪ್ರತ್ಯೇಕ ರಾಜ್ಯವಾದರೆ ಅದರ ಅಭಿವೃದ್ಧಿ ಸಾಧ್ಯವೇ? ಪುತ್ತೂರನ್ನು ಜಿಲ್ಲಾ ಕೇಂದ್ರವಾಗಿಸಿದರೆ ಅಮರ ಸುಳ್ಯದ ಅಭಿವೃದ್ಧಿ ಹೊಂದೀತ? – ಎಂಬಿತ್ಯಾದಿ ವಿವಾದಾಸ್ಪದ ಪ್ರಶ್ನೆಗಳಿಗೆ ಕೂಡಾ ಉತ್ತರ ಕಂಡುಕೊಳ್ಳುವ ಅಗತ್ಯವಿದೆ. ಈ ಕಾರಣಕ್ಕಾಗಿ ಪ್ರಸಕ್ತ ಅಧ್ಯಯನವು ಮಹತ್ವವನ್ನು ಪಡೆದುಕೊಂಡಿದೆ.

೧.೪ ಉದ್ದೇಶಗಳು ಮತ್ತು ಪೂರ್ವಕಲ್ಪನೆಗಳು

ಪ್ರಸಕ್ತ ಅಧ್ಯಯನವು ಈ ಕೆಳಗಿನ ಉದ್ದೇಶಗಳನ್ನು ಹೊಂದಿದೆ:

- ❖ ದ.ಕ. ಮತ್ತು ಕೊಡಗಿನ ವಸಾಹತುಪೂರ್ವ ಆರ್ಥಿಕತೆಗಳ ಅಧ್ಯಯನ.
- ❖ ದ.ಕ. ಮತ್ತು ಕೊಡಗು ಜಿಲ್ಲೆಗಳನ್ನು ವಸಾಹತುಶಕ್ತಿಯು ತನ್ನದಾಗಿಸಿಕೊಂಡುದರ ಕಾರಣ ಮತ್ತು ಅದಕ್ಕೆ ಜನರು ತೋರಿದ ಪ್ರತಿರೋಧದ ದಾಖಲಾತಿ.
- ❖ ವಸಾಹತುಶಾಹಿಯು ರೈತ ಬಂಡಾಯ ಪೂರ್ವದಲ್ಲಿ ಇವೆರಡು ಜಿಲ್ಲೆಗಳಲ್ಲಿ ಅಳವಡಿಸಿದ ಆರ್ಥಿಕ ನೀತಿಯ ಮತ್ತು ಅದರ ಪರಿಣಾಮಗಳ ಅಧ್ಯಯನ.
- ❖ ವಸಾಹತುಶಾಹಿ ಶಕ್ತಿಗೆದುರಾಗಿ ೧೮೩೭ರಲ್ಲಿ ರೈತರು ಬಂಡೆದ್ದುದಕ್ಕೆ ಕಾರಣ ಮತ್ತು ಅದರ ಪರಿಣಾಮಗಳ ವಿಶ್ಲೇಷಣೆ.
- ❖ ೧೮೩೭ ರಲ್ಲಿ ಬಂಡಾಯ ನಡೆದ ಪ್ರದೇಶಗಳ ಈಗಿನ ಸ್ಥಿತಿಗತಿಗಳ ಅಧ್ಯಯನ.
- ❖ ಈ ಪ್ರದೇಶಗಳ ಸಮಸ್ಯೆಗಳ ಕ್ರೋಢೀಕರಣ ಮತ್ತು ಅವುಗಳಿಗೆ ಪರಿಹಾರ ಶೋಧನೆ.

ಪ್ರಸಕ್ತ ಅಧ್ಯಯನವು ಮೂರು ಪೂರ್ವ ಕಲ್ಪನೆಗಳನ್ನು ಮಾಡಿಕೊಳ್ಳುತ್ತದೆ :

- ವಸಾಹತುಶಾಹಿ ಆರ್ಥಿಕ ನೀತಿ ಮತ್ತು ದೇಶೀಯ ಆರ್ಥಿಕ ನೀತಿಯ ಮುಖಾಮುಖಿಯಿಂದ ಹುಟ್ಟಿಕೊಳ್ಳುವ ತಲ್ಲಣಗಳು ಪ್ರತಿರೋಧಗಳಿಗೆ ಕಾರಣವಾಗುತ್ತವೆ.
- ಆರ್ಥಿಕ ಶೋಷಣೆ (ಆರ್ಥಿಕ ಕಾರಣಗಳು) ಆಡಳಿತದ ವಿರುದ್ಧ ಪ್ರಜೆಗಳನ್ನು ದಂಗೆ ಏಳುವಂತೆ ಪ್ರಚೋದಿಸುತ್ತದೆ.
- ಬಂಡಾಯದ ಪ್ರದೇಶವನ್ನು ಪ್ರಭುತ್ವವು ಆಡಳಿತಾತ್ಮಕವಾಗಿ ನಿರ್ಲಕ್ಷಿಸುತ್ತದೆ.

ಪರಿಕಲ್ಪನೆಗಳ ಕಾರ್ಯಾತ್ಮಕ ವ್ಯಾಖ್ಯೆ

ಪ್ರಸಕ್ತ ಅಧ್ಯಯನದಲ್ಲಿ ಬಳಕೆಯಾದ ಐದು ಪದಪುಂಜಗಳ ಕಾರ್ಯಾತ್ಮಕ ವ್ಯಾಖ್ಯೆ ಹೀಗಿದೆ:

- ವಸಾಹತು ಶಾಹಿ ಆರ್ಥಿಕತೆ: ವ್ಯಾಪಾರ ಕೇಂದ್ರಿತ ವಿದೇಶಿ ಆರ್ಥಿಕ ಚಟುವಟಿಕೆಗಳ ಚೌಕಟ್ಟು.
- ದೇಶಿಯ ಆರ್ಥಿಕತೆ : ಕೃಷಿ ಕೇಂದ್ರಿತ ಸ್ಥಳೀಯ ಆರ್ಥಿಕ ಚಟುವಟಿಕೆಗಳ ಚೌಕಟ್ಟು.
- ಕೆನರಾ : ಬ್ರಿಟಿಷರು ಉಲ್ಲೇಖಿಸುತ್ತಿದ್ದ 'ಕೆನರಾ'ವು ಇಂದಿನ ದ.ಕ, ಕಾಸರಗೋಡು, ಉಡುಪಿ ಮತ್ತು ಉ.ಕ ಗಳನ್ನು ಒಳಗೊಂಡಿತ್ತು. ಈ ಅಧ್ಯಯನದಲ್ಲಿ 'ಕೆನರಾ'ವನ್ನು ಅವಿಭಜಿತ ದ.ಕ ಜಿಲ್ಲೆ ಮತ್ತು ಕಾಸರಗೋಡು ಜಿಲ್ಲೆಗಳಿಗೆ ಸೀಮಿತಗೊಳಿಸಿ ಬಳಸಲಾಗಿದೆ.
- ಬಂಡಾಯ : ಈ ಅಧ್ಯಯನದಲ್ಲಿ ಬಂಡಾಯ, ಹೋರಾಟ, ಚಳುವಳಿ, ಮತ್ತು ಕ್ರಾಂತಿಗಳನ್ನು ಸಮಾನ ಅರ್ಥದಲ್ಲಿ ಬಳಸಲಾಗಿದೆ.
- ಆರ್ಥಿಕ ಬಂಡಾಯ : ಈ ಪದವನ್ನು ರೈತ ಬಂಡಾಯಕ್ಕೆ ಪರ್ಯಾಯವಾಗಿ ಬಳಸಿಕೊಳ್ಳಲಾಗಿದೆ.

೧.೫ ಅಧ್ಯಯನದ, ವಿಷಯ, ವ್ಯಾಪ್ತಿ ಮತ್ತು ವಿಧಾನ

ಕೊಡಗು - ಕೆನರಾ ರೈತ ಬಂಡಾಯ ೧೮೩೭ ರಲ್ಲಿ ಅಮರ ಸುಳ್ಯ ಸೀಮೆಯಲ್ಲಿ ಆರಂಭವಾಗಿ ಎರಡು ಜಿಲ್ಲೆಗಳಿಗೆ ವ್ಯಾಪಿಸಿದ್ದ ಒಂದು ವಿಶಿಷ್ಟ ಆರ್ಥಿಕ ವಿದ್ಯಮಾನ. ಕೆನರಾ ಜಿಲ್ಲೆಯು ಪಶ್ಚಿಮ ಕರಾವಳಿ ತೀರದಲ್ಲಿದ್ದು ಕ್ರಿ.ಶ. ಒಂದನೆಯ ಶತಮಾನದಿಂದಲೇ ಸಾಹಸಿಗಳು ಹಾಯಿ ದೋಣಿಗಳಲ್ಲಿ ಅರಬಸ್ಥಾನ ಮತ್ತು ಯುರೋಪಿನಿಂದ ಇಲ್ಲಿಗೆ ಬರುತ್ತಿದ್ದರು. ಈಜಿಪ್ಟಿನ ಮಮ್ಮಿಗಳಿಗೆ ಭಾರತದ ಮಸ್ಲಿನ್ ಬಟ್ಟೆ ಬಳಕೆಯಾಗುತ್ತಿತ್ತೆಂಬ ಐತಿಹ್ಯವಿದೆ.[೨] ಪೋರ್ಚುಗೀಸರು ಮತ್ತು ಇಂಗ್ಲೀಷರು ಕರಾವಳಿ ಕರ್ನಾಟಕದ ಮೇಲೆ ವ್ಯಾಪಾರ ಹಿಡಿತ ಸಾಧಿಸಲು ೧೭ ನೇ ಶತಮಾನದಿಂದಲೇ ಪೈಪೋಟಿ ನಡೆಸಿದ್ದರು. ವಿಜಯನಗರ ಸಾಮ್ರಾಜ್ಯ ಪೋರ್ಚುಗೀಸರಿಗೆ ಬೆಂಬಲ ನೀಡಿದುದರಿಂದ ಬ್ರಿಟಿಷರು ತಮ್ಮ ಸಂದರ್ಭಕ್ಕಾಗಿ ಕಾಯಬೇಕಾಯಿತು. ಕೆಳದಿ ನಾಯಕರು ಕೆನರಾವನ್ನು ತಮ್ಮ ವಶಪಡಿಸಿಕೊಂಡ ಬಳಿಕ ಇಂಗ್ಲೀಷರ ಶುಕ್ರದೆಸೆ ಆರಂಭವಾಯಿತು.ಆದರೆ ಹೈದರ್ ಟಿಪ್ಪು ಇಂಗ್ಲಿಷರ ಪ್ರಾಬಲ್ಯ ಮುರಿಯಲು ಕ್ರಿ.ಶ. ೧೭೯೯ ರ ವರೆಗೂ ತಡೆಯೊಡ್ಡಿದರು. ಟಿಪ್ಪುವಿನ ಮರಣಾನಂತರ ಕೆನರಾ ಬ್ರಿಟಿಷರ ಆಡಳಿತಕ್ಕೆ ಒಳಪಟ್ಟಿತು. ಜಿಲ್ಲೆಯ ಕಂದಾಯ ವ್ಯವಸ್ಥೆ ಬದಲಾಯಿತು. ಉಪ್ಪು ಮತ್ತು ಹೊಗೆಸೊಪ್ಪು ಸರಕಾರಿ ಏಕಸ್ವಾಮ್ಯದ ಸರಕುಗಳಾದವು. ಕ್ರಿ.ಶ. ೧೮೧೧ ರ ಕಂದಾಯ ನಿರಾಕರಣೆ ಚಳುವಳಿ ಮತ್ತು ಕ್ರಿ.ಶ. ೧೮೩೦ ರ ಕೂಟು ದಂಗೆಗಳು ವಸಾಹತುಶಾಹಿ ಆರ್ಥಿಕ ನೀತಿಗೆ ರೈತ ಪ್ರತಿಭಟನೆಯಾಗಿತ್ತು. ಶಸ್ತ್ರಕ್ರಾಂತಿಯಲ್ಲದುದರಿಂದ ಬ್ರಿಟಿಷರಿಗೆ ಅದನ್ನು ಸುಲಭವಾಗಿ ಅಡಗಿಸಲು ಸಾಧ್ಯವಾಯಿತು. ಕೆನರಾ ಎಂದೂ ಒಬ್ಬ ಸ್ಥಳೀಯ ರಾಜನ ಹಿಡಿತದಲ್ಲಿರಲಿಲ್ಲ. ಬ್ರಿಟಿಷರನ್ನು ಶಸ್ತ್ರಗಳ ಮೂಲಕ ಎದುರಿಸಲು ಈ ಜಿಲ್ಲೆಯ ಜನರು ಅಲ್ಲಿಯವರೆಗೂ ಹೋಗಿರಲಿಲ್ಲ.

ಕೊಡಗಿನದ್ದು ಪೂರ್ತಿ ಭಿನ್ನವಾದ ಪರಿಸ್ಥಿತಿ. ೧೭ನೇ ಶತಮಾನದ ಆರಂಭದಲ್ಲಿ ಕೊಡಗಿನ ಒಂದು ಭಾಗವಾದ ಹಾಲೇರಿಯಲ್ಲಿ ಆದಿರಾಜ ವೀರಪ್ಪ ದೊರೆ ಪುಟ್ಟ ಸಂಸ್ಥಾನವೊಂದನ್ನು ರಚಿಸಿಕೊಂಡ. ಅವನ ಪೀಳಿಗೆಗೆ ಸೇರಿದ ಲಿಂಗರಾಜೇಂದ್ರ ಹೈದರಾಲಿಯ ಸಹಾಯದಿಂದ ತನ್ನ ದಾಯಾದಿಗಳನ್ನು ನಿವಾರಿಸಿ ಕೊಡಗಿನ ರಾಜನಾದ. ಅವನ ಮರಣಾನಂತರ ಹೈದರ್ ಮತ್ತು ಆ ಬಳಿಕ ಟಿಪ್ಪು ಕೊಡಗನ್ನು ಆಳಿದರು. ಟಿಪ್ಪುವಿನ ಬಂಧನದಲ್ಲಿದ್ದ ದೊಡ್ಡವೀರ ರಾಜ ಕೊಡಗರ ನೆರವಿನಿಂದ ಸೆರೆಯಿಂದ ತಪ್ಪಿಸಿಕೊಂಡು ದಕ್ಷಿಣ ಕೊಡಗಿನಲ್ಲಿ ಆಡಳಿತ ನಡೆಸುತ್ತಿದ್ದ. ಅವನ ನೆರವನ್ನು ಪಡೆದು ಬ್ರಿಟಿಷರು ಟಿಪ್ಪುವನ್ನು ಸುಲಭವಾಗಿ ಸೋಲಿಸಿದರು. ಆತನಿಗೆ ಕೃತಜ್ಞತಾ ರೂಪದಲ್ಲಿ ಸುಳ್ಯ ಮತ್ತು ಪುತ್ತೂರುಗಳ ೧೧೦ ಗ್ರಾಮಗಳನ್ನು ಬಿಟ್ಟುಕೊಟ್ಟರು. ಈ ಗ್ರಾಮಗಳು ಕೆನರಾದ ಶೋಷಣಾತ್ಮಕ ಕಂದಾಯ ವ್ಯವಸ್ಥೆಗೆ ಒಳಪಡದೆ ಹಾಯಾಗಿದ್ದವು. ಕ್ರಿ.ಶ. ೧೮೩೪ ರಲ್ಲಿ ಕೊಡಗಿನ ಕೊನೆಯ ಅರಸ

ಚಿಕ್ಕವೀರನನ್ನು ಪದಚ್ಯುತಿಗೊಳಿಸಿ ಬ್ರಿಟಿಷರು ಕೊಡಗಿನಲ್ಲಿ ತಮ್ಮ ಆಡಳಿತಾಧಿಕಾರಿಯನ್ನು ನೇಮಿಸಿದರು. ಆಡಳಿತದ ಸುಲಭೀಕರಣಕ್ಕಾಗಿ ಸುಳ್ಯ ಮತ್ತು ಪುತ್ತೂರುಗಳ ೧೧೦ ಗ್ರಾಮಗಳನ್ನು ಕೆನರಾಕ್ಕೆ ಸೇರಿಸಿಬಿಟ್ಟರು. ಕೆನರಾದ ಬಿಗಿ ಕಂದಾಯ ನೀತಿ ಈ ಗ್ರಾಮಗಳ ರೈತರ ಬದುಕನ್ನು ಅಸಹನೀಯವಾಗಿ ಮಾಡಿಬಿಟ್ಟಿತು. ಪರಿಣಾಮವಾಗಿ ಕ್ರಿ.ಶ. ೧೮೩೭ ರಲ್ಲಿ ಬ್ರಿಟಿಷರ ವಿರುದ್ಧ ಬಂಡೆದ್ದು ಅವರನ್ನು ಕೆನರಾದಿಂದ ಓಡಿಸಿ ಎರಡು ವಾರಗಳ ಕಾಲ ಹಳೆಯ ಕಂದಾಯ ವ್ಯವಸ್ಥೆಯನ್ನು ಜಾರಿಗೆಗೊಳಿಸಿದರು. ಕೊನೆಗೆ ಬ್ರಿಟಿಷರ ಬೃಹತ್ ಸೇನೆಯೆದುರು ಸೋಲುವುದರೊಂದಿಗೆ ಬಂಡಾಯದ ಸೊಲ್ಲಡಗಿತು.

ಈ ಘಟನೆಯ ಹಿನ್ನೆಲೆಯ ಬಗ್ಗೆ ವಸ್ತುನಿಷ್ಠ ಅಧ್ಯಯನಗಳು ನಡೆದದ್ದು ತೀರಾ ಕಡಿಮೆ. ರೈತ ಬಂಡಾಯವನ್ನು ಭಾವನಾತ್ಮಕವಾಗಿ ಸ್ವಾತಂತ್ರ್ಯ ಸಮರವೆಂದೂ, ಹೀಯಾಳಿಸುವ ದಾಟಿಯಲ್ಲಿ 'ಕಾಟಕಾಯಿ'ಯೆಂದೂ ಕರೆದದ್ದಿದೆ. ಬಂಡಾಯದ ಒಟ್ಟು ಸ್ವರೂಪ ಮತ್ತು ಪರಿಣಾಮಗಳ ಬಗ್ಗೆ ವ್ಯಾಪಕ ಅಧ್ಯಯನಗಳಾಗಿಲ್ಲ. ಕೊಡಗು - ಕೆನರಾ ರೈತ ಬಂಡಾಯದ ಐತಿಹಾಸಿಕ ಹಿನ್ನೆಲೆ, ಬಂಡಾಯದ ಕಾರಣ, ಸ್ವರೂಪ ಮತ್ತು ಪರಿಣಾಮಗಳ ವಸ್ತು ನಿಷ್ಠ ವಿಶ್ಲೇಷಣೆ ಪ್ರಸಕ್ತ ಅಧ್ಯಯನದ ಪ್ರಧಾನ ವಸ್ತುವಾಗಿದೆ. ಇವೆರಡು ಜಿಲ್ಲೆಗಳ ವಸಾಹತುಪೂರ್ವದ, ವಸಾಹತುಕಾಲದ ಮತ್ತು ಬಂಡಾಯೋತ್ತರ ಆರ್ಥಿಕತೆಯ ವಿಶ್ಲೇಷಣೆಯು ಈ ಅಧ್ಯಯನದ ಒಟ್ಟು ವ್ಯಾಪ್ತಿಯಾಗಿರುತ್ತದೆ. ಆಗಿನ ಕೆನರಾ ಜಿಲ್ಲೆಯು ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳೆರಡನ್ನೂ ಒಳಗೊಂಡಿತ್ತು. ಪ್ರಸಕ್ತ ಅಧ್ಯಯನವು ಕೆನರಾವನ್ನು ದ.ಕ ಎಂಬ ಸೀಮಿತ ಅರ್ಥದಲ್ಲಿ ಬಳಸಿಕೊಂಡಿದೆ.

ಆಂಗ್ಲ ಇತಿಹಾಸಕಾರ ಜೇಮ್ಸ್‌ಮಿಲ್ ರಚಿಸಿದ 'ಭಾರತದ ಇತಿಹಾಸ' ಕೃತಿಯು ಭಾರತದ ಇತಿಹಾಸದಲ್ಲಿ ಹಿಂದೂ ನಾಗರಿಕತೆ, ಮುಸ್ಲಿಂ ನಾಗರಿಕತೆ ಮತ್ತು ಬ್ರಿಟಿಷ್ ನಾಗರಿಕತೆ ಎಂಬ ಮೂರು ಕಾಲಾವಧಿಗಳನ್ನು ಗುರುತಿಸಿದ್ದು[೬೩] ಅದು ದ್ವಿರಾಷ್ಟ್ರ ಸಿದ್ಧಾಂತಕ್ಕೆ ಚಾರಿತ್ರಿಕ ಸಮರ್ಥನೆ ನೀಡಿತೆಂದು ರೊಮಿಲ್ಲಾ ಥಾಪರ್ ಹೇಳಿದ್ದಾರೆ.[೬೪] ದಕ್ಷಿಣಕನ್ನಡ ಮತ್ತು ಕೊಡಗು ಜಿಲ್ಲೆಗಳು ಕೆಲಕಾಲ ಹೈದರ್ ಮತ್ತು ಟಿಪ್ಪುರ ಆಡಳಿತಕ್ಕೆ ಒಳಪಟ್ಟಿತ್ತು. ದಕ್ಷಿಣ ಭಾರತದಲ್ಲಿ ತನ್ನನ್ನು ಮಣಿಸಬಲ್ಲ ತಾಕತ್ತಿರುವುದು ಟಿಪ್ಪುಸುಲ್ತಾನಿಗೆ ಮಾತ್ರ ಎಂಬುದನ್ನು ಸರಿಯಾಗಿ ಗುರುತಿಸಿದ್ದ ಬ್ರಿಟಿಷರು ಆತನನ್ನು ಹಿಂದೂದ್ವೇಷಿ ಮತ್ತು ಮುಸ್ಲಿಂ ಮತಾಂಧ ಎಂಬಂತೆ ಪ್ರಚುರಪಡಿಸಿ, ಇವೆರಡು ಜಿಲ್ಲೆಗಳ ಜನರು ಟಿಪ್ಪುವಿಗೆದುರಾಗಿ ನಿಲ್ಲುವಂತೆ ಮಾಡುವಲ್ಲಿ ಸಫಲರಾದರು.

ಇದು ವಸಾಹತುಶಾಹಿ ಕಾಲದ ಇವೆರಡು ಜಿಲ್ಲೆಗಳ ಆರ್ಥಿಕ ಇತಿಹಾಸದ ಅಧ್ಯಯನಕ್ಕೊಂದು ಅನಿವಾರ್ಯತೆಯನ್ನು ಸೃಷ್ಟಿಸಿದೆ. ಭಾರತದ ಇತಿಹಾಸಕಾರರು

ಬಹುತೇಕವಾಗಿ ಸಾಮಾಜಿಕ ಮತ್ತು ಆರ್ಥಿಕ ವಿಷಯಗಳನ್ನು ಪರಿಶೀಲಿಸದೆ ರಾಜರುಗಳ ಬಗ್ಗೆ ಮತ್ತು ರಾಜಕೀಯ ವಿಷಯಗಳ ಬಗ್ಗೆ ಗಮನ ಕೇಂದ್ರೀಕರಿಸುತ್ತಾರೆ. ಇದು ಇತಿಹಾಸದ ಅಧ್ಯಯನದಿಂದ ನಾವು ಕಲಿಯಬೇಕಾದುದ್ದೇನೂ ಇಲ್ಲ ಎಂಬ ಮನೋಭಾವ ಹೆಚ್ಚಿನ ಭಾರತೀಯರಲ್ಲಿ ಮೂಡಿದ್ದರೆ ಅದರಲ್ಲಿ ಯಾವ ಆಶ್ಚರ್ಯವೂ ಇಲ್ಲ. ಅದಕ್ಕೆಂದೇ ಪ್ರಸಕ್ತ ಅಧ್ಯಯನವು ೧೮೩೭ ರ ರೈತ ಹೋರಾಟವನ್ನು ವಾಸ್ತವಿಕ ನೆಲೆಗಟ್ಟಿನಲ್ಲಿ ಅಧ್ಯಯನ ಮಾಡಲು ಉದ್ದೇಶಿಸಿದೆ.

ಪ್ರಸಕ್ತ ಅಧ್ಯಯನವು ಇತಿಹಾಸದ ಪ್ರಮುಖ ಆರ್ಥಿಕ ಘಟನೆಯೊಂದರ ತಳಸ್ಪರ್ಶಿ ವಿಶ್ಲೇಷಣೆಯ ಮೂಲಕ ಇಂದಿನ ಮತ್ತು ಮುಂದಿನ ರೈತ ಸಮುದಾಯ ತನ್ನ ಹಿತಾಸಕ್ತಿ ಕಾಪಾಡಲು ಇಡಬೇಕಾದ ಹೆಜ್ಜೆಗಳ ಮುನ್ನೋಟವನ್ನು ನೀಡುತ್ತದೆ. ಇದು ಬಹುತೇಕವಾಗಿ ಪ್ರಾಥಮಿಕ ಮತ್ತು ಆನುಷಂಗಿಕ ಮೂಲಗಳನ್ನು ಆಧರಿಸಿ ನಡೆಸಿದ ಅಧ್ಯಯನವಾಗಿದೆ.

ಈ ಅಧ್ಯಯನವನ್ನು ಸ್ಥೂಲವಾಗಿ ವಸಾಹತುಪೂರ್ವದ ಸ್ಥಿತಿ, ವಸಾಹತುಕಾಲದ ಸ್ಥಿತಿ ಮತ್ತು ವಸಾಹತ್ತೋತ್ತರ ಸ್ಥಿತಿ ಎಂದು ವಿಭಜಿಸಲಾಗಿದೆ. ಆನುಷಂಗಿಕ ದತ್ತಾಂಶಗಳಿಗೆ ಕರ್ನಾಟಕದ ಮತ್ತು ಮದರಾಸಿನ ಪತ್ರಾಗಾರದ ದಾಖಲೆಗಳನ್ನು, ಮದರಾಸು, ಮೈಸೂರು ವಿ.ವಿ.ಗ್ರಂಥಾಲಯಗಳನ್ನು, ಮೈಸೂರು ಓರಿಯೆಂಟಲ್ ಲೈಬ್ರರಿಯನ್ನು, ಬಾಸಿಲ್‌ಮಿಶನ್ ಮತ್ತು ಸಂತ ಆಲೋಷಿಯಸ್ ಕಾಲೇಜು ಗ್ರಂಥಾಲಯಗಳನ್ನು, ಮಂಗಳೂರು ವಿ.ವಿ. ಗ್ರಂಥಾಲಯವನ್ನು, ಹಾ.ಮಾ.ನಾ ಅಧ್ಯಯನ ಕೇಂದ್ರದ ಗ್ರಂಥಾಲಯವನ್ನು ಮಡಿಕೇರಿಯ ಪ್ರಾಚ್ಯವಸ್ತು ಸಂಗ್ರಹಾಲಯವನ್ನು, ಮತ್ತು ಅಂತರ್ಜಾಲವನ್ನು ಬಳಸಿಕೊಳ್ಳಲಾಗಿದೆ. ವಿಷಯ ತಜ್ಞರನ್ನು ಭೇಟಿ ಮಾಡಿ ಮತ್ತು ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿ ಈ ಘಟನೆಯ ವಿವಿಧ ಆಯಾಮಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ಕ್ರೋಢೀಕರಿಸಲಾಗಿದೆ.

ವಸಾಹತುಶಾಹಿ ಆಡಳಿತ ಅವಧಿಯ ಆರಂಭದಿಂದ ೧೮೩೭ರ ರೈತಕ್ರಾಂತಿಯವರೆಗಿನ ಆರ್ಥಿಕ ವಿದ್ಯಮಾನಗಳನ್ನು ವಿಶ್ಲೇಷಿಸಲು ಅನುಸೂಚಿ, ರೇಖಾಚಿತ್ರ, ನಕ್ಷೆ, ಸ್ತಂಭಚಿತ್ರ, ವೃತ್ತಚಿತ್ರಗಳನ್ನು ಮತ್ತು ಗಣಿತದ ಸರಳ ಪರಿಕರಕಗಳನ್ನು ಮತ್ತು ಶಾಸನಗಳ ಸಂಗ್ರಹಕ್ಕೆ ಎಪಿಗ್ರಾಫಿಯಾ ಕರ್ನಾಟಕದ ಸಂಪುಟಗಳನ್ನು ಬಳಸಿಕೊಳ್ಳಲಾಗಿದೆ.

ಪ್ರಸಕ್ತ ಅಧ್ಯಯನವು ಒಂದು ಐತಿಹಾಸಿಕ ಘಟನಾ ಕೇಂದ್ರಿತವಾಗಿರುವುದರಿಂದ ೧೮೩೭ರ ರೈತ ಬಂಡಾಯ ಸಂಭವಿಸಿದ ಪ್ರಮುಖ ಸ್ಥಳಗಳನ್ನು ನೇರವಾಗಿ ಸಂದರ್ಶಿಸಿ ಸ್ಥಳೀಯ ಇತಿಹಾಸಬಲ್ಲ ಹಿರಿಯರಿಂದ ಮಾಹಿತಿ ಸಂಗ್ರಹಿಸಿ ವಿಶ್ಲೇಷಣೆಯಲ್ಲಿ ಬಳಸಿಕೊಳ್ಳಲಾಗಿದೆ. ರೈತ ಬಂಡಾಯ ಆರಂಭವಾದ ಪೂಮಲೆ, ಕೆದಂಬಾಡಿ, ಇಕ್ಕೇರಿಯ ರಾಜ ವೆಂಕಟಪ್ಪ ನಾಯಕ ಕಟ್ಟಿಸಿದ ಅಮರ ಸುಳ್ಯದ ರಾಜಧಾನಿಯಾಗಿದ್ದ ಬೆಳ್ಳಾರೆ ಕೋಟೆ, ಕಾಂತಮಂಗಲದ ಕೋಟೆ, ಹಾಲೇರಿ ವಂಶಸ್ಥರು ರಾಜಧಾನಿಯನ್ನಾಗಿ ಮಾಡಿಕೊಂಡ ಮಡಿಕೇರಿ ಕೋಟೆ, ದೊಡ್ಡ ವೀರರಾಜ ಕಟ್ಟಿದ

ನಾಲ್ಕು ನಾಡು ಅರಮನೆ, ಸಾಂಸ್ಕೃತಿಕ ಮಹತ್ವದ ಭಾಗಮಂಡಲ ಮತ್ತು ತಲಕಾವೇರಿ, ಹಾಲೇರಿ ವಂಶಸ್ಥರ ಮೂಲಸ್ಥಾನವಾದ ಹಾಲೇರಿ, ಮುಂತಾದ ಆಯ್ದ ಸ್ಥಳಗಳನ್ನು ಭೇಟಿ ನೀಡಿ ಅಧ್ಯಯನ ನಡೆಸಲಾಗಿದೆ.

ಮೂಲ ದತ್ತಾಂಶಗಳ ಸಂಗ್ರಹಕ್ಕಾಗಿ, ೩೪ ಬಹು ಆಯ್ಕೆಯ ಪ್ರಶ್ನಾವಳಿಯೊಂದನ್ನು ಸಿದ್ಧ ಪಡಿಸಿ ೧೨೫ ವಕ್ತೃಗಳನ್ನು ನೇರವಾಗಿ ಮತ್ತು ಅಂಚೆ ಮೂಲಕ ಸಂಪರ್ಕಿಸಿ ಉತ್ತರಗಳನ್ನು ಪಡೆದುಕೊಳ್ಳಲಾಗಿದೆ. ವಕ್ತೃಗಳನ್ನು ಆಯ್ಕೆ ಮಾಡುವಾಗ ವಯಸ್ಸು, ವಿದ್ಯಾರ್ಹತೆ, ಧರ್ಮ, ವೃತ್ತಿ, ಶೈಕ್ಷಣಿಕ ಹಂತ ಮತ್ತು ಪ್ರಾದೇಶಿಕ ವಿತರಣೆಯನ್ನು ಗಮನದಲ್ಲಿರಿಸಿಕೊಳ್ಳಲಾಗಿದೆ. ಬಂಡಾಯ ಸಂಭವಿಸಿದ ಎಲ್ಲಾ ಪ್ರದೇಶಗಳಿಗೆ ಸಮಾನ ಪ್ರಾತಿನಿಧ್ಯ ನೀಡಲಾಗಿದೆ. ಇತ್ತೀಚಿನ ತಲೆಮಾರಿನವರೆಗೂ ಮೌಖಿಕ ಪರಂಪರೆಯಾಗಿ ಉಳಿದುಕೊಂಡಿದ್ದ ಈ ಐತಿಹಾಸಿಕ ಘಟನೆಯ ಮಾಹಿತಿಗಳನ್ನು ಪಡೆಯಲು ಮೆಟ್ರಿಕ್ಯುಲೇಷನ್ ಮತ್ತು ಅದಕ್ಕಿಂತ ಕೆಳಗಿನ ಹಂತದ ಶಿಕ್ಷಣ ಪಡೆದ ವಕ್ತೃಗಳಿಗೆ ಅಧಿಕ ಪ್ರಾತಿನಿಧ್ಯ ನೀಡಲಾಗಿದೆ. ಈ ವಿಷಯದ ಬಗ್ಗೆ ತಿಳಿವಳಿಕೆ ಹೊಂದಿರುವ ಕೆಲವು ಹಿರಿಯ ಅವಿದ್ಯಾವಂತರನ್ನು ಭೇಟಿಯಾಗಿ ಉತ್ತರ ಕಲೆಹಾಕಲಾಗಿದೆ. ಇದು ರೈತ ಬಂಡಾಯವಾದುದರಿಂದ ಕೃಷಿಕರಿಗೆ ಮತ್ತು ಕೃಷಿ ಕಾರ್ಮಿಕರಿಗೆ ಸಹಜವಾಗಿ ಅಧಿಕ ಪ್ರಾತಿನಿಧ್ಯ ಕಲ್ಪಿಸಿಕೊಡಲಾಗಿದೆ.

ಸಂಶೋಧನಾ ನಿಬಂಧದಲ್ಲಿ ಒಟ್ಟು ಒಂಭತ್ತು ಅಧ್ಯಾಯಗಳಿರುತ್ತವೆ. ಮೊದಲನೆಯ ಅಧ್ಯಾಯದಲ್ಲಿ ವಿಷಯ ಪ್ರಸ್ತಾವನೆ, ಉದ್ದೇಶ, ಪೂರ್ವ ಕಲ್ಪನೆ, ಅಧ್ಯಯನದ ಮಹತ್ವ ಮತ್ತು ವಿಧಾನಗಳ ವಿವರಣೆಯಿದೆ. ಎರಡನೆಯ ಅಧ್ಯಾಯನವು ಕ್ರಿ.ಶ. ೧೭೯೯ ರ ವರೆಗಿನ ದ.ಕ ಜಿಲ್ಲೆಯ ಆರ್ಥಿಕತೆಯ ವಿವರಣೆಯನ್ನು ನೀಡುತ್ತದೆ. ಮೂರನೆಯ ಅಧ್ಯಾಯದಲ್ಲಿ ಕ್ರಿ.ಶ. ೧೮೩೪ ರ ವರೆಗಿನ ಕೊಡಗು ಜಿಲ್ಲೆಯ ಆರ್ಥಿಕತೆಯ ವಿವರಣೆ ನೀಡಲಾಗಿದೆ. ಇವೆರಡು ಅಧ್ಯಾಯಗಳು ಬ್ರಿಟಿಷರ ಆಗಮನಕ್ಕೆ ಪೂರ್ವದಲ್ಲಿದ್ದ ದೇಶೀಯ ಆರ್ಥಿಕತೆಯ ಚಿತ್ರಣವನ್ನು ನೀಡುತ್ತವೆ. ನಾಲ್ಕನೆಯ ಅಧ್ಯಾಯವು ಕ್ರಿ. ಶ. ೧೭೯೯ ರಿಂದ ಕ್ರಿ.ಶ. ೧೮೩೭ ರವರೆಗೆ ದಕ್ಷಿಣ ಕನ್ನಡದಲ್ಲಿ ವಸಾಹತುಶಾಹಿ ಆರ್ಥಿಕ ನೀತಿ ಹೇಗಿತ್ತೆಂಬುದನ್ನು ವಿವರಿಸುತ್ತದೆ. ಐದನೆಯ ಅಧ್ಯಾಯವು ಕ್ರಿ.ಶ. ೧೮೩೪ ರಿಂದ ಕ್ರಿ.ಶ. ೧೮೩೭ ರ ವರೆಗೆ ಕೊಡಗಿನಲ್ಲಿ ಯಾವ ಆರ್ಥಿಕ ನೀತಿಯನ್ನು ಬ್ರಿಟಿಷರು ಅನುಷ್ಠಾನಗೊಳಿಸಿದ್ದರುಎಂಬುದರ ವಿಶ್ಲೇಷಣೆಯನ್ನು ನಡೆಸುತ್ತದೆ. ಕ್ರಿ.ಶ. ೧೮೩೪ ರಲ್ಲಿ ಕೊಡಗಿನ ರಾಜನ ಪದಚ್ಯುತಿಯು ಕಾರಣವಾದರೆ ಕ್ರಿ.ಶ. ೧೮೩೭ ರ ರೈತ ಬಂಡಾಯ ಅದರ ಪರಿಣಾಮವಾದುದರಿಂದ ಇವೆರಡು ವರ್ಷಗಳಿಗೆ ಮಹತ್ವ ನೀಡಲಾಗಿದೆ. ಅಧ್ಯಾಯ ಆರು ಬಂಡಾಯಕ್ಕೆ ಕಾರಣವಾದ ಅಂಶಗಳನ್ನು ವಿವರಿಸಿದರೆ ಅಧ್ಯಾಯ ಏಳರಲ್ಲಿ ಬಂಡಾಯದ ಆರಂಭ ಮತ್ತು ಪ್ರಸರಣದ ವಿವರಗಳಿವೆ. ಎಂಟನೆಯ ಅಧ್ಯಾಯವು ಕ್ಷೇತ್ರ

ಸಮೀಕ್ಷೆಯನ್ನು ಆಧರಿಸಿದ್ದು ಪ್ರಾತಿನಿಧಿಕ ವಕ್ತೃಗಳಿಗೆ ನಿರ್ಧರಿತ ಪ್ರಶ್ನಾವಳಿಯನ್ನು ನೀಡಿ ಪಡೆದ ಉತ್ತರವನ್ನು ವಿಶ್ಲೇಷಿಸಿ ಫಲಿತಗಳನ್ನು ದಾಖಲಿಸುತ್ತದೆ. ಕೊನೆಯ ಅಧ್ಯಾಯವು ಅಧ್ಯಯನದ ಸಮಗ್ರ ಚಿತ್ರಣವನ್ನು ಸಂಕ್ಷಿಪ್ತವಾಗಿ ನೀಡಿ ಅಧ್ಯಯನದ ಆಧಾರದಲ್ಲಿ ಮಾಡಲಾದ ತೀರ್ಮಾನಗಳನ್ನು ವಿವರಿಸಿ ಈ ವಿಷಯಕ್ಕೆ ಸಂಬಂಧಿಸಿದಂತೆ ಇನ್ನಷ್ಟು ಅಧ್ಯಯನಕ್ಕಿರುವ ಅವಕಾಶಗಳನ್ನು ಪ್ರಸ್ತುತಪಡಿಸುತ್ತದೆ.

ಉಲ್ಲೇಖಗಳು ಮತ್ತು ಟಿಪ್ಪಣಿಗಳು

೧. Haney L.H, 1949, History of Economic thought, Oxford university Press, Delhi, PP109-115
೨. Majundar Ray Chaudhuri & Kalikinkar Datta, 2008, An advanced history of India, Macmillan India limited, New Delhi- P.P 623-635
೩. Ibid, P.637.
೪. Hebbar & Moorthy, 2003, History of India. AD 1206- 1856, Mangala Publications Mangalore. P.315
೫. Mahajan V.D, 1996, A History of India Vol-3 S. Chand & Company Limited New Delhi P.P 45-47
೬. ಅಂತೋನವ ಕತೋವೆಸ್ಕೀ, ೧೯೮೮, ಭಾರತದ ಇತಿಹಾಸ, ೧೮ ನೇ ಶತಮಾನದ ಮಧ್ಯಭಾಗದಿಂದ ನಮ್ಮ ಕಾಲದವರೆಗೆ, ನವ ಕರ್ನಾಟಕ ಪಬ್ಲಿಕೇಶನ್ಸ್, ಬೆಂಗಳೂರು ಪು. ೧೬
೭. ಅದೇ, ಪು. ೧೭
೮. ಅದೇ, ಪು. ೬೧-೭೪
೯. Michel; H Fisher,1993,The Politics of the British Annexation of India, Oxford University Press-, New Delhi, P.58.
೧೦. ಕರ್ನಾಟಕದಲ್ಲಿ ಈ ಬಂಡಾಯಕ್ಕಿಂತ ಮೊದಲು ಹೈದರಾಲಿ ಮತ್ತು ಟಿಪ್ಪು (೧೭೬೯-೧೭೯೯), ಶಿವಮೊಗ್ಗ ಜಿಲ್ಲೆಯ ಚೆನ್ನಗಿರಿಯ ದೊಂಡಿಯಾ ವಾಘ್ (೧೮೦೦), ದಕ್ಷಿಣ ಕನ್ನಡದ ವಿಠಲ ಹೆಗ್ಗಡೆ, ತಿಮ್ಮ ನಾಯಕ ಮತ್ತಿತರರು.(೧೮೦೧-೦೨), ಕೊಪ್ಪಳದ ವೀರಪ್ಪ(೧೮೧೯) ಉದಗೀರ್‌ನ ಶಿವಲಿಂಗಯ್ಯ ದೇಶ್‌ಮುಖ್ (೧೮೨೧), ಸಿಂದಗಿಯ ದಿವಾಕರ ದೀಕ್ಷಿತ್ ಮತ್ತು ಬಾಲಾಜಿ ದೇಶ್‌ಪಾಂಡೆ (೧೮೨೪), ಕಿತ್ತೂರು ಚೆನ್ನಮ್ಮ (೧೮೨೪), ಸಂಗೊಳ್ಳಿ ರಾಯಣ್ಣ (೧೮೩೦), ನಗರೆಯ ಬೂದಿ ಬಸಪ್ಪ (೧೮೩೦-೩೧) ಮುಂತಾದ ಶೂರರು ಬ್ರಿಟಿಷರ ವಿರುದ್ಧ ಶಸ್ತ್ರಾಸ್ತ್ರ ಬಂಡಾಯ ಹೂಡಿದ್ದರು. ಆದರೆ ಯಾವುದೂ ಯಶಸ್ವಿಯಾಗಲಿಲ್ಲ.

೧೧. Eric Roll, 1974, A Histroy of Economic Thought, Oxford University Press, New Delhi, P.P 77-96

೧೨. Screpant & Zamagni, 2006, An Outline of the History of Economic Thought, Oxford University Press, New Delhi, P.P 54-63

೧೩. Paul R.R, 1979, 'History of Economic Thought' Kalyani Publications Ludhiyana, New Delhi P.P 93-140.

೧೪. ಸಾಧಾರಣವಾಗಿ ಕ್ರಿ.ಶ ೧೭೬೦ ರಿಂದ ಕ್ರಿ.ಶ ೧೮೩೦ ರ ವರೆಗಿನ ಅವಧಿಯನ್ನು ಕೈಗಾರಿಕಾ ಕ್ರಾಂತಿ ಯುಗವೆನ್ನಲಾಗುತ್ತದೆ. ಉಗಿಯನ್ನು ಶಕ್ತಿ ಮೂಲವಾಗಿ ಸಾರಿಗೆಗೆ ಮತ್ತು ಉತ್ಪಾದನೆಗೆ ಯಂತ್ರಗಳಲ್ಲಿ ಬಳಸಲು ಆರಂಭವಾದದ್ದು ಕ್ರಾಂತಿಗೆ ಕಾರಣವಾಯಿತು.

೧೫. ಬ್ರಿಟಿಷರ ಅಧಿಪತ್ಯ ಪ್ರಾರಂಭವಾದ ಬಳಿಕ ಕೊಡಗಿನಲ್ಲಿ ತೋಟಗಾರಿಕಾ ಬೆಳೆಗಳು ಪ್ರಾಬಲ್ಯ ಪಡೆದವು. ಅಸ್ತಿತ್ವದ ಆರ್ಥಿಕತೆಯನ್ನು ಲಾಭಗಳಿಕೆಯ ಆರ್ಥಿಕತೆಯನ್ನಾಗಿಸುವುದು ವಸಾಹತುಶಾಹಿ ನೀತಿಯ ಪ್ರಮುಖ ಉದ್ದೇಶವಾಗಿತ್ತು.

೧೬. ರೇಣುಕಾರ್ಯ ಸಿ.ಕೆ, ೧೯೮೭, ಆರ್ಥಿಕ ಚಿಂತನೆ ನಡೆದು ಬಂದ ಹಾದಿ, ಚೇತನ ಬುಕ್ ಹೌಸ್ ಮೈಸೂರು, ಪು. ೧೬೩ – ೧೬೫.

೧೭. Srivatsava S.K, 1999, History of Economic Thought, S.Chand & Co, New Delhi P 85.

೧೮. Hajela T.N.,1986, Shivalal Agarwal Company Agra, P.P 251 - 253

೧೯. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕ್ರಿ.ಶ. ೧೮೧೧ ರಲ್ಲೊಮ್ಮೆ ಮತ್ತು ಕ್ರಿ.ಶ. ೧೮೩೦ ರಲ್ಲೊಮ್ಮೆ ರೈತರು ಬಂಡಾಯ ಎದ್ದಿದ್ದರು. ಅದು ಶಸ್ತ್ರರಹಿತ ಗುಂಪು ದಂಗೆಯಾಗಿದ್ದುದರಿಂದ ಅದನ್ನು ಬಗ್ಗು ಬಡಿಯಲು ಈಸ್ಟಿಂಡಿಯಾ ಕಂಪನಿಗೆ ಯಾವ ಸಮಸ್ಯೆಯೂ ಉಂಟಾಗಲಿಲ್ಲ.

೨೦. ಇದು ನಾಯಕರುಗಳೇ ಇಲ್ಲದೆ ನಡೆದ ದಂಗೆ. ಜಂಗಮವೇಷಧಾರಿಗಳು ತಾವು ಕೊಡಗಿನ ರಾಜ ಸಂಬಂಧಿಗಳೆಂದು ಹೇಳಿಕೊಂಡು ಜನರನ್ನು ಒಗ್ಗೂಡಿಸಿ ಬ್ರಿಟಿಷರ ವಿರುದ್ಧ ದಂಗೆ ನಡೆಸಿದ್ದು ಐತಿಹಾಸಿಕ ಮತ್ತು ಅಪೂರ್ವ.

೨೧. ಲೆವಿನ್ ಮತ್ತು ಕಬ್ಬನ್ ಸಮಿತಿ ಇವುಗಳ ವಿಸ್ಕೃತ ಉಲ್ಲೇಖಗಳು ಅಧ್ಯಾಯ ಏಳರಲ್ಲಿದೆ.

೨೨. ಶೀನಪ್ಪ ಹೆಗ್ಡೆ ನಂದೊಳ್ಗೆ ಅಮುಣಿಂಜೆ ಗುತ್ತು, ೧೯೧೯, 'ದಕ್ಷಿಣ ಕನ್ನಡ ಜಿಲ್ಲೆಯ ಚರಿತ್ರೆ ಮತ್ತು ಭೂತಾಳ ಪಾಂಡ್ಯರಾಯನ ಅಳಿಯಕಟ್ಟು,' ದ್ವಿತೀಯ ಮುದ್ರಣ, ೧೯೮೧, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ, ಉಡುಪಿ.

೨೩. ಕಿಲ್ಲೆ ಎಸ್. ಎನ್ ಮತ್ತು ಶೀನಪ್ಪ ಹೆಗ್ಡೆ ಎಸ್, ೧೯೫೪, ಪ್ರಾಚೀನ ತುಳುನಾಡು, ಮಂಗಳೂರು.

೨೪. ಗಣಪತಿ ರಾವ್ ಐಗಳ್ ಎಂ, ೧೯೨೩, ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ, ದ್ವಿತೀಯ ಮುದ್ರಣ ೨೦೦೪, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ, ಉಡುಪಿ.

೨೫. ಎಂ. ಗೋವಿಂದ ಪೈ, ೨೦೦೭, ತುಳುನಾಡ ಪೂರ್ವಸ್ಮೃತಿ, ಪುನರ್‌ಮುದ್ರಿತ ಲೇಖನ, ತುಳುಸಾಹಿತ್ಯ ಚರಿತ್ರೆ, ಕನ್ನಡ ವಿಶ್ವವಿದ್ಯಾಲಯ ಹಂಪಿ.

೨೬. Saletor B.A, 1936, Ancient Karnataka Vol 1, History of Tuluva, Oriental Book Agency, Poona.

೨೭. ಕೇಶವ ಕೃಷ್ಣ ಕುಡ್ವ, ೧೯೪೮, ದಕ್ಷಿಣ ಕನ್ನಡದ ಇತಿಹಾಸ, ಮಂಗಳೂರು.

೨೮. ಆಲೆಟ್ಟಿ ರಾಮಣ್ಣ ಶಸ್ತ್ರಿತ್ತಾಯ, ೧೯೫೬, 'ಕಲ್ಯಾಣಪ್ಪನ ಕಾಟಕಾಯಿ' ಯಕ್ಷಗಾನ ಪ್ರಸಂಗವು, ರಾಷ್ಟ್ರ ಬಂಧು ಪ್ರೆಸ್ ಮಂಗಳೂರು.

೨೯. ತಿ.ತಾ ಶರ್ಮ,೧೯೫೭, ' ಕರ್ನಾಟಕದಲ್ಲಿ ಸ್ವಾತಂತ್ರ್ಯ ಸಂಗ್ರಾಮ. ೧೮೦೦-೧೮೫೭, ಮೈಸೂರು ಸಂಸ್ಥಾನದ ಸರಕಾರ, ಬೆಂಗಳೂರು.

೩೦. Ramesh K.V, 1965, A History of South Canara, Karnataka University.

೩೧. Suryanatha Kamath, 1965, Tuluva in Vijaya nagara Times, Bombay University.

೩೨. Gururaj Bhat P., 1967, A Political and Cultural History of Tulunadu from the earliest times upto 1600 A.D, Mysore University.

೩೩. Gururaj Bhat P. 1975, Studies in Tuluva History and Culture, Manipal.

೩೪. ಡಿ. ಎನ್ ಕೃಷ್ಣಯ್ಯ ,೧೯೭೪, ಕೊಡಗಿನ ಇತಿಹಾಸ ದ್ವಿತೀಯ ಮುದ್ರಣ ೧೯೯೫, ಮೈಸೂರು ವಿಶ್ವವಿದ್ಯಾಲಯ.

೩೫. ಪುರುಷೋತ್ತಮ ಬಿಳಿಮಲೆ, ೧೯೮೫, ಸುಳ್ಯ ಪರಿಸರದ ಗೌಡ ಜನಾಂಗ, ಒಂದು ಸಾಂಸ್ಕೃತಿಕ ಅಧ್ಯಯನ, ಮಂಗಳೂರು ವಿಶ್ವವಿದ್ಯಾಲಯ.

೩೬. Shyam Bhat N.,1989, South Canara 1799-1860, A Study of Colonial Administration and Regional Response, Mangalore University.

೩೭. Malathi Murthi, 1991, Trade &Commerce in Colonial South Canara, 1799-1862, Mangalore University.

೩೮. ದೇವಿಪ್ರಸಾದ್ ಎನ್.ಎಸ್, ೧೯೯೫, ಅಮರ ಸುಳ್ಯದ ಸ್ವಾತಂತ್ರ್ಯ ಸಮರ, ಕನ್ನಡ ಪ್ರಪಂಚ ಪ್ರಕಾಶನ ಪುತ್ತೂರು.

೩೯. ದೇವಿಪ್ರಸಾದ್ ಎನ್. ಎಸ್ ೧೯೯೯, 'ಕೊಡಗಿನಲ್ಲಿ ಭಾಷಾ ಸಾಂಸ್ಕೃತಿಕ ಸಾಮರಸ್ಯ, ಅಮರಕ್ರಾಂತಿ ಉತ್ಸವ ಸಮಿತಿ, ಸುಳ್ಯ.

೪೦. ಅದೇ, ಪುಟ ೧೮-೨೪.

೪೧. ನಾಗರಾಜ ಎಂ.ಜಿ, ೨೦೦೪, ಕೊಡಗಿನ ಹಾಲೇರಿ ರಾಜವಂಶವು, ಭಾಗ೧ ಮತ್ತು ೨, ಕರ್ನಾಟಕ ಸರ್ಕಾರ ಪಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ.

೪೨. Saki, 2004, Making History- Karnataka's People and Their Past, Vimukthi Prakashana, Bangalore.

೪೩. ತಂಬಂಡ ವಿಜಯ ಪೂಣಚ್ಚ, ೨೦೦೮, 'ಪಳಮೆ' , ಪ್ರಸಾರಾಂಗ, ಕನ್ನಡ ವಿ.ವಿ ಹಂಪಿ

೪೪. ತಂಬಂಡ ವಿಜಯ ಪೂಣಚ್ಚ, ೨೦೦೫, (ಅನು); ಕೊಡಗು ವಿವರಣೆ ಕನ್ನಡ ವಿ.ವಿ ಹಂಪಿ

೪೫. ಎಂ. ಜಿ ನಾಗರಾಜ್, ೨೦೦೬, ಕರ್ನಾಟಕ ರೈತ ಚಳುವಳಿ- ಸತ್ಯಾಗ್ರಹಗಳು, ಮೂರು ಸಂಪುಟಗಳು, ಕರ್ನಾಟಕ ವಿಧಾನ ಮಂಡಲದ ಗ್ರಂಥಾಲಯ ಸಮಿತಿ, ವಿಧಾನ ಸೌಧ, ಬೆಂಗಳೂರು.

೪೬. ಡಾ। ಮುಜಾಫರ್ ಅಸ್ಸಾದಿ, ೨೦೦೯, ಕರ್ನಾಟಕದಲ್ಲಿ ಐಡೆಂಟಿಟಿ ರಾಜಕೀಯ; ರೈತ, ರೈತ ಹೋರಾಟ ಹಾಗೂ ಸಾಮಾಜಿಕ ಚಳುವಳಿಗಳು, ಕೆ.ಎಸ್. ಮುದ್ದಪ್ಪ ಸ್ಮಾರಕ ಟ್ರಸ್ಟ್, ಕೃಷ್ಣಾಪುರ ದೊಡ್ಡಿ.

೪೭. ಬೂನಳ್ಳಿ ಜವರೇಗೌಡ, ೧೯೮೭, ಕಲ್ಯಾಣಸ್ವಾಮಿ, ಅಪ್ರಕಟಿತ ನಾಟಕ.

೪೮. ಪ್ರಭಾಕರ ಶಿಶಿಲ, ೨೦೦೫, ಅಮರಕ್ರಾಂತಿ ವೀರರು ಪ್ರಗತಿಪ್ರಕಾಶನ ಸುಳ್ಯ.

೪೯. ವಿದ್ಯಾಧರ ಬಡ್ಡಡ್ಕ : ೧೯೯೫ 'ಕೆದಂಬಾಡಿ ರಾಮಗೌಡ, ಬಂಟಮಲೆ ಪ್ರಕಾಶನ ಗುತ್ತಿಗಾರು.

೫೦. ನಿರಂಜನ , ೧೯೭೭, ಸ್ವಾಮಿ ಅಪರಂಪಾರ, ಕಥಾಸಾಹಿತ್ಯ ಬೆಂಗಳೂರು.

೫೧. ನಿರಂಜನ ೨೦೦೩, ಕಲ್ಯಾಣ ಸ್ವಾಮಿ, ಡಿ.ವಿ.ಕೆ ಮೂರ್ತಿ ಮೈಸೂರು.

೫೨. ಶ್ರೀನಿವಾಸ, ೧೯೮೪, ಚಿಕ್ಕವೀರರಾಜೇಂದ್ರ, ಜೀವನ ಕಾರ್ಯಾಲಯ ಬೆಂಗಳೂರು.

೫೩. ಪ್ರಭಾಕರ ನೀರಮಾರ್ಗ, ೨೦೦೬, ಮಂಗಳೂರಕ್ರಾಂತಿ, ಹೇಮಾವತಿ ಪ್ರಕಾಶನ, ಕುಲಶೇಖರ ಮಂಗಳೂರು.

೫೪. ಪ್ರಭಾಕರ ಶಿಶಿಲ, ಅಮರ ಸುಳ್ಯದ ರೈತ ಬಂಡಾಯ, ಜನವಾಹಿನಿ ೧೯೯೮, ಆಗೋಸ್ತು ೮.

೫೫. ಪ್ರಭಾಕರ ಶಿಶಿಲ, ಅಮರ ಸುಳ್ಯದ ರೈತ ಕ್ರಾಂತಿಯ ನೆನಪಿಗೆ, ಉದಯವಾಣಿ ೨೦೦೧, ಎಪ್ರಿಲ್ ೪.

೫೬. ಪ್ರಭಾಕರ ಶಿಶಿಲ, ಅಮರ ಸುಳ್ಯ – ದೇಶದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ, ತರಂಗ ೨೦೦೭, ಆಗೋಸ್ತು ೧೯.

೫೭. ಪ್ರಭಾಕರ ಶಿಶಿಲ, ೨೦೦೯, ನದಿ ಎರಡರ ನಡುವೆ, ವಸಂತ ಪ್ರಕಾಶನ, ನಂ,೩೬೦,೧೦ ಬಿ. ಮುಖ್ಯ ರಸ್ತೆ ಜಯನಗರ, ೩ನೇ ಬ್ಲಾಕ್, ಬೆಂಗಳೂರು

೫೮. ಪ್ರಭಾಕರ ಶಿಶಿಲ, ೨೦೧೦, ಮೂಡಣದ ಕೆಂಪು ಕಿರಣ; ರಾಜ್ ಪ್ರಕಾಶನ, ಬನ್ನಿಮಂಟಪ, ಮೈಸೂರು.

೫೯. ಪ್ರಭಾಕರ ಶಿಶಿಲ, ೨೦೧೦, ಕೊಡಗಿನ ಐತಿಹ್ಯ ಕತೆಗಳು, ರಾಜ್ ಪ್ರಕಾಶನ, ಬನ್ನಿಮಂಟಪ, ಮೈಸೂರು.

೬೦. ಕೃಷಿಯ ಸಬ್ಸಿಡಿ ಇಳಿಕೆ, ಬೀಜ ಮಸೂದೆಯ ಅನ್ವಯಿಕೆ, ಕೃಷಿ ಉತ್ಪನ್ನಗಳಿಗೆ ಪೇಟೆಂಟ್ ಪಡೆಯಬೇಕಾದ ಅನಿವಾರ್ಯತೆ, ಕೃಷಿ ಬೆಲೆಗಳ ಅನಿಶ್ಚಿತತೆ ಇವುಗಳಿಂದಾಗಿ ಅನೇಕ ಸಣ್ಣ ರೈತರು ಭಾರತದಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯಲು ಇನ್ನೂ ಸಾಧ್ಯವಾಗಿಲ್ಲ.

೬೧. ೨೯ ಜನವರಿ ೨೦೧೧ ರಂದು ಮಡಿಕೇರಿ ಜನರಲ್ ಕಾರ್ಯಪ್ಪ ಮಹಾವಿದ್ಯಾಲಯದಲ್ಲಿ ಜರಗಿದ ಭಯೋತ್ಪಾದನೆಯ ಅರ್ಥಶಾಸ್ತ್ರ ವಿಚಾರ ಗೋಷ್ಠಿಯಲ್ಲಿ ಡಾ। ಗೋಪಾಲಸಿಂಗ್ ಮಂಡಿಸಿದ ಅಭಿಪ್ರಾಯ

೬೨. Mishra & Puri, 2010 'Indian Economy' Himalayan Publishing House Mumbai, P.217.

೬೩. ರೊಮಿಲ್ಲಾ ಥಾಪರ್,ಮುಖಿಯ ಮತ್ತು ಬಿಪಿನ್ ಚಂದ್ರ,೧೯೯೫, ಕೋಮುವಾದ ಹಾಗೂ ಭಾರತೀಯ ಇತಿಹಾಸ ಲೇಖನ, ಕನ್ನಡಕ್ಕೆ ಗೋಪಾಲಕೃಷ್ಣ ರಾವ್, ನವಕರ್ನಾಟಕ ಪ್ರಕಾಶನ ಬೆಂಗಳೂರು ಪು. ೧೦.

೬೪. ಅದೇ ಪು. ೧೨

ಅಧ್ಯಾಯ ೨

ವಸಾಹತುಪೂರ್ವದ ಕೆನರಾ ಆರ್ಥಿಕತೆ

೨.೧ ದ.ಕ. ಒಂದು ಭೌತಿಕ ವಿವರಣೆ

ವಸಾಹತುಕಾಲದ ಕೆನರಾ ಇಂದಿನ ನಾಲ್ಕು ಕರಾವಳಿ ಜಿಲ್ಲೆಗಳಾದ ಕಾಸರಗೋಡು, ದಕ್ಷಿಣಕನ್ನಡ, ಉಡುಪಿ, ಮತ್ತು ಉತ್ತರಕನ್ನಡಗಳನ್ನು ಒಳಗೊಂಡಿತ್ತು. (ಭೂಪಟ ೨.೧)ವಸಾಹತು ಪೂರ್ವದಲ್ಲಿ ಪ್ರಾಚೀನ ಕರ್ನಾಟಕ ದೇಶಕ್ಕೆ ಸೇರಿದ್ದ ಒಂದು ಭಾಗವಾಗಿದ್ದ ಈ ಭೂಭಾಗದ ಗೋಕರ್ಣದಿಂದ ಚಂದ್ರಗಿರಿಯವರೆಗಿನ ಪ್ರದೇಶವನ್ನು 'ತುಳುವ' ಎಂದು ಕರೆಯಲಾಗುತ್ತಿತ್ತು. ಹದಿನಾರನೆಯ ಶತಮಾನದಲ್ಲಿ ಈ ಪ್ರದೇಶದೊಡನೆ ಪೋರ್ಚುಗೀಸರು ಸಮುದ್ರ ವ್ಯಾಪಾರ ಸಂಬಂಧವನ್ನು ಬೆಳೆಸಲು ಬಂದವರು ಇಲ್ಲಿನ ವ್ಯಾವಹಾರಿಕ ಭಾಷೆಯಾಗಿದ್ದ ಕನ್ನಡವನ್ನು ಪ್ರದೇಶದ ಹೆಸರಾಗಿ ಸ್ವೀಕರಿಸಿ ತಮ್ಮ ಭಾಷೆಯಲ್ಲಿ ಡ ಉಚ್ಚಾರವಿಲ್ಲದ ಕಾರಣ "ಕೆನರಾ" ವೆಂದು ಕರೆದರು. ಟಿಪ್ಪುವಿನ ಮರಣಾನಂತರ ಈ ಭಾಗದ ಆಡಳಿತ ಸೂತ್ರವನ್ನು ಕೈಗೆತ್ತಿಗೊಂಡ ಬ್ರಿಟಿಷರು ಕೆನರಾ ಎಂಬ ಹೆಸರನ್ನು ಸ್ಥಾಯಿಗೊಳಿಸಿದರು.[೧]

ಕ್ರಿ.ಶ. ೧೮೬೦ ರಲ್ಲಿ ಬ್ರಿಟಿಷರು ಕೆನರಾವನ್ನು ಇಬ್ಭಾಗ ಮಾಡಿ ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಎಂಬ ಎರಡು ಜಿಲ್ಲೆಗಳನ್ನಾಗಿ ಮಾಡಿದರು. ಕ್ರಿ.ಶ. ೧೮೬೨ ರಲ್ಲಿ ಉತ್ತರ ಕನ್ನಡವು ಮುಂಬೈ ಪ್ರಾವಿನ್ಸಿಗೆ ಮತ್ತು ದಕ್ಷಿಣ ಕನ್ನಡವು ಮದರಾಸು ಪ್ರಸಿಡೆನ್ಸಿಗೆ ಸೇರಿತು. ಆಗಿನ ಅವಿಭಜಿತ ದ.ಕ ಜಿಲ್ಲೆಯು ಈಗಿನ ದ.ಕ. ಉಡುಪಿ ಮತ್ತು ಕಾಸರಗೋಡು ಜಿಲ್ಲೆಗಳನ್ನು ಒಳಗೊಂಡಿತ್ತು. ಕ್ರಿ.ಶ. ೧೯೫೬ರಲ್ಲಿ ರಾಜ್ಯಗಳ ಪುನರ್ ವಿಂಗಡನೆಯ ಕಾಲದಲ್ಲಿ ಕಾಸರಗೋಡನ್ನು ಕೇರಳ ರಾಜ್ಯಕ್ಕೆ ಮತ್ತು ದ.ಕ. ವನ್ನು ಈಗ ಕರ್ನಾಟಕ ಎಂದು ಕರೆಯುವ ಆಗಿನ ಮೈಸೂರು ರಾಜ್ಯಕ್ಕೆ ಸೇರಿಸಲಾಯಿತು. ಕ್ರಿ.ಶ ೧೯೯೭ ರಲ್ಲಿ ಈ ಜಿಲ್ಲೆಯನ್ನು ಆಡಳಿತದ ಉದ್ದೇಶಕ್ಕಾಗಿ ಉಡುಪಿ ಮತ್ತು ದ.ಕ ಎಂದು ಮತ್ತೆ ವಿಂಗಡಿಸಲಾಯಿತು.(ಭೂಪಟ ೨.೨)

ಅವಿಭಜಿತ ದ.ಕ ಜಿಲ್ಲೆಯ ಸ್ಥೂಲ ವಿವರಣೆಗಳನ್ನು ಕೋಷ್ಟಕ ೨.೧ ರಲ್ಲಿ ನೀಡಲಾಗಿದೆ.

ಕೋಷ್ಟಕ ೨.೧: ಇಂದಿನ ದ.ಕ ಜಿಲ್ಲೆ


ಸೂಚಕಗಳು	ಪ್ರಮಾಣ
ವಿಸ್ತೀರ್ಣ	೮,೩೫೬. ಚ.ಕಿ.ಮೀ
ಜನಸಂಖ್ಯೆ	೩೦,೦೯,೯೭೦
ಜನಸಾಂದ್ರತೆ	ಚ.ಕಿ.ಮೀ ಗೆ ೩೫
ಅಂಗಾನುಪಾತ	೧೦೦೦ : ೧೦೭೬
ಸಾಕ್ಷರತೆ	ಶೇ ೮೨

ಆಧಾರ: ಜಿಲ್ಲಾ ಅಂಕಿ ಅಂಶಗಳ ಅಧಿಕಾರಿಗಳ ಮಾಹಿತಿ


ಪ್ರಕೃತ ಅಧ್ಯಯನದಲ್ಲಿ ಕೆನರಾವನ್ನು ಇಂದಿನ ಕಾಸರಗೋಡು, ದಕ್ಷಿಣಕನ್ನಡ ಮತ್ತು ಉಡುಪಿ ಜಿಲ್ಲೆಗಳಿಗೆ ಮಾತ್ರ ಅನ್ವಯವಾಗುವಂತೆ ತುಳುನಾಡು ಅಥವಾ ದಕ್ಷಿಣ ಕನ್ನಡ ವೆಂಬಷ್ಟಕ್ಕೆ ಸೀಮಿತಗೊಳಿಸಿ ಬಳಸಿಕೊಳ್ಳಲಾಗಿದೆ. ತುಳುನಾಡಿನ ವಸಾಹತುಪೂರ್ವದ ಅಂದರೆ ೧೮ ನೆಯ ಶತಮಾನದ ಆದಿಯವರೆಗಿನ ಆರ್ಥಿಕತೆ ಹೇಗಿತ್ತೆಂಬುದನ್ನು ವಿಜಯನಗರ ಪೂರ್ವಕಾಲ, ವಿಜಯನಗರದ ಆಡಳಿತಕಾಲ, ಇಕ್ಕೇರಿ ನಾಯಕರ ಕಾಲದ ಆರ್ಥಿಕತೆ, ಹೈದರಾಲಿ ಮತ್ತು ಟಿಪ್ಪು ಕಾಲದ ಆರ್ಥಿಕತೆ ಎಂದು ವಿಂಗಡಿಸಿ ಅಧ್ಯಯನ ನಡೆಸಲಾಗಿದೆ.

೨.೨ ವಿಜಯನಗರ ಪೂರ್ವದ ಆರ್ಥಿಕತೆ

ವಿಜಯನಗರ ಪೂರ್ವದ ತುಳುನಾಡಿನ ಇತಿಹಾಸ ಬಹಳ ದೀರ್ಘವಾಗಿದ್ದರೂ ಆರ್ಥಿಕತೆ ಹೇಗಿತ್ತೆಂಬ ಬಗ್ಗೆಯಾಗಲೀ, ನಾಡಿನ ವಿಸ್ತೀರ್ಣ ಎಷ್ಟು ಎಂಬುದಾಗಲಿ ಖಚಿತವಾಗಿ


೨.೧. ವಿಜಯನಗರ ಕಾಲದ ದಕ್ಷಿಣಕನ್ನಡ
ಉತ್ತರ ಕನ್ನಡ ಜಿಲ್ಲೆ
ಕುಂದಾಪುರ ತಾಲೂಕು
ಕೋಟೇಶ್ವರ
1
6
4
3
5
2
ಉಪಕೇಂದ್ರಗಳು:
ಬಾರಕೂರು
ಮೂಲ್ಕಿ
ಕಾರ್ಕಳ
ಬಂಟ್ವಾಳ
ಪುತ್ತೂರು
ಬೇಕಲ
ವಿಟ್ಲ
ಮಂಗಳೂರು
ತಾಲೂಕು ಕೇಂದ್ರಗಳು:
1. ಬಾರಕೂರ್
2. ಬೇಕಲ (ಕಾಸರಗೋಡು)
3. ಬಂಟ್ವಾಳ
4. ಮಂಗಳೂರು
5. ಪುತ್ತೂರು
6. ಉಡುಪಿ.

೧.೭ 1956 ರ ಬಳಿಕದ ಅವಿಭಜಿತ ದಕ್ಷಿಣ ಕನ್ನಡ



ದಾಖಲಿಸಲು ಆಧಾರಗಳ ಕೊರತೆಯಿದೆ. ತುಳುನಾಡು ಇತಿಹಾದುದ್ದಕ್ಕೂ ಕನ್ನಡ ನಾಡನ್ನು ಆಳಿದ ಅರಸರ ಅಧೀನದಲ್ಲಿ ಇದ್ದುದರಿಂದ ಅದರ ಗಡಿಗಳು ಆಡಳಿತಾತ್ಮಕವಾಗಿ ನಿರ್ಧಾರವಾಗುತ್ತಿತ್ತೇ ಹೊರತು ಭಾಷಿಕವಾಗಿ ಅಲ್ಲ. ಆದರೆ ಗ್ರಾಮಪದ್ಧತಿ, ಸಹ್ಯಾದ್ರಿಖಂಡ, ಕೇರಳೋತ್ಪತ್ತಿ ಮತ್ತು ಭೂತಗಳ ಪಾಡ್ದನಗಳ ನೆರವಿನಿಂದ ತುಳುನಾಡಿನ ಮೇರೆಗಳನ್ನು ಗುರುತಿಸುವ ಪ್ರಯತ್ನಗಳಾಗಿವೆ. ಭಾಷಿಕವಾಗಿ ತುಳುನಾಡಿನ ಮೇರೆಗಳು ಉತ್ತರದಲ್ಲಿ ಸೀತಾನದಿ , ದಕ್ಷಿಣದಲ್ಲಿ ಚಂದ್ರಗಿರಿಹೊಳೆ , ಪೂರ್ವದಲ್ಲಿ ಸಹ್ಯಾದ್ರಿ ಪರ್ವತಶ್ರೇಣಿ ಮತ್ತು ಪಶ್ಚಿಮದಲ್ಲಿ ಅರಬ್ಬಿ ಸಮುದ್ರವೆಂದು ಗುರುತಿಸಲಾಗಿದೆ.[೨]

ಪ್ರಾಚೀನ ತುಳುನಾಡಿನ ಇತಿಹಾಸವನ್ನು ಪೌರಾಣಿಕ ವ್ಯಕ್ತಿಯಾಗಿ ಪರಶುರಾಮನ ಕಾಲಕ್ಕೆ ಒಯ್ದು ಆತ ಕೊಡಲಿ ಎಸೆದು ಸೃಷ್ಟಿಸಿದ ಸಪ್ತಕೊಂಕಣದ "ಅಲುವ" ವೇ ತುಳುನಾಡು ಅಥವಾ ದಕ್ಷಿಣವಾಯಿತು ಎಂದು ಅಭಿಪ್ರಾಯಪಡಲಾಗಿದೆ.[೩] ದಕ್ಷಿಣಕನ್ನಡ ಜಿಲ್ಲೆಗೆ ಶಾಂತಿ, ಗೋಪ ರಾಷ್ಟ್ರ, ಆಲುವಖೇಡ ಎಂಬಿತ್ಯಾದಿ ಹೆಸರುಗಳಿದ್ದು, ಅದು ಚಂದ್ರಗಿರಿಯಿಂದ ಹೊನ್ನಾವರದವರೆಗೆ ವ್ಯಾಪಿಸಿತ್ತೆಂದು ಹೇಳಲಾಗಿದೆ.[೪]

"ಪರಶುರಾಮ ಸೃಷ್ಟಿ" ಎನ್ನುವ ಐತಿಹ್ಯವನ್ನು ಈಗ ಇತಿಹಾಸಕಾರರು ಒಂದು ಪ್ರತಿಮಾ ರೂಪದಲ್ಲೂ ಸ್ವೀಕರಿಸಲು ಹಿಂದೇಟು ಹಾಕುತ್ತಾರೆ. ಪರಶುರಾಮ ಸೃಷ್ಟಿಯು ಕಬ್ಬಿಣದ ಯುಗವನ್ನು ಕೊಡಲಿಯ ಮೂಲಕ ಸಂಕೇತಿಸುತ್ತದೆಂದು ಮತ್ತು ಪಶ್ಚಿಮ ಕರಾವಳಿಯ ಈ ಭೂಭಾಗದಲ್ಲಿ ಮಾನವ ನೆಲೆಗೊಂಡದ್ದು ಕಬ್ಬಿಣದ ಯುಗದ ಕಾಲದಲ್ಲೆಂದು ಇತಿಹಾಸಕಾರರು ಭಾವಿಸಿದ್ದರು. ಕ್ರಿ.ಶ.೧೯೮೩ ರಲ್ಲಿ ಡಾ. ಪಿ. ರಾಜೇಂದ್ರನ್ ನೇತ್ರಾವತಿ ನದಿ ಪ್ರದೇಶದ ಉಪ್ಪಿನಂಗಡಿ ಮತ್ತು ಮಾಣಿಯಲ್ಲಿ ಸಂಶೋಧನ ಕಾರ್ಯ ಕೈಗೊಂಡಾಗ ಮಧ್ಯ ಮತ್ತು ಅಂತ್ಯ ಶಿಲಾಯುಗಕ್ಕೆ ಸಂಬಂಧಿಸಿದ ಅನೇಕ ಶಿಲಾಯುಧಗಳು ಇಲ್ಲಿ ದೊರೆಯುವುದರೊಂದಿಗೆ "ಪರಶುರಾಮ ಸೃಷ್ಟಿಯ " ಐತಿಹ್ಯವು ಮಹತ್ವ ಕಳಕೊಂಡಿತು. ಲೊಹಯುಗಕ್ಕೆ ಮುನ್ನವೇ ಆದಿಮಾನವರು ಇಲ್ಲಿ ನೆಲೆಸಿದ್ದರು ಮತ್ತು ಬೇಟೆಯು ಅವರ ಮುಖ್ಯ ಕಸುಬಾಗಿತ್ತೆಂದು ಈಗ ರುಜುವಾತಾಗಿದೆ.[೫]

ತುಳುನಾಡಿನ ಅಸ್ತಿತ್ವವನ್ನು ಅಶೋಕನ ಕಾಲದಿಂದ ಗುರುತಿಸುವ ಪ್ರಯತ್ನವನ್ನು ಇತಿಹಾಸಕಾರರು ಮಾಡಿದ್ದಾರೆ. ಈಗಿನ ಮಹಾರಾಷ್ಟ್ರದ ಥಾನಾ ಜಿಲ್ಲೆಯ ಸಂಪಾರದಲ್ಲಿ ದೊರೆತ ಅಶೋಕನ ಮೂರನೇ ಶಿಲಾಲೇಖದ ಪ್ರಕಾರ ಚೋಳರು (ಪೂರ್ವಕರಾವಳಿ) ಪಾಂಡ್ಯರು (ದಕ್ಷಿಣ ಕರಾವಳಿ), ಕೇತಲ ಪುತೊ (ಕೇರಳ), ತಂಬುಪರ್ಣಿ (ತಮಿಳುನಾಡಿನ

ತಿರುನಲ್ವೇಲಿ ಜಿಲ್ಲೆಯ ತಾಮ್ರಪರ್ಣಿ) ಮತ್ತು ಸತಿಯ ಪುತ್ರ (ತುಳುನಾಡು)ಎಂದು ಅಶೋಕನ ಸಾಮ್ರಾಜ್ಯದ ಗಡಿಗಳನ್ನು ಗುರುತಿಸಲಾಗಿದೆ. ಮೊಗವೀರ ಮತ್ತು ಬಿಲ್ಲವ ಜನಾಂಗಗಳಲ್ಲಿ ಸದಿಯ ಎಂಬ ಕುಟುಂಬ ನಾಮವಿದ್ದು ಆ ಕಾರಣ ಸತಿಯ ಪುತ್ರವೆಂಬ ಹೆಸರು ಬಂದಿರಬಹುದೆಂದು ಊಹಿಸಲಾಗಿದೆ.[೬] ಹದಿಮೂರನೆಯ ಶಿಲಾಲೇಖದಲ್ಲಿ ಸುಲಿಯದ ಅಂತಿಯೊಕ (ಕ್ರಿ.ಪೂ. ೨೬೧–೨೪೬), ಐಗುಪ್ತದ ಪ್ಟೋಲೆಮಿ(ಕ್ರಿ.ಪೂ.೨೮೫-೨೪೭),ಮೆಸಡೋನಿಯಾದ ಅಂತಿಗೊನ (ಕ್ರಿಪೂ.೨೭೭–೨೩೯), ಸುರೇನ್ಯದ ಮಗಸ್(ಕ್ರಿ.ಪೂ. ೨೮೫–೨೫೮)ಮತ್ತು ಎಪಿರದ ಅಲೆಗ್ಸಾಂಡರ್(ಕ್ರಿ.ಪೂ.೨೭೨–೨೫೮) ಎಂದು ಯುವನ ರಾಜರುಗಳ ಹೆಸರುಗಳನ್ನು ಉಲ್ಲೇಖಿಸಲಾಗಿದೆ.ಆದರೆ ಚೋಳ, ಪಾಂಡ್ಯ, ಶಾಂತಿಕ (ಸತಿಯ ಪುತೊ ಅಥವಾ ತುಳುನಾಡು) ಮತ್ತು ಕೇರಳ ದೇಶಗಳಲ್ಲಿನ ಅರಸರುಗಳ ಉಲ್ಲೇಖವಿಲ್ಲದಿದ್ದುದರಿಂದ ಈ ದೇಶಗಳು ಪ್ರಜಾಸತ್ತಾತ್ಮಕ ಗಣರಾಜ್ಯಗಳಾಗಿರಬಹುದೆಂದು ಊಹಿಸಲಾಗಿದೆ.[೭] ಐಗುಪ್ತದ ರಾಜ, ಪ್ರವಾಸಿ ಪ್ಟೊಲೆಮಿಯು ತನ್ನ ಕೃತಿಯಲ್ಲಿ ತುಳುನಾಡನ್ನು ಒಲಿಕೋರಿಯಾ ಎಂದು ಉಲ್ಲೇಖಿಸಿದ್ದು ಅದು ಆಲುವ ಖೇಡದ ಅಪಭ್ರಂಶವೆಂದೂ, ಈ ಪ್ರದೇಶವನ್ನು ಕ್ರಿ.ಶ. ೧೫ ನೆಯ ಶತಮಾನದವರೆಗೆ ಆಳಿದ ಅಲುವ ವಂಶೀಯರಿಂದ ಆ ಹೆಸರು ಬಂತೆಂದೂ ಸಂಶೋಧಕರು ಅಭಿಪ್ರಾಯಪಡುತ್ತಾರೆ. ಇದಕ್ಕೆ ಆಧಾರವಾಗಿ ಅನೇಕ ಪ್ರಾಚೀನ ಗ್ರೀಕ್ ಪ್ರಹಸನಗಳಲ್ಲಿ ತುಳುನಾಡಿಗೆ ಸಂಬಂಧವಿರುವ ಕನ್ನಡ ಪದಗಳ ಉಲ್ಲೇಖವಿರುವುದನ್ನು ತೋರಿಸಿಕೊಟ್ಟಿದ್ದಾರೆ.[೮]

ತುಳುನಾಡಿನ ಅತ್ಯಂತ ಪ್ರಾಚೀನ ಸಮುದಾಯ ಯಾವುದು ಎಂದು ಖಚಿತವಾಗಿ ಹೇಳಲು ಸಾಕಷ್ಟು ಆಧಾರಗಳಿಲ್ಲ. ಇಲ್ಲಿನ ಮೂಲ ನಿವಾಸಿಗಳು ಮಾಯಿಲರು ಎಂದು ಪರಿಗಣಿಸಿರುವ ಶಂಭುಶರ್ಮರು ಅದಕ್ಕೆ ಆಧಾರವಾಗಿ ಸುಬ್ರಹ್ಮಣ್ಯ ಸಮೀಪದ ಮೊಗರು, ವಿಟ್ಲ ಮತ್ತು ಪೆರ್ಲಗಳಲ್ಲಿ ಮಾಯಿಲರ ಕೋಟೆಗಳ ಕುರುಹುಗಳಿವೆಯೆಂದು ಹೇಳಿದ್ದಾರೆ.[೯] ಗೋವಿಂದ ಪೈಗಳು ಶಂಖಪಾಲಕುಲದ ನಾಗರೆಂಬ ಅನಾರ್ಯರು ಇಲ್ಲಿನ ಮೂಲನಿವಾಸಿಗಳಾಗಿದ್ದು, ತುಳುನಾಡು ನಾಗರಖಂಡದ ಒಂದು ಭಾಗ ಮತ್ತು ಅದಕ್ಕೆ ತಿಳಿವ ಅಳುಕವೆಂಬ ಹೆಸರಿತ್ತು. ಅಳುಕವೆಂದರೆ ನಾಗ. ಅಳುಕವೇ ಅಲುಕವಾಗಿ ಆಲುವಖೇಡವಾಗಿರಬಹುದೆಂದೂ, ಅಲುವವು ನಾಗರಾಧನೆಯನ್ನೂ, ನೀರಿನ ಸಮೃದ್ಧತೆಯನ್ನೂ ಸೂಚಿಸುವ ಪದವಾಗಿದೆಯೆಂದೂ ತರ್ಕಿಸಿದ್ದಾರೆ.[೧೦] ಇನ್ನೊಂದೆಡೆ ಅವರು "ತುಳುನಾಡಿನ ಪ್ರಾಚೀನ ಸಮುದಾಯದ ಜನರು ನಾಗಪೂಜಕರಾಗಿದ್ದ ಕಾರಣ ನಾಗರೆಂದು ಕರೆಯಲ್ಪಟ್ಟರೋ ಅಥವಾ ನಾಗ ಅವರ ಲಾಂಛನವಾಗಿದ್ದಕ್ಕೆ ಅವರಿಗೆ ಆ ಹೆಸರು ಬಂದಿರಬಹುದೋ ಎಂದು ನಿಖರವಾಗಿ ಹೇಳಲು ಸಾಧ್ಯವಿಲ್ಲ. ಜತೆಗೆ ಕೇರಳ ಮತ್ತು


ತುಳುನಾಡಿನ ದೇವಾಲಯಗಳಲ್ಲಿ ನಾಗದೇವತೆಯನ್ನು ಶಿವನ ಮಗನಾದ ಸ್ಕಂದನೊಡನೆ ಸಮೀಕರಿಸಿ ಸುಬ್ರಹ್ಮಣ್ಯನೆಂದು ಪೂಜಿಸುವ ಸಂಪ್ರದಾಯವಿರುವುದು ಒಂದು ವೈಶಿಷ್ಟ್ಯ"ವೆಂದು ಅಭಿಪ್ರಾಯ ಪಟ್ಟಿದ್ದಾರೆ.[೧೧]

ಇನ್ನೊಂದು ಅಧ್ಯಯನದ ಪ್ರಕಾರ ತುಳುನಾಡಿನ ಇತಿಹಾಸದ ಆರಂಭ ಕೊರಗ, ಪರವ, ಪಂಬದ, ನಲಿಕೆ, ಮಲೆಕುಡಿಯ ಮುಂತಾದ ಜನಸಮುದಾಯಗಳಿಂದಾಗಿದೆ. ಅವರಲ್ಲಿ ಕೊರಗರು ಸ್ವತಂತ್ರವಾದ, ದ್ರಾವಿಡವರ್ಗಕ್ಕೆ ಸೇರಿದ್ದ ಉಪಭಾಷೆಯೊಂದನ್ನು ಹೊಂದಿದ್ದರು.[೧೨] ಅಗ ನಾಯಾರು ಮತ್ತು ಶಿಲಪ್ಪದಿಗಾರಂ ತಮಿಳು ಗ್ರಂಥಗಳಲ್ಲಿ ತುಳುನಾಡಿನ ಜನರನ್ನು ಕೋಶಕರು ಎಂದು ಕರೆಯಲಾಗಿದ್ದು ಅದು ಕೊರಗರೇ ಇರಬೇಕೆಂದೂ, ಅವರು ಪ್ರಾಚೀನ ಗಣಪದ್ಧತಿಯನ್ನೂ, ಮಾತೃ ಪ್ರಧಾನ ಕುಟುಂಬ ವ್ಯವಸ್ಥೆಯನ್ನು ಹೊಂದಿದ್ದರೆಂದು ತರ್ಕಿಸಲಾಗಿದೆ. ಮಯೂರವರ್ಮನು ತುಳುನಾಡನ್ನು ಆಕ್ರಮಿಸಿದಾಗ ಇಲ್ಲಿನ ಹುಬಾಸಿಕನೆಂಬ ಬಲಾಢ್ಯ ಕೊರಗ ದೊರೆ ಅವನನ್ನು ಸೋಲಿಸಿ ಬಿಟ್ಟನೆಂದೂ, ಮಯೂರವರ್ಮನ ಸಂತತಿಯವರು ಮೋಸದಿಂದ ಹುಬಾಸಿಕನನ್ನು ಕೊಂದು ಅವನ ಹಿಂಬಾಲಕರನ್ನು ಕಾಡು ಪಾಲ ಮಾಡಿದರೆಂದೂ ಒಂದು ಐತಿಹ್ಯವಿದೆ.[೧೩] ಈಗಲೂ ಅನೇಕ ಕೊರಗರು ಮತ್ತು ಮಾಯಿಲರು ಕಾಡು- ಗುಡ್ಡಗಳಲ್ಲಿ ವಾಸಿಸುತ್ತಿರುವುದನ್ನು ನೋಡಿದರೆ ಉತ್ತರದ ದಾಳಿಕೋರರು ತುಳುನಾಡಿನ ದ್ರಾವಿಡ ಸಂಸ್ಕೃತಿಯನ್ನು ತುಳಿದು ತಮ್ಮ ಸಂಸ್ಕೃತಿಯನ್ನು ತುಳುನಾಡಿನಲ್ಲಿ ಬೆಳೆಸಿದರೆಂದು ಹೇಳಬಹುದು. ಅದರೆ ವಲಸೆ ಹೋಗುವುದು ಪ್ರಾಚೀನ ಜನಾಂಗಗಳ ಒಂದು ಸರ್ವ ಸಾಮಾನ್ಯ ಲಕ್ಷಣವೆಂದೂ,ಹಾಗಾಗಿ ಯಾವುದೇ ಪ್ರದೇಶದ ಮೂಲ ನಿವಾಸಿಗಳು ಯಾರು ಎಂದು ಖಚಿತವಾಗಿ ಹೇಳಲು ಸಾಧ್ಯವಿಲ್ಲವೆಂದೂ ಕೆಲವು ಇತಿಹಾಸಕಾರರು ಅಭಿಪ್ರಾಯಪಡುತ್ತಾರೆ.[೧೪]


ಕ್ರಿ. ಶ. ೧೦೧೨ ರ ಬಲ್ಮುರಿಯ ಶಾಸನದಲ್ಲಿ ತುಳುನಾಡಿನ ಉಲ್ಲೇಖ ಮೊತ್ತಮೊದಲ ಬಾರಿಗೆ ಕಾಣಿಸಿಕೊಂಡಿತು.[೧೫] ಹೊಯ್ಸಳ ವಿಷ್ಣುವರ್ಧನ ತನ್ನದೊಂದು ಶಾಸನದಲ್ಲಿ ಏಳು ದೇಶಗಳೆಂದು ಉಲ್ಲೇಖಿಸಿದ್ದಾನೆ. ಕ್ರಿ.ಶ. ೧೧೬೩ ರ ಹಳೆ ಬೀಡಿನ ಶಾಸನ, ಕ್ರಿ.ಶ. ೧೧೪೯ ರ ಹಳೆ ಬೆಳವಾಡಿ ಶಿಲಾಶಾಸನ ಮತ್ತು ಕ್ರಿ.ಶ. ೧೧೮೨ ರ ಹಿರೆಹಳ್ಳಿ ಶಾಸನದಲ್ಲೂ ತುಳುನಾಡಿನ ಉಲ್ಲೇಖವಿದೆ. ಹೊಯ್ಸಳರ ಶಿಲಾಶಾಸನಗಳಲ್ಲಿ ತುಳುನಾಡು ಮತ್ತು ಆಳ್ವಖೇಟ ಎಂಬ ಎರಡೂ ಹೆಸರುಗಳು ಬಳಕೆಯಾದದ್ದಿದೆ. ವಿಜಯನಗರ ಕಾಲದ ಶಾಸನಗಳಲ್ಲಿ ತುಳು ದೇಶ, ತೌಳವದೇಶ, ತುಳುರಾಜ್ಯ , ಬಾರಕೂರು ರಾಜ್ಯ, ಮಂಗಳೂರು ರಾಜ್ಯ ಎಂಬಿತ್ಯಾದಿ ಹೆಸರುಗಳನ್ನು ಈ ನಾಡಿಗೆ ಬಳಸಲಾಗಿದೆ.[೧೬]

ತುಳುನಾಡಿನ ಅರಸರು ಬಾದಾಮಿಯ ಚಾಲುಕ್ಯರ, ಬನವಾಸಿಯ ಕದಂಬರ, ಮಾನ್ಯಖೇಟದ ರಾಷ್ಟ್ರಕೂಟರ, ಕಲ್ಯಾಣದ ಚಾಳುಕ್ಯರ, ದ್ವಾರಸಮುದ್ರದ ಬಲ್ಲಾಳರ ಮತ್ತು ವಿಜಯನಗರದ ರಾಜರುಗಳ ಸಾರ್ವಭೌಮತ್ವವನ್ನು ಒಪ್ಪಿ ಮಾಂಡಲಿಕರಾಗಿ ರಾಜ್ಯವಾಳಬೇಕಾಗಿ ಬಂದುದು ಇತಿಹಾಸದಲ್ಲಿ ದಾಖಲಾಗಿದೆ. ಇವರಲ್ಲಿ ಬ್ರಾಹ್ಮಣರ ವಲಸೆ ಮತ್ತು ತುಳುನಾಡಿನ ಆಡಳಿತದ ವಿಭಾಗೀಕರಣ ದೃಷ್ಟಿಯಿಂದ ಕದಂಬರ ಆಡಳಿತವನ್ನು ವಿಶೇಷವಾಗಿ ಉಲ್ಲೇಖಿಸಬಹುದು. ಬನವಾಸಿಯ ಕದಂಬರ ದೊರೆ ಭಗೀರಥವರ್ಮನು ಆಡಳಿತದ ಸುಲಭೀಕರಣಕ್ಕಾಗಿ ತುಳುನಾಡನ್ನು ಬಾರಕೂರು, ಮಂಗಳೂರು, ಕಾಸರಗೋಡು ಮತ್ತು ಕಡಬ ಎಂದು ನಾಲ್ಕು ವಿಭಾಗಗಳನ್ನಾಗಿ ಮಾಡಿದ್ದನು.[೧೭] ಕದಂಬ ದೊರೆ ಮಯೂರವರ್ಮನು ತ್ರಿಕುಟಾಚಲದ ಬಳಿಯಲ್ಲಿ ರಾಜ್ಯವನ್ನು ಸ್ಥಾಪಿಸಿ ಆಗ ಪ್ರಬಲರಾಗಿದ್ದ ಪಲ್ಲವರಿಗೆ ಸವಾಲೊಡ್ಡಿ ಅವರಿಂದ ಪಶ್ಚಿಮ ಕರಾವಳಿಯ ತುಳುನಾಡನ್ನು ಗೆದ್ದುಕೊಂಡನು. ಗೋಕರ್ಣದಿಂದ ಪಯಸ್ವಿನಿ ನದಿಯವರೆಗೆ ಹಬ್ಬಿದ್ದ ತುಳುನಾಡಿನಲ್ಲಿನ ಬಾಹ್ಮಣರು ವಿದ್ಯಾವಿಹೀನರೂ, ಯಜ್ಞಯಾಗವಿಮುಖರು ಆಗಿದ್ದುದರಿಂದ ಅಹಿಕ್ಷತ್ರದಿಂದ ಮೂವತ್ತೆರಡು ಬ್ರಾಹ್ಮಣ ಕುಟುಂಬಗಳನ್ನು ನೆಲೆಗೊಳಿಸಿ ವೈದಿಕ ಧರ್ಮದ ಪ್ರಸಾರಕ್ಕೆ ಕಾರಣನಾದನು ಎಂದು ಹೇಳಲಾಗುತ್ತದೆ.[೧೮]

ಕದಂಬರ ನಾಲ್ಕನೆಯ ಮಯೂರವರ್ಮನ ಕಾಲದಲ್ಲಿ ತುಳುನಾಡನ್ನು ಕುಂಬಳೆರಾಜ್ಯ ಮತ್ತು ಬಾರಕೂರು ರಾಜ್ಯಗಳೆಂದು ವಿಂಗಡಿಸಲಾಗಿತ್ತು. ಅವುಗಳ ಮೇರೆಗಳು ಹೀಗಿದ್ದವು:



ನಕ್ಷೆ ೨.೧ ಬಾರಕೂರು ರಾಜ್ಯ



ನಕ್ಷೆ ೨.೨ ಕುಂಬಳೆ ರಾಜ್ಯ

ಬಾರಕೂರುರಾಜ್ಯವು ದಕ್ಷಿಣದಲ್ಲಿ ನೇತ್ರಾವತಿ, ಉತ್ತರದಲ್ಲಿ ಸುವರ್ಣಾನದಿ, ಪಶ್ಚಿಮದಲ್ಲಿ ಅರಬ್ಬಿಸಮುದ್ರ ಮತ್ತು ಪೂರ್ವದಲ್ಲಿ ಪಶ್ಚಿಮಘಟ್ಟದವರೆಗೆ ವ್ಯಾಪಿಸಿಕೊಂಡಿತ್ತು. ದಕ್ಷಿಣದಲ್ಲಿ ಪಯಸ್ವಿನಿ[ಚಂದ್ರಗಿರಿ] ನದಿ , ಉತ್ತರದಲ್ಲಿ ನೇತ್ರಾವತಿ ನದಿ, ಪಶ್ಚಿಮದಲ್ಲಿ ಅರಬ್ಬಿಸಮುದ್ರ , ಮತ್ತು ಪೂರ್ವದಲ್ಲಿ ಪಶ್ಚಿಮಘಟ್ಟ ಕುಂಬಳೇ ರಾಜ್ಯದ ಎಲ್ಲೆಗಳಾಗಿದ್ದವು.[೧೯] ಈ ಸೀಮೆಗಳನ್ನು ಒಪ್ಪಿಕೊಂಡು ಆಳುಪರು ಮಾಂಡಲಿಕರಾಗಿ ಹೊಯ್ಸಳರ ಅವಧಿಯವರೆಗೆ ರಾಜ್ಯಭಾರ ಮಾಡಿದರು.ಕ್ರಿ.ಶ. ೧೩೪೪ ರಲ್ಲಿ ಹೊಯ್ಸಳ ರಾಣಿ ಚಿಕ್ಕಾಯಿ ತಾಯಿಯ ಮರಣದೊಂದಿಗೆ ಹೊಯ್ಸಳರ ಆಡಳಿತ ಕೊನೆಗೊಂಡಿತು.ಆ ಬಳಿಕ ತುಳುನಾಡು ವಿಜಯನಗರ ಸಾಮ್ರಾಜ್ಯದ ಒಂದು ಅಂಗವಾಗಿ ಆಳುಪರು ರಾಜಕೀಯ ಮಹತ್ವ ಕಳಕೊಂಡರು.

ಜಾನ್ ಸ್ಟರಕ್ ದಕ್ಷಿಣಕನ್ನಡ ಜಿಲ್ಲೆಗೆ ಎಂಟನೇ ಶತಮಾನದವರೆಗೆ ಖಚಿತವಾದ ಇತಿಹಾಸ ಇರಲ್ಲಿಲ್ಲವೆಂದೂ,ಆದರೆ ಅದು ಕೇರಳ ಅಥವಾ ಚೇರದ ಒಂದು ಭಾಗವಾಗಿತ್ತೆಂದೂ,ಅದು ಯಾವಾಗ ಕೇರಳದಿಂದ ಪ್ರತ್ಯೇಕವಾಯಿತೆಂಬುದನ್ನು ಖಚಿತವಾಗಿ ಹೇಳಲಾಗದಿದ್ದರೂ ಕೇರಳದ ಉತ್ತರಭಾಗವು ಪಲ್ಲವ ಮತ್ತು ಕದಂಬರಿಂದ ಆಳಲ್ಪಡುತ್ತಿತ್ತೆಂದೂ ಅಭಿಪ್ರಾಯಪಟ್ಟಿದ್ದಾನೆ.[೨೦] ಕ್ರಿ.ಪೂ. ೧೦೦೦ ದಿಂದಲೇ ಇಲ್ಲಿ ಸನಾತನಧರ್ಮವು ಅಸ್ತಿತ್ವ ಕಂಡುಕೊಂಡು ಅದು ಸ್ಥಳೀಯ ದೇಶಾಚಾರ, ಆರಾಧನೆಗಳೊಡನೆ ಮಿಳಿತವಾಗಿತ್ತು. ಕ್ರಿ.ಪೂ. ೩ ರಿಂದ ೧ನೇ ಶತಮಾನದವರೆಗೆ ಮಹಾಯಾನ ಬೌದ್ಧಧರ್ಮ ಈ ಪ್ರದೇಶದಲ್ಲಿ ವಿಜೃಂಭಿಸಿತು. ಮತ್ತು ಕ್ರಿ.ಶ. ೨ ನೇ ಶತಮಾನದೊಳಗೆ ಜೈನಧರ್ಮ ಈ ಜಿಲ್ಲೆಗೆ ಪ್ರವೇಶಿಸಿತ್ತು. ಕ್ರಿ.ಶ. ೯ನೇ ಶತಮಾನದಲ್ಲಿ ಮತ್ಸ್ಯೇಂದ್ರ ನಾಥನಿಂದಾಗಿ ನಾಥಪಂಥವು ಜಿಲ್ಲೆಗೆ ಕಾಲಿಟ್ಟಿತ್ತು. ಅದು ಬೌದ್ಧಧರ್ಮದ ಮಹಾಯಾನ ಶಾಖೆಯ ವಜ್ರಯಾನ ಪಂಥದಿಂದ ರೂಪುಗೊಂಡದ್ದು.[೨೧] ಕಾಲ ಕ್ರಮೇಣ ನಾಥವು ಶೈವ ಪಂಥವಾಗಿ ಮಾರ್ಪಟ್ಟರೂ ತನ್ನ ಮೂಲದ ಕೆಲವು ಅಂಶಗಳನ್ನು ಬಿಟ್ಟುಕೊಡಲಿಲ್ಲ. ಜಾತಿಭೇದವನ್ನು ಗಣಿಸದ ಮತ್ಸ್ಯೇಂದ್ರನಾಥರು ಪ್ರಚುರಪಡಿಸಿದ ಕಾಳಾಮುಖವೇ ಇಲ್ಲಿನ ಪ್ರಪ್ರಾಚೀನ ಮತ. ದಕ್ಷಿಣಾಚಾರದ ಶಾಂಕರ ಮತದವರು ದೇವೀ ಆರಾಧಕರಾಗಿದ್ದರೂ, ಹಿಂಸೆಯನ್ನು ತ್ಯಜಿಸಿ ಸಾತ್ವಿಕ ಆರಾಧನೆ ಮಾಡುವ ಬ್ರಾಹ್ಮಣಾದಿಗಳು ಮಯೂರವರ್ಮನ ಸಹಾಯದಿಂದ ಭೂತಾರಾಧಕರನ್ನು ನಿಗ್ರಹಿಸಿ ಆರಾಧನೆಗೆ ದೇವಸ್ಥಾನಾದಿಗಳ ವ್ಯವಸ್ಥೆ ಮಾಡಿರಬಹುದು ಎಂಬ ಅಭಿಪ್ರಾಯವನ್ನು ಶಂಭುಶರ್ಮರು ವ್ಯಕ್ತಪಡಿಸಿದ್ದಾರೆ.[೨೨] ಇಲ್ಲೆಲ್ಲೂ ಕ್ರೈಸ್ತ ಮತ್ತು ಇಸ್ಲಾಂ ಮತಗಳ ಪ್ರಸ್ತಾಪವಿಲ್ಲ. ಪೋರ್ಚುಗೀಸರು ಕ್ರೈಸ್ತ ಮತವನ್ನು ಮತ್ತು ಅರಬರು ಇಸ್ಲಾಂ ಮತವನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪಸರಿಸಿರಬಹುದು.

ಆರಂಭಿಕ ಆಳುಪರ ಕಾಲದ ಉದ್ಯಾವರ ಶಾಸನದಲ್ಲಿ ಆ ಕಾಲದ ಅಳತೆ ಮತ್ತು ತೂಕಗಳ ವಿವರ ದೊರೆಯುತ್ತದೆ. ಸಂಕುರ (ಎತ್ತಿನ ಮೇಲಣ ಹೊರೆ),ಪಟ್ಟಿಗೆ (ಬುಟ್ಟಿ) ಮಲವೆ(ಮಣ) ಷೇರು (ತಲೆಹೊರೆ), ಇತ್ಯಾದಿಗಳ ವಿವರ ಅದರಲ್ಲಿದೆ. ಅಂತಿಮ ಆಳುಪರ ಕಾಲದಲ್ಲಿ ಮುಡಿ, ಹಂಡುಗ, ಹಗೆ ಕುಡಿತೆ, ಪಡಿ, ಮಾನ ಮುಂತಾದ ಅಳತೆ ಮತ್ತು ತೂಕದ ಪ್ರಮಾಣಗಳಿದ್ದವು.[೨೩] ಆರಂಭಿಕ ಆಳುಪರ ಕಾಲದಲ್ಲಿ ವಾಣಿಜ್ಯ ವ್ಯವಹಾರಗಳು ವಸ್ತು ರೂಪದಲ್ಲಿ ನಡೆಯುತ್ತಿದ್ದವು. ಬೊಕ್ಕಸಕ್ಕೆ ವಸ್ತು ರೂಪದಲ್ಲಿ ತೆರಿಗೆ ಸಂದಾಯವಾಗುತ್ತಿತ್ತು. ಭತ್ತ, ಅಕ್ಕಿ, ಕಾಳುಮೆಣಸು,ಹತ್ತಿ ಮತ್ತು ಅಡಿಕೆಗಳ ಮೇಲೆ ನೆಲತೆರಿಗೆ ಹೇರಲಾಗುತ್ತಿತ್ತು. ಮೀನುಗಾರಿಕೆ ಮತ್ತು ಜಲಮಾರ್ಗ ಸಾಗಾಟದ ಮೇಲೆ ಜಲಸುಂಕ ವಿಧಿಸಲಾಗುತ್ತಿತ್ತು.ಆ ಬಳಿಕಿನ ಆಳುಪರು ಗದ್ಯಾಣ ಮತ್ತು ಪಾಂಡ್ಯ ಗದ್ಯಾಣವೆಂಬ ಚಿನ್ನದ ನಾಣ್ಯಗಳನ್ನು ಬಳಸುತ್ತಿದ್ದರು. ಆ ಬಳಿಕ ವಾಣಿಜ್ಯ ವ್ಯವಹಾರಗಳಲ್ಲಿ ಹಣವನ್ನು ವಿನಿಮಯ ಮಾಧ್ಯಮವಾಗಿ ಬಳಸಲಾಯಿತು. ಅಡವಿಟ್ಟ ಭೂಮಿಯ ಮೇಲೂ ಆಗ ತೆರಿಗೆ ಹೇರಲಾಗುತ್ತಿತ್ತು.[೨೪]

ಆಳುಪರ ಕಾಲದಲ್ಲಿ ಜಾತಿ ಪದ್ಧತಿ ಆಳವಾಗಿ ಬೇರೂರಿತ್ತು. ದಾಖಲೆಗಳಲ್ಲಿ ಕಂಡುಬರುವ ನಾಲ್ಕು ಜಾತಿ ಎಂಬ ಪದವು ನಾಲ್ಕು ವರ್ಣಗಳಿಗೆ ಸಂವಾದಿಯಾಗಿತ್ತು, ಮತ್ತು ಪಂಚಮರು ಹೊರಗಿನವರು ಎಂದು ಕರೆಯಲ್ಪಡುತ್ತಿದ್ದರು.ಅವರು ಅಸ್ಪೃಶ್ಯ ಸಮುದಾಯದವರಾಗಿದ್ದು ಅವರನ್ನು ಗುಲಾಮರಂತೆ ಪರಿಗಣಿಸಲಾಗುತ್ತಿತ್ತು. ಅವರು ಭೂಮಿಯನ್ನು ಹೊಂದಲು ಅನರ್ಹರಾಗಿದ್ದರು.[೨೫] ಬ್ರಾಹ್ಮಣರಿಗೆ ತುಂಬಾ ಗೌರವ ಸಲ್ಲಿಸಲಾಗುತ್ತಿತ್ತು ಮತ್ತು ತುಳುವರಸರು ಅವರಲ್ಲಿ ಕೆಲವರನ್ನು ರಾಜಪುರೋಹಿತರನ್ನಾಗಿ ನಿಯುಕ್ತಿ ಮಾಡುತ್ತಿದ್ದರು. ಅಸ್ಪೃಶ್ಯತೆ ಆಚರಣೆಯಲ್ಲಿದ್ದರೂ ನಂದರಾಜನೆಂಬ ಪಂಚಮ ಮಂಗಳೂರನ್ನು ಆಳುತ್ತಿದ್ದನೆಂದು, ಅವನು ಚರ್ಮದ ನಾಣ್ಯಗಳನ್ನು ಚಲಾವಣೆಗೆ ತಂದಿದ್ದನೆಂದು, ಅವನ ಬಳಿಕ ಆ ನಾಣ್ಯಗಳು ಚಲಾವಣೆ ಕಳಕೊಂಡದ್ದಕ್ಕೆ 'ನಂದರಾಯನ ಬದುಕು ನರಿ ನಾಯಿ ತಿಂದಿತು' ಎಂಬ ಗಾದೆ ಹುಟ್ಟಿಕೊಂಡಿತೆಂದು ಐತಿಹ್ಯ ಒಂದಿದೆ.[೨೬]

ವಡ್ಡರ್ಸೆ ಶಾಸನದಲ್ಲಿ ಕಂಚು, ಕೀಳ್ಗಂಚು ಎಂಬ ಹೆಸರಿನ ಎರಡು ನಾಣ್ಯಗಳು ಚಲಾವಣೆಯಲ್ಲಿದ್ದವೆಂದು, ಬಾರಕೂರು ಶಾಸನದಲ್ಲಿ ಪಾಂಡ್ಯ ಗದ್ಯಾಣ, ಬಾರಕೂರು ಗದ್ಯಾಣ ಮತ್ತು ಮಂಗಳೂರು ಗದ್ಯಾಣ ತುಳುನಾಡಿನಲ್ಲಿ ಚಲಾವಣೆಯಲ್ಲಿದ್ದ ನಾಣ್ಯಗಳೆಂದು ಉಲ್ಲೇಖವಿದೆ. ಗೇರುಸೊಪ್ಪೆಯ ಸಾಳ್ವರು ತುಳುನಾಡಿನಲ್ಲಿ ಸ್ವತಂತ್ರ ನಾಣ್ಯಗಳನ್ನು ಹೊರಡಿಸಿದವರಲ್ಲಿ ಮುಖ್ಯರಾಗಿದ್ದು ಅವರು ಬೆಳ್ಳಿ, ಬಂಗಾರ ಮತ್ತು ತಾಮ್ರದ ನಾಣ್ಯಗಳನ್ನು ಟಂಕಿಸುತ್ತಿದ್ದರು.[೨೭]

ಪ್ರಾಚೀನ ಮತ್ತು ಮಧ್ಯಕಾಲೀನ ತುಳುನಾಡಿನಲ್ಲಿ ಸ್ತ್ರೀಯರು ಹೆಚ್ಚು ಸ್ವಾತಂತ್ರ್ಯವನ್ನು ಹೊಂದಿದ್ದರು. ಇದಕ್ಕೆ ಭೂತಾಳ ಪಾಂಡ್ಯ ಅನುಷ್ಠಾನಕ್ಕೆ ತಂದ ಅಳಿಯಕಟ್ಟು ಕುಟುಂಬ ವ್ಯವಸ್ಥೆ ಕಾರಣವಾಗಿತ್ತೆಂಬ ಒಂದು ಅಭಿಪ್ರಾಯವಿದೆ. ಅವನನ್ನು ಆಳುಪ ತಾಯಿ ಮತ್ತು ಪಾಂಡ್ಯ ತಂದೆಗೆ ಜನಿಸಿದವನೆಂದೂ ತನ್ನ ಸೋದರ ಮಾವನ ಮರಣಾನಂತರ ಅವನು ತುಳುನಾಡಿನ ಗದ್ದುಗೆ ಏರಿ ಆಡಳಿತ ನಡೆಸಿದನೆಂದೂ ಹೇಳಲಾಗುತ್ತದೆ.[೨೮] ಆದರೆ ಭೂತಾಳ ಪಾಂಡ್ಯನ ಐತಿಹ್ಯ ಕಟ್ಟುಕತೆಯಾಗಿರಬೇಕು, ಕೇರಳದಲ್ಲಿ ಅಸ್ತಿತ್ವದಲ್ಲಿದ್ದ ಮರಿಮಕ್ಕ ತಾಯಂ ಪದ್ಧತಿ ಅದರ ಒಂದು ಭಾಗವಾಗಿದ್ದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಸ್ತಿತ್ವದಲ್ಲಿ ಉಳಿದಿರಬೇಕೆಂಬ ವಿರುದ್ಧ ಅಭಿಪ್ರಾಯವೂ ಇದೆ.[೨೯] ಕರ್ನಾಟಕದಲ್ಲಿ ತುಳುನಾಡಿಗಷ್ಟೇ ಸೀಮಿತವಾದ ಅಳಿಯಕಟ್ಟು ಪದ್ಧತಿ ಸ್ತ್ರೀಯರಿಗೆ ಆರ್ಥಿಕ ಸ್ವಾತಂತ್ರ್ಯ ನೀಡಿ ಕರಾವಳಿ ಕರ್ನಾಟಕದಲ್ಲಿ ಅವರನ್ನು ಸಬಲರನ್ನಾಗಿ ಮಾಡುವಲ್ಲಿ ಬಹುದೊಡ್ಡ ಪಾತ್ರವನ್ನು ವಹಿಸಿದೆಯೆಂಬುದು ಬಹುಮುಖ್ಯವಾದ ಸಂಗತಿಯಾಗಿದೆ.

ಭೂತಾಳಪಾಂಡ್ಯ ಮತ್ತು ಅಳಿಯಕಟ್ಟಿನ ಉಗಮದ ಬಗ್ಗೆ ಇನ್ನೊಂದು ರೀತಿಯಲ್ಲೂ ತರ್ಕಿಸಬಹುದು.ಕುಂದಾಪುರ ತಾಲೂಕಿನಲ್ಲಿ ಪಾಂಡ್ಯ ಎಂಬ ಕುಲನಾಮದ ಸಮುದಾಯವೊಂದಿದ್ದು ಭೂತಾಳ ಪಾಂಡ್ಯ ಎಂಬವನು ಈ ಕುಲದವನಾಗಿರಲೂಬಹುದು. ಪುರೋಹಿತ ವರ್ಗ ಇಲ್ಲದ ಎಲ್ಲಾ ಸಮುದಾಯಗಳಲ್ಲಿ ಅಳಿಯಕಟ್ಟು ಪದ್ಧತಿ ದ್ರಾವಿಡ ಸಮುದಾಯದಲ್ಲಿತ್ತು. ಜೈನರು ಅಳಿಯಕಟ್ಟಿನವರಾದರೂ ಜೈನ ಇಂದ್ರರು ಮಕ್ಕಳ ಕಟ್ಟಿನವರು ಎಂಬ ವಾಸ್ತವದ ಹಿನ್ನೆಲೆಯಲ್ಲಿ ಇದನ್ನು ಪರಿಭಾವಿಸಬೇಕು. ಪೂಜೆ ಯಾಗ ಯಜ್ಞಾದಿಗಳನ್ನು ಗಂಡಸರೇ ಮಾಡಬೇಕಾದ ವ್ಯವಸ್ಥೆಯಲ್ಲಿ ಪುರೋಹಿತರುಗಳು ಮಕ್ಕಳ ಕಟ್ಟನ್ನು ಅನಿವಾರ್ಯವಾಗಿ ಅನುಸರಿಸಬೇಕಾಗಿ ಬಂತು ಎಂಬ ವಾಸ್ತವದ ಹಿನ್ನಲೆಯಲ್ಲಿ ಭೂತಾಳ ಪಾಂಡ್ಯ ಮತ್ತು ಅಳಿಯಕಟ್ಟು ಸಂತತಿಯ ಐತಿಹ್ಯವನ್ನು ಮರು ಪರಿಶೀಲಿಸಬೇಕಾಗಿದೆ.

ತುಳುನಾಡು ವಿಜಯನಗರ ಸಾಮ್ರಾಜ್ಯದ ಒಂದು ಭಾಗವಾಗುವವರೆಗಿನ ಆರ್ಥಿಕ ಬದುಕನ್ನು ಸಂಕ್ಷಿಪ್ತವಾಗಿ ಹೀಗೆ ಪ್ರಸ್ತುತಪಡಿಸಬಹುದು.'

❖ ತುಳುನಾಡಿನಲ್ಲಿ ಮಧ್ಯ ಮತ್ತು ಅಂತ್ಯ ಶಿಲಾಯುಗದ ಜನರು ವಾಸಿಸುತ್ತಿದ್ದರು. ಬೇಟೆ ಮತ್ತು ಮೀನುಗಾರಿಕೆ ಅವರ ವೃತ್ತಿಯಾಗಿತ್ತು. ಕೊಡಲಿಯ ಆವಿಷ್ಕಾರದ ಬಳಿಕ ಕಾಡು ಸವರಿ ಜನರು ಕೃಷಿ ವೃತ್ತಿಯನ್ನು ಕೈಗೊಂಡರು. ಭತ್ತ, ತೆಂಗು, ಅಡಿಕೆ, ಬಾಳೆ, ಮೆಣಸು ಮತ್ತು ಸಾಂಬಾರ ಜೀನಸುಗಳು ಜಿಲ್ಲೆಯ ಪ್ರಮುಖ ಕೃಷಿ ಉತ್ಪನ್ನಗಳಾದವು.

❖ ಜಿಲ್ಲೆಯು ಕೃಷಿ ಪ್ರಧಾನ ಪ್ರದೇಶವಾದಾಗ ಅರಬ್ಬೀ ಮತ್ತು ಗ್ರೀಕ್ ವ್ಯಾಪಾರಿಗಳ ಕಣ್ಣು ಜಿಲ್ಲೆಯ ಮೇಲೆ ಬಿತ್ತು. ಅವರು ಕೃಷಿ ಉತ್ಪನ್ನಗಳನ್ನು ಕೊಳ್ಳುವ ಮತ್ತು

ತನ್ನ ದೇಶದ ಉತ್ಪನ್ನಗಳನ್ನು ಇಲ್ಲಿ ಮಾರಾಟ ಮಾಡುವ ಉದ್ದೇಶದಿಂದ ಜಿಲ್ಲೆಗೆ ಆಗಮಿಸತೊಡಗಿದರು. ಮಂಗಳೂರು ಮತ್ತು ಬಾರಕೂರುಗಳು ಪ್ರಧಾನ ವಾಣಿಜ್ಯ ನಗರಿಗಳಾಗಿ ಬೆಳೆದವು.ಕ್ರಿ.ಶ. ಸುಮಾರು ೭೭೦ ರ ವೇಳ್ವಿಕುಡಿಯ ತಾಮ್ರ ಪಟದಲ್ಲಿ ಜಟೆಯ್ಯನ್ ಎಂಬ ಪಾಂಡ್ಯ ರಾಜನು ಕ್ರಿ.ಶ. ೭೧೫ ರಲ್ಲಿ ಮಹಾರಥರೆಂಬ ಬಾದಾಮಿಯ ಚಾಲುಕ್ಯರನ್ನು ಮಂಗಳ ಪುರವೆಂಬ (ಮಂಗಳೂರು) ಮಹಾನಗರದಲ್ಲಿ ಸೋಲಿಸಿದನೆಂಬ ಉಲ್ಲೇಖವಿದೆ.[೨೦] ರೋಮ್ ಚಕ್ರಾಧಿಪತ್ಯದ ಪ್ರವಾಸಿ ಪ್ಲಿನಿಯು (ಕ್ರಿ.ಶ. ೨೩-೭೯) ತನ್ನ ಗ್ರಂಥದಲ್ಲಿ ಬರಾಕೆ ಎಂಬ ಪಟ್ಟಣದ ಉಲ್ಲೇಖ ಮಾಡಿದ್ದು ಅದು ಬಾರಕೂರು ಅಥವಾ ಬಸರೂರು ಆಗಿರಬೇಕೆಂದು ಊಹಿಸಲಾಗಿದೆ.[೨೧]

❖ ಭೂಮಿಯ ಒಡೆತನ ಬ್ರಾಹ್ಮಣ, ಜೈನ, ಮತ್ತು ಬಂಟರೆಂಬ ಮೇಲ್ಜಾತಿಯವರ ವಶದಲ್ಲಿತ್ತು. ಕೆಳಜಾತಿಯ ಶೂದ್ರರು ಮತ್ತು ಅಸ್ಪೃಶ್ಯರು ಭೂಮಿಯನ್ನು ಹೊಂದಿರಲಿಲ್ಲ. ವರ್ಣ ವ್ಯವಸ್ಥೆ ಅಸ್ತಿತ್ವದಲ್ಲಿತ್ತು.ಬ್ರಾಹ್ಮಣರು ಪುರೋಹಿತರಾಗಿದ್ದು ಜೈನ ಮತ್ತು ಬಂಟರು ತಮ್ಮನ್ನು ಕ್ಷತ್ರಿಯರೆಂದು ಪರಿಗಣಿಸಿಕೊಂಡಿದ್ದರೂ ಅವರು ವ್ಯಾಪಾರ ಮತ್ತು ವ್ಯವಸಾಯದಿಂದ ಜೀವನ ಸಾಗಿಸಬೇಕಾಗಿತ್ತು.ವಿಶ್ವಕರ್ಮ, ಗಾಣಿಗ, ಕುಂಬಾರ ಇತ್ಯಾದಿ ಸಾಂಪ್ರದಾಯಿಕ ಕುಲವೃತ್ತಿಗಳಿಗೆ ಮಹತ್ವವಿತ್ತು. ಸೆಟ್ಟಿಕಾರರು ಮತ್ತು ಬಲ್ಲಾಳರು ವ್ಯಾಪಾರಿ ಸಂಘಗಳನ್ನು ರಚಿಸಿಕೊಂಡು ತಮ್ಮ ಚೌಕಾಶಿ ಸಾಮರ್ಥ್ಯವನ್ನು ಹೆಚ್ಚಿಸಿಕೊಂಡಿದ್ದರು.[೨೨]

❖ ಗುಣಮಟ್ಟ ಮತ್ತು ಬೆಳೆಗಳನ್ನು ಆಧರಿಸಿ ಭೂಮಿಯನ್ನು ಬಯಲು ,ಬೆರಿಕೆಯ ಭೂಮಿ, ಬೀಳುಗದ್ದೆ, ಹದಹು, ಹಡಲು, ಹಕ್ಕಲು, ಕಂಬಳಗದ್ದೆ ,ಕರಿಕೆಬಯಲು, ಕುಮರು, ಮಜಲು, ಮಕ್ಕಿ ಮತ್ತು ಕಾರಗದ್ದೆ ಎಂದು ವಿಂಗಡಿಸಲಾಗುತಿತ್ತು. ಹಿಡುವಳಿದಾರರನ್ನು ಮೂಲಕಾರರು, ವೃತ್ತಿಕಾರರು, ಗೇಣಿಕಾರರು ಎಂದು ಕರೆಯಲಾಗುತ್ತಿತ್ತು.[೨೩]

❖ ಭೂತೆರಿಗೆ ಮತ್ತು ಸುಂಕ ರಾಜಾದಾಯದ ಎರಡು ಮೂಲಗಳಾಗಿದ್ದವು.ಭೂತೆರಿಗೆ ನೆಲಸುಂಕವಾಗಿದ್ದು ಭೂವ್ಯವಸಾಯದ ಹುಟ್ಟುವಳಿಯನ್ನು ಆಧರಿಸಿ ಬಹುತೇಕವಾಗಿ ಧಾನ್ಯಗಳ ರೂಪದಲ್ಲಿ ನೀಡಲಾಗುತ್ತಿತ್ತು. ಸುಂಕವು ಜಲತೆರಿಗೆಯಾಗಿದ್ದು ಸಮುದ್ರ ಮತ್ತು ನದಿಗಳ ಸಾಲಿಗೆ ಸಾಗಾಟದ ಮೇಲೆ ಅದನ್ನು ವಿಧಿಸಲಾಗುತ್ತಿತ್ತು. ಜಲಸುಂಕವನ್ನು ವಸ್ತು ಅಥವಾ ನಗದು ರೂಪದಲ್ಲಿ ಸಂಗ್ರಹಿಸಲಾಗುತ್ತಿತ್ತು. ಜಮೀನುದಾರರು ವಸೂಲು ಮಾಡುವ ತೆರಿಗೆಯನ್ನು ಭುಕ್ತಿ ಸಮುದಾಯವೆಂದು ಕರೆಯಲಾಗುತ್ತಿತ್ತು.ಕೆಲವು ಸಂದರ್ಭಗಳಲ್ಲಿ ಬೇಸಾಯದ ಹೊಲಗಳ ಮೇಲೆ ಬಾಳು ತೆರೆಯನ್ನು ಕೂಡಾ ವಿಧಿಸಲಾಗುತ್ತಿತ್ತು.[೨೪]

ಏಳನೆಯ ಶತಮಾನದ ಮಧ್ಯಭಾಗ ಮತ್ತು ಎಂಟನೆಯ ಶತಮಾನದ ಉದ್ಯಾವರ ಶಾಸನಗಳ ಪ್ರಕಾರ ಆಳುಪರ ಕಾಲದಲ್ಲಿ ಆಡಳಿತದ ಸುಸೂತ್ರೀಕರಣಕ್ಕಾಗಿ ರಾಜ್ಯ, ವಿಷಯ ಮತ್ತು ನಾಡು ಎಂಬ ವಿಭಾಗಗಳನ್ನು ಮಾಡಿಕೊಂಡಂತೆ ಕಂಡುಬರುತ್ತದೆ.[೨೫] ಇವುಗಳ ವ್ಯಾಪ್ತಿಯನ್ನು ಸಮರ್ಪಕವಾಗಿ ವಿವರಿಸುವುದು ಕಷ್ಟ. ನಾಡು, ವಿಷಯ ಮತ್ತು ರಾಜ್ಯ ಇವು ಮೂರನ್ನು ಒಂದೇ ಅರ್ಥದಲ್ಲಿ ವಿವಿಧ ಶಾಸನಗಳಲ್ಲಿ ಬಳಸಲಾಗಿದೆ.[೨೬] ಆದರೆ ವಾಸ್ತವವಾಗಿ ರಾಜ್ಯವನ್ನು ನಾಡು ಮತ್ತು ವಿಷಯಕ್ಕಿಂತ ವಿಶಾಲಾರ್ಥದಲ್ಲಿ ಬಳಸಿಕೊಂಡಂತೆ ಕಂಡುಬರುತ್ತದೆ. ರಾಜ್ಯ ಅನ್ನುವುದು ಸಾಮಂತರಸನ ಆಳ್ವಿಕೆಯ ಪ್ರದೇಶವೆಂಬ ಅರ್ಥದಲ್ಲಿಯೂ ಉಲ್ಲೇಖವಾದ ಉದಾಹರಣೆಗಳಿವೆ. ತುಳುನಾಡಿನ ಕೆಲವು ಗ್ರಾಮಗಳನ್ನು ಒಟ್ಟು ಸೇರಿಸಿ ರಾಜ್ಯವೆಂದು ಕರೆಯುತ್ತಿದ್ದುದಕ್ಕೆ ಉತ್ತರಕನ್ನಡದ ಹೊನ್ನಾವರ ಬಳಿಯ ತಲ್ಲೋಡ ಶಾಸನವು ಸಾಕ್ಷ್ಯ ಒದಗಿಸುತ್ತದೆ. ಗ್ರಾಮ ಮತ್ತು ಊರುಗಳು ಆಡಳಿತದಲ್ಲಿ ಗಣನೀಯ ಅಧಿಕಾರವನ್ನು ಹೊಂದಿದ್ದವೆಂದೂ ಶಾಸನಗಳು ತಿಳಿಯಪಡಿಸುತ್ತವೆ. ಇದರಿಂದಾಗಿ ರಾಜ್ಯ ವಿಶಾಲಾರ್ಥದಲ್ಲಿ, ನಾಡು ಮತ್ತು ವಿಷಯ ಸಮಾನಾರ್ಥದಲ್ಲಿ ಪರಿಭಾವಿಸಲ್ಪಡುತ್ತಿತ್ತು.ಗ್ರಾಮ ನಾಡಿಗಿಂತ ಚಿಕ್ಕದಾದ ಮತ್ತು ಊರು ಗ್ರಾಮಕ್ಕಿಂತ ಚಿಕ್ಕದಾದ ಘಟಕ ಎಂಬರ್ಥದ ಬಳಕೆಯಲ್ಲಿದ್ದಂತೆ ಕಾಣುತ್ತದೆ.[೨೭]

೧.೩ ವಿಜಯನಗರ ಸಾಮ್ರಾಜ್ಯಕಾಲದ ಆರ್ಥಿಕತೆ


ಕ್ರಿ.ಶ.೧೩೩೬ ರಲ್ಲಿ ಸ್ಥಾಪನೆಗೊಂಡ ವಿಜಯನಗರ ಸಾಮ್ರಾಜ್ಯವು ದಕ್ಷಿಣ ಹಿಂದೂಸ್ತಾನದಲ್ಲಿ ಮಾತ್ರವಲ್ಲದೆ ಸಮಸ್ತ ಭರತವರ್ಷದಲ್ಲಿ ತನ್ನ ಕೀರ್ತಿಯನ್ನು ಪಸರಿಸಿ ವಿದೇಶಗಳಲ್ಲೂ ಖ್ಯಾತಿಯನ್ನು ಪಡೆದಿತ್ತು. ಒಂದನೆಯ ಹರಿಹರ ಬುಕ್ಕಾದಿ ಐವರು ಸಹೋದರರಿಂದ ಸ್ಥಾಪನೆಯಾದ ವಿಜಯನಗರ ಸಾಮ್ರಾಜ್ಯದ ರಚನೆಗೆ ಹೊಯ್ಸಳ ವೀರಬಲ್ಲಾಳನು ನೆರವಾಗಿದ್ದ. ಶೃಂಗೇರಿಯ ವಿದ್ಯಾತೀರ್ಥರು ಮತ್ತು ಕಾಳಾಮುಖ ಸಂಪ್ರದಾಯದ ಕಾಶೀವಿಲಾಸ ಎಂಬ ಋಷಿಗಳು ವಿಜಯನಗರ ಸಾಮ್ರಾಜ್ಯದ ರಚನೆಗೆ ಧಾರ್ಮಿಕ ನೆಲೆಗಟ್ಟನ್ನು ಒದಗಿಸಿದ್ದರು.[೨೮] ಅಲ್ಲಾವುದ್ದೀನ್ ಖಿಲ್ಜಿಯ ದಂಡಯಾತ್ರೆಯು ಸನಾತನ ಧರ್ಮ ಸಂಸ್ಕೃತಿಗಳ ಮೇಲುಂಟು ಮಾಡಿದ ಅನಾಹುತಗಳಿಗೆ ಪ್ರತಿಭಟನೆಯಾಗಿ ಹುಟ್ಟಿಕೊಂಡ ವಿಜಯನಗರ ಸಾಮ್ರಾಜ್ಯಕ್ಕೆ ಒಂದು ಧಾರ್ಮಿಕ ಮಹತ್ವವಿತ್ತು. ಪರರಾಜ್ಯ, ಪರಧರ್ಮ, ಪರಸಂಸ್ಕೃತಿಗಳು, ಸ್ವರಾಜ್ಯ, ಸ್ವಧರ್ಮ, ಸ್ವಸಂಸ್ಕೃತಿಗಳಿಗೆ ಗಂಡಾಂತರವನ್ನುಂಟುಮಾಡಿದಾಗ ಸ್ವಸಾಮರ್ಥ್ಯವನ್ನು ಹೆಚ್ಚಿಸಿ ಸನಾತನಧರ್ಮ ಮತ್ತು ಸಂಸ್ಕೃತಿಗೆ ಹೊಸ ಜೀವವನ್ನು ತುಂಬುವ ಉದ್ದೇಶದಿಂದ ಹುಟ್ಟಿಕೊಂಡ ವಿಜಯನಗರ ಸಾಮ್ರಾಜ್ಯ ಎಲ್ಲಾ ಮತಧರ್ಮಗಳಿಗೆ, ಸಾಹಿತ್ಯ

ಕಲೆ ಮತ್ತು ಸಂಸ್ಕೃತಿಗಳಿಗೆ ಆಶ್ರಯನೀಡಿ ಕ್ರಿ. ಶ. ೧೩೩೬ ರಿಂದ ೧೫೬೫ ರವರೆಗಿನ ಅವಧಿಯಲ್ಲಿ ಕರ್ನಾಟಕದಲ್ಲಿ ಸುವರ್ಣಶಕೆಯೊಂದನ್ನು ಮೂಡಿಸಿತ್ತು. ಸಾಮ್ರಾಜ್ಯ ಸ್ಥಾಪಕರಲ್ಲೊಬ್ಬನಾದ ಒಂದನೇ ಬುಕ್ಕನ ಮಗ ಕುಮಾರ ಕಂಪಣನು ಮಧುರೆಯ ಸುಲ್ತಾನನನ್ನು ರಣಕಣದಲ್ಲಿ ಗೆದ್ದು ವಿಜಯನಗರವನ್ನು ವಿಸ್ತರಿಸಿದ್ದು ವೀರ ಕಂಪರಾಯ ಚರಿತಂ ಅಥವಾ ಮಧುರಾವಿಜಯಂ ಎಂಬ ಐತಿಹಾಸಿಕ ಕಾವ್ಯವೊಂದರ ಸೃಷ್ಟಿಗೂ ಕಾರಣವಾಯಿತು.[೩೯]

ವಿಜಯನಗರ ಸ್ಥಾಪನೆಯಾಗುವಾಗ ತುಳುನಾಡಿನಲ್ಲಿ ಆಳುಪ ಅರಸರ ಪ್ರಾಬಲ್ಯ ಕುಂದುತ್ತಾ ಬಂದಿತ್ತು. ಭೈರರಸ ಚ್ಯಾಣಿ, ಚೌಟ, ಬಂಗ, ಅಜಿಲ, ಹೆಗಡೆ, ಸಾವಂತ, ತೊಳಹ, ಮೂಲ, ಹೊನ್ನೆಕಂಬಳಿ ಮುಂತಾದ ಅರಸು ಮನೆತನಗಳು ತಮ್ಮ ಸಾಮರ್ಥ್ಯಕ್ಕೆ ಸಾಧ್ಯವಿರುವಷ್ಟು ಪ್ರದೇಶವನ್ನು ವಶದಲ್ಲಿಟ್ಟುಕೊಂಡು ಆಡಳಿತ ಮಾಡುತ್ತಿದ್ದವು. ತುಳುನಾಡು ವಿಜಯನಗರದ ಆಡಳಿತಕ್ಕೆ ಒಳಪಟ್ಟಿದ್ದು ಕ್ರಿ. ಶ. ೧೩೪೫ರಲ್ಲಿ. ಸಾಮ್ರಾಜ್ಯ ಸ್ಥಾಪಕ ಹರಿಹರನು ತುಳುನಾಡನ್ನು ತನ್ನ ಅಧೀನ ಪ್ರದೇಶವನ್ನಾಗಿ ಮಾಡಿಕೊಂಡು ಬಾರಕೂರು. ಮಂಗಳೂರು ಮತ್ತು ಬಂಗಾಡಿಗಳಲ್ಲಿ ಮೂವರು ಅಧಿಕಾರಿಗಳನ್ನಿಟ್ಟು ರಾಜ್ಯಭಾರ ಮಾಡುತ್ತಿದ್ದ. ವಿಜಯನಗರದಿಂದ ನೇಮಕಗೊಂಡ ಅಧಿಕಾರಿಗಳನ್ನು ಒಡೆಯರೆಂದು ಕರೆಯಲಾಗುಗುತ್ತಿತ್ತಾದರೂ ಅವರು ಸಾಮ್ರಾಜ್ಯದ ನೌಕರರಾಗಿ ಇದ್ದರೇ ಹೊರತು ಅವರಿಗೆ ಸಂತಾನ ಪಾರಂಪರ್ಯದ ಹಕ್ಕುಗಳಿರಲಿಲ್ಲ.[೪೦] ಒಂದನೆಯ ಹರಿಹರನು ತುಳುನಾಡಿನ ಕಂದಾಯ ಕ್ರಮವನ್ನು ಸ್ಮೃತಿಗಳ ಆಧಾರದಲ್ಲಿ ಸರಿಪಡಿಸಿದ್ದು ಅದು ಆತನ ಆಡಳಿತ ಜಾಣ್ಮೆಗೊಂದು ನಿದರ್ಶನವಾಗಿದೆ. ತುಳುನಾಡನ್ನು ಆಡಳಿತದ ಅನುಕೂಲಕ್ಕಾಗಿ ಮಂಗಳೂರು ರಾಜ್ಯ ಮತ್ತು ಬಾರಕೂರು ರಾಜ್ಯ ಎಂದು ವಿಜಯನಗರದ ಆಡಳಿತ ಕಾಲದಲ್ಲಿ ವಿಂಗಡಿಸಲಾಯಿತು. ಆಗಿನ 'ರಾಜ್ಯ' ಪರಿಕಲ್ಪನೆ ಮತ್ತು 'ನಾಡು' ಪರಿಕಲ್ಪನೆ ವೈಶಿಷ್ಟ್ಯಪೂರ್ಣವಾದದ್ದು. ಒಂದು ನಾಡಿನಲ್ಲಿ ಎರಡು ರಾಜ್ಯಗಳಿದ್ದರೂ ಅದು ಆಡಳಿತದ ವಿಕೇಂದ್ರಿಕರಣದ ಉದ್ದೇಶವುಳ್ಳದ್ದು ಎಂಬ ಅಭಿಪ್ರಾಯವನ್ನು ಸಂಶೋಧಕರು ವ್ಯಕ್ತಪಡಿಸಿದ್ದಿದೆ.[೪೧]

ಹರಿಹರನು ತನ್ನ ಸಾಮ್ರಾಜ್ಯದಲ್ಲಿ ಅಚ್ಚುಕಟ್ಟಾದ ತಾರ್ಕಿಕ ಸಮರ್ಥನೆಗೆ ನಿಲುಕುವ ಒಂದು ಸುವ್ಯಸ್ಥಿತ ಕಂದಾಯ ವ್ಯವಸ್ಥೆಯನ್ನು ಜಾರಿಗೆ ತಂದಿದ್ದ. ಅದು ತುಳುನಾಡಿಗೂ ಅನ್ವಯವಾಯಿತು. ಕರ್ನಾಟಕದ ಪ್ರಬಲ ಅರಸರ ಮಾಂಡಲಿಕರಾಗಿದ್ದ ತುಳುನಾಡಿನ ರಾಜರುಗಳಿಗೆ ಮೊದಲಿನಿಂದಲೂ ಭೂಮಿಯ ಮೇಲೆ ಹಕ್ಕಿರಲಿಲ್ಲ. ಭೂಮಿಯು ರೈತನಿಗೆ ಸೇರಿದ್ದು ನಿಗದಿತ ಭೂಕಂದಾಯವನ್ನು ಕಾಲಕಾಲಕ್ಕೆ ಪಡೆಯುವುದಷ್ಟೇ ರಾಜನ


ಕರ್ತವ್ಯವಾಗಿತ್ತು. ಕಂದಾಯ ನಿರ್ಣಯಕ್ಕೆ ಸಾಗುವಳಿ ಭೂಮಿಯ ವಿಸ್ತೀರ್ಣ ಆಧಾರವಾಗಿತ್ತು. ಸಾಮಾನ್ಯವಾಗಿ ಹುಟ್ಟುವಳಿಯ ಆರನೇ ಒಂದು ಭಾಗವನ್ನು ಕಂದಾಯವೆಂದು ರಾಜರುಗಳು ರೈತರಿಂದ ವಸೂಲಿ ಮಾಡುತ್ತಿದ್ದರು. ಹರಿಹರನ ಕಾಲದಲ್ಲಿ ಈ ವ್ಯವಸ್ಥೆ ಬದಲಾಯಿತು. (ಚಿತ್ರ. ೨.೧)



ಚಿತ್ರ ೨.೧ ಹರಿಹರನ ಕಂದಾಯ ವ್ಯವಸ್ಥೆ

ಅವನು ಒಟ್ಟು ಹುಟ್ಟುವಳಿಯನ್ನು ಮೂವತ್ತು ಪಾಲು ಮಾಡಿ ಅದರಲ್ಲಿ ಸರಕಾರಕ್ಕೆ ಏಳೂವರೆ, ಭೂಮಾಲಿಕರಿಗೆ ಏಳೂವರೆ ಮತ್ತು ಕೃಷಿ ಮಾಡಿದ ರೈತನಿಗೆ ಹದಿನೈದು ಪಾಲೆಂದು ವಿಂಗಡಿಸಿದನು.[೪೨] ಸರಕಾರವು ತನಗೆ ಬಂದ ಏಳೂವರೆ ಪಾಲು ಹುಟ್ಟುವಳಿಯಲ್ಲಿ ರಾಜನ ಖಜಾನೆಗೆ ಐದುಪಾಲು ಮತ್ತು ದೇವಸ್ಥಾನಗಳಿಗೆ ಒಂದು ಪಾಲು ಎಂದು ಹಂಚುತಿತ್ತು.(ಚಿತ್ರ. ೨.೨)





ಚಿತ್ರ ೨. ೨ ಸರಕಾರದ ಕಂದಾಯ ಹಂಚಿಕೆ

ಬ್ರಾಹ್ಮಣರ ಮತ್ತು ದೇವಾಲಯಗಳ ಪಾಲು ರಾಜನ ಬೊಕ್ಕಸಕ್ಕೇ ಬಂದು ಮತ್ತೆ ವಿತರಣೆಯಾಗುತ್ತಿತ್ತು. ಹರಿಹರನ ಕಂದಾಯ ವ್ಯವಸ್ಥೆಯಲ್ಲಿ ಸರಕಾರವು ನೇರವಾಗಿ ಬಿತ್ತಿದ ಬೀಜದ ಲೆಕ್ಕವನ್ನು ರೈತರಿಂದ ಪಡೆಯುತ್ತಿದ್ದುದರಿಂದ ಕಂದಾಯ ಅಧಿಕಾರಿಗಳ ಶೋಷಣೆ ತಪ್ಪಿ ರೈತರು ಸಂತುಷ್ಟರಾಗಿದ್ದರು.[೪೩] ಹರಿಹರನ ಆಡಳಿತ ಕಾಲದಲ್ಲಿ ಕಾರವಾರದಿಂದ ಕಲ್ಲಿಕೋಟೆಯವರೆಗೆ ಸಂಚರಿಸಿದ ಆಫ್ರಿಕನ್ ಪ್ರವಾಸಿ ಇಬನ್ ಬಟೂಟ, ಆಗ ಮಂಗಳೂರು ಮತ್ತು ಬಾರಕೂರು ಪ್ರಧಾನ ವಾಣಿಜ್ಯ ನಗರಗಳಾಗಿದ್ದದನ್ನು, ಶ್ರೀ ಸಾಮಾನ್ಯರು ಕಾಲ್ನಡಿಗೆಯಲ್ಲೇ ಸಂಚರಿಸಬೇಕಾದ ಅನಿವಾರ್ಯತೆಯನ್ನು ವರ್ಣಿಸಿದ್ದಾನೆ. ಆಗ ಅಂದರೆ ಕ್ರಿ.ಶ. ೧೩೪೨ ರಲ್ಲಿ ತುಳುನಾಡಿನಲ್ಲಿ ರಥಗಳು ಮತ್ತು ಗಾಡಿಗಳು ಇರಲಿಲ್ಲ. ಆಢ್ಯರು ಪಲ್ಲಕ್ಕಿಗಳಲ್ಲಿ ಪಯಣಿಸುತ್ತಿದ್ದುದಿತ್ತು. ರಾಜ, ಅವನ ಪರಿವಾರ, ರಾಜಕುಮಾರ,



ರಾಜಕುಮಾರಿಯರು ಕುದುರೆಗಳಲ್ಲಿ ಪಯಣಿಸುತ್ತಿದ್ದರು ಎಂದು ಆಗಿನ ಸಂಚಾರಿ ವ್ಯವಸ್ಥೆಯ ಬಗ್ಗೆ ಇಬನ್ ಬಟೂಟ ಹೇಳಿದ್ದಾನೆ.[೪೪]

ತುಳುವ ವಂಶದ ಕೃಷ್ಣದೇವರಾಯ (ಕ್ರಿ.ಶ.೧೫೦೯) ವಿಜಯನಗರದ ಸಮ್ರಾಟನಾದದ್ದು ಭಾರತದ ಇತಿಹಾಸದಲ್ಲಿ ಒಂದು ಉಜ್ವಲ ಅಧ್ಯಾಯದ ಸೃಷ್ಟಿಗೆ ಕಾರಣವಾಯಿತು. ಪೋರ್ಚುಗೀಸ್ ರಾಯಭಾರಿ ಡೊಮಿಂಗೋ ಪೇಸ್‌ನ ಪ್ರಕಾರ 'ಮಂದಸ್ಮಿತ, ಸುಂದರವದನ, ಸೌಜನ್ಯಮೂರ್ತಿ ಕೃಷ್ಣದೇವರಾಯನು ಆಡಳಿತ ನಿಪುಣನೂ, ನ್ಯಾಯ ದುರಂಧರನೂ ಆಗಿದ್ದನು.[೪೫] ಕೃಷ್ಣ ದೇವರಾಯನು ಆರ್ಥಿಕ ಕ್ಷೇತ್ರದಲ್ಲಿ ಮಾಡಿದ ಅನೇಕ ಬದಲಾವಣೆಗಳು ತುಳುನಾಡು ಸೇರಿದಂತೆ ಸಾಮ್ರಾಜ್ಯದ ಅಭಿವೃದ್ಧಿಗೆ ಕಾರಣವಾದವು. ಪ್ರಜೆಗಳು ಕರಭಾರದ ಹೊರೆಯಿಂದ ಕುಸಿದು ಹೋಗುವಂತಾಗಬಾರದೆಂದು ಅವನು ತೆರಿಗೆಗಳ ದರವನ್ನು ಪರಿಷ್ಕರಿಸಿ ಕಡಿಮೆ ಮಾಡಿದ್ದ. ವಿಜಯ ನಗರ ಸಾಮ್ರಾಜ್ಯದಲ್ಲಿ ಹಿಂದೆ ಮದುವೆ ಸುಂಕ(marriage tax) ಅಸ್ತಿತ್ವದಲ್ಲಿತ್ತು. ಅದು ಪ್ರಜೆಗಳ ಅಸಂತೋಷಕ್ಕೆ ಕಾರಣವಾಗಿದ್ದುದನ್ನು ಗಮನಿಸಿ ಅವನು ಅದನ್ನು ರದ್ದುಗೊಳಿಸಿದನು.[೪೬] ಅವನ ಕಾಲದಲ್ಲಿ ಕೃಷಿ ಮತ್ತು ವ್ಯಾಪಾರಗಳು ಎರಡು ಪ್ರಮುಖ ಆರ್ಥಿಕ ಚಟುವಟಿಕೆಗಳಾಗಿದ್ದವು. ಅವನು ವ್ಯಾಪಕ ಕೃಷಿಗೆ (Extensive Cultivation) ಉತ್ತೇಜನ ನೀಡಿ ಬಂಜರು, ಬಯಲು ಮತ್ತು ಕಾಡು ಪ್ರದೇಶಗಳಲ್ಲಿ ಬೇಸಾಯ ವಿಸ್ತರಣೆಗೆ ಕಾರಣನಾದನು. ಕೃಷ್ಣದೇವರಾಯನ ಕಾಲದ ನೀರಾವರಿ ವ್ಯವಸ್ಥೆ (Irrigation system) ಈಗಲೂ ಹಂಪಿಯ ವೀಕ್ಷಕರನ್ನು ಆಶ್ಚರ್ಯಪಡಿಸುತ್ತದೆ. ಅವನು ಅಲ್ಲಲ್ಲಿ ಕೆರೆಗಳನ್ನು ಕಟ್ಟಿಸಿ ಅಗತ್ಯವಿರುವಲ್ಲಿ ಒಡ್ಡುಗಳನ್ನು ನಿರ್ಮಿಸಿ ಕೃಷಿ ಭೂಮಿಗೆ ಯಥೇಚ್ಛ ನೀರುಣಿಸಿ ರೈತರು ಸಮೃದ್ಧ ಬೆಳೆ ತೆಗೆದು ಸಂತೋಷಕರ ಜೀವನವನ್ನು ಸಾಗಿಸಲು ಕಾರಣನಾದನು. ಅವನಿಂದಾಗಿ ತುಳುನಾಡಿನಲ್ಲೂ ವ್ಯಾಪಕ ಕೃಷಿ ಪದ್ಧತಿಗೆ ಮತ್ತು ನೀರಾವರಿ ವ್ಯವಸ್ಥೆಗೆ ಮಹತ್ವ ಲಭ್ಯವಾಯಿತು.

ಕೃಷ್ಣದೇವರಾಯನು ತುಳುವ ವಂಶೀಯನಾಗಿದ್ದ. ತುಳುವ ವಂಶೀಯರು ತುಳುನಾಡಿನವರು ಆಗಿರಲೂಬಹುದು ಎಂಬ ಒಂದು ಊಹೆಯನ್ನು ವಿದ್ವಾಂಸರೊಬ್ಬರು ತೇಲಬಿಟ್ಟಿದ್ದಾರೆ.[೪೭] ಹಾಗೆಂದು ಖಚಿತವಾಗಿ ಹೇಳಲು ದಾಖಲೆಗಳಿಲ್ಲ. ಕೃಷ್ಣ ದೇವ ರಾಯನ ಕಾಲದಲ್ಲಿ ತುಳುನಾಡಿನಲ್ಲಿ ಶಾಂತಿ ನೆಲೆಸಿತ್ತು. ಅವನು ಮಂಗಳೂರು ರಾಜ್ಯವನ್ನು ಬಾರಕೂರು ರಾಜ್ಯದೊಡನೆ ವಿಲೀನಗೊಳಿಸಿ ತುಳುನಾಡಿಗೆ ಒಬ್ಬ ಮಹಾಪ್ರಧಾನನನ್ನು ನೇಮಿಸಿ, ಸಮಗ್ರವಾಗಿ ನಾಡನ್ನು ತನ್ನ ಹಿಡಿತದಲ್ಲಿ ಇರಿಸಿಕೊಂಡಿದ್ದ.ಇದು ನಾಡಿನಲ್ಲಿ ದೊಂಬಿ, ಗಲಾಟೆ, ತುಂಡರಸರ ನಡುವಣ ಅಂತ್ಯವಿಲ್ಲದ ಯುದ್ಧವನ್ನು ಸಂಪೂರ್ಣವಾಗಿ ನಿಲ್ಲಿಸಿಬಿಟ್ಟಿದ್ದರಿಂದ

ಪ್ರಜೆಗಳು ನೆಮ್ಮದಿಯಿಂದ ಆರ್ಥಿಕ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲು ಸಾಧ್ಯವಾಯಿತು. ಆತ ಹದಗೆಟ್ಟಿದ್ದ ಸಾಮ್ರಾಜ್ಯದ ಆರ್ಥಿಕ ಸ್ಥಿತಿಯನ್ನು ಸುವ್ಯವಸ್ಥೆಗೆ ತಂದನು. ಪೋರ್ಚುಗೀಸರೊಡನೆ ಸ್ನೇಹ ಬೆಳೆಸಿಕೊಂಡು ಕರ್ನಾಟಕದ ಕರಾವಳಿಯಲ್ಲಿ ಮಹಮ್ಮದೀಯರ ಪ್ರಾಮುಖ್ಯ ತಗ್ಗಲು ಕಾರಣನಾದನು. ಬಿಜಾಪುರದ ಸುಲ್ತಾನ ಅದಿಲಷಹನನ್ನು ಪೋರ್ಚುಗೀಸರ ಫಿರಂಗಿದಳದ ನೆರವಿನಿಂದ ಸೋಲಿಸಿ ರಾಯಚೂರನ್ನು ವಶಪಡಿಸಿಕೊಂಡು ಹಿಂದೂ ಸಾಮ್ರಾಜ್ಯವನ್ನು ಉತ್ಕರ್ಷಗೆ ಕೊಂಡೊಯ್ದನು. ಆದರೆ ಕ್ರಿ.ಶ. ೧೫೬೫ ನೆಯ ಜನವರಿ ೨೩ ರಂದು ನಡೆದ ತಾಳಿಕೋಟೆ ಕದನದಲ್ಲಿ ಸ್ವಕೀಯರ ಮೋಸದಿಂದಾಗಿ ಸೋತ ವಿಜಯನಗರದ ಸೇನೆಯು ಸಾಮ್ರಾಜ್ಯದ ವಿನಾಶಕ್ಕೆ ಮುನ್ನುಡಿ ಬರೆಯಿತು. ಇದರ ಪ್ರಭಾವ ತುಳುನಾಡಿನ ಮೇಲೂ ಆಯಿತು.

ವಿಜಯನಗರದ ಅಧಿಪತ್ಯಕ್ಕೊಳಗಾಗಿದ್ದಾಗ ತುಳುನಾಡಿನ ಆಡಳಿತ ಅಚ್ಚುಕಟ್ಟಾದ ವ್ಯವಸ್ಥೆಗೊಳಪಟ್ಟಿತ್ತು. ರಾಜ್ಯ, ಮಂಡಲ, ಸ್ಥಲ, ನಾಡು , ಸೀಮೆ, ಮಾಗಣೆ. ಗ್ರಾಮ, ಊರು, ಚಾವಡಿ ಮತ್ತು ಗುತ್ತು ಇವು ಆಡಳಿತ ವಿಭಾಗಗಳಾಗಿದ್ದವು. ಗುತ್ತು ಅತೀ ಚಿಕ್ಕ ಆಡಳಿತ ಘಟಕವಾಗಿತ್ತು. ಗುತ್ತು ಅನ್ನುವುದು ಕಂದಾಯ ಸಂಗ್ರಹದ ಅಧಿಕಾರವನ್ನು ಗುತ್ತಿಗೆಗೆ ಪಡೆಯುವ ಮನೆತನ ಎಂದು ಹೇಳಲಾಗುತ್ತದೆ. ಒಂದು ಊರಿನಲ್ಲಿ ನಾಲ್ಕು ಗುತ್ತುಗಳಿದ್ದವು. ಊರ ಜನರು ಸಭೆ ಸೇರುವ ಸ್ಥಳ ಚಾವಡಿ. ಗುತ್ತು ಮತ್ತು ಚಾವಡಿಗಿಂತ ಹಿರಿದಾದ ಪರಿಕಲ್ಪನೆಯೇ ಊರು. ಅದಕ್ಕಿಂತ ದೊಡ್ಡದು ಗ್ರಾಮ. ಹಲವಾರು ಗ್ರಾಮಗಳು ಸೇರಿದರೆ ಒಂದು ನಾಡು. ನಾಡನ್ನು ದೇಶ ಎಂದೂ ಕರೆಯಲಾಗುತ್ತಿತ್ತು. ನಾಡಿಗಿಂತ ದೊಡ್ಡದು ಸೀಮೆ, ಸ್ಥಲ, ಮಂಡಲ ಮತ್ತು ರಾಜ್ಯ. ಕೆಲವು ಶಾಸನಗಳಲ್ಲಿ ಸೀಮೆ, ಸ್ಥಲ, ಮಂಡಲ ಮತ್ತು ರಾಜ್ಯಗಳನ್ನು ಒಂದೇ ಅರ್ಥದಲ್ಲಿ ಬಳಸಿದ್ದೂ ಇದೆ.[೪೮] ಇದನ್ನು ಗಮನಿಸಿದರೆ ಈ ವಿಭಾಗಗಳ ಅರ್ಥವ್ಯಾಪ್ತಿ ಆಡಳಿತದಾರರ ಅಧಿಕಾರವನ್ನು ಅವಲಂಬಿಸಿಕೊಂಡಿದ್ದಂತೆ ಕಂಡುಬರುತ್ತದೆ.

ವಿಜಯನಗರ ಸಾಮ್ರಾಜ್ಯ ಕಾಲದಲ್ಲಿ ತುಳುನಾಡನ್ನು ಬಾರಕೂರು ಮತ್ತು ಮಂಗಳೂರು ರಾಜ್ಯಗಳಾಗಿ ವಿಂಗಡಿಸಿ ಇಬ್ಬರು ರಾಜ್ಯಪಾಲರುಗಳನ್ನು ನೇಮಕ ಮಾಡಲಾಗಿತ್ತು. ರಕ್ಷಣೆ, ವ್ಯಾಪಾರ ಮತ್ತು ವಾಣಿಜ್ಯ ದೃಷ್ಟಿಯಿಂದ ಇವೆರಡು ಕೇಂದ್ರಗಳು ಬಹಳ ಮಹತ್ತ್ವವನ್ನು ಪಡೆದಿದ್ದವು. ಅವರು ಮಹಾಪ್ರಧಾನ ಅಥವಾ ಮಹಾದಂಡ ನಾಯಕ ಇಲ್ಲವೇ ದಂಡನಾಯಕ ಶ್ರೇಣಿಯವರಾಗಿದ್ದರು. ಅವರಿಗೆ ಸಹಾಯಕರಾಗಿ ಪ್ರಧಾನರು, ಅಧಿಕಾರಿಗಳು, ಬಹತ್ತರ ನಿಯೋಗಿಗಳು ಕಾರ್ಯವೆಸಗುತ್ತಿದ್ದರು. ನಖರ ಎಂಬ ವರ್ತಕ ಸಂಘ ಮತ್ತು ನಾಡು ಎಂಬ ಸ್ಥಳೀಯ ಆಡಳಿತ ವ್ಯವಸ್ಥೆ ರಾಜ್ಯಾಡಳಿತದಲ್ಲಿ ನೆರವಾಗುತ್ತಿತ್ತು.

ಕೋಲ ಬಳಿಗಳು, ಬಲ್ಲಾಳರು ಮತ್ತು ಯೆಳಮೆಗಳು ಸ್ಥಳೀಯವಾಗಿ ಆಡಳಿತಕ್ಕೆ ನೆರವು ನೀಡುತ್ತಿದ್ದುದರ ಬಗ್ಗೆ ಶಾಸನಗಳಲ್ಲಿ ಉಲ್ಲೇಖವಿದೆ. ಲೆಕ್ಕ ಪತ್ರಗಳನ್ನು ನೋಡಿಕೊಳ್ಳಲು ಶೇಣವರು ಮತ್ತು ಕರಣಿಕರು ಹಾಗೂ ಕೋಶದ ಮೇಲ್ವಿಚಾರಣೆಗೆ ಭಂಡಾರಿಗಳು ನಿಯುಕ್ತರಾಗಿದ್ದರು. ಪ್ರವೇಶ ಶುಲ್ಕಗಳನ್ನು (Tolls) ಸುಂಕದ ಒಡೆಯ ಅಥವಾ ಸುಂಕದ ಹೆಗ್ಗಡೆ ವಸೂಲು ಮಾಡುತ್ತಿದ್ದ. ಆಡಳಿತಕ್ಕೆ ಸಂಬಂಧಿಸಿದ ಸಂದೇಶ ಅಥವಾ ವಾರ್ತೆಗಳನ್ನು ಬೇರೆಬೇರೆ ಕಡೆ ತಲುಪಿಸಲು ಓಲೆಕಾರರನ್ನು ನೇಮಕ ಮಾಡಲಾಗುತ್ತಿತ್ತು. ರಾಜ್ಯಪಾಲನ ಕಾರ್ಯದರ್ಶಿಯನ್ನು ಬುದ್ಧಿವಂತನೆಂದು ಕರೆಯಲಾಗುತ್ತಿತ್ತು.[೪೯] ತುಳುನಾಡಿನಲ್ಲಿ ಸಾಮಂತರಸರ ಪ್ರಧಾನಮಂತ್ರಿಯೂ ಕೂಡಾ ಬುದ್ಧಿವಂತನೆಂಬ ಉಪಾಧಿ ಹೊಂದಿದ್ದನ್ನು ಕೋಟಿ ಚೆನ್ನಯರ ಕತೆ ಉಲ್ಲೇಖಿಸುತ್ತದೆ.[೫೦]

ವಿಜಯನಗರ ಸಾಮ್ರಾಜ್ಯದ ಅಧಿಪತ್ಯದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯು ಅಕ್ಕಿ ಮತ್ತು ಕಬ್ಬು ಉತ್ಪಾದನೆಗೆ ಹೆಸರುವಾಸಿಯಾಗಿತ್ತು. ಆದರೆ ಕೆಲವು ಕೃಷಿ ಉತ್ಪನ್ನಗಳನ್ನು ಘಟ್ಟದ ಮೇಲಿನಿಂದ ತರಿಸಿಕೊಳ್ಳುವುದು ಅನಿವಾರ್ಯವಾಗಿತ್ತು. ಎರಡನೇ ದೇವರಾಯನ ಕಾಲದಲ್ಲಿ ಚೌಳಿಯಕೇರಿ ಮತ್ತು ಮೂರುಕೇರಿ ಎಂಬ ಬಾರಕೂರಿನ ಎರಡು ವ್ಯಾಪಾರಿ ಸಂಘಟನೆಗಳ ನಡುವೆ ಅಕ್ಕಿ, ಗೋಧಿ, ಕಡಲೆ, ಉದ್ದು, ಹೆಸರು, ಎಳ್ಳು, ಕಬ್ಬು, ಮೆಂತೆ, ತುಪ್ಪ, ಬೆಲ್ಲ ಮತ್ತು ಗಟ್ಟದ ಮೇಲಿನಿಂದ ಆಯಾತ ಮಾಡಿಕೊಳ್ಳುವ ಅವಶ್ಯಕ ಸಾಮಾಗ್ರಿಗಳ ವ್ಯಾಪಾರವನ್ನು ಹಂಚುವ ಬಗ್ಗೆ ಒಪ್ಪಂದವಾದುದನ್ನು ಕ್ರಿ.ಶ. ೧೪೩೦ರ ಬಾರಕೂರಿನ ಶಾಸನದಲ್ಲಿ ಉಲ್ಲೇಖಿಸಲಾಗಿದೆ.[೫೧] ವ್ಯಾಪಾರದ ಉತ್ಕರ್ಷದಿಂದಾಗಿ ದಕ್ಷಿಣಕನ್ನಡ ಜಿಲ್ಲೆಯ ಆರ್ಥಿಕ ಸ್ಥಿತಿಗತಿ ಉನ್ನತಿಗೇರಿತ್ತು. ಮಂಗಳೂರು ಮತ್ತು ಬಾರಕೂರು ರಾಜ್ಯಗಳ ರಾಜ್ಯಪಾಲರ ಬಳಿಕ ದೇವಾಲಯಯಗಳಿಗೆ ಅತ್ಯಧಿಕ ಹಣ ಮತ್ತು ಭೂಮಿಗಳನ್ನು ನೀಡಿದ್ದು ವ್ಯಾಪಾರಿ ಸಂಘಟನೆಗಳು ಎಂಬುದರಿಂದ ಆಗ ವ್ಯಾಪಾರವು ಎಷ್ಟು ಉತ್ಕರ್ಷವನ್ನು ಹೊಂದಿತ್ತು ಎನ್ನುವುದನ್ನು ತಿಳಿದುಕೊಳ್ಳಬಹುದು.

ವಿಜಯ ನಗರದ ಆಡಳಿತ ಕಾಲದಲ್ಲಿ ದ.ಕ. ದಲ್ಲಿ ಭೂ ಒಡೆತನ ಮತ್ತು ವ್ಯವಸಾಯದ ಹಕ್ಕುಗಳಲ್ಲಿ ಹೆಚ್ಚಿನ ಬದಲಾವಣೆಗಳಾಗಲಿಲ್ಲ. ಹಳೆಯ ವ್ಯವಸ್ಥೆಯನ್ನೇ ಮುಂದುವರಿಸಲಾಗಿತ್ತು. ಭೂಮಿಯ ಅಂತಿಮ ಹಕ್ಕುದಾರ ರಾಜ್ಯವೇ ಆಗಿತ್ತು ಎಂಬುದಕ್ಕೆ ಶಾಸನಗಳಲ್ಲಿ ಕಂಡು ಬರುವ ಭಂಡಾರ, ಸ್ಥಳ, ಅರಮನೆಯ ಭಂಡಾರ ಸ್ಥಳ, ಅರಮನೆಗೆ ಸಲುವ ಭಂಡಾರ, ಸ್ಥಳ ಎಂಬಿತ್ಯಾದಿ ಉಲ್ಲೇಖಗಳು ಆಧಾರವಾಗಿವೆ. ದೇವಾಲಯ ಮತ್ತು ಬ್ರಾಹ್ಮಣರಿಗೆ ಮೀಸಲಾದ ಭೂಮಿಯನ್ನು ಶಾಸನಗಳಲ್ಲಿ ದೇವಸ್ವ, ಪುರೋಹಿತ ಸ್ಥಳ, ಬ್ರಹ್ಮಸ್ವ

ಎಂದು ಪ್ರತ್ಯೇಕವಾಗಿ ಉಲ್ಲೇಖಿಸಲಾಗಿದೆ.[೫೨] ಕೃಷಿಯು ಪ್ರಧಾನ ಉದ್ಯೋಗವಾಗಿದ್ದುದರಿಂದ ಆ ಕಾಲದಲ್ಲಿ ಭೂ ಕಂದಾಯವು ರಾಜಾದಾಯದ ಅತ್ಯಂತ ಪ್ರಮುಖ ಮೂಲವಾಗಿತ್ತು.

ವಿಜಯನಗರ ಸಾಮ್ರಾಜ್ಯದ ಭಾಗವಾಗಿದ್ದಾಗ ದಕ್ಷಿಣಕನ್ನಡದಲ್ಲಿ ಭೂಮಿಯ ವಿಧಗಳನ್ನು ಗುರುತಿಸಲು ವಿಶಿಷ್ಟವಾದ ಪದಗಳನ್ನು ಬಳಸಲಾಗುತ್ತಿತ್ತು. ಉಪ್ಪು ಮಿಶ್ರಿತ ಮಣ್ಣು ಅಥವಾ ಪ್ರದೇಶವನ್ನು ಉಪ್ಪಿನ ಆಗರ; ಅಕ್ಕಿ ಬೆಳೆಯುವ ವಿಶಾಲವಾದ ಗದ್ದೆಗಳನ್ನು ಬಯಲು; ಮಿಶ್ರ ಜಾತಿಯ ಮಣ್ಣುಳ್ಳ ಪ್ರದೇಶವನ್ನು ಬೆರಕೆ ಭೂಮಿ; ಬಯಲಿಗಿಂತ ಎತ್ತರದ ಭೂಮಿಯನ್ನು ಬೆಟ್ಟು; ಕೃಷಿ ಮಾಡದ ಭೂಮಿಯನ್ನು ಬೀಳುಗದ್ದೆ; ಪ್ರಸ್ಥಭೂಮಿಯನ್ನು ಹಡಹು; ಕೃಷಿ ಮಾಡದೆ ಬಿಟ್ಟ ಭತ್ತದ ಗದ್ದೆಯನ್ನು ಹಡಲು; ಮಳೆನೀರನ್ನು ಅವಲಂಬಿಸಿ ತರಕಾರಿ ಬೆಳೆಯುವ ಭೂಮಿಯನ್ನು ಹಕ್ಕಲು; ನೀರಾವರಿ ಮತ್ತು ಒಣಕೃಷಿ ಭೂಮಿಯನ್ನು ಹೊಲಗದ್ದೆ; ತುಂಡುಗದ್ದೆಯನ್ನು ಹಾಳಿ; ಕೋಣಗಳ ಓಟದ ಗದ್ದೆಯನ್ನು ಕಂಬಳಗದ್ದೆ; ಹುಲ್ಲಿನಿಂದಾವೃತವಾದ ಭೂಮಿಯನ್ನು ಕರಿಕೆಯ ಬಯಲು; ನದಿಯ ನಡುವೆ ಇರುವ ಭೂಪ್ರದೇಶವನ್ನು ಕುದುರು; ಬಯಲು ಭೂಮಿಗಿಂತ ಎತ್ತರ ಮತ್ತು ಬೆಟ್ಟು ಭೂಮಿಗಿಂತ ತಗ್ಗು ಇರುವ ಭೂಮಿಯನ್ನು ಮಜಲು; ಬಿದಿರು ಬೆಳೆಯುವ ಭೂಮಿಯನ್ನು ಬಿದಿರಡಿಯ; ಹುಳಿಬೆಳೆಯುವ ಭೂಮಿಯನ್ನು ಹುಣಿಸೆ ಅಡಿಯ; ತೆಂಗು ಬೆಳೆಯುವ ಭೂಮಿಯನ್ನು ತೆಂಗಿನ ಅಡಿಯ; ಉಸುಕು ಭೂಮಿಯನ್ನು ಮಕ್ಕಿ ಭೂಮಿ; ಒಣಪ್ರದೇಶವನ್ನು ತಾರುಗದ್ದೆ ಮತ್ತು ಎತ್ತರದಲ್ಲಿರುವ ಒಣಪ್ರದೇಶವನ್ನು ತಿಟ್ಟೆ ಎಂದು ಕರೆಯಲಾಗುತ್ತಿತ್ತು.[೫೩]

ವಿಜಯನಗರ ಸಾಮ್ರಾಜ್ಯದ ಅಧಿಪತ್ಯದ ಕಾಲದಲ್ಲಿ ಭೂಮಾಲಿಕರಲ್ಲಿ ವಿಭಿನ್ನ ವರ್ಗಗಳಿದ್ದವು.ಭೂಮಿಯ ನಿಜವಾದ ಯಜಮಾನನು ಅಥವಾ ಸರಕಾರದಿಂದ ಭೂಮಿಯನ್ನು ಶಾಶ್ವತ ಭೋಗ್ಯಕ್ಕೆ ಪಡಕೊಂಡವನು ಮೂಲಕಾರನೆಂದು ಕರೆಯಲ್ಪಡುತ್ತಿದ್ದ. ಇದು ಮೂಲಗದ್ದೆ, ಮೂಲದ ಬಾಳು ,ಮೂಲಗೇಣಿ ಎಂಬ ಪದಗಳ ನಿಷ್ಪತ್ತಿಗೆ ಕಾರಣವಾಯಿತು. ಭೂಮಿಯನ್ನು ಗೇಣಿ ಅಥವಾ ಗುತ್ತಿಗೆ ಆಧಾರದಲ್ಲಿ ತನ್ನದಾಗಿಸಿಕೊಂಡವನು ಗೇಣಿಕಾರನೆನಿಸುತ್ತಿದ್ದ. ಇವರೇ ಗುತ್ತಿನವರಾಗಿರಬೇಕು. ಭೂಮಿಯನ್ನು ದಾನವಾಗಿ ಪಡೆದವನು ವೃತ್ತಿಕಾರನಾದರೆ, ವೃತ್ತಿಪರ ಕೃಷಿಕಾರರು ಒಕ್ಕಲು ಎಂದು ಕರೆಯಲ್ಪಡುತ್ತಿದ್ದರು. ಒಕ್ಕಲುಗಳ ಕೈ ಕೆಳಗೆ ದುಡಿಯುವವರಲ್ಲಿ ಕೀಳು ಆಳುಗಳು. ಹೆಣ್ಣಾಳುಗಳು ಮತ್ತು ಹೊಲೆಯಾಳುಗಳೆಂಬ ವರ್ಗಗಳಿದ್ದವು. ಇವರು ಕೆಳವರ್ಗ ಮತ್ತು ಕೆಳಜಾತಿಗೆ ಸೇರಿದವರಾಗಿರಬೇಕೆಂಬುದನ್ನು ಈ ಶಬ್ದಗಳೇ ಸೂಚಿಸುತ್ತವೆ.[೫೪]

ಭೂವ್ಯವಸಾಯವು ಆ ಕಾಲದ ವೃತ್ತಿಯಾಗಿದ್ದುದರಿಂದ ಕೃಷಿ ತೆರಿಗೆಗಳು ರಾಜಾದಾಯದ ಪ್ರಮುಖ ಮೂಲಗಳಾಗಿದ್ದುದು ಸಹಜವೇ ಆಗಿತ್ತು. ಮೂಲಕಾರನಿಂದ ಸಂಗ್ರಹಿಸಲಾಗುತ್ತಿದ್ದ ತೆರಿಗೆಗೆ 'ಮೂಲಾದಿ' ಎಂದು ಹೆಸರಿತ್ತು. ಅರ್ಧಾಂಶ ತೆರಿಗೆಯನ್ನು ಮಾತ್ರವೇ ಸಂಗ್ರಹಿಸುವುದೆಂದಾದರೆ ಅದು ಅರ್ಧಾದಿ ಎಂದು ಕರೆಯಲ್ಪಡುತ್ತಿತ್ತು. ಅಡವು ಇಟ್ಟ ಭೂಮಿಯ ಮೇಲಣ ತೆರಿಗೆಯು ಆರುವಾರ; ಬಿತ್ತನೆ ಮತ್ತು ಕೊಯ್ಲು ನಡುವಣ ಅವಧಿಯ ತೆರಿಗೆಯು ಹೊಡೆಕಟ್ಟು; ಹೊಸ ಭೂಮಿಯನ್ನು ಪಡೆಯುವವನು ಸರಕಾರಕ್ಕೆ ನೀಡಬೇಕಾದ ತೆರಿಗೆಗೆ ಜೋಡಿ; ಕೃಷಿ ಮಾಡುವವನು ನೀಡಬೇಕಾದ ತೆರಿಗೆಗೆ ಕುಳ ಎಂಬ ಪದಗಳನ್ನು ಬಳಸಲಾಗುತ್ತಿತ್ತು. ತಪ್ಪಿಸಲಾಗದ ತೆರಿಗೆಯನ್ನು ಕಡ್ಡಾಯವೆಂದು ಮತ್ತು ತೆರಿಗೆ ಪಾವತಿಯಲ್ಲಿನ ಅಸಮರ್ಪಕತೆಗೆ 'ಕುಂದು' ಎಂದು ಹೆಸರಿತ್ತು. ಹೊಸದಾಗಿ ನೆಟ್ಟ ಸಸಿಗಳ ಮೇಲಣ ತೆರಿಗೆ 'ನಡು' ಅಥವಾ ನಟ್ಟು; ಸ್ಥಿರವಾದ ತೆರಿಗೆ ನಿರ್ಣಯವನ್ನು ಸಿದ್ದಾಯವೆಂದೂ, ಸ್ಥಿರ ಉತ್ಪತ್ತಿಗಿಂತ ಹೆಚ್ಚುವರಿಯಾದ ಉತ್ಪತ್ತಿಯ ಮೇಲಣ ತೆರಿಗೆಯನ್ನು ಸೇಸ ಎಂದೂ ಕರೆಯಲಾಗುತ್ತಿತ್ತು. ಶಾಸನಗಳಲ್ಲಿ ಹೊದಿಕೆ, ಹದಿಕೆ, ಒಸರಿ ಮುಂತಾದ ತೆರಿಗೆಗಳ ಪ್ರಸ್ತಾಪವಿದ್ದರೂ ಇವುಗಳ ಸ್ವರೂಪ ಮತ್ತು ವ್ಯಾಖ್ಯಾನಗಳು ಎಲ್ಲೂ ದೊರೆಯುತ್ತಿಲ್ಲ.[೫೫]

ವಿಜಯನಗರ ಕಾಲದಲ್ಲಿ ದಕ್ಷಿಣಕನ್ನಡದಲ್ಲಿ ಅಸ್ತಿತ್ವದಲ್ಲಿದ್ದ ಕೆಲವು ವಿಶಿಷ್ಟ ತೆರಿಗೆಗಳ ಬಗ್ಗೆ ಶಾಸನಗಳಲ್ಲಿ ಉಲ್ಲೇಖಗಳಿವೆ. ಅವುಗಳ ಅರ್ಥ ವಿವರಣೆ ಮಾತ್ರ ಎಲ್ಲೂ ಸಮರ್ಪಕವಾಗಿ ಲಭ್ಯವಾಗುತ್ತಿಲ್ಲ. ಅಂದಾಜಿನ ಮೇರೆಗೆ ಕೆಲವು ತೆರಿಗೆಗಳಿಗೆ ಅರ್ಥ ನೀಡುವ ಯತ್ನಗಳಾಗಿವೆ. "ಆಕರ' " ವು ಖನಿಜಗಳ ಮೇಲಣ ತೆರಿಗೆಯಾದರೆ , ತಾತ್ಕಾಲಿಕ ಮನೆ ತೆರಿಗೆಗೆ "ಬಿಕಾರ " ಎಂಬ ಪದ ಬಳಕೆಯಾಗುತ್ತಿತ್ತು. ನ್ಯಾಯವನ್ನು ಉಲ್ಲಂಘಿಸಿದರೆ "ಅನ್ಯಾಯ" ಎಂಬ ದಂಡ ಹೇರಲಾಗುತ್ತಿತ್ತು. ರಾಜ್ಯ ಶೋಕಾಚಾರಣೆಯ ಕೊನೆಯಲ್ಲಿ "ದು:ಖ" ಎಂಬ ತೆರಿಗೆಯನ್ನು ಪಾವತಿ ಮಾಡಬೇಕಿತ್ತು. ಉಳುಮೆಗೆ ಬಳಸುವ ಪ್ರಾಣಿಗಳ ಮೇಲೆ "ಬೇಡಿತ್ತು" ತೆರಿಗೆ ವಿಧಿಸಲಾಗಿತ್ತು. ಸಾಮಾನ್ಯ ತೆರಿಗೆಗೆ "ತೇರು" ಎಂಬ ಹೆಸರಿತ್ತು. ಮಹಾರಾಜರಿಗೆ ಎಲ್ಲರೂ "ಕಾಣಿಕೆ" ಕೊಡಬೇಕಿತ್ತು. "ಮನೆ ಹಣ "ವೆಂಬ ಖಾಯಂ ಮನೆ ತೆರಿಗೆಯನ್ನು, ಉಳುಮೆಯ ಉಪಕರಣಕ್ಕೆ 'ನೊಗಹಣ" ವನ್ನು , ಎತ್ತುಗಳಿಗೆ "ಎತ್ತು" ಮತ್ತು ದನಗಳಿಗೆ "ಗಾಯಿ' ಯನ್ನು ನೀಡಬೇಕಿತ್ತು. ಭೋಗದ ಭೂಮಿಗೆ "ಒಕ್ಕಲುಗುತ್ತಿಗೆ", ಹಬ್ಬದ ಸಂದರ್ಭದಲ್ಲಿ "ಒಸಗೆ' ಪಾವತಿಸಬೇಕಿತ್ತು. ಅಪರಾಧಗಳಿಗೆ ತಪ್ಪು ಮತ್ತು ಅಪರಾಧ ದಂಡ ವಿಧಿಸಲಾಗುತ್ತಿತ್ತು. ರಾಜನ ಆಜ್ಞೆಯಾದರೆ "ಅಪ್ಪಣೆ" ತೆರಬೇಕಿತ್ತು. ಬೆಳೆ ಕುಯ್ಲಿನ ಬಳಿಕ "ಭತ್ತ" ನೀಡಬೇಕಿತ್ತು. ಇವು ವಿಜಯನಗರ ಕಾಲದ ತೆರಿಗೆಗಳಾದರೂ ಇವುಗಳಲ್ಲಿ ಕೆಲವು ಪೂರ್ವ ಕಾಲದಲ್ಲೇ ಇದ್ದವುಗಳಾಗಿರಬೇಕೆಂಬ ಅಭಿಪ್ರಾಯವೂ ಇದೆ.[೫೬]

ವಿಜಯನಗರ ಕಾಲದಲ್ಲಿ ತುಳುನಾಡಿನ ಭೂಮಿ ನಿರ್ವಹಣಾ ಕ್ರಮ ಉನ್ನತಮಟ್ಟದಾಗಿತ್ತು. ಭೂಕಂದಾಯವನ್ನು ಕಾಲಕ್ಕೆ ತಕ್ಕಂತೆ ಪರಿಷ್ಕರಿಸಲಾಗುತ್ತಿತ್ತು. ಭೂಮಿಯನ್ನು ಕೊಳ್ಳುವ ಮತ್ತು ನಿರ್ವಹಿಸುವ ವಿಧಿವಿಧಾನಗಳನ್ನು ಸಮ್ರಾಟ ನಿರ್ಣಯಿಸುತ್ತಿದ್ದ. ರಾಜ್ಯದ ಭೂಮಿ, ದೇವಾಲಯಗಳ ಭೂಮಿ ಮತ್ತು ಖಾಸಗಿ ವ್ಯಕ್ತಿಗಳ ಭೂಮಿಯನ್ನು ನಾಲ್ಕು ಗಡಿಗಳಿಂದ ಗುರುತಿಸಿ ಅವನ್ನು ಚತುಸ್ಸೀಮೆಯೆಂದು ಕರೆಯಲಾಗುತ್ತಿತ್ತು. ಪೂರ್ಣ ಮೌಲ್ಯ ನೀಡಿ ಪೂರ್ಣ ಹಕ್ಕು ಪಡಕೊಂಡ ಭೂಮಿಯನ್ನು "ಅರ್ಥ' ಪರಿಚ್ಛೇದವಾಗಿಕೊಂಡು, ಮೂಲ ಪರಿಚ್ಛೇದವಾಗಿ ಕೊಟ್ಟದ್ದು ಎಂದು ಶಾಸನಗಳಲ್ಲಿ ಉಲ್ಲೇಖಿಸಲಾಗುತ್ತಿತ್ತು. ಉಡುಗೊರೆಯಾಗಿ ನೀಡಿದ ಭೂಮಿಯನ್ನು ಮೂಲಕ್ರಯದಾನವೆಂದು ಮತ್ತು ಕೊಳ್ಳುವಿಕೆ ಉಳುಮೆ ಹಕ್ಕು ನೀಡಲ್ಪಟ್ಟ ಭೂಮಿಯನ್ನು ನಾಯರು ಮೂಲವೆಂದು ಉಲ್ಲೇಖಿಸಲಾಗಿದೆ. ರಾಜ್ಯ ಮಾತ್ರವಲ್ಲದೆ ವ್ಯಕ್ತಿಗಳು, ದೇವಾಲಯ , ಸೆಟ್ಟಿಕಾರ ಮತ್ತು ಹಲರು ಮುಂತಾದ ವ್ಯಾಪಾರಿ ಸಂಘಟನೆಗಳು ಭೂಮಿಯನ್ನು ಕೊಳ್ಳಬಹುದಾಗಿತ್ತು. ಈ ಸ್ವಾತಂತ್ರ್ಯ ದಿಂದಾಗಿ ಊಳಿಗಮಾನ್ಯ ಪದ್ಧತಿ ನಿಧಾನವಾಗಿ ಶೈಥಲ್ಯವನ್ನು ಕಂಡಿತು.

ವಿಜಯನಗರ ಸಾಮ್ರಾಜ್ಯದ ಅಧಿಪತ್ಯದ ಕಾಲದಲ್ಲಿ ಅಳತೆ ಮತ್ತು ತೂಕದಲ್ಲಿ ದೊಡ್ಡ ಬದಲಾವಣೆಗಳು ಆಗಲಿಲ್ಲ. ಒಣ ಮತ್ತು ದ್ರವ್ಯ ವಸ್ತುಗಳ ಅಳತೆಗೆ ದಕ್ಷಿಣ ಕನ್ನಡದಲ್ಲಿ ಹನೆ ಅಥವಾ ಹನಿ ಎಂಬ ಮಾಪಕ ಬಳಕೆಯಾಗುತ್ತಿತ್ತು. ಭತ್ತ ಅಥವಾ ಅಕ್ಕಿಯನ್ನು ಮಾಪನ ಮಾಡಲು ಮೂಡೆ (ಮುಡಿ) ಎಂಬ ಮಾಪಕವನ್ನು ಉಪಯೋಗಿಸಲಾಗುತ್ತಿತ್ತು. ಈ ಮಾಪಕವು ಎಲ್ಲಾ ಕಡೆ ಒಂದೇ ರೀತಿಯಾಗಿರಲಿಲ್ಲ ಎನ್ನುವುದಕ್ಕೆ ಶಾಸನಗಳಲ್ಲಿ ಆಧಾರ ದೊರೆಯುತ್ತದೆ.[೫೭] ಮುಡಿಯೆಂಬ ಮಾಪಕದ ಜತೆಯಲ್ಲಿ ಖಂಡುಗ ಎಂಬ ಮಾಪಕವನ್ನು ಕೂಡಾ ಬಳಸಲಾಗುತಿತ್ತು. ಹೇರು, ಸೊಲಗೆ, ಕುಡುತೆ, ಪಡಿ ಮತ್ತು ಮಾನ ಇವು ಮುಡಿ ಮತ್ತು ಖಂಡುಗಕ್ಕಿಂತ ಸಣ್ಣ ಮಾಪಕಗಳಾಗಿದ್ದವು. ಮೂವತ್ತು ,ನಲುವತ್ತು,ಐವತ್ತು, ಬಳ್ಳಗಳ ಅಥವಾ ಹನೆಗಳ ಮುಡಿಗಳು ಬಳಕೆಯಲ್ಲಿದ್ದವು. ಒಂದು ಖಂಡುಗವೆಂದರೆ ಇಪ್ಪತ್ತು ಕೊಳಗಗಳು. ಒಂದು ಕೊಳಗವೆಂದರೆ ನಾಲ್ಕು ಬಳ್ಳಗಳು. ಹಾಗಾಗಿ ಒಂದು ಖಂಡುಗವೆಂದರೆ ೮೦ ಬಳ್ಳಗಳು ಅಥವಾ ಸಾಧಾರಣವಾಗಿ ೨ ಮುಡಿಗಳಾಗಿದ್ದವು. ಕ್ರಿ.ಶ.೧೪೫೫ರ ಬಸರೂರು ಶಾಸನದಲ್ಲಿರುವ ಮೂರು ಕೋಲು ನೆಲ, ಹನ್ನೆರಡು ಕೋಲು ಅಗಲದ ಪ್ರಮಾಣಿನ ಹಾದಿ ಇತ್ಯಾದಿ ಉಲ್ಲೇಖಗಳು ಭೂಮಿಯನ್ನು ಕೋಲು ಎಂಬ ಮಾಪಕದ ಮೂಲಕ ಅಳೆಯಲಾಗುತ್ತಿತ್ತು ಎಂಬುದನ್ನು ಸೂಚಿಸುತ್ತವೆ.[೫೮]

ವಿಜಯನಗರ ಅರಸರುಗಳ ಕಾಲದಲ್ಲಿ ವ್ಯಾಪಾರ ಮತ್ತು ವಾಣಿಜ್ಯದ ಹೆಚ್ಚಳದಿಂದಾಗಿ ಹಣ ಚಲಾವಣೆಗೆ ವಿಶೇಷ ಆದ್ಯತೆ ದೊರೆಯಿತು. ಸಾಟಿ ವಿನಿಮಯ ಪದ್ಧತಿಯು (Barter Exchange System) ಮಹತ್ವ ಕಳಕೊಂಡು ತುಳುನಾಡಿನಲ್ಲಿ ಹಣ ವಿನಿಮಯ ಪದ್ಧತಿಯು(Money Exchange system)ಅಸ್ತಿತ್ವಕ್ಕೆ ಬಂತು. ಕಂದಾಯವನ್ನು ಹಣದ ರೂಪದಲ್ಲಿ ಪಾವತಿಸುವ ಕ್ರಮಕ್ಕೆ ಮಹತ್ವ ದೊರೆಯಿತು. ಗದ್ಯಾಣ, ವರಹ, ಹೊನ್ನು ಮತ್ತು ಹಣವೆಂಬ ನಾಣ್ಯಗಳು ಚಲಾವಣೆಗೆ ಬಂದು ಕಾಟಿ ಗದ್ಯಾಣ, ಅರ್ಧಕಾಟಿ ಗದ್ಯಾಣ, ಬಹಿರ್ ಗದ್ಯಾಣ, ಸಣ್ಣ ಪ್ರತಾಪ ಗದ್ಯಾಣ, ದೊಡ್ಡ ವರಹ, ದೊಡ್ಡ ವರಹ ಗದ್ಯಾಣ, ಘಟ್ಟಿ ವರಹ ಇತ್ಯಾದಿ ಪ್ರಭೇದಗಳು ಬಳಕೆಗೆ ಬಂದವು. 'ಕಾಟಿ' ಎಂಬ ಪದವನ್ನು ಇನ್ನೂ ಸರಿಯಾಗಿ ವ್ಯಾಖ್ಯಾನಿಸಲು ಸಾಧ್ಯವಾಗಿಲ್ಲ. ಕಾಟಿ ಗದ್ಯಾಣದ ಅರ್ಧ ಮೌಲ್ಯದ ನಾಣ್ಯವನ್ನು ಅರ್ಧ ಕಾಟಿ ಗದ್ಯಾಣವೆಂದು ಕರೆಯಲಾಗುತ್ತಿತ್ತು. ದಕ್ಷಿಣ ಕನ್ನಡದ ಹೊರಗಿನಿಂದ ಬಂದ ಗದ್ಯಾಣವು ಬಹಿರ್ ಗದ್ಯಾಣವಾದರೆ ರಾಜರೇ ಸ್ವಯಂಮುದ್ರಿಸುವ ಹಣ ಸಣ್ಣ ಪ್ರತಾಪ ಗದ್ಯಾಣವಾಗಿರಬಹುದು.ಅತ್ಯಧಿಕ ಮೌಲ್ಯದ ವರಹವು ದೊಡ್ಡ ವರಹವಾದರೆ ಚಿನ್ನದ ಅಂಶ ಅಧಿಕವಿರುವ ವರಹವು ಗಟ್ಟಿ ವರಹವಾಗಿರಬೇಕು. ಗದ್ಯಾಣ ಮತ್ತು ವರಹಗಳನ್ನು ಒಂದೇ ಅರ್ಥದಲ್ಲಿ ವರಹ ಗದ್ಯಾಣವೆಂಬ ಪದದ ಮೂಲಕ ಬಳಸಿದ ಉದಾಹರಣೆಗಳಿವೆ.ಹೊನ್ನು ಎನ್ನುವುದು ವರಹ ಅಥವಾ ಗದ್ಯಾಣದ ಇನ್ನೊಂದು ಹೆಸರಾಗಿತ್ತು. ಹಣವು ಗದ್ಯಾಣಕ್ಕಿಂತ ಕಡಿಮೆ ಮೌಲ್ಯದ ನಾಣ್ಯವಾಗಿತ್ತು.[೫೬]

ವಾಣಿಜ್ಯ ವಿಸ್ತರಣೆಯಿಂದಾಗಿ ಉದರಿ ವ್ಯವಹಾರಗಳು (Credit Transactions) ಅನಿವಾರ್ಯವಾದವು. ಅಂತಹ ವ್ಯವಹಾರಗಳಿಗೆ ನಿಗದಿತ ಬಡ್ಡಿಯೂ ಇರುತ್ತಿತ್ತು.ಕೆಲವೊಮ್ಮೆ ಯಾವುದೇ ಜಾಮೀನು ಇಲ್ಲದೆ ಸಾಲ ವ್ಯವಹಾರ ನಡೆಯುತ್ತಿತ್ತು. ಭೂಮಿಯನ್ನು ಅಡವು ಇಡದೆ ಪಡೆಯುವ ಸಾಲವು ಮೈಸಾಲ ಎಂದು ಕರೆಸಿಕೊಳ್ಳುತ್ತಿತ್ತು. ಸಾಲದ ಬಡ್ಡಿಯನ್ನು ವಸ್ತು ರೂಪದಲ್ಲಿ ಸ್ವೀಕರಿಸಲಾಗುತ್ತಿತ್ತು ಎನ್ನುವುದನ್ನು ಕ್ರಿ.ಶ. ೧೪೫೦ ರ ಬಸರೂರು ಶಾಸನವು ಉಲ್ಲೇಖಿಸುತ್ತದೆ.

ವಿಜಯನಗರದ ಸಾಮ್ರಾಜ್ಯದ ಆಡಳಿತಕ್ಕೊಳಪಟ್ಟಿದ್ದ ದ.ಕ. ಜಿಲ್ಲೆಯ ಆರ್ಥಿಕ ಬದುಕನ್ನು ಸಂಕ್ಷಿಪ್ತವಾಗಿ ಹೀಗಿತ್ತು:

❖ ದ.ಕಜಿಲ್ಲೆಯನ್ನು ಬಾರಕೂರು ಮತ್ತು ಮಂಗಳೂರು ರಾಜ್ಯಗಳಾಗಿ ವಿಂಗಡಿಸಿ ಇಬ್ಬರು ಪ್ರಧಾನರನ್ನು ನೇಮಿಸಿ ಆಡಳಿತವನ್ನು ಕ್ರಮಬದ್ಧಗೊಳಿಸಲಾಗಿತ್ತು. ಅಧಿಕಾರ

ವಿಕೇಂದ್ರೀಕರಣಕ್ಕಾಗಿ ಇವೆರಡು ರಾಜ್ಯಗಳನ್ನು ಮೂಡಲ, ಸ್ಥಲ, ನಾಡು, ಸೀಮೆ, ಮಾಗಣೆ, ಗ್ರಾಮ, ಊರು, ಚಾವಡಿ ಮತ್ತು ಗುತ್ತು ಎಂಬ ಘಟಕಗಳಾಗಿ ವಿಂಗಡಿಸಲಾಗಿತ್ತು.

❖ ಮಣ್ಣಿನ ಫಲವತ್ತತೆಗೆ ಅನುಗುಣವಾಗಿ ಭೂಮಿಯನ್ನು ವರ್ಗೀಕರಿಸಿ ಗೇಣಿ ನಿಷ್ಕರ್ಷೆ ಮಾಡಲಾಗುತ್ತಿತ್ತು. ಕೃಷಿ ತೆರಿಗೆಯು ಪ್ರಭುತ್ವದ ಪ್ರಮುಖ ಆದಾಯ ಮೂಲವಾಗಿತ್ತು. ಸಾಮಾನ್ಯವಾಗಿ ಹುಟ್ಟುವಳಿಯ ಆರನೇ ಒಂದು ಭಾಗವನ್ನು ರಾಜನಿಗೆ ಕಂದಾಯ ರೂಪದಲ್ಲಿ ರೈತರು ನೀಡಬೇಕಿತ್ತು. ಭೂಕಂದಾಯವನ್ನು ಕಾಲದ ಅವಶ್ಯಕತೆಗೆ ತಕ್ಕಂತೆ ಪರಿಷ್ಕರಿಸಲಾಗುತ್ತಿತ್ತು.

❖ ಪ್ರಭುತ್ವದಿಂದ ಭೂಮಿಯನ್ನು ಶಾಶ್ವತಭೋಗ್ಯಕ್ಕೆ ಪಡಕೊಂಡವನು ಮೂಲಕಾರ, ಗೇಣಿ ಅಥವಾ ಗುತ್ತಿಗೆ ಆಧಾರದಲ್ಲಿ ಪಡಕೊಂಡವನು ಗೇಣಿಕಾರ ಅಥವಾ ಗುತ್ತಿನವ, ದಾನವಾಗಿ ಪಡೆದವನು ವೃತ್ತಿಕಾರ ಎಂದು ಕರೆಯಲ್ಪಡುತ್ತಿದ್ದ. ಈ ಮೂರು ವರ್ಗಗಳು ಒಕ್ಕಲಿಗರು. ಇವರ ಕೈಕೆಳಗೆ ದುಡಿಯುವ ಭೂರಹಿತರನ್ನು ಕೀಳು ಆಳುಗಳು, ಹೆಣ್ಣಾಳುಗಳು ಮತ್ತು ಹೊಲೆಯಾಳುಗಳೆಂದು ವಿಂಗಡಿಸಲಾಗಿತ್ತು.

❖ ಭೂಕಂದಾಯದೊಡನೆ ಖನಿಜ ತೆರಿಗೆ,ಮನೆ ತೆರಿಗೆ,ಜಾನುವಾರು ತೆರಿಗೆ, ಕೃಷಿ ಉಪಕರಣ ತೆರಿಗೆ, ಕೊಯ್ಲು ಭತ್ತ- ಇತ್ಯಾದಿ ತೆರಿಗೆಗಳು ಅಸ್ತಿತ್ವದಲ್ಲಿದ್ದವು. ಅಪರಾಧಗಳಿಗೆ ದಂಡ ವಿಧಿಸಲಾಗುತ್ತಿತ್ತು. ರಾಜನಿಗೆ ಪ್ರತಿವರ್ಷ ಕಾಣಿಕೆ ನೀಡಬೇಕಿತ್ತು.ಆದರೆ ಹಿಂದೆ ಇದ್ದ ಮದುವೆ ತೆರಿಗೆಯನ್ನು ರದ್ದು ಪಡಿಸಲಾಯಿತು.

❖ ತೂಕಕ್ಕೆ ಹನೆ, ಮುಡಿ, ಖಂಡುಗ, ಹೇರು, ಬಳ್ಳ, ಕುಡುತೆ ಮುಂತಾದ ಮಾಪಕಗಳು ಬಳಕೆಯಾಗುತ್ತಿದ್ದವು. ಭೂಮಿಯನ್ನು 'ಕೋಲು'ಎಂಬ ಮಾಪಕದ ಮೂಲಕ ಅಳತೆ ಮಾಡಲಾಗುತ್ತಿತ್ತು. ವರಹ, ಗದ್ಯಾಣ, ಅಥವಾ ಹೊನ್ನು ಎಂಬ ಹಣ ಬಳಕೆಯಲ್ಲಿತ್ತು. ದ.ಕ ಜಿಲ್ಲೆಯ ನಿಧಾನವಾಗಿ ಸಾಟಿ ವಿನಿಮಯ ವ್ಯವಸ್ಥೆಯಿಂದ ಹಣ ವಿನಿಮಯ ವ್ಯವಸ್ಥೆಗೆ ತನ್ನನ್ನು ಒಡ್ಡಿಕೊಂಡಿತ್ತು. ಸಾಲ ವ್ಯವಹಾರಗಳು ಅನಿವಾರ್ಯವಾಗತೊಡಗಿದವು. ವ್ಯಾಪಾರಿಗಳು ಪ್ರಬಲರಾಗಿ ವ್ಯಾಪಾರಿ ಸಂಘಗಳು ಅಸ್ತಿತ್ವಕ್ಕೆ ಬಂದವು. ವ್ಯಾಪಾರಿಗಳು ಸಾಮಾಜಿಕ ಬದುಕಿನಲ್ಲಿ ಮಹತ್ತರ ಪಾತ್ರವಹಿಸತೊಡಗಿದವು.

ವಿಜಯನಗರ ಸಾಮ್ರಾಜ್ಯದ ಉತ್ಕರ್ಷ ಕಾಲದಲ್ಲಿ ಅದರ ಬೆಂಬಲದಿಂದ ಕರ್ನಾಟಕದ ಕರಾವಳಿ ತೀರದಲ್ಲಿ ಪ್ರಬಲರಾದ ಪೋರ್ಚುಗೀಸರು ವಿಜಯನಗರದ ಅವನತಿಯ ಕಾಲದಲ್ಲೂ ಬಲಗುಂದಲಿಲ್ಲ. ಅವರು ತುಳುನಾಡಿನ ಬಂದರುಗಳಲ್ಲಿ ಅಧಿಪತ್ಯವನ್ನು ಸ್ಥಾಪಿಸಿ ಸುಂಕ ಸಂಗ್ರಹಿಸುತ್ತಿದ್ದರು. ತುಳುನಾಡಿನಲ್ಲಿ ವಿಜಯನಗರದ ಸಾಮಂತರಾಗಿದ್ದ ಬಂಗ ಮತ್ತು ಚೌಟರಿಂದ ಸುಂಕ ಪಡೆಯುತ್ತಿದ್ದರು. ಸಾಮಂತರುಗಳು ಪೋರ್ಚುಗೀಸರ ಸುಲಿಗೆ ಮತ್ತು ದಬ್ಬಾಳಿಕೆ ಬಗ್ಗೆ ಸಮ್ರಾಟರಲ್ಲಿ ಹೇಳಿಕೊಳ್ಳುವ ಹಾಗಿರಲಿಲ್ಲ.

ವಿಜಯನಗರದ ಸಮ್ರಾಟರು ಪೊರ್ಚುಗೀಸರೊಡನೆ ಅತ್ಯಂತ ನಿಕಟ ಮಿತ್ರತ್ವದಿಂದ ಇದ್ದುದು ಇದಕ್ಕೆ ಕಾರಣವಾಗಿತ್ತು. ಕ್ರಿ.ಶ. ೧೫೪೫ –೧೫೫೬ ರ ಅವಧಿಯಲ್ಲಿ ಎರಡನೇ ಲಕ್ಷ್ಮಪ್ಪ ಬಂಗರಸ ಮಂಗಳೂರಿನಲ್ಲಿ ಮತ್ತು ಅವನ ಮಡದಿ ಅಬ್ಬಕ್ಕದೇವಿ ಉಳ್ಳಾಲದಲ್ಲಿ ವಿಜಯನಗರದ ಸಾಮಂತರಾಗಿ ಆಡಳಿತ ನಡೆಸುತ್ತಿದ್ದರು. ಲಕ್ಷ್ಮಪ್ಪ ಬಂಗರಸನ ಬಳಿಕ ಪಟ್ಟಕ್ಕೆ ಬಂದ ಅವನ ಅಳಿಯ ಮೂರನೇ ಕಾಮರಾಯನು ಅಬ್ಬಕ್ಕದೇವಿಯ ವಿರುದ್ಧ ಪೋರ್ಚುಗೀಸರೊಡನೆ ಕೈಜೋಡಿಸಿ ಅತ್ತೆಯ ರಾಜ್ಯದ ಮೇಲೆ ದಾಳಿ ಮಾಡಿಸಿದನು. ಮೊದಲ ದಾಳಿಯಲ್ಲಿ ಅಬ್ಬಕ್ಕ ವಿಜಯಿಯಾದಳು. ಆದರೆ ಬಳಿಕಿನ ದಾಳಿಗಳಲ್ಲಿ ಪೋರ್ಚುಗೀಸರ ಸುಸಜ್ಜಿತ ಸೇನೆಯನ್ನು ಎದುರಿಸಲು ಸಾಧ್ಯವಾಗದೆ ಅವರೊಡನೆ ಸಂಧಾನ ನಡೆಸಿ ಅವರಿಗೆ ಸುಂಕ ಕೊಡಲೊಪ್ಪಿದಳು.[೬೦] ವ್ಯಾಪಾರ ಮತ್ತು ವಾಣಿಜ್ಯದಲ್ಲಿ ತುಳುನಾಡಿಗಿರುವ ಮಹತ್ವವನ್ನು ಅರ್ಥಮಾಡಿಕೊಂಡ ಇಕ್ಕೇರಿ ನಾಯಕರು ತಮ್ಮ ಅಧಿಕಾರವನ್ನು ತುಳುನಾಡಿಗೆ ವಿಸ್ತರಿಸಲು ನಿಶ್ಚಯಿಸಿದರು. ಅದು ತುಳುನಾಡಿನ ಇತಿಹಾಸದಲ್ಲಿ ಹೊಸದೊಂದು ಅಧ್ಯಾಯದ ಸೃಷ್ಟಿಗೆ ಕಾರಣವಾಯಿತು.

೨.೪ ಇಕ್ಕೇರಿ ನಾಯಕರ ಕಾಲದ ಆರ್ಥಿಕತೆ

ಮೂಲತ: ಶಿವಮೊಗ್ಗ ಜಿಲ್ಲೆಯ ಕೆಳದಿಯ ರಾಜ ಮನೆತನವೊಂದು ಹಂತ ಹಂತವಾಗಿ ಪ್ರವರ್ಧಮಾನಕ್ಕೆ ಬಂದು ಒಂದು ರಾಜ್ಯವನ್ನು ಕಟ್ಟಿ ಆರಂಭದಲ್ಲಿ ಕೆಳದಿ, ಬಳಿಕ ಇಕ್ಕೇರಿ ಮತ್ತು ಅಂತಿಮವಾಗಿ ಬಿದನೂರನ್ನು ರಾಜಧಾನಿಯಾಗಿ ಮಾಡಿಕೊಂಡು ಕರ್ನಾಟಕದ ಅನೇಕ ಭಾಗಗಳನ್ನು ತನ್ನದಾಗಿಸಿಕೊಂಡಿತು. ಚರಿತ್ರೆಯಲ್ಲಿ ಈ ಮನೆತನದವರು ಕೆಳದಿ ನಾಯಕರು, ಇಕ್ಕೇರಿ ನಾಯಕರು ಮತ್ತು ಬಿದನೂರು ನಾಯಕರು ಎಂದು ಕರೆಯಲ್ಪಟ್ಟರು. ಹದಿನಾರನೆಯ ಶತಮಾನದಲ್ಲಿ ಆರಂಭವಾದ ಈ ಮನೆತನ ಸುಮಾರು ಎರಡುವರೆ ಶತಮಾನಗಳ ಆಡಳಿತ ನಡೆಸುವುದರೊಂದಿಗೆ ತುಳುನಾಡನ್ನು ತನ್ನ ಅಧೀನದಲ್ಲಿ ಇಟ್ಟುಕೊಂಡು ಇಲ್ಲಿನ ಆರ್ಥಿಕ ಮತ್ತು ರಾಜಕೀಯ ಬದುಕನ್ನ ಪ್ರಭಾವಿಸಿತು. ಈಗಿನ ಶಿವಮೊಗ್ಗ , ಚಿಕ್ಕಮಗಳೂರು, ಹಾಸನ ಜಿಲ್ಲೆಯ ಕೆಲವು ಭಾಗಗಳು, ಚಿತ್ರದುರ್ಗ ಜಿಲ್ಲೆಯ ಕೆಲವು ಭಾಗಗಳು,ಧಾರವಾಡ , ಉತ್ತರಕನ್ನಡ, ಕೇರಳ ಕಣ್ಣಾನೂರು ಮತ್ತು ದಕ್ಷಿಣ ಕನ್ನಡ ಇವಿಷ್ಟು ಭೂಪ್ರದೇಶಗಳು ವಿಸ್ತಾರವಾದ ಇಕ್ಕೇರಿ ರಾಜ್ಯದ ಪ್ರದೇಶಗಳಾಗಿದ್ದವು. ಇಕ್ಕೇರಿ ಮನೆತನದ ಬಗೆಗಿನ ಇತಿಹಾಸವನ್ನು ಬಸವಪ್ಪ ನಾಯಕನ ಶಿವತತ್ವ ರತ್ನಾಕರ, ಲಿಂಗಣ್ಣ ಕವಿಯ ಕೆಳದಿ ನೃಪ ವಿಜಯ ಮತ್ತು ಆಗಿನ ಕೆಲವು ಶಾಸನಗಳಿಂದ ತಿಳಿದುಕೊಳ್ಳಬಹುದು. ಪೋರ್ಚುಗೀಸರ ದಾಖಲೆಗಳು, ಪೆಟ್ರೊಡೆಲವಿಲ್ಲೆ, ಪೀಟರ್ ಮಂಡಿ, ಅಲೆಗ್ಸಾಂಡರ್ ಹ್ಯಾಮಿಲ್ಟನ್

ಮೊದಲಾದ ವಿದೇಶಿ ಪ್ರವಾಸಿಗರ ಬರವಣಿಗೆಗಳು ಇಕ್ಕೇರಿ ನಾಯಕರ ಇತಿಹಾಸದ ಮೇಲೆ ಬೆಳಕು ಚೆಲ್ಲುತ್ತವೆ.[೬೧]

ಇಕ್ಕೇರಿ ನಾಯಕರ ಮೂಲಪುರುಷ ಚೌಡಗೌಡನು (ಕ್ರಿ.ಶ. ೧೫೦೦-೧೫೩೦) ವಿಜಯನಗರದ ಸಮ್ರಾಟ ಕೃಷ್ಣದೇವರಾಯನ ಮೆಚ್ಚುಗೆಯ ಸಾಮಂತನಾಗಿದ್ದು ಸಮ್ರಾಟನ ಕೃಪಾಶ್ರಯದಲ್ಲಿ ಕೆಳದಿ ನಾಯಕನಾಗಿ ಪೀಠಾರೋಹಣ ಮಾಡಿದನು. ವಿಜಯನಗರ ಸಾಮ್ರಾಜ್ಯವು ಬಲಗುಂದಿದ ಮೇಲೆ ಕೆಳದಿಯು ಸ್ವತಂತ್ರ ರಾಜ್ಯವಾಯಿತು. ಚೌಡಗೌಡನ ಮಗ ಸದಾಶಿವನಾಯಕ (ಕ್ರಿ.ಶ.೧೫೩೦-೧೫೬೬) ವಿಜಯನಗರದ ಪರವಾಗಿ ದಂಡಯಾತ್ರೆ ಕೈಗೊಂಡು ದಿಗ್ವಿಜಯಿಯಾಗಿದ್ದ ಅವನ ವೀರತ್ವಕ್ಕೆ ಮೆಚ್ಚಿ ತುಳುನಾಡಿನ ಮೇಲುಸ್ತುವಾರಿಯ ಜವಾಬ್ದಾರಿಯನ್ನು ವಿಜಯನಗರದ ಸಮ್ರಾಟನು ಸದಾಶಿವ ನಾಯಕನಿಗೆ ವಹಿಸಿಕೊಟ್ಟಿದ್ದ. ಸದಾಶಿವ ನಾಯಕನ ಕಾಲಕ್ಕೆ ಕೆಳದಿಯು ಸ್ವತಂತ್ರ ರಾಜ್ಯವಾಯಿತು. ಕೆಳದಿಯ ಬಲಿಷ್ಠ ಅರಸ ಒಂದನೆಯ ವೆಂಕಟಪ್ಪನಾಯಕನ ಕಾಲದಲ್ಲಿ (ಕ್ರಿ.ಶ. ೧೫೮೨-೧೬೨೯) ಕೆಳದಿಯ ಸೇನೆ ತುಳುನಾಡಿಗೆ ಬರಬೇಕಾದ ಸನ್ನಿವೇಶ ಸೃಷ್ಟಿಯಾಯಿತು. ದೊಡ್ಡ ಸೈನ್ಯದೊಡನೆ ತುಳುನಾಡಿಗೆ ನುಗ್ಗಿದ ವೆಂಕಟಪ್ಪ ನಾಯಕನು ಪೋರ್ಚುಗೀಸರನ್ನು ರಾಣಿ ಅಬ್ಬಕ್ಕನ ಸಹಾಯದಿಂದ ಎದುರಿಸಿ ಎರಡು ಬಾರಿ ಸೋತನು. ಮೂರನೆಯ ಪ್ರಯತ್ನದಲ್ಲಿ ಜಯಶಾಲಿಯಾದ ವೆಂಕಟಪ್ಪನಾಯಕನು ಪೋರ್ಚುಗೀಸರನ್ನು ಸೋಲಿಸಿ ಮಂಗಳೂರಲ್ಲಿ ಬಂಗರಸನನ್ನು ಇಕ್ಕೇರಿಯ ಸಾಮಂತನನ್ನಾಗಿ ಮರಳಿ ಪ್ರತಿಷ್ಠಾಪಿಸಿದನು.[೬೨] ತುಳುನಾಡಿನ ರಾಜರುಗಳೊಡನೆ ಒಪ್ಪಂದ ಮಾಡಿಕೊಂಡು ತುಳುವವನ್ನು ಕೆಳದಿಯ ಅಧೀನ ರಾಜ್ಯವನ್ನಾಗಿಸಿ ಬಾರಕೂರು, ಕಲ್ಯಾಣಪುರ, ಮಲ್ಲಿಕಾರ್ಜುನಗಿರಿ, ಕಂಡಲೂರು, ಕಾರ್ಕಳ, ಮೂಲ್ಕಿ, ಕೊಡಿಯಾಲ, ಮೂಡಬಿದಿರೆ, ಉಳ್ಳಾಲ, ಮಂಜೇಶ್ವರ,ಕುಂಬಳೆ, ಕಾಸರಗೋಡು, ಪಣಿಯಾಲ,ಕುಂಡಕುಯಿ,ಬಂದ್ಯಡ್ಕ, ಕಾಂತಮಂಗಲ, ಬೆಳ್ಳಾರೆ,ಶಿಶಿಲ, ಪುದುಬೆಟ್ಟು, ಕೊಲ್ಲೂರು, ಬಾಚಿ, ಕಿದೂರುಗಳಲ್ಲಿ ಕೋಟೆಗಳನ್ನು ನಿರ್ಮಿಸಿ ರಾಮರಾಜ ಕ್ಷತ್ರಿಯ ಎಂಬ ಸಮುದಾಯದ ಜನರನ್ನು ಕಾವಲಿಗಿರಿಸಿ ಹೊಸ ವ್ಯವಸ್ಥೆಯನ್ನು ಹುಟ್ಟುಹಾಕಿದ. ವಿದೇಶಿ ವ್ಯಾಪಾರದಲ್ಲಿ ಪೋರ್ಚುಗೀಸರ ಮಹತ್ವವನ್ನು ಮನಗಂಡು ಅವರೊಡನೆ ಒಪ್ಪಂದ ಮಾಡಿಕೊಂಡ. ತುಳುನಾಡಿನ ಪ್ರಮುಖ ಸ್ಥಳಗಳಲ್ಲಿ ಜಂಗಮ ಮಠಗಳನ್ನು ಸ್ಥಾಪಿಸಿ ವೀರಶೈವ ಮತವನ್ನು ಜಿಲ್ಲೆಯಲ್ಲಿ ಪ್ರತಿಷ್ಠಾಪಿಸುವ ಯತ್ನ ಮಾಡಿದ. ಕ್ರಿ. ಶ. ೧೬೧೮ ರಲ್ಲಿ ಅವನು ತುಳುನಾಡಿನ ಸಾಮಂತರು ಕೊಡಬೇಕಾದ ತೆರಿಗೆಯನ್ನು ಶೇಕಡಾ ೫೦ ರಷ್ಟು ಹೆಚ್ಚಿಸಿ ಜಿಲ್ಲೆಯಲ್ಲಿ ಹೊಸ ಸಂಚಲನಕ್ಕೆ ಕಾರಣನಾದ. ವೆಂಕಟಪ್ಪ ನಾಯಕನಿಂದಾಗಿ ತುಳುನಾಡು ಸಂಪೂರ್ಣವಾಗಿ ಕೆಳದಿ ಸಂಸ್ಥಾನದ ಒಂದು ಭಾಗವಾಗಿ ಬಿಟ್ಟಿತು.[೬೩]

ವೆಂಕಟಪ್ಪ ನಾಯಕನ ಮೊಮ್ಮಗ ವೀರಭದ್ರ ನಾಯಕನ [ಕ್ರಿ.ಶ. ೧೬೨೯-೧೬೪೫] ಆಡಳಿತ ಕಾಲದಲ್ಲಿ ಬಿದನೂರನ್ನು ರಾಜಧಾನಿಯನ್ನಾಗಿ ಮಾಡಿಕೊಂಡುದರಿಂದ [೧೬೩೯] ಇಕ್ಕೇರಿ ನಾಯಕರುಗಳು ಬಿದನೂರು ನಾಯಕರೆಂಬ ಅಭಿದಾನಕ್ಕೆ ಪಾತ್ರರಾದರು. ವೀರಭದ್ರ ನಾಯಕನಿಗೆ ಮಕ್ಕಳಿರದ ಕಾರಣ ಅವನ ಸಂಬಂಧಿಯಾದ ಶಿವಪ್ಪನಾಯಕ ಇಕ್ಕೇರಿ ರಾಜ್ಯಾಡಳಿತದ ಸೂತ್ರವನ್ನು ಹಿಡಕೊಂಡನು. ಇವನು ಇಕ್ಕೇರಿ ನಾಯಕರುಗಳಲ್ಲಿ ತನ್ನ ಶೌರ್ಯ ಮತ್ತು ಆಡಳಿತ ಕ್ರಮದಿಂದಾಗಿ ಅತ್ಯಂತ ಪ್ರಸಿದ್ಧನಾದವನು. ತುಳುನಾಡಿನ ಆಡಳಿತವನ್ನು ಸಮರ್ಪಕವಾಗಿ ವ್ಯವಸ್ಥಿತಗೊಳಿಸಿದ್ದು ಅವನ ಸಾಧನೆಗಳಲ್ಲೊಂದು. ಪ್ರವಾಸಿ ತಾಣವಾಗಿ ಈಗಲೂ ಆಕರ್ಷಣೆ ಉಳಿಸಿಕೊಂಡಿರುವ ಕಾಸರಗೋಡು ಸಮೀಪದ ಬೇಕಲಕೋಟೆಯನ್ನು ಇವನು ನಿರ್ಮಿಸಿದ. ತುಳುನಾಡಿನಲ್ಲಿ ಅತ್ಯಂತ ಪ್ರಬಲನಾಗಿದ್ದ ಕಾರ್ಕಳದ ಭೈರರಸ ಒಡೆಯನನ್ನು ಸೋಲಿಸಿದ ಬಳಿಕ ಶಿವಪ್ಪನಾಯಕನಿಗೆ ಬೇರೆ ಎದುರಾಳಿಗಳೇ ಇರಲಿಲ್ಲ. ಆತ ವೆಂಕಟಪ್ಪ ನಾಯಕನ ಕಂದಾಯ ನೀತಿಯನ್ನು ಮುಂದುವರಿಸಿದ್ದರಿಂದ ಹೊಸ ಸಮಸ್ಯೆಗಳು ತುಳುನಾಡಿನಲ್ಲಿ ತಲೆದೋರಲಿಲ್ಲ. ಆದರೆ ಪೋರ್ಚುಗೀಸರ ತಂಟೆ ತಕರಾರುಗಳು ಹೆಚ್ಚಾದವು. ಪರಿಣಾಮವಾಗಿ ಕ್ರಿ.ಶ. ೧೬೫೨ ಮತ್ತು ೧೬೫೩ ರಲ್ಲಿ ಪೋರ್ಚುಗೀಸರ ಮತ್ತು ಶಿವಪ್ಪನಾಯಕನ ನಡುವೆ ಯುದ್ಧ ನಡೆದು ಅವನು ಜಯಶಾಲಿಯಾಗಿ ಪೋರ್ಚುಗೀಸರ ಭದ್ರಕೋಟೆಗಳನ್ನು ವಶಪಡಿಸಿಕೊಂಡು ಕರಾವಳಿ ಕರ್ನಾಟಕದ ಅನಭಿಷಕ್ತ ಸಮ್ರಾಟನೆನಿಸಿದ. ಅಲ್ಲದೆ ತನ್ನ ವಿಜಯದ ಕುರುಹಿಗೆ ಶಿವಪಾರ್ವತಿಯರ ಚಿತ್ರವಿರುವ ಚಿನ್ನದ ನಾಣ್ಯಗಳನ್ನು ಚಲಾವಣೆಗೆ ತಂದ.[೬೪]

ಆದರೆ ಮೊದಲನೆ ಸೋಮಶೇಖರ ನಾಯಕನ ಕಾಲದಲ್ಲಿ [ಕ್ರಿ.ಶ. ೧೬೬೩-೧೬೭೧] ಮತ್ತೆ ಪೋರ್ಚುಗೀಸರು ಪ್ರಬಲರಾಗಿ ಉಪಟಳ ಹೆಚ್ಚಿಸತೊಡಗಿದರು. ಅವರನ್ನು ಮಟ್ಟ ಹಾಕಲು ಸಾಧ್ಯವಾಗದ ಕಾರಣ ಸೋಮಶೇಖರ ನಾಯಕ ಪೋರ್ಚುಗೀಸರೊಡನೆ ಒಪ್ಪಂದ ಮಾಡಿಕೊಳ್ಳುವುದು ಅನಿವಾರ್ಯವಾಯಿತು. ಕ್ರಿ.ಶ. ೧೬೭೧ ರ ಇಕ್ಕೇರಿ - ಪೋರ್ಚುಗೀಸ್ ಒಪ್ಪಂದದ ಪ್ರಕಾರ ಸೋಮಶೇಖರ ನಾಯಕ ಹೊನ್ನಾವರ, ಮಂಗಳೂರು ಮತ್ತು ಬಸರೂರುಗಳಲ್ಲಿ ಪೋರ್ಚುಗೀಸರಿಗೆ ಕೋಟೆಗಳನ್ನಲ್ಲದೆ ಕಾರ್ಖಾನೆಗಳನ್ನು ಕಟ್ಟಲು ಮತ್ತು ಕರಾವಳಿ ಬಂದರುಗಳಿಗೆ ಪೋರ್ಚುಗೀಸರ ಹಡಗುಗಳ ಮುಕ್ತ ಪ್ರವೇಶಕ್ಕೆ ಅನುಮತಿ ನೀಡಬೇಕಾಯಿತು. ಆದರೆ ಪೋರ್ಚುಗೀಸರು ಸ್ಥಳೀಯ ಜನರೊಡನೆ ಮುಕ್ತವಾಗಿ ಬೆರೆಯುವುದನ್ನು ನಿಷೇಧಿಸಲಾಯಿತ್ತು.[೬೫] ಈ ನಿಷೇಧ ಇಲ್ಲದಿರುತ್ತಿದ್ದರೆ ಪ್ರಾಯಃ ಪೋರ್ಚುಗೀಸರು ತುಳುನಾಡನ್ನು ಪೂರ್ತಿಯಾಗಿ ತಮ್ಮದಾಗಿಸಿಕೊಂಡು ಇಂಗ್ಲೀಷರಿಗಿಂತ

ಮೊದಲೇ ವಸಾಹತುಶಾಹಿ ಆಡಳಿತದ ಅನುಭವವನ್ನು ಈ ಜಿಲ್ಲೆಗೆ ನೀಡುವ ಎಲ್ಲಾ ಸಾಧ್ಯತೆಗಳಿದ್ದವು.

ಇಕ್ಕೇರಿ ನಾಯಕರಲ್ಲಿ ಮೊದಲನೇ ಸೋಮಶೇಖರ ನಾಯಕನ ಪತ್ನಿ ಕೆಳದಿ ಚೆನ್ನಮ್ಮಾಜಿಯನ್ನು (ಕ್ರಿ.ಶ. ೧೬೭೧-೯೭)ತುಳುನಾಡಿನ ಇತಿಹಾಸದಲ್ಲಿ ವಿಶೇಷವಾಗಿ ಉಲ್ಲೇಖಿಸಲಾಗುತ್ತದೆ. ಇವಳು ಮೈಸೂರು ಮಹಾರಾಜರ ವಿರುದ್ಧ ಕಾದಿದವಳು. ಶಿವಾಜಿಯ ಮಗ ರಾಜಾರಾಮನಿಗೆ ಆಶ್ರಯ ನೀಡಿ ಔರಂಗಜೇಬನ ಸೈನ್ಯವನ್ನು ಸೋಲಿಸಿ ಓಡಿಸಿದವಳು. ಪತಿಸೋಮಶೇಖರ ನಾಯಕ ತನ್ನ ಪ್ರಜೆಗಳಿಂದಲೇ ಕೊಲೆಯಾದಾಗ ಅನಿವಾರ್ಯವಾಗಿ ಪಟ್ಟವೇರಬೇಕಾಗಿ ಬಂದ ಚೆನ್ನಮ್ಮಾಜಿ ತುಳುನಾಡಿನ ಆರ್ಥಿಕತೆಯ ಮೇಲೂ ಪ್ರಭಾವ ಬೀರಿದ್ದಳು. ಪೋರ್ಚುಗೀಸರೊಡನೆ ಕ್ರಿ.ಶ. ೧೬೭೮ ರಲ್ಲಿ ಅವಳು ಮಾಡಿಕೊಂಡ ಒಪ್ಪಂದದ ಪ್ರಕಾರ ಕರಾವಳಿಯಲ್ಲಿ ಕೆಲವೆಡೆ ಚರ್ಚುಗಳನ್ನು ನಿರ್ಮಿಸಲು ಪೋರ್ಚುಗೀಸರಿಗೆ ಅನುಮತಿ ನೀಡಲಾಯಿತು.[೬೬] ವಿಜಯನಗರದ ಅರಸರ ಕೃಪಾಕಟಾಕ್ಷದಿಂದ ಸುಪುಷ್ಟವಾಗಿ ಬೆಳೆದಿದ್ದ ಪೋರ್ಚುಗೀಸರ ವ್ಯಾಪಾರ ವಾಣಿಜ್ಯ ಚಟುವಟಿಕೆಗಳು ಇಕ್ಕೇರಿ ನಾಯಕರ ಆಡಳಿತ ಕಾಲದಲ್ಲಿ ಇನ್ನಷ್ಟು ಉತ್ಕರ್ಷವನ್ನು ಕಂಡುದಲ್ಲದೆ ಕರಾವಳಿಯಲ್ಲಿ ಅರಬರ ಮಹತ್ವ ಅಳಿಸಿಹೋಯಿತು. ಇದರಿಂದ ಕುಪಿತರಾದ ಅರಬರು ಮಂಗಳೂರು ಮತ್ತು ಬಸರೂರನ್ನು ಮುತ್ತಿ, ಲೂಟಿ ಮಾಡಿ, ಬೃಹತ್ಪ್ರಮಾಣದ ಹಣ ಮತ್ತು ಚಿನ್ನವನ್ನು ದೋಚಿ ಇವೆರಡು ನಗರಗಳಿಗೆ ಬೆಂಕಿ ಇಟ್ಟು ಭೀಕರ ಅಗ್ನಿಪ್ರಳಯ ಉಂಟು ಮಾಡಿದರು. ಅರಬ್ ಮತ್ತು ಪೋರ್ಚುಗೀಸರ ನಡುವಣ ವೈಮನಸ್ಸು ಅನೇಕ ಸಂಘರ್ಷಗಳಿಗೆ ಕಾರಣವಾಯಿತು. ಇಕ್ಕೇರಿಯ ಮೊದಲನೆಯ ಬಸವಪ್ಪನಾಯಕ (ಕ್ರಿ.ಶ. ೧೬೯೭–ಕ್ರಿ.ಶ. ೧೭೧೪)ಮತ್ತು ಎರಡನೆಯ ಬಸವಪ್ಪನಾಯಕನ (ಕ್ರಿ.ಶ. ೧೭೩೯- ಕ್ರಿ.ಶ. ೧೭೫೪) ಆಡಳಿತ ಕಾಲದಲ್ಲಿ ಪೋರ್ಚುಗೀಸರು ಮತ್ತಷ್ಟು ಪ್ರಬಲರಾದರು. ಅವರನ್ನು ನಿಯಂತ್ರಿಸಿ ಸಂಪೂರ್ಣವಾಗಿ ಹದ್ದುಬಸ್ತಿನಲ್ಲಿಡಲು ಇಕ್ಕೇರಿ ನಾಯಕರಿಂದ ಸಾಧ್ಯವಾಗದೇ ಹೋಯಿತು. ರಾಣಿ ವೀರಮ್ಮಾಜಿಯ ಆಡಳಿತ ಅವಧಿಯಲ್ಲಿ (ಕ್ರಿ.ಶ. ೧೭೫೭-ಕ್ರಿ.ಶ. ೧೭೬೩) ಕಣ್ಣಾನೂರಿನ ಆಲಿ ರಾಜ ಕರಾವಳಿ ಕರ್ನಾಟಕವನ್ನು ಸೂರೆ ಮಾಡಿಬಿಟ್ಟ.[೬೭] ಅಲ್ಲಿಗೆ ಕರಾವಳಿ ಕರ್ನಾಟಕ ಮೇಲಣ ಇಕ್ಕೇರಿ ನಾಯಕರ ಹಿಡಿತ ಸಡಿಲವಾಯಿತು.

ಕೆಳದಿ (ಇಕ್ಕೇರಿ) ನಾಯಕರ ಆಡಳಿತದ ಅವಧಿಯಲ್ಲಿ ದಕ್ಷಿಣ ಕನ್ನಡದ ಆರ್ಥಿಕತೆಯ ಮೇಲೆ ಆದ ಪರಿಣಾಮಗಳಿವು:

❖ವೆಂಕಟಪ್ಪನಾಯಕ ಆಡಳಿತದ ಸುಭದ್ರತೆಗಾಗಿ ತುಳುನಾಡಿನ ಆಯಕಟ್ಟಿನ ಸ್ಥಳಗಳಲ್ಲಿ ಕೋಟೆಗಳನ್ನು ನಿರ್ಮಿಸಿದ.ಅವುಗಳ ನಿರ್ಮಾಣ ಮತ್ತು ಅನುರಕ್ಷಣೆಗಾಗಿ ಸರ್ಕಾರ ತುಂಬಾ ಹಣ ವೆಚ್ಚ ಮಾಡಬೇಕಾಗಿ ಬಂದುದರಿಂದ ಕಂದಾಯ ಮೂಲಗಳನ್ನು ವಿಸ್ತರಿಸಬೇಕಾದ ಅನಿವಾರ್ಯತೆ ಉಂಟಾಯಿತು.ಅವನು ವಿಜಯನಗರ ಕಾಲದ ಕಂದಾಯ ವ್ಯವಸ್ಥೆಯನ್ನು ಪರಿಷ್ಕರಿಸಿದ. ಭೂಕಂದಾಯದ ಪರಿಷ್ಕರಣದ ಜೊತೆಗೆ ತೆಂಗಿನ ಮರ ಮತ್ತು ಇತರ ಫಲ ವೃಕ್ಷಗಳ ಮೇಲೆ ಕಂದಾಯ ಹೇರಿ ಬೊಕ್ಕಸಕ್ಕೆ ಸಾಕಷ್ಟು ಆದಾಯ ಹರಿದು ಬರುವಂತೆ ನೋಡಿಕೊಂಡ.

❖ಶಿವಪ್ಪ ನಾಯಕ ತುಳುವಕ್ಕೆ ಸುವ್ಯವಸ್ಥಿತ ಆಡಳಿತ ಪದ್ಧತಿಯನ್ನು ನೀಡಿದ. 'ಶಿವಪ್ಪ ನಾಯಕನ ಶಿಸ್ತು' ಎಂಬ ಅವನ ಕಂದಾಯ ವ್ಯವಸ್ಥೆಯು ಪ್ರಜೆಗಳಿಗೆ ಅನುಕೂಲಕರವಾಗಿತ್ತಲ್ಲದೆ ಸರ್ಕಾರಿ ಬೊಕ್ಕಸಕ್ಕೆ ನಿರಂತರವಾಗಿ ಆದಾಯ ಹರಿದು ಬರುವಂತೆ ಮಾಡಿತ್ತು. ಅವನು ಮಣ್ಣಿನ ಫಲವತ್ತತೆಯ ಆಧಾರದಲ್ಲಿ ಭೂಮಿಯನ್ನು ಐದು ವಿಭಾಗಗಳಾಗಿ ವರ್ಗೀಕರಿಸಿ ಕಂದಾಯ ನಿರ್ಣಯ ಮಾಡುವ ಕ್ರಮವನ್ನು ಜಾರಿಗೆ ತಂದನು. ಭೂಮಿಯ ವಿಸ್ತೀರ್ಣ, ಮಣ್ಣಿನ ಫಲವತ್ತತೆ, ಬಿತ್ತನೆಯ ಬೀಜಗಳ ಬೆಲೆ. ಕೃಷಿ ಕಾರ್ಯಗಳ ವೆಚ್ಚ ಮತ್ತು ಒಟ್ಟು ಉತ್ಪತ್ತಿಯನ್ನು ಪರಿಗಣಿಸಿ ಕಂದಾಯ ನಿರ್ಣಯಿಸುವ ಅತ್ಯಂತ ವೈಜ್ಞಾನಿಕ ವಿಧಾನವು "ಶಿವಪ್ಪನಾಯಕನ ಶಿಸ್ತು' ಎಂದು ತುಳುನಾಡಿನ ಇತಿಹಾಸದಲ್ಲಿ ದಾಖಲಾಗಿದೆ. ಕಂದಾಯ ನಿರ್ಣಯಕ್ಕೆ ವರ್ಷಗಳ ಉತ್ಪತ್ತಿಯನ್ನು ಮತ್ತು ಸರಾಸರಿ ಬೆಲೆಗಳನ್ನು ಪರಿಗಣಿಸಿ ಪ್ರತಿವರ್ಷದ ಸರಾಸರಿ ಬೆಲೆಯ ಮೂರನೆಯ ಒಂದು ಭಾಗವನ್ನು ಸರ್ಕಾರದ ಪಾಲೆಂದು ಪರಿಗಣಿಸಲಾಗುತ್ತಿತ್ತು.[೬೮]

❖ ಶಿವಪ್ಪನಾಯಕನು ಅಡಿಕೆ ಮರಗಳ ಮೇಲೂ ತೆರಿಗೆ ವಿಧಿಸಿದನು.ಮಲೆನಾಡಿನಲ್ಲಿ ಅಡಿಕೆ ಪ್ರಮುಖ ಬೆಳೆಯಾಗಿದ್ದುದು ಇದಕ್ಕೆ ಕಾರಣವಾಗಿರಬೇಕು.ರಾಜನಾದರೂ ಶಿವಪ್ಪನಾಯಕನು ಸ್ವತಃ ಅಡಿಕೆ ಬೆಳೆಗಾರನಾಗಿ ಪಡೆದ ಅನುಭವವು ಅಡಿಕೆ ಮರದ ಮೇಲಣ ತೆರಿಗೆಗೆ ವೈಜ್ಞಾನಿಕ ತಳಹದಿಯನ್ನು ಒದಗಿಸಿರಬೇಕು. ಒಂದು ಸಾವಿರ ಅಡಿಕೆ ಮರಗಳನ್ನು ಒಂದು ಘಟಕವಾಗಿ ಪರಿಗಣಿಸಿ ತೆರಿಗೆ ಹೇರುವ ಕ್ರಮವೊಂದನ್ನು ಶಿವಪ್ಪನಾಯಕನು ಅನುಷ್ಠಾನಗೊಳಿಸಿದನು.[೬೯]

❖ಇಕ್ಕೇರಿಯ ವೀರಮಹಿಳೆ ಚೆನ್ನಮ್ಮಾಜಿಯ ಕಾಲದಲ್ಲಿ ಕಂದಾಯವನ್ನು ಒಂದು ಆಣೆ ಹೆಚ್ಚಿಸಲಾಯಿತು. ಚೆನ್ನಮ್ಮಾಜಿಯು ತನ್ನ ಮಗನ ಮದುವೆಗೆ ಸಂಪನ್ಮೂಲಗಳನ್ನು ಕ್ರೋಢೀಕರಿಸುವ ಉದ್ದೇಶದಿಂದ ಕಂದಾಯವನ್ನು ಏರಿಸಿದಳು.

❖ಬಸಪ್ಪ ನಾಯಕನ ಕಾಲದಲ್ಲಿ ಜಂಗಮ ಮಠಗಳು ಅನ್ನದಾಸೋಹ ಕೇಂದ್ರಗಳಾಗಿ ಪರಿವರ್ತನೆ ಹೊಂದಿದವು. ಅದಕ್ಕಾಗಿ ಅವನು ಕಂದಾಯವನ್ನು ಹೆಚ್ಚಿಸಬೇಕಾಗಿ ಬಂತು. ಅನ್ನ ದಾಸೋಹಕ್ಕಾಗಿ ಪ್ರತಿ ಹತ್ತು ರೂಪಾಯಿ ಕಂದಾಯದ ಮೇಲೆ ಒಂದಾಣೆ ಮೇಲ್ತೆರಿಗೆಯಾಗಿ ಹೇರಲ್ಪಟ್ಟಿತು.

❖ ವೀರಮ್ಮಾಜಿಯ ಕಾಲದಲ್ಲಿ ಇಕ್ಕೇರಿ ರಾಜ್ಯದ ಸಮಸ್ಯೆಗಳು ಉಲ್ಬಣಗೊಂಡು ಕಂದಾಯವನ್ನು ಮತ್ತಷ್ಟು ಹೆಚ್ಚಿಸುವ ಅನಿವಾರ್ಯತೆ ಉಂಟಾಯಿತು. ಆಕೆ ನಿತ್ಯಕಂದಾಯದೊಡನೆ ಶೇ ೫೦ ರಷ್ಟು ಹೆಚ್ಚು ಕಂದಾಯ ಹೇರಿ ಪ್ರಜೆಗಳು ವಾರ್ಷಿಕ ನಾಲ್ಕು ಕಂತುಗಳಲ್ಲಿ ಸರ್ಕಾರಕ್ಕೆ ಕಂದಾಯವನ್ನು ಪಾವತಿ ಮಾಡುವ ವ್ಯವಸ್ಥೆಯೊಂದನ್ನು ರೂಪಿಸಿದಳು.[೨೦]

ವಿಜಯನಗರದ ಆಡಳಿತದ ಕಾಲದಲ್ಲಿ ಸರ್ಕಾರದ ಕಂದಾಯ ಗಳಿಕೆಯಲ್ಲಿ ಬ್ರಾಹ್ಮಣರಿಗೆ ಬ್ರಹ್ಮಾದಾಯ ಸಲ್ಲುತ್ತಿತ್ತು. ಇಕ್ಕೇರಿ ಆಡಳಿತ ಕಾಲದಲ್ಲಿ ಬ್ರಹ್ಮಾದಾಯವನ್ನು ಜಂಗಮ ಮಠಗಳಿಗೂ ವಿಸ್ತರಿಸುವ ವ್ಯವಸ್ಥೆ ಜಾರಿಗೆ ಬಂತು. ಈ ಅವಧಿಯಲ್ಲಿ ಪೋರ್ಚುಗೀಸರು ಪ್ರಬಲರಾಗಿ ಗೋವೆಯಲ್ಲಿ ಕೊಂಕಣಿಗರನ್ನು ಕ್ರೈಸ್ತ ಮತಾನುಯಾಯಿಗಳಾಗಿ ಪರಿವರ್ತಿಸುವ ಮತಾಂತರ ಕ್ರಿಯೆ ಆರಂಭವಾಯಿತು. ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಮತಾಂತರಗಳಾದವು. ಬಡ ಬಗ್ಗರು ಪೋರ್ಚುಗೀಸ್ ಧರ್ಮ ಪ್ರಚಾರಕರ ಉಪದೇಶಗಳಿಗೆ ಸುಲಭವಾಗಿ ಬಲಿಯಾದರು. ಶ್ರೀಮಂತ ಮತ್ತು ಮಧ್ಯಮವರ್ಗದ ಕೊಂಕಣಿಗಳು ಗೋವೆಯಿಂದ ತುಳುನಾಡಿಗೆ ವಲಸೆ ಬರತೊಡಗಿದರು. ಮೂಲತಃ ಸಾರಸ್ವತರಾಗಿದ್ದು ಕ್ರೈಸ್ತರಾಗಿ ಮತಾಂತರಗೊಂಡ ಗೋವನ್ನರು ತುಳುನಾಡಿಗೆ ವಲಸೆ ಬಂದು ಕೃಷಿ ವೃತ್ತಿಯನ್ನು ಕೈಗೊಂಡರು. ಮತಾಂತರಕ್ಕೆ ಹೆದರಿ ಗೋವಾದಿಂದ ಪಲಾಯನ ಮಾಡಿದವರು ವ್ಯಾಪಾರ ವೃತ್ತಿಯಿಂದ ತುಳು ನಾಡಿನಲ್ಲಿ ಹೊಸ ಬದುಕನ್ನು ಕಂಡುಕೊಂಡರು. ಪೋರ್ಚುಗೀಸರ ಮತಾಂತರ ಕ್ರಿಯೆಯನ್ನು ಹೇಗೆ ತಡೆಗಟ್ಟುವುದೆಂದು ಹೊಳೆಯದ ಇಕ್ಕೇರಿ ಆಡಳಿತಗಾರರು ತಮ್ಮ ಧರ್ಮ ರಕ್ಷಣೆಗೆ ಹೆಚ್ಚು ಮಹತ್ವವನ್ನು ನೀಡಬೇಕಾಗಿ ಬಂತು. ಭಾವನಾತ್ಮಕ ವಿಷಯಗಳು ಮುನ್ನೆಲೆಗೆ ಬಂದು ರಾಜ್ಯ ರಕ್ಷಣೆ ಮತ್ತು ಅಭಿವೃದ್ಧಿ ವಿಷಯಗಳು ಅವಗಣನೆಗೆ ಈಡಾಗಿ ನಿಧಾನವಾಗಿ ಇಕ್ಕೇರಿ ರಾಜ್ಯವು ಪತನದತ್ತ ಸಾಗತೊಡಗಿತು.

೨.೫ ಹೈದರಾಲಿ ಮತ್ತು ಟಿಪ್ಪೂ ಕಾಲದ ಆರ್ಥಿಕತೆ

ಇಕ್ಕೇರಿ ಸಂಸ್ಥಾನವು ಬಲಗುಂದುತ್ತಾ ಹೋಗುತ್ತಿದ್ದಂತೆ ಭಾರತದ ಪಶ್ಚಿಮ ಕರಾವಳಿಯನ್ನು ಪೋರ್ಚುಗೀಸರು, ಡಚ್ಚರು, ಫ್ರೆಂಚರು ಮತ್ತು ಇಂಗ್ಲಿಷರು ಹಂಚಿಕೊಳ್ಳಲು ಯತ್ನಿಸಿದರು. ಪೋರ್ಚುಗೀಸರು ಕ್ರಿ.ಶ. ೧೫ ನೆಯ ಶತಮಾನದಲ್ಲಿ ಕರಾವಳಿಗೆ ಕಾಲಿಟ್ಟು ಪ್ರಬಲರಾಗಿ ಬೆಳೆದಿದ್ದರು. ಅವರ ಅನುಭವವನ್ನು ಬಂಡವಾಳವಾಗಿಸಿಕೊಳ್ಳುವ ಮತ್ತು ಶತ್ರುಗಳ ಸಂಖ್ಯೆಯನ್ನು ಕಡಿಮೆ ಮಾಡಿಕೊಳ್ಳುವ ಉದ್ದೇಶಗಳಿಂದ ಇಂಗ್ಲೀಷರು ಪೋರ್ಚುಗೀಸರೊಡನೆ ಮಿತ್ರತ್ವದಿಂದಲೇ ಇದ್ದರು. ಇಕ್ಕೇರಿ ಸಂಸ್ಥಾನವು ಮೈತ್ರಿ ಒಪ್ಪಂದಗಳಿಂದ ತುಳುನಾಡು ಪೋರ್ಚುಗೀಸರ ವಸಾಹತು ಆಗದಂತೆ ನೋಡಿಕೊಂಡಿತ್ತು. ಪೋರ್ಚುಗೀಸರನ್ನು ಡಚ್ಚರು ಮತ್ತು ಫ್ರೆಂಚರು ಈಗಾಗಲೇ ಎದುರು ಹಾಕಿಕೊಂಡು ಸಮುದ್ರ ವ್ಯಾಪಾರದ ಲಾಭದಲ್ಲಿ ಪಾಲು ಪಡೆಯುತ್ತಿದ್ದುದರಿಂದ ಯುರೋಪಿಯನ್ ವಸಾಹತು ಶಕ್ತಿಗಳು ಭಾರತದಲ್ಲಿ ಶೀತಲ ಸಮರವನ್ನು ಮುಂದುವರಿಸಿದಂತಾಗಿತ್ತು. ಇಂಗ್ಲೀಷರು ನೇರವಾಗಿ ಪೈಪೋಟಿಗೆ ಇಳಿಯದೇ ಅವಕಾಶಕ್ಕಾಗಿ ಕಾಯುತ್ತಿದ್ದರು. ಸ್ಥಳೀಯ ರಾಜರ ಮತ್ತು ಸಾಮಂತರ ನಡುವಣ ವೈಮನಸ್ಸು ಮತ್ತು ಜಗಳಗಳು ತಮಗೆ ಅವಕಾಶವನ್ನು ಒದಗಿಸುತ್ತವೆಂದು ಅವರ ಹಿಂದಿನ ಅನುಭವಗಳು ಪಾಠ ಕಲಿಸಿಕೊಟ್ಟಿದ್ದವು. ಅಲ್ಲದೆ ಪೋರ್ಚುಗೀಸರು ಕೆಳದಿ ರಾಜನೊಡನೆ ಸ್ನೇಹದಿಂದಲೇ ಇದ್ದು ರಾಜ್ಯದ ಆಂತರಿಕ ವಿಷಯಗಳಲ್ಲಿ ಮೂಗುತೂರಿಸದೆ ಕೇವಲ ವ್ಯಾಪಾರ ಮತ್ತು ಮತಾಂತರ ಕ್ರಿಯೆಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವುದರಲ್ಲಿ ತೃಪ್ತರಾಗಿದ್ದುದರಿಂದ ಇಂಗ್ಲೀಷರು ರಾಜಕೀಯ ಅಧಿಕಾರವನ್ನು ದುಡುಕಿ ಪಡೆಯುವಂತಿರಲಿಲ್ಲ.

ಇಕ್ಕೇರಿ ಸಂಸ್ಥಾನವು ಅವನತಿಯತ್ತ ಸಾಗುತ್ತಿದ್ದಂತೆ ದಕ್ಷಿಣ ಭಾರತದ ಇತಿಹಾಸದಲ್ಲಿ ಉಲ್ಕೆಯಂತೆ ಮೇಲೇರಿ ಬಂದವನು ಹೈದರ್ ಆಲಿ ಎಂಬ ಮೈಸೂರು ರಾಜ್ಯದ ಸೈನ್ಯದಲ್ಲಿದ್ದ ಓರ್ವ ಸಾಮಾನ್ಯ ಸೈನಿಕ. ಮೈಸೂರಿನ ದುರ್ಬಲ ಅರಸ ಇಮ್ಮಡಿ ಕೃಷ್ಣರಾಜ ಒಡೆಯರ ಕಾಲದ ಆಂತರಿಕ ಗೊಂದಲದಲ್ಲಿ ಸರ್ವಾಧಿಕಾರಿಯಾಗಿ ಮೂಡಿಬಂದ ಹೈದರಾಲಿ (ಕ್ರಿ.ಶ. ೧೭೫೬-ಕ್ರಿ.ಶ. ೧೭೮೨) ಕ್ರಿ.ಶ. ೧೭೬೩ ರಲ್ಲಿ ಬಿದನೂರನ್ನು ವಶಪಡಿಸಿಕೊಂಡು ಇಕ್ಕೇರಿ ರಾಜ್ಯದ ಅಂತ್ಯಕ್ಕೆ ಮಂಗಳ ಹಾಡಿದನು.[೭೧] ದೂರದೃಷ್ಟಿಯವನಾಗಿದ್ದ ಹೈದರಾಲಿ ಪ್ರಬಲ ಸಾಮ್ರಾಜ್ಯವೊಂದನ್ನು ನಿರ್ಮಿಸಬೇಕಾದರೆ ನೌಕಾಪಡೆಯೊಂದರ ಅಗತ್ಯವಿದೆಯೆನ್ನುವುದನ್ನು ಮನಗಂಡು ತುಳುನಾಡನ್ನು ಆಕ್ರಮಿಸಿದ. ಕಾರ್ಕಳದ ಚೌಟ ಅರಸ, ಮಂಗಳೂರಿನ ಬಂಗ ಮತ್ತು ಅಜಿಲ ಅರಸರು ಹೈದರಾಲಿಯ ಸಾಮಂತರಾಗಲು ಒಪ್ಪಿ ಕಪ್ಪಕಾಣಿಕೆ ಸಲ್ಲಿಸಿದರು. ಅವನು ನೀಲೇಶ್ವರದವರೆಗೆ ದಂಡಯಾತ್ರೆ ಕೈಗೊಂಡು ತುಂಡರಸರುಗಳನ್ನು ಜಯಿಸಿ

ಕಾರವಾರದಿಂದ ನೀಲೇಶ್ವರದವರೆಗಿನ ಕರಾವಳಿ ತೀರವನ್ನು ತನ್ನದಾಗಿಸಿಕೊಂಡನು. ಅವನನ್ನು ಎದುರಿಸಲಾಗದೆ ಶರಣಾದ ಪೋಚುಗೀಸರನ್ನು ಸೆರೆಯಲ್ಲಿ ಹಾಕಿ ಕ್ರಿ.ಶ. ೧೭೭೦ರಲ್ಲಿ ಬ್ರಿಟಿಷರೊಡನೆ ಒಂದು ಒಪ್ಪಂದ ಮಾಡಿಕೊಂಡನು. ಕ್ರಿ.ಶ. ೧೭೭೪ ರಲ್ಲಿ ಬಂಧಿತ ಪೋರ್ಚುಗೀಸರನ್ನು ಬಿಡುಗಡೆ ಮಾಡಿ ಅವರ ವ್ಯಾಪಾರ ಮತ್ತು ಮತಾಂತರ ಕ್ರಿಯೆಗಳಿಗೆ ತುಳುನಾಡಿನಲ್ಲಿ ನಿಷೇಧ ಹೇರಿ ದಕ್ಷಿಣ ಕನ್ನಡದ ಕರಾವಳಿ ತೀರದಿಂದ ಅವರನ್ನು ಓಡಿಸಿಬಿಟ್ಟನು.[೨] ಕುಂದಾಪುರ, ಕಾಪು, ಮಲ್ಪೆಗಳಲ್ಲಿ ಕೋಟೆಗಳನ್ನು ಕಟ್ಟಿ ಮಂಗಳೂರಲ್ಲಿ ಯುದ್ಧ ಹಡಗುಗಳ ತಂಗುವಿಕೆಗೆ ಅನುಕೂಲತೆ ಕಲ್ಪಿಸಿ, ಬೃಹತ್ ನೌಕಾದಳವೊಂದನ್ನು ನಿರ್ಮಿಸಿ ಕಣ್ಣನೂರಿನ ಸುಲ್ತಾನ ಆಲಿರಾಜನನ್ನು ಅದರ ನಾಯಕನನ್ನಾಗಿ ನೇಮಿಸಿದನು. ತುಳುನಾಡಿನ ಕಂದಾಯ ವ್ಯವಸ್ಥೆಯನ್ನು ಹೈದರಾಲಿ ಹೀಗೆ ಪರಿಷ್ಕರಿಸಿದನು:

- ಸಾಗುವಳಿ ಮಾಡದ ಭೂಮಿಗೆ ಆವರೆಗೆ ಕೃಷಿಕರು ಕಂದಾಯ ಕಟ್ಟಬೇಕಿರಲಿಲ್ಲ. ಹೈದರಾಲಿಯು ಸಾಗುವಳಿ ಭೂಮಿಗೆ ಮಾತ್ರವಲ್ಲದೆ ಸಾಗುವಳಿ ಮಾಡದ ಭೂಮಿಗೂ ಕಂದಾಯವನ್ನು ವಿಧಿಸಿದನು. ಇಕ್ಕೇರಿ ನಾಯಕರ ಕಾಲದಲ್ಲಿದ್ದ ಕಂದಾಯ ಪ್ರಮಾಣವನ್ನು ಇನ್ನಷ್ಟು ಏರಿಸಿದನು.
- ಸಾಮಂತ ರಾಜರುಗಳು ಕೊಡಬೇಕಾದ ಕಪ್ಪ ಕಾಣಿಕೆಗಳನ್ನು ಮೊದಲಿದ್ದುದರ ಶೇಕಡಾ ೫೦ರಷ್ಟು ಹೆಚ್ಚಿಸಿದನು.
- ದೊಡ್ಡ ಹಿಡುವಳಿದಾರರ ಮತ್ತು ಪಟೇಲರುಗಳ ಮೇಲೆ ಕೆಲವು ಹೊಸ ತೆರಿಗೆಗಳನ್ನು ಹೇರಿದನು.[೨೩]

ಹೈದರಾಲಿಯು ಸಾಮಂತ ರಾಜರುಗಳು ನೀಡಬೇಕಾದ ಕಪ್ಪವನ್ನು ಹೆಚ್ಚಿಸಿದುದರಿಂದ ತುಳುನಾಡಿನ ಬಹುತೇಕ ತುಂಡರಸರು ಕಪ್ಪ ಸಲ್ಲಿಸಲು ಕಷ್ಟ ಪಡತೊಡಗಿದರು. ಹೈದರಾಲಿಯ ಪ್ರತಿನಿಧಿಯಾಗಿ ತುಳುನಾಡನ್ನು ಆಳುತ್ತಿದ್ದ ಶೇಕ್ ಅಲಿಯು ಕಪ್ಪನೀಡಲಾಗದ ತೊಳಹಾರ, ಅಜಿಲ, ಸಾವಂತ, ಮೂಲ, ಚೌಟ, ಬಂಗರಸರ ಆಡಳಿತ ಪ್ರದೇಶಗಳನ್ನು ಹೈದರಾಲಿಯ ಸೂಚನೆಯಂತೆ ಕೈವಶ ಮಾಡಿಕೊಂಡನು. ನೀಲೇಶ್ವರ ರಾಜ್ಯವೂ ಕೂಡಾ ಹೈದರಾಲಿಯ ನೇರ ಆಡಳಿತಕ್ಕೆ ಒಳಪಟ್ಟಿತು. ಭೂಮಿ ಕಳಕೊಂಡ ತುಂಡರಸರಿಗೆ ಹೈದರಾಲಿ ಮಾಸಾಶನ ನೀಡುವ ಮತ್ತು ಉಂಬಳಿ ಬಿಡುವ ಕರುಣೆ ತೋರಿದುದರಿಂದ ತುಳುನಾಡಿನಲ್ಲಿ ಹೈದರಾಲಿಯ ಬಗ್ಗೆ ಸದಭಿಪ್ರಾಯವಿತ್ತು.

ಹೈದರಾಲಿಯನ್ನು ಮರಾಠರು ಮತ್ತು ನಿಜಾಮರು ಪದೇ ಪದೇ ಕೆಣಕುತ್ತಿದ್ದರು. ಅದರ ಬದಲು ಅವರು ಹೈದರಾಲಿಯ ಜತೆ ಕೈಜೋಡಿಸುತ್ತಿದ್ದರೆ ಭಾರತದ ಇತಿಹಾಸವೇ ಬದಲಾಗಿ ಬಿಡುತ್ತಿತ್ತು. ಮರಾಠರ ಮತ್ತು ನಿಜಾಮರ ಸಂಘಟಿತ ದಾಳಿಯಲ್ಲಿ ಹೈದರಾಲಿ

ಸೋತ ಸಂದರ್ಭವನ್ನು ಬಳಸಿ ಅವನನ್ನು ನಿರ್ನಾಮ ಮಾಡಲು ಇಂಗ್ಲೀಷರು ಮೈಸೂರಿನ ಮೇಲೆ ದಂಡೆತ್ತಿ ಬಂದರು. ಪರಿಣಾಮವಾಗಿ ಕ್ರಿ. ಶ. ೧೭೬೦ ರಿಂದ ಕ್ರಿ.ಶ. ೧೭೬೯ ರ ವರೆಗೆ ಒಂದನೇ ಆಂಗ್ಲೋ-ಮೈಸೂರು ಯುದ್ಧ ನಡೆಯಿತು. ಆರಂಭದಲ್ಲಿ ಬ್ರಿಟಿಷರು ಮಂಗಳೂರನ್ನು ಗೆದ್ದರೂ ಅದನ್ನು ಉಳಿಸಿಕೊಳ್ಳಲಾಗಲಿಲ್ಲ. ಹೈದರನ ಪ್ರಬಲ ನೌಕಾಪಡೆ ಇಂಗ್ಲೀಷರನ್ನು ಮಂಗಳೂರಿನಿಂದ ಮುಂಬಯಿಗೆ ಬೆನ್ನಟ್ಟಿತು. ಇಂಗ್ಲೀಷರು ಹೈದರಾಲಿಯೊಡನೆ ಒಪ್ಪಂದ ಮಾಡಿಕೊಳ್ಳಬೇಕಾಗಿ ಬಂತು. ಹೈದರಾಲಿಯು ಬ್ರಿಟಿಷರ ವಿರುದ್ದದ ಯುದ್ದದಲ್ಲಿ ತನಗೆ ಸಹಾಯ ಮಾಡಿದ್ದ ಕೊಡಗರಸನಿಗೆ ತುಳುನಾಡಿನ ಪಂಜ ಮತ್ತು ಬೆಳ್ಳಾರೆ ಮಾಗಣೆಗಳನ್ನು ಬಿಟ್ಟುಕೊಟ್ಟನು.[೨೪]

ಕ್ರಿ. ಶ. ೧೭೭೦ ರಲ್ಲಿ ಮರಾಠರು ಮೈಸೂರಿನ ಮೇಲೆ ದಾಳಿ ಮಾಡಿದಾಗ ಇಂಗ್ಲೀಷರು ಹೈದರಾಲಿಯ ಸಹಾಯಕ್ಕೆ ಬಾರದೆ ದ್ರೋಹ ಬಗೆದರು. ಆದರೆ ಕ್ರಿ. ಶ. ೧೭೭೨ ರಲ್ಲಿ ನಾಯಕ ಮಾಧವರಾಯ ಪೇಶ್ವೆ ನಿಧನನಾದ ಮೇಲೆ ಮರಾಠರ ಪ್ರಾಬಲ್ಯ ಕುಗ್ಗಿ ಹೈದರಾಲಿಗೆ ತನ್ನ ಕೈ ತಪ್ಪಿಹೋದ ಪ್ರದೇಶಗಳನ್ನು ಮರಳಿಗಳಿಸಲು ಸಾಧ್ಯವಾಯಿತು. ಕ್ರಿ. ಶ. ೧೭೭೪ ರಲ್ಲಿ ಅವನು ಮಂಗಳೂರಲ್ಲಿ ಸುಲ್ತಾನ ಬತ್ತೇರಿಯನ್ನು ನಿರ್ಮಿಸಿದ. ಅದೇ ವರ್ಷ ಆವರೆಗೆ ಕೊಡಗು ರಾಜನ ವಶದಲ್ಲಿದ್ದ ಸುಳ್ಯ, ಬೆಳ್ಳಾರೆ, ಪಂಜ ಮತ್ತು ಅಮರ ಮಾಗಣೆಗಳನ್ನು ತನ್ನ ವಶಕ್ಕೆ ತೆಗೆದುಕೊಂಡ.[೨೫] ಹೈದರಾಲಿಯ ಅಪ್ಪಣೆ ಇಲ್ಲದೆ ಅವನ ರಾಜ್ಯದ ಮೂಲಕ ಫ್ರೆಂಚರನ್ನು ಎದುರಿಸಲೆಂದು ಹಾದು ಹೋದ ಇಂಗ್ಲೀಷ್ ಸೈನ್ಯದ ಉದ್ಧಟತನವನ್ನು ಸಹಿಸದ ಹೈದರಾಲಿಯು ಇಂಗ್ಲೀಷರ ವಿರುದ್ಧ ಯುದ್ಧ ಹೂಡಿದನು. ಈ ಘಟನೆಯು ಎರಡನೇ ಆಂಗ್ಲೋ ಮೈಸೂರು ಯುದ್ಧವೆಂದು (ಕ್ರಿ. ಶ. ೧೭೭೮–ಕ್ರಿ.ಶ ೧೭೮೪) ಇತಿಹಾಸದಲ್ಲಿ ಪ್ರಸಿದ್ಧವಾಗಿದೆ.[೨೬] ಈ ಯುದ್ಧದ ನಡುವೆ ಕ್ರಿ.ಶ. ೧೭೮೨ ರಲ್ಲಿ ಹೈದರಾಲಿ ನಿಧನನಾದ. ಅವನ ಮಗ ಟಿಪ್ಪು ಸುಲ್ತಾನನು ಯುದ್ಧವನ್ನು ಮುಂದುವರಿಸಿ ಇಂಗ್ಲೀಷರನ್ನು ಸೋಲಿಸಿದನು. ಕ್ರಿ. ಶ. ೧೭೮೪ ರಲ್ಲಿ ಇಂಗ್ಲೀಷರ ಮತ್ತು ಟಿಪ್ಪುವಿನ ನಡುವೆ ಮಂಗಳೂರು ಒಪ್ಪಂದವಾಯಿತು. ಅದು ತುಳು ನಾಡಿನ ಇತಿಹಾಸಕ್ಕೆ ಇನ್ನೊಂದು ಮಗ್ಗಲನ್ನು ಒದಗಿಸಿತು.

ಹಾಗೆ ತುಳುನಾಡಿನ ಅಧಿಕಾರವನ್ನು ತನ್ನದಾಗಿಸಿಕೊಂಡ ಟಿಪ್ಪು ಈ ಜಲ್ಲೆಯಲ್ಲಿ ಕೆಲವು ಬದಲಾವಣೆಗಳಿಗೆ ಕಾರಣನಾದನು. ಬ್ರಿಟಿಷರ ಪರವಿದ್ದ ಕುಂಬಳೆ ಅರಸನನ್ನು ಸ್ಥಾನ ಪಲ್ಲಟಗೊಳಿಸಿ ಆ ರಾಜ್ಯವನ್ನು ತನ್ನದಾಗಿಸಿಕೊಂಡನು. ರಾಜ್ಯ ಭ್ರಷ್ಟ ಕುಂಬಳೆ ಅರಸ ತಲಚೇರಿಗೆ ಹೋಗಿ ಇಂಗ್ಲೀಷರ ಆಶ್ರಯದಲ್ಲಿ ಹೀನಾಯ ಬದುಕು ಸಾಗಿಸಬೇಕಾಯಿತು. ತನ್ನ ವಿರುದ್ಧ ದಂಗೆಯೆದ್ದ ನೀಲೇಶ್ವರದ ಅರಸನನ್ನು ಸೋಲಿಸಿ ಟಿಪ್ಪುವು ಆತನನ್ನು ನೇಣಿಗೆ

ಹಾಕಿದನು. ಇಂಗ್ಲಿಷರ ಪರವಾಗಿದ್ದ ಮಂಗಳೂರಿನ ರೋಮನ್ ಕೆಥೋಲಿಕ್ಕರಿಗೆ ಇನ್ನಿಲ್ಲದ ಚಿತ್ರಹಿಂಸೆ ನೀಡಿದನು. ಅವನಿಗೆ ದಕ್ಷಿಣ ಹಿಂದುಸ್ಥಾನದ ಒಡೆಯನಾಗಿ ದೆಹಲಿಯ ಸುಲ್ತಾನನಿಗೆ ಸಡ್ಡು ಹೊಡೆಯಬೇಕೆಂಬ ಮಹತ್ವಾಕಾಂಕ್ಷೆ ಇದ್ದಂತೆ ಕಂಡು ಬರುತ್ತದೆ.[೭೭]

ಆರ್ಥಿಕತೆಗೆ ಸಂಬಂಧಿಸಿದಂತೆ ಅವನು ಮಾಡಿದ ಪರಿಷ್ಕರಣೆಗಳು ದ.ಕ. ಜಿಲ್ಲೆಯಲ್ಲಿ ಅಸಮಾಧಾನದ ಅಲೆಗಳನ್ನು ಎಬ್ಬಿಸಿದವು. ಮೈಸೂರು ರಾಜ್ಯದ ಆಡಳಿತ ಪ್ರತಿನಿಧಿಗಳಾಗಿ ತುಳುನಾಡಿನಲ್ಲಿ ಅಮಲುದಾರ ಮತ್ತು ಅಸೋಫರೆಂಬ ಮುಸ್ಲಿಂ ಅಧಿಕಾರಿಗಳನ್ನು ನೇಮಕ ಮಾಡಿದನು. ಕಂದಾಯ ವಸೂಲಿಯ ಅಧಿಕಾರವನ್ನು ಸ್ಥಳೀಯರಿಂದ ತಪ್ಪಿಸಿ, ಮೈಸೂರು ಪ್ರಾಂತ್ಯದ ಕರ್ನಾಟಕ ಬ್ರಾಹ್ಮಣರನ್ನು ತುಳುನಾಡಿಗೆ ಕರೆತಂದು ಅವರಿಗೆ ನೀಡಿದನು. ಹೈದರಾಲಿಯು ಸಾಮಂತ ರಾಜರುಗಳಿಗೆ ನೀಡುತ್ತಿದ್ದ ಮಲ್ಲಿಖಾನೆಗಳನ್ನು ಮತ್ತು ದೇವಾಲಯ ಹಾಗೂ ಬ್ರಾಹ್ಮಣರಿಗೆ ನೀಡುತ್ತಿದ್ದ ತಸದೀಕು ಬ್ರಹ್ಮಾದಾಯವನ್ನು ಕಡಿಮೆ ಮಾಡಿದನು.[೭೮] ಆಡಳಿತಾತ್ಮಕ ವೆಚ್ಚ, ಯುದ್ಧ ವೆಚ್ಚ ಇತ್ಯಾದಿಗಳ ಹೆಚ್ಚಳದಿಂದಾಗಿ ಟಿಪ್ಪು ಮಾಡಿದ ಈ ಅನಿವಾರ್ಯ ಪರಿಷ್ಕರಣೆಗಳಿಂದಾಗಿ ತುಳುನಾಡಿನ ಜನರು ಅವನನ್ನು ದ್ವೇಷಿಸುವಂತಾಯಿತು. ಇಂಗ್ಲೀಷರು ಹಿಂದುಸ್ಥಾನದ ಪ್ರಥಮ ಶತ್ರುಗಳು ಎಂಬ ಅರಿವು ಅವನಿಗಿದ್ದರೂ, ಅದನ್ನು ಇತರರಿಗೆ ತನ್ನ ಕ್ರಿಯೆಗಳ ಮೂಲಕ ಮನದಟ್ಟು ಮಾಡಿ ಕೊಡುವಲ್ಲಿ ಅವನು ವಿಫಲನಾದ. ಮರಾಠರನ್ನು, ನಿಜಾಮರನ್ನು, ಕೊಡಗು ಮತ್ತು ತಿರುವಾಂಕೂರು ಅರಸರನ್ನು ಒಳಿಸಿ ಇಂಗ್ಲೀಷರ ವಿರುದ್ಧ ಒಂದು ಬೃಹತ್ ಶಕ್ತಿಯನ್ನು ನಿರ್ಮಾಣ ಮಾಡಲು ಅವನಿಂದ ಅಸಾಧ್ಯವಾಯಿತು. ಅವನ ದೂರದೃಷ್ಟಿಯ ಕೊರತೆ ಮೂರನೆಯ ಆಂಗ್ಲೋ- ಮೈಸೂರು ಯುದ್ಧಕ್ಕೆ (ಕ್ರಿ.ಶ. ೧೭೯೦–೧೭೯೨) ಕಾರಣವಾಯಿತು. ಸೋಲಿನ ಸುಳಿವನ್ನರಿತ ಟಿಪ್ಪು ತನ್ನ ರಾಜ್ಯದ ಅರ್ಧಾಂಶವನ್ನು ಮತ್ತು ರೂ. ೩.೩೦ ಕೋಟಿ ಪರಿಹಾರ ಧನವನ್ನು ನೀಡುವ ಶರತ್ತಿನೊಡನೆ ಇಂಗ್ಲೀಷರೊಡನೆ ಒಪ್ಪಂದ ಮಾಡಿಕೊಂಡು ತನ್ನಿಬ್ಬರು ಮಕ್ಕಳನ್ನು ಒತ್ತೆಯಾಳುಗಳಾಗಿ ಅವರಲ್ಲಿ ಇರಿಸಬೇಕಾಯಿತು.[೭೯] ತಾನೊಪ್ಪಿದ ಪರಿಹಾರಧನವನ್ನು ನಿಗದಿತ ಸಮಯದೊಳಗೆ ನೀಡಲಾಗದ ಟಿಪ್ಪುವಿನ ಅಸಾಯಕತೆ ನಾಲ್ಕನೆಯ ಆಂಗ್ಲೋ ಮೈಸೂರು ಯುದ್ಧಕ್ಕೆ (ಕ್ರಿ.ಶ. ೧೭೯೮–೧೭೯೯) ಕಾರಣವಾಯಿತು. ಕ್ರಿ.ಶ. ೧೭೯೯ರಲ್ಲಿ ಶ್ರೀರಂಗಪಟ್ಟಣದ ಯುದ್ಧದಲ್ಲಿ ಟಿಪ್ಪು ಮಡಿಯುವುದರೊಂದಿಗೆ ತುಳುನಾಡು ಸೇರಿದಂತೆ ಇಡೀ ಮೈಸೂರು ರಾಜ್ಯವು ಇಂಗ್ಲೀಷರ ಕೈವಶವಾಯಿತು. ತುಳುನಾಡಿನಲ್ಲಿ ವಸಾಹತುಶಾಹಿ ಆಡಳಿತ ವ್ಯವಸ್ಥೆಗೆ ಅದು ಮುನ್ನುಡಿಯನ್ನು ಬರೆಯಿತು.

ಹೈದರಾಲಿ ಮತ್ತು ಟಿಪ್ಪು ಕಾಲದಲ್ಲಿ ತುಳುನಾಡಿನಲ್ಲಿ ಸ್ಥಿರತೆ ಇರಲಿಲ್ಲ. ಅದಕ್ಕೆ ಇಂಗ್ಲೀಷರು ತುಳುನಾಡನ್ನು ತಮ್ಮದನ್ನಾಗಿಸಲು ಮಾಡುತ್ತಿದ್ದ ಪ್ರಯತ್ನ, ಕುತಂತ್ರ ಮತ್ತು ಕುಟಿಲೋಪಾಯಗಳು ಕಾರಣವಾಗಿದ್ದವು. ಇಂಗ್ಲೀಷರು ಹೈದರಾಲಿ ಮತ್ತು ಟಿಪ್ಪುವನ್ನು ಮತಾಂಧರಂತೆ ಚಿತ್ರಿಸಿ ಒಡೆದು ಆಳುವ ನೀತಿಯನ್ನು ದಕ್ಷಿಣ ಕನ್ನಡದಲ್ಲಿ ಯಶಸ್ವಿಯಾಗಿ ಅನುಷ್ಠಾನಗೊಳಿಸಿದರು. ಸ್ಥಳೀಯ ರಾಜರುಗಳ ಮತ್ತು ಫ್ರೆಂಚರ ಸಹಾಯ ಸಮಯಕ್ಕೆ ಸರಿಯಾಗಿ ದೊರೆಯುತ್ತಿದ್ದರೆ ಹೈದರಾಲಿಯೇ ಇಂಗ್ಲೀಷರನ್ನು ಭಾರತದಿಂದ ಓಡಿಸಿ ಬಿಡುವ ಸಾಧ್ಯತೆ ಇತ್ತು. ಆ ಸೌಭಾಗ್ಯ ಟಿಪ್ಪುವಿಗೂ ದಕ್ಕದೇ ಅವನು ವಸಾಹತುಶಾಹೀ ಕುತಂತ್ರಕ್ಕೆ ಬಲಿಯಾಗಬೇಕಾಗಿ ಬಂದದ್ದು ಇತಿಹಾಸದ ಗತಿಯನ್ನು ಬದಲಾಯಿಸಿ ಬಿಟ್ಟಿತು.

ಟಿಪ್ಪುವಿನ ಆಡಳಿತ 'ಕ್ರಮ ವಿಶಿಷ್ಟವಾದುದಾಗಿತ್ತು. ಅವನು ಇಸ್ಲಾಂ ಮತಾನುಯಾಯಿಯಾಗಿದ್ದರೂ ದೇವಾಲಯಗಳ ಉಂಬಳಿಗಳನ್ನು ನಿಲ್ಲಿಸಲಿಲ್ಲ.ಮರಾಠರು ಸೂರೆ ಮಾಡಿದ ಶೃಂಗೇರಿ ಮಠವನ್ನು ಪುನರುತ್ಥಾನ ಮಾಡಿದವನೆಂದು ಅವನನ್ನು ಇತಿಹಾಸಕಾರರು ಬಣ್ಣಿಸುತ್ತಾರೆ.[೮೦] ತುಳುನಾಡಿನಲ್ಲಿ ಹೆಂಡ, ಅಫೀಮು ಗಾಂಜಾಗಳನ್ನು ನಿಷೇದಿಸಿದ್ದು ಸಾಮಾಜಿಕ ಸ್ವಾಸ್ಥ್ಯ ಮತ್ತು ನೈತಿಕ ಜೀವನಕ್ಕೆ ಅವನು ನೀಡಿದ್ದ ಮಹತ್ವವನ್ನು ತೋರಿಸುತ್ತದೆ. ಅವನ ರಾಜ್ಯವನ್ನು ಕಂದಾಯದ ದೃಷ್ಟಿಯಿಂದ ವಿಭಜಿಸಿದ ರೀತಿಯೂ ಕೂಡಾ ವಿಶಿಷ್ಟವಾಗಿತ್ತು:

- ಅವನು ೫೦೦೦ ವರಹ ಉತ್ಪತ್ತಿಯಾಗುವ ಒಂದು ಸೀಮೆಯನ್ನು ತುಕ್ಕಡಿಯೆಂದು ಕರೆದು ಅದರ ಮೇಲುಸ್ತುವಾರಿಗಾಗಿ ಅಮೀಲನೆಂಬ ಅಧಿಕಾರಿಯನ್ನು ನೇಮಿಸಿದ್ದ.
- ೧೦ ರಿಂದ ೩೦ ರವರೆಗಿನ ತುಕ್ಕಡಿಗಳನ್ನು ಜಿಲ್ಲೆ ಎಂದು ಕರೆದು 'ಅಸೋಫ ಎಂಬ ಅಧಿಕಾರಿಯನ್ನು ಜಿಲ್ಲೆಯ ಉಸ್ತುವಾರಿಗಾಗಿ ನೇಮಕ ಮಾಡಿದ್ದ.
- ಮಂಗಳೂರಲ್ಲಿ ತುಳುನಾಡಿನ ಆಡಳಿತಕ್ಕಾಗಿ ಸೇನಾ ಆಡಳಿತ ಕಛೇರಿ, ಕೋಟೆಗಳ ಮೇಲ್ವಿಚಾರಣಾ ಕಛೇರಿ, ನೌಕಾದಳ, ಉಸ್ತುವಾರಿ ಕಛೇರಿ, ವ್ಯಾಪಾರ ನಿರ್ವಹಣಾ ಕಛೇರಿ, ಹಣಕಾಸು ನಿರ್ವಹಣಾ ಕಛೇರಿಗಳನ್ನು ತೆರೆದಿದ್ದನು. ಕಛೇರಿಗಳಲ್ಲಿ ಕನ್ನಡವು ಆಡಳಿತ ಭಾಷೆಯಾಗಿತ್ತು.

- ಅತಿ ನಿರ್ಯಾತದಿಂದ ಆಂತರಿಕವಾಗಿ ಬೆಲೆ ಏರಿಕೆಯಾಗದಂತಾಗಲು, ನಿರ್ಯಾತ ಮತ್ತು ದೇಶದ ವರಮಾನ ವಸಾಹತುಶಾಹಿಗಳ ಪಾಲಾಗದಿರಲು ಆಯಾತ ನಿಯಂತ್ರಣ ಕ್ರಮಗಳನ್ನು ಜಾರಿಗೆ ತಂದನು.
- ಹೊಗೆಸೊಪ್ಪು, ಗಂಧ, ಮೆಣಸು, ಮರ, ಚಿನ್ನ, ಬೆಳ್ಳಿಗಳ ಆದಾಯವು ಬೊಕ್ಕಸಕ್ಕೆ ಸೇರತಕ್ಕದೆಂದು ಕಾನೂನು ಮಾಡಿದನು.[೮೧]

ಇವೆಲ್ಲಾ ಸುಧಾರಣೆಗಳ ಹೊರತಾಗಿಯೂ ವಸಾಹತುಶಾಹಿ ಶಕ್ತಿಗಳು ಟಿಪ್ಪುವನ್ನು ಮತಾಂಧನೆಂಬಂತೆ ಬಿಂಬಿಸಿ ಆತನ ಮಾನವೀಯ ಮುಖಕ್ಕೆ ಮಸಿ ಬಳಿಯುವ ಪ್ರಯತ್ನ ಮಾಡಿದವು. ದ.ಕ. ಜಿಲ್ಲೆಯ ಮೊದಲ ಕಲೆಕ್ಟರ್ ಥಾಮಸ್ ಮನ್ರೋ ಕ್ರಿ. ಶ. ೧೭೯೦ ರಲ್ಲೇ ಟಿಪ್ಪುವಿನ ವಿರುದ್ಧ ಹೋರಾಟ ಮಾಡಬೇಕೆಂದು ಹೇಳಿದ್ದನ್ನು ಈ ಹಿನ್ನೆಲೆಯಲ್ಲಿ ಪರಿಭಾವಿಸಬೇಕು: "ನಾವು ನಮ್ಮ ಶತ್ರುವಿನೊಡನೆ ಶಾಂತಿ ಒಪ್ಪಂದ ಮಾಡಬಾರದೆಂಬುದು ನನ್ನ ಭಾವನೆ. ಟಿಪ್ಪುವಿನಂತಹ ಶಕ್ತಿಗಳು ಅಸ್ತಿತ್ವದಲ್ಲಿರುವಾಗ ಶ್ರೀರಂಗಪಟ್ಟಣವನ್ನು ವಶಪಡಿಸಿಕೊಳ್ಳದ ಹೊರತು ನಾವು ಮತ್ತು ಕರ್ನಾಟಕ ಸುರಕ್ಷಿತವಾಗಿರಲು ಸಾಧ್ಯವಿಲ್ಲ."[೮೨]

ಟಿಪ್ಪು ಕ್ರಿಶ್ಚಿಯನ್ನರನ್ನು ಮತಾಂತರ ಮಾಡಿದ ಮತ್ತು ಅವರಿಗೆ ಚಿತ್ರಹಿಂಸೆ ಕೊಟ್ಟ ಎಂಬ ಅಪಪ್ರಚಾರವನ್ನು ಮಾಡಿದವರು ತುಳುನಾಡಿನಲ್ಲಿ ಸಕ್ರಿಯರಾಗಿದ್ದ ಕ್ರೈಸ್ತ ಮತಪ್ರಚಾರಕರು. ಟಿಪ್ಪುವನ್ನು ಕ್ರೂರ ಮತಾಂಧನೆಂಬಂತೆ ಚಿತ್ರಿಸುವುದರಲ್ಲಿ ಎರಡು ಉದ್ದೇಶಗಳಿದ್ದವು. ಮೊದಲನೆಯದಾಗಿ ತಮ್ಮ ಹಿರಿಯರು ಟಿಪ್ಪುವಿನ ಕೈಯಲ್ಲಿ ಹುತಾತ್ಮರಾದರು ಎಂದು ನಂಬಿದರೆ ಕಿರಿಯರು ಕ್ರೈಸ್ತ ಮತಕ್ಕೆ ಭಾವನಾತ್ಮಕವಾಗಿ ಹೆಚ್ಚು ಅಂಟಿಕೊಳ್ಳುತ್ತಾರೆ ಎಂದು ಮಿಶನರಿಗಳು ಭಾವಿಸಿದ್ದರು. ಎರಡನೆಯದಾಗಿ ಮತಾಂತರ ಕ್ರಿಯೆಗೆ ಸರ್ಕಾರದ ಅಧಿಕೃತ ಮೊಹರು ಬಿದ್ದು ಮನ್ನಣೆ ದೊರೆತರೆ ತಮ್ಮ ಕಾರ್ಯಸುಲಭ ಸಾಧ್ಯವೆಂದು ಅವರು ತಿಳಿದುಕೊಂಡಿದ್ದರು.[೮೩]

ವಸಾಹತು ಶಕ್ತಿಯು ಒಂದು ಸುಕ್ಷೇಮಕರ ಪೂರ್ವರಂಗವನ್ನು ನಿರ್ಮಿಸಿಕೊಂಡೇ ದಕ್ಷಿಣ ಕನ್ನಡ ಜಿಲ್ಲೆಯನ್ನು ಪ್ರವೇಶಿಸಿದ್ದು ಈವರೆಗಿನ ವಿಶ್ಲೇಷಣೆಯಿಂದ ಸ್ಪಷ್ಟವಾಗುತ್ತದೆ. ಆದರೆ ಟಿಪ್ಪುವನ್ನು ಸರ್ವಾಧಿಕಾರಿ ಮತ್ತು ಮತಾಂಧನೆಂದು ಬಿಂಬಿಸಿ ಜಿಲ್ಲೆಯಲ್ಲಿ ಭದ್ರವಾಗಿ ಬೇರೂರ ಬಯಸಿದ ವಸಾಹತು ಶಕ್ತಿಗಳ ಒಡೆದು ಆಳುವ ನೀತಿಗೆ ಬುದ್ಧಿವಂತರ ಜಿಲ್ಲೆ ಬಹಳ ಸುಲಭದ ಬೇಟೆಯಾದದ್ದು ಒಂದು ವಿಪರ್ಯಾಸ. ದ.ಕ. ಜಿಲ್ಲೆ ಬ್ರಿಟಿಷರ ಪಾಲಾಗುವುದರೊಂದಿಗೆ ವಸಾಹತು ಕರ್ನಾಟಕದ ಎಲ್ಲೆ ಕಟ್ಟು ವಿಸ್ತರಿಸಿತು.[೮೪]

ಉಲ್ಲೇಖಗಳು ಮತ್ತು ಟಿಪ್ಪಣಿಗಳು

೧. ಮಂಜೇಶ್ವರ ಗೋವಿಂದ ಪೈ, ೨೦೦೭, ತುಳುನಾಡು ಪೂರ್ವ ಸ್ಮೃತಿ, ವಿವೇಕ ರೈ ಮತ್ತು ಇತರರು(ಸಂ) ತುಳುಸಾಹಿತ್ಯ ಚರಿತ್ರೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪು. ೧೦.

೨. ಮೋಹನ ಕೃಷ್ಣ ರೈ ,೨೦೦೭, ತುಳುನಾಡಿನ ಭೌಗೋಳಿಕ ಎಲ್ಲೆ ಕಟ್ಟುಗಳು, ವಿವೇಕ ರೈ ಮತ್ತು ಇತರರು (ಸಂ) ಪೂರ್ವೋಕ್ತ. ಪು ೩೧.

೩. ಮಹಾರಾಷ್ಟ್ರದ ಥಾನಾ ಜಿಲ್ಲೆಯ ವೈತರಣೀ ನದಿಯಿಂದ ಕೇರಳದ ಕನ್ಯಾಕುಮಾರಿ ಭೂಶಿರದವರೆಗಿನ ಪ್ರದೇಶ ಸಪ್ತ ಕೊಂಕಣಗಳನ್ನು ಪರಕೊಂಕಣ (ಮಹಾರಾಷ್ಟ್ರ) ಕೊಂಕಣ (ಗೋವಾ) ಪಶು ಅಥವಾ ಹೈಗ (ಉತ್ತರಕನ್ನಡ) ಆಲುವ (ದಕ್ಷಿಣ ಕನ್ನಡ), ಕೂಪಕ, ಕೇರಳ ಮೂಷಿಕ (ಕೇರಳ) ಎಂದು ವಿಭಜಿಸಲಾಗಿದೆ.

೪. ಅನಂತರಾಮು, ೧೯೯೭, 'ದಕ್ಷಿಣದ ಸಿರಿನಾಡು ಅನಂತ ಪ್ರಕಾಶನ', ದೇವಾಂಬಾ ಅಗ್ರಹಾರ, ಮೈಸೂರು, ಪು. ೩.

೫. ಎಸ್. ಡಿ. ಶೆಟ್ಟಿ, ೨೦೦೭, ತುಳುನಾಡಿನ ಸಾಂಸ್ಕೃತಿಕ ಇತಿಹಾಸ, ವಿವೇಕ ರೈ, ಮತ್ತು ಇತರರು. (ಸಂ). ಪೂರ್ವೋಕ್ತ, ಪು. ೪೭.

೬. ಮಂಜೇಶ್ವರ ಗೋವಿಂದ ಪೈ, ೨೦೦೭, ಪೂರ್ವೋಕ್ತ. ಪು. ೧೪,೧೫

೮ . ಅದೇ, ಪು. ೬.

೯. ಕಡವ ಶಂಭುಶರ್ಮ, ೧೯೭೦, ತುಳುದೇಶ ಭಾಷಾ ವಿಚಾರವು, ಜನತಾ ಪವರ್ ಪ್ರೆಸ್ ವಿಟ್ಲ ಪು.೬

೧೦. ಮಂಜೇಶ್ವರ ಗೋವಿಂದ ಪೈ, ೨೦೦೭, ಪೂರ್ವೋಕ್ತ. ಪು. ೩

೧೧. ಅದೇ, ಪು. ೧೧.

೧೨. ಎಸ್. ಡಿ. ಶೆಟ್ಟಿ, ೨೦೦೭, ಪೂರ್ವೋಕ್ತ. ಪು.೪೮

೧೩. ಅದೇ, ಪು.೪೮

೧೪. ಕೆ.ವಿ ರಮೇಶ್, ೨೦೦೪, ಗಣಪತಿರಾವ್ ಐಗಳ ದಕ್ಷಿಣ ಕನ್ನಡದ ಇತಿಹಾಸ ಕೃತಿಯ ಮುನ್ನುಡಿಯಲ್ಲಿ, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ ಉಡುಪಿ.

೧೫. ವಸಂತ ಶೆಟ್ಟಿ, ೨೦೦೭, ತುಳು ಭಾಷೆ ಮತ್ತು ತುಳುನಾಡು, ಡಾ। ವಿವೇಕ ರೈ (ಸಂ.) ಪೂರ್ವೋಕ್ತ. ಪು.೩೬.

೧೬. ಮಂಜೇಶ್ವರ ಗೋವಿಂದ ಪೈ,೨೦೦೭ ,ಪೂರ್ವೋಕ್ತ. ಪು.೮

೧೭. ಮೋಹನ ಕೃಷ್ಣ ರೈ, ೨೦೦೭, ಪೂರ್ವೋಕ್ತ. ಪು ೩೨.

೧೮.ಗಣಪತಿರಾವ್ ಐಗಳ್, ೨೦೦೪, ಪೂರ್ವೋಕ್ತ. ಪು.೧೫.

೧೯. ಮೋಹನ್ ಕೃಷ್ಣ ರೈ, ೨೦೦೭, ಪೂರ್ವೋಕ್ತ. ಪು.೩೩.

20. John Sturrock, 2003, Madras District Manuals, South Canara Gazeteer of Karnataka, P. 54.

೨೧.ಗೋವಿಂದ ಪೈ, ೨೦೦೭, ಪೂರ್ವೋಕ್ತ. ಪು. ೨೩.

೨೨. ಕಡವ ಶಂಭು ಶರ್ಮ, ೧೯೭೦, ಪೂರ್ವೋಕ್ತ. ಪು.೮.

೨೩. ಎಂ. ಗೋವಿಂದ ಪೈ, ೨೦೦೭, ಪೂರ್ವೋಕ್ತ. ಪು.೧೦,

೨೪. ಅದೇ, ಪು.೧೨.

೨೫. ಎಸ್. ಡಿ. ಶೆಟ್ಟಿ, ೨೦೦೭, ಪೂರ್ವೋಕ್ತ. ಪು.೫೭.

೨೬. ರಮೇಶ್. ಕೆ. ವಿ, ೨೦೦೪, ತುಳುನಾಡಿನ ಇತಿಹಾಸ. ಪು. ೧೩೪

೨೭. ಅದೇ, ಪು.೧೩೪

೨೮. ಗಣಪತಿ ಭಟ್ಟ, ೨೦೧೦, ಪಂಜಸೀಮಾ ದರ್ಶನ, ಭಾರತಿಪ್ರಕಾಶನ ಬೆಂಗಳೂರು.ಪು. ೫

೨೯.ರಮೇಶ ಕೆ.ವಿ, ೨೦೦೪, ಪೂರ್ವೋಕ್ತ. ಪು.೨೭೯.

೩೦. ಬಾರ್ಕೂರು ಉದಯ, ೨೦೦೬, ತುಳುನಾಡಿನ ಸಾಮಾಜಿಕ ಚರಿತ್ರೆ .ಗುಲಾಮಗಿರಿ ಪದ್ಧತಿಯನ್ನು ಅನುಲಕ್ಷಿಸಿ, ಬಿ.ಎ. ವಿವೇಕ ರೈ (.ಸಂ) ಪೂರ್ವೋಕ್ತ. ಪು. ೯೩-೧೦೩.

೩೧. ಎಂ. ಗೋವಿಂದ ಪೈ ೨೦೦೬, ಪೂರ್ವೋಕ್ತ, ಪು.೧೭.

೩೨. ಎಸ್.ಡಿ ಶೆಟ್ಟಿ, ೨೦೦೬, ಪೂರ್ವೋಕ್ತ, ಪು.೫೭.

೩೩.ಎಂ. ಗೋವಿಂದ ಪೈ, ೨೦೦೬, ಪೂರ್ವೋಕ್ತ, ಪು. ೧೫.

೩೪. ಕೇಶವ ಕೃಷ್ಣ ಕುಡ್ವ, ೧೯೪೮, ದಕ್ಷಿಣ ಕನ್ನಡದ ಇತಿಹಾಸ, ಪು. ೨೮-೨೯

೩೫. Gururaj Bhat P, 1975,op.cit, P.143.

೩೬.ಉದ್ಯಾವರ ಶಾಸನ , ಬಾರಕೂರು ಶಾಸನ, ತೃತೀಯ ವೀರ ಬಲ್ಲಾಳನ ಶಾಸನಗಳಲ್ಲಿ ನಾಡು ಮತ್ತು ವಿಷಯಗಳು ಒಂದೇ ಅರ್ಥದಲ್ಲಿ ಬಳಕೆಯಾಗಿವೆ.

೩೭. Gururaj Bhat, P 1975, op.cit, P 146.

೩೮. ಹರಿಹರ ಬುಕ್ಕ ಸಹೋದರರಿಗೆ ಆರಂಭದಲ್ಲಿ ನೆರವಾದವರು ಶೃಂಗೇರಿಯ ವಿದ್ಯಾತೀರ್ಥರು. ಅವರ ದೇಹಾಂತ್ಯದ ಬಳಿಕ ವಿದ್ಯಾರಣ್ಯರು ವಿಜಯನಗರಕ್ಕೆ ಗುರುಗಳಾದರು. ವಿದ್ಯಾತೀರ್ಥರಿಗೆ ಬರಬೇಕಾಗಿದ್ದ ಕೀರ್ತಿ ವಿದ್ಯಾರಣ್ಯರಿಗೆ ಬಂತೆಂದು ಬಾ.ರಾ. ಗೋಪಾಲರು ದಾಖಲಿಸಿದ್ದಾರೆ. ನೋಡಿ: ಕರ್ನಾಟಕ ಇತಿಹಾಸ,೧೯೮೬

೩೯. ಮಧುರಾ ವಿಜಯಂ ಕರ್ತೃ ಗಂಗಾಂಬಿಕೆಯು ಕುಮಾರ ಕೆಂಪಣ್ಣನ ಮಡದಿ. ಈ ಕಾವ್ಯವು ಕನ್ನಡಿಗರ ಅಭಿಮಾನದ ಸಂಕೇತವಾದರೂ ಕನ್ನಡಿಗರು ಇದನ್ನು ಸರಿಯಾಗಿ

ಗಮನಿಸಿಲ್ಲವೆಂದು ಭಾಷಾವಿಜ್ಞಾನಿ ಪ್ರೊ. ಕೋಡಿ ಕುಶಾಲಪ್ಪ ಗೌಡರು ಅಭಿಪ್ರಾಯಪಟ್ಟಿದ್ದಾರೆ. ನೋಡಿ: ಹೆಜ್ಜೆ ಡಾ। ಶಿಶಿಲ ಅಭಿನಂದನಾ ಸಂಪುಟ. ೨೦೦೩, ಪು. ೨೧೨.

೪೦. ಕೇಶವ ಕೃಷ್ಣ ಕುಡ್ವ, ೧೯೪೮ , ಪೂರ್ವೋಕ್ತ, ಪು.೧೦೫.

೪೧. ಬಿ.ಎ ವಿವೇಕ ರೈ, ೧೯೯೫, ಪ್ರಾದೇಶಿಕ ಸಂಸ್ಕೃತಿಯ ಪರಿಕಲ್ಪನೆಯಲ್ಲಿ ತುಳುನಾಡು-ಸಿರಿ, ಅಮೃತ ಸೋಮೇಶ್ವರ ಅಭಿನಂದನ ಸಂಪುಟ , ಕಲಾ ಗಂಗೋತ್ರಿ ಉಚ್ಚಿಲ, ಪು.೧೬೨

೪೨. ಕೇಶವ ಕೃಷ್ಣ ಕುಡ್ವ, ೧೯೪೮, ಪೂರ್ವೋಕ್ತ, ಪು.೧೦೭

೪೩. ಅದೇ, ಪು.೧೦೮.

೪೪. Jhon Sturrock ,2003, op.cit, P.66.

೪೫. ಬಾ.ರಾ ಗೋಪಾಲ, ೧೯೮೬, ಕರ್ನಾಟಕ ಇತಿಹಾಸ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು –ಪು. ೨೯೦

೪೬. ಅದೇ, ಪು. ೨೯೧

೪೭. ಕೆ. ಅನಂತರಾಮು, ೧೯೯೭, ಪೂರ್ವೋಕ್ತ, ಪು. ೧೪೮.

೪೮. Gururaj Bhat, 1975, op, cit, P 148.

೪೯. ಅದೇ, ಪು.೧೫೫.

೫೦.ಯಮಳ ವೀರ ಕೋಟಿ ಚೆನ್ನಯರು ಮಲ್ಲಯ್ಯ ಬುದ್ಧಿವಂತನೆಂಬ ಪ್ರಧಾನಿಯಿಂದ ತೊಂದರೆಗೊಳಗಾಗಿ ಅವನನ್ನು ಕೊಂದು ತಮ್ಮ ಹುಟ್ಟೂರು ಪಡಮಲೆಯನ್ನು ಬಿಟ್ಟು ಎಣ್ಮೂರಿಗೆ ಹೋಗಬೇಕಾಗುತ್ತದೆ. ಊಳಿಗಮಾನ್ಯ ವ್ಯವಸ್ಥೆಗೆ ಬಲಿಯಾಗಿ ಕೊನೆಗೆ ದೈವವಾಗಿ ಆರಾಧನೆಗೊಳಗಾಗುವ ಕೋಟಿಚೆನ್ನಯರು ಇತಿಹಾಸ ಪುರುಷರೆನ್ನುವುದಕ್ಕೆ ಸಾಕಷ್ಟು ಆಧಾರಗಳಿವೆ.

೫೧. ಡಾ. ಕೆ. ವಿ ರಮೇಶ್, ೨೦೦೪, ಪೂರ್ವೋಕ್ತ, ಪು. ೨೮೩.

೫೨.ಅದೇ, ಪು. ೨೮೪.

೫೩.ಅದೇ, ಪು. ೨೮೫.

೫೪. ಅದೇ, ಪು. ೨೮೬.

೫೫. ಅದೇ, ಪು. ೨೮೭.

೫೬. Gururaj bhat, 1975, op. cit., PP.215-216.

೫೭. ಅದೇ, ಪು. ೨೮೮.

೫೮. ಅದೇ, ಪು. ೨೮೯.

೫೯.ಅದೇ, ಪು. ೨೯೧.

೬೦. ಅಮೃತ ಸೋಮೇಶ್ವರ (ಸಂ), ೨೦೧೧, ಅಬ್ಬಕ್ಕ ಸಂಕಥನ, ವೀರರಾಣಿ ಅಬ್ಬಕ್ಕ ಉತ್ಸವ ಸಮಿತಿ, ಉಲ್ಲಾಳ, ಮಂಗಳೂರು ಪು. ೧೫೫-೧೬೬.

೬೧. ಪ್ರೊ. ವೈ.ಆರ್ ರಂಗಸ್ವಾಮಯ್ಯ , ೧೯೯೨, ಕರ್ನಾಟಕದ ಸಂಕ್ಷಿಪ್ತ ಚರಿತ್ರೆ, ಅನಂತ ಪ್ರಕಾಶನ, ಸರಸ್ವತಿಪುರಂ, ಮೈಸೂರು, ಪು.೩೧೫.

೬೨. ಕೇಶವ ಕೃಷ್ಣ ಕುಡ್ವ, ೧೯೪೮, ಪೂರ್ವೋಕ್ತ, ಪು ೧೧೭.

೬೩. ಗಣಪತಿ ರಾವ್ ಐಗಳ್, ೨೦೦೪, ಪೂರ್ವೋಕ್ತ, ಪು. ೧೨೮.

೬೪. Gururaj Bhat,1975, op. cit P.53

೬೫. ಅದೇ, ಪು.೫೩.

೬೬. ಬಾ.ರಾ ಗೋಪಾಲ, ೧೯೮೬, ಪೂರ್ವೋಕ್ತ, ಪು. ೩೧೮.

೬೭. Gururaj Bhat, 1975, op.cit, P.54.

೬೮. ರಂಗಸ್ವಾಮಯ್ಯ, ೧೯೯೨, ಪೂರ್ವೋಕ್ತ, ಪು. ೩೧೮.

೬೯. ಅದೇ, ಪು. ೩೧೮.

೭೦. ಕೇಶವ ಕೃಷ್ಣ ಕುಡ್ವ, ೧೯೪೮, ಪೂರ್ವೋಕ್ತ, ಪು. ೧೨೬.

೭೧. ಮೋಹನ ಕೃಷ್ಣ ರೈ, ೨೦೧೦, ಕೆನರಾದ ವಿಭಜನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ಪು.೩೫.

೭೨.ಡಾ। ಕೆ. ಅನಂತರಾಮು, ೧೯೯೭, ಪೂರ್ವೋಕ್ತ, ಪು. ೧೬.

೭೩. ಕೇಶವ ಕೃಷ್ಣ ಕುಡ್ವ, ೧೯೪೮, ಪೂರ್ವೋಕ್ತ, ಪು.೧೩೨.

೭೪.ಡಾ। ಪ್ರಭಾಕರ ಶಿಶಿಲ, ೨೦೧೧, ಕೊಡಗು ಕಥನ, ಸುನಿಲ್ ಪ್ರಕಾಶನ ಬೆಂಗಳೂರು ಪು. ೨೧೮.

೭೫. ಪೃಥ್ವಿ ಸಾಗರ್ ಶಿಶಿಲ, ಜಳಕ, ಕಾಂತಮಂಗಲ ಶಾಲಾ ಸುವರ್ಣ ಮಹೋತ್ಸವ ಸಂಚಿಕೆ ೨೦೧೧, ಪು. ೪೧ – ೪೨

೭೬. R.C Majumdar, Op.cit, PP 676 -677

೭೭. ಮಡಿಕೇರಿಯಲ್ಲಿ ೧೧ .೮ .೨೦೦೭ ರಂದು ಸಂಪಾಜೆ ಸಣ್ಣಯ್ಯ ಪಟೇಲ್ ದತ್ತಿ ಉಪನ್ಯಾಸದಲ್ಲಿ ಪ್ರೊ. ರೇಖಾ ಕಾಳಯ್ಯ ವ್ಯಕ್ತ ಪಡಿಸಿದ ಅಭಿಪ್ರಾಯ.

೭೮. ಕೇಶವ ಕೃಷ್ಣ ಕುಡ್ವ, ೧೯೪೮, ಪೂರ್ವೋಕ್ತ, ಪು ೧೩೭.

79. Dodwell, H.H (Ed), The Combridge History of India Vol. 5 British India 1497 – 1858 S. Chand and Co. New Delhi, PP 333 -344.

೮೦. ಬಾರ್ಕೂರು ಉದಯ, ೨೦೦೩, ಹೈದರಾಲಿ ಟಿಪ್ಪು ಇತಿಹಾಸ ಕಥನ, ಮಾನವತಾ ವೇದಿಕೆ ಮಂಗಳೂರು, ಪು. ೪೫ .

೮೧. ಮೊಹಿಬುಲ್ ಹಸನ್, ೧೯೮೮, ಟಿಪ್ಪು ಸುಲ್ತಾನನ ಇತಿಹಾಸ, ಕನ್ನಡ ಅಧ್ಯಯನ ಸಂಸ್ಥೆ ಮೈಸೂರು, ಪು. ೫೧೨ – ೫೧೬ .

೮೨. B. Styne & Thomas Munro, 1989,The Origin of the Colonial State & Its Mission of Empire, Delhi & Oxford University Press –P.20

೮೩. Dennis Fernandese, 2006, The Tulu World in European writings, Ph.d thesis submitted to Mangalore University P.308

೮೪. ಮೋಹನ್ ಕೃಷ್ಣ ರೈ, ೨೦೦೭, ವಸಾಹತುಶಾಹಿ ಮತ್ತು ನಗರೀಕರಣ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ. ಪು. ೧೦–೧೯.

ಅಧ್ಯಾಯ ೩

ವಸಾಹತುಪೂರ್ವದ ಕೊಡಗು ಅರ್ಥಿಕತೆ

೩.೧ ಕೊಡಗು ಒಂದು ಭೌತಿಕ ವಿವರಣೆ

ಕೊಡಗು ಶತಮಾನಗಳಿಂದ ಒಂದು ನಿಗೂಢ, ಆಕರ್ಷಕ, ಪ್ರಕೃತಿ ರಮಣೀಯತೆಯ, ಪ್ರವಾಸೋದ್ಯಮಕ್ಕೆ ವಿಪುಲ ಅವಕಾಶವಿರುವ ಕರ್ನಾಟಕದ ಒಂದು ಪುಟ್ಟ ಜಿಲ್ಲೆ. ಜಡಿ ಮಳೆಯ, ಗದಗುಟ್ಟುವ ಚಳಿಯ, ಪರ್ವತ ಸಾಲುಗಳ, ಭೀಕರ ಅರಣ್ಯಗಳು, ಹುಲಿ ಆನೆಗಳಿಂದ ತುಂಬಿರುವ ಕೊಡಗು ಒಂದು ನಾಡಾಗಿ ರೂಪುಗೊಂಡದ್ದು ಹದಿನೇಳನೆಯ ಶತಮಾನದ ಕೊನೆಯಲ್ಲಿ. ಈಗಿನ ಕೊಡಗಿನ ಬೇರೆಬೇರೆ ಭಾಗಗಳನ್ನು ವಿಭಿನ್ನ ಸಂತತಿಯ ಅರಸರುಗಳು ಬೇರೆಬೇರೆ ಅವಧಿಯಲ್ಲಿ ಅಧೀನದಲ್ಲಿಟ್ಟುಕೊಂಡಿದ್ದರು. ದೊಡ್ಡವೀರರಾಜನ ಪ್ರಯತ್ನದಿಂದಾಗಿ ಕೊಡಗಿನ ಏಕೀಕರಣವಾಯಿತು. ಆತನ ತಮ್ಮ ಲಿಂಗರಾಜನ ಕಾಲದಲ್ಲಿ ಕೊಡಗಿನ ಸರ್ವೆಯಾಗಿ ಒಂದು ಭೂಪಟ ಸಿದ್ಧಗೊಂಡಿತು. ಕೆಲವು ಶಾಸನಗಳ ಮತ್ತು ಐತಿಹ್ಯಗಳ ಆಧಾರದಿಂದ ಕೊಡಗಿನ ವಿಭಿನ್ನ ಪ್ರದೇಶಗಳು ಯಾವ ಕಾಲದಲ್ಲಿ ಯಾವ ರಾಜವಂಶೀಯರ ವಶದಲ್ಲಿದ್ದವು ಎಂದು ಅಂದಾಜಿಸುವ ಯತ್ನಗಳಾಗಿವೆ. ಅವುಗಳನ್ನು ಸಂಪೂರ್ಣ ಸಮರ್ಪಕವೆಂದು ಒಪ್ಪಿಕೊಳ್ಳಲು ಸಾಧ್ಯವಿಲ್ಲವಾದರೂ ಒಂದು ನಾಡಿನ ಪೂರ್ವ ಇತಿಹಾಸದ ವಿಶ್ಲೇಷಣೆಗೆ ಅವು ನೆರವಾಗಿವೆ ಎನ್ನುವುದನ್ನು ಅಲ್ಲಗಳೆಯುವಂತಿಲ್ಲ.

ಕೊಡಗನ್ನು ಸಂಗಮ ಸಾಹಿತ್ಯದಲ್ಲಿ 'ಕುಡುಮಲೈ ಕುಡಕಂ' ಎಂದು ಕರೆಯಲಾಗಿದೆ.[೧] ಕ್ರಿ. ಶ ೧೦೦೪ ರ ತಡಿ ಮಾಲಿಂಗಿಯ ಶಾಸನದಲ್ಲಿ 'ಕುಡುಮಲೈ ನಾಡು' ಎಂಬ ಉಲ್ಲೇಖವಿದೆ.[೨] ತಮಿಳರ 'ಕುಡು' ಎಂಬ ಶಬ್ದ ಕೊಡಗು ಎಂದಾಯಿತು ಎಂದೂ ಹೇಳಲಾಗುತ್ತದೆ.[೩] ಕಾನರ್ ಲಕ್ಷಾಂತರ ಬೆಟ್ಟಗಳ ಪ್ರದೇಶವೆಂಬ ಅರ್ಥದಲ್ಲಿ ಇದನ್ನು 'ಕೊಡಗುಮಲೆ' ಎಂದು ಕರೆದು ಈ ಭೂ ಪ್ರದೇಶಕ್ಕೆ 'ತೆಂಕೋಣ' ಎಂಬ ಪುರಾತನ ಹೆಸರಿತ್ತು ಎಂದಿದ್ದಾನೆ.[೪] ಎಪಿಗ್ರಾಪಿಯಾ ಕರ್ನಾಟಕದ ಪ್ರಕಾರ ಪ್ರಾಚೀನ ಕೊಡಗು ದಕ್ಷಿಣದಲ್ಲಿ ತೆರಕಣಾಂಬಿಯವರೆಗೆ ಮತ್ತು ಕೇರಳದ ವೈನಾಡು ಹಾಗೂ ಕಲ್ಪಾತಿಯವರೆಗೆ ಹಬ್ಬಿತ್ತು. ಉತ್ತರದಲ್ಲಿ ಸಕಲೇಶಪುರ, ರಾಮನಾಥಪುರ, ಗೋರೂರುವರೆಗೆ ಮತ್ತು ಪೂರ್ವದಲ್ಲಿ ಹುಣಸೂರಿನವರೆಗೆ ವಿಸ್ತರಿಸಿತ್ತು. ಎಂದು ತಿಳಿದು ಬರುತ್ತದೆ.[೫]

ಇಂದಿನ ಕೊಡಗು ಉತ್ತರದಲ್ಲಿ ಹಾಸನ, ಪಶ್ಚಿಮದಲ್ಲಿ ಕೇರಳ, ದಕ್ಷಿಣದಲ್ಲಿ ದಕ್ಷಿಣ ಕನ್ನಡ, ಪೂರ್ವದಲ್ಲಿ ಮೈಸೂರು ಜಿಲ್ಲೆಗಳಿಗೆ ತಾಗಿಕೊಂಡಿದೆ. (ಭೂಪಟ ೩. ೧) ಕರ್ನಾಟಕದ ಅತ್ಯಂತ ಸಣ್ಣ ಜಿಲ್ಲೆಗಳಲ್ಲಿ ಒಂದಾದ ಕೊಡಗು ಮಡಿಕೇರಿ, ಸೋಮವಾರಪೇಟೆ ಮತ್ತು

ವಿರಾಜಪೇಟೆ ಎಂಬ ಮೂರು ತಾಲೂಕುಗಳನ್ನು ಹೊಂದಿದೆ. ಅದರ ರಾಜಧಾನಿ ಮಡಿಕೇರಿ ಒಂದು ಪರ್ವತ ಪ್ರದೇಶವಾಗಿದ್ದು ಪ್ರವಾಸಿ ಆಕರ್ಷಣೀಯ ಕೇಂದ್ರವಾಗಿದೆ. ಕೊಡಗಿನ ಅತ್ಯಧಿಕ ಉದ್ದ ಉತ್ತರದ ಹೇಮಾವತಿ ನದಿಯಿಂದ ದಕ್ಷಿಣದ ಬ್ರಹ್ಮಗಿರಿ ಪರ್ವತದ ವರೆಗೆ ೯೬ ಕಿ. ಮೀ. ಗಳು ಮತ್ತು ಅತ್ಯಧಿಕ ಅಗಲ ಪಶ್ಚಿಮದ ಸಂಪಾಜೆಯಿಂದ ಪೂರ್ವದ ಕುಶಾಲನಗರದವರೆಗೆ ೬೦ ಕಿ. ಮೀಗಳು. ಜಿಲ್ಲೆಯ ವಿಸ್ತೀರ್ಣ ೪,೧೦೨, ಚ. ಕಿ ಗಳಾಗಿದ್ದು, ಶೇ ೩೦ ಅರಣ್ಯ ಪ್ರದೇಶವಾಗಿದೆ. ತಡಿಯಂಡಮೊಳು, ಬ್ರಹ್ಮಗಿರಿ ಮತ್ತು ಪುಷ್ಪಗಿರಿ ಪರ್ವತಗಳು ಜಿಲ್ಲೆಯ ನೈಸರ್ಗಿಕ ತಡೆಗೋಡೆಗಳಾಗಿವೆ. ಗೌಡ, ಕೊಡವ, ಬ್ರಾಹ್ಮಣ, ಕ್ರೈಸ್ತ, ಜೈನ, ಮಾಪಿಳ್ಳೆ, ಎರವ, ಕುರುಬ, ಐರಿ ಮತ್ತು ಕುಡಿಯ ಇಲ್ಲಿನ ಪ್ರಧಾನ ಸಮುದಾಯಗಳಾಗಿವೆ.[1]

ಕೊಡಗು ಜಿಲ್ಲೆಯ ಸ್ಥೂಲ ವಿವರಗಳನ್ನು ಕೋಷ್ಟಕ ೩.೧ ರಲ್ಲಿ ನೀಡಲಾಗಿದೆ.

ಕೋಷ್ಟಕ ೩.೧ ಇಂದಿನ ಕೊಡಗು ಜಿಲ್ಲೆ


ಸೂಚಕಗಳು	ಪ್ರಮಾಣ
ವಿಸ್ತೀರ್ಣ	೪೧೦೨ ಚ. ಕಿ
ಜನಸಂಖ್ಯೆ	೫,೪೮೫೬೪
ಜನಸಾಂದ್ರತೆ	ಚ. ಕಿ. ಮೀಗೆ ೧೩೪
ಲಿಂಗಾನುಪಾತ	೧೦೦೦ : ೯೯೯
ಸಾಕ್ಷರತೆ	೬೮.೦೯

ಆಧಾರ: ಜಿಲ್ಲಾ ಅಂಕಿ ಅಂಶಗಳ ಅಧಿಕಾರಿಗಳ ಮಾಹಿತಿ

ಜಿಲ್ಲೆಯ ಜನಸಾಂದ್ರತೆ ದೇಶದ ಮತ್ತು ರಾಜ್ಯದ ಜನಸಾಂದ್ರತೆಗಿಂತ ಕಡಿಮೆ. ಲಿಂಗಾನುಪಾತ ದೇಶದ ಮತ್ತು ರಾಜ್ಯದ ಲಿಂಗಾನುಪಾತಕ್ಕಿಂತ ಅಧಿಕ. ಈ ಜಿಲ್ಲೆ ಇನ್ನೂ ಅರಣ್ಯಗಳನ್ನು, ನೈಸರ್ಗಿಕ ಸಂಪನ್ಮೂಲಗಳನ್ನು ಉಳಿಸಿಕೊಂಡಿರುವುದು ಪ್ರವಾಸಿ ಆಕರ್ಷಣೆಗೆ ಕಾರಣವಾಗಿದೆ.[2]

ಹಾಲೇರಿ ಸಂಸ್ಥಾನದ ಹುಟ್ಟಿನೊಡನೆ ಕೊಡಗು ಎಂಬ ನಾಡನ್ನು ಕಟ್ಟುವ ಪ್ರಯತ್ನ ಆರಂಭವಾಯಿತು. ಹಾಲೇರಿ ಈಗಿನ ಮಡಿಕೇರಿಯಿಂದ ಸೋಮವಾರಪೇಟೆಗೆ ಹೋಗುವ ಹಾದಿಯಲ್ಲಿ ಸುಮಾರು ೧೦ ಕಿ. ಮೀ ದೂರವಿರುವ ಊರು. ಒಂದು ಕಾಲದಲ್ಲಿ ಕೊಡಗನ್ನು ಕಟ್ಟಿದ ಹಾಲೇರಿ ಮನೆತನ ಇಲ್ಲೊಂದು ಪುಟ್ಟ ಅರಮನೆಯನ್ನು ಕಟ್ಟಿಕೊಂಡು ಹೊಸ

ಇತಿಹಾಸಕ್ಕೆ ನಾಂದಿ ಹಾಡಿತು. ಈಗ ಅದು ಖಾಸಗಿ ಭೂ ಮಾಲಿಕರ ಅಧೀನದಲ್ಲಿದ್ದು ಇತಿಹಾಸದ ಎಲ್ಲಾ ಅವಶೇಷಗಳು ಮಾಯವಾಗಿ ಹೋಗಿವೆ. ಆದರೆ ಹಾಲೇರಿ ವಂಶಸ್ಥರು ಸುಮಾರು ಕ್ರಿ. ಶ. ೧೬೦೦ ರಿಂದ ೧೮೩೪ ರವರೆಗೆ ಕೊಡಗನ್ನು ಆಳಿದರು ಮತ್ತು ಅವರಿಂದಾಗಿಯೇ ಕೊಡಗು ಒಂದು ರಾಜಕೀಯ ಘಟಕವಾಯಿತು ಎನ್ನುವ ಕಾರಣಕ್ಕೆ ಹಾಲೇರಿಯು ಅಧ್ಯಯನಶೀಲರಿಗೆ ಅತ್ಯಂತ ಮಹತ್ವದ ಸ್ಥಳವಾಗಿದೆ.



ಭೂಪಟ ೩.೧: ಇಂದಿನ ಕೊಡಗು

೩.೨. ಹಾಲೇರಿ ಪೂರ್ವದ ಆರ್ಥಿಕತೆ

ಕೊಡಗು ಎನ್ನುವ ರಾಜಕೀಯ ಘಟಕ ರೂಪುಗೊಂಡ ೧೭ನೇ ಶತಮಾನದ ಬಳಿಕ. ಅಲ್ಲಿಯವರೆಗೆ ಕೊಡಗಿನ ಈಗಿನ ಪ್ರದೇಶಗಳು ಬೇರೆ ಬೇರೆ ರಾಜರ ಆಳ್ವಿಕೆಯಲ್ಲಿ ಹರಿದು ಹಂಚಾಗಿ ಹೋಗಿತ್ತು. ಕ್ರಿ. ಶ. ೧೦ ನೇ ಶತಮಾನದವರೆಗೆ ಕೊಂಗಾಳ್ವರು ಕೊಡಗನ್ನು ಆಳಿದರು. ಕೊಂಗಾಳ್ವರು ಚೋಳ ಮೂಲದವರಾಗಿದ್ದು ಅವರಿಂದಾಗಿ ಉತ್ತರ ಕೊಡಗಿನಲ್ಲಿ ಶೈವ ಧರ್ಮ ಜನಪ್ರಿಯವಾಯಿತು ಎಂದು ಹೇಳಲಾಗಿದೆ.[೮] ಹಾಲೇರಿಯ ವಂಶಸ್ಥರು ವೀರಶೈವರಾಗಿದ್ದರು. ಅವರ ಕಾಲದಲ್ಲಿ ಅನೇಕ ಮಠಮಂದಿರಗಳು ಸ್ಥಾಪನೆಯಾದುದಕ್ಕೆ ಈಗಲೂ ಆಧಾರ ದೊರೆಯುತ್ತದೆ.

ಕೊಡಗಿನ ಈಶಾನ್ಯ ಮತ್ತು ದಕ್ಷಿಣಭಾಗಗಳನ್ನು ಸ್ವಲ್ಪಕಾಲ ಕದಂಬರು ಆಳಿದರು. ಅವರಿಂದಾಗಿ ಕೊಡವರು ಹುಟ್ಟಿಕೊಂಡರೆಂದು ವಿಲ್ಕ್ಸ್ ಪ್ರತಿಪಾದಿಸಿದ್ದಾನೆ.[೯] ಕ್ರಿ.ಶ ೧೩೭೧ ರದ್ದು ಎನ್ನಲಾದ ಕೊಡಗಿನ ಹಾಲೂರು ಶಾಸನದಲ್ಲಿ ಬೋಧರೂಪ ಭಗವರ್ ಎಂಬ ರಾಜ ಭಾಗಮಂಡಲದ ಭಗಂಡೇಶ್ವರ ಎಂಬ ದೇವಸ್ಥಾನಕ್ಕೆ ದತ್ತಿಗಳನ್ನು ನೀಡಿದ ವಿವರಗಳಿವೆ.[೧೦] ಹಾಲೇರಿ ವಂಶಕ್ಕೆ ಪೂರ್ವದಲ್ಲಿ ತಾವುನಾಡಿನಲ್ಲಿ ಕರ್ಣೆಂಬಾಹು ಎಂಬ ನಾಯಕ ಆಡಳಿತ ನಡೆಸುತ್ತಿದ್ದು ಈತ ಗೌಡ ಜನಾಂಗದವನಾಗಿರಬಹುದೆಂದು ಊಹಿಸಲಾಗಿದೆ.[೧೧] ಆದರೆ ಯಾವ ವಂಶೀಯರು ಕೊಡಗನ್ನು ಸಮಗ್ರವಾಗಿ ಆಳಿದಂತೆ ಕಂಡುಬರುವುದಿಲ್ಲ. ಅಲ್ಲದೇ ಶಾಸನಗಳ ಪ್ರಕಾರ ಕಾವೇರಿಯಿಂದ ದಕ್ಷಿಣಕ್ಕೆ ವೈನಾಡಿನವರೆಗೆ ಜನವಸತಿಗಳಿದ್ದ ಬಗ್ಗೆ ಯಾವುದೇ ಮಾಹಿತಿ ದೊರೆಯುವುದಿಲ್ಲ.

ಹಾಲೇರಿ ಪೂರ್ವದಲ್ಲಿ ಕೊಡಗನ್ನು ಚೆಂಗಾಳ್ವ, ಪೊಂಗಾಳ್ವ, ಕದಂಬರು, ಕೇರಳದ ಅರಸರುಗಳು ಆಳುತ್ತಿದ್ದು ಅಲ್ಲಲ್ಲಿ ಸಾಕ್ಷ್ಯಾಧಾರಗಳು ದೊರೆತಿರುವುದನ್ನು ಇತಿಹಾಸಕಾರರು ದಾಖಲಿಸಿದ್ದಾರೆ. ಆ ಬಳಿಕ ಕೊಡಗಿಗೆ ಗೌಡ ಜನಾಂಗದ ಪ್ರವೇಶವಾಯಿತೆಂಬುದನ್ನು ಪಾಲೂರು ಭೀಮಂಡರವರ ಕೃತಿ ದಾಖಲಿಸುತ್ತದೆ.[೧೨] ತಾವುನಾಡೆಂದು ಕರೆಯಲ್ಪಡುತ್ತಿದ್ದ ಭಾಗಮಂಡಲ ಮತ್ತು ಕರಿಕೆ ಪ್ರದೇಶಗಳಲ್ಲಿ ಗೌಡರು ೧೨ನೇ ಅಥವಾ ೧೩ನೇ ಶತಮಾನದಲ್ಲಿಯೇ ವಾಸಿಸುತ್ತಿದ್ದಿರಬೇಕು. ಭಾಗಮಂಡಲ ದೇವಸ್ಥಾನದ ಆಡಳಿತ ಇವರ ಕೈಯಲ್ಲಿತ್ತೆಂದು ಸಂಶೋಧನಾಕಾರರು ಅಭಿಪ್ರಾಯಪಡುತ್ತಾರೆ.[೧೩]

ಹಾಲೇರಿಯ ಆಡಳಿತ ಪೂರ್ವದಲ್ಲಿ ಬೇಸಾಯವೇ ಪ್ರಧಾನ ವೃತ್ತಿಯಾಗಿತ್ತು. ಭತ್ತ ಪ್ರಮುಖ ಆಹಾರ ಬೆಳೆಯಾದುದರಿಂದ ಜನರು ಗದ್ದೆ ಬೇಸಾಯದಲ್ಲಿ ಜೀವನೋಪಾಯ ಕಂಡುಕೊಳ್ಳುತ್ತಿದ್ದರು. ಕಾವೇರಿ ನದಿಯ ಉತ್ತರದಲ್ಲಿ ಜನಜೀವನ ಸಮೃದ್ಧವಾಗಿತ್ತು. ಜನರು

ಆಹಾರ ಬೆಳೆಗಳ ವಿಷಯದಲ್ಲಿ ಸ್ವಾವಲಂಬಿಗಳಾಗಿದ್ದರು. ಕಾಡು ಪ್ರದೇಶದಲ್ಲಿ ಸಮೃದ್ಧವಾಗಿ ಭಕ್ಷಣೆಗೆ ಬೇಕಾದ ಮೃಗಗಳು ಸಾಕಷ್ಟು ದೊರೆಯುತ್ತಿದ್ದವು. ಕೃಷಿಗೆ ಬೇಕಾದ ಮತ್ತು ಹಾಲಿಗೆ ಬೇಕಾಗಿ ಪಶುಪಾಲನೆಯ ವೃತ್ತಿಗಳನ್ನು ಕೈಗೊಂಡಿದ್ದರು. ಆಸೆಗಳು ಅಪರಿಮಿತವಾಗಿಲ್ಲದ ಕಾರಣ ಸ್ವಾವಲಂಬಿ ಬದುಕು ಅವರದಾಗಿದ್ದಂತೆ ಕಂಡುಬರುತ್ತದೆ. ಕಾಲಕಾಲಕ್ಕೆ ಬೇರೆಬೇರೆ ವಂಶೀಯರ ಆಕ್ರಮಣಗಳು ಪ್ರತಿರೋಧಗಳು ಇಲ್ಲದಿದ್ದುದರಿಂದ ಯುದ್ಧವೆಂಬುದು ವಸ್ತುಶಃ ಶರಣಾಗತಿಯೇ ಆಗಿತ್ತು. ಈ ನಿಟ್ಟಿನಲ್ಲಿ ಕೊಡಗಿನಲ್ಲಿ ಒಂದು ಸೇನೆಯನ್ನು ಮೊದಲ ಬಾರಿಗೆ ಕಟ್ಟಿದವ ತಾವುನಾಡಿನ ಕರ್ಣಂಬಾಹು ಇರಬಹುದೆಂದು ಊಹಿಸಬಹುದು. ಅಲ್ಲಿಯವರೆಗೆ ಆರ್ಥಿಕ ಚಟುವಟಿಕೆಗಳಿಗೆ ಸಂಘಟನೆಯ ಸ್ವರೂಪ ಇದ್ದಂತೆ ಕಂಡುಬರುವುದಿಲ್ಲ. ಬಲಶಾಲಿ ರಾಜರುಗಳ ಆಕ್ರಮಣವಾದಾಗ ಅವರಿಗೆ ತಮ್ಮ ನಿಷ್ಠೆಯನ್ನು ಬದಲಾಯಿಸಿ ಜನರು ಬದುಕುವ ಹಾದಿಯನ್ನು ಕಂಡು ಕೊಂಡಿರಬೇಕು.

ಈಗಿನ ಕೊಡಗು ಎಂದು ಕರೆಯುವ ಪ್ರದೇಶವು ಐದನೇ ಶತಮಾನಕ್ಕೆ ಮೊದಲೇ ಕದಂಬರ ಪ್ರಭಾವಕ್ಕೆ ಒಳಗಾಯಿತೆಂದು ಭಾವಿಸಲಾಗಿದೆ.[೧೪] ಶಾಸನಗಳ ಪ್ರಕಾರ ಈಗಿನ ವೈನಾಡಿನವರೆಗೆ ೧೧ ಮತ್ತು ೧೨ನೇ ಶತಮಾನದಲ್ಲಿ ಕದಂಬ ರಾಜ್ಯವು ವಿಸ್ತರಿಸಲ್ಪಟ್ಟಿತ್ತು. ಕ್ರಿ. ಶ ೧೦೨೦, ಕ್ರಿ. ಶ ೧೦೪೭ ಮತ್ತು ಕ್ರಿ. ಶ. ೧೦೯೩ ರ ಶಾಸನಗಳು ಕೊಡಗು ಕದಂಬರ ಆಡಳಿತಕ್ಕೆ ಒಳಪಟ್ಟಿದ್ದನ್ನು ತಿಳಿಸುತ್ತದೆ. ಆದರೆ ಕದಂಬರು ಯಾವ ಭಾಗವನ್ನು ವಶಪಡಿಸಿಕೊಂಡಿದ್ದರು ಎಂಬುದಕ್ಕೆ ಖಚಿತ ಆಧಾರಗಳಿಲ್ಲ. ಕದಂಬರ ರಾಜಕುಮಾರ ಚಂದ್ರವರ್ಮನು ಕೊಡವರ ಮೂಲ ಪುರುಷನೆಂದು ಕೊಡವರು ಭಾವಿಸುತ್ತಾರೆ.[೧೫] ಆದರೆ ಈತ ಇತಿಹಾಸ ಪುರುಷನೋ, ಐತಿಹ್ಯ ಪುರುಷನೋ ಎಂಬ ಬಗ್ಗೆ ಗೊಂದಲಗಳಿವೆ. ಕ್ರಿ. ಶ ೧೦ನೇ ಶತಮಾನದವರೆಗೂ ಕೊಡಗು ಯಾವುದೇ ರಾಜರ ಶಿಸ್ತುಬದ್ಧ ಆಡಳಿತಕ್ಕೆ ಒಳಪಟ್ಟಿದ್ದಕ್ಕೆ ಸಾಕ್ಷ್ಯಾಧಾರಗಳಿಲ್ಲ. ಇದನ್ನು ನೋಡಿದರೆ ಕದಂಬರನ್ನು ತಮ್ಮ ಮೂಲಪುರುಷರು ಎಂದು ತೋರಿಸಿಕೊಳ್ಳುವುದಕ್ಕಾಗಿ ಇತಿಹಾಸ ಹೆಣೆಯಲಾಯಿತೇ ಎಂಬ ಸಂಶಯ ಮೂಡದಿರದು. ಕ್ರಿ. ಶ ೧೦ನೇ ಶತಮಾನದವರೆಗೆ ಕೊಡಗಿನ ಭೌಗೋಳಿಕತೆ ಎಲ್ಲೆಗಳು ಯಾವುದೆಂದು ನಿರ್ಣಯವಾಗಿರಲಿಲ್ಲ. ಅಲ್ಲದೆ ವ್ಯವಸ್ಥಿತವಾದ ಗ್ರಾಮ ಜೀವನ ಕ್ರಿ. ಶ ೧೦ನೇ ಶತಮಾನದವರೆಗೆ ಅತಿಭಯಾನಕ ಗಿರಿವನ ಬೆಟ್ಟಗಳಿಂದ ತುಂಬಿದ್ದ ಕೊಡಗಿನಲ್ಲಿತ್ತೆ ಎಂಬ ಪ್ರಶ್ನೆಗೆ ಖಚಿತವಾದ ಉತ್ತರ ದೊರೆಯುವುದಿಲ್ಲ.

ಕ್ರಿ. ಶ ೪೦೦ ರಿಂದ ೧೦೦೦ ದವರೆಗೆ ಕೊಡಗಿನ ಉತ್ತರಭಾಗವನ್ನು ಗಂಗವಂಶದ ರಾಜರು ಆಳಿದರೆಂದು ಕ್ರಿ. ಶ ೪೭೭ನೇ ಇಸವಿಯ ತಾಮ್ರ ಶಾಸನದಿಂದ ತಿಳಿದು ಬರುತ್ತದೆ.[೧೬] ಕ್ರಿ.ಶ ೯೮೭ ರಿಂದ ೧೧೧೮ ರವರೆಗೆ ಚೋಳ ಅರಸರು ದಕ್ಷಿಣಭಾರತವನ್ನು ಆಳಿದರು.

ಕೊಡಗಿನಲ್ಲಿ ಅವರ ಆಡಳಿತ ಇತ್ತು ಎನ್ನುವುದಕ್ಕೆ ಕೊಡಗಿನ ಕೆಲವು ಸ್ಥಳಗಳಲ್ಲಿ ದೊರೆತ ಚೋಳರ ಕಾಲದ ಹಣ ಅಥವಾ ವೀರರಾಯಿ ಹಣ ಸಾಕ್ಷಿಯಾಗಿವೆ.[೧೭] ಕ್ರಿ. ಶ ೯೧೯ರ ಶಾಸನದಲ್ಲಿ ರಾಜ ಚೋಳನು ವೆಂಗಿ ಮತ್ತು ಕುಡುಮಲೆ ನಾಡನ್ನು ಗೆದ್ದನೆಂಬ ಉಲ್ಲೇಖವಿದೆ. ಕ್ರಿ. ಶ ೧೪೦೦ ರ ಶಾಸನದಲ್ಲಿ ರಾಜಕೇಸರಿವರ್ಮ ಚೋಳನು ಮಾಲಂಬಿಯನ್ನು ಗೆದ್ದನೆಂದು ಉಲ್ಲೇಖಿಸಲಾಗಿದೆ.[೧೮] ಚೋಳರು ಕಾವೇರಿ ನೀರನ್ನು ಬಳಸಿ ಕೃಷಿ ಚಟುವಟಿಕೆಗಳನ್ನು ನಡೆಸುತ್ತಿದ್ದರು. ಕರಿಕಾಲಚೋಳನ ಕಾಲದಲ್ಲಿ ಕೊಡಗಿನಿಂದ ಶ್ರೀಗಂಧದ ಮರವನ್ನು ತನ್ನ ರಾಜಧಾನಿಗೆ ತೆಗೆದುಕೊಂಡು ಹೋಗುತ್ತಿದ್ದರೆಂಬ ಬಗ್ಗೆ ಉಲ್ಲೇಖಗಳಿವೆ. ಚೋಳರ ಕಾಲದ ಪರಶುರಾಮ ದೇವಾಲಯ ಕೊಡಲಿಪೇಟೆಯಲ್ಲಿ, ರಾಮಸ್ವಾಮಿ ದೇವಾಲಯ ಕುಶಾಲನಗರದಲ್ಲಿ, ಪಾಲೂರು ಮತ್ತು ಭಾಗಮಂಡಲ ದೇವಾಲಯಗಳು ಕೊಡಗಿನ ಸಾಂಸ್ಕೃತಿಕ ಬದುಕಿಗೆ ಚೋಳರ ಕೊಡುಗೆಗಳಾಗಿವೆ.[೧೯]

ಕುಲೋತ್ತುಂಗ ಚೋಳನ ಕೆಲವು ಶಾಸನಗಳು ಕೊಡಗಿನಲ್ಲಿ ಅಸ್ತಿತ್ವದಲ್ಲಿದ್ದವು. ಕ್ರಿ.ಶ ೧೩೩೬ ರವರೆಗೆ ಚೋಳರು ಮತ್ತು ಹೊಯ್ಸಳರು ಕೊಡಗಿನ ಬೇರೆಬೇರೆ ಭಾಗಗಳನ್ನು ಆಳುತ್ತಿದ್ದರು. ಕ್ರಿಶ ೧೧೪೦ರ ದ್ವಾರ ಸಮುದ್ರದ ನರಸಿಂಹನ ಶಾಸನದಲ್ಲಿ ಕೊಡಗನ್ನು ಹೊಯ್ಸಳರು ವಶಪಡಿಸಿಕೊಂಡ ವಿವರಗಳಿವೆ.[೨೦] ಶಾಸನಗಳ ಪ್ರಕಾರ ಕದಂಬ,ಗಂಗಾ, ಚೋಳ ಮತ್ತು ಚೇರರ ಬಳಿಕ ಕೊಡಗನ್ನು ಆಳಿದವರಲ್ಲಿ ಕೊಂಗಾಳ್ವರು ಮತ್ತು ಚೆಂಗಾಳ್ವರು ಪ್ರಮುಖರಾಗುತ್ತಾರೆ. ಕೊಂಗಾಳ್ವರ ರಾಜ್ಯ ಮೈಸೂರಿನ ಅರಕಲಗೂಡು ಮತ್ತು ಉತ್ತರ ಕೊಡಗಿನ ಏಳುಸಾವಿರ ಸೀಮೆಯವರೆಗೆ ವಿಸ್ತರಿಸಿತ್ತು. ಮಾಲಂಬಿಬೆಟ್ಟದ ಬಂಡದ ಮುಳ್ಳೂರು ಕೊಂಗಾಳ್ವರ ರಾಜಧಾನಿಯಾಗಿತ್ತು. ಮತ್ತು ಅವರು ಜೈನ ಧರ್ಮೀಯ ಚೋಳ ವಂಶಸ್ಥರಾಗಿದ್ದರು.[೨೧]

ಕ್ರಿ. ಶ ೧೯೬೬ರಲ್ಲಿ ಮುಳ್ಳೂರನ್ನು ವಶಪಡಿಸಿಕೊಂಡ ಚೆಂಗಾಳ್ವರು ಕೊಡಗನ್ನು ಆಳಲು ಆರಂಭಿಸಿದರು. ಅವರಿಗೆ ಹನಸೋಗೆ, ನನ್ನಿ ಚೆಂಗಾಳ್ವ ಮುಂತಾದ ಹೆಸರುಗಳಿದ್ದವು. ಚೋಳರಾಜರ ಪ್ರಾಬಲ್ಯವನ್ನು ಮುರಿದ ಮೇಲೆ ಚೋಳರ ಮಾಂಡಲಿಕರಾಗಿದ್ದ ಚೆಂಗಾಳ್ವರಿಗೂ ಹೊಯ್ಸಳರಿಗೂ ಆಗಾಗ ಯುದ್ಧಗಳು ನಡೆಯುತ್ತಿದ್ದು ಕೊನೆಗೆ ಚೆಂಗಾಳ್ವರು ಸೋತು ಹೊಯ್ಸಳರ ಅಧಿರಾಜತ್ವವನ್ನು ಒಪ್ಪಿಕೊಳ್ಳಬೇಕಾಯಿತು ಎಂದು ತಿಳಿದು ಬರುತ್ತದೆ.

ಕ್ರಿ. ಶ ೧೦೦೬ ನೇ ಇಸವಿಯಲ್ಲಿ ಹೊಯ್ಸಳರು ಕೊಂಗಾಳ್ವರನ್ನು ಸೋಲಿಸಿ ಅನಂತರ ದಕ್ಷಿಣಕ್ಕೆ ದಂಡೆತ್ತಿ ಹೋಗಿ ತಲಕಾಡಿನ ಎದುರಿನ ಕಾವೇರಿ ನದಿ ದಡದಲ್ಲಿ ಚೋಳರ ಸಾಮಂತ ಅಪ್ರೇಮಯನೊಡನೆ ಯುದ್ಧ ಮಾಡಿದರು. ಆದರೆ ಈ ಯುದ್ಧದಲ್ಲಿ ಪ್ರೇಮಯನು ಸತ್ತು ಹೋಗಿ ಹೊಯ್ಸಳರಿಂದ ಕೊಂಗಾಳ್ವರು ಸೋತು ಹೋದರೂ ಕೆಲವೇ ವರ್ಷಗಳಲ್ಲಿ ಪ್ರಬಲರಾಗಿ ಮತ್ತೆ

ರಾಜೇಂದ್ರಚೋಳ ಪೃಥ್ವಿ ಮಹಾರಾಜ ಕೊಂಗಾಳ್ವನು ಹೊಯ್ಸಳ ನೃಪಕಾಮನೊಡನೆ ಯುದ್ಧ ಮಾಡಿದನೆಂದು ರಾಜೇಂದ್ರ ಪುರದ ಕ್ರಿ. ಶ ೧೦೨೨ ನೇ ಶಾಸನದಲ್ಲಿ ಬರೆಯಲ್ಪಟ್ಟಿದೆ. ಕ್ರಿ. ಶ ೧೦೨೬ ಅರ್ಕಲಗೂಡಿನ ಶಾಸನದಲ್ಲಿ ಇದೇ ಕೊಂಗಾಳ್ವ ರಾಜನು ನೃಪಕಾಮ ಹೊಯ್ಸಳನ ಮೇಲೆ ದಂಡು ತೆಗೆದುಕೊಂಡು ಹೋಗಿ ಮನ್ನಿ ಎಂಬಲ್ಲಿ ಅವನನ್ನು ಸೋಲಿಸಿದನೆಂದು ಬರೆದಿದೆ.[೨೨]

ಹೊಯ್ಸಳರಿಗೆ ಸಂಬಂಧಿಸಿದ ನಾಲ್ಕು ಶಾಸನಗಳು ಕಂಡು ಬರುತ್ತವೆ. ಅವುಗಳಲ್ಲಿ ಎರಡು ೧೧೭೫ ನೇ ಇಸವಿಯದಾಗಿದ್ದು ಇಮ್ಮಡಿ ವೀರಬಲ್ಲಾಳನ ಕಾಲದ್ದು. ಇನ್ನೆರಡು ೧೨೫೫ ಮತ್ತು ೧೨೮೫ ರ ಇಸವಿಯದಾಗಿದ್ದು ಮುಮ್ಮಡಿ ನರಸಿಂಹನ ಕಾಲದ್ದು. ಈ ಶಾಸನಗಳು ಏಳು ಸಾವಿರ ಸೀಮೆಯ ಬಿಳಹ ಹೋಬಳಿಯಲ್ಲೂ, ಕಣಿವೆ ಹೋಬಳಿಯಲ್ಲೂ ಸಿಕ್ಕಿವೆ.[೨೩] ಈ ಶಾಸನಗಳಿಂದ ಹೊಯ್ಸಳರು ಸ್ವಲ್ಪ ಕಾಲ ಕೊಡಗಿನ ಉತ್ತರಭಾಗವನ್ನು ತಾವೇ ಆಳುತ್ತಿದ್ದರೆಂಬುದನ್ನು ಊಹಿಸಬಹುದು. ಕೊನೆಗೆ ೧೪ನೇಯ ಶತಮಾನದ ಆದಿಯಲ್ಲಿ ಉತ್ತರದಿಂದ ಮಹಮ್ಮದೀಯರು ದಂಡೆತ್ತಿಬಂದು ದಕ್ಷಿಣದ ರಾಜ್ಯಗಳನ್ನೆಲ್ಲಾ ಸೋಲಿಸಿ ಒಡೆದು ಹಾಕಿದರು. ಕ್ರಿ. ಶ ೧೩೧೦ರಲ್ಲಿ ಮಲ್ಲಿಕಾಫರ್‌ನಿಂದ ಹೊಯ್ಸಳರು ಸೋತರು. ಆ ಬಳಿಕ ೧೩೪೬ ರಲ್ಲಿ ಹೊಯ್ಸಳರು ಆಳ್ವಿಕೆ ಮಾಡುತ್ತಿದ್ದರೂ ಅವರ ಬಲ ತಗ್ಗಿತ್ತು. ೧೩೪೬ರ ನಂತರ ಹೊಯ್ಸಳರ ಪ್ರಾಬಲ್ಯ ತೀರಾ ಕಡಿಮೆಯಾದಂತೆ ಕಂಡು ಬರುತ್ತದೆ.

ಕೊಡಗಿನಲ್ಲಿ ಎರಡು ತಮಿಳು ಅಕ್ಷರದ ಶಾಸನಗಳು ಭಾಗಮಂಡಲ ಮತ್ತು ಪಾಲೂರು ದೇವಸ್ಥಾನಗಳಲ್ಲಿವೆ. ಇವುಗಳಲ್ಲಿ ಬೋಧರೂಪನೆಂಬ ರಾಜನು ಆ ಎರಡು ದೇವಸ್ಥಾನಗಳಲ್ಲಿ ಪೂಜೆ ನಡೆಸುವುದಕ್ಕೆ ಸಂಬಂಧಪಟ್ಟಂತೆ ಮಾಡಿದ ಉಲ್ಲೇಖವಿದೆ. ಕ್ರಿ.ಶ. ೧೩೨೧ ರಲ್ಲಿ ವಿಜಯನಗರದಲ್ಲಿ ಬುಕ್ಕರಾಯನು ಆಳುತ್ತಿದ್ದಾಗ ಹಾಸನ ತಾಲೂಕಿನ ದುರ್ಗದಲ್ಲಿ ಬೋಧಮಹಾದೇವನೆಂಬವನು ಆಳುತ್ತಿದ್ದನೆಂದು ಮೂಡುಗೆರೆಯ ೮೬ನೆಯ ಶಾಸನ ತಿಳಿಸುತ್ತದೆ.[೨೪]

ಬೋಧ ಮಹಾದೇವನೆಂಬವನು ಕುಯ್ಯಂಗೇರಿ ನಾಡಿನ ಪಾಲೂರು ಮಹಾದೇವರ ಪೂಜೆಗೆ ವ್ಯವಸ್ಥೆಗೊಳಿಸಿದ ಕ್ರಮಗಳನ್ನು ಒಳಗೊಂಡ ಶಾಸನ ಪಾಲೂರು ಮಹಾಲಿಂಗೇಶ್ವರ ದೇವಸ್ಥಾನದಲ್ಲಿದೆ. ಇದೇ ರೀತಿ ಪೂಜೆಗೆ ವ್ಯವಸ್ಥೆಗೊಳಿಸಿದ ಕ್ರಮಗಳನ್ನು ಒಳಗೊಂಡ ಶಾಸನ ಭಾಗಮಂಡಲದ ಭಗಂಡೇಶ್ವರ ದೇವಾಲಯದಲ್ಲೂ ಕಂಡುಬರುತ್ತದೆ.[೨೫] ಆದರೆ ಬೋಧರೂಪನ ರಾಜ್ಯವು ಎಲ್ಲಿಯವರೆಗೆ ವಿಸ್ತರಿಸಿತ್ತು, ಆತನು ಯಾವ ವಂಶಕ್ಕೆ ಸೇರಿದವನು ಮತ್ತು ಯಾವ ಕಾಲದಲ್ಲಿ ಕೊಡಗನ್ನು ಆಳಿದನು ಎಂಬ ವಿವರಗಳು ದೊರೆಯುವುದಿಲ್ಲ.

ಹೊಯ್ಸಳರ ಬಳಿಕ ಕೊಡಗಿನ ವಿವಿಧ ಭಾಗಗಳಲ್ಲಿ ಕೆಲವು ನಾಯಕರುಗಳು ಆಡಳಿತ ನಡೆಸಿದರು. ಅವರಲ್ಲಿ ತಾವುನಾಡಿನ ಕರ್ಣಿಂಬಾಹು ಅತ್ಯಂತ ಪ್ರಭಾವಶಾಲಿಯಾಗಿದ್ದನೆಂದು ಕಂಡುಬರುತ್ತದೆ. ಅವನನ್ನು ಹಾಲೇರಿ ವಂಶದ ಮೂಲಪುರುಷ ವೀರಪ್ಪರಾಜ ಸೋಲಿಸುವುದರೊಂದಿಗೆ ಹೊಸ ಶಕೆಯೊಂದು ಆರಂಭವಾಗಿ ಅದು ಕೊಡಗು ಎಂಬ ನಾಡನ್ನು ಕಟ್ಟಲು ನಾಂದಿಯಾಯಿತು.

ಕ್ರಿ. ಶ. ೪೦೦ ರಿಂದ ಕ್ರಿ. ಶ ೧೬೦೦ ರವರೆಗಿನ ಕೊಡಗಿನ ಆರ್ಥಿಕತೆ ಹೇಗಿತ್ತೆನ್ನುವುದನ್ನು ಲಭ್ಯವಿರುವ ಶಾಸನಗಳ ಆಧಾರದಲ್ಲಿ ವಿಶ್ಲೇಷಿಸಬೇಕಾಗುತ್ತದೆ. ಆಧುನಿಕ ಅರ್ಥದಲ್ಲಿ ನಾವು ಬಳಸುವ ಅರ್ಥಿಕತೆ ಎಂಬ ಪರಿಕಲ್ಪನೆಯಾಗಲೀ, ಪ್ರಾಥಮಿಕ ಅನುಷಂಗಿಕ ಮತ್ತು ತೃತೀಯ ವಲಯಗಳಾಗಲೀ ಆಗ ಇರಲಿಲ್ಲ. ದಟ್ಟ ಅರಣ್ಯಗಳಲ್ಲಿ ಸಮೃದ್ಧ ಖಗಮೃಗ ಸಂಕುಲಗಳಿದ್ದುದರಿಂದ ಬೇಟೆಗಾರಿಕೆಗೆ ಆಗ ಮಹತ್ವವಿತ್ತು. ಹಾಲೇರಿ ಅರಸರುಗಳು ಕೂಡಾ ಬೇಟೆಗೆ ಮಹತ್ವ ನೀಡಿದ್ದರು. ಕೊಡಗಿನ ಮೂಲ ಸಮುದಾಯಗಳು ಬುಡಗಟ್ಟು ವರ್ಗಕ್ಕೆ ಸೇರಿದ್ದ ಅರಣ್ಯವಾಸಿಗಳಾಗಿದ್ದರು. ಅರಣ್ಯೋತ್ಪತ್ತಿಯಿಂದ ಜೀವನ ಸಾಗಿಸುವ ಅನೇಕ ಸಮುದಾಯಗಳು ಹದಿನೆಂಟನೆಯ ಶತಮಾನದವರೆಗೂ ಕಾಡನ್ನೆ ಅವಲಂಬಿಸಿ ಜೀವನ ಸಾಗಿಸುತ್ತಿದ್ದವು. ಸಮತಟ್ಟಾದ ಜಾಗಗಳಲ್ಲಿ ಕೃಷಿ ಮಾಡುವ ರೈತರು ಬೆಳೆಗಳನ್ನು ಕಾಡು ಪ್ರಾಣಿಗಳಿಂದ ರಕ್ಷಿಸಿಕೊಳ್ಳಲು ಹರಸಾಹಸ ಪಡಬೇಕಾದ ಅನಿವಾರ್ಯತೆಯಿತ್ತು. ಹಾಲೇರಿ ರಾಜರುಗಳ ಆಡಳಿತ ಪೂರ್ವದಲ್ಲಿ ಎಂತಹ ಕಂದಾಯ ವ್ಯವಸ್ಥೆ ಅಸ್ತಿತ್ವದಲ್ಲಿತ್ತು ಎಂಬ ಬಗ್ಗೆ ಸಾಕಷ್ಟು ಗೊಂದಲಗಳಿವೆ. ವಾಸ್ತವವಾಗಿ ಕಾವೇರಿ ನದಿಯ ಬಲದಂಡೆಯಲ್ಲಿ ಇಂದಿನ ದಕ್ಷಿಣ ಕೊಡಗಿನಲ್ಲಿ ಯಾವ ಆಡಳಿತ ವ್ಯವಸ್ಥೆಗೂ ಒಳಪಡದ ಅರಾಜಕತೆ ಇದ್ದಂತೆ ಕಂಡುಬರುತ್ತದೆ. ಅಲ್ಲಿದ್ದಿರಬಹುದಾದದ್ದು ಕೃಷಿ ಪಂಥೀಯರು ನಂಬಿದ್ದ ನಿಸರ್ಗ ಸಹಜ ವ್ಯವಸ್ಥೆ ಮತ್ತು ನಿಸರ್ಗದ ನಿಯಮ ಮಾತ್ರ ಎಂದು ತೋರುತ್ತದೆ.[೨೬] ವಾಣಿಜ್ಯ ಪಂಥದ ನೀತಿಗಳಿಗೆ ಪ್ರತಿಕ್ರಿಯೆಯಾಗಿ ಫ್ರಾನ್ಸಿನಲ್ಲಿ ಹದಿನೆಂಟನೇಯ ಶತಮಾನದಲ್ಲಿ ಕೃಷಿ ಪಂಥವು ಹುಟ್ಟಿಕೊಂಡಿತು. ಕೃಷಿ ಪಂಥೀಯರು ಭೂಮಿಗೆ ಮಾತ್ರ ಸಂಪತ್ತನ್ನು ಸೃಷ್ಟಿಸಲು ಸಾಧ್ಯವಿದೆ. ಕೃಷಿಯು ನಿಸರ್ಗದ ಕರುಣೆಯಾದುದರಿಂದ ಅದನ್ನು ಸರಕಾರ ನಿಯಂತ್ರಿಸಬಾರದು ಎಂದು ಪ್ರತಿಪಾದಿಸುತ್ತಿದ್ದರು. ಆಡಂಸ್ಮಿತ್ ಪ್ರತಿಪಾದಿಸುತ್ತಿದ್ದ ಲೇಸೆಫೇರ್ ನೀತಿ ಮೂಲತಃ ಕೃಷಿ ಪಂಥೀಯರ ಕೊಡುಗೆ.

ಕೆಲವು ಶಾಸನಗಳ ಆಧಾರದಲ್ಲಿ ಹಾಲೇರಿ ಪೂರ್ವದ ಆರ್ಥಿಕತೆಯ ಅಲ್ಪ ಸ್ವಲ್ಪ ವಿವರಗಳು ಸಿಗುತ್ತವೆ. ಕ್ರಿ.ಶ. ೮೮೮ ರ ಶಾಸನವೊಂದರಲ್ಲಿ ಪೆನ್ನ ಗಂಗರಸ ಸತ್ಯವಾಕ್ಯ ಕೊಂಗುಣಿವರ್ಮನು ಕಡಂಗದ ಜೈನ ಬಸದಿಯ ಪೂಜೆಗಾಗಿ ಜೈನ ಗುರುವೊಬ್ಬನಿಗೆ ಕಿಗಟ್ಟುನಾಡಿನ ಜೀಲೂರು ಗ್ರಾಮದ ಹನ್ನೆರಡು ಅಗ್ರಹಾರಗಳನ್ನು ದಾನವಾಗಿತ್ತ ಉಲ್ಲೇಖವಿದೆ.[೨೭] ಇದು ದ.ಕ

ದ ಬ್ರಹ್ಮಾದಾಯ ಪದ್ಧತಿಯನ್ನು ನೆನಪಿಗೆ ತರುತ್ತದೆ. ಇದೇ ಕಾಲದ ಲಕ್ಕುಂದ ಶಾಸನದಲ್ಲಿ ಇದೇ ಅರಸನು ಜೀಡಲ ಎರೆಯಂಗ ಗವುಡನ ಮಗುವಿಗೆ ನಲುವತ್ತು ಚಿನ್ನದ ಗದ್ಯಾಣಗಳನ್ನು ಮತ್ತು ೧೦೦ ಸೇರು ಬೀಜ ಭತ್ತದ ನಿಶ್ಚಿತ ಗೇಣಿಯ ಮೇಲೆ ಭೂಮಿಯನ್ನು ನೀಡಿರುವುದರ ಉಲ್ಲೇಖವಿದೆ. ಕ್ರಿ. ಶ ೯ ನೇ ಶತಮಾನದಲ್ಲಿ ಚಿನ್ನದ ನಾಣ್ಯಗಳ ಚಲಾವಣೆ ಇದ್ದುದನ್ನು ಮತ್ತು ಭೂಮಿಯನ್ನು ಸ್ಥಿರ ಗೇಣಿಗೆ ಒಕ್ಕಲುತನಕ್ಕೆ ನೀಡುತ್ತಿದ್ದ ಕ್ರಮ ಅಸ್ತಿತ್ವದಲ್ಲಿದ್ದುದನ್ನು ಇದು ಸೂಚಿಸುತ್ತದೆ. ಹದಿನೆಂಟನೆಯ ಶತಮಾನದಲ್ಲಿ ಆಗಿನ ಕಲೆಕ್ಟರ್ ಮನ್ರೋ ದ.ಕ ಜಿಲ್ಲೆಯಲ್ಲಿ ಗೇಣಿಯ ಶಾಶ್ವತ ಇತ್ಯರ್ಥಕ್ಕೆ ಪಟ್ಟ ಪಾಡು ವ್ಯರ್ಥವಾದುದನ್ನು ನೆನಪಿಸಿಕೊಂಡರೆ ಒಂಬತ್ತನೇ ಶತಮಾನದ ಗಂಗರಸರ ಆಡಳಿತ ಕಾಲದ ಅರಿವಾಗುತ್ತದೆ.

ಕ್ರಿ.ಶ ೯೭೮ರ ಶಾಸನದಲ್ಲಿ ಇದೇ ಮಹಾರಾಜ ಪೆಗ್ಗೂರು ಮತ್ತು ಕಡಂಗ ಗ್ರಾಮಗಳನ್ನು ಅನಂತ ಎಂಬ ಜೈನ ಗುರುವಿಗೆ ದಾನ ನೀಡಿದ ಉಲ್ಲೇಖವಿದೆ. ಕ್ರಿ. ಶ ೧೦೦೦ನೇ ಇಸವಿಯ ಶಾಸನವೊಂದು ಗಣಗೂರು ಗ್ರಾಮದ ಧರ್ಮ ಶೆಟ್ಟಿ ಎಂಬಾತನು ಕೆಲವು ಗ್ರಾಮಗಳನ್ನು ತನ್ನ ಪರಾಕ್ರಮದಿಂದ ಗೆದ್ದವನು ತನ್ನ ಪಾಪ ಪರಿಹಾರಾರ್ಥ ರಾಮೇಶ್ವರ ದೇವರಿಗೆ ಒಂದು ಖಂಡುಗ ಭತ್ತ ಬೆಳೆಯುವ ಭೂಮಿಯನ್ನು ಅರ್ಪಿಸಿದುದನ್ನು ತಿಳಿಸುತ್ತದೆ. ಇದು ದೇವರಿಗೆ ಏನನ್ನಾದರು ನೀಡಿದರೆ ಸಂಚಿತ ಪಾಪಕರ್ಮಗಳ ನಿವಾರಣೆಯಾಗುತ್ತದೆನ್ನುವ ನಂಬಿಕೆಯ ಸಾರ್ವತ್ರಿಕತೆ ಮತ್ತು ಸಾರ್ವಕಾಲಿಕತೆಯನ್ನು ಸೂಚಿಸುತ್ತದೆ.

ಹಾಲೇರಿ ಪೂರ್ವದ ಆರ್ಥಿಕತೆಯ ಕೆಲವು ವಿವರಗಳು ಕ್ರಿ.ಶ. ೧೧೭೬ ನೇ ಇಸವಿಯ ಕೊಡಗಿನ ೩೩ ನೇ ಶಾಸನದಲ್ಲಿ ದೊರೆಯುತ್ತವೆ. ಕೊಂಗಾಳ್ವರ ಕೊನೆಯ ರಾಜ ವೀರ ಚೋಳನು ಹೊಯ್ಸಳರ ದೊರೆ ಇಮ್ಮಡಿ ವೀರಬಲ್ಲಳನ ರಾಣಿ ಪದ್ಮಲಾದೇವಿ, ಆಕೆಯ ಮಗಳು ಸೋಮಲಾದೇವಿ ಮತ್ತಿತರರ ಸಮ್ಮುಖದಲ್ಲಿ ಶನಿವಾರ ಸಂತೆ ಬಳಿಯ ಮುಳ್ಳೂರಿನಲ್ಲಿ ಸುಂಕ ಸಂಗ್ರಹದ ಹಕ್ಕನ್ನು ಅಣ್ಣಾತಮ್ಮ ಎಂಬಾತನಿಗೆ ನೀಡಿದುದನ್ನು ಈ ಶಾಸನ ತಿಳಿಸುತ್ತದೆ. ಕೊಂಗಾಳ್ವರು ಹೊಯ್ಸಳರ ಮಾಂಡಲಿಕರಾಗಿದ್ದರೆಂದು, ಗ್ರಾಮೀಣ ಪ್ರದೇಶಗಳಲ್ಲಿ ಆಗ ಸುಂಕ ಹೇರಿಕೆ ಇತ್ತೆಂದೂ ಇದರಿಂದ ತಿಳಿದುಬರುತ್ತದೆ.

ಈ ವರೆಗಿನ ವಿಶ್ಲೇಷಣೆಯ ಆಧಾರದಲ್ಲಿ ಕೆಲವು ತೀರ್ಮಾನಗಳಿಗೆ ಬರಬಹುದು:

❖ ಹಾಲೇರಿ ಪೂರ್ವದಲ್ಲಿ ಉತ್ತರ ಕೊಡಗಿನ ಕೆಲವು ಭಾಗಗಳಲ್ಲಿ ಜನರು ಬೇಟೆ ಮತ್ತು ಕೃಷಿಯಿಂದ ಬದುಕು ಸಾಗಿಸುತ್ತಿದ್ದರು. ಅವರನ್ನು ತಮ್ಮ ಅಧಿಪತ್ಯಕ್ಕೆ ಒಳಪಡಿಸಲು ಕೊಡಗಿನ ಹೊರಗಿನ ರಾಜರುಗಳು ಯತ್ನಿಸಿದ್ದನ್ನು ಬಿಟ್ಟರೆ ಇಂದಿನ ಕೊಡಗು ಅಂದು ರೂಪುಗೊಂಡಿರಲಿಲ್ಲ.


- ಗಂಗ, ಚೋಳ, ಕೊಂಗಾಳ್ವ, ಚೆಂಗಾಳ್ವ, ಹೊಯ್ಸಳ ಮುಂತಾದ ವಂಶಸ್ಥರು ಉತ್ತರ ಕೊಡಗಿನ ಹೊರ ಭಾಗಗಳಲ್ಲಿ ಆಳ್ವಿಕೆ ನಡೆಸುತ್ತಿದ್ದುದರಿಂದ ಕೊಡಗಿನಲ್ಲಿ ಒಂದು ಸಮರ್ಪಕ ಆಡಳಿತ ವ್ಯವಸ್ಥೆ ಇದ್ದಂತೆ ಕಂಡುಬರುವುದಿಲ್ಲ.

- ಹಾಲೇರಿ ಪೂರ್ವದಲ್ಲಿ ಈಗಿನ ಕೊಡಗಿನ ಕೆಲವು ಭಾಗಗಳನ್ನು ತಮ್ಮ ರಾಜ್ಯದ ಭಾಗಗಳನ್ನಾಗಿ ಮಾಡಿಕೊಂಡ ರಾಜರುಗಳು ಆರಾಧನಾ ಕೇಂದ್ರಗಳಿಗೆ ಉಂಬಳಿ ನೀಡಿ ದೇವರ ಒಲವು ಗಳಿಸುವ ಯತ್ನ ಮಾಡುತ್ತಿದ್ದರೇ ಹೊರತು ಕೊಡಗಿನ ಜನರ ಯೋಗ ಕ್ಷೇಮದ ಬಗ್ಗೆ ಯೋಚಿಸಿದಂತೆ ಕಂಡುಬರುವುದಿಲ್ಲ. ಸುಂಕ ಸಂಗ್ರಹಿಸಲು ಅವರು ಸ್ಥಳೀಯ ಸಾಮಾಜಿಕ ಬಲಾಢ್ಯರನ್ನು ನೇಮಿಸುತ್ತಿದ್ದರು. ಅವರು ಸುಂಕ ಯಾವಾಗ ಹೇಗೆ ಎತ್ತುತ್ತಿದ್ದರು ಮತ್ತು ಹಾಗೆ ಎತ್ತಿದ ಸುಂಕದಲ್ಲಿ ತಮ್ಮ ಪ್ರಭುಗಳಿಗೆ ಎಷ್ಟನ್ನು ಸಲ್ಲಿಸುತ್ತಿದ್ದರು ಎಂಬ ಬಗ್ಗೆ ಯಾವುದೇ ಉಲ್ಲೇಖ ದೊರೆಯುವುದಿಲ್ಲ. ಆದುದರಿಂದ ಕೊಡಗು ಏಕೀಕರಣಗೊಂಡದ್ದು, ಕೊಡಗಿಗೊಂದು ಕ್ರಮಬದ್ಧ ಆಡಳಿತ ಮತ್ತು ಕಂದಾಯ ವ್ಯವಸ್ಥೆ ರೂಪುಗೊಂಡದ್ದು ಹಾಲೇರಿಯ ಅರಸರುಗಳಿಂದ ಎಂಬ ತೀರ್ಮಾನಕ್ಕೆ ಬರಬಹುದಾಗಿದೆ.

೩. ೩. ಹಾಲೇರಿಯ ಆರಂಭಿಕ ಅರ್ಥಿಕತೆ

ಈಗಿನ ಮಡಿಕೇರಿಯಿಂದ ಸುಮಾರು ೮ಕಿ. ಮೀ ದೂರದಲ್ಲಿರುವ ಹಾಲೇರಿ ಇಡೀ ಕೊಡಗಿನ ಇತಿಹಾಸವನ್ನು ಬದಲಾಯಿಸಿದ ಕೇಂದ್ರಸ್ಥಳವಾಗಿ ಇತಿಹಾಸದಲ್ಲಿ ದಾಖಲಾಗಿದೆ. ಈಗ ಹಾಲೇರಿಯಲ್ಲಿ ಇತಿಹಾಸದ ಕುರುಹುಗಳನ್ನು ಕಂಡುಹಿಡಿಯುವುದು ಬಹಳ ಕಷ್ಟಸಾಧ್ಯ.[೨೮] ಹಾಲೇರಿಯನ್ನು ಸಂದರ್ಶಿಸಿದಾಗ ಕಾಣಸಿಗುವುದು ಪಾಳುಬಿದ್ದ ಮಣ್ಣಿನ ಕೋಟೆ ಮತ್ತು ಖಾಸಗಿ ಒಡೆತನದಲ್ಲಿರುವ ಎಸ್ಟೇಟ್ ಮಾತ್ರ. ೧೬ನೇ ಶತಮಾನದ ಕೊನೆಯಲ್ಲಿ ಇಕ್ಕೇರಿಯಿಂದ ಬಂದ ಒಬ್ಬ ಜಂಗಮ ಇಲ್ಲೊಂದು ಆಶ್ರಮವನ್ನು ಸ್ಥಾಪಿಸಿ ಕೊಡಗು ಎಂಬ ನಾಡನ್ನು ಕಟ್ಟಿದ ಕಥಾನಕ ಬಹಳ ರೋಚಕವಾದುದು.[೨೯] ಈತ ಹಾಲೇರಿ ವಂಶದ ಮೂಲಪುರುಷನೆನಿಸಿದ. ಅವನ ಬಳಿಕಿನ ಸಂತತಿ ಕೊಡಗನ್ನು ಕಟ್ಟಿ ಬೆಳೆಸಿ ನಾಡಿಗೊಂದು ಅಪೂರ್ವ ಇತಿಹಾಸ ನಿರ್ಮಿಸಿಕೊಟ್ಟಿತು.(ನಕ್ಷೆ ೩.೧)

ನಕ್ಷೆ ೩.೧. ಹಾಲೇರಿ ವಂಶ ನಕ್ಷೆ



೧ ರಿಂದ ೧೨ರ ವರೆಗಿನ ಸಂಖ್ಯೆಯವರು ಮಾತ್ರ ಕೊಡಗನ್ನು ಆಳಿದರು.

ಆಧಾರ : ಕೊಡಗು ಜಿಲ್ಲಾ ಗೆಜೆಟಿಯರ್

ವೀರರಾಜನ ಬಗ್ಗೆ ಮೂಲ್ಲಿಂಗ್[೩೦] ಮತ್ತು ರಿಕ್ಟರ್[೩೧] ಪ್ರಸ್ತಾಪಿಸಿದ್ದನ್ನು ಉಳಿದ ಇತಿಹಾಸಕಾರರು ಉಲ್ಲೇಖಿಸುತ್ತಾ ಬಂದಿದ್ದಾರೆ. ಆದರೆ ಕೊಡಗನ್ನು ೧೮೧೭ ರಲ್ಲಿ ಸರ್ವೆ ಮಾಡಿದ ಕಾನರನ[೩೨] ವರದಿಯಲ್ಲಿ ಮತ್ತು ರಾಜೇಂದ್ರನಾಮೆಯಲ್ಲಿ ವೀರರಾಜನ ಉಲೇಖವಿಲ್ಲದಿರುವುದು ಆಶ್ಚರ್ಯಕರವಾಗಿದೆ. ಈ ಕಾರಣಕ್ಕಾಗಿ ಹಾಲೇರಿ ವಂಶದ ಇತಿಹಾಸವೆಂದು ಪರಿಗಣಿತವಾದ ರಾಜೇಂದ್ರನಾಮೆಯ[೩೩] ವಾಸ್ತವಿಕತೆಯನ್ನು ಸಂಗ್ರಹಿಸಲಾಗುತ್ತಿದೆ. ಈತನ ಕಾಲವನ್ನು ಕ್ರಿ. ಶ. ೧೫೮೬ ರಿಂದ ೧೬೩೨ ಎಂದು ಊಹಿಸಲಾಗಿದೆ.[೩೪] ಇವನ ಆಡಳಿತ ಪೂರ್ವದ ಕೊಡಗಿನ ವಿಸ್ತೀರ್ಣ ಎಷ್ಟಿತ್ತು ಎನ್ನುವುದು ಖಚಿತವಾಗಿ ತಿಳಿದುಬರುವುದಿಲ್ಲ. ಒಂದು ಅಂದಾಜಿನ ಪ್ರಕಾರ ಈತ ಆಳುತ್ತಿದ್ದ ಪ್ರದೇಶದ ವ್ಯಾಪ್ತಿ ೧೨ ಕೊಂಬುಗಳೆಂದು ಊಹಿಸಲಾಗಿದೆ.[೩೫] ಇಂತಹ ಒಂದೊಂದು ಕೊಂಬಿಗೆ ಒಬ್ಬೊಬ್ಬ ನಾಯಕನಿದ್ದು ಈ ನಾಯಕರುಗಳು ಕಡಂಗವೆಂಬ ಮಣ್ಣಿನ ದಿಬ್ಬಗಳನ್ನು ತಮ್ಮ ಆಡಳಿತ ಪ್ರದೇಶದ ಗಡಿಗಳನ್ನಾಗಿ ರಚಿಸಿಕೊಂಡಿದ್ದರು. ಹಾಲೇರಿಯ ಸಂಸ್ಥಾಪಕ ವೀರರಾಜ ಹೆಸರಿಗೆ ತಕ್ಕಂತೆ ವೀರತ್ವದೊಡನೆ ನ್ಯಾಯ ಪರಿಪಾಲನೆಯ ಸಾಮರ್ಥ್ಯವನ್ನು, ದೂರದೃಷ್ಟಿಯನ್ನು ಬೆಳೆಸಿಕೊಂಡವನಾಗಿದ್ದುದರಿಂದ ಈ ನಾಯಕರುಗಳನ್ನು ಮಣಿಸಿ ಹಾಲೇರಿ ರಾಜ್ಯ ಸ್ಥಾಪನೆ ಮಾಡಲು ಅವನಿಗೆ ಏನೂ ಕಷ್ಟವಾಗಲಿಲ್ಲ. ಅವನ ಆಶ್ರಮವನ್ನು ಬೂದಿ ಚಾವಡಿ ಎಂದು ಕರೆದ ಜನರು ಅದರ ಎದುರು ಇದ್ದ ನ್ಯಾಯದ ಕಟ್ಟೆಯನ್ನು ಪೊಂದೇವಡಿ ಎಂದು ಗೌರವಿಸತೊಡಗಿದ್ದನ್ನು ದಾಖಲೆಗಳು ತಿಳಿಸುತ್ತವೆ.[೩೬] ವೀರರಾಜ ತಾವುನಾಡಿನ ಬಲಾಢ್ಯ ಅರಸ ಕರ್ಣಂಬಾಹುವನ್ನು ಸೋಲಿಸಿ ತನ್ನ ರಾಜ್ಯವನ್ನು ವಿಸ್ತರಿಸಿದ . ಮಲೆಯಾಳ ದೇಶದಿಂದ ಬರುತ್ತಿದ್ದ ಸುಲಿಗೆಕೋರ ತಂಡವನ್ನು ಎದುರಿಸಲು ಬಲಾಢ್ಯ ಅರಸನೊಬ್ಬನ ಅಗತ್ಯವನ್ನು ಸ್ಥಳೀಯರು ಮನಗಂಡದರಿಂದ ವೀರರಾಜನಿಗೆ ಉಳಿದ ನಾಡುಗಳನ್ನು ತನ್ನದನ್ನಾಗಿ ಮಾಡಿಕೊಳ್ಳಲು ಏನೂ ಕಷ್ಟವಾಗಲಿಲ್ಲ.

ವೀರರಾಜನ ಮಗ ಅಪ್ಪಾಜಿ ರಾಜನ ಕಾಲದಲ್ಲಿ ಇಕ್ಕೇರಿಗೂ - ಹಾಲೇರಿಗೂ ಕದನ ನಡೆದು ಅಪ್ಪಾಜಿರಾಜ ಇಕ್ಕೇರಿಯ ಅಧಿಪತ್ಯವನ್ನು ಒಪ್ಪಿಕೊಳ್ಳಬೇಕಾಗಿ ಬಂತು. ಅವನ ಮಗ ಮುದ್ದು ರಾಜ ೫೦ ಕ್ಕಿಂತ ಹೆಚ್ಚು ವರ್ಷ ನಾಡನ್ನಾಳಿದ. ಇಕ್ಕೇರಿಯವರೊಡನೆ ಸ್ನೇಹದಿಂದ ಇದ್ದುದಕ್ಕೆ ಶಿವಪ್ಪ ನಾಯಕನಿಂದ ತುಳುನಾಡಿನ ಅಮರ ಮತ್ತು ಸುಳ್ಯ ಮಾಗಣೆಗಳನ್ನು ಅವನು ತನ್ನ ಮಗನಿಗಾಗಿ ಉಡುಗೊರೆಯಾಗಿ ಪಡೆದ. ಹಾಲೇರಿಯ ಶಾಖೆಯೊಂದನ್ನು ಹೊರಮಲೆಯಲ್ಲಿ ಸ್ಥಾಪಿಸಿದ. ಮುದ್ದು ರಾಜಕೇರಿಯನ್ನು ನಿರ್ಮಿಸಿ ಅಲ್ಲೊಂದು ಮಣ್ಣಿನ ಕೋಟೆ ಕಟ್ಟಿ ಆಡಳಿತವನ್ನು ದಕ್ಷಿಣದತ್ತ ಪಸರಿಸಿದ. ಆಗ ನಿರ್ಮಾಣವಾದ ಜನವಸತಿಯು ಮುದ್ದು ರಾಜ ಕೇರಿ ಎಂದು ಕರೆಯಲ್ಪಟ್ಟಿತು. ಅದು ಬ್ರಿಟಿಷರ ಬಾಯಿಯಲ್ಲಿ ಅಪಭ್ರಂಶವಾಗಿ

ಮಡಿಕೇರಿಯಾಯಿತೆಂದು ಊಹಿಸಲಾಗಿದೆ.[೩೭] ಈ ಪ್ರದೇಶವು ಹೊರಮಲೆನಾಡು ಮತ್ತು ಹಾಲೇರಿಯ ಮಧ್ಯ ಇರುವುದರಿಂದ ಇಲ್ಲಿನ ಜನವಸತಿಗೆ ಮಧ್ಯಕೇರಿ ಎಂಬ ಹೆಸರು ಬಂದು ಅದು ಮಡಿಕೇರಿಯಾಗಿರುವ ಸಾಧ್ಯತೆಯೂ ಇದೆ.

ಅವನ ಮಗ ದೊಡ್ಡ ವೀರಪ್ಪನ ಕಾಲದಲ್ಲಿ ಕಾವೇರಿಯಿಂದ ಕುಮಾರಧಾರೆಯವರೆಗೆ ಕೊಡಗು ವಿಸ್ತರಿಸಿತು. ದೊಡ್ಡವೀರಪ್ಪನ ಆಡಳಿತ ಒಂದು ವಿಶಿಷ್ಟವಾದ ಮಾದರಿಯೆಂದು ಖ್ಯಾತವಾಗಿ ಭಾರತಿ ಸುತರ 'ಹುಲಿಯ ಹಾಲಿನ ಮೇವು' ಕಾದಂಬರಿಗೆ ಪ್ರೇರಣೆಯನ್ನು ನೀಡಿತು. ಅದು ಚಲನ ಚಿತ್ರವಾಗಿ ಜನಪ್ರಿಯವಾಯಿತು. ಅವನ ಮಗ ಚಿಕ್ಕವೀರಪ್ಪ ಒಳ್ಳೆಯ ಆಡಳಿತಗಾರನಾಗಿದ್ದರೂ ದುರ್ಬಲನಾಗಿದ್ದ. ಅವನ ಬಳಿಕ ಹೊರಮಲೆನಾಡಿನ ಮುದ್ದಯ್ಯ (೧೭೬೬–೭೦) ಮತ್ತು ಹಾಲೇರಿಯ ಎರಡನೇ ಮುದ್ದುರಾಜ (೧೭೬೬–೭೦) ಒಟ್ಟಾಗಿ ಕೊಡಗನ್ನು ಆಳಿದರು. ಆ ತರುವಾಯ ಹಾಲೇರಿಗೂ ಹೊರಮಲೆಗೂ ದಾಯಾದಿ ಕಲಹ, ದ್ವೇಷವೇರ್ಪಟ್ಟು ಪಟ್ಟವೇರಿದ ಹೊರಮಲೆ ದೇವಯ್ಯ ರಾಜನನ್ನು ಹಾಲೇರಿಯ ಲಿಂಗರಾಜೇಂದ್ರ ಹೈದರಾಲಿಯ ನೆರವಿನಿಂದ ಕೊಲ್ಲಿಸಿ ತಾನು ಪಟ್ಟವೇರಿದ. ಅವನು ಸತ್ತಾಗ ಅವನ ಕುಟುಂಬವನ್ನು ಸೆರೆಮನೆಗೆ ಹಾಕಿಸಿ ಹೈದರಾಲಿ ಕೊಡಗಿನ ಆಡಳಿತ ಸೂತ್ರವನ್ನು ಕೈಗೆತ್ತಿಕೊಂಡ. ಅವನ ತರುವಾಯ ಟಿಪ್ಪುವಿನ ಕೈಗೆ ಕೊಡಗು ಹೋಯಿತು. ಹೈದರ್ ಟಿಪ್ಪು ಕಾಲದ ಅರಾಜಕತೆ ಕೊಡಗಿನಾದ್ಯಂತ ದಂಗೆಕೋರ ಗುಂಪುಗಳ ಸೃಷ್ಟಿಗೆ ಕಾರಣವಾಯಿತು. ಅವರಿಗೆ ಬ್ರಿಟಿಷರು ಕುಮ್ಮಕ್ಕು ನೀಡಿ ಟಿಪ್ಪು ಮೈಸೂರಿನಿಂದ ಮಲೆಯಾಳಕ್ಕೆ ಬಾರದಂತೆ ತಡೆಯೊಡ್ಡಿದರು. ಕುಪಿತನಾದ ಟಿಪ್ಪು ತನಗೆದುರಾಗಿ ನಿಂತ ಕೊಡಗರಲ್ಲಿ ಕೈಗೆ ಸಿಕ್ಕಿದವರನ್ನು ಶ್ರೀರಂಗ ಪಟ್ಟಣಕ್ಕೆ ಒಯ್ದು ಮತಾಂತರಿಸಿಬಿಟ್ಟ. ಇದನ್ನು ಬ್ರಿಟಿಷರು ಬಂಡವಾಳವಾಗಿ ಬಳಸಿಕೊಂಡು ಟಿಪ್ಪುವನ್ನು ಹಿಂದು ವಿರೋಧಿ ಎಂದು ಅಪಪ್ರಚಾರ ಮಾಡಿದರು.

ಅರಾಜಕತೆಯ ಅಂತಹ ದಿನಗಳಲ್ಲಿ ಪಿರಿಯಪಟ್ಟಣದ ಸೆರೆಯಿಂದ ದೊಡ್ಡವೀರರಾಜ ಮತ್ತು ಸಹೋದರರು ಕೊಡಗರ ಮತ್ತು ಟಿಪ್ಪು ವಿರೋಧಿಗಳ ನೆರವಿನಿಂದ ಸೆರೆಯಿಂದ ತಪ್ಪಿಸಿ ಕೊಡಗಿಗೆ ಪಲಾಯನ ಮಾಡಿದರು. ದೊಡ್ಡವೀರರಾಜನು ಕೊಡಗರ ನೆರವಿನಿಂದ ಟಿಪ್ಪುವನ್ನು ಕೊಡಗಿನಿಂದ ಓಡಿಸಲು ಸಫಲನಾದ. ಆ ಕಾಲದಲ್ಲಿ ಅವನ ಕಡೆಯವರು ತುಳುನಾಡನ್ನು ಸುಲಿದು ಜನರಲ್ಲಿ ಭೀತಿ ಮೂಡಿಸಿ ಅವರನ್ನು ಕೊಡಗಿಗೆ ಬಲತ್ಕಾರದಿಂದ ವಲಸೆ ಬರುವಂತೆ ಮಾಡಿದರು. ದೊಡ್ಡವೀರರಾಜನ ಸಹಾಯದಿಂದ ಬ್ರಿಟಿಷರು ಟಿಪ್ಪುವನ್ನು ಕೊಲ್ಲಿಸುವಲ್ಲಿ ಸಫಲರಾದರು. ಈ ಸಾಮಯಿಕ ಸಹಾಯಕ್ಕೆ ಆತ ಅಮರಸುಳ್ಯ ಮಾಗಣೆಗಳೊಂದಿಗೆ ಪುತ್ತೂರುವರೆಗಿನ ೧೧೦ ಗ್ರಾಮಗಳನ್ನು ಇನಾಮಾಗಿ ಪಡೆದ.

ಅವನ ತಮ್ಮ ಅಂಗರಾಜನ ಕಾಲದಲ್ಲಿ ಕೊಡಗಿನ ಸರ್ವೆ ಕಾರ್ಯ ನಡೆಯಿತು. ಅಂಗರಾಜನು ೫೪ ಹುಕುಂನಾಮೆಗಳ ಮೂಲಕ ಆಡಳಿತಕ್ಕೆ ವ್ಯವಸ್ಥಿತ ನೆಲೆಗಟ್ಟನ್ನು ರೂಪಿಸಿದ. ಅವನ ಮಗ ಚಿಕ್ಕ ವೀರರಾಜ ಬ್ರಿಟಿಷರು ಕೊಡಗಿನ ಆಡಳಿತದಲ್ಲಿ ಮೂಗು ತೂರಿಸುವುದನ್ನು ಸಹಿಸದೆ ಅವರಿಗೆ ತಿರುಗಿಬಿದ್ದ. ಅವನ ಕೊಡವ ದಿವಾನರಗಳಾದ ಬೋಪು ಮತ್ತು ಪೊನ್ನಪ್ಪ ಬ್ರಿಟಿಷ್ ಪರ ನಿಂತುದರಿಂದ ಚಿಕ್ಕವೀರ ಪದಚ್ಯುತನಾದ. ಅಲ್ಲಿಗೆ ಕೊಡಗಿನಲ್ಲಿ ರಾಜರ ಆಳ್ವಿಕೆ ಅಂತ್ಯವಾಗಿ ವಸಾಹತುಶಾಹಿ ಆಡಳಿತ ವ್ಯವಸ್ಥೆ ಆರಂಭವಾಯಿತು.


ಹಾಲೇರಿ ವಂಶದ ಸಂಸ್ಥಾಪಕ ವೀರರಾಜನು ಸುಲಿಗೆಕೋರರನ್ನು ಮತ್ತು ಅನ್ಯ ರಾಜರುಗಳನ್ನು ಎದುರಿಸಿ ನಾಡನ್ನು ರಕ್ಷಿಸಲು ನಿರ್ಮಿಸಿದ ಬಲಾಢ್ಯ ಪಡೆಯಲ್ಲಿ ಮುಖ್ಯಸ್ಥರು, ಕಾರ್ಯಕಾರರು, ಚಾವಡಿಕಾರರು ಎಂಬ ಮೂರು ವರ್ಗಗಳಿದ್ದವು.[೩೮] ಈತನ ಸೇನೆಯಲ್ಲಿ ದಲಿತ ವರ್ಗಕ್ಕೆ ಸೇರಿದ ಚೆಂಬಟ್ಟಿಗಳು ಬಹುಸಂಖ್ಯೆಯಲ್ಲಿದ್ದರು ಎನ್ನುವುದಕ್ಕೆ ಸಂಬಂಧಿಸಿದ ಅನೇಕ ಐತಿಹ್ಯ ಕಥೆಗಳಿವೆ.[೩೯]

ವೀರರಾಜನ ಕಂದಾಯ ವ್ಯವಸ್ಥೆ ಜಂಗಮರಿಗೆ ಆಯ ನೀಡುವ ಉತ್ತರ ಕರ್ನಾಟಕದ ವ್ಯವಸ್ಥೆಯನ್ನು ಹೋಲುತ್ತದೆ. ಕಣದಲ್ಲಿ ಭತ್ತವನ್ನು ತೂರುವಾಗ ಜೊಳ್ಳಿನ ಜೊತೆ ನಷ್ಟವಾಗುವ ಭತ್ತದ ಕಾಳುಗಳನ್ನು ತನಗೆ ಕಂದಾಯ ರೂಪದಲ್ಲಿ ಕೊಡಬೇಕೆಂದು ವೀರರಾಜ ನಿಗದಿಪಡಿಸಿದ್ದನ್ನು ಯಾರೂ ಅಲ್ಲಗಳೆಯಲು ಸಾಧ್ಯವಿರಲಿಲ್ಲ. ಈ ರೀತಿಯ ಕಂದಾಯವನ್ನು ಧೂಳೀ ಭತ್ತ ಎಂದು ಕರೆಯಲಾಗುತ್ತಿತ್ತು. ಈ ವ್ಯವಸ್ಥೆಗೆ ಆಯ್ದಕ್ಕಿ ಮಾರಯ್ಯನ ಪ್ರಭಾವ ಇದ್ದಿರಬಹುದಾದ ಸಾಧ್ಯತೆಗಳಿವೆ. ಆಯ್ದಕ್ಕಿ ಮಾರಯ್ಯ ನೆಲದಲ್ಲಿ ಚೆಲ್ಲಿ ಹೋದ ಅಕ್ಕಿಯನ್ನು ಆರಿಸಿ ತನ್ನ ಜೀವನೋಪಾಯ ಕಂಡುಕೊಳ್ಳುತ್ತಿದ್ದ ಒಬ್ಬ ಶರಣ. ಶರಣ ಧರ್ಮದ ಪ್ರಕಾರ ಭತ್ತ ಮತ್ತಿತರ ಧಾನ್ಯಗಳು ವ್ಯರ್ಥವಾಗಿ ಹೋಗಬಾರದು. ಈ ತತ್ವವನ್ನು ವೀರರಾಜ ತನ್ನ ಕಂದಾಯ ವ್ಯವಸ್ಥೆಯಲ್ಲಿ ಅಳವಡಿಸಿದಂತೆ ಕಾಣುತ್ತಿದೆ. ಆದರೆ ಆಡಳಿತ ವೆಚ್ಚ ಹೆಚ್ಚುತ್ತಾ ಹೋದಂತೆ ಮನೆಯೊಂದರಿಂದ ವರ್ಷಕ್ಕೆ ೧. ೫೦ ಭಟ್ಟಿ ಅಂದರೆ ೮೦ ಸೇರು ೯ ಆಣೆ ೮ ಪೈಸೆ ಕಂದಾಯವೆಂದು ನಿಗದಿ ಮಾಡಬೇಕಾಗಿ ಬಂತು.[೪೦] ಮಾದಾಪುರ ಮತ್ತು ಮಾಲಂಬಿ ಶಾಸನಗಳ ಪ್ರಕಾರ ವಿಜಯನಗರ ಕಾಲದ ಗದ್ಯಾಣ ವರಹಗಳು ವೀರರಾಜನ ಕಾಲದಲ್ಲಿ ಬಳಕೆಯಲ್ಲಿದ್ದವು.[೪೧] ಗದ್ದೆಯನ್ನು ಅಳೆಯಲು ಭಟ್ಟಿಯೆಂಬ ಮಾಪಕವನ್ನು ಬಳಸುತ್ತಿದ್ದು ಒಂದು ನೂರು ಭಟ್ಟಿ (೧೦೦) ಗದ್ದೆಯು ಸುಮಾರು ೩.೫೦ ಎಕರೆಗೆ ಸಮವಾಗಿತ್ತು[೪೨]. ನೈಸರ್ಗಿಕವಾಗಿ ಕೆರೆ, ಹೊಳೆ, ತೋಡು ಹಳ್ಳಗಳು ಮತ್ತು ಮಾನವ ನಿರ್ಮಿತ ಕೆರೆ ಮತ್ತು ಕಣಿವೆಗಳು ನೀರಾವರಿ ಮೂಲಗಳಾಗಿ ಬಳಕೆಯಾಗುತಿದ್ದವು. ಪಟ್ಟೋಳೆ ಪಳಮೆಯಲ್ಲಿ ವರ್ಣಿಸಲ್ಪಟ್ಟ ಪ್ರಕಾರ ಕಾವೇರಿ ನದಿಯ ಮೇಲ್ಭಾಗದ ನಾಡಿನಲ್ಲಿ ಪಾಬೊಳಿಯ

ಮೇಂದಲೆ(ಹಾಲಿನಂತೆ ಬೆಳ್ಳಗಿರುವ ಭತ್ತ) ಮತ್ತು ಕಾವೇರಿಯ ಕೆಳದಂಡೆಯ ನಾಡುಗಳಲ್ಲಿ ಕೆಂಗಳಮೆ(ಕೆಂಪು ಭತ್ತ) ಬೆಳೆಯುತ್ತಿದ್ದು ಮುಯ್ಯಾಳು (ಸೇವಾ ವಿನಿಮಯ) ವ್ಯವಸ್ಥೆಯು ಅಸ್ತಿತ್ವದಲ್ಲಿತ್ತು. ಎತ್ತಿನ ಗಾಡಿ ಏಕೈಕ ಸಾಗಾಟ ವಾಹನವಾಗಿದ್ದು ಕೊಡಗಿನ ಬಹುತೇಕ ವ್ಯಾಪಾರ ಮಲೆಯಾಳ ಮತ್ತು ದ. ಕ ದೊಡನೆ ನಡೆಯುತ್ತಿತ್ತು. ಇವನ ಕಾಲದಲ್ಲಿ ಜಮ್ಮ ಭೂಮಿ ಪದ್ಧತಿ ಜಾರಿಗೆ ಬಂತು ಎನ್ನಲಾಗಿದೆ.[೪೩] ಇದರ ಬಗ್ಗೆ ಸಾಕಷ್ಟು ವಾದ ವಿವಾದಗಳಿವೆ. ಇದನ್ನು ಮುಂದೆ ವಿವರಿಸಲಾಗಿದೆ. ಹುತ್ತರಿ ಹಬ್ಬಕ್ಕೆ ರಾಜಮಾನ್ಯತೆ ನೀಡಿ ಅದನ್ನು ಪೊಳ್ಳುವನ್ನಾಗಿ ಮಾಡಿದ್ದು ಇವನ ಇನ್ನೊಂದು ಸಾಧನೆ. ಈತನಿಗೆ ವೀರಶೈವ, ಕೊಡವ, ಗೌಡ, ಐರಿರ, ಹೆಗ್ಗಡೆ, ಕೆಂಬಟ್ಟಿಬೋಯಿ, ಅಮ್ಮಕೊಡವ ಮುಂತಾದ ಎಲ್ಲಾ ಸಮುದಾಯಗಳ ಬೆಂಬಲ ದೊರೆತದ್ದು ಹಾಲೇರಿ ಸಂಸ್ಥಾನ ರೂಪುಗೊಳ್ಳಲು ಕಾರಣವಾಯಿತು. ಕೊಡಗಿನಲ್ಲಿ ಕನ್ನಡ ಬೆಳೆದು ಬಂದದ್ದು ಈತ ಅದನ್ನು ಆಡಳಿತ ಭಾಷೆಯನ್ನಾಗಿ ಮಾಡಿದ ಕಾರಣದಿಂದಾಗಿ ಎಂದು ರಿಕ್ಟರ್ ಉಲ್ಲೇಖಿಸಿದ್ದಾನೆ.[೪೪]


ವೀರರಾಜನ ಮೊಮ್ಮಗ ಮುದ್ದುರಾಜ ಕೊಡಗಿನ ಇತಿಹಾಸದಲ್ಲಿ ತನ್ನ ಸುಧಾರಣಾ ಕ್ರಮಗಳಿಂದಾಗಿ ಶಾಶ್ವತ ಸ್ಥಾನ ಪಡೆದುಕೊಂಡವನು. ೫೪ ವರ್ಷಗಳ ಅವನ ಆಡಳಿತ ಕಾಲದಲ್ಲಿ ಯಾವುದೇ ಯುದ್ಧಗಳಿಲ್ಲದೆ ಜನರು ಶಾಂತಿ ನೆಮ್ಮದಿಗಳಿಂದ ಜೀವನ ಸಾಗಿಸುತ್ತಿದ್ದುದ್ದನ್ನು ಇತಿಹಾಸಕಾರರು ಉಲ್ಲೇಖಿಸಿದ್ದಾರೆ.[೪೫] ಅಜ್ಜನ ಕಾಲದಲ್ಲಿ ಹನ್ನೆರಡು ಕೊಂಬುಗಳಷ್ಟು ವಿಸ್ತಾರವಾಗಿದ್ದ ಕೊಡಗನ್ನು ಮೂವತ್ತೈದು ನಾಡುಗಳಾಗಿ ವಿಂಗಡಿಸಿ ಹಿಂದೆ ಇದ್ದ ಎಂಟು ನಾಯಕರುಗಳ ಬದಲು ಎಂಟು ದೇಶ ತಕ್ಕರನ್ನು ನೇಮಿಸಿದ್ದು ಇವನ ಬಲು ದೊಡ್ಡ ಆಡಳಿತ ಸುಧಾರಣೆ.[೪೬] ಇವುಗಳಲ್ಲಿ ಕೆಲವು ನಾಡುಗಳ ನಿರ್ಮಾಣ ಮುದ್ದುರಾಜನ ಮಗ ದೊಡ್ಡವೀರಪ್ಪನ ಕಾಲದಲ್ಲಾಯಿತು ಎಂದು ಹೇಳಲಾಗುತ್ತದೆ.[೪೭] (ಭೂಪಟ ೩.೨)

೨.೨. 1773 ರ ಹಿಂದಿನ ಕೊಡಗು



ವೀರರಾಜನ ಬಳಿಕ ದೊಡ್ಡವೀರಪ್ಪನ ಅವಧಿಯವರೆಗೆ ಕೊಡಗು ಒಂದು ನಾಡಾಗಿ ಹೇಗೆ ಬೆಳೆಯಿತೆಂಬುದನ್ನು ನಾಡ್‌ಕಟ್ಟ್‌ಪಾಟ್ ವಿವರಿಸುತ್ತದೆ.[೪೮] ಮೂವತ್ತೈದು ನಾಡುಗಳ ವಿವಾದಗಳನ್ನು ಇತ್ಯರ್ಥಗೊಳಿಸಲು ಎಂಟು ಸೀಮೆ ತಕ್ಕರು ನೇಮಿಸಲ್ಪಟ್ಟರು. ಪ್ರತಿ ನಾಡಿನಲ್ಲಿ ಜನರು ಸೇರಲು ಅಂಬಲ(ದೇವಸ್ಥಾನ), ನಾಡಿಗೊಂದು ಈಶ್ವರನ ದೇವಸ್ಥಾನ, ಊರಿಗೊಂದು ಭಗವತಿ ದೈವಸ್ಥಾನ, ಕೇರಿಗೊಂದು ಅಯ್ಯಪ್ಪ ದೇವಸ್ಥಾನ, ಓಣಿಗೊಂದು ಕುಲ ದೇವಸ್ಥಾನ ಮತ್ತು ಕುಟುಂಬಕ್ಕೊಂದು ಭೂತಸ್ಥಾನ ನಿರ್ಮಾಣವಾಯಿತು.[೪೯]

ಹಾಲೇರಿ ವಂಶಸ್ಥರ ಕಾಲದ ತಕ್ಕರ ವ್ಯವಸ್ಥೆ ಉತ್ತಮ ಆಡಳಿತಕ್ಕೊಂದು ಮಾದರಿಯಂತಿದೆ. ತಕ್ಕ ಎಂದರೆ ಮುಖ್ಯಸ್ಥ ಅಥವಾ ಸಮರ್ಥ ಎಂದರ್ಥ. ತಕ್ಕರ ವ್ಯವಸ್ಥೆ ಹೀಗಿತ್ತು. (ನಕ್ಷೆ ೩.೨)



ನಕ್ಷೆ. ೩.೨ : ತಕ್ಕರ ವ್ಯವಸ್ಥೆ

ತಕ್ಕರ ವ್ಯವಸ್ಥೆ ಸುಲಲಿತ ಆಡಳಿತಕ್ಕೆ ಕಾರಣವಾಗಿರುವಂತೆ ಕಂಡುಬರುತ್ತದೆ. ಈ ವ್ಯವಸ್ಥೆಯಲ್ಲಿ ದೇವತಕ್ಕನು ಊರ ದೇವಸ್ಥಾನದ ಮೇಲ್ವಿಚಾರಣೆಯನ್ನು, ಭಂಡಾರತಕ್ಕನು ಹಣದ

ಉಸ್ತುವಾರಿಯನ್ನು ನಿರ್ವಹಿಸುತ್ತಿದ್ದರು. ಕೊಡಗಿನ ಕೆಲವು ದೇವಸ್ಥಾನಗಳಲ್ಲಿ ಈಗಲೂ ತಕ್ಕ ವ್ಯವಸ್ಥೆಯನ್ನು ಉಳಿಸಿಕೊಂಡು ಬಂದಿರುವುದು ಕುತೂಹಲಕರವಾಗಿದೆ. ಆಯಾ ಪ್ರದೇಶದ ಬಹುಸಂಖ್ಯಾತ ಜನರ ಮುಂದಾಳುಗಳನ್ನೇ ತಕ್ಕರನ್ನಾಗಿ ನೇಮಿಸಿಕೊಂಡ ಹಾಲೇರಿ ರಾಜರುಗಳು ಸಾಮಾಜಿಕ ನಿಯಂತ್ರಣ ಸಾಧಿಸಿದ್ದರು.

ಹಾಲೇರಿ ರಾಜರುಗಳ ಕಾಲದಲ್ಲಿದ್ದ ತಕ್ಕಮೆ ಮತ್ತು ಜಾತಿ ಗೌಡಿಕೆ ಎಂಬ ಅಧಿಕಾರ ಸೂಚಕ ಪದಗಳು ವಿಜಯನಗರದ ಆಡಳಿತ ಕಾಲದಿಂದ ಬಂದ ಹಾಗೆ ತೋರುತ್ತದೆ. ಇದಕ್ಕೆ ಕ್ರಿ.ಶ ೧೩೯೯ರ ಹುಲುಗೋಡು ಶಾಸನದಲ್ಲಿ ಉಲ್ಲೇಖಿತವಾದ ಗೌಡ ಬೋವದೆಮ್ಮಯ್ಯ ಎಂಬಾತನಿಗೆ ನಿರ್ಮಿಸಿದ ವೀರಗಲ್ಲಿನ ವಿವರಗಳು ಆಧಾರವಾಗಿವೆ. ವಿಜಯನಗರದ ಗೌಡ ಬೋವನನ್ನು ಹಾಲೇರಿ ಅರಸರುಗಳು ಜಾತಿ ಗೌಡಿಕೆಯಾಗಿ ಮಾರ್ಪಡಿಸಿರಬೇಕು. ಗೌಡಿಕೆ ಎಂಬುದು ಯಜಮಾನತ್ವದ ಸಂಕೇತವೇ ಹೊರತು ಜಾತಿ ಸೂಚಕವಲ್ಲ. ಇದಕ್ಕೆ ವೀರ ಶೈವರು ಕೂಡ ಉತ್ತರ ಕೊಡಗಿನಲ್ಲಿ ಜಾತಿ ಗೌಡಿಕೆ ಮಾಡಿಕೊಂಡಿದ್ದುದು ಆಧಾರ ಒದಗಿಸುತ್ತದೆ.[೫೦]

ಹಾಲೇರಿ ಕಾಲದಲ್ಲಿ ಮತ್ತು ಈಗಲೂ ಕೊಡಗಿನಲ್ಲಿ ಕೃಷಿಯೇ ಪ್ರಮುಖ ಜೀವನಾಧಾರವಾಗಿದೆ. ಆಗಿನ ಕಾಲದ ಕೃಷಿ ಎಂದರೆ ಭತ್ತ ಪ್ರಧಾನವಾದುದು. ಮುದ್ದು ರಾಜ ಹಾಲೇರಿ ಸಂಸ್ಥಾನದ ಉದ್ದಗಲಕ್ಕೆ ಕೆರೆ ನೀರಾವರಿ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಿದ. ಜನರ ಆರೋಗ್ಯ ಮತ್ತು ದೇಹದಾರ್ಢ್ಯತೆ ಬಗ್ಗೆ ಮುದ್ದು ರಾಜನಿಗಿದ್ದ ಕಾಳಜಿ ಅವನು ಕೆಸರುಗದ್ದೆ ಕ್ರೀಡೆ ಮತ್ತು ಹಸಿ ಹುತ್ತರಿಗಳಂತಹ ಜಾನಪದ ಕ್ರೀಡೆಗಳಿಗೆ ನೀಡಿದ ಪ್ರೋತ್ಸಾಹದಿಂದ ವಿದಿತವಾಗುತ್ತದೆ. ಅರಸರು ತಮ್ಮ ಸ್ವಂತ ಅಧೀನದಲ್ಲಿದ್ದ ಪನ್ಯಭೂಮಿಯನ್ನು ತಮ್ಮ ವಿಶ್ವಾಸಿಗಳಿಗೆ ಕೃಷಿ ಕಾರ್ಯಗಳಿಗೆ ನೀಡಿ ರಾಜ್ಯಕ್ಕೆ ಹೆಚ್ಚು ಕಂದಾಯ ಬರುವಂತೆ ನೋಡಿಕೊಳ್ಳುತ್ತಿದ್ದರು. ಭೂಮಿಯ ಅಳತೆಗೆ “ಭಟ್ಟಿ” ಎಂಬ ಮಾಪಕವನ್ನು ಬಳಕೆಗೆ ತರಲಾಗಿತ್ತು. ಧೂಳೀಭತ್ತ ಕಂದಾಯ ವ್ಯವಸ್ಥೆಯು ಮುದ್ದುರಾಜನ ಕಾಲದಲ್ಲಿಯೂ ಮುಂದುವರಿಯಿತು ಮತ್ತು ಕಂದಾಯ ಪಾವತಿಯು ಕಡ್ಡಾಯವಾಗಿತ್ತು. ಈ ಆದರ್ಶವನ್ನು ಉಳಿದ ರಾಜರುಗಳು ಅನುಸರಿಸಿದಂತೆ ಕಂಡುಬರುತ್ತದೆ.

೩. ೪. ಹೈದರ್ – ಟಿಪ್ಪು ಕಾಲದ ಆರ್ಥಿಕತೆ

ಕೊಡಗಿಗೆ ಹೈದರಾಲಿಯ ಪ್ರವೇಶವಾದುದು ಕ್ರಿ. ಶ. ೧೭೮೦ರಲ್ಲಿ ಲಿಂಗರಾಜೇಂದ್ರ ನಿಂದಾಗಿ. ಕೊಡಗನ್ನು ಸುದೀರ್ಘವಾಗಿ ಆಳಿದ ಮುದ್ದುರಾಜ ತನ್ನ ಮುಂದಿನ ಪೀಳಿಗೆ ರಾಜ್ಯಕ್ಕಾಗಿ ಹೋರಾಡಬಾರದೆಂಬ ದೃಷ್ಟಿಯಿಂದ ಈಗಿನ ಗಾಳಿಬೀಡಿನಲ್ಲಿ ಹೊರಮಲೆನಾಡನ್ನು

ನಿರ್ಮಿಸಿರಬೇಕು.[೩೧] ಮಡಿಕೇರಿಗೆ ಹೊರಮಲೆನಾಡು ಮತ್ತು ಹಾಲೇರಿ ಸಮಾನ ದೂರದಲ್ಲಿದೆ. ಮುದ್ದುರಾಜನ ಎರಡು ತಲೆಮಾರುಗಳ ಬಳಿಕ ಹಾಲೇರಿ ಮತ್ತು ಹೊರಮಲೆನಾಡಿನ ದಾಯಾದಿಗಳು ಒಟ್ಟಾಗಿ ಕೊಡಗನ್ನು ಆಳಿದರು ಎಂಬುದನ್ನು ಇತಿಹಾಸಕಾರರು ಉಲ್ಲೇಖಿಸಿದ್ದಾರೆ.[೩೨] ಆ ಬಳಿಕ ಹೊರಮಲೆನಾಡಿನ ದೇವಪ್ಪರಾಜ ಮತ್ತು ಹಾಲೇರಿಯ ಅಂಗರಾಜೇಂದ್ರರ ನಡುವೆ ಪೀಠಕ್ಕಾಗಿ ಪೈಪೋಟಿ ಏರ್ಪಟ್ಟು ದೇವಪ್ಪರಾಜ ಗೆದ್ದು ಅಂಗರಾಜೇಂದ್ರ ದೇಶಭ್ರಷ್ಟನಾಗಿ ಹೈದರಾಲಿಯ ನೆರವನ್ನು ಯಾಚಿಸಿದ. ಕೊಡಗಿನ ಏಳುಸಾವಿರ ಸೀಮೆ ಪ್ರದೇಶ ಮತ್ತು ಅಮರಸುಳ್ಯದ ಮೇಲೆ ಕಣ್ಣಿರಿಸಿದ್ದ ಹೈದರಾಲಿ ಆಯಾಚಿತವಾಗಿ ದೊರೆತ ಈ ಸಂದರ್ಭವನ್ನು ಬಳಸಿಕೊಂಡು ತನ್ನ ಎರಡನೇ ಪ್ರಯತ್ನದಲ್ಲಿ ದಕ್ಷಿಣ ಕೊಡಗಿನ ಜನರ ನೆರವಿನಿಂದ ಮಡಿಕೇರಿಯವರೆಗೆ ಸೇನೆಯನ್ನು ಮುನ್ನುಗ್ಗಿಸಿ ದೇವಪ್ಪರಾಜನನ್ನು ಕೊಂದು ಅಂಗರಾಜೇಂದ್ರನನ್ನು ಪಟ್ಟಕ್ಕೇರಿಸಿದ. ಅದಕ್ಕೆ ಪ್ರತಿಫಲವಾಗಿ ಏಳು ಸಾವಿರ ಸೀಮೆ ಮತ್ತು ಅಮರ ಸುಳ್ಯ ಸೀಮೆಯನ್ನು ತನ್ನದಾಗಿಸಿಕೊಂಡ. ಅಂಗರಾಜೇಂದ್ರನ ಮರಣಾನಂತರ ಅವನ ಹೆಂಡತಿ ಮಕ್ಕಳನ್ನು ಸೆರೆಮನೆಗೆ ತಳ್ಳಿ ಕೊಡಗನ್ನು ಮೈಸೂರು ಸಂಸ್ಥಾನದ ಒಂದು ಭಾಗವಾಗಿ ಪರಿಗಣಿಸಿ ಮಡಿಕೇರಿ, ಭಾಗಮಂಡಲ, ಕುಶಾಲನಗರಗಳಲ್ಲಿ ಕೋಟೆಗಳನ್ನು ನಿರ್ಮಿಸಿ ತನ್ನ ಆಡಳಿತದಾರರನ್ನು ನೇಮಕ ಮಾಡುವುದರೊಂದಿಗೆ ಕೊಡಗು ನೇರವಾಗಿ ಹೈದರಾಲಿಯ ಆಡಳಿತಕ್ಕೆ ಒಳಪಟ್ಟಿತು. ಇಷ್ಟಲ್ಲದೇ ಹೈದರಾಲಿಯು ಇಕ್ಕೇರಿಯನ್ನು ಗೆದ್ದು ದಕ್ಷಿಣಕನ್ನಡ ಜಿಲ್ಲೆಯವರೆಗೆ ತನ್ನ ಅಧಿಪತ್ಯವನ್ನು ವಿಸ್ತರಿಸಿದ. ಅವನ ಮರಣಾನಂತರ ಕ್ರಿ. ಶ ೧೭೮೫ ರಲ್ಲಿ ಕೊಡಗು ಮತ್ತು ದಕ್ಷಿಣಕನ್ನಡ ಟಿಪ್ಪುವಿನ ಆಡಳಿತಕ್ಕೆ ಒಳಪಟ್ಟಿತು.

ಹೈದರ್ ಮತ್ತು ಟಿಪ್ಪುವಿಗೆ ಕೊಡಗಿನಲ್ಲಿ ಯಾವ ಹೊಸ ಸುಧಾರಣೆಗಳನ್ನು ತರಲು ಸಾಧ್ಯವಾಗದೇ ಇರುವುದಕ್ಕೆ ಕೊಡಗರ ಅಸಹಕಾರ ಮತ್ತು ಆಂಗ್ಲೋ ಮೈಸೂರು ಯುದ್ಧಗಳು ಕಾರಣಗಳಾಗಿದ್ದವು. ದಕ್ಷಿಣ ಕೊಡಗಿನ ಜನರನ್ನು ಇಂಗ್ಲೀಷರು ಟಿಪ್ಪುವಿಗೆ ಎದುರಾಗಿ ನಿಲ್ಲಿಸಿ ಅವನು ಕೊಡಗಿನ ಹಾದಿಯಾಗಿ ಮಲೆಯಾಳಕ್ಕೆ ಪ್ರವೇಶಿಸುವುದನ್ನು ತಡೆಗಟ್ಟ ತೊಡಗಿದ್ದು ಕೊಡಗಿನ ಅರಾಜಕತೆಗೆ ಕಾರಣವಾಯಿತು. ಟಿಪ್ಪುವಿಗೆ ಮಾತುಕತೆಗಳ ಮೂಲಕ ಕೊಡಗರ ಮನವೊಲಿಸಿ ಕೊಡಗನ್ನು ತನ್ನ ಆಡಳಿತಕ್ಕೆ ಸಂಪೂರ್ಣವಾಗಿ ಒಳಪಡಿಸಬೇಕೆಂಬ ಇಚ್ಛೆ ಇದ್ದರೂ ಸ್ಥಳೀಯ ಕೊಡಗರು ಅದಕ್ಕೆ ಪೂರಕವಾಗಿ ಪ್ರತಿಸ್ಪಂದಿಸಲಿಲ್ಲ. ಇದು ಕೊಡಗಿಗೆ ಟಿಪ್ಪುವಿನ ಸೇನೆಯ ಪ್ರವೇಶಕ್ಕೆ ಕಾರಣವಾಗಿ ಸೆರೆಸಿಕ್ಕವರನ್ನು ಶ್ರೀರಂಗಪಟ್ಟಣಕ್ಕೆ ಒಯ್ದು ಇಸ್ಲಾಂ ಧರ್ಮಕ್ಕೆ ಸೇರಿಸುವಲ್ಲಿ ಪರ್ಯಾವಸಾನವಾಯಿತು. ಇದನ್ನೇ ಬಂಡವಾಳವನ್ನಾಗಿ ಮಾಡಿಕೊಂಡ ಬ್ರಿಟಿಷರು ಟಿಪ್ಪುವನ್ನು ಧರ್ಮಾಂಧನೆಂದು ಚಿತ್ರಿಸುವಲ್ಲಿ ಸಫಲರಾಗಿ ಕೊಡಗಿನಾದ್ಯಂತ ಭೀತಿಯ

ವಾತಾವರಣವನ್ನು ಮೂಡಿಸಿ ಕೊಡಗರು ಟಿಪ್ಪುವಿಗೆ ಎದುರಾಗಿ ನಿಲ್ಲುವಂತೆ ಮಾಡುವಲ್ಲಿ ಯಶಸ್ವಿಯಾದರು.

ಕೊಡಗಿನ ಆಡಳಿತಗಾರನನ್ನಾಗಿ ಹೈದರಾಲಿ ನೇಮಕ ಮಾಡಿದ ಸುಬ್ಬಪ್ಪಯ್ಯನು ಸಂದರ್ಭದ ದುರುಪಯೋಗವನ್ನು ಪಡೆದುಕೊಂಡು ಹೈದರಾಲಿಯ ಹೆಸರಲ್ಲಿ ಕೊಡಗರ ಮೇಲೆ ದೌರ್ಜನ್ಯ ನಡೆಸತೊಡಗಿದ. ಅವನ ಕಂದಾಯ ಆಡಳಿತವು ಜನ ವಿರೋಧಿಯಾಗಿದ್ದು ಪ್ರಜೆಗಳ ಅಸಂತೋಷಕ್ಕೆ ಕಾರಣವಾಗಿ ಅವರು ಹೈದರಾಲಿಯನ್ನು ತಮ್ಮ ಶತ್ರುವೆಂದು ಭಾವಿಸತೊಡಗಿದರು. ಇದರ ಸುಳಿವು ಸಿಗದ ಹೈದರಾಲಿಯು ಸುಬ್ಬಪ್ಪಯ್ಯನನ್ನು ಅತಿಯಾಗಿ ನಂಬಿದ್ದು ಆಡಳಿತದ ಅರಾಜಕತೆಗೆ ಕಾರಣವಾಯಿತು. ಸುಬ್ಬಪ್ಪಯ್ಯನ ವಿರುದ್ಧ ದೂರು ಕೊಂಡೊಯ್ಯುವವರನ್ನು ಹೈದರಾಲಿ ಶಿರಚ್ಛೇದನ ಮಾಡಿಸಿ ಕೋಟೆಯ ಎದುರುಗಡೆ ಶಿರಗಳನ್ನು ನೇತು ಹಾಕಿದ್ದು ಜನರು ಹೈದರನನ್ನು ದ್ವೇಷಿಸುವಂತೆ ಮಾಡಿತು.[೩೩]

ಟಿಪ್ಪುವಿನ ಆಡಳಿತ ಕಾಲದಲ್ಲಿ ಕೊಡಗಿನ ಅಮಲ್ದಾರನಾದ ಸುಬ್ಬಪ್ಪಯ್ಯನ ತಮ್ಮ ನಾಗಪ್ಪಯ್ಯನು ಕಂದಾಯ ಮೊತ್ತವನ್ನು ವಿಪರೀತ ಹೆಚ್ಚಿಸಿ ಕೊಡಗರನ್ನು ಇನ್ನಿಲ್ಲದಂತೆ ಸುಲಿದು ಪ್ರಜೆಗಳ ಆಕ್ರೋಶಕ್ಕೆ ಕಾರಣನಾದ. ಆತನ ಚಾರಿತ್ರ್ಯ ಮತ್ತು ದುರಾಡಳಿತದ ಬಗೆಗಿನ ಐತಿಹ್ಯ ಕತೆಗಳು ಈಗಲೂ ಕೊಡಗಿನ ಹಿರಿಯರ ನೆನೆಪಿನ ಕೋಶಗಳಲ್ಲಿ ಅಚ್ಚೊತ್ತಿವೆ.[೩೪] ಟಿಪ್ಪುವಿಗೆ ನಾಗಪ್ಪಯ್ಯನ ರಾಜ ದ್ರೋಹ ಮತ್ತು ಪ್ರಜಾದ್ರೋಹದ ಅರಿವಾಗಿ ಅವನನ್ನು ಅಮಲ್ದಾರ ಪದವಿಯಿಂದ ಇಳಿಸಿದ್ದು ಕೆಲವು ಅನಾಹುತಗಳಿಗೆ ಕಾರಣವಾಯಿತು. ಟಿಪ್ಪುವಿನ ಶತ್ರು ಕೋಟೆಯಂಗಡಿ ವೀರವರ್ಮ ರಾಜನಲ್ಲಿಗೆ ಹೋಗಿ ಆಶ್ರಯ ಬೇಡಿ, ಸುಲಿಗೆಕೋರರ ತಂಡವೊಂದನ್ನು ಕಟ್ಟಿ ತನ್ನದೇ ಕೊಡಗಿನ ಜನರನ್ನು ಸುಲಿಯತೊಡಗಿದ್ದು ಆತನ ವ್ಯಕ್ತಿತ್ವದ ಇನ್ನೊಂದು ಮುಖವನ್ನು ಅನಾವರಣಗೊಳಿಸಿತು. ಆಗಿನ ಅರಾಜಕತೆಯ ವ್ಯವಸ್ಥೆಯಲ್ಲಿ ಕೊಡಗಿನಾದ್ಯಂತ ಅನೇಕ ಸುಲಿಗೆಕೋರ ತಂಡಗಳು ಹುಟ್ಟಿಕೊಂಡದ್ದರಿಂದ ಜನಸಾಮಾನ್ಯರು ಟಿಪ್ಪುವನ್ನು ಶಪಿಸುವಂತಾಯಿತು. ಮರಾಠರೊಡನೆ, ನಿಜಾಮರೊಡನೆ ಮೈತುಂಬಾ ಹೋರಾಟದಲ್ಲಿ ಮುಳುಗಿದ್ದ ಟಿಪ್ಪುವಿಗೆ ಕೊಡಗಿನತ್ತ ಗಮನಹರಿಸಲು ವ್ಯವಧಾನವಿಲ್ಲದಿದುದರಿಂದ ಈ ಪುಟ್ಟ ಭೂಭಾಗದ ಶಾಂತಿ ನೆಮ್ಮದಿ ಸಂಪೂರ್ಣವಾಗಿ ಕದಡಿ ಹೋಯಿತು. ಪರಿಣಾಮವಾಗಿ ಕೊಡಗಿನಲ್ಲಿ ಆರ್ಥಿಕ ಬದುಕು ದುಸ್ತರವಾಗಿ ಜನರು ತಮ್ಮ ಪ್ರಾಣ, ಮಾನ ಆಸ್ತಿ ಪಾಸ್ತಿಗಳನ್ನು ರಕ್ಷಿಸಿಕೊಳ್ಳುವುದು ಕಷ್ಟವಾಗಿ ಅವರು ಬಲಾಢ್ಯ ಸ್ಥಿರ ಆಡಳಿತ ವ್ಯವಸ್ಥೆ ಬೇಕೆಂದು ಹಾರೈಸುವಂತಾಯಿತು.

೩. ೫ ದೊಡ್ಡವೀರರಾಜನ ಕಾಲದ ಆರ್ಥಿಕತೆ

ಕೊಡಗಿನ ದಕ್ಷಿಣ ತುದಿಯಿಂದ (ಬ್ರಹ್ಮಗಿರಿ ಬೆಟ್ಟ ಸಾಲು) ದಕ್ಷಿಣ ಕನ್ನಡದ ಬಂಟವಾಳದವರೆಗೆ ಕೊಡಗನ್ನು ಕಟ್ಟಿ ಬೆಳೆಸಿದ ದೊಡ್ಡವೀರನ ಬಗ್ಗೆ ಕೊಡಗಿನಾದ್ಯಂತ ಅನೇಕ ಐತಿಹ್ಯಗಳು ದೊರೆಯುತ್ತವೆ. ಕೊಡಗಿನ ವಿಸ್ತರಣೆಯ ಕಾಲದಲ್ಲಿಯೇ ಅದರ ದುರಂತದ ಬೀಜ ಬಿತ್ತಲ್ಪಟ್ಟದ್ದು ಒಂದು ಐತಿಹಾಸಿಕ ವ್ಯಂಗ್ಯವಾಗಿದೆ. ಕೊಡಗನ್ನು ಟಿಪ್ಪುವಿನಿಂದ ಬಿಡುಗಡೆಗೊಳಿಸಲು ದೊಡ್ಡವೀರರಾಜನು ಇಂಗ್ಲೀಷರೊಡನೆ ಎರಡು ಬಾರಿ ಒಪ್ಪಂದ ಮಾಡಿಕೊಳ್ಳಬೇಕಾಯಿತು. ಮೊದಲನೆಯದು ೧೭೯೦ ರಲ್ಲಿ ನಡೆದ ಒಪ್ಪಂದ.[೩೩] ಎರಡನೆಯದು ಟಿಪ್ಪು ಸೋತ ಬಳಿಕ ನಡೆದ ಮೈತ್ರಿ ಒಪ್ಪಂದ.[೩೪] ಇವು ೧೮೩೪ ರಲ್ಲಿ ಕೊಡಗನ್ನು ಬ್ರಿಟಿಷರು ವಶಪಡಿಸಿಕೊಳ್ಳಲು ಕಾರಣವಾದವು. ಆದರೆ ಪಿರಿಯಾಪಟ್ಟಣದಲ್ಲಿದ್ದಾಗ ನಡೆದ ಬಲಾತ್ಕಾರದ ಸುನ್ನತ್ ಕ್ರಿಯೆ, ತನ್ನ ತಂಗಿಯಂದಿರಿಬ್ಬರನ್ನು ಇಸ್ಲಾಂಗೆ ಸೇರಿಸಿ ಟಿಪ್ಪು ಮದುವೆಯಾದದ್ದನ್ನು ದೊಡ್ಡವೀರರಾಜ ಕ್ಷಮಿಸಲು ಸಿದ್ಧನಿರಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಕೊಡಗಿನ ಜನರು ದೊಡ್ಡವೀರರನ್ನು ತಮ್ಮ ಸಂರಕ್ಷಕನೆಂದು ಭಾವಿಸಿ ಟಿಪ್ಪುವಿಗೆ ಎದುರಾಗಿ ನಿಲ್ಲಿಸಿದರು. ವೀರ ರಾಜ ಪೇಟೆ ನಿರ್ಮಾಣ, ನಾಲ್ಕು ನಾಡು ಅರಮನೆ ನಿರ್ಮಾಣ, ಮಡಿಕೇರಿಯಲ್ಲಿ ಹೊಸ ಅರಮನೆ ನಿರ್ಮಾಣ ಮತ್ತು ರಾಜಾಸೀಟನ್ನು ಕಟ್ಟಿಸಿದ್ದು ಕೊಡಗಿಗೆ ಇವನ ಭೌತಿಕ ಕೊಡುಗೆಗಳು.[೩೫] ಮೂರನೇ ಆಂಗ್ಲೋ ಮೈಸೂರು ಯುದ್ಧದ ಸಂದರ್ಭದಲ್ಲಿ ಶ್ರೀರಂಗಪಟ್ಟಣದಿಂದ ತಪ್ಪಿಸಿಕೊಂಡು ಬಂದ ಟಿಪ್ಪು ಕಾಲದ ಇಸ್ಲಾಂ ಮತಾಂತರಿತ ಕೊಡಗರಿಗೆ ಪುನರ್ವಸತಿ ಕಲ್ಪಿಸಿಕೊಟ್ಟು ಖಾಲಿ ಭೂಮಿಗಳನ್ನು ಹಂಚಿದ್ದು ಮತ್ತು ತುಳುನಾಡಿನ ವಲಸಿಗರಿಗೆ ಬದುಕಲು ನೆಲೆ ಕಲ್ಪಿಸಿಕೊಟ್ಟದ್ದು ದೊಡ್ಡವೀರರಾಜನ ಮುತ್ಸದ್ಧಿತನವೆಂದು ಭಾವಿಸಲಾಗಿದೆ.[೩೬] (ಭೂಪಟ ೩.೩)

ತನ್ನ ಜೀವಿತದ ಬಹುಭಾಗವನ್ನು ಟಿಪ್ಪು ವಿರುದ್ಧದ ಹೋರಾಟಕ್ಕೆ ಮತ್ತು ನಾಡುಕಟ್ಟಲು ಬಳಸಿದ ದೊಡ್ಡವೀರರಾಜ ಬಹುತೇಕವಾಗಿ ತನ್ನ ಹಿಂದಿನವರ ಆರ್ಥಿಕ ನೀತಿಯನ್ನು ಮುಂದುವರಿಸಿದಂತೆ ಕಂಡುಬರುತ್ತದೆ. ಕುಟ್ಟ, ಕುರ್ಚಿ, ಪನ್ಯ ಭೂಮಿ, ಅರಮೇರಿ ಪನ್ಯ, ಅಪ್ಪಂಗಳ ಪನ್ಯ, ಗರ್ವಾತಿ ಪನ್ಯ, ಗಾಳಿಬೀಡು ಪನ್ಯ, ಹಾಲೇರಿ ಪನ್ಯ ಇತ್ಯಾದಿಯಾಗಿ ಬಹಳ ವಿಶಾಲವಾದ ಸಾರವತ್ತಾದ ಅರಮನೆಯ ಸ್ವಂತ ಕೃಷಿ ಭೂಮಿಯನ್ನು ಇವನು ಹೊಂದಿದ್ದ.[೩೭] ಕೆಲವನ್ನು ತನ್ನ ಸ್ವಂತ ನಿರ್ವಹಣೆಯಲ್ಲಿ ಮತ್ತು ಇನ್ನು ಕೆಲವನ್ನು ದಂಡಿಗೆ ಸೇವೆ ಸಲ್ಲಿಸಿದ ಅಧಿಕಾರಿಗಳ ನಿರ್ವಹಣೆಯಲ್ಲಿ ಬಿಟ್ಟಿದ್ದ. ಭತ್ತ, ಕಬ್ಬು, ಶುಂಠಿ, ಅರಸಿನ, ತರಕಾರಿ ಆಗಿನ ಪ್ರಮುಖ ಬೆಳೆಗಳಾಗಿದ್ದವು. ತಮ್ಮ ಜಮೀನಿನೊಡನೆ ಉಂಬಳಿ ಭೂಮಿಯ ವ್ಯವಸ್ಥೆಯನ್ನು ಆರಂಭಿಸಿ ಕೃಷಿ ಜಮೀನಿನ ಬದಿಯ ಎತ್ತರದ ಪ್ರದೇಶಗಳನ್ನು ಬಾಣೆಯಾಗಿ ಕೃಷಿಕರಿಗೆ

ನೀಡುವ ಪದ್ಧತಿಯನ್ನು ದೊಡ್ಡವೀರರಾಜ ಆರಂಭಿಸಿದ.[೬೦] ಬೀಜವರಿ ಪದ್ಧತಿಯಲ್ಲಿ ಜಮೀನಿನ ವಿಸ್ತಾರವನ್ನು ಅಳೆಯುವುದನ್ನು ಈತ ಮುಂದುವರಿಸಿದ. ತನ್ನ ಹೆಸರಿನಲ್ಲಿ ವೀರರಾಜೇಂದ್ರ ಕೋಲು ಎಂಬ ಅಳತೆಮಾನವನ್ನು ಅನುಷ್ಠಾನಕ್ಕೆ ತಂದ.[೬೧] ದೊಡ್ಡವೀರರಾಜನ ಅಳತೆಯ ಮಾನವನ್ನು ಅಂಗರಾಜ ಪರಿಷ್ಕರಿಸಿ ಹೊಸ ಅಳತೆಮಾನವನ್ನು ಸೃಷ್ಟಿಸಿದ್ದು ಅಂಗರಾಜನ ಕೋಲು ಎಂದು ಇತಿಹಾಸದ ಪುಟಗಳಲ್ಲಿ ಉಲ್ಲೇಖಿತವಾಗಿದೆ.[೬೨]

೭.೨. 1773 ರಿಂದ 1804 ರ ವರೆಗಿನ ಕೊಡಗು



ದೊಡ್ಡವೀರರಾಜನ ಕಾಲದ ಪಸ್ಯ ಜಮೀನಿನಲ್ಲಿ ಐದು ಎಕರೆಗೂ ಮೀರಿದ ವಿಸ್ತಾರವಾದ ಕೋವುಗಳೆಂದು ಕರೆಯಲಾಗುತ್ತಿದ್ದ ಗದ್ದೆಗಳಿದ್ದವು. ಅಂತಹ ಕೋವುಗಳಲ್ಲಿ ಕೆಸರು ಗದ್ದೆಯಾಟಗಳು ನಡೆಯುತ್ತಿದ್ದುದು ಸಾಮಾನ್ಯವಾಗಿತ್ತು. ಶ್ರೀಮಂತ ಜಮೀನುದಾರರು ಯಾವ ಪ್ರತಿಫಲವೂ ಇಲ್ಲದೆ ಹಿಟ್ಟಿಬಿಟ್ಟಿ ಚಾಕರಿಯನ್ನು ಭೂರಹಿತರಿಂದ ಮಾಡಿಸಿಕೊಳ್ಳುತ್ತಿದ್ದರು. ಜಮ್ಮ ಭೂಮಿ ಪಡೆದವರು ತಮ್ಮ ಭೂಮಿಗಳಲ್ಲಿ ಸಾಟಿ ಪದ್ಧತಿಯ ಮುಯ್ಯಾಳು ವಿನಿಮಯ ಸೇವೆಯನ್ನು ನಡೆಸುತ್ತಿದ್ದರು.

ದೊಡ್ಡವೀರರಾಜ ಭೂಕಂದಾಯ ವ್ಯವಸ್ಥೆಗೆ ನಿಖರತೆಯನ್ನು, ಸ್ಪಷ್ಟತೆಯನ್ನೂ ತಂದುಕೊಟ್ಟ. ಅವನ ಕಾಲದಲ್ಲಿ ಸಾಗುವಳಿ ಮಾಡುವ ರೈತರು ಭತ್ತ ಅಥವಾ ನಾಣ್ಯದ ರೂಪದಲ್ಲಿ ಕಂದಾಯ ನೀಡಬೇಕಾಗಿತ್ತು. ಜಮ್ಮದಾರರು ಸಾಗುವರ್ಗಕಾರರ ಅರ್ಧದಷ್ಟನ್ನು ಕಂದಾಯ ನೀಡಬೇಕೆಂದು ಮತ್ತು ಉಂಬಳಿ ಜಮೀನು ವರ್ಗದಾರರು ಸಾಗುವರ್ಗದಾರರ ಕಂದಾಯದ ೧/೧೦ರಷ್ಟು ಭಾಗವನ್ನು ಕಂದಾಯವಾಗಿ ನೀಡಬೇಕೆಂದು ನಿಗದಿಪಡಿಸಲಾಗಿತ್ತು.[೬೩] ಸಾಗುವರ್ಗ ಕಂದಾಯ, ಜಮ್ಮ ಕಂದಾಯ ಮತ್ತು ಉಂಬಳಿ ಕಂದಾಯವೆಂಬ ಮೂರು ಕಂದಾಯ ವ್ಯವಸ್ಥೆಗಳಿದ್ದರೂ ಕಂದಾಯ ತೀರಾ ಕಡಿಮೆ ಇದ್ದುದರಿಂದ ಕೊಡಗಿನ ಕಂದಾಯ ವ್ಯವಸ್ಥೆಯ ವಿರುದ್ಧ ರೈತರು ಬಂಡೇಳುವ ಪ್ರಶ್ನೆ ಹುಟ್ಟಲೇ ಇಲ್ಲ. ಭೂ ಕಂದಾಯದ ಜತೆಗೆ ತುಪ್ಪದ ತೆರಿಗೆ, ಅರಣಹಾಗ (ಮದುವೆ ಕಾಣಿಕೆ) ಮತ್ತು ಚತುರ್ವಟ್ಟದ ಸುಂಕ ಅಸ್ತಿತ್ವದಲ್ಲಿದ್ದರೂ ಇವುಗಳು ಶೋಷಣಾತ್ಮಕ ಸ್ವರೂಪದ್ದಾಗಿರಲಿಲ್ಲ.[೬೪]

ಕೊಡಗಿನ ವ್ಯಾಪಾರ, ವಾಣಿಜ್ಯ ವಹಿವಾಟುಗಳು ಮೈಸೂರು, ತಲಚೇರಿ ಮತ್ತು ಕಣ್ಣಾನೂರುಗಳೊಡನೆ ನಡೆಯುತ್ತಿದ್ದವು. ಅಕ್ಕಿ ಬೆಳೆಯಲ್ಲಿ ಸ್ವಾವಲಂಬಿಯಾಗಿದ್ದ ಕೊಡಗಿಗೆ ಬಟ್ಟೆ ಮತ್ತು ಕಬ್ಬಿಣದ ಉಪಕರಣಗಳನ್ನು ಬೇರೆ ಕಡೆಯಿಂದ ತರಿಸಬೇಕಾಗಿತ್ತು. ಮಡಿಕೇರಿ ಮತ್ತು ಹಾಲೇರಿ ನಡುವೆ ದೊಡ್ಡವೀರರಾಜನ ಕಾಲದಲ್ಲಿ ಒಂದು ಕಬ್ಬಿಣದ ಕಾರ್ಖಾನೆ ಇದ್ದು ಇಲ್ಲಿ ಆಯುಧ ತಯಾರಿಸಲಾಗುತ್ತಿತ್ತೆಂದು ಹೇಳಲಾಗುತ್ತಿದೆ.[೬೫] ಸಂಪಾಜೆಯಿಂದ ಮಡಿಕೇರಿವರೆಗಿನ ಬೆಟ್ಟ ಗುಡ್ಡಗಳ ಇಳಿಜಾರು ಪ್ರದೇಶಗಳು ಏಲಕ್ಕಿ ಮಲೆಗಳಾಗಿದ್ದು ಪಾರ್ಸಿ ವರ್ತಕರು ಇಲ್ಲಿನ ಏಲಕ್ಕಿಯನ್ನು ಬೇರೆ ಬೇರೆ ನಾಡುಗಳಲ್ಲಿ ಮಾರಾಟ ಮಾಡುತ್ತಿದ್ದರು. ಈ ಏಲಕ್ಕಿ ಮಲೆಗಳ ಬಗ್ಗೆ ಸಾಕಷ್ಟು ಐತಿಹ್ಯಗಳಿವೆ.[೬೬] ಸಾರಿಗೆ ಸಂಪರ್ಕಗಳಿಗೆ ಆನೆ, ಕುದುರೆ ಮತ್ತು ಎತ್ತುಗಳ ಬಳಕೆಯಾಗುತ್ತಿತ್ತು. ಸರಕು ಸಾಗಾಟಕ್ಕೆ ಎತ್ತಿನ ಬಂಡಿಗಳೇ ಪ್ರಮುಖ ಸಾಧನಗಳಾಗಿದ್ದವು. ಇತರ ನಾಡುಗಳೊಡನೆ ಸಂಪರ್ಕ ಸಾಗಾಟ ಸಂಚಾರಗಳಿಗೆ ಮುಕ್ತ ಅನುಮತಿ ಇತ್ತು. ತೂಕ ಮತ್ತು ಅಳತೆಗಳಿಗೆ ಪಾಟಪರೆ, ಪಾಟಭಟ್ಟಿ ಮತ್ತು ಪಾಟ ಆನೆ, ಹೊರೆಪರೆ, ಪಾಟಮಣವೆಂಬ ಮಾನಗಳು ಬಳಕೆಯಾಗುತ್ತಿದ್ದವು.[೬೭] ಇಂಗ್ಲೀಷರ ಪ್ರಭಾವದಿಂದ ರಾತಲು ಎಂಬ ಮಾನ

ಬಳಕೆಗೆ ಬಂತು. ಕಂಠೀರಾಯಿ ವರಹದೊಡನೆ ರೂಪಾಯಿ ನಾಣ್ಯಗಳು ಕೂಡ ಚಲಾವಣೆಯಲ್ಲಿದ್ದವು.[೨೮] ದೊಡ್ಡವೀರರಾಜನಿಂದಾಗಿ ಹುತ್ತರಿ ಹಬ್ಬ, ಅರಮನೆ ಪೊಳ್ದು, ನಾಡ ಪೊಳ್ದು, ಸುಗ್ಗಿ ಕಟ್ಟೆ ಹಬ್ಬ, ದೀಪಾವಳಿ ಹಬ್ಬಗಳು ಪ್ರಾಮುಖ್ಯತೆಯನ್ನು ಪಡೆದು ಕೊಡಗಿನ ಸಾಂಸ್ಕೃತಿಕ ಸಮೃದ್ಧಿಯ ಪರಿಚಯ ವಿದೇಶಿಯರಿಗಾಯಿತು.[೨೯] ಈಸ್ಟ್ ಇಂಡಿಯಾ ಕಂಪೆನಿಯಲ್ಲಿ ದೊಡ್ಡವೀರರಾಜ ಎಂಟೂವರೆ ಲಕ್ಷ ಠೇವಣಿ ಇಟ್ಟಿದ್ದು ಇದೇ ಅವಧಿಯಲ್ಲಿ ಇದರ ಹಿಂದೆ ಈಸ್ಟ್ ಇಂಡಿಯಾ ಕಂಪೆನಿ ಕೊಡಗನ್ನು ವಶಪಡಿಸದಿರಲಿ ಎಂಬ ಉದ್ದೇಶ ಇರುವಂತೆ ಕಂಡುಬರುತ್ತದೆ. ಆದರೆ ಇದು ಈಸ್ಟ್ ಇಂಡಿಯಾ ಕಂಪೆನಿಯನ್ನು ಆರ್ಥಿಕ ಮುಗ್ಗಟ್ಟಿನಿಂದ ಪಾರು ಮಾಡಿದುದರಿಂದ ದೊಡ್ಡವೀರರಾಜನನ್ನು ಇಂಗ್ಲೀಷರು ಸ್ನೇಹದಿಂದಲೇ ನಡೆಸಿಕೊಂಡರು. ಈತನ ಬಳಿಕ ಈತನ ಮರಣ ಪತ್ರದ ಪ್ರಕಾರ ಮಗಳು ದೇವಮ್ಮಾಜಿಯನ್ನು ಕೊಡಗಿನ ರಾಣಿಯನ್ನಾಗಿ ಮಾಡಲಾಯಿತು. ಇದು ತನ್ನನ್ನು ಆರ್ಥಿಕ ಮುಗ್ಗಟ್ಟಿನಿಂದ ಪಾರು ಮಾಡಿದುದಕ್ಕಾಗಿ ಈಸ್ಟ್ ಇಂಡಿಯಾ ಕಂಪೆನಿ ದೊಡ್ಡವೀರರಾಜನಿಗೆ ತೋರಿಸಿದ ಕೃತಜ್ಞತೆಯಾಗಿತ್ತು. ದುರ್ಬಲಳಾಗಿದ್ದ ಎಳೆಯ ರಾಣಿ ಆಡಳಿತದಲ್ಲಿ ಸೋತಾಗ ತಾನು ಹಸ್ತಕ್ಷೇಪ ಮಾಡಿ ಕೊಡಗನ್ನು ಕೈವಶ ಮಾಡಿಕೊಳ್ಳಬಹುದು ಎಂಬ ದುರುದ್ದೇಶ ಕಂಪೆನಿಗೆ ಇದ್ದಿರುವ ಸಾಧ್ಯತೆಗಳಿವೆ. ಆದರೆ ಹನ್ನೆರಡರ ಬಾಲೆ ದೇವಮ್ಮಾಜಿಗೆ ರಾಜಕೀಯದ ಒಳಸುಳಿವುಗಳ ಅರಿವಾಗದೆ ತನ್ನ ಚಿಕ್ಕಪ್ಪ ಲಿಂಗರಾಜ ನೇಯ್ದ ಬಲೆಯಲ್ಲಿ ಸಿಕ್ಕಿಬಿದ್ದು ಆಡಳಿತವನ್ನು ಅವನಿಗೆ ಬಿಟ್ಟುಕೊಡಬೇಕಾಯಿತು.

೩.೬ ಲಿಂಗರಾಜನ ಕಾಲದ ಆರ್ಥಿಕತೆ

ದೊಡ್ಡವೀರನ ತಮ್ಮಂದಿರಲ್ಲಿ ಅಪ್ಪಾಜಿರಾಜ ದೊಡ್ಡವೀರನ ಹುಟ್ಟಿಗೆ ಬಲಿಯಾದರೆ ಲಿಂಗರಾಜ ತನಗೆ ರಾಜ್ಯದ ಮೇಲೆ ಯಾವುದೇ ಆಸಕ್ತಿ ಇಲ್ಲವೆಂದು ನಟಿಸಿ ಬದುಕುಳಿದಿದ್ದ. ತನ್ನ ಅಣ್ಣನ ಮಗಳು ದೇವಮ್ಮಾಜಿಯ ಮೇಲೆ ಪ್ರಭಾವ ಬೀರಿ ಉಪಾಯವಾಗಿ ಕೊಡಗನ್ನು ತನ್ನದಾಗಿಸಿಕೊಂಡ ಮೇಲೆ ಅಣ್ಣನ ಆಡಳಿತ ವ್ಯವಸ್ಥೆಯನ್ನು ಸುಧಾರಿಸಿ ೩೪ ಹುಕುಂನಾಮೆಗಳನ್ನು ರಚಿಸಿ ಕೊಡಗಿಗೆ ಸುಭದ್ರವಾದ ಆಡಳಿತ ವ್ಯವಸ್ಥೆಯನ್ನು ರೂಪಿಸಿದ. ಅವನ ಆಡಳಿತದ ಅವಧಿಯಲ್ಲಿ ಇಂಗ್ಲೀಷರ ಮರ್ಜಿಗೆ ಅನುಗುಣವಾಗಿ ನಡೆದುಕೊಂಡ ಕಾರಣ ಇಂಗ್ಲೀಷರು ಕೊಡಗನ್ನು ಆಕ್ರಮಿಸಲು ಕಾರಣಗಳು ಇರಲಿಲ್ಲ. ಆತ ತನ್ನ ಮಗಳನ್ನು ಐಪಣ್ಣನೆಂಬ ಕೊಡಗನಿಗೆ ಮದುವೆ ಮಾಡಿಸಿಕೊಟ್ಟು ಕೊಡಗಿನ ಬಲಾಢ್ಯ ಜಮೀನುದಾರಿ ಸಮುದಾಯವಾದ ಕೊಡವರನ್ನು ಒಲಿಸಿಕೊಂಡ. ಆದರೆ ಮಗನಾದ ಚಿಕ್ಕವೀರನಿಗೆ ಆಡಳಿತದಲ್ಲಿ ಪ್ರಾಶಸ್ತ್ಯ ದೊರೆಯುವಂತೆ ನೋಡಿಕೊಂಡುದು ಈತನ ಚಾಣಾಕ್ಷ

ನಡಿಗೆಯಾಗಿತ್ತು. ಅಂಗರಾಜ ಬುದ್ಧಿವಂತ ದೊರೆಯಾಗಿದ್ದ ಎಂಬುದಕ್ಕೆ ಆತನ ಹುಕುಂನಾಮೆಗಳನ್ನು ಇಂಗ್ಲೀಷರು ಮೆಚ್ಚಿಕೊಂಡುದು ದೃಷ್ಟಾಂತವಾಗಿದೆ.

ಅಂಗರಾಜ ಕೃಷಿ ಭೂಮಿಯನ್ನು ಅಳೆಯಲು ಬಳಸಿದ ಮಾಪಕಕ್ಕೆ ಅಂಗರಾಜನ ಕೋಲು ಎಂಬ ಹೆಸರು ಬಂದುದನ್ನು ಈ ಹಿಂದೆ ಉಲ್ಲೇಖಿಸಲಾಗಿದೆ. ಅದು ಅವನ ಅಣ್ಣ ದೊಡ್ಡವೀರ ಬಳಸಿದ ವೀರ ರಾಜೇಂದ್ರ ಕೋಲಿಗಿಂತ ಸ್ವಲ್ಪ ಭಿನ್ನವಾದದ್ದು. (ಕೋಷ್ಟಕ ೩.೨.)

ಕೋಷ್ಟಕ ೩.೨ ದೊಡ್ಡವೀರ ರಾಜ ಮತ್ತು ಅಂಗರಾಜನ ಭೂಮಾಪಕ

ದೊಡ್ಡವೀರ ರಾಜನ ಮಾಪಕ	ಅಂಗರಾಜನ ಮಾಪಕ
೧ ಗಜ = ೨೮ ಅಂಗುಲ	೧ ಗಜ = ೨೪ ಅಂಗುಲ
೧ ಕೋಲು = ೮ ಗಜ	೧ ಕೋಲು = ೮ ಗಜ
೧ ಕೋಲು = ೧೮ ಅಡಿ ಅಂಗುಲ	೧ ಕೋಲು = ೧೬ ಅಡಿ
೧ ಚದರ ಕೋಲು = ೩೨೪ ಚ. ಅಡಿ	೧ ಚದರ ಕೋಲು = ೨೫೬ ಚದರ ಅಡಿ
೫೩೬ ೩/೪ ಕೋಲು = ೧೦೦ ಭಟ್ಟಿ	೬೯೫ ೧/೨ ಕೋಲು = ೧೦೦ ಭಟ್ಟಿ
೧೦೦ ಭಟ್ಟಿ = ೩ ಎಕರೆ	೧೦೦ ಭಟ್ಟಿ = ೩ ಎಕರೆ

ಆಧಾರ : ಎಂ. ಜಿ. ನಾಗರಾಜ್, ೨೦೦೪ ಪು. ೧೬೫

ಅಂಗರಾಜ ಮಣ್ಣಿನ ಗುಣಲಕ್ಷಣಗಳಿಗನುಸಾರವಾಗಿ ಭೂಕಂದಾಯವನ್ನು ಪುಸ್ತಕದಲ್ಲಿ ಬರೆದಿಟ್ಟುದು ಅಂಗರಾಜನ ಶಿಸ್ತು ಎಂದು ಪ್ರಖ್ಯಾತವಾಗಿದೆ. ಶಿಸ್ತು ಎಂದರೆ ಪರ್ಷಿಯನ್ ಭಾಷೆಯಲ್ಲಿ ಪ್ರಮಾಣ ಭೂತವಾದ ಭೂಕಂದಾಯದ ದರವೆಂದು ಅರ್ಥ. ಅಂಗರಾಜನು ಮೂರು ಭಟ್ಟಿ ಸಾಗು ಭೂಮಿಗೆ ಹತ್ತು ಭಟ್ಟಿ ಭತ್ತ ಅಥವಾ ಎರಡೂವರೆ ವರಹ ಕಂದಾಯ ನಿಗದಿ ಮಾಡಿದ. ಈಗಿನ ಲೆಕ್ಕಾಚಾರದ ಪ್ರಕಾರ ಅದು ಮೂರು ಎಕರೆಗೆ ಹತ್ತು ರೂ ಕಂದಾಯ ಎಂದಾಗುತ್ತದೆ. ಇದನ್ನು ಭತ್ತ ಅಥವಾ ನಗದು ಹಣ ರೂಪದಲ್ಲಿ ನೀಡುವ ಅವಕಾಶವಿತ್ತು. ಜಮ್ಮ ಭೂಮಿಯ ರೈತರು ಇದರ ಅರ್ಧದಷ್ಟನ್ನು ಕೊಟ್ಟರೆ ಸಾಕಿತ್ತು. ಉಂಬಳಿ ಭೂಮಿಯವರು ಎರಡರಿಂದ ಎರಡೂವರೆ ರೂಪಾಯಿಯವರೆಗೆ ಕಂದಾಯ ಕೊಡಬೇಕಿತ್ತು. ವಿಶೇಷ ಸೇವೆ ಸಲ್ಲಿಸಿದವರಿಗೆ ಕಂದಾಯ ಮಾಫಿ ಮಾಡಲಾಗುತ್ತಿತ್ತು. ೨೫ ಭಟ್ಟಿಗಳಿಗಿಂತ

ಕಡಿಮೆ ಜಮೀನನ್ನು ಸಾಗುವಳಿ ಮಾಡುವವರು ಧೂಳೀ ಭತ್ತ ಕಂದಾಯ ಕೊಡಬೇಕಾಗಿರಲಿಲ್ಲ. ಏಳು ಸಾವಿರ ಸೀಮೆಯ ರೈತರು ೧೨೦ ಭಟ್ಟಿ ಜಮೀನಿಗೆ ೧೬ ರೂ ಕಂದಾಯ ಕೊಡಬೇಕೆಂದು ನಿಗದಿಯಾಗಿತ್ತು. ಈ ಎಲ್ಲ ವಿವರಗಳನ್ನು ಹುಕುಂನಾಮೆಯ ಮೂರನೇ ಆಣತಿಯಲ್ಲಿ ನಮೂದಿಸಲಾಗಿದೆ. ಅಂಗರಾಜನ ಹುಕುಂನಾಮೆಯ ಸಂಕ್ಷಿಪ್ತ ಮಾಹಿತಿ ಕೊಷ್ಟಕ ೩.೩ ರಲ್ಲಿದೆ.

ಕೋಷ್ಟಕ ೩.೩ ಅಂಗರಾಜನ ಹುಕುಂನಾಮೆ

ಭಾಗ	ನಿಬಂಧನೆ / ಹುಕುಂ
ಮೊದಲನೆಯ ಭಾಗ	ಸರ್ಕಾರಿ ನೌಕರರು ನಡೆದುಕೊಳ್ಳಬೇಕಾದ ರೀತಿ ಮತ್ತು ತಮ್ಮ ಕೆಲಸದಲ್ಲಿ ಅನುಸರಿಸಬೇಕಾದ ನಿಬಂಧನೆಗಳು
ಎರಡನೆಯ ಭಾಗ	ರಾಜ್ಯದಲ್ಲಿ ರೈತರ ಕರ್ತವ್ಯಗಳ ಮತ್ತು ರಾಜನಿಂದ ಅವರಿಗೆ ಕೊಡಲ್ಪಡುವ ಸಹಾಯಗಳು
ಮೂರನೆಯ ಭಾಗ	ಭೂಮಿ ಕಂದಾಯ ಮತ್ತು ಅದರ ಎತ್ತುವಿಕೆಯ ಹುಕುಂಗಳು
ನಾಲ್ಕನೆಯ ಭಾಗ	ನ್ಯಾಯ ಪರಿಪಾಲನೆ ಮತ್ತು ನ್ಯಾಯ ವಿತರಣೆಗೆ ಸಂಬಂಧಪಟ್ಟ ಹುಕುಂಗಳು

ಆಧಾರ: ಎಂ. ಜಿ. ನಾಗರಾಜ, ೨೦೦೪

ಅಂಗರಾಜನ ಭೂ ಕಂದಾಯ ಬಹಳ ಕಡಿಮೆ ಇತ್ತು. ವಿಜಯನಗರ ಸಾಮ್ರಾಜ್ಯದಲ್ಲಿ, ಆ ಬಳಿಕ ಕೆಳದಿಯಲ್ಲಿ ಮತ್ತು ಸಮೀಪದ ಮೈಸೂರಿನಲ್ಲಿ ಭೂಮಿಯ ೧/೬ ಭಾಗವನ್ನು ಕಂದಾಯವಾಗಿ ನೀಡಬೇಕಾಗಿತ್ತು. ಆದರೆ ಅಂಗರಾಜನ ವ್ಯವಸ್ಥೆಯಲ್ಲಿ ಭೂಮಿಯ ಒಟ್ಟು

ಉತ್ಪತ್ತಿಯ ೧/೧೦ ರಷ್ಟು ಕಂದಾಯ ಕಟ್ಟಿದರೆ ಸಾಕಿತ್ತು. ಇದನ್ನು ಕ್ರಾಂತಿಕಾರಿ ರಿಯಾಯಿತಿ ಪದ್ಧತಿ ಎಂದು ಇಂಗ್ಲೀಷರು ಪರಿಗಣಿಸಿದ್ದರು.[೨೦] ಅಣ್ಣನ ಆಡಳಿತ ಕಾಲದಲ್ಲಿ ಅಂಗರಾಜ ರೈತನಾಗಿ ಹಾಲೇರಿಯಲ್ಲಿ ಶ್ರಮದಾಯಕ ಜೀವನ ಸಾಗಿಸುತ್ತಿದ್ದ. ಅದುವೇ ಭೂಕಂದಾಯದಲ್ಲಿ ಆತ ರಿಯಾಯಿತಿ ತೋರಿಸಲು ಕಾರಣವಾಗಿರಬೇಕು.

ಭೂಕಂದಾಯವನ್ನು ಪರಿಶೀಲಿಸುವಾಗ ಅಧಿಕಾರವನ್ನು ಪಾರುಪತ್ಯಗಾರ ಮತ್ತು ಶಾನುಭೋಗರಿಗೆ ನೀಡಲಾಗಿತ್ತು. ನಿಗದಿಯಾದ ಕಂದಾಯವನ್ನು ಭತ್ತ ಅಥವಾ ಹಣದ ರೂಪದಲ್ಲಿ ರೈತರು ಪಾವತಿಸಬೇಕಿತ್ತು. ಅದಕ್ಕೆ ಪಾರುಪತ್ಯಗಾರ ಪಾವತಿ ರಶೀದಿಯನ್ನು ನೀಡುತ್ತಿದ್ದ. ಇದು ಲೆಕ್ಕಪತ್ರಗಳ ಅನುರಕ್ಷಣೆಗೆ ಅಂಗರಾಜ ನೀಡಿದ ಮಹತ್ವಕ್ಕೆ ದೃಷ್ಟಾಂತವಾಗಿತ್ತು. ಹೊಸದಾಗಿ ಗದ್ದೆ ಸಾಗುವಳಿ ಮಾಡುವವರಿಗೆ ಮತ್ತು ಪಾಳುಬಿದ್ದ ಭೂಮಿಯನ್ನು ಬೇಸಾಯ ಮಾಡುವವರಿಗೆ ವಿಶೇಷವಾದ ರಿಯಾಯಿತಿಯನ್ನು ರಾಜ ತೋರಿಸುತ್ತಿದ್ದುದು ಅವನ ವಿವಿಧ ಅಪ್ಪಣೆಗಳಿಂದ ತಿಳಿದುಬರುತ್ತದೆ. ಉದಾಹರಣೆಗೆ ೩೦ ವರ್ಷಕ್ಕಿಂತ ಹೆಚ್ಚು ಪಾಳುಬಿದ್ದ ಭೂಮಿಯನ್ನು ಉಳುಮೆ ಮಾಡುವವರು ಮೊದಲ ೩ ವರ್ಷ ಕಂದಾಯ ಕಟ್ಟಬೇಕಾಗಿರಲಿಲ್ಲ; ೪ನೇ ವರ್ಷ ಅರ್ಧ ಕಂದಾಯ ಮತ್ತು ೭ನೇ ವರ್ಷ ಮುಕ್ಕಾಲು ಕಂದಾಯ ಕಟ್ಟಿದರೆ; ೮ನೇ ವರ್ಷದಿಂದ ಪೂರ್ತಿ ಕಂದಾಯ ಕಟ್ಟಬೇಕೆಂಬ ಅಪ್ಪಣೆಯನ್ನು ಮಾಡಲಾಗಿತ್ತು. ಗುಡ್ಡೆಯನ್ನು ಕಡಿದು ಹೊಸದಾಗಿ ಕೃಷಿ ಆರಂಭಿಸಿದ ರೈತರಿಗೆ ೮ನೇ ವರ್ಷದವರೆಗೆ ಕಂದಾಯ ರಿಯಾಯಿತಿ ಇತ್ತು. ೯ನೇ ವರ್ಷದಲ್ಲಿ ಕಾಲು ಮತ್ತು ೧೦ ನೇ ವರ್ಷದಲ್ಲಿ ಅರ್ಧ, ೧೧ನೇ ವರ್ಷದಲ್ಲಿ ಮುಕ್ಕಾಲು ಕಂದಾಯ ಕಟ್ಟಬೇಕಿತ್ತು. ೧೨ನೆಯ ವರ್ಷದಿಂದ ಪೂರ್ತಿ ಕಂದಾಯ ಕಟ್ಟಬೇಕಾಗಿ ಬರುತ್ತಿತ್ತು.[೨೧] ಭೂಮಿಯನ್ನು ಪಾಳು ಬಿಡದೆ ಉತ್ಪಾದನೆಗೆ ಬಳಸಿಕೊಳ್ಳಬೇಕು ಎಂಬ ಆರ್ಥಿಕ ಉದ್ದೇಶ ಈ ರಿಯಾಯಿತಿಗಳ ಹಿಂದಿರುವುದು ಸ್ಪಷ್ಟ.

ಅಂಗರಾಜನು ತನ್ನ ಹಿಂದಿನವರ ತುಪ್ಪದ ತೆರಿಗೆ, ಧೂಳೀ ಭತ್ತ ತೆರಿಗೆ, ಮನೆದೆರೆ (ಮನೆತೆರಿಗೆ)ಯನ್ನು ಮುಂದುವರಿಸಿದ್ದ. ೧೦೦ ಭಟ್ಟಿ ಜಮೀನಿನವರು ಅರ್ಧ ಸೇರಿನಂತೆ ತುಪ್ಪದ ತೆರಿಗೆ ನೀಡಬೇಕಾಗಿತ್ತು. ಕುಟುಂಬವೊಂದರ ಮನೆತೆರಿಗೆಯ ಮೊತ್ತ ೯ ಅಣೆ ೭ ಪೈಸೆ ಆಗಿತ್ತು. ದಲಿತ ವರ್ಗಕ್ಕೆ ಇದರಲ್ಲಿ ವಿನಾಯಿತಿ ತೋರಲಾಗಿದ್ದು ಅವರು ಅರ್ಧಾಂಶ ತೆರಿಗೆ ನೀಡಿದರೆ ಸಾಕಿತ್ತು.[೨೨] ಭೂಕಂದಾಯದೊಡನೆ ಕೃಷಿಯೇತರ ಜನರ ಕೈಕಸುಬುಗಳ ಮೇಲೆ ಮತ್ತು ಇತರ ವೃತ್ತಿಗಳ ಮೇಲೆ ಅಂಗರಾಜ ಮುತುರ್ಪವನ್ನು ವಿಧಿಸಿದ್ದ.[೨೩]

ಕೋಷ್ಟಕ ೩.೪: ಅಂಗರಾಜನ ವೃತ್ತಿ ತೆರಿಗೆ ಸ್ವರೂಪ

ಜಾತಿಗಳು/ ವೃತ್ತಿಗಳು	ತೆರಿಗೆ
ಕೊತ್ತೇರರು	೭.೧/೨ ಕಂಠೀರಾಯಿ ಹಣ
ದೇವಾಂಗದವರು	೭ ಕಂಠೀರಾಯಿ ಹಣ
ಕುಂಬಾರರು	೬.೧/೨ ಕಂಠೀರಾಯಿ ಹಣ
ದಾಸರು	೫ ಕಂಠೀರಾಯಿ ಹಣ
ಗೌಳಿಗಳು	೪ ಕಂಠೀರಾಯಿ ಹಣ
ಉಪ್ಪಾರರು	೪ ಕಂಠೀರಾಯಿ ಹಣ
ಅಗಸರು	೩ ಕಂಠೀರಾಯಿ ಹಣ
ಅಯಿಲಿಗಳು	೩ ಕಂಠೀರಾಯಿ ಹಣ
ಅಕ್ಕಸಾಲಿಗರು	೩ ಕಂಠೀರಾಯಿ ಹಣ
ಕುರುಬರು	೧ ಕಂಠೀರಾಯಿ ಹಣ
ಕಟ್ಟಿಗರು	೧ ಕಂಠೀರಾಯಿ ಹಣ
ಒಡ್ಡರು	೧ ಕಂಠೀರಾಯಿ ಹಣ
ಕಣಿಯರು	೧ ಕಂಠೀರಾಯಿ ಹಣ
ಮೇದರು	೧ ಕಂಠೀರಾಯಿ ಹಣ
ಮಾದಿಗರು	೧ ಕಂಠೀರಾಯಿ ಹಣ
ಮಲೆಕುಡಿಯರು	೧ ಕಂಠೀರಾಯಿ ಹಣ

ಒಂದು ಕಂಠಿರಾಯಿ ಹಣ = ೨.೯೨ ರೂಪಾಯಿ

ಆಧಾರ : ಪುರುಷೋತ್ತಮ ಬಿಳಿಮಲೆ, ೧೯೮೬, ಪು. ೨೫೩

ಕೋಷ್ಟಕ ೩.೪ ರಲ್ಲಿ ಕೊಡಲಾದ ವೃತ್ತಿಗಳ ಮೇಲೆ ಮಾತ್ರವಲ್ಲದೆ ಜ್ಯೋತಿಷಿಗಳ ಮೇಲೂ ತೆರಿಗೆ ಇತ್ತು. ಹುಕುಂನಾಮೆಯಲ್ಲಿ ಬಸವಿ ಮುದ್ರೆಗಾಣಿಕೆ ಕಂಠೀರಾಯಿ ಹಣ ೨ ಎಂಬ ಉಲ್ಲೇಖವಿದೆ. ಇದು ಆ ಕಾಲದಲ್ಲಿ ಕೊಡಗಿನಲ್ಲಿ ಬಸವಿಯರಿದ್ದರು ಮತ್ತು ಅವರು ತೆರಿಗೆ ನೀಡಬೇಕಾಗಿತ್ತು ಎನ್ನುವುದರ ಸೂಚನೆಯಾಗಿದೆ. ಆಧುನಿಕ ಕಾಲದಲ್ಲಿ ರಾಜ್ಯ ಸರ್ಕಾರಗಳು ವಿಧಿಸುವ ವೃತ್ತಿ ತೆರಿಗೆಗೆ ಈ ತೆರನಾದ ತೆರಿಗೆಗಳು ತಾರ್ಕಿಕ ಸಮರ್ಥನೆಯನ್ನು ನೀಡುತ್ತವೆ. ಆದರೆ ಬಸವಿ ಪದ್ಧತಿಯನ್ನು ನಿಲ್ಲಿಸುವ ಬದಲು ಬಸವಿಯರ ಮೇಲೂ ತೆರಿಗೆ ಹಾಕುವ ಪದ್ಧತಿಯು ಅಮಾನವೀಯತೆಗೆ ದೃಷ್ಟಾಂತವಾಗುತ್ತದೆ.

ಅಂಗರಾಜನ ತೆರಿಗೆ ನೀತಿಯು ತಾರತಮ್ಯದಿಂದ ಕೂಡಿತ್ತು. ಕೆಳಜಾತಿಯ ಎಲ್ಲಾ ಜನರ ವೃತ್ತಿಗಳ ಮೇಲೆ ತೆರಿಗೆ ವಿಧಿಸುತ್ತಿದ್ದ. ರಾಜನು ಕೊಡವರನ್ನು ಮತ್ತು ಗೌಡರನ್ನು ತೆರಿಗೆ ವ್ಯಾಪ್ತಿಯಿಂದ ಹೊರಗಿಟ್ಟಿದ್ದಾನೆ. ಅವನ ೨೩ನೇ ಅಪ್ಪಣೆಯಲ್ಲಿ ಕೊಡವರು, ಹಂಮ್ಮಗಳು, ಮುಕ್ಕಾಟಿಗಳು, ಹೆಗ್ಗಡೆಗಳು ಈ ನಾಲ್ಕು ಜಾತಿ ವಿನಹ ಎಂಬ ಉಲ್ಲೇಖವಿದೆ.[೭೪] ಕೊಡವರು ಮತ್ತು ಗೌಡರು ಆರಂಭದಿಂದಲೂ ರಾಜತ್ವಕ್ಕೆ ಸಮೀಪವಾಗಿದ್ದವರು. ಈ ಎರಡು ಪ್ರಬಲ ವರ್ಗಗಳಿಗೆ ತೆರಿಗೆ ವಿನಾಯಿತಿ ನೀಡುವ ಮೂಲಕ ಅಂಗರಾಜ ಪ್ರತಿಗಾಮಿ ವ್ಯವಸ್ಥೆಯ ಹುಟ್ಟಿಗೆ ಕಾರಣನಾಗಿದ್ದ. ಕೆಳಜಾತಿ, ಕೆಳವರ್ಗಗಳ ಜನರು ಈ ತಾರತಮ್ಯದ ಬಗ್ಗೆ ಸೊಲ್ಲೆತ್ತುವ ಸ್ಥಿತಿಯಲ್ಲಿ ಇರಲಿಲ್ಲವೆಂಬುದು ಸ್ಪಷ್ಟವಾಗಿ ಕಂಡುಬರುತ್ತದೆ. ಈ ನಾಲ್ಕು ಜಾತಿಗಳ ವಿನಹ ಅನ್ಯ ಜಾತಿಗಳಿಗೆ ಆಗ ಭೂಮಿಯ ಮೇಲೆ ಹಕ್ಕು ಇಲ್ಲದೇ ಇದ್ದದ್ದು ಇದಕ್ಕೆ ಕಾರಣವಾಗಿರಬಹುದಾದ ಸಾಧ್ಯತೆಗಳಿವೆ.

ಅಂಗರಾಜನ ೩೪ನೆಯ ಅಣತಿಯ ಪ್ರಕಾರ ಹೊರಗಿನ ವ್ಯಾಪಾರಸ್ಥರು ನಿರ್ದಿಷ್ಟ ವ್ಯಾಪಾರ ಕೇಂದ್ರಗಳಲ್ಲಿ ವ್ಯಾಪಾರ ನಡೆಸಬೇಕಾಗಿತ್ತು. ಅರಮನೆ ಮತ್ತು ಕಛೇರಿಯ ಬಳಿಯ ನಿಯಮಿತ ಜಾಗದಲ್ಲಿ ಮಾತ್ರ ವ್ಯಾಪಾರ ನಡೆಸಲು ಅನುಮತಿ ನೀಡಲಾಗಿತ್ತು. ಮನೆಮನೆ ವ್ಯಾಪಾರವನ್ನು ರಾಜ ನಿಯಮಬಾಹಿರವೆಂದು ಸಾರಿದ್ದ. ರೈತರಿಂದ ಅರಮನೆ ಏನನ್ನಾದರು ಖರೀದಿಸಬೇಕಾಗಿದ್ದರೆ ರಾಜ ನಿಗದಿಪಡಿಸಿದ ಬೆಲೆಯಲ್ಲಿ ಅರಮನೆಗೆ ರೈತರು ವಸ್ತುಗಳನ್ನು ಪೂರೈಕೆ ಮಾಡಬೇಕಾಗಿತ್ತು. ಉದಾಹರಣೆಗೆ ಉತ್ತಮ ದರ್ಜೆಯ ಏಲಕ್ಕಿಯ ಬೆಲೆ ಪಾಟಮಣ ಒಂದಕ್ಕೆ ೨೦ರೂ, ಹಾಗೂ ಮಧ್ಯಮ ದರ್ಜೆಗೆ ಪಾಟಮಣ ಒಂದಕ್ಕೆ ೧೭ರೂ ಮತ್ತು ಕನಿಷ್ಠ ದರ್ಜೆಗೆ ಪಾಟಮಣ ಒಂದಕ್ಕೆ ೧೨ರಿಂದ ೧೩ರೂ ನಿಗದಿಯಾಗಿತ್ತು. ಬೆಲೆಗೆ ಸಂಬಂಧಿಸಿದಂತೆ ಇಡೀ ರಾಜ್ಯಕ್ಕೆ ಏಕರೂಪದ ನಿಯಮಾವಳಿ ಜಾರಿಯಲ್ಲಿತ್ತು. ಅರಮನೆಗೆ ಭತ್ತದ ಅಗತ್ಯವಿದ್ದಾಗ ಉತ್ಪಾದನೆಯನ್ನು ಗಮನದಲ್ಲಿಟ್ಟುಕೊಂಡು ಕೊಳ್ಳಲಾಗುತ್ತಿತ್ತು. ೧೦ಭಟ್ಟಿ ಭತ್ತ ಬೆಳೆಯುವ ರೈತ ೩ ಭಟ್ಟಿ ಭತ್ತವನ್ನು ಅರಮನೆಗೆ ಕಾಲು ವರಹ ಹಣಕ್ಕೆ ಮಾರಾಟ ಮಾಡಬೇಕಿತ್ತು.[೭೫] ಇಂದಿನ ಲೆವಿ ಪದ್ಧತಿಯನ್ನು ಈ ವ್ಯವಸ್ಥೆ ನೆನಪಿಗೆ ತರುತ್ತದೆ.

ಅಂಗರಾಜನ ಕಾಲದಲ್ಲಿ ವೀರರಾಜೇಂದ್ರ ಪೇಟೆ ಮತ್ತು ಸೋಮವಾರ ಪೇಟೆಗಳು ಪ್ರಮುಖ ವ್ಯಾಪಾರ ಕೇಂದ್ರಗಳಾಗಿದ್ದವು. ಮಡಿಕೇರಿ ಮತ್ತು ವೀರರಾಜೇಂದ್ರ ಪೇಟೆಗಳಲ್ಲಿ ಶುಕ್ರವಾರ; ಶನಿವಾರ ಸಂತೆಯಲ್ಲಿ ಶನಿವಾರ; ಕೊಡ್ಲಿ ಪೇಟೆಯಲ್ಲಿ ಭಾನುವಾರ ಮತ್ತು ಸೋಮವಾರ ಪೇಟೆಯಲ್ಲಿ ಸೋಮವಾರ ಸಂತೆಗಳು ನಡೆಯುತ್ತಿದ್ದವು.[೨೬] ಬಾಳೆಲೆಯೂ ಕೂಡ ಒಂದು ಪ್ರಮುಖ ವ್ಯಾಪಾರ ಕೇಂದ್ರವಾಗಿತ್ತು. ಮಲೆಗಳ ಏಲಕ್ಕಿ ಬೆಳೆಯನ್ನು ಗುತ್ತಿಗೆ ನೀಡಲಾಗುತ್ತಿತ್ತು. ಕೆಂಪು ಭತ್ತ ಮತ್ತು ಸಣ್ಣಕ್ಕಿ ಪ್ರಮುಖ ರಫ್ತಿನ ಸರಕುಗಳಾದರೆ ಕಂಬಳಿ, ಉಪ್ಪು, ಬಟ್ಟೆ, ಬೇಸಾಯದ ಸಲಕರಣೆಗಳು ಆಮದಿನ ಸರಕುಗಳಾಗಿದ್ದವು. ರೈತರು ಮಲೆಯಾಳ ದೇಶಕ್ಕೆ ಮತ್ತು ಮೈಸೂರಿಗೆ ವ್ಯಾಪಾರ ನಿಮಿತ್ತ ಹೋಗಿ ಬರುತ್ತಿದ್ದುದರ ಹೃದಯಂಗಮ ವರ್ಣನೆ ಎತ್ತು ಕೊರಟ ಪಾಟ್, ಪುತ್ತರಿ ಬೋಡು ಕಳಿಪಾಟ್, ಮತ್ತು ವಯ್ಯ ಕಾಕುವ ಪಾಟ್ ಮುಂತಾದ ಜನಪದ ಗೀತೆಗಳಲ್ಲಿ ಕಂಡುಬರುತ್ತದೆ.[೭೭]

ತೂಕ ಮತ್ತು ಅಳತೆಗೆ ಅರಮನೆಯ ಮುದ್ರೆ ಇರುವ ಕೋಲು ಮತ್ತು ಭಾಗದ ಕಲ್ಲುಗಳನ್ನೇ ಬಳಸಬೇಕಾಗಿತ್ತು. ಅಂಗರಾಜನ ಕಾಲದಲ್ಲಿ ಪಾಟಭಟ್ಟಿ ಮತ್ತು ಹೇರುಭಟ್ಟಿ ಎಂಬ ಎರಡು ರೀತಿಯ ಭಟ್ಟಿ ಮಾನಗಳಿದ್ದವು. (ಕೋಷ್ಟಕ ೩.೫)

ಕೋಷ್ಟಕ ೩.೫ ಅಂಗರಾಜನ ಅಳತೆಯ ಮಾನ

ಮಾನ	ವಿನಿಮಯ	ರೂಪಾಯಿ ತೂಕ
೧ ಪಾಟ ಭಟ್ಟಿ	೧೦ ಪಾಟ ಪರೆ	-------
೧ ಪಾಟ ಪರೆ	೪ ಪಾಟ ಹಣೆ	-------
೪೦ ಪಾಟ ಹಣೆ	೧ ಪಾಟ ಭಟ್ಟಿ	-------
೧೦ ಪಾಟ ಭಟ್ಟಿ	೧೦ ಪಾಟ ಪರೆ ೪೦ ಪಾಟ ಹಣೆ	೮,೦೦೦ರೂ.ಗಳ ತೂಕ
೧ ಪಾಟ ಪರೆ	೧. ೧/೪ ಹೇರು ಪರೆ	೮೦೦ ರೂ. ತೂಕ
೧ ಪಾಟ ಮಣ	----	೧೩೭೫ ರೂ. ತೂಕ
೧ ಹೇರುಭಟ್ಟಿ	೮೦ ಸೇರು	೬,೪೦೦ ರೂ. ತೂಕ

ಆಧಾರ: ಎಂ.ಜಿ ನಾಗರಾಜ – ೨೦೦೪, ಪು.೧೮೬

ಪಾಟ ಭಟ್ಟಿಯ ಅಳತೆಗಳು ರಾಜನ ಕೊಳ್ಳುವ ವ್ಯವಹಾರಕ್ಕೆ ಮತ್ತು ಹೇರುಭಟ್ಟಿ ಅಳತೆಗಳು ರಾಜನ ಕೊಡುವ ವ್ಯವಹಾರಕ್ಕೆ ಸಂಬಂಧಿಸಿದವುಗಳಾಗಿದ್ದವು. ೧ ಪಾಟ ಭಟ್ಟಿಯು ೩೦ ಹಣಗಳಿಗೆ, ೧ ಹೇರು ಭಟ್ಟಿಯು ೪೦ ಹಣಗಳಿಗೆ ಸಮವಾಗಿತ್ತು. ೧ ಹಣಿಯು ೨ ಸೇರಿಗೆ ಸಮಾನವೆಂದು ಪರಿಗಣಿತವಾಗಿತ್ತು.[೭೮] ಕಂಠೀರಾಯಿ ಹಣ, ವರಹ, ಕಾಸು, ಹಾಗ, ರೂಪಾಯಿ ಇತ್ಯಾದಿ ನಾಣ್ಯಗಳು ಬಳಕೆಯಲ್ಲಿದ್ದವು. ಜನರಿಗೆ ಅರಮನೆಯಿಂದ ಸಾಲ ಕೊಡುವ ವ್ಯವಸ್ಥೆ ಇತ್ತು. ದಿವಾನ ಕಛೇರಿ ಈ ಬಗೆಗಿನ ಕಾಗದ ಪತ್ರಗಳನ್ನು ಕಾಯ್ದಿರಿಸಿಕೊಳ್ಳುತ್ತಿತ್ತು. ೧ ತಿಂಗಳ ಅವಧಿಯ ಸಾಲಕ್ಕೆ ೧೦ ವರಹಗಳಿಗೆ ೧ ಹಣ ಬಡ್ಡಿಯಾಗಿತ್ತು. ಸಾಲ ರೂಪದಲ್ಲಿ ಧಾನ್ಯವನ್ನು ಪಡೆದರೆ ನೂರು ಭಟ್ಟಿಗೆ ೧ ತಿಂಗಳಿಗೆ ೧ ಭಟ್ಟಿಯನ್ನು ಬಡ್ಡಿಯಾಗಿ ನೀಡಬೇಕಾಗಿತ್ತು.[೭೯]

ಅಂಗರಾಜನು ಮಾಡಿದ ಕೆಲವು ಸಾಮಾಜಿಕ ಅಪ್ಪಣೆಗಳು ಸಮಾಜ ಸುಧಾರಣೆಯ ಉದ್ದೇಶವನ್ನು ಹೊಂದಿರುವಂತೆ ಭಾಸವಾಗುತ್ತದೆ. ಜಾತಿ ಕಟ್ಟಳೆಯನ್ನು ಆತ ಉಳಿಸಿಕೊಂಡರೂ ವಿಧವಾ ವಿವಾಹಕ್ಕೆ ಅನುಮತಿ ನೀಡಿದ್ದ. ಕೊಡಗಿನಲ್ಲಿ ಶ್ರೀಮಂತರು ಸೀರೆಕೊಟ್ಟು ಅವಿವಾಹಿತ ಹೆಣ್ಣುಗಳನ್ನು ಇಟ್ಟುಕೊಳ್ಳುವ ಹೆಣ್ಣು ಹಚ್ಚಡ ಅಥವಾ ಪಚ್ಚಡ ಪೊಣ್ಣು ಪದ್ಧತಿ ಆಗ ಜಾರಿಯಲ್ಲಿತ್ತು. ರಾಜನು ಕ್ರಿ. ಶ ೧೮೧೧ ರಲ್ಲಿ ಇದನ್ನು ನಿಲ್ಲಿಸುವ ಪ್ರಯತ್ನ ಮಾಡಿರುವುದು ಆತ ಪ್ರಗತಿಪರನಾಗಿದ್ದ ಎನ್ನುವುದನ್ನು ಸೂಚಿಸುತ್ತದೆ.[೮೦]

೩.೭ ಚಿಕ್ಕವೀರ ರಾಜನ ಕಾಲದ ಆರ್ಥಿಕತೆ

ಚಿಕ್ಕವೀರರಾಜ (ಕ್ರಿ.ಶ.೧೮೨೦ – ೧೮೩೪) ತೀರಾ ಎಳೆಯ ಅನುಭವರಹಿತ ವಯಸ್ಸಿನಲ್ಲಿ ಕೊಡಗಿನ ಸಿಂಹಾಸನವನ್ನು ಏರಿದ. ಅವನ ಬಗ್ಗೆ ಮಾಸ್ತಿಯವರು ಒಂದು ಕಾದಂಬರಿಯನ್ನು ಬರೆದಿದ್ದು ಅದು ಜ್ಞಾನಪೀಠ ಪ್ರಶಸ್ತಿಯೊಂದಿಗೆ ಮತ್ತು ಕೆಲವು ವಿವಾದಗಳಿಗೂ ಕಾರಣವಾಗಿದೆ.[೮೧] ಸ್ವಾಭಿಮಾನಿಯಾದ ಈತ ಇಂಗ್ಲೀಷರ ಹಸ್ತಕ್ಷೇಪವನ್ನು ವಿರೋಧಿಸುತ್ತಿದ್ದ. ಬ್ರಿಟಿಷರು ಮುದ್ದಯ್ಯ, ಅಪ್ಪಾರಂಡ ಬೋಪು ಮತ್ತು ಚೆನ್ನ ವೀರಪ್ಪರನ್ನು ಇವನ ವಿರುದ್ಧ ಎತ್ತಿ ಕಟ್ಟಿದರು. ದಿವಾನ ಕುಂಟಬಸವನ ನೆರವಿನಿಂದ ಈ ಸಂಚನ್ನು ವಿಫಲಗೊಳಿಸಿದ ಚಿಕ್ಕವೀರರಾಜನು ಚೆನ್ನ ವೀರಪ್ಪನನ್ನು ಕೊಲ್ಲಿಸುವಲ್ಲಿ ಸಫಲನಾದ. ಬ್ರಿಟಿಷರು ಚಿಕ್ಕವೀರರಾಜನ ಖಾಸಾ ಸಹೋದರಿ ದೇವಮ್ಮಾಜಿಯ ಗಂಡ ಚೆನ್ನ ಬಸಪ್ಪನಿಗೆ ಆಶ್ರಯ ನೀಡಿ ಚಿಕ್ಕವೀರರಾಜನ ವಿರುದ್ಧ ಆತನನ್ನು ಎತ್ತಿಕಟ್ಟಿದರು. ಅಂಗರಾಜನ ಕಾಲದಲ್ಲೇ ದಿವಾನನಾಗಿದ್ದ ಅಪ್ಪಾರಂಡ ಬೋಪು ಚಿಕ್ಕವೀರನನ್ನು ಪಟ್ಟದಿಂದ ಕೆಳಗಿಳಿಸಿ ಒಬ್ಬ ಕೊಡವನನ್ನು ಅಲ್ಲಿ ಪ್ರತಿಷ್ಠಾಪಿಸಬೇಕೆಂದು ಬಯಸಿದ್ದು ಬ್ರಿಟಿಷರಿಗೆ ಅನುಕೂಲವಾಯಿತು. ಪರಿಸ್ಥಿತಿಯ

ಗಂಭೀರತೆಯನ್ನು ಅರಿಯುವಲ್ಲಿ ವಿಫಲನಾದ ಚಿಕ್ಕವೀರರಾಜ ಬ್ರಿಟಿಷರನ್ನು ನೇರವಾಗಿ ಎದುರು ಹಾಕಿಕೊಂಡ. ಪರಿಣಾಮವಾಗಿ ಕ್ರಿ. ಶ. ೧೮೩೪ ರಲ್ಲಿ ಕರ್ನಲ್ ಫ್ರೇಸರ್‌ನ ಸೇನೆ ಕೊಡಗನ್ನು ಮುತ್ತಿ ರಾಜನನ್ನು ಪದಚ್ಯುತಗೊಳಿಸಿತು. ಕ್ಯಾಪ್ಟನ್ ಲೀಹಾರ್ಡಿ ಆಡಳಿತಾಧಿಕಾರಿಯಾಗಿ ನೇಮಕಗೊಂಡ. ಆ ಬಳಿಕ ಕೊಡಗು ರಾಜಸತ್ತೆಗೆ ಮರಳಲಿಲ್ಲ.

ಚಿಕ್ಕವೀರರಾಜನ ಆಡಳಿತದ ಅವಧಿಯಲ್ಲಿ ಲಿಂಗರಾಜನ ಹುಕುಂನಾಮೆಗಳು ಕಾನೂನುಗಳಾಗಿ ಅನುಷ್ಠಾನಗೊಂಡಿದ್ದವು. ಅದರ ಪ್ರಕಾರವೇ ಕಂದಾಯ ವಸೂಲಿ ಯಾಗುತ್ತಿತ್ತು. ಒಟ್ಟು ಉತ್ಪನ್ನದ ೧/೧೦ ಭಾಗ ಕಂದಾಯ ಎಂದು ನಿಗದಿಯಾಗಿದ್ದು ಪ್ರಜೆಗಳು ಅದನ್ನು ತಕರಾರಿಲ್ಲದೆ ಒಪ್ಪಿಕೊಂಡಿದ್ದರು. ಅದು ಬಹಳ ಕಡಿಮೆಯಾಗಿದ್ದುದರಿಂದ ಯಾವ ಪ್ರತಿರೋಧವು ಇರಲಿಲ್ಲ. ಇವನ ಕಾಲದಲ್ಲಿ ಹೊರ ಊರುಗಳ ವ್ಯಾಪಾರಸ್ಥರಿಗೆ ಮತ್ತು ಹೊರರಾಜ್ಯಗಳಿಗೆ ಹೋಗಿ ಬರುವವರಿಗೆ ರಹದಾರಿ ಪತ್ರ ನೀಡಲಾಗುತ್ತಿತ್ತು. ತನ್ನ ವಿರುದ್ಧ ಕೆಲವರು ಸಂಚು ನಡೆಸುತ್ತಿದ್ದಾರೆಂಬ ಸುಳಿವು ರಾಜನಿಗೆ ಸಿಕ್ಕಿದ್ದು ಇದಕ್ಕೆ ಕಾರಣವಾಗಿತ್ತು. ಕೊಡಗಿನ ಸಂತೆಗಳಿಗೆ ಪಿರಿಯಾಪಟ್ಟಣ, ಹಾಸನ , ಸಕಲೇಶಪುರ , ಐಗೂರು, ಮಲಬಾರು ಮುಂತಾದ ಕಡೆಗಳಿಂದ ವ್ಯಾಪಾರಿಗಳು ಸರಕು ಸರಂಜಾಮುಗಳನ್ನು ತಂದು ಮಾರಾಟ ಮಾಡುತ್ತಿದ್ದರು.

ಚಿಕ್ಕವೀರರಾಜನ ಕಾಲದಲ್ಲಿ ಕೊಡಗಿನಲ್ಲಿ ಕಾಫಿ ಬೆಳೆ ಆರಂಭವಾಗಿ ಅದು ಕಾಲಕ್ರಮೇಣ ಕೊಡಗಿನ ಆರ್ಥಿಕ ಚಿತ್ರಣವನ್ನೇ ಬದಲಾಯಿಸಿಬಿಟ್ಟಿತು. ಇದರ ಬಗ್ಗೆ ಒಂದು ಸ್ವಾರಸ್ಯಕರ ವಿವರ ಇದೆ. ಮೊದಲ ಬಾರಿಗೆ ಮಲೆಯಾಳ ದೇಶದಿಂದ ನಾಲ್ಕು ನಾಡಿನ ಇಬ್ಬರು ಮಾಪಿಳ್ಳೆಗಳು ಕಾಫಿ ಬೀಜವನ್ನು ತಂದು ತಮ್ಮ ಹಿತ್ತಲಲ್ಲಿ ಬೆಳೆಸಿ ಮಲೆಯಾಳ ದೇಶದಲ್ಲಿ ಮಾರಾಟ ಮಾಡಿ ಸಾಕಷ್ಟು ಲಾಭಗಳಿಸತೊಡಗಿದರು. ಇದು ಇತರ ಕೊಡಗರಿಗೆ ಗೊತ್ತಾಗಿ ಅವರು ಈ ಮಾಪಿಳ್ಳೆಗಳನ್ನು ವಿಚಾರಿಸಿದಾಗ ಸ್ವಾರ್ಥದಿಂದ ಮಾಪಿಳ್ಳೆಗಳು ಕಾಫಿ ಗಿಡಗಳು ವಿಷದ ಬೇರನ್ನು ಹೊಂದಿವೆ, ಅದರ ನೀರು ಭತ್ತದ ಗದ್ದೆಗೆ ಬಂದರೆ ಬೆಳೆ ಹಾಳಾಗುತ್ತದೆ ಎಂಬ ಕಥೆಯನ್ನು ಹಬ್ಬಿಸಿದರು. ಆದರೆ ಕೊಡಗರು ಈ ಕಟ್ಟುಕತೆಯನ್ನು ನಂಬದೆ ಬಾಣೆ ಪ್ರದೇಶಗಳಲ್ಲಿ ಕಾಫಿಯನ್ನು ಬೆಳೆಸಿ ಅಪಾರ ಲಾಭ ಗಳಿಸಿದರು.[೮೨] ಕಾಫಿಯ ಆರ್ಥಿಕ ಶಕ್ತಿಯನ್ನು ಮೊದಲೇ ತಿಳಿದಿದ್ದ ಈಸ್ಟ್ ಇಂಡಿಯಾ ಕಂಪೆನಿ ಕೊಡಗು ಕಾಫಿ ಬೆಳೆಗೆ ಪ್ರಶಸ್ತವಾದ ಭೌಗೋಳಿಕ ಪ್ರದೇಶವನ್ನು ಹೊಂದಿದೆ ಎಂಬ ಕಾರಣಕ್ಕೆ ಚಿಕ್ಕವೀರರಾಜನ ಮೇಲೆ ಇಲ್ಲಸಲ್ಲದ ಆರೋಪ ಹೊರಿಸಿ ಅವನ ಪದಚ್ಯುತಿಗೆ ಕಾರಣವಾಗಿ ಕೊಡಗನ್ನು ತನ್ನ ಆಡಳಿತಕ್ಕೆ ಒಳಪಡಿಸಿರುವ ಸಾಧ್ಯತೆಗಳಿವೆ.

೩.೮ ಜಮ್ಮ ಭೂಮಿಯ ಆರ್ಥಿಕತೆ

ಕೊಡಗಿನಲ್ಲಿ ಜನ್ಮಸಿದ್ಧವಾಗಿ ಬರುವ ಭೂಮಿಯ ಹಕ್ಕೊಂದಿದ್ದು ಅದು ಜಮ್ಮ ಭೂಮಿ ಪದ್ಧತಿಯೆಂದು ಪ್ರಸಿದ್ಧವಾಗಿದೆ. ಜಮ್ಮ ಪರಿಕಲ್ಪನೆಗೆ ಮಲೆಯಾಳದ ' ಜನ್ಮಿ' ಮೂಲವೆಂಬ ಒಂದು ವಾದವಿದೆ. ಆದರೆ ಇದಕ್ಕೆ ಸಾಕಷ್ಟು ಆಧಾರಗಳಿಲ್ಲ. ಈ ಪದ್ಧತಿಯು ಹಾಲೇರಿ ಅರಸರ ವಿಶಿಷ್ಟವಾದ ಕೃಷಿ ಜಮೀನು ಸಂಬಂಧಿ ವ್ಯವಸ್ಥೆಯಾಗಿದ್ದು ಆಮೇಲೆ ಅನೇಕ ಸಮಸ್ಯೆಗಳ ಸೃಷ್ಟಿಗೆ ಕಾರಣವಾಗಿತ್ತು. ಹಿಂದೆ ರಾಜನಿಗೆ ನಿಷ್ಠೆ ತೋರಿ ಶೌರ್ಯ ಪ್ರದರ್ಶನ ಮಾಡಿದ ಅಥವಾ ಸೇವೆ ಸಲ್ಲಿಸಿದ ರಾಜನಿಷ್ಠರಿಗೆ ಭೂಮಿಯನ್ನು ನೀಡುವುದು ಒಂದು ಸಾಮಾನ್ಯ ಪದ್ಧತಿಯಾಗಿತ್ತು. ಭೂಮಿ ಪಡೆದವರ ಬಳಿಕಿನ ಪೀಳಿಗೆಯವರಿಗೆ ಈ ಭೂಮಿಯ ಮೇಲಿನ ಹಕ್ಕು ಜನ್ಮಸಿದ್ಧವಾಗಿ ಬರುತ್ತಿತ್ತು. ಇದು ಮಲೆಯಾಳದ ವೈನಾಡಿನಲ್ಲಿ[೮೩] ಹೆಚ್ಚು ಪ್ರಚಲಿತವಿದ್ದದು ಹಾಲೇರಿ ಅರಸರ ಕಾಲದಲ್ಲಿ ಕೊಡಗಿನಲ್ಲಿ ಬಲವಾಗಿ ಬೇರೂರಿತ್ತು. ಇತಿಹಾಸಕಾರರ ಪ್ರಕಾರ ಭೂಮಿ ದತ್ತಿ ನೀಡುವ ಪದ್ಧತಿ ಬಹಳ ಹಿಂದಿನಿಂದಲೇ ಬಂದಿದ್ದು ಗಂಗರಸರ ಕಾಲದಲ್ಲಿ ಕೊಡಗಿನಲ್ಲಿ ಅನ್ವಯಗೊಂಡಿತು.[೮೪] ಅದು ಒಂದು ಸಾಮಾನ್ಯ ವ್ಯವಸ್ಥೆಯಾದದ್ದು ಹಾಲೇರಿ ಅರಸರ ಆಡಳಿತ ಕಾಲದಲ್ಲಿ ಎಂದು ಹೇಳಲಾಗುತ್ತದೆ. ಜಮ್ಮ ಭೂಮಿಯ ಬಗ್ಗೆ ವಿಭಿನ್ನವಾದ ದೃಷ್ಟಿಕೋನವೊಂದಿದೆ. ಮೂಲತಃ ಜಮ್ಮ ಭೂಮಿ ಎಂಬ ಪರಿಕಲ್ಪನೆ ಇರಲಿಲ್ಲವೆಂದೂ, ಬ್ರಿಟಿಷರು ಕೊಡಗನ್ನು ವಶಪಡಿಸಿಕೊಂಡಾಗ ಬಲಾಢ್ಯ ಕೊಡವ ಜಮೀನುದಾರರು ಜಮ್ಮ ಭೂಮಿಯ ಪದ್ಧತಿಯನ್ನು ಹುಟ್ಟು ಹಾಕಿ ಕೊಡಗಿನ ಫಲವತ್ತಾದ ಭೂಮಿಯನ್ನು ತಮ್ಮದಾಗಿಸಿಕೊಂಡರೆಂದೂ ಅಭಿಪ್ರಾಯವನ್ನು ಮಂಡಿಸಲಾಗಿದೆ.[೮೫]

ಜಮ್ಮ ಭೂಮಿ ಅದು ಅವಿಭಕ್ತ ಕುಟುಂಬದ ಶಾಶ್ವತ ಭೂಮಿ. ಕೊಡಗಿನಲ್ಲಿ ಇರುವ ಒಕ್ಕಪದ್ಧತಿ ಮತ್ತು ಜಮ್ಮ ಭೂಮಿ ಪದ್ಧತಿ ಅವಿನಾಭಾವ ಸಂಬಂಧ ಹೊಂದಿದೆ. ಜಮ್ಮ ಭೂಮಿಯನ್ನು ವಿಭಜನೆ ಮಾಡುವುದಾಗಲಿ, ಪರಾಭಾರೆ ಮಾಡುವುದಾಗಲಿ, ಮಾರಾಟ ಮಾಡುವುದಾಗಲಿ ಸಾಧ್ಯವಿಲ್ಲ. ಅದರ ಭೂ ಕಂದಾಯ ಇತರ ಭೂಮಿಯ ಅರ್ಧ ಪಾಲಿನಷ್ಟು ಮಾತ್ರ. ಜಮ್ಮ ಭೂಮಿಯೊಂದಿಗೆ ಜಮ್ಮದಾಳುಗಳನ್ನು ಕೂಡ ದತ್ತಿ ನೀಡುವ ಸಂಪ್ರದಾಯ ಕೊಡಗಿನಲ್ಲಿತ್ತು. ಜಮ್ಮದ ಹಾಗೆ ಜಹಗೀರು, ಉಂಬಳಿ, ಭಟ್ಟಮಾನ್ಯ, ಜೋಡಿ ಇತ್ಯಾದಿ ಭೂ ಸ್ವಾಮ್ಯಗಳಿಗೆ ತೆರಿಗೆ ವಿನಾಯಿತಿ ಇದ್ದರೂ ಸಾಂಸ್ಕೃತಿಕ ಭಾವನಾತ್ಮಕತೆ ಇಲ್ಲ. ಹಾಗಾಗಿ ಕೊಡಗಿನ ಭೂ ವ್ಯವಸ್ಥೆಯಲ್ಲಿ ಜಮ್ಮ ಭೂಮಿಯ ವ್ಯವಹಾರಗಳಿಗೆ ವಿಶೇಷವಾದ ಮಹತ್ವವಿದೆ. ಅದು ಕಳೆದು ಹೋದ ಒಂದು ಸಂಸ್ಕೃತಿಯ ಕೊನೆಯ ಕೊಂಡಿಯಾಗಿ ತನ್ನ ಅಸ್ತಿತ್ವವನ್ನು ಈಗಲೂ ಉಳಿಸಿಕೊಂಡಿದೆ.

ಜಮ್ಮ ಭೂಮಿಯ ಪ್ರಧಾನ ಲಕ್ಷಣಗಳನ್ನು ವಿವರಿಸುವ ಪ್ರಯತ್ನವನ್ನು ಕೆಲವು ವಿದ್ವಾಂಸರು ಮಾಡಿದ್ದಾರೆ.[೮೬] ಅವರ ಪ್ರಕಾರ ಅದು ವಂಶಪಾರಂಪರ್ಯದ ಭೂಗೇಣಿ

ವ್ಯವಸ್ಥೆಯಾಗಿದ್ದು ಜಮ್ಮ ಭೂಮಿಯ ಮೇಲಿನ ಹಕ್ಕನ್ನು ಸನದಿನ ಮೂಲಕ ನೀಡಲಾಗುತ್ತದೆ. ಜಮ್ಮದಾರನು ಜಮ್ಮಭೂಮಿಯನ್ನು ಪೂರ್ತಿಯಾಗಿ ಕೃಷಿ ಮಾಡದಿದ್ದರೂ ವಿಸ್ತೀರ್ಣಕ್ಕೆ ಅನುಗುಣವಾಗಿ ಕಂದಾಯ ನೀಡಬೇಕೆಂಬ ರೂಢಿ ಅನುಷ್ಠಾನದಲ್ಲಿತ್ತು. ಜಮ್ಮ ಭೂಮಿಯ ಯಜಮಾನನಿಗೆ ಜಮ್ಮದಾಳುಗಳನ್ನು (ಬಹುತೇಕವಾಗಿ ದಲಿತರು) ನೀಡಲಾಗುತ್ತಿದ್ದು ಅವರು ವಸ್ತುಶಃ ಗುಲಾಮರಂತೆ ದುಡಿಯಬೇಕಾಗಿತ್ತು. ಇದು ದಲಿತರನ್ನು ವಂಶ ಪಾರಂಪರ್ಯವಾಗಿ ಭೂ ರಹಿತ ಗುಲಾಮರನ್ನಾಗಿಸುವ ಒಂದು ತಂತ್ರವಾಗಿತ್ತು. ಜಮ್ಮ ಹೊಂದಿರುವವನು ರಾಜನಿಗೆ ಅಥವಾ ಸರಕಾರಕ್ಕೆ ಹಿಟ್ಟಿ ಬಿಟ್ಟಿ ಚಾಕರಿ ಮಾಡಬೇಕಾಗಿತ್ತು. ಹಿಟ್ಟಿಗಾಗಿ (ಆಹಾರಕ್ಕಾಗಿ) ಬಿಟ್ಟಿ ಚಾಕರಿ (ಧರ್ಮಾರ್ಥ ಸೇವೆ) ಖಡ್ಡಾಯವಾಗಿ ಮಾಡಬೇಕಿರುವ ಈ ವ್ಯವಸ್ಥೆಯಲ್ಲಿ ರೈತರು ರಾಜರ ಜೀತದಾಳುಗಳಂತಿದ್ದರು. ಜಮ್ಮ ಭೂಮಿಯನ್ನು ವಿಭಾಗ ಮಾಡುವಂತಿರಲಿಲ್ಲ. ಮಾರಾಟ ಮಾಡುವಂತಿರಲಿಲ್ಲ. ಮತ್ತು ಸಾಲಕ್ಕಾಗಿ ಅಡವು ಇಡುವಂತೆಯೂ ಇರಲಿಲ್ಲ. [೮೭] ಆದುದರಿಂದ ರೈತರಿಗೆ ಅದರಿಂದ ತೊಂದರೆಗಳಾದದ್ದೇ ಹೆಚ್ಚು. ಕ್ರಿ. ಶ ೧೮೩೭ರ ರೈತ ಬಂಡಾಯದಲ್ಲಿ ಬ್ರಿಟಿಷರ ಪರ ವಹಿಸಿದವರಿಗೆ ಬ್ರಿಟಿಷರು ಜಮ್ಮ ಭೂಮಿಯನ್ನು ಉಡುಗೊರೆಯಾಗಿ ನೀಡಿದ್ದರು. ಈ ವ್ಯವಸ್ಥೆ ೧೮೯೫ರವರೆಗೂ ಅಸ್ತಿತ್ವದಲ್ಲಿತ್ತು. ಆ ವರ್ಷ ಅದನ್ನು ಸಂಪೂರ್ಣವಾಗಿ ನಿಲ್ಲಿಸಲಾಯಿತು.

ಜಮ್ಮದಿಂದಾಗಿ ಕೆಲವು ಪ್ರಯೋಜನಗಳೂ ಆಗಿವೆ ಎಂಬುದನ್ನು ಅಲ್ಲಗಳೆಯುವಂತಿಲ್ಲ. ಕೊಡಗರ ಪಿಚಕತ್ತಿ ಮತ್ತು ಕೋವಿಯ ಹಕ್ಕು ಜಮ್ಮ ವ್ಯವಸ್ಥೆಯೊಡನೆ ತಾಳೆ ಹಾಕಿಕೊಂಡಿದೆ. ಕೊಡಗರಲ್ಲಿ ಒಕ್ಕ ಅಥವಾ ಕೂಡು ಕುಟುಂಬ ಉಳಿದುಕೊಂಡದ್ದು ಜಮ್ಮಭೂಮಿಯ ಕಾರಣದಿಂದಲೇ. ಜಮ್ಮ ಇರುವಲ್ಲೆಲ್ಲ ಐನ್ ಮನೆ, ಕೈಮಡ, ಪತ್ತಾಯ, ಆಲೆ ಪರೆ, ದೇವರಕಾಡು ಕುಟುಂಬದ ದೈವಗಳು ಇದ್ದೇ ಇರುತ್ತವೆ. ಅದು ಸಾಮಾಜಿಕ ಮತ್ತು ಧಾರ್ಮಿಕ ವ್ಯವಹಾರಗಳನ್ನು ಗಟ್ಟಿಗೊಳಿಸಿತ್ತು. ಅಲ್ಲದೇ ಅರಮನೆಯೊಂದಿಗೆ ಒಂದು ಭಾವನಾತ್ಮಕ ಸಂಬಂಧವನ್ನು ಬೆಳೆಸಿತ್ತು. ಕೊಡಗಿನ ಅನೇಕ ಆಚರಣೆಗಳು ಮತ್ತು ಹಬ್ಬಗಳು ಜಮ್ಮ ವ್ಯವಸ್ಥೆಯೊಂದಿಗೆ ತಳಕು ಹಾಕಿಕೊಂಡಿವೆ. ಕ್ರಿ. ಶ. ೧೯೯೩ರಲ್ಲಿ ಕರ್ನಾಟಕ ಹೈಕೋರ್ಟು ಜಮ್ಮ ಭೂಮಿ ಮತ್ತು ಬಾಣೆಯ ಹಕ್ಕು ಸರಕಾರಕ್ಕೆ ಸೇರಿದ್ದಲ್ಲ ಎಂಬ ತೀರ್ಪು ನೀಡಿ ಅದರ ಪರಾಭಾರೆಯ ನಿರ್ಬಂಧಗಳನ್ನು ತೆಗೆದು ಹಾಕಿತು. [೮೮] ಹೀಗೆ ಜಮ್ಮವು ಹೊಸರೂಪ ತಾಳಿ ಈಗಲೂ ಉಳಿದುಕೊಂಡಿದೆ. ಹಾಲೇರಿ ಅರಸರಿಂದಾಗಿ ಪನ್ಯ ಭೂಮಿ ಜಮೀನು ವ್ಯವಸ್ಥೆ ಕೊಡಗಿನಲ್ಲಿ ಜನಪ್ರಿಯವಾಯಿತು. ಪನ್ಯ ಜಮೀನುಗಳಿಗೆ ಸಾಕಷ್ಟು ಪೂರ್ವ ಇತಿಹಾಸವಿದ್ದರೂ ಅದನ್ನೊಂದು ವ್ಯವಸ್ಥಿತ ರೂಪದಲ್ಲಿ ರೂಢಿಗೆ ತಂದದ್ದು ಹಾಲೇರಿಯ ಅರಸರು ಎಂಬುದರಲ್ಲಿ ಯಾವುದೇ ಸಂಶಯವಿಲ್ಲ. ಪನ್ಯ ಭೂಮಿ ಎಂದರೆ ಅರಸರ ನೇರ ವಶದಲ್ಲಿರುವ ವಿಶಾಲವಾದ ಜಮೀನು. ಅವು ಒಳ್ಳೆಯ ಫಲವತ್ತಾದ ಭೂಮಿಗಳಾಗಿದ್ದು ನೀರಾವರಿ ಸೌಲಭ್ಯಗಳನ್ನು

ಹೊಂದಿದ್ದವು. ಪನ್ಯ ಭೂಮಿಯ ಬಳಿಯಲ್ಲಿ ಕೃಷಿ ಕಾರ್ಮಿಕರಿಗಾಗಿ ವಸತಿ ವ್ಯವಸ್ಥೆಗಳನ್ನು ನಿರ್ಮಿಸಲಾಗಿತ್ತು. ಬಹುತೇಕವಾಗಿ ಪನ್ಯ ಭೂಮಿಯಲ್ಲಿ ಕೆಂಬಟ್ಟಿ ಹೊಲೆಯರು ಕೃಷಿ ಮಾಡುತ್ತಿದ್ದರು. ಕೆಲವು ಸಂದರ್ಭಗಳಲ್ಲಿ ಪನ್ಯ ಭೂಮಿಗಳನ್ನು ಬೇರೆಯವರಿಗೆ ಕೃಷಿಗೆ ಕೊಟ್ಟ ಉದಾಹರಣೆಗಳಿವೆ.[೮೯] ಹಾಲೇರಿ ಅರಸರ ಕುಟ್ಟದ ಪನ್ಯವನ್ನು ಶುರು ಪನ್ಯವೆಂದು, ಅರಮೇರಿ ಪನ್ಯವನ್ನು ನಡು ಪನ್ಯವೆಂದು ಮತ್ತು ಅಪ್ಪಂಗಳ ಪನ್ಯವನ್ನು ಕೊನೆ ಪನ್ಯ ಎಂದು ಕರೆಯಲಾಗುತ್ತಿತ್ತು. ಪನ್ಯ ಭೂಮಿಯನ್ನು ಯಾವಾಗಬೇಕಾದರೂ ಹಿಂದಕ್ಕೆ ತೆಗೆದುಕೊಳ್ಳುವ ಅಧಿಕಾರವನ್ನು ರಾಜ ಹೊಂದಿದ್ದ.

ಕ್ರಿ. ಶ. ೧೮೩೪ರಲ್ಲಿ ಚಿಕ್ಕವೀರರಾಜನನ್ನು ಪದಚ್ಯುತಿಗೊಳಿಸಿದಾಗ ಕೊಡಗಿನಲ್ಲಿ ಒಟ್ಟು ಇಪ್ಪತ್ತು ಪನ್ಯ ಜಮೀನುಗಳಿದ್ದವು. ಅವುಗಳ ವಿಸ್ತೀರ್ಣ ೪೬,೮೭೨ ೧/೨ ಭಟ್ಟಿಗಳು ಹಾಗೂ ಅವುಗಳಲ್ಲಿ ೧೬೮ ಶಾಶ್ವತ ಕೃಷಿ ಆಳುಗಳು ಮತ್ತು ೧೦೫೫ ತಾತ್ಕಾಲಿಕ ಕೃಷಿ ಆಳುಗಳು ಕೆಲಸ ಮಾಡುತ್ತಿದ್ದರೆಂದು ರಿಕ್ಟರ್ ದಾಖಲಿಸಿದ್ದಾನೆ.[೯೦] ಡಿ.ಎನ್ ಕೃಷ್ಣಯ್ಯರ ಉಲ್ಲೇಖದ ಪ್ರಕಾರ ಕೊಡಗಿನಲ್ಲಿ ೨೪ ಪನ್ಯ ಜಮೀನುಗಳಿದ್ದವು.[೯೧] ಇಂದಿಗೂ ಕೊಡಗಿನಲ್ಲಿ ಬೇರೆ ಬೇರೆ ಮನೆತನಗಳು ಪನ್ಯ ಜಮೀನನ್ನು ಹೊಂದಿವೆ. ಹಾಗಾಗಿ ವಿಸ್ತಾರವಾದ ಗದ್ದೆಗಳಲ್ಲಿ ಅನೇಕ ಕ್ರೀಡೆಗಳನ್ನು ನಡೆಸಲು ಸಾಧ್ಯವಾಗುತ್ತಿದೆ. ಅಲ್ಲದೇ ಪನ್ಯ ಜಮೀನುಗಳ ಹತ್ತಿರ ಕೈ ಮಡ, ದೇವರ ಕಾಡು, ಕಡಂಗ ಉಳಿದುಕೊಂಡಿವೆ. ಪನ್ಯ ಜಮೀನು ವ್ಯವಸ್ಥೆ ಜಮ್ಮದ ಹಾಗೆ ಗತ ಇತಿಹಾಸವನ್ನು ನೆನೆಪಿಸುವ ಒಂದು ಪಳೆಯುಳಿಕೆಯಾಗಿದೆ. ಈ ವ್ಯವಸ್ಥೆಯ ವಿರುದ್ಧ ಕೊಡವ ಯುವಕರು ಬಂಡೆದ್ದದ್ದು ಇದೆ. ಇದು ನಿಧಾನವಾಗಿ ಕುಸಿಯುತ್ತಿರುವ ಒಂದು ವ್ಯವಸ್ಥೆಯಾಗಿರುವುದು ಉಲ್ಲೇಖನೀಯ.

ಉಲ್ಲೇಖಗಳು ಮತ್ತು ಟಿಪ್ಪಣಿಗಳು

೧. ಎಂ. ಜಿ ನಾಗರಾಜ, ೨೦೦೪, ಪೂರ್ವೋಕ್ತ, ಪು. ೧೧

೨. ಎಫಿಗ್ರಾಫಿಯಾ ಕರ್ನಾಟಕ ಸಂ ೫, ೧೯೭೬; ಮೈಸೂರು ಜಿಲ್ಲೆ, ಮೈಸೂರು ವಿ.ವಿ ಪ್ರಸಾರಾಂಗ (ತಡಿ ಮಾಲಿಂಗಿ – ಕ್ರಿ. ಶ ೧೦೦೪– ೧೪)

೩. ಎಂ. ಜಿ ನಾಗರಾಜ, ೨೦೦೪, ಪೂರ್ವೋಕ್ತ, ಪು. ೧೧

೪. Cannor, Kodagu Memoirs, 1818, Bangalore Central Jail Press

೫. ಎ. ಕ ಸಂಪುಟ ೪, ೧೯೭೫, ಮೈಸೂರು ಜಿಲ್ಲೆ. ಮೈ ವಿ. ವಿ, ಚಾಮರಾಜ ನಗರ ಪು. ೩೪೯

೬. Prasanna Kumar,H.D.2008; Self Help Groups in Kodagu , M.phil dissertation , Annamalai University Tamilnad.

೭. Kodagu District at a glance 2005-06, Kodagu Statistical Officer, Madikeri.

೮. ಡಿ. ಎನ್. ಕೃಷ್ಣಯ್ಯ, ೧೯೯೫, ಪೂರ್ವೋಕ್ತ, ಪು ೪೪

೯. G.Richter ,1870, Gazetter of Coorg P. 229

೧೦. ದೇವಿಪ್ರಸಾದ್ ಸಂಪಾಜೆ, ೨೦೦೩, ಪೂರ್ವೋಕ್ತ, ಪು ೨೭.

೧೧. ಕುಶಾಲಪ್ಪ ಭೀಮಂಡ ; ೧೯೯೮ ; 'ಕೊಡಗು ಚರಿತ್ರೆ', ಪಾಲೂರು ಕೊಡಗು ಜಿಲ್ಲೆ, ಪು. ೩೦.

೧೨. ಸೂರ್ಯನಾಥ್ ಕಾಮತ್, ೧೯೯೨, ಕೊಡಗು ಜಿಲ್ಲಾ ಗಜೆಟಿಯರ್, ಕರ್ನಾಟಕ ಸರಕಾರ ಬೆಂಗಳೂರು ಪು. ೭೨–೭೩

೧೩. ದೇವಿಪ್ರಸಾದ್ ಸಂಪಾಜೆಯವರೊಡನೆ ನಡೆಸಿದ ವಿಚಾರ ವಿನಿಮಯ ಕಾಲದಲ್ಲಿ ವ್ಯಕ್ತವಾದ ಅಭಿಪ್ರಾಯ.

೧೪. I.M.Muthanna, 1953, A Tiny Model State of South India, Habba Publications, Mysore, PP 16 – 17

೧೫. ಡಿ. ಎನ್. ಕೃಷ್ಣಯ್ಯ, ೧೯೯೫, ಪೂರ್ವೋಕ್ತ ಪು ೨೧ - ೨೩

೧೬. ಎಪಿಗ್ರಾಫಿಯಾ ಕರ್ನಾಟಕ, ೧೯೭೨, ಸಂಪುಟ ೧, ಕೊಡಗು ಜಿಲ್ಲೆ, ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿ. ವಿ. ಪು. ೧ – ೨

೧೭. ಬಿ. ಡಿ. ಗಣಪತಿ, ೧೯೬೭, 'ಕೊಡವರು', ಕೊಡಗು ಪ್ರೆಸ್ ಮಡಿಕೇರಿ, ಉತ್ತರ ಕೊಡಗು ಪು. ೧೯೯ . ೯೭,

೧೮. ಎಪಿಗ್ರಾಫಿಯಾ ಕರ್ನಾಟಕ, ೧೯೭೨, ಪೂರ್ವೋಕ್ತ, ಪು. ೯೦

೧೯. I.M. Muthanna, 1953 op. cit., P. 19

೨೦. Ibid P- 20

೨೧. ಸೂರ್ಯನಾಥ ಯು. ಕಾಮತ್, ೧೯೯೨, ಪು ೮೩೪

೨೨. ಡಿ.ಎನ್. ಕೃಷ್ಣಯ್ಯ ಮತ್ತು ಸುಬ್ಬರಾಯ ೧೯೫೭, 'ಕೊಡಗು ಸಂಸ್ಥಾನದ ರಾಜೇಂದ್ರ ನಾಮೆ', ಶ್ರೀ ಕಾವೇರಿ ಪ್ರಕಟಣಾಲಯ ಮಡಿಕೇರಿ, ಕೊಡಗು, ಪು.೧೦

೨೩. ಅದೇ, ಪು ೧೧

೨೪. ಡಿ.ಎನ್ ಕೃಷ್ಣಯ್ಯ ೧೯೯೫ , ಪೂರ್ವೋಕ್ತ , ಪು ೫೪

೨೫. ಡಿ.ಎನ್. ಕೃಷ್ಣಯ್ಯ ಮತ್ತು ಸುಬ್ಬರಾಯ, ೧೯೫೭, ಪೂರ್ವೋಕ್ತ, ಪು ೯.

೨೬. ವಾಣಿಜ್ಯ ಪಂಥದ ನೀತಿಗಳಿಗೆ ಪ್ರತಿಕ್ರಿಯೆಯಾಗಿ ಫ್ರಾನ್ಸಿನಲ್ಲಿ ಹದಿನೆಂಟನೇಯ ಶತಮಾನದಲ್ಲಿ ಕೃಷಿ ಪಂಥವು ಹುಟ್ಟಿಕೊಂಡಿತು. ಕೃಷಿ ಪಂಥೀಯರು ಭೂಮಿಗೆ ಮಾತ್ರ ಸಂಪತ್ತನ್ನು ಸೃಷ್ಟಿಸಲು ಸಾಧ್ಯವಿದೆ. ಕೃಷಿಯು ನಿಸರ್ಗದ ಕರುಣೆಯಾದುದರಿಂದ ಅದನ್ನು ಸರಕಾರ ನಿಯಂತ್ರಿಸಬಾರದು ಎಂದು ಪ್ರತಿಪಾದಿಸುತ್ತಿದ್ದರು. ಆಡಂಸ್ಮಿತ್ ಪ್ರತಿಪಾದಿಸುತ್ತಿದ್ದ ಲೇಸೆಫೇರ್ ನೀತಿ ಮೂಲತಃ ಕೃಷಿ ಪಂಥೀಯರ ಕೊಡುಗೆ.

೨೭. ಡಿ.ಎನ್. ಕೃಷ್ಣಯ್ಯ ಮತ್ತು ಸುಬ್ಬರಾಯ ೧೯೫೭ ಪೂರ್ವೋಕ್ತ ಪು ೪

೨೮. ಈಗ ಹಾಲೇರಿಯನ್ನು ಸಂದರ್ಶಿಸಿದಾಗ ಕಾಣಸಿಗುವುದು ಪಾಳು ಬಿದ್ದ ಮಣ್ಣಿನ ಕೋಟೆ ಮತ್ತು ಖಾಸಗಿ ಒಡೆತನದಲ್ಲಿರುವ ಎಸ್ಟೇಟ್ ಮಾತ್ರ.

೨೯. ಲಕ್ಷ್ಮಣ ತೆಲಗಾವಿ, ೧೯೮೦,ಕೆಲವು ವೀರಶೈವ ರಾಜ ಮನೆತನಗಳು, ಸಿದ್ಧಗಂಗಾ ಶ್ರೀ ಪು. ೧೦೩೫

೩೦. H. Moegling; 1855, Coorg Memoirs, Bangalore, P. 13

೩೧. G. Richter, 1870,op, cit; P.216

೩೨. Cannor, Kodagu Memoirs,1818, op. cit. 88.

೩೩. ರಾಜೇಂದ್ರ ನಾಮೆಯಲ್ಲಿ ವೀರರಾಜನ ಬಗ್ಗೆ ಉಲ್ಲೇಖ ಇಲ್ಲದಿದ್ದರೂ ಇತಿಹಾಸಕಾರರಲ್ಲಿ ಈತನೇ ಹಾಲೇರಿ ವಂಶದ ಸಂಸ್ಥಾಪಕ ಎಂಬ ಬಗ್ಗೆ ಸಂಶಯವಿಲ್ಲ. ಆದರೆ ಈತನ ಕಾಲದ ಬಗ್ಗೆ ಖಚಿತತೆ ಇಲ್ಲ.

೩೪. ಎಂ.ಜಿ. ನಾಗರಾಜ್, ೨೦೦೪, ಪೂರ್ವೋಕ್ತ, ಪು ೧೦೮

೩೫. ಕೊಂಬು – ಇದು ಒಂದು ಸಂಕೇತ. ಕೊಂಬಿನ ಕೂಗು ಕೇಳಿಸುವಷ್ಟು ದೂರದ ವಿಸ್ತಾರದ ಭಾಗವೆಂದು ಹೇಳಲಾಗುತ್ತದೆ.

೩೬. ಎಂ.ಜಿ ನಾಗರಾಜ, ೨೦೦೪, ಪೂರ್ವೋಕ್ತ, ಪು. ೧೦೯

೩೭. ಪ್ರಭಾಕರ ಶಿಶಿಲ, ೨೦೦೯, ಪೂರ್ವೋಕ್ತ, ಪು ೨೩

೩೮. ಕಾರ್ಯಕಾರರು ಎಂದರೆ ಸೇನಾಧಿಪತಿಗಳು. ಚಾವಡಿಕಾರರೆಂದರೆ ಸೈನಿಕರು.

೩೯. ಎಂ.ಜಿ ನಾಗರಾಜ,೧೯೯೩, ಕೆಂಬಟ್ಟಿ ಹೊಲೆಯರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು, ಪು. ೧೭–೮೦

೪೦. ಎಂ.ಜಿ ನಾಗರಾಜ, ೨೦೦೪, ಪೂರ್ವೋಕ್ತ ಪು ೧೧೪

೪೧. ಅದೇ ಪುಟ ೧೧೪

೪೨. ಅದೇ ಪುಟ ೧೧೪

೪೩. ಜಮ್ಮ ಭೂಮಿ ಎಂದರೆ ಪರಭಾರೆ ಮಾಡಲಾಗದ ಹುಟ್ಟಿನ ಕಾರಣವಾಗಿ ಕುಟುಂಬಕ್ಕೆ ರಾಜನಿಂದ ಸಿಗುವ ಭೂಮಿ

೪೪. Richter, 1870, op. cit. P 233

೪೫. ಡಿ.ಎನ್. ಕೃಷ್ಣಯ್ಯ, ೧೯೫೭, ಪೂರ್ವೋಕ್ತ, ಪು ೮೫

೪೬. ನಡಿಕೇರಿಯೆಂಡ ಚಿಣ್ಣಪ್ಪ, ೧೯೯೫, ಪಟ್ಟೋಳೆ ಪಳಮೆ, ಕರ್ನಾಟಕ ಸರ್ಕಾರ, ಕನ್ನಡ ಪುಸ್ತಕ ಪ್ರಾಧಿಕಾರ ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು. ಪು. ೨೮

೪೭. ನಿಡುತ ಹೋಬಳಿ, ಎಡವನಾಡು, ಸೂರ್ಲಬಿ ಮುತ್ತುನಾಡು, ಕಣಿವೆ ನಾಡು ನಂಜರಾಯ ಪಟ್ಟಣ ಹೋಬಳಿ, ಕೂಡಲಿ ಹೋಬಳಿ, ಬಿಲಹ ಹೋಬಳಿ, ಗಡಿನಾಡು, ಹಾಲೇರಿ ನಾಡು, ಹೊರಮಲೆನಾಡು, ಕಗ್ಗೋಡ್ಲು ನಾಡು, ಉಲುಗುಲಿ, ಮೂಡುಕೇರಿ ನಾಡು, ಪಾಡಿ ನಾಲ್ಕು ನಾಡು, ಕಡಿಯತ್ ನಾಡು, ಬೆಪ್ಪು ನಾಡು, ಬೇರಳನಾಡು, ನೂರಂಬಡ ನಾಡು, ಕುತ್ತು ನಾಡು , ಕುರ್ಚಿ ನಾಡು , ಕುಂಜೇರಿ ನಾಡು, ಮರೆನಾಡು, ನಾಲ್ಕು ನಾಡು, ಹುದಕೇರಿಮಂದಪನಾಡು, ತಾವಳಗೇರಿ ಮೂರ್ನಾಡು, ಕಾಂತ ಮೂರ್ನಾಡು, ಹೊರೂರು ನೂರೊಕ್ಕಲು ನಾಡು, ಬೆಂಗುನಾಡು, ತಾವು ನಾಡು, ಕುಯ್ಯಂಗೇರಿ ನಾಡು, ಅಂಜಿಗೇರಿನಾಡು, ಎಡೆನಾಲ್ಕು ನಾಡು, ತಾಕೇರಿ ನಾಡು, ಅಮ್ಮತ್ತಿ ನಾಡು, ಬೆಟ್ಟಿಯತ್‌ನಾಡು, ಹತ್ತುಗಟ್ಟ್ ನಾಡು.

೪೮. ನಾಡಕಟ್ಟ್ ಪಾಟ್ ನ ಪ್ರಮುಖ ಸಾಲುಗಳು :-

ಬಾಳೋ ಬಾಳೋ ನಂಗಡ್ । ಈ ಭೂಮಿರ ಮೀತಲ್
ಚಪ್ಪನ್ನಾರ್ ದೇಶಕ್ । ಐರ್ ದೇಶ ಚೊಲ್ಲುಳ್
ಪೊಮ್ಮಾಲೆ ಕೊಡಗ್‌ಲ್ । ಪಾಲೇರಿ ಒಡೆಯೋಂಡ
ಪೊಂದೇವಡಿ ಪಟ್ಟೀಲ್ । ಪಾಗಾಲಿಂಚ್ಚ ಪುಡಿಚಿತ್ತ್
ದಮ್ಮು ಕಟ್ಟಿ ಉಲಿಪನ್ । ಕೊಂಬ್ ಕೂಕ್ ಕೇಟಲ್ಲಿಕ್
ಕೊಂಬ್ ಡಣ್ಣಾ ಒಂದಾಚಿ । ಪನ್ನೆರಂಡ್ ಕೊಂಬಾಚಿ
ಕಾವೇರಿ ಕುಂಡಾಕರೇ । ಕಗ್ಗಟ್ಟ್ ಪದಿನಾಲ್
ಕಾವೇರಿಕ್ ಈ ಕರೇ । ಮೇಂದಲೇ ಪದಿನಾಲ್
ಪಟ್ಟಿಪೊಳೆ ಕಾವೋರ್ । ಎಣ್ಣೆ ಪೊಳೆ ಕೀವೋರ್
ಏಳ್ ನಾಡ್ ಸೂರ್ಲಬಿ । ಮೂಂದ್ ನಾಡ್ ಕೊಡಣಿ
ನುಪ್ಪತ್ತಂಜಿ ನಾಡ್‌ಕ್ । ಸೀಮೆ ತಕ್ಕಂಗೆಚ್ಚಕ್

ವಕ್ಕಡಿ ಪೆದಲೆನ್ನ್ । ಕೇಳಿ ಕೇಳಿ ಬೆಂದುವೆ ॥

೪೯. ನಾಡ್‌ಕೊರು ಮಾದೇವ । ಊರುಕೊರು ಪೊವ್ವದಿ
ಕೇರಿಕೊರು ಅಯ್ಯಪ್ಪ । ಓಣಿಕೊರ್ ನಾತನ್
ಒಕ್ಕಕೊರು ಪೂದನ್ ।

೫೦. ಎಫಿಗ್ರಾಫಿಯಾ ಕರ್ನಾಟಕ, ಸಂ ೧, ೧೯೭೩, ಕೊಡಗು ಜಿಲ್ಲೆ, ಸೋಮವಾರ ಪೇಟೆ ತಾಲೂಕು, ಪು. ೩೯.

೫೧. ಹಾಲೇರಿ ರಾಜರುಗಳು ಒಬ್ಬರಿಗಿಂತ ಹೆಚ್ಚು ರಾಣಿಯರನ್ನು ಹೊಂದಿದ್ದರು. ಸಹಜವಾಗಿ ಅವರ ಮಕ್ಕಳ ಸಂಖ್ಯೆಯೂ ಹೆಚ್ಚಿತ್ತು. ದಾಯಾದಿ ಸಂಘರ್ಷವನ್ನು ತಪ್ಪಿಸಲು ಅವರು ಪ್ರಧಾನ ರಾಣಿಯಲ್ಲಿಗೆ ಬೇರೆ ಬೇರೆ ಕಡೆಗಳಲ್ಲಿ ಅರಮನೆ ಕಟ್ಟಿಸಿಕೊಟ್ಟಿರುವ ಸಾಧ್ಯತೆಗಳಿವೆ.

೫೨. ಇ. ಮಾರ್ಸ್ಡೆನ್, ಕೊಡಗು ವಿವರಣೆ, ಕನ್ನಡಕ್ಕೆ ತಂಬಂಡ ವಿಜಯ ಪೂಣಚ್ಚ ; ೨೦೦೫, ಪ್ರಸಾರಾಂಗ ಕನ್ನಡ ವಿ.ವಿ ಹಂಪಿ, ಪು.೪೦-೪೧

೫೩. ಡಿ. ಎನ್. ಕೃಷ್ಣಯ್ಯ, ೧೯೫೭, ಪೂರ್ವೋಕ್ತ, ಪು. ೧೪೮

೫೪. ಪ್ರಭಾಕರ ಶಿಶಿಲ, ಮಂಗಳ ಸಂಪುಟ ೨೮, ಸಂಚಿಕೆ ೩೧, ದಿ. ೦೩-೦೮-೨೦೧೧, ಪು. ೪೧ - ೪೨

೫೫. ೧೭೯೦ ರ ಅಕ್ಟೋಬರ್ ೧೫ ರಂದು ದೊಡ್ಡವೀರರಾಜ ಮತ್ತು ಕಂಪೆನಿ ಸರಕಾರದ ನಡುವೆ ಮೊದಲ ಒಪ್ಪಂದ ನಡೆಯಿತು. ಅದರ ಪ್ರಕಾರ ಇಬ್ಬರಿಗೂ ಶತ್ರುವಾದ ಟಿಪ್ಪುವಿನ ವಿರುದ್ಧ ಬ್ರಿಟಿಷರು ಯುದ್ಧ ನಡೆಸಿದಾಗ ಕೊಡಗು ಅವರ ನೆರವಿಗೆ ಹೋಗಬೇಕು; ಕೊಡಗು ಮೂಲಕ ಆಂಗ್ಲ ಸೈನ್ಯವು ಮೈಸೂರಿಗೆ ಹೋಗಲು ಅವಕಾಶ ಇರಬೇಕು ಮತ್ತು ಕೊಡಗಿನ ಎಲ್ಲಾ ವ್ಯಾಪಾರ ವಹಿವಾಟುಗಳು ಬ್ರಿಟಿಷರೊಡನೆ ನಡೆಯಬೇಕು.

೫೬. ೧೭೯೨ರಲ್ಲಿ ಟಿಪ್ಪು ಸೋತಾಗ ಟಿಪ್ಪುವಿಗೂ ಕಂಪೆನಿ ಸರಕಾರಕ್ಕೂ ನಡೆದ ಒಪ್ಪಂದದಲ್ಲಿ ಕೊಡಗನ್ನು ಆಶ್ರಯ ರಾಜ್ಯವನ್ನಾಗಿ ಕಾಣಿಸಲಾಗಿತ್ತು. ಇದನ್ನು ದೊಡ್ಡವೀರ ಬಲವಾಗಿ ವಿರೋಧಿಸಿದ. ಅದಕ್ಕಾಗಿ ಅಬರ್ ಕ್ರಾಂಬಿ ರಾಜರೊಡನೆ ೨ನೇ ಬಾರಿ ಮೈತ್ರಿ ಮಾಡಿಕೊಂಡ. ಅದರಲ್ಲಿ ಟಿಪ್ಪುವನ್ನು ಸೋಲಿಸುವಲ್ಲಿ ರಾಜನ ಸಾಮಯಿಕ ನೆರವನ್ನು ಕೃತಜ್ಞತಾ ಪೂರ್ವಕವಾಗಿ ಸ್ಮರಿಸಿದ್ದ. ಆದರೆ ಕೊಡಗು ವರ್ಷಂಪ್ರತಿ ರೂ. ೨೪೦೦೦ ಪೊಗದಿಯನ್ನು ಕಂಪೆನಿಗೆ ನೀಡಬೇಕೆಂಬ ಶರತ್ತನ್ನು ಬದಲಾಯಿಸಲಿಲ್ಲ. ಇದನ್ನು ದೊಡ್ಡವೀರ ಏಕೆ ಪ್ರತಿಭಟಿಸಲಿಲ್ಲ ಎನ್ನುವುದಕ್ಕೆ ಕಾರಣಗಳು ದೊರೆಯುವುದಿಲ್ಲ.

೫೭. ವೀರ ರಾಜ ಪೇಟೆ – ೧೭೯೨, ನಾಲ್ಕುನಾಡು ಅರಮನೆ ೧೭೯೫, ಮಡಿಕೇರಿ ಹೊಸ ಅರಮನೆ –೧೮೦೫.

೫೮. ೧೭೯೨ ರಲ್ಲಿ ಟಿಪ್ಪುವಿಗೂ ಬ್ರಿಟಿಷರಿಗೂ ನಡೆದ ಯುದ್ಧ.

೫೯. ರಾಜರುಗಳ ಸ್ವಂತ ಅಧೀನದಲ್ಲಿ ಇದ್ದ ವಿಶಾಲವಾದ ನೀರಿನ ಆಶ್ರಯವಿರುವ ಭೂಪ್ರದೇಶ.

೬೦. ಎಂ. ಜಿ ನಾಗರಾಜ, ೨೦೦೪, ಪೂರ್ವೋಕ್ತ ಪು.೧೬೪

೬೧. ೧ ವೀರರಾಜೇಂದ್ರ ಕೋಲು ೮ ವೀರರಾಜೇಂದ್ರ ಗಜಕ್ಕೆ ಸಮವಾಗಿತ್ತು. ಮತ್ತು ೧ ವೀರರಾಜೇಂದ್ರ ಗಜವು ೨೮ ವೀರ ರಾಜೇಂದ್ರ ಅಂಗುಲಕ್ಕೆ ಸಮಾನವಾಗಿತ್ತು. ೧ ವೀರರಾಜೇಂದ್ರ ಗಜ ಅಂದರೆ ೨ ಅಡಿ, ೪ ಅಂಗುಲ. ೧ ವೀರರಾಜೇಂದ್ರ ಕೋಲು ಅಂದರೆ ೧೮ ಅಡಿ ೮ ಅಂಗುಲ ಎಂದು ಪರಿವರ್ತಿಸಲಾಗಿದೆ.

೬೨. ೧ ಅಂಗರಾಜೇಂದ್ರ ಕೋಲು ಅಂದರೆ ೮ ಅಂಗರಾಜೇಂದ್ರ ಗಜ ಮತ್ತು ೧ ಅಂಗರಾಜೇಂದ್ರ ಗಜ ಅಂದರೆ ೨೮ ಅಂಗರಾಜೇಂದ್ರ ಅಂಗುಲವಾಗಿತ್ತು.

೬೩. ಜಮ್ಮದಾರ : ಹಿಟ್ಟಿ ಬಿಟ್ಟಿ ಚಾಕರಿಗಾಗಿ ರಾಜನಿಂದ ಭೂಮಿ ಪಡೆದವನು.

ಸಾಗುದಾರ: ನಿಗದಿತ ಕಂದಾಯ ದರದಲ್ಲಿ ಭೂವ್ಯವಸಾಯ ನಡೆಸುವ ಜಮೀನುದಾರ.

ಉಂಬಳಿದಾರ : ರಾಜನಿಂದ ಉಂಬಳಿಯಾಗಿ ಭೂಮಿಯನ್ನು ಪಡೆದ ರೈತ.

೬೪. ಈ ಸುಂಕಗಳು ಬಹಳ ಕಡಿಮೆ ಪ್ರಮಾಣದವು ಆಗಿದ್ದವು. ಇವುಗಳನ್ನು ಕೊಡಲು ಸಾಧ್ಯವಾಗದಿದ್ದಾಗ ಅರಸರು ದಂಡ ಪ್ರಯೋಗ ಮಾಡುತ್ತಿರಲಿಲ್ಲ.

೬೫. ಎಂ. ಜಿ. ನಾಗರಾಜರ ಪ್ರಕಾರ ಖಾಸಾ ರಹಸ್ಯದ ಶಂಭಯ್ಯ ಎಂಬಾತ ಬರೆದಿರುವ ನಿರೂಪವೊಂದರಲ್ಲಿ ಈ ಕಾರ್ಖಾನೆಯ ಉಲ್ಲೇಖ ಇದೆ. ಆದರೆ ಈ ನಿರೂಪದ ಬಗ್ಗೆ ಇತರ ಮಾಹಿತಿಗಳು ಲಭ್ಯವಿಲ್ಲ.

೬೬. ಪ್ರಭಾಕರ ಶಿಶಿಲ, ೨೦೧೦, ನಿಸರ್ಗ ನಿನಾದ, ರಾಜ್ ಪ್ರಕಾಶನ, ಮೈಸೂರು ಪು. ೮೧–೮೨

೬೭. ಪಾಟ ಭಟ್ಟಿ ಎಂದರೆ ೧೦೦ ಸೇರು, ಭಟ್ಟಿ ಎಂದರೆ ೮೦ ಸೇರು.

೬೮. ರಾತಲು = ೪೦ ತೊಲ ಅಥವಾ ೮೦ ರೂಪಾಯಿ ತೂಕ. ೧ ಕಂಠೀರಾಯಿ ವರಹ = ೩ ರೂಪಾಯಿ.

೬೯. ಹುತ್ತರಿ ಹಬ್ಬ = ಈ ಹಬ್ಬ ಕದಿರು ಕೊಯ್ಯುವ ಹಬ್ಬವಾಗಿದೆ. ಇದನ್ನು ಕೊಡಗರ ಆರಾಧ್ಯದೈವವಾದ ಪಾಡಿ ಇಗ್ಗುತ್ತಪ್ಪ ಆರಂಭಿಸಿದನೆಂದು ಹೇಳಲಾಗುತ್ತದೆ.

ಅರಮನೆ ಪೊಳ್ದು - ಹುತ್ತರಿ ಸಂದರ್ಭದಲ್ಲಿ ಅರಮನೆಯಲ್ಲಿ ನಡೆಸುವ ಆಚರಣೆ. ನಾಡ ಪೊಳ್ದು – ಕದಿರು ಕೊಯ್ಯುವ ಹುತ್ತರಿ ಹಬ್ಬವನ್ನು ನಾಡಿನ ಜನರೆಲ್ಲ ಆಚರಿಸುವುದನ್ನು ನಾಡಪೊಳ್ದು ಎನ್ನಲಾಗುತ್ತದೆ

೬೦. In Dharmasutras,1/6 to the share of palace, while 5/6 to the cultivator, but… by divine wisdom that our people may live in happiness and even pray for our welfare known and prosperity, we take 1/10 of the harvest and leave 9/10 to the cultivator.

೬೧. ಪುರುಷೋತ್ತಮ ಬಿಳಿಮಲೆ, ೧೯೮೬, ಪೂರ್ವೋಕ್ತ, ಪು ೨೫೧ - ೨೫೨

೬೨. ಅಂಗರಾಜನ ಹುಕುಂನಾಮೆ, ಅಣತಿ, ೨೫-೩೦

೬೩. ಮುತುರ್ಪೆ ಒಂದು ಬಗೆಯ ವೃತ್ತಿ ತೆರಿಗೆ. ಅದನ್ನು ಕೃಷಿಯೇತರ ಜನರು ಮಾಡುತ್ತಿದ್ದ ಕೈಕಸುಬುಗಳ ಮೇಲೆ ಹಾಕಲಾಗುತ್ತಿತ್ತು.

೬೪. ಪುರುಷೋತ್ತಮ ಬಿಳಿಮಲೆ, ೧೯೮೬, ಪೂರ್ವೋಕ್ತ ಪು.೨೨೩.

೬೫. ಅಂಗರಾಜನ ಹುಕುಂನಾಮೆ, ಅಣತಿ, ೩೪

೬೬. ಕೊಡಗು ಜಿಲ್ಲಾ ಗಜೆಟಿಯರ್, ೧೯೯೩, ಪು. ೪೦೯.

೬೭. ಕೋಲಿ ಕೋಟಂಗಡಿ ಬೀರಾಳಿ ಪಟ್ಟ್
ಆಕಾಶ ಮುಟ್ಟಿ ನೆಲೆತ್ ಅಳೆಪ
ಸಣ್ಣಕ್ಕಿ ಪೊರ್‌ಟ ಇಟ್ಟತ್ ಸೋಮ
ಸೋಮ ಮಾರ್‌ಜ್‌ತರ ಪೊರಟ್‌ಪೋನ
ಕುಂಬ ಬಾಳೆನಾಡ್ ಸೋಮಯ್ಯ ಪೋರ್
ಮಣಿಮಾಲೆನಾಡ್ ಸೋಮಯ್ಯ ಪೋರ್
ಪಟ್ಟಣ ಮಾಯಿಸೂರ್
ಮೂಡ್‌ಸೀಮೆ ಕಂಡಿತ್
. . . .
ಮುತ್ತ್ ಪಲ್ಲ್ ಶೆಟ್ಟರ್
ಮಾಲವ ಮನುಸ್ಯೆಳ
ಕಣ್ಣೊಡನೆ ಕಂಡತ್
ಎತ್ತ್‌ಪ್ಪಣ ಕೇಪಕ
ಆಯಿರಂಡ ಜಬ್ಬೂಮಿ

ಬಿತ್ತ್ ಪಾಡ್ ಬುದ್ದೊಂಗ್

ಉತ್ತ್ ಸಾಗ್ ಮಾಡೊಂಗ್

ಸೋಮಂದೇಡಿ ನಂಗ ಬಂದಿಬಿ

❖ ಎಂ. ಜಿ. ನಾಗರಾಜ, ೧೯೯೩, ಪೂರ್ವೋಕ್ತ ಪು. ೩೮೪

೭೮. ಅಂಗರಾಜನ ಹುಕುಂನಾಮೆ, ೧೫ನೇ ಆಣತಿ

೭೯. ಪುರುಷೋತ್ತಮ ಬಿಳಿಮಲೆ, ೧೯೮೬, ಪೂರ್ವೋಕ್ತ, ಪು. ೨೫೬

೮೦. ಅದೇ, ಪು. ೨೩೯

೮೧. ಮಾಸ್ತಿ ವೆಂಕಟೇಶ ಅಯ್ಯಂಗಾರ್, ೧೯೮೪, ಪೂರ್ವೋಕ್ತ

೮೨. ಎಂ.ಜಿ. ನಾಗರಾಜ, ೨೦೦೪, ಪೂರ್ವೋಕ್ತ ಪು. ೨೩೧

೮೩. ಅದೇ, ಪು. ೫೨೫

೮೪. ಅದೇ, ಪು. ೫೨೬.

೮೫. ದೇವಿ ಪ್ರಸಾದ್ ಸಂಪಾಜೆಯವರೊಡನೆ ನಡೆಸಿದ ವಿಚಾರ ವಿನಿಮಯ ಕಾಲದಲ್ಲಿ ಶ್ರೀಯುತರು ವ್ಯಕ್ತಪಡಿಸಿದ ಅಭಿಪ್ರಾಯ .

೮೬. Tambanda Vijaya Poonacha, 2004, Conflicting Identities in Karnataka, Prasaranga Kannada University, Hampi, PP.6-10

೮೭. ಅಂಗರಾಜನ ಹುಕುಂನಾಮೆ, ೨೪ ನೆಯ ಆಣತಿ.

೮೮. ಉತ್ತಪ್ಪ ಕೆ.ಜಿ., ಜಮ್ಮ ಮತ್ತು ಬಾಣೆ, ಗಡಿನಾಡ ಸಂಚಾರಿ, ೧೮ ಅಕ್ಟೋಬರ್ ೨೦೧೦, ಪು ೪ – ೫

೮೯. ದೊಡ್ಡವೀರ ರಾಜನ ಕಾಲದಲ್ಲಿ ಅವನಿಗೆ ಸಹಾಯ ಮಾಡಿದ ಇತರ ಜನಾಂಗಗಳಿಗೆ ಪನ್ಯ ಭೂಮಿ ನೀಡಲಾಗಿತ್ತು.

೯೦. G.Richter, 1870, Op. cit., P. 406

೯೧. ಡಿ.ಎನ್ ಕೃಷ್ಣಯ್ಯ, ೧೯೫೬, ಪೂರ್ವೋಕ್ತ, ಪು. ೩೪

ಅಧ್ಯಾಯ – ೪

ವಸಾಹತುಶಾಹಿ ಕೆನರಾ ಆರ್ಥಿಕತೆ

೪.೧. ವಸಾಹತುಶಾಹಿ ಆರ್ಥಿಕತೆಯ ಉದಯ

ವಸಾಹತುಶಾಹಿ ವ್ಯವಸ್ಥೆಗೆ ಖಚಿತವಾದ ಎರಡು ಉದ್ದೇಶಗಳಿರುತ್ತವೆ. ಮೊದಲನೆಯದು ವಸಾಹತನ್ನು ತನ್ನ ಆರ್ಥಿಕ ಲಾಭಕ್ಕಾಗಿ ಸಾಧ್ಯವಿರುವ ಎಲ್ಲಾ ವಿಧಾನಗಳಿಂದ ಬಳಸಿಕೊಳ್ಳುವುದು ಮತ್ತು ಎರಡನೆಯದು ವಸಾಹತಿನ ಮೇಲಿನ ಆರ್ಥಿಕ ಪ್ರಭುತ್ವವನ್ನು ಗಟ್ಟಿಗೊಳಿಸಲು ರಾಜಕೀಯ ಅಧಿಕಾರವನ್ನು ಬಳಸಿಕೊಳ್ಳುವುದು. ಇವೆರಡು ಉದ್ದೇಶಗಳೂ ಕೆನರಾದಲ್ಲಿ ಬ್ರಿಟಿಷ್ ಅಧಿಪತ್ಯ ಆರಂಭವಾದ ಕೆಲವೇ ವರ್ಷಗಳಲ್ಲಿ ಅನುಷ್ಠಾನಗೊಂಡದ್ದು ಆ ಬಳಿಕಿನ ಘಟನಾವಳಿಗಳಿಂದ ಸ್ಪಷ್ಟವಾಗುತ್ತದೆ. ದ.ಕ. ಜಿಲ್ಲೆಯ ಭೌಗೋಳಿಕ ಸ್ಥಾನಮಾನ ಸಮುದ್ರ ವ್ಯಾಪಾರಕ್ಕೆ ಅತ್ಯಂತ ಅನುಕೂಲಕರವಾಗಿದ್ದುದರಿಂದ ಈಸ್ಟ್ ಇಂಡಿಯಾ ಕಂಪೆನಿಗೆ ಬಹಳ ಹಿಂದಿನಿಂದಲೂ ಈ ಜಿಲ್ಲೆಯ ಮೇಲೊಂದು ಕಣ್ಣಿತ್ತು. ಆದರೆ ಈ ಕರಾವಳಿ ಜಿಲ್ಲೆಯನ್ನು ಪಡೆಯಲು ಅದು ಸ್ಥಳೀಯ ರಾಜರುಗಳೊಡನೆ ಮಾತ್ರವಲ್ಲದೆ ಯೂರೋಪಿನ ಶಕ್ತಿಗಳೊಡನೆಯೂ ಯುದ್ಧ ನಡೆಸಬೇಕಿತ್ತು. ಏಕಕಾಲದಲ್ಲಿ ಹಾಗೆ ಮಾಡುವುದು ಅಪಾಯಕಾರಿಯಾದುದರಿಂದ ಅದು ಸಂದರ್ಭಕ್ಕಾಗಿ ಕಾಯುತ್ತಿತ್ತು. ಟಿಪ್ಪುವಿನ ಕಾಲದಲ್ಲಿ ಯೂರೋಪಿನ ಇತರ ವಸಾಹತುಶಾಹಿ ಶಕ್ತಿಗಳು ದಕ್ಷಿಣ ಕನ್ನಡದ ಮೇಲಿನ ತಮ್ಮ ಹಿಡಿತವನ್ನು ಕಳೆದುಕೊಂಡಿದ್ದವು.[೧] ಟಿಪ್ಪುವಿನ ಮರಣಾನಂತರ ಕರ್ನಾಟಕದ ಉದ್ದಗಲಕ್ಕೆ ಎಲ್ಲೂ ಈಸ್ಟ್ ಇಂಡಿಯಾ ಕಂಪೆನಿಯನ್ನು ಎದುರಿಸಬಲ್ಲ ಶಕ್ತಿಯೊಂದಿರಲಿಲ್ಲ. ಹಾಗಾಗಿ ಈಸ್ಟ್ ಇಂಡಿಯಾ ಕಂಪೆನಿಗೆ ತನ್ನ ವಸಾಹತುಶಾಹಿ ಉದ್ದೇಶಗಳನ್ನು ದ.ಕ. ದ ಮೇಲೆ ತಕ್ಷಣವೇ ಹೇರಲು ಯಾವ ಅಡ್ಡಿ ಆತಂಕಗಳೂ ಎದುರಾಗಲಿಲ್ಲ.

ಕ್ರಿ. ಶ ೧೬೦೦ ರಲ್ಲಿ ಎಲಿಜಬೆತ್ ರಾಣಿಯ ಸನ್ನದು ಪಡೆದು ಭಾರತವನ್ನು ಪ್ರವೇಶಿಸಿದಾಗ ಈಸ್ಟ್ ಇಂಡಿಯಾ ಕಂಪೆನಿಗೆ ಪ್ರಬಲ ಎದುರಾಳಿಗಳಾಗಿದ್ದವರು ಪೋರ್ಚುಗೀಸರು. ೧೬೬೧ರಲ್ಲಿ ಪೋರ್ಚುಗೀಸ್ ರಾಜಕುಮಾರಿಯ ಮದುವೆ ಇಂಗ್ಲೆಂಡಿನ ದೊರೆ ಎರಡನೇ ಚಾರ್ಲ್ಸ್‌ನೊಂದಿಗೆ ನೆರವೇರಿದಾಗ ಮುಂಬಯಿ ಇಂಗ್ಲೆಂಡಿಗೆ ಪೋರ್ಚುಗಲಿನಿಂದ ಬಳುವಳಿಯಾಗಿ ದೊರೆಯಿತು. ದೊರೆ ೧೬೬೮ ರಲ್ಲಿ ಮುಂಬಯಿಯನ್ನು ಈಸ್ಟಿಂಡಿಯಾ ಕಂಪೆನಿಗೆ ಹಸ್ತಾಂತರಿಸುವುದರೊಂದಿಗೆ ಪಶ್ಚಿಮ ಕರಾವಳಿಯಲ್ಲಿ


ನೆಲೆಯೂರಲು ಕಂಪೆನಿಗೆ ಸಾಧ್ಯವಾಯಿತು. ಆದರೂ ಪೋರ್ಚುಗೀಸ್ ವ್ಯಾಪಾರಿಗಳ ಮತ್ತು ಈಸ್ಟಿಂಡಿಯಾ ಕಂಪೆನಿಯ ನಡುವಣ ವೈಮನಸ್ಸು ಕಡಿಮೆಯಾಗಲಿಲ್ಲ. ಆದರೆ ಈಸ್ಟಿಂಡಿಯಾ ಕಂಪೆನಿಯು ಯುದ್ಧವೊಂದರಲ್ಲಿ ಪೋರ್ಚುಗೀಸರಿಂದ ಸೂರತನ್ನು ವಶಪಡಿಸಿಕೊಂಡದರಿಂದ ಪಶ್ಚಿಮ ಕರಾವಳಿಯಲ್ಲಿ ಕಂಪೆನಿಯ ಪ್ರಾಬಲ್ಯ ಹೆಚ್ಚಾಯಿತು.[೨]

ಕ್ರಿ. ಶ. ೧೭೫೭ಕ್ಕೆ ಮುಂಚೆ ಈಸ್ಟಿಂಡಿಯಾ ಕಂಪೆನಿಯು ಎರಡು ಪ್ರಮುಖ ಉದ್ದೇಶಗಳನ್ನೂ ಹೊಂದಿತ್ತು. ವಾಣಿಜ್ಯ ಏಕಸ್ವಾಮ್ಯ ಮತ್ತು ಆರ್ಥಿಕ ಸಂಪನ್ಮೂಲಗಳ ನಿಯಂತ್ರಣ. ಅದು ಯೂರೋಪಿನ ಇತರ ದೇಶಗಳೊಡನೆ ಮತ್ತು ತನ್ನದೇ ದೇಶದ ಇತರ ವ್ಯಾಪಾರಿಗಳೊಡನೆ ಸ್ಪರ್ಧಿಸಬೇಕಿತ್ತು. ಇತರ ದೇಶಗಳೊಡನೆ ಸ್ಪರ್ಧಿಸಲು ಕಂಪೆನಿಯು ಪ್ರಬಲವಾದ ಒಂದು ನೌಕಾಪಡೆಯನ್ನು ನಿರ್ಮಿಸಬೇಕಾಯಿತು.ತನ್ನ ದೇಶದ ವ್ಯಾಪಾರಿಗಳ ಸ್ಪರ್ಧೆ ತಪ್ಪಿಸಲು ಬ್ರಿಟಿಷ್ ಸರ್ಕಾರಕ್ಕೆ ಲಂಚ ರುಷುವತ್ತುಗಳನ್ನು ನೀಡಬೇಕಾಗಿ ಬರುತ್ತಿತ್ತು.[೩] ಸಾಮ, ದಾನ, ಭೇದೋಪಾಯಗಳಿಂದ ಬ್ರಿಟಿಷ್ ಆಡಳಿತವನ್ನು ತನಗೆ ಬೇಕಾದಂತೆ ಮಣಿಸಿದ ಈಸ್ಟಿಂಡಿಯಾ ಕಂಪೆನಿ, ಭಾರತದ ಪ್ರಾಂತ್ಯಗಳನ್ನು ವಶಪಡಿಸಿಕೊಳ್ಳಲು ಇವು ಮೂರರೊಡನೆ ಚತುರೋಪಾಯಗಳಲ್ಲಿ ಕೊನೆಯದಾದ ದಂಡವನ್ನು ಬಳಸಿ ಯಶಸ್ವಿಯಾಯಿತು.

ದಕ್ಷಿಣ ಕನ್ನಡದಲ್ಲಿ ಬ್ರಿಟಿಷ್ ವಸಾಹತುಶಾಹಿಗೆ ನೆಲೆಗೊಳ್ಳಲು ಸಾಧ್ಯವಾದದ್ದು ೧೭೯೯ರಲ್ಲಿ ಟಿಪ್ಪುವಿನ ಮರಣದ ಬಳಿಕ. ದಕ್ಷಿಣ ಭಾರತದಲ್ಲೇ ಅತ್ಯಂತ ಪ್ರಬಲನಾಗಿ ಬ್ರಿಟಿಷರನ್ನು ಹೊಡೆದೋಡಿಸುವ ಸಾಮರ್ಥ್ಯ ಹೊಂದಿದ್ದ ಟಿಪ್ಪುವಿನ ವಿರುದ್ಧ ಮರಾಠರನ್ನು, ಹೈದರಾಬಾದಿನ ನಿಜಾಮನನ್ನು ಮತ್ತು ಕೊಡಗಿನ ದೊರೆ ದೊಡ್ಡ ವೀರರಾಜನನ್ನು ಎತ್ತಿ ಕಟ್ಟುವಲ್ಲಿ ಯಶಸ್ವಿಯಾದ. ಬ್ರಿಟಿಷರಿಗೆ ಟಿಪ್ಪುವಿನ ಮರಣಾನಂತರ ದಕ್ಷಿಣದಲ್ಲಿ ಎದುರಾಳಿಗಳೇ ಇರಲಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯನ್ನು ಅವರೆಗೆ ಒಬ್ಬನೇ ರಾಜ ಆಳಿರಲಿಲ್ಲ. ಇದ್ದ ತುಂಡರಸರುಗಳಲ್ಲಿ ಒಗ್ಗಟ್ಟಿರಲಿಲ್ಲ. ಪೋರ್ಚುಗೀಸರು ವಿಜಯನಗರ ಸಾಮ್ರಾಜ್ಯದೊಡನೆ ಮೈತ್ರಿಯಿಂದಿದ್ದ ಕಾಲದಲ್ಲಿ ಬ್ರಿಟಿಷರಿಗೆ ಮಂಗಳೂರನ್ನು ಕೈವಶ ಮಾಡಿಕೊಳ್ಳಲು ಸಾಧ್ಯವಾಗಲಿಲ್ಲ. ಆ ಬಳಿಕ ಇಕ್ಕೇರಿ ಅರಸರು ಈ ಜಿಲ್ಲೆಯನ್ನು ತಮ್ಮ ಆಡಳಿತಕ್ಕೊಳಪಡಿಸಿದಾಗಲೂ ಇಂಗ್ಲೀಷರ ಕೈ ಮೇಲಾಗಲಿಲ್ಲ. ಹೈದರಾಲಿಯು ಬಲವಾದ ನೌಕಾ ಪಡೆಯನ್ನು ಹೊಂದಿದ್ದುದರಿಂದ ಮತ್ತು ಟಿಪ್ಪುವು ಅತ್ಯಂತ ಚಾಣಾಕ್ಷ ರಣನೀತಿಜ್ಞನೂ, ಧರ್ಮ ಸಹಿಷ್ಣುವೂ ಆಗಿದ್ದುದರಿಂದ ಇಂಗ್ಲೀಷರು ದ. ಕ. ವನ್ನು ತಮ್ಮ ವಸಾಹತನ್ನಾಗಿ ಮಾಡಿಕೊಳ್ಳಲು ಕ್ರಿ. ಶ. ೧೭೯೯ ರವರೆಗೂ ಕಾಯುವುದು ಅನಿವಾರ್ಯವಾಗಿತ್ತು.

೪.೧ ದ.ಕ.ದಲ್ಲಿ ವಸಾಹತುಶಾಹಿಗೆ ರಾಜರುಗಳ ಪ್ರತಿರೋಧ

1799 - 00



ವಸಾಹತಿನ ರಾಜಕೀಯ ವ್ಯವಸ್ಥೆಯನ್ನು ತನ್ನ ಅನುಕೂಲಕ್ಕೆ ತಕ್ಕಂತೆ ಪರಿವರ್ತಿಸಿಕೊಳ್ಳುವುದಕ್ಕೆ ವಸಾಹತುಶಾಹಿತ್ವ ಮೊದಲ ಆದ್ಯತೆಯನ್ನು ನೀಡುತ್ತದೆ.[೪] ದಕ್ಷಿಣ ಕನ್ನಡದ ಮಟ್ಟಿಗೆ ಈ ಸಾರ್ವತ್ರಿಕ ಸತ್ಯ ಸುಳ್ಳಾಗಲು ಸಾಧ್ಯವಿರಲಿಲ್ಲ. ಹೈದರ್ – ಟಿಪ್ಪುರನ್ನು ಎದುರಿಸಲು ಸ್ಥಳೀಯ ರಾಜರುಗಳನ್ನು ಬಳಸಿಕೊಳ್ಳಬೇಕಾದ ಅನಿವಾರ್ಯತೆ ಬ್ರಿಟಿಷ್ ವಸಾಹತುಶಾಹಿತ್ವಕ್ಕಿತ್ತು. ಟಿಪ್ಪುವನ್ನು ಮತಾಂಧನನ್ನಾಗಿ ಚಿತ್ರಿಸಿ ತಾನು ಸ್ಥಳೀಯ ರಾಜರುಗಳನ್ನು ಟಿಪ್ಪುವಿನಿಂದ ಕಾಪಾಡುವ ಆಪದ್ಬಾಂಧವನೆಂಬಂತೆ ತನ್ನನ್ನು ಬಿಂಬಿಸಿಕೊಂಡ ಬ್ರಿಟಿಷ್ ವಸಾಹತುಶಾಹಿತ್ವವು, ಹಿಂದೂ ಭಾವನೆಯನ್ನು ಕೆರಳಿಸಿ ಸ್ಥಳೀಯ ರಾಜರುಗಳು ತನ್ನನ್ನು ಅನಿವಾರ್ಯವಾಗಿ ಆಶ್ರಯಿಸುವಂತೆ ಮಾಡಿತು. ಟಿಪ್ಪು ಮಡಿದ ಮೇಲೆ ತಮಗೆ ಸ್ವಾತಂತ್ರ್ಯ ದೊರೆಯುತ್ತದೆಂದು ಭಾವಿಸಿದ್ದ ದಕ್ಷಿಣ ಕನ್ನಡದ ತುಂಡರಸರುಗಳಿಗೆ ವಸಾಹತುಶಾಹಿ ಆಡಳಿತದ ಆರಂಭ ತಮ್ಮ ಅರಸೊತ್ತಿಗೆಯ ಶಾಶ್ವತ ಅವಸಾನವೆಂದು ಮನದಟ್ಟಾಗುವಾಗ ತೀರಾ ತಡವಾಗಿ ಹೋಗಿತ್ತು.

ಇದಕ್ಕೆ ದೃಷ್ಟಾಂತವಾಗಿ ಕುಂಬಳೆ, ನೀಲೇಶ್ವರ ಮತ್ತು ವಿಟ್ಲದ ರಾಜರುಗಳ ಪ್ರಕರಣಗಳು ದೊರೆಯುತ್ತವೆ. (ಭೂಪಟ.೪.೧) ಟಿಪ್ಪುವಿನ ಕಾಲದಲ್ಲಿ ಕುಂಬಳೆ ಮತ್ತು ನೀಲೇಶ್ವರದ ರಾಜರುಗಳು ತಲಚ್ಚೇರಿಯಲ್ಲಿ ಬ್ರಿಟಿಷರ ರಕ್ಷಣೆಯಲ್ಲಿದ್ದರು. ೧೭೯೯ ರಲ್ಲಿ ಟಿಪ್ಪು ಮಡಿದಾಗ ಇವರಿಬ್ಬರೂ ತಮ್ಮ ತಾಯ್ನಾಡಿಗೆ ಬಂದು ತಮ್ಮನ್ನು ಸ್ವತಂತ್ರ ರಾಜರುಗಳೆಂದು ಘೋಷಿಸಿಕೊಂಡರು. ೧೮೦೪ರಲ್ಲಿ ಮನ್ರೋ ಶಾಶ್ವತ ಭೂ ಇತ್ಯರ್ಥಕ್ಕಾಗಿ ಕರೆ ನೀಡಿದಾಗ ತಮ್ಮ ಅಧಿಕಾರ ವ್ಯಾಪ್ತಿಯ ರೈತರು ಮನ್ರೋವನ್ನು ಧಿಕ್ಕರಿಸುವಂತೆ ನೋಡಿಕೊಂಡರು. ಆದರೆ ಮನ್ರೋನ ಪಡೆಯೆದುರು ಇವರ ಆಟ ಸಾಗದಾಗ ಅರಸೊತ್ತಿಗೆಯನ್ನು ಕಂಪೆನಿ ಸರಕಾರಕ್ಕೆ ಬಿಟ್ಟು ಕೊಟ್ಟರು. ಕುಂಬಳೆ ಮತ್ತು ನೀಲೇಶ್ವರದ ಅರಸರುಗಳಿಗೆ ಅವರ ಕುಟುಂಬದ ಆಸ್ತಿಯನ್ನು ಮಾತ್ರ ಬಿಟ್ಟು ಕೊಡಲಾಯಿತು. ನೀಲೇಶ್ವರದ ಅರಸನಿಗೆ ವಾರ್ಷಿಕ ರೂ. ೪೦೦೦ ಪಿಂಚಣಿ ಮತ್ತು ಕುಂಬಳೆ ಅರಸನಿಗೆ ರೂ. ೧೯೪೧ ಪಿಂಚಣಿ ನೀಡುವ ವ್ಯವಸ್ಥೆ ರೂಪುಗೊಂಡಿತು. ರಾಜನಾಗಿದ್ದಾಗ ಕುಂಬಳೆ ಅರಸ ವಾರ್ಷಿಕ ರೂ. ೫೪,೭೨೩ ಕಂದಾಯ ಪಡೆಯುತ್ತಿದ್ದವನು ಈಗ ಬ್ರಿಟಿಷರ ಕೃಪಾಭಿಕ್ಷೆಯಲ್ಲಿ ಬದುಕುವಂತಾಯಿತು.[೫]

ವಿಟ್ಲದ ರಾಜ ರವಿವರ್ಮ ನರಸಿಂಹ ಡೊಂಬ ಹೆಗ್ಗಡೆ ದಕ್ಷಿಣ ಕನ್ನಡದಲ್ಲಿ ಬ್ರಿಟಿಷರನ್ನು ನಿಜವಾದ ಅರ್ಥದಲ್ಲಿ ಎದುರಿಸಿ ಯುದ್ಧ ಮಾಡಿದ ಸಾಹಸಿ. ಅವನು ಕುಂಬಳೆ, ನೀಲೇಶ್ವರಗಳ ರಾಜರುಗಳಂತೆ ತಲಚ್ಚೇರಿಯಲ್ಲಿ ಬ್ರಿಟಿಷರ ಆಶ್ರಯದಲ್ಲಿದ್ದವನು. ೧೭೯೯ ರ ಡಿಸೆಂಬರ್ ೧೫ ರಂದು ತನ್ನ ಪುಟ್ಟ ಪಡೆಯೊಡನೆ ದ.ಕ ಜಿಲ್ಲೆಗೆ ಬಂದು ಇಡೀ ಜಿಲ್ಲೆಯನ್ನು ತನ್ನ ಕೈ ವಶ

ಮಾಡಿಕೊಳ್ಳಲು ಯತ್ನಸಿದ. ಬೇಕಲ ಕೋಟೆಯ ತಿಮ್ಮ ನಾಯಕ, ಟಿಪ್ಪುವಿನ ಶಿರಸ್ತೆದಾರ ಸುಬ್ಬರಾಯ ಮತ್ತು ಟಿಪ್ಪುವಿನ ನಿಷ್ಠಾವಂತ ಅನುಯಾಯಿ ಮೆಹ್ತಾಬ್‌ಖಾನನ ಬೆಂಬಲ ಅವನಿಗೆ ದೊರೆಯಿತು. ಬ್ರಿಟಿಷರು ಟಿಪ್ಪುವನ್ನು ಮತಾಂಧನೆಂದು ಎಷ್ಟೋ ಅಪಪ್ರಚಾರ ನಡೆಸಿದರೂ ಅವನ ಬಗ್ಗೆ ದ. ಕ. ಜಿಲ್ಲೆಯ ಜನಸಾಮಾನ್ಯರು ಸದ್ಭಾವನೆಯನ್ನು ಹೊಂದಿದ್ದರು. ಇದನ್ನು ಅರಿತಿದ್ದ ಡೊಂಬ ಹೆಗ್ಗಡೆ, ಮೆಹ್ತಾಬ್ ಖಾನನನು ಟಿಪ್ಪು ಸುಲ್ತಾನನ ಮಗ ಫತೇ ಹೈದರನೆಂದು ಪುಕಾರು ಹಬ್ಬಿಸಿ, ಬ್ರಿಟಿಷರಿಂದ ಕಗ್ಗೊಲೆಗೀಡಾಗಿದ್ದ ಟಿಪ್ಪುವಿನ ಬಗ್ಗೆ ಜನರಿಗಿದ್ದ ಅನುಕಂಪವನ್ನು ಬ್ರಿಟಿಷರ ವಿರುದ್ಧದ ಬಂಡಾಯಕ್ಕೆ ಬಂಡವಾಳವನ್ನಾಗಿಸಲು ಯತ್ನಿಸಿದನು. ಡೊಂಬ ಹೆಗ್ಗಡೆಗೆ ಜನಬೆಂಬಲ ದೊರೆತದರಿಂದ ಜಮಲಾಬಾದ್ (ಬೆಳ್ತಂಗಡಿ)ನ ತಿಮ್ಮನಾಯಕನನ್ನು ಸೇರಿಸಿಕೊಂಡು ಉಪ್ಪಿನಂಗಡಿ, ಕಡಬ ಮತ್ತು ಪುತ್ತೂರುಗಳನ್ನು ಸುಲಭವಾಗಿ ವಶಪಡಿಸಿಕೊಳ್ಳಲು ಸಾಧ್ಯವಾಯಿತು. ಡೊಂಬ ಹೆಗ್ಗಡೆಯ ಭದ್ರ ನೆಲೆ ಕಂಡುಕೊಳ್ಳುವುದು ಖಚಿತವಾದಾಗ ಬ್ರಿಟಿಷರು ಭೇದೋಪಾಯ ಹೂಡಿದರು. ಅದರ ಫಲವಾಗಿ ಬೇಕಲದ ರಾಮ ನಾಯಕನು ಜಮಾಲಾಬಾದ್‌ನ ಸಂರಕ್ಷಕನಾಗಿದ್ದ ಬೇಕಲ ತಿಮ್ಮ ನಾಯಕನನ್ನು ಶಿಕಾರಿಗೆಂದು ಆಹ್ವಾನಿಸಿ ಮಿತ್ರ ದ್ರೋಹಿಯಾಗಿ ಅವನನ್ನು ಬ್ರಿಟಿಷರಿಗೆ ಹಿಡಿದು ಕೊಟ್ಟ ರೂ. ೫೦೦ ಬಹುಮಾನ ಗಳಿಸಿದ. ಜಿಲ್ಲಾಧಿಕಾರಿ ಮನ್ರೋ ಧರ್ಮಸ್ಥಳದ ಕುಮಾರ ಹೆಗ್ಗಡೆಯ ನೆರವಿನಿಂದ ಸುಬ್ಬರಾಯನನ್ನು ಸೋಲಿಸಿ ಕುಮಾರ ಹೆಗ್ಗಡೆಯ ಕಾರ್ಯಕ್ಕೆ ಆತನ ಕಂಪೆನಿ ಸರಕಾರಕ್ಕೆ ನೀಡಬೇಕಾಗಿದ್ದ ರೂ ೧೬೦ ದಂಡವನ್ನು ಮನ್ನಾ ಮಾಡಿದ್ದಲ್ಲದೆ ರೂ. ೪೦ ಭಕ್ಷೀಸನ್ನೂ ನೀಡಿದ. ಫತೇ ಹೈದರನಿಗೆ ಜೀವಾವಧಿ ಶಿಕ್ಷೆಯಾಯಿತು. ಸುಬ್ಬರಾಯನನ್ನು ನಿರ್ದಾಕ್ಷಿಣ್ಯವಾಗಿ ಕೊಲ್ಲಲಾಯಿತು. ಕ್ರಿ. ಶ ೧೮೦೦ರ ಅಗೋಸ್ತು ೨೫ರಂದು ಮಂಗಳೂರಿನ ಈದ್ಗಾ ಬೆಟ್ಟದಲ್ಲಿ ಡೊಂಬ ಹೆಗ್ಗಡೆಯನ್ನು ಅವನ ಭಾವಂದಿರ ಮತ್ತು ಅಳಿಯಂದಿರ ಸಹಿತ ಗಲ್ಲಿಗೇರಿಸಿ ಈಸ್ಟಿಂಡಿಯಾ ಕಂಪೆನಿಯ ಎದುರು ನಿಂತವರಿಗೆ ಯಾವ ಗತಿಯಾಗುತ್ತದೆನ್ನುವುದನ್ನು ಸೂರ್ಯನ ಬೆಳಕಿನಷ್ಟೇ ನಿಚ್ಚಳವಾಗಿ ತೋರಿಸಿ ಕೊಡಲಾಯಿತು.

ಡೊಂಬ ಹೆಗ್ಗಡೆಯ ಕುಟುಂಬಕ್ಕೆ ಅದರ ಖಾಸಗಿ ಆಸ್ತಿಯಷ್ಟೇ ಉಳಿಯಿತು. ವಾರ್ಷಿಕ ರೂ. ೬೦೧೯ ಕುಟುಂಬ ಪಿಂಚಣಿ ದೊರೆಯತೊಡಗಿತು. ಬ್ರಿಟಿಷರನ್ನು ವಿರೋಧಿಸಿದವರ ಪಾಡಂತೂ ತೀರಾ ಶೋಚನೀಯವಾಯಿತು. ವೇಣೂರಿನ ಅಜಿಲರಿಗೆ ವಾರ್ಷಿಕ ರೂ. ೨೦೦, ಬಂಗಾಡಿಯ ಬಂಗರಿಗೆ ವಾರ್ಷಿಕ ರೂ. ೨೪೦ ಮತ್ತು ಉಳ್ಳಾಲದ ಚೌಟರಿಗೆ ವಾರ್ಷಿಕ ರೂ. ೮೯೨ ಪಿಂಚಣಿ ನಿಗದಿಗೊಳಿಸಲಾಯಿತು.[೬] ಕಾರ್ಕಳದ ಭೈರರಸ, ಮೂಲ್ಕಿಯ ಸೇವಂತರಸ, ಬೈಲಂ ಗಡಿಯ ಮೂಲರಸನಿಗೆ ಆ ಭಾಗ್ಯವೂ ಇಲ್ಲದೆ ಅವರು ಅರಸೊತ್ತಿಗೆಯೊಡನೆ ಅಸ್ತಿತ್ವವನ್ನೂ ಕಳಕೊಂಡು ಇತಿಹಾಸದ ಪುಟಗಳಲ್ಲಿ ಕಾಣದಂತೆ ಮಾಯಾವಾಗಿಬಿಟ್ಟರು.

ಕ್ರಿ. ಶ ೧೭೯೯ ರಲ್ಲಿ ದ.ಕ ಜಿಲ್ಲೆ ಈಸ್ಟಿಂಡಿಯಾ ಕಂಪೆನಿಯ ವಶವಾದ ಮೇಲೆ ಸಮರ್ಪಕವಾಗಿ ಕಂದಾಯವನ್ನು ಸಂಗ್ರಹಿಸುವ ದೃಷ್ಟಿಯಿಂದ ಮಂಗಳೂರಲ್ಲಿ ಒಂದು ಕಲೆಕ್ಟೋರೇಟನ್ನು ಸ್ಥಾಪಿಸಲಾಯಿತು. ದ. ಕ. ಜಿಲ್ಲೆಯಲ್ಲಿ ಬಾರ್ಕೂರು, ಬೇಕಲ, ಬಂಟವಾಳ ಮತ್ತು ಮಂಗಳೂರು ಎಂಬ ನಾಲ್ಕು ತಾಲೂಕುಗಳಿದ್ದವು. ಟಿಪ್ಪುವಿನ ವಿರುದ್ಧ ನಿಂತು ತಮಗೆ ನೆರವಾದ ಕೊಡಗಿನ ದೊಡ್ಡವೀರರಾಜನಿಗೆ ಬ್ರಿಟಿಷರು ಪುತ್ತೂರು ಮತ್ತು ಅಮರ ಸುಳ್ಯಗಳನ್ನು ಇನಾಮಾಗಿ ನೀಡಿದರು. ೧೭೯೯ರಲ್ಲಿ ಮನ್ರೋ ಎಂಬಾತ ಮೊದಲ ಜಿಲ್ಲಾಧಿಕಾರಿಯಾಗಿ ದ.ಕ ಜಿಲ್ಲೆಯ ಆಡಳಿತ ವಹಿಸುವುದರೊಂದಿಗೆ ಮೊದಲ ಬಾರಿಗೆ ಆಡಳಿತ ಶಾಹಿ ವ್ಯವಸ್ಥೆ ಆರಂಭವಾಯಿತು. ಟಿಪ್ಪುವಿನ ಮರಣದ (೧೭೯೯) ಬಳಿಕ ಕೊಡಗು- ಕೆನರಾ ರೈತ ಬಂಡಾಯದ (೧೮೩೭) ರವರೆಗಿನ ಅವಧಿಯಲ್ಲಿ ಹನ್ನೊಂದು ಮಂದಿ ಜಿಲ್ಲಾಧಿಕಾರಿಗಳನ್ನು ಈ ಜಿಲ್ಲೆ ಕಂಡಿತು.[೭]

ಕೋಷ್ಟಕ ೪.೧ ದ.ಕ ದ ಜಿಲ್ಲಾಧಿಕಾರಿಗಳು [೧೭೯೯-೧೮೩೭]

ಜಿಲ್ಲಾಧಿಕಾರಿ	ಅವಧಿ
೧. ಸರ್. ಮೇಜರ್ ಮನ್ರೋ	೦೮-೦೭-೧೭೯೯
೨. ಜಿ. ಜೆ ರೆವೆನ್ ಶಾ	೧೮-೧೨-೧೮೦೦
೩. ಅಲೆಗ್ಸಾಂಡರ್ ರೀಡ್	೨೬-೦೧-೧೮೦೫
೪. ಥಾಮಸ್ ಹ್ಯಾರಿಸ್	೦೧-೦೫-೧೮೧೬
೫. ಜೆ. ಬಾಬಿಂಗ್ಟನ್	೩೧-೦೮-೧೮೨೪
೬. ಎಚ್. ಡಿಕಿನ್ ಸನ್	೧೨-೦೧-೧೮೨೯
೭. ಎನ್. ಎಸ್ ಕ್ಯಾಮರೋನ್	೧೩-೦೩-೧೮೩೧
೮. ಎಚ್. ವೈವೀಸ್	೨೭-೦೪-೧೮೩೩
೯. ಜಿ. ಎಂ. ಒಗಿಲ್ವೀ	೧೪-೦೫-೧೮೩೫
೧೦. ಸಿ. ಆರ್. ಕಾಟನ್	೨೬-೦೯-೧೮೩೫
೧೧ . ಮೂಲ್ಕಂ ಲೆವಿನ್	೨೩-೦೪-೧೮೩೬

ಆಧಾರ : ದ. ಕ ಜಿಲ್ಲಾಧಿಕಾರಿ ಕಛೇರಿ ಮಾಹಿತಿ

ದ. ಕ ಜಿಲ್ಲೆಯ ಕಂದಾಯ ಆಡಳಿತ ವ್ಯವಸ್ಥೆಯನ್ನು ಬ್ರಿಟಿಷ್ ವಸಾಹತುಶಾಹಿಯು ತನ್ನ ಪ್ರಯೋಜನಕ್ಕಾಗಿ ಸುವ್ಯವಸ್ಥಿತಗೊಳಿಸಿತು. ಜಿಲ್ಲಾಧಿಕಾರಿ ಕಛೇರಿಯು ಜಿಲ್ಲೆಯ ಕಂದಾಯ ಆಡಳಿತದ ಕೇಂದ್ರವಾಯಿತು. ಜಿಲ್ಲಾಧಿಕಾರಿ ಕಛೇರಿಯ ಕೈಕೆಳಗೆ ತಾಲೂಕು ಕಂದಾಯ ಕಛೇರಿ ಮತ್ತು ಅವುಗಳ ಕೆಳಗೆ ಗ್ರಾಮ ಕಛೇರಿಗಳಿದ್ದವು. ಗ್ರಾಮ ಮಟ್ಟದಲ್ಲಿ ಮಣಿಗಾರ, ಶಾನುಭೋಗ ಮತ್ತು ಉಗ್ರಾಣಿ ಕಂದಾಯ ನಿರ್ವಹಣೆಯ ಕಾರ್ಯವನ್ನು ನಿರ್ವಹಿಸುವವರಾಗಿದ್ದರು. ವರ್ಗ, ಗ್ರಾಮ, ತಾಲೂಕು, ವಿಭಾಗ ಮತ್ತು ಜಿಲ್ಲೆ – ಕಂದಾಯದ ಘಟಕಗಳಾಗಿದ್ದವು. ವಿಭಾಗ ಮಟ್ಟದಲ್ಲಿ ಕಂದಾಯ ಪಾವತಿಗೆ ಪ್ರತ್ಯೇಕ ಕಛೇರಿಗಳಿದ್ದವು. ಶಾಂತಿ ಮತ್ತು ವ್ಯವಸ್ಥೆಯನ್ನು ಕಾಪಾಡಲು ಸೇನೆ ಪೋಲಿಸು ಮತ್ತು ನ್ಯಾಯಾಂಗ ವ್ಯವಸ್ಥೆಗಳನ್ನು ರೂಪಿಸಲಾಯಿತು.[೮]

1799 ರಿಂದ 1837 ರವರೆಗಿನ ದ.ಕ ಜಿಲ್ಲೆಯ ಮುಂಗಡ ಪತ್ರದ ಸ್ಥೂಲ ಸ್ವರೂಪ ಹೀಗಿತ್ತು.[೯]

ಮುಂಗಡ ಪತ್ರ

ಸಾರ್ವಜನಿಕ ಆದಾಯ

- ಭೂ ಕಂದಾಯ
- ಗ್ರಾಮೀಣ ತೆರಿಗೆಗಳು
- ಭೂ ಮತ್ತು ಸಮುದ್ರ ಕಸ್ಟಂಸ್
- ಉಪ್ಪು ಮತ್ತು ಹೊಗೆಸೊಪ್ಪು ಏಕಸ್ವಾಮ್ಯ

ಸಾರ್ವಜನಿಕ ವೆಚ್ಚ

- ಕಂದಾಯ ಆಡಳಿತ ವೆಚ್ಚ
- ಪೋಲಿಸು ಮತ್ತು ಸೇನೆ ವೆಚ್ಚ
- ನ್ಯಾಯಾಂಗ ವೆಚ್ಚ
- ಸಾರ್ವಜನಿಕ ಕಾಮಗಾರಿ ವೆಚ್ಚ

ನಕ್ಷೆ ೪.೧ ದ.ಕ. ದ ವಸಾಹತುಶಾಹಿ ಮುಂಗಡ ಪತ್ರದ ಸ್ವರೂಪ

ಭೂ ಕಂದಾಯ, ಉಪ್ಪು ಮತ್ತು ಹೊಗೆ ಸೊಪ್ಪಿನ ಏಕ ಸ್ವಾಮ್ಯ ಇವು ವಸಾಹತುಶಾಹಿಯ ಪ್ರಧಾನ ಆದಾಯಗಳಾಗಿದ್ದವು. ಇವುಗಳೊಂದಿಗೆ ಕಸ್ಟಂಸ್ ಮತ್ತು ಗ್ರಾಮೀಣ ತೆರಿಗೆಗಳು ಸ್ವಲ್ಪ ಮಟ್ಟಿನ ಆದಾಯವನ್ನು ತಂದು ಕೊಡುತ್ತಿದ್ದವು. ಕಂದಾಯ ನಿರ್ವಹಣೆ, ಕಾನೂನು ಮತ್ತು ವ್ಯವಸ್ಥೆ ಪಾಲನೆ, ಕೆರೆ ನಿರ್ಮಾಣ ಮತ್ತು ದುರಸ್ತಿ ಸೇತುವೆ


ನಿರ್ಮಾಣ ಇತ್ಯಾದಿಗಳು ಪ್ರಮುಖ ಸಾರ್ವಜನಿಕ ವೆಚ್ಚಗಳಾಗಿದ್ದವು. ಈ ಜಿಲ್ಲೆಯಲ್ಲಿ ರಸ್ತೆ ನಿರ್ಮಾಣಕ್ಕೆ ಮತ್ತು ಶಿಕ್ಷಣ ಸಂಸ್ಥೆಗಳ ರಚನೆಗೆ ವಸಾಹತುಶಾಹಿ ಆಡಳಿತವು ಮನಸ್ಸು ಮಾಡಿದ್ದು ಕೊಡಗು – ಕೆನರಾ ಬಂಡಾಯದ ಬಳಿಕ ಎನ್ನುವುದು ಉಲ್ಲೇಖನೀಯ ಅಂಶವಾಗಿದೆ.

೪.೨ ವಸಾಹತುಶಾಹಿ ಕಂದಾಯ ವ್ಯವಸ್ಥೆ

ದ. ಕ ಜಿಲ್ಲೆಯು ವಸಾಹತುಶಾಹೀ ಆಡಳಿತಕ್ಕೆ ಒಳಗಾಗುವಾಗ ಜಿಲ್ಲೆಯಲ್ಲಿ ಒಂದು ಸಮರ್ಪಕವಾದ ಕೇಂದ್ರಿಕೃತ ಅರ್ಥವ್ಯವಸ್ಥೆ ಇರಲಿಲ್ಲ. ಬಂಗಾಳ ಮದರಾಸು ಮತ್ತು ಮುಂಬೈ ಪ್ರಾಂತ್ಯಗಳಲ್ಲಿದ್ದ ಕಂದಾಯ ಪದ್ಧತಿ ಏಕರೂಪದ್ದಾಗಿರಲಿಲ್ಲ. ಇವು ತೆರಿಗೆ ವ್ಯವಸ್ಥೆಯು ಪ್ರತಿಗಾಮಿ ಸ್ವರೂಪದ್ದಾಗಿತ್ತು. ಆಡಂಸ್ಮಿತನ ತೆರಿಗೆ ಸೂತ್ರಗಳಾದ ನ್ಯಾಯ ಪರತೆ, ಖಚಿತತೆ ಅನುಕೂಲತೆ ಮತ್ತು ಮಿತವ್ಯಯಗಳನ್ನು ಸಂಪೂರ್ಣವಾಗಿ ಕಡೆಗಣಿಸಲಾಗಿತ್ತು.[೧೦]

ಭೂ ಮಾಲಿಕರು ಮತ್ತು ವ್ಯಾಪಾರಿಗಳು ಸರಕಾರದ ಕೃಪಾಶ್ರಯಕ್ಕೆ ಒಳಗಾಗಿ ಕಡಿಮೆ ಕಂದಾಯ ನೀಡುತ್ತಿದ್ದರು. ಕೃಷಿಕರು ಮತ್ತು ಸಣ್ಣ ಕಸುಬುದಾರರು ಕಂದಾಯ ಮತ್ತು ತೆರಿಗೆ ವ್ಯವಸ್ಥೆಯ ದೊಡ್ಡ ಭಾರವನ್ನು ಹೊರಬೇಕಿತ್ತು.[೧೧] ಕಂಪೆನಿ ಸರಕಾರ ಕಂದಾಯ ವ್ಯವಸ್ಥೆಯನ್ನು ಮತ್ತು ಭೂ ಸಂಬಂದಗಳನ್ನು ಬದಲಾಯಿಸಲು ಹೋಗಲಿಲ್ಲವೆಂದು ಮೊದಲನೆಯ ಜಿಲ್ಲಾಧಿಕಾರಿ ಮನ್ರೋ ಹೇಳಿಕೊಂಡಿದ್ದಾನೆ. ಇದರಿಂದ ತಾನು ಜಿಲ್ಲೆಯ ಜನಗಳ ಮೆಚ್ಚುಗೆ ಗಳಿಸಬಹುದೆಂದು ಅವನು ಭಾವಿಸಿದ್ದ.

ಕ್ರಿ. ಶ ೧೮೦೧ ರಲ್ಲಿ ಈ ಜಿಲ್ಲೆಯನ್ನು ಸಂದರ್ಶಿಸಿದ ಫ್ರಾನ್ಸಿಸ್ ಬುಖಾನನ್ ಇದನ್ನು ಭತ್ತದ ಕಣಜವೆಂದು ಪರಿಗಣಿಸಿ ಭೂಮಿಯನ್ನು ಭತ್ತದ ಭೂಮಿ, ಉದ್ಯಾನ ಭೂಮಿ ಮತ್ತು ಪೊಟ್ಟ ಭೂಮಿ ಎಂದು ವಿಭಜಿಸಿದ್ದಾನೆ.[೧೨]



ನಕ್ಷೆ ೪.೨ ದ. ಕ ಜಿಲ್ಲೆಯ ಭೂಮಿಯ ಪ್ರಕಾರಗಳು

ಆಧಾರ : ಬುಖಾನನ್ ಪು. ೨೩೪

ನೀರಿನ ಲಭ್ಯತೆಗನುಗುಣವಾಗಿ ಭೂಮಿಯನ್ನು ಬೆಟ್ಟು, ಮಜಲು, ಬಯಲು ಭೂಮಿಯೆಂದು ಕೂಡಾ ವರ್ಗೀಕರಿಸಲಾಗುತ್ತಿತ್ತು. ಬೆಟ್ಟು ಭೂಮಿಯು ನೀರಾವರಿ ವ್ಯವಸ್ಥೆ ಇಲ್ಲದ ಮಳೆ ನೀರನ್ನು ಆಶ್ರಯಿಸಿ ಏಣೆಲು ಬೆಳೆಯನ್ನು ಮಾತ್ರ ತೆಗೆಯುವ ಭೂಮಿ. ಎರಡು ಬೆಳೆಗಳಿಗೆ ತಕ್ಕಷ್ಟು ನೀರಾವರಿ ವ್ಯವಸ್ಥೆ ಇರುವುದು ಸುಗ್ಗಿ ಭೂಮಿಯಾದರೆ, ವರ್ಷದಲ್ಲಿ ಮೂರು ಬೆಳೆ ತೆಗೆಯಲು ಸಾಧ್ಯವಿರುವ ಭೂಮಿಯನ್ನು ಕೊಳಕೆ ಭೂಮಿಯೆಂದು ಕರೆಯಲಾಗುತ್ತಿತ್ತು. ತೆಂಗು ಮತ್ತು ಅಡಿಕೆ ಮಾತ್ರ ಬೆಳೆಯುವ ಭೂಮಿಯನ್ನು ಬಾಗಾಯಿತು ಎಂದು ಕರೆಯಲಾಗುತ್ತಿತ್ತೆಂದು ಸ್ಟುರಕ್ ದಾಖಲಿಸಿದ್ದಾನೆ.[೧೩]

ದಕ್ಷಿಣ ಕನ್ನಡದ ಮೇಲೆ ವಸಾಹತುಶಾಹಿ ದೇಶಗಳ ಕಣ್ಣು ಬೀಳಲು ಇಲ್ಲಿ ಯಥೇಚ್ಛವಾಗಿ ಬೆಳೆದು ಅರಬ್ ದೇಶಗಳಿಗೆ ರಫ್ತಾಗುತ್ತಿದ್ದ ಅಕ್ಕಿ ಕಾರಣವಾಗಿತ್ತು. ಭತ್ತದ ಗದ್ದೆ ಏರಿಗಳಲ್ಲಿ ಮತ್ತು ಕರಾವಳಿ ತೀರದುದ್ದಕ್ಕೂ ಬೆಳೆಯುತ್ತಿದ್ದ ತೆಂಗಿನಕಾಯಿಯಿಂದಾಗಿ ಹುರಿ ಹಗ್ಗ ತಯಾರಿಯು ಕರಾವಳಿಯ ಕೃಷಿ ಆಧಾರಿತ ಕೈಗಾರಿಕೆಯಾಗಿ ಅಭಿವೃದ್ಧಿ ಹೊಂದಿತ್ತು. ಅಡಿಕೆ, ಕಾಳುಮೆಣಸು, ಕಬ್ಬು, ವೀಳ್ಯದೆಲೆ ಪ್ರಮುಖ ವಾಣಿಜ್ಯ ಬೆಳೆಗಳಾಗಿದ್ದವು. ಏಣೆಲು ಭೂಮಿಯಲ್ಲಿ ಮಳೆಗಾಲದ ಬಳಿಕ ದ್ವಿದಳ ಧಾನ್ಯಗಳನ್ನು ಬೆಳೆಯಲಾಗುತ್ತಿತ್ತು. ಶುಂಠಿ, ಅರಸಿನ ಮತ್ತು ತರಕಾರಿಗಳು ಹಿತ್ತಲು ಬೆಳೆಗಳಾಗಿ ಪ್ರಾಮುಖ್ಯತೆ ಪಡೆದುದನ್ನು ಬುಖಾನನ್ ಉಲ್ಲೇಖಿಸಿದ್ದಾನೆ.[೧೪] ಬೆಟ್ಟದ ಇಳಿಜಾರುಗಳಲ್ಲಿ ಕುಮರಿ ಬೆಳೆಗಳನ್ನು- ಭತ್ತ, ತೊಗರಿ, ಎಳ್ಳು, ಕಡಲೆ ಇತ್ಯಾದಿ-ಬೆಳೆಯಲಾಗುತ್ತಿತ್ತು. ಜಾನ್ ಸ್ಟುರಕ್‌ನ ಉಲ್ಲೇಖದ ಪ್ರಕಾರ ಕಂಪೆನಿ

ಸರ್ಕಾರವು ಕುಮೇರಿಯನ್ನು ಸರ್ಕಾರಿ ಕುಮೇರಿ ಮತ್ತು ವರ್ಗ ಕುಮೇರಿ ಎಂದು ವಿಂಗಡಿಸಿ ಕುಮೇರಿಯನ್ನು ಗೇಣಿಗೆ ನೀಡುವುದಕ್ಕೆ ವ್ಯವಸ್ಥೆ ಕಲ್ಪಿಸಿತ್ತು. ವರ್ಗ ಕುಮೇರಿಯನ್ನು ಗೇಣಿಗೆ ಪಡಕೊಂಡವನು ಭೂ ಮಾಲಿಕನಿಗೆ ಮತ್ತು ಸರಕಾರಕ್ಕೆ ಗೇಣಿಯನ್ನು ನೀಡಬೇಕಿತ್ತು. ಸರ್ಕಾರಿ ಕುಮೇರಿಯನ್ನು ನೇರವಾಗಿ ಕೃಷಿಕರಿಗೆ ಗೇಣಿಗೆ ನೀಡಲಾಗುತ್ತಿತ್ತು. ಕುಮೇರಿ ಬೆಳೆಯಿಂದಾಗಿ ಅರಣ್ಯ ನಾಶವಾಗುವುದರಿಂದ ಕ್ರಿ. ಶ. ೧೮೬೦ ರಲ್ಲಿ ಕಂಪೆನಿ ಸರಕಾರ ಕುಮೇರಿ ಬೆಳೆ ಪದ್ಧತಿಯನ್ನು ನಿಲ್ಲಿಸಿತು.[೧೫] ಆದರೆ ಕುಮೇರಿ ಬೆಳೆ ಭಾರತವು ೧೯೪೭ ರಲ್ಲಿ ಸ್ವಾತಂತ್ರ್ಯ ಪಡೆಯುವವರೆಗೂ ಅನಧಿಕೃತವಾಗಿ ಅಲ್ಲಲ್ಲಿ ಉಳಕೊಂಡಿತ್ತು ಎನ್ನುವುದಕ್ಕೆ ಸಾಕಷ್ಟು ಆಧಾರಗಳು ದೊರೆಯುತ್ತವೆ. [೧೬]

ವರ್ಗಭೂಮಿಯ ಒಂದು ನೂರು ಗಜ ವ್ಯಾಪ್ತಿಯೊಳಗಿನ ಪರ್ವತ ಪ್ರದೇಶಗಳ ಪೊದೆಗಳನ್ನು ಸವರಿ ಮಾಡುತ್ತಿದ್ದ ಹಕ್ಕಲು ಬೆಳೆ ಪದ್ಧತಿಯ ಬಗ್ಗೆ ಜಾನ್ ಸ್ಟರಕ್ ಉಲ್ಲೇಖಿಸಿದ್ದಾನೆ. ಅಂತಹ ಬೆಳೆಗೆ ಕಂದಾಯವಿರಲಿಲ್ಲ. ೧೮೫೦ ರಲ್ಲಿ ಗ್ರಾಮದೊಳಗಿನ ಖಾಲಿ ಜಾಗದಲ್ಲಿ ಹಕ್ಕಲು ಬೆಳೆ ಮಾಡುವುದಿದ್ದರೆ ಎಕರೆಗೆ ಎಂಟಾಣೆ ಕಂದಾಯ ನೀಡಬೇಕೆಂದು ಸರ್ಕಾರ ಆದೇಶ ಹೊರಡಿಸಿತು.[೧೭] ಕೊಡಗು ಕೆನರಾ ಬಂಡಾಯ ೧೮೩೭ ರಲ್ಲಿ ನಡೆದುದರಿಂದ ಹಕ್ಕಲು ಬೆಳೆಗಂದಾಯವು ಅದರ ಮೇಲೆ ಯಾವುದೇ ಪ್ರಭಾವ ಬೀರಲು ಸಾಧ್ಯವಿರಲಿಲ್ಲ. ಆದರೆ ದ. ಕ ಜಿಲ್ಲೆಯ ಭಾಗವಾಗಿದ್ದ ಬೇಕಲ ತಾಲೂಕಿನಲ್ಲಿ ವ್ಯಾಪಕವಾಗಿ ಬೆಳೆಯಲಾಗುತ್ತಿದ್ದ ತಂಬಾಕನ್ನು 1804 ರಲ್ಲಿ ಸರಕಾರ ತನ್ನ ಏಕಸ್ವಾಮ್ಯಕ್ಕೆ ಒಳಪಡಿಸಿತು. ಅವರೆಗೆ ತಂಬಾಕು ಬೆಳೆಯಲ್ಲಿ ರೈತರಿಗಿದ್ದ ಮುಕ್ತ ಸ್ವಾತಂತ್ರ್ಯವನ್ನು ರದ್ದುಗೊಳಿಸಿ, ತಹಶೀಲ್ದಾರರಿಂದ ಅನುಮತಿ ಪಡೆದ ಬಳಿಕವಷ್ಟೇ ಬೆಳೆಯಬೇಕು ಮತ್ತು ಸರಕಾರದಿಂದ ನಿಯುಕ್ತಿಗೊಂಡವರಿಗೆ ಮಾತ್ರ ಮಾರಾಟ ಮಾಡಬೇಕು ಎಂದು ಕಡ್ಡಾಯಗೊಳಿಸಲಾಯಿತು.[೧೮] ಅದರ ವಿರುದ್ಧ ೧೮೩೧ರಲ್ಲಿ ರೈತರು ಪ್ರತಿಭಟನೆ ನಡೆಸಿದರೂ ತಂಬಾಕು ಏಕಸ್ವಾಮ್ಯ ೧೮೫೩ ರವರೆಗೂ ಅಸ್ತಿತ್ವದಲ್ಲಿ ಉಳಿದುಕೊಂಡಿತ್ತು ಮತ್ತು ಕೊಡಗು – ಕೆನರಾ ಬಂಡಾಯದ ಪ್ರಮುಖ ಕಾರಣಗಳಲ್ಲಿ ಅದು ಒಂದೆನಿಸಿತು.

ಬ್ರಿಟಿಷ್ ವಸಾಹತುಶಾಹಿ ದಕ್ಷಿಣ ಕನ್ನಡ ಜಿಲ್ಲೆಯನ್ನು ತನ್ನ ಕೈವಶ ಮಾಡಿಕೊಂಡ ಆರಂಭದ ವರ್ಷಗಳಲ್ಲಿ ಹುರಿ ಹಗ್ಗ ತಯಾರಿ, ಗಾಣದ ಎಣ್ಣೆ, ಬೆಲ್ಲ ತಯಾರಿ, ಕಳ್ಳು ತೆಗೆಯುವುದು, ಉಪ್ಪು ತಯಾರಿ ಮುಂತಾದ ಗ್ರಾಮೀಣ ಕೈಗಾರಿಕೆಗಳ ಹೊರತಾಗಿ ಬೇರಿನ್ನಾವ ಆಧುನಿಕ ಕೈಗಾರಿಕೆಗಳೂ ಇರಲಿಲ್ಲ. ಈ ಬಗ್ಗೆ ಮನ್ರೋ ನೀಡಿದ ಹೇಳಿಕೆ ಈಗಲೂ ಪ್ರಸ್ತುತವೆನಿಸಿದೆ. "ಕೈಗಾರಿಕೆಗೆ ಬೇಕಾದ ಶುಭ್ರ ಆಕಾಶ, ಯಥೇಚ್ಛ ಮುಕ್ತ ಗಾಳಿ ಯಾವುದೂ

ಈ ಜಿಲ್ಲೆಯಲ್ಲಿ ಇಲ್ಲ. ವಿಪರೀತವಾಗಿ ಸುರಿಯುವ ಮಳೆ ಕೈಗಾರಿಕೆಗೆ ದೊಡ್ಡ ಅಡ್ಡಿಯಾಗಿದೆ. ಅಲ್ಲದೆ ಕೈಗಾರಿಕೆಗಳಿಗೆ ಬೇಕಾದ ಯಾವುದೇ ಕಚ್ಚಾ ವಸ್ತು ಇಲ್ಲಿಲ್ಲ. ಆದುದರಿಂದ ಕೆನರಾವು ಎಂದಿಗೂ ಒಂದು ಕೈಗಾರಿಕಾ ಪ್ರದೇಶ ಆಗಲಾರದು."[೧೯]

ಈಸ್ಟಿಂಡಿಯಾ ಕಂಪೆನಿಯು ಜಿಲ್ಲೆಯನ್ನು ವಶಪಡಿಸಿಕೊಂಡ ತಕ್ಷಣ ಕೃಷಿ, ಕೈಗಾರಿಕೆ, ತಂತ್ರ ಜ್ಞಾನ ಇತ್ಯಾದಿಗಳ ಆಮೂಲಾಗ್ರ ಬದಲಾವಣೆಯನ್ನು ಬಯಸಲಿಲ್ಲ. ದೇಶಿಯ ತಳಿಯ ರಾಸುಗಳು ಕೃಷಿಗೆ ಬಳಕೆಯಾಗುತ್ತಿದ್ದವು. ಆವರ್ತನ ಕೃಷಿ, ಮಿಶ್ರ ಬೇಸಾಯ, ಭೂ ಸಾರ ಹೆಚ್ಚಲು ಭೂಮಿಯನ್ನು ಹಡಿಲು ಬಿಡುವ ಕ್ರಮಗಳು ಬಳಕೆಯಲ್ಲಿರಲಿಲ್ಲ. ನೀರಾವರಿ ವ್ಯವಸ್ಥೆಯೆಂಬುದೇ ಇರಲಿಲ್ಲವಾಗಿ ಕೃಷಿಗೆ ಮಳೆ ನೀರು, ಕೆರೆ, ನದಿಗಳನ್ನು ಅವಲಂಬಿಸಬೇಕಾಗಿತ್ತು. ೧೮೨೬ - ೨೭ ರಲ್ಲಿ ಜಿಲ್ಲೆಯಲ್ಲಿನ ಒಟ್ಟು ೪೯ ಕೆರೆಗಳ ಪೈಕಿ ೧೨ ಮಾತ್ರ ಸುಸ್ಥಿತಿಯಲ್ಲಿದ್ದವು. ಜಿಲ್ಲೆಯ ಒಟ್ಟು ೧೨೧ ಹೊಳೆ ಹಳ್ಳ ತೋಡುಗಳಿಗೆ ೩೮೭ ಒಡ್ಡುಗಳನ್ನು ನಿರ್ಮಿಸಿದಕ್ಕೆ ದಾಖಲೆಯಿದೆ.[೨೦]

ಕೂಟುತಾರ್ ರಿಯಾಯಿತಿ ಕ್ರಮದ ಪ್ರಕಾರ ಕಂದಾಯದ ಒಂದು ಭಾಗವನ್ನು ಕೃಷಿ ಜಲಮೂಲಗಳ ಸಂರಕ್ಷಣೆಗಾಗಿ ಮನ್ನಾ ಮಾಡಲಾಗುತ್ತಿತ್ತು.[೨೧] ಆದರೆ ಅದು ಬಕಾಸುರನ ಹೊಟ್ಟೆಗೆ ಒಂದು ನೆಲ್ಲಿಕಾಯಿ ಎಂಬ ಗಾದೆಯಂತ್ತಾಗಿತ್ತಷ್ಟೇ. ವಾಸ್ತವವಾಗಿ ವಸಾಹತುಶಾಹಿ ಆಡಳಿತ ವ್ಯವಸ್ಥೆಯಲ್ಲಿ ಕೃಷಿ ವಿಧಾನ ಗೊಬ್ಬರ ಮತ್ತು ನೀರಾವರಿ ವ್ಯವಸ್ಥೆಯಲ್ಲಿ ಯಾವ ಬದಲಾವಣೆಯೂ ಆಗಲಿಲ್ಲ.

ಭೂ ಒಡೆತನ, ಉತ್ಪಾದನೆ, ಕಂದಾಯ ಆಡಳಿತ ಮತ್ತು ಪಾವತಿ ಸಂಬಂಧಗಳನ್ನು ಒಟ್ಟಾಗಿ ಕೃಷಿ ಸಂಬಂಧಗಳೆಂದು ಬರ್ಟನ್ ಸ್ಟೆಯಿನ್ ಕರೆದಿದ್ದಾನೆ.[೨೨] ಡಾ। ಧನಾಗರೆಯವರು ಭಾರತದಲ್ಲಿ ಕೃಷಿ ಚಟುವಟಿಕೆಗಳಲ್ಲಿ ತೊಡಗಿರುವವರನ್ನು ಜಮೀನುದಾರರು, ಶ್ರೀಮಂತ ರೈತರು, ಬಡ ರೈತರು ಮತ್ತು ಭೂ ರಹಿತ ಕಾರ್ಮಿಕರು ಎಂದು ವಿಂಗಡಿಸಿರುತ್ತಾರೆ.[೨೩]

೧೭೯೯ - ೧೮೦೦ ರಲ್ಲಿ ಮನ್ರೋ ದ. ಕ. ಜಿಲ್ಲೆಯಲ್ಲಿ ರೈತವಾರಿ ಪದ್ಧತಿಯನ್ನು ಅನುಷ್ಠಾನಗೊಳಿಸಿದಾಗ ಮೇಲಿನ ನಾಲ್ಕು ವರ್ಗಗಳು ಅಸ್ತಿತ್ವದಲ್ಲಿದ್ದವು. ಅದಾಗಲೇ ಅಸ್ತಿತ್ವದಲ್ಲಿದ್ದ ಮೂಲ, ಚಾಲ, ವಾಯಿದೆ ಗೇಣಿ ವ್ಯವಸ್ಥೆಯನ್ನು ಮನ್ರೋ ಬದಲಾಯಿಸಲು ಹೋಗಲಿಲ್ಲ. ಮೂಲ ಗೇಣಿಯವರು ಖಾಯಂ ಗೇಣಿದಾರರಾಗಿದ್ದು ಅವರು ಮೂಲ ವರ್ಗದಾರರು ಎನಿಸಿಕೊಂಡರು. ವಾಯಿದೆ ಗೇಣಿಯು ನಿರ್ದಿಷ್ಟ ಅವಧಿಯವರೆಗಿನ ಲಿಖಿತ ಒಪ್ಪಂದದ ಮೂಲಕ ನಿರ್ಧಾರವಾಗುತ್ತಿತ್ತು. ಚಾಲ ಗೇಣಿಯಲ್ಲಿ ಲಿಖಿತ ಒಪ್ಪಂದವಿಲ್ಲದೆ ಗೇಣಿ ನಿರ್ಣಯ ಮತ್ತು

ಅವಧಿಯನ್ನು ಮೌಖಿಕವಾಗಿ ನಿರ್ಧಾರ ಮಾಡಲಾಗುತ್ತಿತ್ತು. ಹೊಸ ಪಟ್ಟೆ ಇಲ್ಲದೆ ಭೂಮಿ ಕೊಂಡವ ವಾಲವರ್ಗಗಾರನಾದರೆ, ವರ್ಗದಾರನಿಂದ ತುಂಡು ಭೂಮಿಯನ್ನು ಪಡಕೊಂಡು ಸರಕಾರಕ್ಕೆ ನೇರವಾಗಿ ಕಂದಾಯ ಪಾವತಿ ಮಾಡುವವನು ಕೊಡು ತಲೆದಾರನೆಂದು ಗುರುತಿಸಲ್ಪಡುತ್ತಿದ್ದ. [೨೪] ಬ್ರಿಟಿಷರು ರೈತವಾರಿ ವ್ಯವಸ್ಥೆಯನ್ನು ಜಾರಿಗೆ ತಂದು ರೈತರಿಗೆ ಭೂಮಿಯ ಪಟ್ಟೆ ನೀಡಿದರು. ವಸಾಹತುಶಾಹಿ ವ್ಯವಸ್ಥೆಯಿಂದಾಗಿ ತುಂಡರಸರು ಜಮೀನುದಾರರ ಮಟ್ಟಕ್ಕೆ ಇಳಿದರು.ಶ್ರೀಮಂತ ರೈತರು ಮೂಲ ವರ್ಗದಾರರೆನಿಸಿ ಬ್ರಿಟಿಷರಿಗೆ ಹತ್ತಿರವಾದರು. ಕಂದಾಯ ನಿಗದಿಗೆ ಬೆಳೆಯನ್ನು ಪರಿಗಣಿಸದೆ ಭೂ ವಿಸ್ತೀರ್ಣವನ್ನು ಪರಿಗಣಿಸಿದ್ದು ಬಡ ರೈತರ ಪಾಲಿಗೆ ಇನ್ನಿಲ್ಲದ ಸಂಕಷ್ಟಗಳನ್ನು ನಿರ್ಮಿಸಿತು. ಭೂ ಹೀನ ಕೃಷಿ ಕಾರ್ಮಿಕರಲ್ಲಿ ವಂಶ ಪಾರಂಪರ್ಯವಾಗಿ ಗುಲಾಮಗಿರಿಗೊಳಗಾದ ಮೂಲದ ಹೊಲೆಯರು ಮತ್ತು ದಿನ ಸಂಬಳಕ್ಕೆ ಬರುವ ಕೂಲಿಯಾಳುಗಳೆಂಬ ಎರಡು ವರ್ಗಗಳಿದ್ದವು. ಕೂಲಿಯಾಳುಗಳಲ್ಲಿ ಬಹುತೇಕರು ಹೊಲೆಯರಾಗಿದ್ದು ಅವರು ಸಾಲ ತೆಗೆದುಕೊಳ್ಳದೆ ಬದುಕನ್ನು ಸಾಗಿಸಲು ಸಾಧ್ಯವಿಲ್ಲದೆ ಸಾಲದ ಬಲೆಯಲ್ಲಿ ಒದ್ದಾಡುತ್ತಿದ್ದುದರಿಂದ ಸಾಲದ ಹೊಲೆಯರು ಎಂದು ಕರೆಯಲ್ಪಡುತ್ತಿದ್ದರು.[೨೫] ಗಂಡಸರಿಗೆ ದಿನಕ್ಕೆ ಒಂದರಿಂದ ಎರಡು ಸೇರು, ಹೆಂಗಸರಿಗೆ ೨/೩ರಿಂದ ಎರಡು ಸೇರು ಮತ್ತು ಮಕ್ಕಳಿಗೆ ೩/೮ ರಿಂದ ಒಂದು ಸೇರು ದಿನಗೂಲಿ ದೊರೆಯುತ್ತಿದ್ದುದನ್ನು ಸ್ಟರಕ್ ದಾಖಲಿಸಿದ್ದಾನೆ.[೨೬] ಈ ವರ್ಗಕ್ಕೆ ಸೇರಿದವರ ಅಭ್ಯುದಯಕ್ಕಾಗಿ ವಸಾಹತುಶಾಹಿ ಆಡಳಿತವು ಏನನ್ನೂ ಮಾಡಿಲ್ಲವೆನ್ನುವುದು ಅದರ ಹಿತಾಸಕ್ತಿಯು ಯಥಾಸ್ಥಿತಿಯನ್ನು ಕಾಯ್ದುಕೊಳ್ಳುವ ಮೂಲಕ ಶೋಷಿತರನ್ನು ಮತ್ತಷ್ಟು ಶೋಷಣೆಗೊಳಪಡಿಸುವುದಾಗಿತ್ತು ಎಂಬ ಸತ್ಯವನ್ನು ಸ್ಪಷ್ಟ ಪಡಿಸುತ್ತದೆ.

ಬ್ರಿಟಿಷರ ಕಂದಾಯ ವ್ಯವಸ್ಥೆಯಲ್ಲಿ ಅನೇಕ ಲೋಪ ದೋಷಗಳಿದ್ದವು:

- ಕಂದಾಯ ನಿರ್ಣಯಕ್ಕೆ ಭೂ ಸಮೀಕ್ಷಾ ಕಾರ್ಯವನ್ನು ಬ್ರಿಟಿಷರು ವೈಜ್ಞಾನಿಕವಾಗಿ ಮಾಡಿರಲಿಲ್ಲ.

- ಕೃಷಿ ಮಾಡದ ಭೂಮಿಯನ್ನೂ ಕಂದಾಯ ನಿರ್ಣಯಕ್ಕೆ ಪರಿಗಣಿಸಲಾಗುತ್ತಿತ್ತು.

- ಕಂದಾಯವನ್ನು ನಿಗದಿಪಡಿಸುವಾಗ ಉತ್ಪನ್ನದ ಮಾರುಕಟ್ಟೆ ಬೆಲೆಯನ್ನು ಮಾತ್ರ ಪರಿಗಣಿಸಲಾಗುತ್ತಿತ್ತು.

- ಕಂದಾಯ ನಿರ್ಣಯದಲ್ಲಿ ಏಕರೂಪತೆ ಇರಲಿಲ್ಲ.

❖ ಕಂದಾಯವನ್ನು ಹಣದ ರೂಪದಲ್ಲಿ ಕಟ್ಟ ಬೇಕೆಂಬ ಆದೇಶವಿತ್ತು.


❖ ಕಂದಾಯ ಪದ್ಧತಿಯು ಶೋಷಣಾತ್ಮಕವಾಗಿತ್ತು.

ಇದರಿಂದಾಗಿ ಬ್ರಿಟಿಷರಿಗೆ ದೊರೆಯುತ್ತಿದ್ದ ಒಟ್ಟು ಆದಾಯದಲ್ಲಿ ಭೂ ಕಂದಾಯದ ಪಾಲು ಬಹಳ ದೊಡ್ಡದಾಗಿತ್ತು. [ಕೋಷ್ಟಕ ೪.೨]

ಕೋಷ್ಟಕ ೪. ೨ ಒಟ್ಟು ಆದಾಯದಲ್ಲಿ ಕಂದಾಯ ಪಾಲು


ವರ್ಷ (ಕ್ರಿ.ಶ.)	ಭೂ ಕಂದಾಯ (ರೂ. ಗಳಲ್ಲಿ) ೨	ಒಟ್ಟು ಕಂದಾಯ (ರೂ. ಗಳಲ್ಲಿ) ೩	೩ ರಲ್ಲಿ ೨ ರ ಶೇಕಡಾ ಪಾಲು
೧೭೯೯ -೧೮೦೫	೧೦.೨೯ ಲಕ್ಷ	೧೩.೬೧ ಲಕ್ಷ	೭೫. ೬೦%
೧೮೦೬ -೧೦	೯.೬೭ ಲಕ್ಷ	೧೩.೬೧ ಲಕ್ಷ	೭೧. ೦೩%
೧೮೧೧ -೧೫	೯.೧೫ ಲಕ್ಷ	೧೩.೧೬ ಲಕ್ಷ	೬೯.೨೧%
೧೮೧೬ -೨೦	೮.೯೧ ಲಕ್ಷ	೧೧.೬೭ ಲಕ್ಷ	೭೬.೨೬%
೧೮೨೧ -೨೫	೮.೮೪ ಲಕ್ಷ	೧೨.೬೦ ಲಕ್ಷ	೭೦.೨೨ %
೧೮೨೬ -೩೦	೮.೭೬ ಲಕ್ಷ	೧೩.೧೧ ಲಕ್ಷ	೬೬.೮೪%
೧೮೩೧ -೩೪	೮.೨೫ ಲಕ್ಷರೂ.	೧೨.೪೨ ಲಕ್ಷ	೬೬.೪೫%
೧೮೩೫ - ೪೦	೯.೫೭ ಲಕ್ಷ	೧೪.೧೦ ಲಕ್ಷ	೬೭.೯೧%

ವಸಾಹತುಶಾಹಿ ಆಡಳಿತದ ಆರಂಭದ ದಿನಗಳಲ್ಲಿ ಸರಕಾರದ ಒಟ್ಟು ಕಂದಾಯದಲ್ಲಿ ಭೂ ಕಂದಾಯದ ಪಾಲು ೩/೪ ಆಗಿತ್ತು. ಆ ಬಳಿಕ ಅದು ಕಡಿಮೆಯಾಗುತ್ತಾ ಹೋಗಿ ೨/೩ ರಷ್ಟಾದ್ದನ್ನು ಗಮನಿಸಬಹುದು. ನಿರಪೇಕ್ಷ ಮೊತ್ತ ರೂಪದ ಭೂ ಕಂದಾಯವು ಕೂಡ ಕಡಿಮೆಯಾಗುತ್ತಾ ಹೋಗಿರುವುದು ಗಮನೀಯ. ಭೂ ಕಂದಾಯದ ಪಾಲು ಕುಸಿದಿರುವುದನ್ನು ಚಿತ್ರ ೪.೧ ರಲ್ಲಿ ಬಿಂಬಿಸಲಾಗಿದೆ.



ಚಿತ್ರ ೪.೧ ಭೂ ಕಂದಾಯ ಪಾಲಿನ ಕುಸಿತ

ವಸಾಹತುಶಾಹಿ ಆಡಳಿತದ ಆರಂಭದ ನಾಲ್ಕು ದಶಕಗಳಲ್ಲಿ ಒಟ್ಟು ಕಂದಾಯದಲ್ಲಿ ಭೂ ಕಂದಾಯದ ಪಾಲು ಎಷ್ಟಿತ್ತು ಎನ್ನುವುದನ್ನು ಚಿತ್ರ ೪.೧ ರಲ್ಲಿ ತೋರಿಸಲಾಗಿದೆ. ವಾಸ್ತವವಾಗಿ ಭೂ ಕಂದಾಯದ ಮೊತ್ತ ಕಡಿಮೆಯಾಗುತ್ತಾ ಬಂದು ೧೮೩೫ -೪೦ರ ಅವಧಿಯಲ್ಲಿ ರೂ. ೯,೫೭,೩೩೧ ಆಗಿತ್ತು. ಆದರೆ ೧೭೯೯ -೧೮೦೫ ರ ಅವಧಿಯಲ್ಲಿ ಅದು ರೂ. ೧೦,೨೮,೪೨೮ ರಷ್ಟಿತ್ತು ಎನ್ನುವುದು ಗಮನೀಯ. ಒಟ್ಟು ಆದಾಯದಲ್ಲಿ ಭೂ ಕಂದಾಯದ ಪಾಲು



ಅಧ್ಯಯನದ ಆರಂಭಿಕ ಅವಧಿಯಲ್ಲಿ ೭೫. ೬% ಇದ್ದದ್ದು ವೀಕ್ಷಣೆಯ ಅಂತ್ಯದ ಅವಧಿಯಲ್ಲಿ ೬೭೯ ಕ್ಕೆ ಕುಸಿಯಿತು. ಸರಕಾರದ ಭೂ ಕಂದಾಯ ನೀತಿ ರೈತ ವಿರೋಧಿಯಾಗಿದ್ದುದು ಇದರಿಂದ ಸ್ಪಷ್ಟವಾಗುತ್ತದೆ. ಟಿಪ್ಪು ಕಾಲದ ಭೂ ಕಂದಾಯ ವ್ಯವಸ್ಥೆಯನ್ನು ತಾವು ಬದಲಾಯಿಸಲಿಲ್ಲವೆಂದು ಬ್ರಿಟಿಷರು ಹೇಳಿಕೊಂಡರೂ, ರೈತರ ಸಾಮರ್ಥ್ಯಕ್ಕಿಂತ ಹೆಚ್ಚಿನ ಕಂದಾಯ ಹೇರಿಕೆಯಾಗುತ್ತಿದ್ದುದರಿಂದ ಅವರಿಗೆ ಕಂದಾಯವನ್ನು ಸರಿಯಾಗಿ ಪಾವತಿಸಲು ಸಾಧ್ಯವಾಗುತ್ತಿರಲಿಲ್ಲವೆಂದು ಈ ಅಂಕಿ ಅಂಶಗಳು ತಿಳಿಯಪಡಿಸುತ್ತವೆ. ಕಂದಾಯ ಪಾವತಿ ಮಾಡಲಾಗದ ರೈತರು ತಮ್ಮ ಭೂಮಿಯನ್ನು ವ್ಯಾಪಾರಿಗಳಿಗೆ ಅಥವಾ ಜಮೀನುದಾರರಿಗೆ ಮಾರಾಟ ಮಾಡಬೇಕಾದ ಅನಿವಾರ್ಯತೆ ಕಂದಾಯ ವ್ಯವಸ್ಥೆಯ ಕಠೋರತೆಯನ್ನು ತಿಳಿಯಪಡಿಸುತ್ತವೆ. ವಸಾಹತುಶಾಹಿ ಸರಕಾರಕ್ಕೆ ಆಪ್ತರಾಗಿದ್ದ ಭೂ ಮಾಲಿಕರು ಭೂ ಕಂದಾಯದಲ್ಲಿ ವಿನಾಯಿತಿ ಪಡೆದುಕೊಳ್ಳುತ್ತಿದ್ದುದು ಅದರ ಪಾಲು ಇಳಿಮುಖವಾಗಲು ಇನ್ನೊಂದು ಕಾರಣವಾಗಿತ್ತು.


ದ.ಕ. ಜಿಲ್ಲೆಯ ಪ್ರಥಮ ಜಿಲ್ಲಾಧಿಕಾರಿ ಕ್ಯಾಪ್ಟನ್ ಮನ್ರೋ ಆರು ತಿಂಗಳಿಗೊಮ್ಮೆ ಜನರ ವಿವಾದಗಳನ್ನು ಬಗೆ ಹರಿಸುತ್ತಿದ್ದ. ಅವುಗಳಲ್ಲಿ ಶೇಕಡಾ ೮೦ರಷ್ಟು ಭೂ ಕಂದಾಯಕ್ಕೆ ಸಂಬಂಧಿಸಿದವುಗಳಾಗಿದ್ದವು. ಕಂದಾಯ ವ್ಯವಸ್ಥೆಯಲ್ಲಿ ಪ್ರಗತಿಪರತೆ ಮತ್ತು ಮಾನವೀಯತೆ ಎಂಬ ಮೌಲ್ಯಗಳಿಗೆ ತಿಲ ಮಾತ್ರದ ಸ್ಥಳಾವಕಾಶವೂ ಇಲ್ಲದುದರಿಂದ ಅದು ಸಹಜವೇ ಆಗಿತ್ತು. ಜನವರಿಯಿಂದ ಮೇಯವರೆಗೆ ಐದು ಕಂತುಗಳಲ್ಲಿ ರೈತರು ಭೂ ಕಂದಾಯವನ್ನು ಕಟ್ಟಬೇಕಾಗಿತ್ತು. ಕಂದಾಯದ ಮೊತ್ತವನ್ನು ಪಟೇಲರು ಮತ್ತು ಶಾನುಭೋಗರು ನಿರ್ಧರಿಸಿ ಹಣದ ರೂಪದಲ್ಲಿ ಸಂಗ್ರಹಿಸುತ್ತಿದ್ದರು. ಸಂಗ್ರಹಿತ ಕಂದಾಯವನ್ನು ಅವರು ಎರಡು ತಿಂಗಳುಗಳಿಗೊಮ್ಮೆ ತಹಶೀಲ್ದಾರರ ಸಮ್ಮುಖದಲ್ಲಿ ತಾಲೂಕು ಟ್ರಜರಿಗೆ ಪಾವತಿಸುತ್ತಿದ್ದರು. ಸರಕಾರಿ ಶರೀಫ ಕಂದಾಯ ರೂಪದಲ್ಲಿ ಬಂದ ನಾಣ್ಯಗಳ ಗುಣಮಟ್ಟ ಪರಿಶೀಲಿಸುತ್ತಿದ್ದ. ಕೆಟ್ಟ ನಾಣ್ಯಗಳ ಮೌಲ್ಯವನ್ನು ಪಟೇಲನೆ ನೀಡಬೇಕಾಗಿದ್ದುದರಿಂದ ಕಂದಾಯ ಸಂಗ್ರಹ ಕಾಲದಲ್ಲಿ ಅವನು ತುಂಬ ಎಚ್ಚರ ವಹಿಸುತ್ತಿದ್ದ ತಹಶೀಲ್ದಾರ್, ಶಿರಸ್ತೆದಾರ್, ಶಾನುಭೋಗ, ಪಟೇಲ ಮತ್ತು ರೈತರ ಸಮ್ಮುಖದಲ್ಲಿ ಕಂದಾಯ ಇತ್ಯರ್ಥವಾಗುತ್ತಿತ್ತು. [೨೭]

ಕಂಪೆನಿ ಸರಕಾರದ ಕಂದಾಯ ವ್ಯವಸ್ಥೆ ಅತ್ಯಂತ ಶೋಷಣಾತ್ಮಕ ಸ್ವರೂಪದ್ದಾಗಿದ್ದರೂ ವಸಾಹತುಶಾಹಿ ಆಡಳಿತ ಆರಂಭಿಕ ಹಂತದಲ್ಲಿ ತಾನು ಪ್ರಜೆಗಳ ಪರವೆಂದು ತೋರಿಸಬೇಕಾದ ಅನಿವಾರ್ಯತೆ ಸರಕಾರಕ್ಕಿತ್ತು. ಅದಕ್ಕೆಂದೇ ಸರಕಾರ ತಕ್ಕಾವಿ ಸಾಲ, ಬೆಳೆ ಮುಂಗಡ ಸಾಲ, ಕಂದಾಯ ಮಾಫಿಯಂತಹ ಆಮಿಷಗಳನ್ನು ರೈತರಿಗೆ

ಒಡ್ಡುತ್ತಿತ್ತು. ಬೆಳೆಕೊಯ್ಲು ಆದ ತಕ್ಷಣ ಇವನ್ನು ರೈತರು ಸರಕಾರಕ್ಕೆ ಮರು ಪಾವತಿ ಮಾಡಬೇಕಿತ್ತು. ಕೆನರಾ ಮತ್ತು ಸೂಂದಾ ಪ್ರಾಂತ್ಯಗಳಿಗೆ ವಸಾಹತುಶಾಹಿ ಸರ್ಕಾರ ೧೮೦೦ –೦೧ ರಲ್ಲಿ ತಕ್ಕಾವಿ ಸಾಲ ರೂಪದಲ್ಲಿ ರೂ. ೬೧.೨೫೦ ಒದಗಿಸಿತ್ತು.[೨೮] ೧೮೦೫ – ೦೬ ಇವೆರಡು ಪ್ರಾಂತ್ಯಗಳ ರೈತರಿಗೆ ಮುಂಗಡ ರೂಪದಲ್ಲಿ ರೂ. ೨೧,೦೦೦ ದೊರೆತಿತ್ತು.[೨೯] ಆದರೆ ಆ ಬಳಿಕ ತಕ್ಕಾವಿ ಸಾಲವಾಗಲೀ, ಮುಂಗಡ ನೀಡಿದ್ದಕ್ಕೆ ಯಾವುದೇ ದಾಖಲೆಗಳಾಗಲೀ ದೊರೆಯುವುದಿಲ್ಲವಾದ ಕಾರಣ ಇವು ಕೇವಲ ಆರಂಭಿಕ ಆಮಿಷಗಳಾಗಿದ್ದವು ಎಂದು ಧಾರಳವಾಗಿ ಹೇಳಬಹುದು ಒಂದು ವರ್ಷ ಕಂದಾಯ ಮಾಫಿ ಮಾಡಿದರೆ ಮರುವರ್ಷ ಎರಡು ವರ್ಷಗಳ ಕಂದಾಯವನ್ನು ಒಂದೇ ಸಲ ಪಾವತಿಸಬೇಕಾದ ದುರ್ಭರತೆ ರೈತರಿಗೆ ಎದುರಾಗುತ್ತಿತ್ತು. ಕಂದಾಯ ಮಾಫಿಯ ಪ್ರಯೋಜನವೂ ಕೂಡ ರೈತರಿಗೆ ಸಿಗದೆ ಭೂ ಮಾಲಿಕರಿಗೆ ಮಾತ್ರ ದೊರೆಯುತ್ತಿತ್ತು ಎನ್ನುವುದು ವಸಾಹತುಶಾಹಿ ವ್ಯವಸ್ಥೆಯು ಎಷ್ಟು ಪ್ರತಿಗಾಮಿ ಧೋರಣೆಯದಾಗಿತ್ತು ಎನ್ನುವುದಕ್ಕೆ ಸಾಕ್ಷಿಯಾಗಿದೆ.

ವಸಾಹತುಶಾಹಿಯು ತನ್ನದೇ ಆದ ಕಂದಾಯ ವ್ಯವಸ್ಥೆಯನ್ನು ಜಾರಿಗೊಳಿಸುವಾಗ ಸಾಮಾಜಿಕ ಮತ್ತು ಆರ್ಥಿಕವಾಗಿ ಮೇಲೆಸ್ತರದಲ್ಲಿದ್ದ ಬ್ರಾಹ್ಮಣ, ಸಾರಸ್ವತ ಮತ್ತು ಬಂಟ (ತ್ರಿಮೂರ್ತಿ) ಸಮುದಾಯವನ್ನು ತನ್ನ ಪರವಾಗಿ ವಾಲಿಸಿಕೊಂಡಿತ್ತು. ರೈತರ ಒಟ್ಟು ಉತ್ಪನ್ನದಲ್ಲಿ ಶೇಕಡಾ ೩೦ರಿಂದ ಶೇ. ೫೦ ರವರೆಗೆ ಕಂದಾಯ ರೂಪದಲ್ಲಿ ಸರ್ಕಾರಕ್ಕೆ ಸಲ್ಲುತ್ತಿತ್ತು. ಇಷ್ಟೊಂದು ದೊಡ್ಡ ಮೊತ್ತದ ಹಣವನ್ನು ಕಟ್ಟಲಾಗದ ರೈತರು ತಮ್ಮ ಭೂಮಿಯನ್ನು ಹಣ ಸಾಲದಾತರಾದ ಬ್ರಾಹ್ಮಣರಿಗೆ, ಸಾರಸ್ವತರಿಗೆ,ಮತ್ತು ಬಂಟರಿಗೆ ಮಾರಾಟ ಮಾಡಿ ಬಿಡುತ್ತಿದ್ದರು. ವಿದ್ಯಾವಂತರು, ಶಾಂತಿ ಪ್ರಿಯರು ಆಗಿದ್ದು, ಸಮಾಜದಲ್ಲಿ ಪುಕ್ಕಟೆ ಗೌರವ ಪಡೆಯುವ ಈ ವರ್ಗಗಳ ಜನರು ಅಗತ್ಯಬಿದ್ದಾಗ ಬ್ರಿಟಿಷರಿಗೆ ಸಾಲ ನೀಡುವಷ್ಟು ಆರ್ಥಿಕ ಬಲವನ್ನು ಹೊಂದಿದ್ದರು. ಈ ಸಿರಿವಂತ ಸಮುದಾಯಗಳು ಜಮೀನುದಾರಿ ವರ್ಗಕ್ಕೆ ಸೇರಿದವುಗಳಾಗಿದ್ದು, ರೈತರಿಗೆ ಭೂ ಅಡಮಾನದ ಆಧಾರದಲ್ಲಿ ಶೇ. ೬ ರಿಂದ ಶೇ. ೧೨ ರವರೆಗಿನ ಬಡ್ಡಿ ದರದಲ್ಲಿ ಸಾಲ ನೀಡುತ್ತಿದ್ದುದನ್ನು ಮತ್ತು ಈ ಸಾಲ ಮರುಪಾವತಿ ಮಾಡಲಾಗದ ತ್ರಿಮೂರ್ತಿ ಸಮುದಾಯಗಳಿಗೆ ತಮ್ಮ ಜಮೀನನ್ನು ಮಾರಾಟ ಮಾಡಬೇಕಾಗಿ ಬರುತ್ತಿದ್ದುದನ್ನು ಸ್ಟರಕ್ ದಾಖಲಿಸಿದ್ದಾನೆ.[೩೦] ಹಣದ ಮುಗ್ಗಟ್ಟಿನಲ್ಲಿರುವ ರೈತರು ಬೆಳೆ ಕೊಯ್ಲಿಗೆ ಮೊದಲೇ ಅದನ್ನು ಅಡವಿಟ್ಟು ತ್ರಿಮೂರ್ತಿ ಸಮುದಾಯಗಳಿಂದ ಸಾಲ ಪಡೆಯುವ ತೊರಾದು ಎಂಬ ಪದ್ಧತಿಯೊಂದು ಈ ಕಾಲದಲ್ಲಿ ಹುಟ್ಟಿಕೊಂಡಿತು. ಜಮೀನುದಾರರು ತಮ್ಮ ಭೂಮಿಯನ್ನು ಭೋಗ್ಯಕ್ಕೆ ನೀಡಿ ಶೇ. ೫೦ ರಷ್ಟು ಗೇಣಿ ಪಡೆಯುತ್ತಿದ್ದರು. ಗೇಣಿದಾರ ಉಳಿದ ಶೇ.೫೦ರಲ್ಲಿ

ಶೇ. ೩೦ರಿಂದ ಶೇ. ೪೦ರಷ್ಟು ಕಂದಾಯ ಪಾವತಿಸಿ ಕೇವಲ ಶೇ. ೨೦ ಕೆಲವೊಮ್ಮೆ ಶೇ. ೧೦ರ ಉಳಿಕೆ ಉತ್ಪತ್ತಿಯಲ್ಲಿ ಜೀವನ ಸಾಗಿಸಬೇಕಾಗುತ್ತಿತ್ತು. (ಚಿತ್ರ ೪. ೨)



ಚಿತ್ರ ೪.೨ ಗೇಣಿ ವ್ಯವಸ್ಥೆಯಲ್ಲಿ ರೈತನ ಪಾಲು

ವರ್ಷವಿಡೀ ದುಡಿದು ಗೇಣಿದಾರ ರೈತ ಭೂಮಿಯಲ್ಲಿ ಪಡೆದ ಉತ್ಪತ್ತಿಯಲ್ಲಿ ೫೦% ಗೇಣಿಗೆ ೪೦% ಕಂದಾಯಕ್ಕೆ ನೀಡಿ ಕೇವಲ ೧೦% ದಲ್ಲಿ ತನ್ನನ್ನು ಮತ್ತು ಕುಟುಂಬವನ್ನು ಪೋಷಿಸಿಕೊಳ್ಳಬೇಕಿತ್ತು. ಇದು ಗೇಣಿ ವ್ಯವಸ್ಥೆಯನ್ನು ಅನಾಕರ್ಷಕವಾಗಿ ಮಾಡಿತ್ತು. ಆದರೆ ಬದಲಿ ಉದ್ಯೋಗದ ವ್ಯವಸ್ಥೆ ಇಲ್ಲದ ಕಾರಣ ಗೇಣಿದಾರರು ಅನಿವಾರ್ಯವಾಗಿ ಭೂಮಿಯನ್ನೇ ನೆಚ್ಚಿಕೊಂಡಿರಬೇಕಾಗಿತ್ತು. ಗ್ರಾಮ ನೋಂದಾವಣಿ ಅಧಿಕಾರಿಯಲ್ಲಿ ನೊಂದಾವಣೆ ಮಾಡಿಸಿಕೊಳ್ಳದ ವಲ ವರ್ಗದಾರ ಮತ್ತು ಕುಡುತಲೆದಾರರಿಗೆ ಯಾವ ಭದ್ರತೆಯೂ ಇರಲಿಲ್ಲ. ಅಂಥವರ ಭೂಮಿಯನ್ನು ಸರಕಾರವೇ ನೇರವಾಗಿ ವಶಪಡಿಸಿಕೊಳ್ಳುತ್ತಿತ್ತು.[೩೧]

ಈಸ್ಟಿಂಡಿಯಾ ಕಂಪೆನಿಯ ಕಂದಾಯ ವ್ಯವಸ್ಥೆಯಲ್ಲಿ ಸುಖವುಂಡವರ ಮೇಲ್ಜಾತಿ/ ವರ್ಗಗಳಿಗೆ ಸೇರಿದ ಬ್ರಾಹ್ಮಣರು, ಸಾರಸ್ವತರು ಮತ್ತು ಬಂಟರು. ಅನೇಕ ಬ್ರಾಹ್ಮಣರು ಶಾನುಭೋಗ ಅಥವಾ ಪಟೇಲರಾಗಿ ಅಧಿಕಾರಕ್ಕೆ ಹತ್ತಿರವಿದ್ದರು. ಸಾರಸ್ವತರು ವಾಣಿಜ್ಯ ಮತ್ತು



ವ್ಯಾಪಾರವನ್ನು ಹೆಚ್ಚು ಕಡಿಮೆ ತಮ್ಮ ಏಕ ಸ್ವಾಮ್ಯವನ್ನಾಗಿಸಿಕೊಂಡರು. ಬಂಟರು ಪ್ರಬಲ ಭೂಮಾಲಿಕರಾದರು. ಸಾಮಾಜಿಕವಾಗಿ ಹಿಂದುಳಿದ ಜಾತಿಗಳ ಜನರು ಆರ್ಥಿಕವಾಗಿಯೂ ಹಿಂದುಳಿದಿರುವುದು ಭಾರತದ ಸನಾತನ ವ್ಯವಸ್ಥೆ. ತ್ರಿಮೂರ್ತಿ ಸಮುದಾಯಗಳನ್ನು ತಮ್ಮ ವಿಶ್ವಾಸಕ್ಕೆ ತೆಗೆದುಕೊಂಡ ಮೇಲೆ ಈಸ್ಟಿಂಡಿಯಾ ಕಂಪೆನಿಯದು ಎಲ್ಲಾ ಕ್ಷೇತ್ರಗಳಲ್ಲಿ ಮೈದಾನ ಸ್ಪರ್ಶವಾಯಿತು. ದ.ಕ ಜಿಲ್ಲೆಯಲ್ಲಿ ಸ್ಪಷ್ಟವಾಗಿ ಬ್ರಿಟಿಷರ ಪರ ಮತ್ತು ವಿರುದ್ಧವೆಂಬ ಎರಡು ವರ್ಗಗಳ ಸೃಷ್ಟಿಯಾಗಿ ವರ್ಗ ಸಂಘರ್ಷಕ್ಕೊಂದು ಅನುಕೂಲಕರ ವಾತಾವರಣ ನಿರ್ಮಾಣವಾಯಿತು.

೪.೩ ಉಪ್ಪು ಮತ್ತು ತಂಬಾಕು ಏಕಸ್ವಾಮ್ಯ

ಉಪ್ಪಿಗಿಂತ ರುಚಿಯಿಲ್ಲ ಎಂಬ ಗಾದೆಯ ಅಂತರ್ಯವನ್ನು ಅರಿತಿದ್ದ ಕಂಪೆನಿಯು ಕ್ರಿ.ಶ ೧೮೦೬ ರಲ್ಲಿ ಉಪ್ಪಿನ ಉತ್ಪಾದನೆ ಮತ್ತು ವಿತರಣೆಯ ಮೇಲೆ ಏಕಸ್ವಾಮ್ಯವನ್ನು ಹೊಂದಿ ತನ್ನ ಗಳಿಕೆಯನ್ನು ಹೆಚ್ಚಿಸಲು ಯತ್ನಿಸಿತು. ಉಪ್ಪು ಉತ್ಪಾದನೆಯನ್ನು ಸರಕಾರದಿಂದ ಪೂರ್ವಾನುಮತಿ ಪಡೆದವರು ಮಾತ್ರ ಮಾಡಬೇಕು ಮತ್ತು ಅದನ್ನು ಸರಕಾರಕ್ಕೆ ಅಥವಾ ಸರಕಾರದಿಂದ ನಿಯೋಜಿತರಾದವರಿಗೆ ಮಾತ್ರ ನಿಗದಿತ ಬೆಲೆಗೆ ಮಾರಾಟ ಮಾತ್ರ ಮಾಡಬೇಕಿತ್ತು.[೩೨] ನೀಲೇಶ್ವರ ಬೇಕಲ, ಕುಂಬಳೆ, ಮಂಜೇಶ್ವರ, ಉದ್ಯಾವರ, ಕಾವು ಮತ್ತು ಮೂಲ್ಕಿ ಉಪ್ಪು ತಯಾರಿಕೆಯ ಪ್ರಮುಖ ಕೇಂದ್ರಗಳಾಗಿದ್ದವು. (ಭೂಪಟ ೪.೨)

ಸರಕಾರವು ಉಪ್ಪಿನ ಕೋಠಿಗಳಿಗೆ ತಾನು ಕೊಂಡುದಕ್ಕಿಂತ ಹೆಚ್ಚಿನ ಬೆಲೆಗೆ ಉಪ್ಪನ್ನು ಮಾರಾಟ ಮಾಡುತ್ತಿತ್ತು. ಕೋಠಿಗಳ ವರ್ತಕರು ಸರಕಾರಕ್ಕೆ ಪಾವತಿಸಿದ ಬೆಲೆಗೆ ತಮ್ಮ ಲಾಭಾಂಶವನ್ನು ಸೇರಿಸಿ ಮಾರಾಟ ಬೆಲೆ ನಿಗದಿ ಮಾಡುತ್ತಿದ್ದರು. ಅದು ಉತ್ಪಾದಕರಿಗೆ ಸರಕಾರ ನೀಡುವ ಬೆಲೆಗಿಂತ ಎರಡೋ, ಮೂರೋ ಪಾಲು ಹೆಚ್ಚಾಗಿದ್ದರೆ ಅದರಲ್ಲಿ ಆಶ್ಚರ್ಯವೇನು ಇರಲಿಲ್ಲ.

ದ. ಕ. ಜಿಲ್ಲೆಯಲ್ಲಿ ಜನವರಿಯಿಂದ ಮೇ ತಿಂಗಳವರೆಗೆ ಅಸಾಧ್ಯ ಬಿಸಿಲಿರುವ ಸಂದರ್ಭದಲ್ಲಿ ಸಮುದ್ರದ ಅಥವಾ ಹಿನ್ನೀರಿನ ಸಮೀಪದಲ್ಲಿರುವ ವಿಶಾಲವಾದ ಹೊಲ ಗದ್ದೆಗಳಿಗೆ ಉಪ್ಪು ನೀರು ಹಾಯಿಸಿ ಪ್ರಖರ ಸೂರ್ಯ ರಶ್ಮಿಯಲ್ಲಿ ಒಣಗಿಸಿ ಉಪ್ಪನ್ನು ತಯಾರಿಸುವುದು ಅನೇಕ ಕುಟುಂಬಗಳ ವಂಶ ಪಾರಂಪರಿಕ ವೃತ್ತಿಯಾಗಿತ್ತು. ವಸಾಹತುಶಾಹಿ ಆಡಳಿತ ವ್ಯವಸ್ಥೆ ಜಾರಿಗೆ ಬಂದುದರಿಂದ ಉಪ್ಪು ತಯಾರಿಕೆಯ ಹಕ್ಕನ್ನು ನೊಂದಣಿ ಮಾಡಬೇಕಾದುದು ಅನಿವಾರ್ಯವಾಯಿತು. ಹಿನ್ನೀರು ಪ್ರದೇಶದ ವಿಶಾಲಗದ್ದೆಗಳಲ್ಲಿ

ಉತ್ಪಾದನೆಯಾಗುತ್ತಿದ್ದ ಉಪ್ಪನ್ನು ಮಾರಾಟ ಕೇಂದ್ರಕ್ಕೆ ಸಾಗಿಸುವ ಗುತ್ತಿಗೆಯನ್ನು ಬಹಿರಂಗ ಏಲಂನಿಂದ ನಿರ್ಧರಿಸಲಾಗುತ್ತಿತ್ತು. ಅತೀ ಹೆಚ್ಚು ಮೊತ್ತದ ಹರಾಜು ಕೂಗಿದವನಿಗೆ ತಯಾರಿಕಾ ಕೇಂದ್ರದಿಂದ ಮಾರಾಟ ಕೇಂದ್ರಕ್ಕೆ ಉಪ್ಪನ್ನು ಸಾಗಿಸುವ ಗುತ್ತಿಗೆ ದೊರೆಯುತ್ತಿತ್ತು.[೩೩]

ವಸಾಹತುಶಾಹಿ ಆಡಳಿತದ ಆರಂಭದ ದಶಕದಲ್ಲಿ ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಉತ್ಪಾದನೆಯಾಗುತ್ತಿದ್ದ ಉಪ್ಪನ್ನು ಕೆನಾರ ಉಪ್ಪೆಂದು ಕರೆಯಲಾಗುತ್ತಿತ್ತು. ಅದರ ಗುಣಮಟ್ಟ ಉತ್ತಮವಾಗಿರಲಿಲ್ಲ. ಇವೆರಡು ಜಿಲ್ಲೆಗಳ ಉಪ್ಪಿನ ಬೇಡಿಕೆಯು ಜಿಲ್ಲೆಯಲ್ಲಿ ಉತ್ಪಾದನೆಯಾಗುತ್ತಿದ್ದ ಉಪ್ಪಿಗಿಂತ ಅಧಿಕವಿದ್ದುದರಿಂದ ಗೋವಾ ಉಪ್ಪು ಮತ್ತು ಮುಂಬೈ ಉಪ್ಪು ಈ ಜಿಲ್ಲೆಗೆ ಕಳ್ಳ ಸಾಗಾಟವಾಗುತ್ತಿತ್ತು. ಉಪ್ಪು ಅವಶ್ಯಕ ಸರಕಾದುದರಿಂದ ಅದರ ಮೇಲೆ ಸುಂಕ ಹೇರುವ ಯೋಜನೆ ಕಂಪೆನಿ ಸರಕಾರಕ್ಕಿತ್ತು. ಆದರೆ ಉಪ್ಪಿನ ಉತ್ಪಾದನಾ ಕೇಂದ್ರ ಮತ್ತು ಮಾರಾಟ ಕೇಂದ್ರದ ನಡುವಣ ಅಂತರವನ್ನು ಪರಿಗಣಿಸಿದ ಮೇಲೆ ಸುಂಕದ ಬದಲು ಉಪ್ಪಿನ ಮೇಲೆ ನಿಯಂತ್ರಣವನ್ನು ಹೊಂದುವುದು ಉತ್ತಮವೆಂದು ಭಾವಿಸಿದ ಕಂಪೆನಿ ಸರಕಾರ ಕ್ರಿಶ.೧೮೦೭ರಲ್ಲಿ ದ. ಕ. ಜಿಲ್ಲೆಯಲ್ಲಿ ಉಪ್ಪಿನ ಏಕಸ್ವಾಮ್ಯವನ್ನು ತನ್ನದಾಗಿಸಿಕೊಂಡಿತು.[೩೪]

ಉಪ್ಪಿನ ಏಕಸ್ವಾಮ್ಯವನ್ನು ತಾನು ಹೊಂದಿದ ಮೇಲೆ ಸರಕಾರ ಅದರ ಕೊಳ್ಳುವ ಮತ್ತು ಮಾರುವ ಬೆಲೆಯನ್ನು ತಾನೇ ನಿಗದಿ ಮಾಡತೊಡಗಿತು. ಅದರ ವಿವರ ಕೋಷ್ಟಕ ೪.೩ ರಲ್ಲಿದೆ. ಕ್ರಿ.ಶ. ೧೮೦೨ ರಲ್ಲಿ ಕಂಪೆನಿ ಸರ್ಕಾರವು ಉಪ್ಪಿನ ಏಕಸ್ವಾಮ್ಯ ಬೆಲೆಯನ್ನು ಗರ್ಸೆಗೆ ರೂ.೨೦ ಎಂದು ನಿಗದಿ ಮಾಡಿತು.೧೮೦೯ರ ನವೆಂಬರಲ್ಲಿ ಅದನ್ನು ರೂ.೧೦೫ ಕ್ಕೆ ಏರಿಸಲಾಯಿತು. ಕಂದಾಯ ನಿರ್ವಹಣೆಯ ಅಸಮರ್ಪಕತೆಯಿಂದಾಗಿ ೧೮೨೦ ರಲ್ಲಿ ಅದನ್ನು ರೂ. ೨೦ ಕ್ಕೆ ಇಳಿಸಬೇಕಾದ ಅನಿವಾರ್ಯತೆ ತಲೆದೋರಿತು. ಪರಿಣಾಮವಾಗಿ ಆದಾಯದಲ್ಲಿ ಇಳಿಕೆಯಾದುದರಿಂದ ಮರುವರ್ಷ ಅದನ್ನು ರೂ.೧೦೫ ಕ್ಕೆ ಏರಿಸಲಾಯಿತು. ಕ್ರಿ. ಶ.೧೮೪೪ ರವರೆಗೂ ಇದೇ ಏಕಸ್ವಾಮ್ಯ ಬೆಲೆ ಉಳಕೊಂಡಿತ್ತು.[೩೫] ಸರಕಾರದ ತಾನು ಕೊಂಡುದಕ್ಕಿಂತ ಇಮ್ಮಡಿ ಬೆಲೆಯಲ್ಲಿ ಉಪ್ಪನ್ನು ಮಾರಾಟ ಮಾಡಿ ತನ್ನ ಬೊಕ್ಕಸವನ್ನು ತುಂಬಿಸಿಕೊಂಡಿತು. ಉಪ್ಪಿನ ಬೆಲೆ ಏರಿಕೆಯು ೧೮೩೭ ರ ಕೊಡಗು ಕೆನರಾ ಬಂಡಾಯದಲ್ಲಿ ಬಹಳ ಪ್ರಾಮುಖ್ಯವಾದ ಪಾತ್ರ ವಹಿಸಿತು.

ಕೋಷ್ಟಕ ೪. ೩ ಉಪ್ಪಿನ ಕೊಳ್ಳುವ ಬೆಲೆ ಮತ್ತು ಮಾರಾಟ ಬೆಲೆ

೧ ಸ್ಟಾರ್ ಪಗೋಡ = ೩.೫೦ ರೂಪಾಯಿ (ಬಹದ್ದೂರಿ= ೪ರೂ)

ಉಪ್ಪು	ಕೊಳುವ್ವ ಬೆಲೆ	ಮಾರಾಟ ಬೆಲೆ	ಅಂತರ
ಕೆನರಾ ಉಪ್ಪು(ಗೆರಸೆಗೆ)	೮.೦ ಸ್ಟಾರ್ ಪಗೋಡ(ರೂ. ೨೮)	೨೦ ಸ್ಟಾರ್ ಪಗೋಡ (ರೂ.೭೦)	೧೨ ಸ್ಟಾರ್ ಪಗೋಡ (ರೂ.೪೨)
ಗೋವಾ ಉಪ್ಪು(ಗೆರಸೆಗೆ)	೮.೫೦ ಸ್ಟಾರ್ ಪಗೋಡ (ರೂ.೩.೨)	೨೨ ಸ್ಟಾರ್ ಪಗೋಡ (ರೂ.೭೭)	೧೩.೫೦ ಸ್ಟಾರ್ ಪಗೋಡ(ರೂ.೪೬.೭೫ಪೈ)
ಮುಂಬೈ ಉಪ್ಪು(ಗೆರಸೆಗೆ)	೧೧.೫೦ ಸ್ಟಾರ್ ಪಗೋಡ (ರೂ.೪೦.೨೫)	೨೪ ಸ್ಟಾರ್ ಪಗೋಡ (ರೂ.೮೪)	೧೩.೫೦ ಸ್ಟಾರ್ ಪಗೋಡ (ರೂ.೪೬.೭೫ ಪೈ)

ಆಧಾರ : ಮಾಲತಿ ಮೂರ್ತಿ, ೧೯೯೧


ಸರಕಾರಕ್ಕೆ ೧೮೧೭ರಿಂದ ೨೦ರವರೆಗೆ ಉಪ್ಪಿನ ಏಕಸ್ವಾಮ್ಯದಿಂದ ಬಂದ ಗಳಿಕೆಯ ವಿವರ ಅದರ ಆಡಳಿತ ಸಾಮರ್ಥ್ಯಕ್ಕೆ ಕನ್ನಡಿ ಆಗಿದೆ. (ಕೋಷ್ಟಕ ೪.೪)

ಕೋಷ್ಟಕ ೪. ೪ ಉಪ್ಪಿನ ಏಕಸ್ವಾಮ್ಯದಿಂದ ಆದಾಯ

ವರ್ಷ	ಒಟ್ಟು ಆದಾಯ	ಒಟ್ಟು ವೆಚ್ಚ	ನಿವ್ವಳ ಆದಾಯ
೧೮೧೭ – ೧೮	ರೂ. ೨,೨೬,೮೦೮	ರೂ. ೭೬,೯೫೭	ರೂ. ೧,೪೯,೮೫೧
೧೮೧೭ – ೧೯	ರೂ. ೨,೧೭,೩೪೩	ರೂ. ೮೮,೫೫೩	ರೂ. ೧,೨೮,೭೯೦
೧೮೧೯ – ೨೦	ರೂ. ೨,೦೮,೬೪೫	ರೂ. ೫೮,೦೯೦	ರೂ. ೧,೫೦,೫೫೫

ಆಧಾರ: PMBR. Vol.1159

೪.೨. ದ.ಕ.ದ ಉಪ್ಪು ಕೇಂದ್ರಗಳು



ಕ್ರಿ. ಶ. ೧೮೧೭ – ೧೮ರಲ್ಲಿ ಉಪ್ಪಿನ ಏಕಸ್ವಾಮ್ಯ ವೆಚ್ಚಕ್ಕಿಂತ ಏಕಸ್ವಾಮ್ಯ ಆದಾಯವು ಸುಮಾರು ಮೂರು ಪಾಲು ಅಧಿಕವಿತ್ತು. ೧೮೯ – ೨೦ ರಲ್ಲಿ ಅದು ಸುಮಾರು ನಾಲ್ಕುಪಾಲು ಹೆಚ್ಚಾಯಿತು. ಇಷ್ಟೊಂದು ಆದಾಯ ಬರುತ್ತಿದ್ದುದು ಕಂಪೆನಿ ಸರಕಾರದ 'ವಸಾಹತಿನ ಸುಲಿಗೆಯಿಂದ ಶೇರುದಾರರ ಹಿತರಕ್ಷಣೆ' ಎಂಬ ಉದ್ದೇಶದ ಯಶಸ್ಸನ್ನು ತಿಳಿಯಪಡಿಸುತ್ತದೆ.

ತಂಬಾಕಿನ ಏಕಸ್ವಾಮ್ಯ ನಿಯಂತ್ರಣ ಕಾಯಿದೆ ಜಾರಿಗೆ ಬಂದದ್ದು ಕ್ರಿ. ಶ. ೧೮೦೮ ರಲ್ಲಿ ಆಗಿನ ಜಿಲ್ಲಾಧಿಕಾರಿ ರೆವೆನ್ ಶಾ ನಿಂದಾಗಿ. ತಂಬಾಕನ್ನು ವಿವಿಧ ರೂಪಗಳಲ್ಲಿ ಸೇವನೆ ಮಾಡುವುದು ಎಲ್ಲಾ ಜನ ಸಮುದಾಯಗಳ ಸನಾತನ ಅಭ್ಯಾಸವಾಗಿದ್ದುದರಿಂದ ಅದರ ಮೇಲೆ ನಿಯಂತ್ರಣ ಸಾಧಿಸಿ ಕಂಪೆನಿ ಸರಕಾರ ತನ್ನ ಗಳಿಕೆಯನ್ನು ಹೆಚ್ಚಿಸುವ ಪ್ರಾಮಾಣಿಕ ಪ್ರಯತ್ನವನ್ನು ವಸಾಹತುಶಾಹಿ ಉದ್ದೇಶಗಳಿಗನುಗುಣವಾಗಿ ಸಹಜವಾಗಿ ಮಾಡಿತು. ದ. ಕ. ಜಿಲ್ಲೆಯ ಬೇಕಲ ಪ್ರಾಂತ್ಯದಲ್ಲಿ ಮಾತ್ರವೇ ಬೆಳೆಯುತ್ತಿದ್ದ ಈ ತಂಬಾಕು ಜಿಲ್ಲೆಯ ಬಹುತೇಕ ಜನರ ಅವಶ್ಯಕ ಅನುಭೋಗಿ ಸರಕಾದುದರಿಂದ ತನ್ನ ಉದ್ದೇಶ ಸಾಧನೆಯಲ್ಲಿ ಸಂಪೂರ್ಣ ಯಶಸ್ಸನ್ನು ಕಾಣುವ ಭರವಸೆ ಕಂಪೆನಿ ಸರಕಾರಕ್ಕಿದ್ದುದರಲ್ಲಿ ಆಶ್ಚರ್ಯವೇನಿರಲಿಲ್ಲ. ತಂಬಾಕು ಬೆಳೆಯಲು ಲೈಸೆನ್ಸು ಪಡೆಯಬೇಕೆಂಬ ಕಾನೂನು ಕ್ರಿ. ಶ. ೧೮೧೦ ರಲ್ಲಿ ಜಾರಿಗೆ ಬಂತು. ಸರಕಾರದ ಅನುಮತಿಯಿಲ್ಲದೆ ತಂಬಾಕನ್ನು ಜಿಲ್ಲೆಯ ಒಳಗೆ ಮತ್ತು ಹೊರಗೆ ಸಾಗಿಸುವಂತಿರಲಿಲ್ಲ. ತಂಬಾಕು ಕೊಳ್ಳುವುದನ್ನು ಮತ್ತು ಮಾರುವುದನ್ನು ಅಧಿಕೃತ ಲೆಕ್ಕ ಪುಸ್ತಕದಲ್ಲಿ ದಾಖಲಿಸಬೇಕಿತ್ತು. ಲೈಸೆನ್ಸ್ ಪಡೆದ ತಂಬಾಕು ಬೆಳೆಗಾರರು ರಖಂ ವ್ಯಾಪಾರಿಗಳಿಗೆ ಸರಕಾರ ನಿಗದಿ ಮಾಡಿದ ಬೆಲೆಗೆ ತಂಬಾಕನ್ನು ಮಾರಾಟ ಮಾಡುವುದು ಅನಿವಾರ್ಯವಾಗಿತ್ತು. ಅಮಲ್ದಾರುಗಳು ಜಿಲ್ಲಾಧಿಕಾರಿಗಳ ಪರವಾಗಿ ಏಕಸ್ವಾಮ್ಯ ಬೆಲೆಗೆ ತಂಬಾಕು ಕೊಂಡು ಮಂಗಳೂರು, ಬೇಕಲ, ಬಂಟವಾಳ ಮತ್ತು ಬಾರಕೂರುಗಳ ಕೋಠಿಗಳಲ್ಲಿ ಮಾರಾಟ ಮಾಡುತ್ತಿದ್ದರು.[೩೬] ತಂಬಾಕಿನ ಏಕಸ್ವಾಮ್ಯದಿಂದ ಸರಕಾರಕ್ಕೆ ಬಂದ ಆದಾಯವನ್ನು ಕೋಷ್ಟಕ ೪.೫ ತೋರಿಸುತ್ತದೆ.

ತಂಬಾಕು ಏಕಸ್ವಾಮ್ಯ ವೆಚ್ಚಕ್ಕಿಂತ ಆದಾಯವು ಸುಮಾರು ಎರಡೂವರೆ ಪಟ್ಟು ಹೆಚ್ಚಿತ್ತು. ರೈತಾಪಿ ವರ್ಗ ಉಪ್ಪಿನಷ್ಟೇ ಅವಶ್ಯಕ ಸರಕೆಂದು ತಂಬಾಕನ್ನು ಪರಿಗಣಿಸುತ್ತಿದ್ದ ಆ ದಿನಗಳಲ್ಲಿ ತಂಬಾಕು ಏಕಸ್ವಾಮ್ಯ ರೈತರಲ್ಲಿ ಪ್ರಬಲವಾದ ಪ್ರತಿರೋಧದ ಅಲೆಗಳನ್ನು ಎಬ್ಬಿಸಿದ್ದರಲ್ಲಿ ಯಾವ ಆಶ್ಚರ್ಯವೂ ಇರಲಿಲ್ಲ.

ಕೋಷ್ಟಕ ೪. ೫ ತಂಬಾಕಿನ ಏಕಸ್ವಾಮ್ಯದ ಆದಾಯ

ವರ್ಷ	ಒಟ್ಟು ಆದಾಯ	ಒಟ್ಟು ವೆಚ್ಚ	ನಿವ್ವಳ ಆದಾಯ
೧೮೧೭ – ೧೮	ರೂ. ೨,೧೫,೫೬೬	ರೂ. ೭೨,೬೮೫	ರೂ. ೧,೪೨,೫೮೧
೧೮೧೯ – ೨೦	ರೂ. ೨,೩೨,೪೨೧	ರೂ. ೮೮,೭೪೧	ರೂ. ೧,೪೩,೬೮೦

ಆಧಾರ : PMBR, 159 -1831, Vol- No. 1300

೧೭೯೯ ರಿಂದ ೧೮೪೦ರವರೆಗಿನ ಅವಧಿಯಲ್ಲಿ ದ. ಕ ಜಿಲ್ಲೆಯ ಒಟ್ಟು ಕಂದಾಯದಲ್ಲಿ ಉಪ್ಪು ಮತ್ತು ಹೊಗೆ ಸೊಪ್ಪಿನ ಪಾಲು ಎಷ್ಟೆಂಬುದನ್ನು ಕೋಷ್ಟಕ ೪. ೬ ತೋರಿಸುತ್ತದೆ.


ಕೋಷ್ಟಕ ೪.೬ ಒಟ್ಟು ಕಂದಾಯದಲ್ಲಿ ಉಪ್ಪು/ ತಂಬಾಕು ಏಕಸ್ವಾಮ್ಯದ ಪಾಲು (ಸರಾಸರಿ)

ವರ್ಷ	ಒಟ್ಟು ಕಂದಾಯ (೨)	ಉಪ್ಪಿನ ಏಕಸ್ವಾಮ್ಯ (೩)	ತಂಬಾಕು ಏಕಸ್ವಾಮ್ಯ (೪)	೨ರಲ್ಲಿ ೩ ಮತ್ತು೪ ರ ಪಾಲು
೧೭೯೯–೧೮೦೫	ರೂ.೧೩,೬೦,೧೮೯	———	ರೂ. ೯೨೩೬೮	———
೧೮೦೬–೧೦	ರೂ.೧೩,೬೦,೨೪೦	ರೂ. ೯೫,೧೪೦	ರೂ. ೧,೧೨,೪೮೦	೧೫. ೨೫%
೧೮೧೧–೧೫	ರೂ. ೧೩,೧೫,೩೩೮	ರೂ. ೧,೦೩,೨೧೩	ರೂ. ೧,೦೩,೭೧೧	೧೫. ೭೨%
೧೮೧೬–೨೦	ರೂ. ೧೧,೬೭,೨೪೩	ರೂ. ೮೯,೬೦೬	ರೂ. ೧,೩೧,೪೨೭	೧೮. ೯೨%
೧೮೨೧–೨೫	ರೂ. ೧೨,೫೮,೯೬೮	ರೂ. ೬೦,೯೦೧	ರೂ. ೧,೪೦,೫೮೮	೧೫. ೯೯%
೧೮೨೭–೩೦	ರೂ. ೧೩,೧೦,೯೨೭	ರೂ. ೧,೨೪,೮೮೭	ರೂ. ೧,೪೦,೨೨೮	೨೦. ೨೧%
೧೮೩೧–೩೪	ರೂ. ೧೨,೪೧,೯೯೮	ರೂ. ೧,೬೯,೧೨೧	ರೂ. ೧,೨೨,೬೮೦	೨೩. ೪೮%
೧೮೩೫–೩೭	ರೂ. ೧೪,೦೯,೬೭೬	ರೂ. ೧,೩೮,೨೪೦	ರೂ. ೧,೭೨,೧೯೯	೨೨. ೦೧%

ಆಧಾರ :PMBR, 15-9-1831,Vol. 1300


ಕ್ರಿ.ಶ. ೧೭೯೯ ರಿಂದ ೧೮೩೭ ರವರೆಗಿನ ಅವಧಿಯಲ್ಲಿ ದ. ಕ ಜಿಲ್ಲೆಯ ಒಟ್ಟು ಕಂದಾಯದಲ್ಲಿ ತುಂಬಾ ಏರಿಕೆಗಳು ಆಗಿರಲಿಲ್ಲ. ತೀರಾ ಅಸಮರ್ಪಕವಾದ ಮತ್ತು ಅಪೂರ್ಣವಾದ ಮಾಹಿತಿಗಳನ್ನು ಹೊರತುಪಡಿಸಿದರೆ ೧೮೩೪ರವರೆಗೆ ಉಪ್ಪಿನ ಏಕಸ್ವಾಮ್ಯದ

ಆದಾಯ ಬಹುತೇಕವಾಗಿ ಏರುತ್ತಾ ಹೋದದ್ದನ್ನು ಗಮನಿಸಬಹುದು.ತಂಬಾಕಿನ ಏಕಸ್ವಾಮ್ಯದ ಆದಾಯ ೧೮೩೦ ರವರೆಗೆ ಹೆಚ್ಚುತ್ತಾ ಹೋಗಿ ೧೮೩೧ ರಿಂದ ೧೮೩೪ರ ಅವಧಿಯಲ್ಲಿ ಇಳಿಕೆಯಾಗಿ ೧೮೩೫-೩೭ ರ ಅವಧಿಯಲ್ಲಿ ಮತ್ತೆ ಏರಿಕೆಯಾದುದನ್ನು ಕಾಣಬಹುದು. (ಚಿತ್ರ ೪. ೩)



ಚಿತ್ರ ೪.೩ ಒಟ್ಟು ಕಂದಾಯದಲ್ಲಿ ಉಪ್ಪು ಮತ್ತು ತಂಬಾಕು ಏಕಸ್ವಾಮ್ಯದ ಪಾಲು

ಕ್ರಿ. ಶ. ೧೮೦೬ ರಿಂದ ಕ್ರಿ. ಶ. ೧೮೩೪ ರವರೆಗೆ ಉಪ್ಪಿನ ಏಕಸ್ವಾಮ್ಯದ ಪಾಲು (೧೮೧೬- ೨೦ ರ ಅವಧಿಯಲ್ಲಿ ಬಿಟ್ಟರೆ) ಒಟ್ಟು ಕಂದಾಯದಲ್ಲಿ ಏರುತ್ತಾ ಹೋಗಿರುವುದನ್ನು ಕಾಣಬಹುದು. ೧೮೦೬ – ೧೦ ರ ಅವಧಿಯಲ್ಲಿ ಅದು ಶೇ. ೭ರಷ್ಟಿದ್ದದು. ಕ್ರಿ. ಶ. ೧೮೩೧ – ೩೫ರ ಅವಧಿಯಲ್ಲಿ ಶೇ.೧೩.೬ಕ್ಕೇರಿರುವುದು ಕಂಡು ಬರುತ್ತದೆ. ಕ್ರಿ.ಶ. ೧೮೦೬ ರಿಂದ ೧೮೩೪ ರ ಅವಧಿಯಲ್ಲಿ ತಂಬಾಕಿನ ಆದಾಯ (೧೮೩೧-೩೪ರ ಅವಧಿಯನ್ನು ಹೊರತುಪಡಿಸಿದರೆ) ಉಳಿದೆಲ್ಲಾ ಕಾಲಘಟ್ಟದಲ್ಲಿ ಏರಿಕೆಯಾಗಿರುವುದನ್ನು ಗಮನಿಸಬಹುದು. ಕ್ರಿ.ಶ.೧೮೦೫ರಲ್ಲಿ ಒಟ್ಟು



ಕಂದಾಯದಲ್ಲಿ ತಂಬಾಕಿನ ಆದಾಯದ ಪಾಲು ಶೇ.೬.೮ ರಷ್ಟಿದ್ದುದು ಕ್ರಿ. ಶ. ೧೮೩೭ರಲ್ಲಿ ಶೇ. ೧೨.೨೧ರಷ್ಟಾಗಿತ್ತು. ಕ್ರಿ.ಶ. ೧೮೧೬-೨೦ರ ಅವಧಿಯಲ್ಲಿ ಉಪ್ಪಿನ ಏಕಸ್ವಾಮ್ಯದ ಆದಾಯ ಕುಸಿದುದೇಕೆ ಎಂಬುದಕ್ಕೆ ಸಮರ್ಪಕ ಕಾರಣಗಳು ದೊರೆಯುತ್ತಿಲ್ಲ. ಕ್ರಿ. ಶ. ೧೮೩೧ -೩೪ ರ ಅವಧಿಯಲ್ಲಿನ ಕೂಟು ದಂಗೆಯ ಪರಿಣಾಮ ತಂಬಾಕಿನ ಏಕಸ್ವಾಮ್ಯದ ಆದಾಯದ ಇಳಿಕೆಗೆ ಕಾರಣವಾಗಿರಬಹುದಾದ ಸಂಭವವಿದೆ.

ಉಪ್ಪು ಮತ್ತು ಹೊಗೆಸೊಪ್ಪು ಏಕಸ್ವಾಮ್ಯದಿಂದ ಸರಕಾರ ಸಾಕಷ್ಟು ಆದಾಯವನ್ನು ನಿರೀಕ್ಷೆ ಮಾಡಿತ್ತು. ಈ ನಿರೀಕ್ಷೆ ಸುಳ್ಳಾಗಲಿಲ್ಲ ಎನ್ನುವುದಕ್ಕೆ ಈವರೆಗಿನ ವಿಶ್ಲೇಷಣೆ ಸಾಕ್ಷಿಯಾಗಿದೆ. ಆರಂಭಿಕ ಹಂತದಲ್ಲಿ ಇವೆರಡು ಸರಕುಗಳ ಆದಾಯವು ಜಿಲ್ಲೆಯ ಒಟ್ಟು ಕಂದಾಯದಲ್ಲಿ ಶೇ. ೧೫ರಷ್ಟು ಪಾಲನ್ನು ಹೊಂದಿದ್ದವು. ಕಾಲಕ್ರಮೇಣ ಒಟ್ಟು ಕಂದಾಯದಲ್ಲಿ ಇವುಗಳ ಪಾಲು ಸುಮಾರು ಕಾಲು ಭಾಗದಷ್ಟು ಏರಿತ್ತು ಎನ್ನುವುದು ವಸಾಹತುಶಾಹಿ ಕಂದಾಯ ವ್ಯವಸ್ಥೆಯಲ್ಲಿ ಇವುಗಳ ಮಹತ್ವವನ್ನು ವಸಂತದ ಸೂರ್ಯ ರಶ್ಮಿಯಷ್ಟು ಪ್ರಖರವಾಗಿ ತಿಳಿಯಪಡಿಸುತ್ತದೆ.

೪. ೪ ಇತರ ತೆರಿಗೆಗಳು

ದ. ಕ. ಜಿಲ್ಲೆಯಲ್ಲಿ ತಾಳೆ ಮತ್ತು ತೆಂಗಿನ ಮರಗಳಿಂದ ಕಳ್ಳು ತೆಗೆಯುವುದು ಬಿಲ್ಲವ ಗಂಡಸರ ಒಂದು ಸಾಂಪ್ರದಾಯಿಕ ವೃತ್ತಿಯಾಗಿತ್ತು. ಇದಕ್ಕೆ ಈ ಜಾತಿಯ ಜನಗಳು ಕಡಿಮೆ ಭೂಮಿಯನ್ನು ಹೊಂದಿರುವುದು ಕಾರಣವೆಂದು ಜಿಲ್ಲಾಧಿಕಾರಿ ರೆವೆನ್‌ಷಾ ವರದಿ ಮಾಡಿದ್ದ.[೩೭] ವಸಾಹತುಶಾಹಿ ಆಳ್ವಿಕೆಯ ಬಳಿಕ ಕ್ರಿ. ಶ. ೧೮೦೩ ರಲ್ಲಿ ಸರಕಾರ ಕಳ್ಳು ತೆಗೆಯುವುದನ್ನು ನಿಯಂತ್ರಣಕ್ಕೊಳಪಡಿಸಿ ಅಬಕಾರಿ ಲೈಸನ್ಸ್ ನೀಡಿಕೆಯನ್ನು ಜಾರಿಗೆ ತಂದಿತು. ತೆಂಗು ಮತ್ತು ಈಚಲ ತೋಟಗಳನ್ನು ಹರಾಜಿನಲ್ಲಿ ಪಡೆದು ಕಳ್ಳು ತೆಗೆಯುವುದು ಅನಿವಾರ್ಯವಾಗಿತ್ತು. ಅದೇ ವರ್ಷ ಸರಾಯಿ ತಯಾರಿ ಮತ್ತು ಮಾರಾಟದ ಮೇಲೂ ತೆರಿಗೆ ಹೇರಲಾಯಿತು. ಕೋಷ್ಟಕ ೪. ೭ ಒಟ್ಟು ಕಂದಾಯದಲ್ಲಿ ಅಬಕಾರಿಯ ಪಾಲನ್ನು ತೋರಿಸುತ್ತದೆ.

ಕೋಷ್ಟಕ ೪. ೭ ಒಟ್ಟು ಕಂದಾಯದಲ್ಲಿ ಅಬಕಾರಿಯ ಪಾಲು (ಸರಾಸರಿ)

ವರ್ಷ	ಅಬಕಾರಿ ಆದಾಯ	ಒಟ್ಟು ಕಂದಾಯ	ಒಟ್ಟು ಕಂದಾಯದಲ್ಲಿ ಅಬಕಾರಿಯ ಪಾಲು
೧೭೯೯-೧೮೦೫	ರೂ. ೨೫,೨೮೧	ರೂ. ೧೩,೬೦,೧೮೯	೧.೮೫%
೧೮೦೬-೧೦	ರೂ. ೨೪,೧೬೪	ರೂ. ೧೩,೬೦,೨೪೦	೧.೭೭%
೧೮೧೧-೧೫	ರೂ. ೨೪,೮೪೯	ರೂ. ೧೩,೧೫,೩೩೮	೧.೮೧%
೧೮೧೬-೨೦	ರೂ. ೨೩,೨೪೮	ರೂ.೧೧,೬೭,೨೪೩	೧.೯೯%
೧೮೨೧-೨೫	ರೂ. ೨೫,೯೮೧	ರೂ. ೧೨,೫೮,೯೬೮	೨.೦೬%
೧೮೨೭-೩೦	ರೂ. ೩೦,೭೧೩	ರೂ. ೧೩,೧೦,೯೨೭	೨.೩೪%
೧೮೩೧-೩೪	ರೂ. ೨೫,೫೮೬	ರೂ. ೧,೨೪೧,೯೯೮	೨.೨೨%
೧೮೩೫-೧೮೪೦	ರೂ. ೨೭,೯೬೫	ರೂ. ೧೪,೦೯,೬೭೬	೧.೯೮%

ಆಧಾರ: PMBR, ಮದ್ರಾಸು ಪತ್ರಾಗಾರ

ಟಿಪ್ಪುವಿನ ಕಾಲದಲ್ಲಿ ದ. ಕ ಜಿಲ್ಲೆಯಲ್ಲಿ ಶರಾಬು–ಕಳ್ಳುಗಳ ಉತ್ಪಾದನೆ ಮತ್ತು ಮಾರಾಟವನ್ನು ನಿಷೇಧಿಸಲಾಗಿತ್ತು. ಟಿಪ್ಪುವಿಗೆ ಜನರ ಆರೋಗ್ಯ ಮತ್ತು ಉಳಿತಾಯಗಳ ಬಗ್ಗೆ ಇದ್ದ ಕಾಳಜಿಗೆ ಅದು ನಿದರ್ಶನವಾಗಿರುವಂತೆ ಕಾಣುತ್ತದೆ. ಆದರೆ ವಸಾಹತುಶಾಹಿ ವ್ಯವಸ್ಥೆ ಎಲ್ಲಾ ಮೂಲಗಳಿಂದ ಕಂದಾಯ ಹೆಚ್ಚಳಕ್ಕೆ ಮಹತ್ವ ನೀಡಿರುವುದರಿಂದ ಶರಾಬು - ಕಳ್ಳು ಉತ್ಪಾದನೆ ಮತ್ತು ಮಾರಾಟದ ನಿಷೇಧವನ್ನು ಸಂಪೂರ್ಣವಾಗಿ ತೆಗೆದುಹಾಕಿತ್ತು. ತಾಳೆ ಮರ ಮತ್ತು ತೆಂಗಿನ ಮರದ ಕಳ್ಳು ತಯಾರಿಕೆಗೆ ಬ್ರಿಟಿಷರು ವಿಶೇಷ ಉತ್ತೇಜನ ನೀಡಿದರು. ಅವುಗಳೊಂದಿಗೆ ವಿದೇಶಿ ಸ್ಪಿರಿಟ್ ಮಾರಾಟ ಮಾಡಲು ಅನುಮತಿ ಕೊಟ್ಟರು.

ಕ್ರಿ. ಶ. ೧೮೦೮ ರಲ್ಲಿ ಕಂಪೆನಿ ಸರಕಾರ ಈ ಜಿಲ್ಲೆಯಲ್ಲಿ ಸ್ಟ್ಯಾಂಪ್ ಪೇಪರ್ ಶುಲ್ಕವನ್ನು ಮೊದಲ ಬಾರಿಗೆ ಜಾರಿಗೆ ತಂದಿತ್ತು. ಈ ಪ್ರದೇಶದ ಜನರು ಅಂತದ್ದೊಂದು ಶುಲ್ಕದ ಬಗ್ಗೆ ಕೇಳಿಯೂ ಇರಲಿಲ್ಲ. ಸ್ಟ್ಯಾಂಪು ಪೇಪರ್ ಜಾರಿಗೆ ಬಂದ ಬಳಿಕ ಒಪ್ಪಂದಗಳಿಗೆ, ವ್ಯವಹಾರಗಳಿಗೆ ಆಸ್ತಿಯ ಭೋಗ್ಯ ಮತ್ತು ಅಡಮಾನಗಳಿಗೆ ಸ್ಟ್ಯಾಂಪ್ ಶುಲ್ಕವನ್ನು ಕೊಡುವುದು ಅನಿವಾರ್ಯವಾಯಿತು. ಬಾಂಡುಗಳ, ವಚನ ಪತ್ರಗಳ, ಹುಂಡಿಗಳ ವ್ಯವಹಾರದಲ್ಲಿ ಶುಲ್ಕ ಪಾವತಿಸಿ ಸ್ಟ್ಯಾಂಪು ಪೇಪರುಗಳನ್ನು ಬಳಸುವ ಪದ್ಧತಿ ಜಾರಿಗೆ ಬಂದಿತು. ಇದರಿಂದ ವಸಾಹತುಶಾಹಿಗೆ ತುಂಬಾ ಆದಾಯ ಬಂದರೂ ಜನಸಾಮಾನ್ಯರ ಸಂಕಷ್ಟ ಅಧಿಕವಾಯಿತು.

ವಸಾಹತುಶಾಹಿ ಆಡಳಿತವು ಕ್ರಿ. ಶ. ೧೮೨೨-೨೩ರಲ್ಲಿ 'ಮುತುರ್ಪ', ಎಂಬ ಹೊಸತೊಂದು ತೆರಿಗೆ ಪದ್ಧತಿಯನ್ನು ಜಾರಿಗೊಳಿಸಿತು[೩೮] ಇದು ಗ್ರಾಮ ತೆರಿಗೆಗಳ ಮತ್ತು ಅನುಮತಿ ಪತ್ರ ತೆರಿಗೆಗಳ ಬದಲಿಗೆ ಬಂದ ವ್ಯವಸ್ಥೆಯಾಗಿತ್ತು. ಇಂತದೊಂದು ತೆರಿಗೆ ವಿಜಯನಗರದ ಕಾಲದಲ್ಲಾಗಲಿ, ಟಿಪ್ಪುವಿನ ಕಾಲದಲ್ಲಾಗಲಿ ಜಾರಿಯಲ್ಲಿರಲಿಲ್ಲ. ಅದು ಕೈ ಮಗ್ಗದವರ, ಬಡಗಿಗಳ, ಲೋಹದ ಕೆಲಸಗಾರರ ಮತ್ತು ಉತ್ಪಾದಕರ ಮೇಲೆ ಹೇರುವ ತೆರಿಗೆಯಾಗಿದ್ದು ಕ್ರಮ ಬದ್ಧತೆ ಇಲ್ಲದಿರುವುದು ಅದರ ಪ್ರಮುಖ ದೋಷವಾಗಿತ್ತು. ಜಮಾಬಂಧಿಯ ಕಾಲದಲ್ಲಿ ಭೂ ತೆರಿಗೆಯೊಡನೆ ಮುತುರ್ಪವನ್ನು ಪಟೇಲರುಗಳೇ ಸಂಗ್ರಹಿಸುತ್ತಿದ್ದರು. ಸಣ್ಣ ಪುಟ್ಟ ವೃತ್ತಿಪರರು ತೆರಿಗೆ ವ್ಯಾಪ್ತಿಗೆ ಒಳಪಟ್ಟದ್ದು ಮುತುರ್ಪದಿಂದಾಗಿ. ಹಾಗಾಗಿ ಅದು ಜನಸಾಮಾನ್ಯರ ನೋವಿಗೆ ಕಾರಣವಾಯಿತು.


ಬ್ರಿಟಿಷ್ ವಸಾಹತುಶಾಹಿಯು ಸಾಧ್ಯವಿರುವ ಎಲ್ಲಾ ಮೂಲಗಳಿಂದ ಕಂದಾಯ ಮತ್ತು ತೆರಿಗೆಯನ್ನು ಸಂಗ್ರಹಿಸುತ್ತಿತ್ತು. ವ್ಯಾಪಾರಿಗಳ, ಮೀನುಗಾರರ, ಹುರಿ ಹಗ್ಗ ತಯಾರಕರ, ನೇಯ್ಗೆಯವರ, ಕುಂಬಾರರ ಮತ್ತು ಕಮ್ಮಾರರ ಮೇಲೆ ಅದು ತೆರಿಗೆ ಹಾಕುತ್ತಿತ್ತು ಎಂಬುದಕ್ಕೆ ಕ್ರಿ. ಶ. ೧೮೧೪ರ ಮದರಾಸು ಕಂದಾಯ ಮಂಡಳಿಯ ನಡವಳಿಗಳು ಸಾಕ್ಷಿಯಾಗಿದೆ.[೩೯] ಇವುಗಳೊಂದಿಗೆ ಮನೆತೆರಿಗೆ, ಅಂಗಡಿತೆರಿಗೆ, ಉಗ್ರಾಣ ತೆರಿಗೆ, ಮೀನುಗಾರಿಕಾ ದೋಣಿಗಳ ಮೇಲೆ ತೆರಿಗೆ, ಅವಲಕ್ಕಿ ತಯಾರಕರ ಮೇಲೆ ತೆರಿಗೆ, ಬೆಲ್ಲ ತಯಾರಕರ ಮೇಲೆ ತೆರಿಗೆ, ವೀಳ್ಯದೆಲೆ ತೆರಿಗೆ, ಎತ್ತಿನ ಗಾಡಿಗಳ ಮೇಲೆ ತೆರಿಗೆ ಇತ್ಯಾದಿಯಾಗಿ ಸಾಧ್ಯವಿರುವ ಎಲ್ಲಾ ವಸ್ತುಗಳ ಮೇಲೆ ತೆರಿಗೆ ವಿಧಿಸಲಾಗುತ್ತಿತ್ತು.

೪. ೫ ಆಂತರಿಕ ವ್ಯಾಪಾರ

ವಸಾಹತುಶಾಹಿ ಆರ್ಥಿಕ ವ್ಯವಸ್ಥೆಯಲ್ಲಿ ವ್ಯಾಪಾರವು ಕಂದಾಯದ ಪ್ರಮುಖ ಮೂಲವಾಗಿತ್ತು. ಈಸ್ಟ್ ಇಂಡಿಯಾ ಕಂಪೆನಿಯು ಆದಾಯವನ್ನು ಭೂ ಕಸ್ಟಂಸ್ ಮತ್ತು ಸಮುದ್ರ ಕಸ್ಟಂಸ್ ಎಂದು ವಿಭಜಿಸಿತ್ತು. (ಭೂಪಟ ೪.೩) ವ್ಯಾಪಾರವೇ ಸಂಪತ್ತಿನ ಮೂಲವೆಂದು ಭಾವಿಸಿದ್ದ ವಾಣಿಜ್ಯ ಪಂಥೀಯರು ದೇಶಗಳು ಅನುಕೂಲಕರ ವ್ಯಾಪಾರ ಶಿಲ್ಕನ್ನು ಹೊಂದಿರಬೇಕು ಎಂದು ಪ್ರತಿಪಾದಿಸಿದ್ದರು.[೪೦] ವಸಾಹತುಗಳನ್ನು ಕಚ್ಚಾಸರಕುಗಳ ಮೂಲಗಳನ್ನಾಗಿ ಮತ್ತು ತಮ್ಮ ಉತ್ಪನ್ನಗಳ ಮಾರುಕಟ್ಟೆಗಳನ್ನಾಗಿ ಈಸ್ಟ್ ಇಂಡಿಯಾ ಕಂಪೆನಿ ಪರಿವರ್ತಿಸುವಾಗ ಈ ತರ್ಕ ಹಿನ್ನೆಲೆಯಲ್ಲಿದ್ದಂತೆ ಕಂಡುಬರುತ್ತದೆ.

ದ. ಕ. ದ ಭೌಗೋಳಿಕ ಪರಿಸ್ಥಿತಿ ಆಂತರಿಕ ವ್ಯಾಪಾರಕ್ಕೆ ಪ್ರತಿಕೂಲಕರವಾಗಿದ್ದುದರಿಂದ ಸಮುದ್ರ ವ್ಯಾಪಾರ ಹೆಚ್ಚಿನ ಮಹತ್ವ ಗಳಿಸಿತ್ತು. ಆದರೆ ಬ್ರಿಟಿಷರು ಈ ಜಿಲ್ಲೆಯನ್ನು ವಶಪಡಿಸಿಕೊಳ್ಳುವ ಮೊದಲೇ ಉತ್ತರ ಕನ್ನಡ, ಕೊಡಗು, ಮರಾಠ ರಾಜ್ಯ ಮತ್ತು ಮಲಬಾರಿನೊಡನೆ ಈ ಜಿಲ್ಲೆ ವ್ಯಾಪಾರ ಸಂಬಂಧಗಳನ್ನು ಇರಿಸಿಕೊಂಡಿತ್ತು. ಹೈದರ್ ಮತ್ತು ಟಿಪ್ಪು ಆಡಳಿತ ಕಾಲದಲ್ಲಿ ಮೈಸೂರು ಮತ್ತು ಬೆಂಗಳೂರಿನೊಡನೆ ವ್ಯಾಪಾರ ಸಂಬಂಧ ಬೆಳೆಯಿತು. ಮಂಜರಾಬಾದ್, ಸಂಪಾಜೆ, ಆಗುಂಬೆ, ಚಾರ್ಮಾಡಿ, ಹೊಸಂಗಡಿ, ಕೊಲ್ಲೂರುಗಳು ಪ್ರಮುಖ ವ್ಯಾಪಾರ ಮಾರ್ಗಗಳಾಗಿದ್ದವು. ಸೋಮೇಶ್ವರ, ಕೊಂಬಾರು, ಶಿಶಿಲ, ಬಿಸಿಲೆ ಮತ್ತು ಕಳಸ ಆಂತರಿಕ ವ್ಯಾಪಾರದ ಇತರ ಮಾರ್ಗಗಳಾಗಿದ್ದವು. ಸಾಗಾಟಕ್ಕೆ ತಲೆ ಹೊರೆ ಮತ್ತು ಎತ್ತಿನ ಗಾಡಿ ಬಳಕೆಯಾಗುತ್ತಿತ್ತು. ಮೋಟಾರು ವಾಹನಗಳು ಆಗಿನ್ನೂ ಬಳಕೆಗೆ ಬಂದಿರಲಿಲ್ಲ.[೪೧]

ಜಿಲ್ಲೆಯ ಆಂತರಿಕ ವ್ಯಾಪಾರದ ಸರಕು ಸಂಯೋಜನೆ ಹೀಗಿತ್ತು. (ನಕ್ಷೆ ೪.೩)



ನಕ್ಷೆ ೪. ೩ ದ. ಕ. ದ ಆಂತರಿಕ ವ್ಯಾಪಾರದ ಸಂಯೋಜನೆ

ಈ ಜಿಲ್ಲೆಯಿಂದ ಉಪ್ಪು, ಒಣ ಮೀನು, ತೆಂಗಿನಕಾಯಿ ಅಕ್ಕಿ ಬೇರೆ ಜಿಲ್ಲೆಗಳಿಗೆ ಭೂ ಹಾದಿಯ ಮೂಲಕ ನಿರ್ಯಾತವಾಗುತ್ತಿತ್ತು. ಹೊರ ಜಿಲ್ಲೆಗಳಿಂದ ಬಟ್ಟೆ ಬರೆ, ಧಾನ್ಯಗಳು, ಬೆಲ್ಲ, ಚಾ ಮತ್ತು ಕಾಫಿ ಹುಡಿ ಈ ಜಿಲ್ಲೆಗೆ ಆಯಾತವಾಗುತ್ತಿತ್ತು.[೪೨] ಆದರೆ ೧೮೯೯ ರಿಂದ ೧೯೩೭ ರ ವರೆಗಿನ ಅವಧಿಯಲ್ಲಿ ಆಂತರಿಕ ವ್ಯಾಪಾರದಲ್ಲಿ ಹೆಚ್ಚಿನ ಪ್ರಗತಿ ಕಂಡು ಬರುವುದಿಲ್ಲ.

ದ.ಕ. ಜಿಲ್ಲೆ ಹೈದರನ ಆಳ್ವಿಕೆಗೆ ಒಳಪಟ್ಟಾಗ ಆಂತರಿಕ ವ್ಯಾಪಾರ ತುಂಬಾ ಅಭಿವೃದ್ಧಿಯನ್ನು ಸಾಧಿಸಿತು. ಅವನು ಮುಕ್ತ ವ್ಯಾಪಾರ ನೀತಿಯನ್ನು ಅನುಸರಿಸಿದ ಕಾರಣ ಮಲಬಾರದ ಮಾಪಿಳ್ಳೆಗಳು, ಗೋವಾದ ಕೊಂಕಣಿಗಳು, ಗುಜರಾತಿನ ಶೇಟುಗಳು, ತೆಲುಗು ಕೋಮಟಿಗಳು, ತಮಿಳು ಚೆಟ್ಟಿಯಾರುಗಳು ಈ ಜಿಲ್ಲೆಗೆ ಬಂದು ಮಂಗಳೂರಿನ ಸುತ್ತಮುತ್ತ ನೆಲೆಸಿದರು. ಈಸ್ಟ್ ಇಂಡಿಯಾ ಕಂಪೆನಿ ಹೈದರನ ನೀತಿಯನ್ನು ಇನ್ನಷ್ಟು ನಾಜೂಕಾಗಿ ಅನುಷ್ಠಾನಗೊಳಿಸುವುದರೊಂದಿಗೆ, ಆಂತರಿಕ ವ್ಯಾಪಾರದ ಮೇಲೆ ಸುಂಕವನ್ನು ಹೇರಿತು. ಜಿಲ್ಲೆಯ ಪ್ರಮುಖ ಕೇಂದ್ರಗಳಲ್ಲಿ ವಾರದ ಸಂತೆಗಳು ನಡೆಯುವುದಕ್ಕೆ ಅನುಮತಿ ನೀಡಲಾಗಿತ್ತು. ಜಾನುವಾರುಗಳ ವಿನಿಮಯಕ್ಕಾಗಿ ಕುಲಕುಂದ ಜಾತ್ರೆ ನಡೆಯುತಿತ್ತು. ಕೃಷಿಯು ಶೇ. ೯೦ರಷ್ಟು ಜನರ ಜೀವನ ವೃತ್ತಿಯಾಗಿದ್ದುದರಿಂದ ಮತ್ತು ಎತ್ತಿನ ಬಂಡಿಗಳು ಪ್ರಮುಖ ಸಾರಿಗೆ ವಾಹನವಾಗಿದ್ದುದರಿಂದ ಜಾನುವಾರುಗಳಿಗೆ ವಿಶೇಷ ಬೇಡಿಕೆ ಇತ್ತು. ಕ್ರಿ. ಶ ೧೮೦೧ ರಲ್ಲಿ ಕುಲಕುಂದಕ್ಕೆ ಹತ್ತು ಸಾವಿರಕ್ಕಿಂತಲೂ ಅಧಿಕ ರಾಸುಗಳು ಬಂದಿದ್ದನ್ನು ದ. ಕ. ದ ಕಲೆಕ್ಟರ್ ರೆವೆನ್‌ಷಾ ವರದಿ ಮಾಡಿದ್ದಾನೆ.[೪೩]

ಆಗ ಕುಲಕುಂದಕ್ಕೆ ಕೊಡಗಿನಿಂದ ಕಡಮಕಲ್ಲು ಹಾದಿಯಾಗಿ ಮತ್ತು ಮೈಸೂರಿನಿಂದ ಬಿಸಿಲೆ ಹಾದಿಯಾಗಿ ರೈತರು ಬರುತ್ತಿದ್ದರು. ಆಂತರಿಕ ವ್ಯಾಪಾರವನ್ನು ಅಭಿವೃದ್ಧಿ ಪಡಿಸಲು ಆಗಿನ ಕಲೆಕ್ಟರ್ ರೆವೆನ್‌ಷಾ ಸೋಮೇಶ್ವರ, ಚಾರ್ಮಾಡಿ, ಶಿಶಿಲ, ಕೊಂಬಾರು, ಬಿಸಿಲೆ ಮತ್ತು ಕಳಸ ಘಾಟಿದಾರಿಗಳನ್ನು ಅಭಿವೃದ್ಧಿ ಪಡಿಸಬೇಕೆಂದು ಕಂದಾಯ ಮಂಡಳಿಗೆ ಪತ್ರ ಬರೆದಿದ್ದ.[೪೪]

ವಸಾಹತುಶಾಹಿ ಆಳ್ವಿಕೆಯ ಆರಂಭದಿಂದ ರೈತ ಬಂಡಾಯದವರೆಗಿನ ೩೮ ವರ್ಷಗಳ ಅವಧಿಯಲ್ಲಿ ಒಟ್ಟು ಕಂದಾಯದಲ್ಲಿ ನಿರಪೇಕ್ಷ ಏರಿಕೆ ಆದದ್ದು ಕಂಡು ಬರುತ್ತದೆ. ಭೂ ಕಸ್ಟಂಸ್ ಆರಂಭದಲ್ಲಿ ಹೆಚ್ಚಿದರೂ ಕೊನೆಯಲ್ಲಿ ಮತ್ತೆ ಕುಸಿದು ೧೮೨೫ರಲ್ಲಿ ಏರಿಕೆಯಾಗಿತ್ತು. ಆದರೆ ಆ ಬಳಿಕ ಭೂ ಕಸ್ಟಂಸ್ ಕಡಿಮೆಯಾದದನ್ನು ಗಮನಿಸಬಹುದು. ಆರಂಭದಲ್ಲಿ ಒಟ್ಟು ಕಂದಾಯದಲ್ಲಿ ಭೂ ಕಸ್ಟಂಸ್‌ನ ಪಾಲು ಶೇ. ೪.೦೫ ಇದ್ದದ್ದು ರೈತ ಬಂಡಾಯದ ಅವಧಿಯಲ್ಲಿ ಶೇ.೧.೩೮ ಕ್ಕೆ ಕುಸಿಯಿತು.

ವಸಾಹತು ಆಡಳಿತದ ಆರಂಭಿಕ ವರ್ಷಗಳಲ್ಲಿ ದ. ಕ. ಜಿಲ್ಲೆಯ ಒಟ್ಟು ಕಂದಾಯದಲ್ಲಿ ಭೂ ಕಸ್ಟಂಸ್‌ನ ಪಾಲು ಹೀಗಿತ್ತು. (ಕೋಷ್ಟಕ ೪.೮)

ಕೋಷ್ಟಕ ೪.೮ ಒಟ್ಟು ಕಂದಾಯದಲ್ಲಿ ಭೂ ಕಸ್ಟಂಸ್‌ನ ಪಾಲು (ಸರಾಸರಿ)

ವರ್ಷ	ಒಟ್ಟು ಕಂದಾಯ	ಭೂಕಸ್ಟಂಸ್	ಪಾಲು
೧೭೯೯-೧೮೦೫	ರೂ. ೩,೬೦,೧೮೯	ರೂ. ೫೫೧೧೦	೪.೦೫%
೧೮೦೬-೧೦	ರೂ. ೧೩,೬೦,೨೪೦	ರೂ. ೨೩,೪೬೮	೧.೭೨%
೧೮೧೧-೧೫	ರೂ. ೧೩,೧೫,೩೩೮	ರೂ. ೨೯,೭೧೮	೨.೨೫%
೧೮೧೬-೨೦	ರೂ. ೧೧,೬೭,೨೪೩	ರೂ. ೩೨,೭೨೫	೨.೮%
೧೮೨೧-೨೫	ರೂ. ೧೨,೫೮,೯೬೮	ರೂ. ೪೪,೯೫೧	೩.೫೭%
೧೮೨೭-೩೦	ರೂ. ೧೩,೧೦,೯೨೭	ರೂ. ೧೮,೪೨೨	೧.೪%
೧೮೩೧-೩೪	ರೂ. ೧೨,೪೧,೯೯೮	ರೂ. ೧೪,೬೪೮	೧.೧೭%
೧೮೩೫-೩೮	ರೂ. ೧೪,೦೯,೬೭೬	ರೂ. ೧೯,೫೫೭	೧.೩೮%

ಆಧಾರ:PMBR: 4-3-1847,No.2070

ಇದು ವಸಾಹತುಶಾಹಿ ವ್ಯವಸ್ಥೆಗೆ ಆಂತರಿಕ ವ್ಯಾಪಾರದಲ್ಲಿ ಯಾವುದೇ ಆಸಕ್ತಿ ಇರಲಿಲ್ಲ ಎನ್ನುವುದಕ್ಕೆ ದೃಷ್ಟಾಂತವಾಗಿದೆ. ದ.ಕ ಜಿಲ್ಲೆಯ ಸಾರಿಗೆ ಸಂಪರ್ಕ ವ್ಯವಸ್ಥೆಯ ಅಭಿವೃದ್ಧಿಗೆ ಕಂಪೆನಿ ಸರಕಾರ ೧೮೪೦ರವರೆಗೂ ಸ್ವಲ್ಪವೂ ಹಣ ಖರ್ಚು ಮಾಡಿದಂತೆ ಕಂಡು ಬರುವುದಿಲ್ಲ. ಸಾಮಾನ್ಯವಾಗಿ ವಸಾಹತುಶಕ್ತಿಗಳು ಸೈನ್ಯದ ಸಾಗಾಟಕ್ಕೆ ಮತ್ತು ವಾಣಿಜ್ಯ ಹಿತಾಸಕ್ತಿಗಾಗಿ ಸಾರಿಗೆ ಸಂಪರ್ಕ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಬೇಕಾಗುತ್ತದೆ. ಆದರೆ ಕ್ರಿ. ಶ. ೧೮೦೦-೧೮೩೦ ರವರೆಗಿನ ೩೦ ವರ್ಷಗಳ ಅವಧಿಯಲ್ಲಿ ಕಂಪೆನಿ ಸರಕಾರ ತನ್ನ ವಿರುದ್ಧ ನಡೆದ ದೇಶೀಯ ಬಂಡಾಯಗಳನ್ನು ಮಟ್ಟ ಹಾಕುವುದಕ್ಕೆ ದೊಡ್ಡ ಮೊತ್ತದ ಹಣವನ್ನು ಖರ್ಚು ಮಾಡಬೇಕಾಗಿ ಬಂತು. ಆದುದರಿಂದ ಅಭಿವೃದ್ಧಿ ಕಾರ್ಯಗಳಿಗೆ ಬಳಸಲು ಕಂಪೆನಿಗೆ ಹಣ ಇರಲಿಲ್ಲ.[೪೫]

ಹಾಗಾಗಿ ಜಿಲ್ಲೆಯಾದ್ಯಂತ ಸಂಚಾರಕ್ಕೆ ಯೋಗ್ಯವಾದ ಸಮರ್ಪಕ ರಸ್ತೆ ಇರಲಿಲ್ಲ. ಇದ್ದುದರಲ್ಲಿ ಮಂಗಳೂರು, ಕೋಟಾ ಮತ್ತು ಕುಂದಾಪುರ ರಸ್ತೆ ಉತ್ತಮವಾಗಿತ್ತು. ಆದರೆ ನಡುವೆ ಸಿಗುವ ನದಿಗಳಿಗೆ ಸೇತುವೆಗಳು ಇರಲಿಲ್ಲವಾಗಿ ಸಂಚಾರ ಸಮಸ್ಯಾದಾಯಕವಾಗಿತ್ತು. ಈ ಜಿಲ್ಲೆಯಲ್ಲಿ ಇಂಗ್ಲೆಂಡಿನ ಕೈಗಾರಿಕೆಗಳಿಗೆ ಬೇಕಾದ ಯಾವುದೇ ಕಚ್ಚಾ ಸರಕು ಲಭ್ಯವಿಲ್ಲದ ಕಾರಣ ರಸ್ತೆ ಸುಧಾರಣೆಗೆ ಕಂಪೆನಿ ಸರಕಾರ ಗಮನಹರಿಸಲಿಲ್ಲ. ಸಂಪಾಜೆ ಘಾಟಿಯನ್ನು ರಸ್ತೆ ಮಾಡಬೇಕೆಂಬ ಪ್ರಸ್ತಾಪಕ್ಕೆ ಅಮರ ಸುಳ್ಯ ಬಂಡಾಯ ನಡೆಯುವವರೆಗೂ ಬೆಲೆ ಬರಲಿಲ್ಲ. ಕ್ರಿ. ಶ. ೧೮೩೪ ರಲ್ಲಿ ಚಿಕ್ಕವೀರರಾಜನ ಪದಚ್ಯುತಿಯಾದುದಕ್ಕೆ ಪ್ರತಿಕ್ರಿಯೆಯಾಗಿ ಕ್ರಿ. ಶ.೧೮೩೭ರಲ್ಲಿ ರೈತ ಬಂಡಾಯ ನಡೆಯದೇ ಹೋಗಿರುತ್ತಿದ್ದರೆ ವಸಾತುಶಾಹಿ ಆಡಳಿತ ಕಾಲದಲ್ಲಿ ಸಂಪಾಜೆ ಘಾಟಿ ರಸ್ತೆ ಆಗುತ್ತಲೇ ಇರಲಿಲ್ಲವೆಂದು ಕಾಣುತ್ತದೆ.


೪.೬ ಬಾಹ್ಯ ವ್ಯಾಪಾರ

ಬ್ರಿಟಿಷರು ಈ ಜಿಲ್ಲೆಯನ್ನು ವಶಪಡಿಸಿಕೊಂಡಾಗ ಕರಾವಳಿಯಲ್ಲಿ ಎಂಟು ಬಂದರುಗಳು ಆಯಾತ - ನಿರ್ಯಾತಕ್ಕೆ ಬಳಸಲ್ಪಡುತ್ತಿದ್ದವು. ಕುಂಬಳೆ, ಮಂಜೇಶ್ವರ, ಮಂಗಳೂರು, ಮುಲ್ಕಿ, ಉದ್ಯಾವರ, ಬರ್ಕೂರು ಮತ್ತು ಕುಂದಾಪುರ ವಿದೇಶಿ ಹಡಗುಗಳು ಬಂದು ತಂಗುತ್ತಿದ್ದ ವ್ಯಾಪಾರ ಕೇಂದ್ರಗಳಾಗಿದ್ದವು. ಇವುಗಳಲ್ಲಿ ಮಂಗಳೂರು ಮತ್ತು ಉದ್ಯಾವರ ಬಹು ಪ್ರಾಚೀನ ಕಾಲದಿಂದಲೂ ಬಂದರುಗಳಾಗಿ ಖ್ಯಾತಿಯನ್ನು ಪಡೆದಿದ್ದವು.[೪೬] (ಭೂಪಟ ೪.೩)

ಈ ಜಿಲ್ಲೆಯಿಂದ ನಿರ್ಯಾತವಾಗುತ್ತಿದ್ದ ಸರಕುಗಳು ಎಲ್ಲವೂ ಇಲ್ಲೇ ಉತ್ಪಾದನೆವಾಗುತ್ತಿದ್ದವುಗಳಲ್ಲ. ಶ್ರೀಗಂಧ, ಏಲಕ್ಕಿ, ಹತ್ತಿ, ಹತ್ತಿ ಬಟ್ಟೆ ಮುಂತಾದವುಗಳು ಕರ್ನಾಟಕದ ಬೇರೆ ಜಿಲ್ಲೆಗಳಿಂದ ದ.ಕಕ್ಕೆ ಬಂದು ವಿದೇಶಿಗಳಿಗೆ ಮತ್ತು ಅನ್ಯ ರಾಜ್ಯಗಳಿಗೆ ನಿರ್ಯಾತಗೊಳ್ಳುತ್ತಿದ್ದವು.

ದ.ಕ. ಜಿಲ್ಲೆಗೆ ಆಯಾತವಾಗಿ ಬರುತ್ತಿದ್ದ ಸರಕುಗಳು ಕೇವಲ ಈ ಜಿಲ್ಲೆಯ ಬಳಕೆಗಾಗಿಯೇ ಬರುತ್ತಿರಲಿಲ್ಲ. ಅವು ಒಳನಾಡಿಗೆ ಹೋಗುತ್ತಿದ್ದವು. ಉದಾಹರಣೆ ಅರಬರ ಕಾಲದಲ್ಲಿಯೇ (ಕ್ರಿ. ಶ. ೮ನೇ ಶತಮಾನ) ಮಂಗಳೂರು ಮತ್ತು ಉದ್ಯಾವರ ಬಂದರುಗಳಿಗೆ ಅರಬ ಸ್ಥಾನದಿಂದ ಕುದುರೆಗಳು ಬರುತ್ತಿದ್ದವು. ವಿಜಯನಗರದ ಸಾಮ್ರಾಜ್ಯದ ಸಮ್ರಾಟ ಶ್ರೀ ಕೃಷ್ಣದೇವರಾಯರ ಕಾಲದಲ್ಲಿದ್ದ ಪೋರ್ಚುಗೀಸರು ಈ ಬಂದರುಗಳ ಮೂಲಕ ಸರಕುಗಳನ್ನು ವಿಜಯನಗರಕ್ಕೆ ಕಳುಹಿಸುತ್ತಿದ್ದಕ್ಕೆ ಆಧಾರಗಳಿವೆ.[೪೭]

ದ.ಕ. ದ ಬಾಹ್ಯ ವ್ಯಾಪಾರ ಸಂಯೋಜನೆಯು ಹೀಗಿತ್ತು (ನಕ್ಷೆ ೪.೪)



ನಕ್ಷೆ ೪. ೪ ದ. ಕ. ಜಿಲ್ಲೆಯ ಬಾಹ್ಯ ವ್ಯಾಪಾರ ಸಂಯೋಜನೆ

ಈಸ್ಟ್ ಇಂಡಿಯಾ ಕಂಪೆನಿ ಈ ಜಿಲ್ಲೆಯನ್ನು ವಶಪಡಿಸಿಕೊಳ್ಳುವುದಕ್ಕೆ ಮುನ್ನವೇ ಯುರೋಪಿನ ಅನೇಕ ರಾಷ್ಟ್ರಗಳು ಈ ಜಿಲ್ಲೆಯೊಡನೆ ವ್ಯಾಪಾರ ಸಂಪರ್ಕವನ್ನು ಹೊಂದಿದ್ದವು.

ಅರಬರನ್ನು ಸೋಲಿಸಿ ಪೋರ್ಚುಗೀಸರು ಕರಾವಳಿ ವ್ಯಾಪಾರದಲ್ಲಿ ಮೇಲುಗೈ ಸಾಧಿಸಿದರು. ಡಚ್ಚರು ಮತ್ತು ಫ್ರೆಂಚರು ಪೋರ್ಚುಗೀಸರೊಡನೆ ಪೈಪೋಟಿ ನಡೆಸಿ ಗೆಲ್ಲಲು ಸಾಧ್ಯವಾಗಲಿಲ್ಲ. ಆದರೆ ಬ್ರಿಟಿಷರು ತಮ್ಮ ಪ್ರಬಲ ನೌಕಾ ಪಡೆಯಿಂದಾಗಿ ಪಶ್ಚಿಮ ಕರಾವಳಿಯಲ್ಲಿ ಪೋರ್ಚುಗೀಸರನ್ನು ಹಿಂದಿಕ್ಕುವುದರಲ್ಲಿ ಸಫಲರಾದರು. ಹಾಗಾಗಿ ೧೭೯೯ರಲ್ಲಿ ದ. ಕ ಜಿಲ್ಲೆ ಬ್ರಿಟಿಷರ ವಶಕ್ಕೆ ಬಂದರೂ ಅದಕ್ಕೂ ಬಹುಹಿಂದೆಯೇ ಈ ಕರಾವಳಿಯ ವ್ಯಾಪಾರದಲ್ಲಿ ಬ್ರಿಟಿಷರು ಅಧಿಪತ್ಯವನ್ನು ಸ್ಥಾಪಿಸಿದ್ದರು.

೪. ೨. ಬ್ರಿಟಿಷ್ ಕಾಲದ ರಕ್ಷಣಾ ಕೇಂದ್ರಗಳು.



ವಸಾಹತುಶಾಹಿಯ ಆರಂಭಿಕ ವರ್ಷಗಳಲ್ಲಿ ಸಮುದ್ರ ಕಸ್ಟಂಸ್‌ನಿಂದ ಸರಕಾರಕ್ಕೆ ಬರುತ್ತಿದ್ದ ಆದಾಯವನ್ನು ಕೋಷ್ಟಕ ೪.೯ ತೋರಿಸುತ್ತದೆ.


ಕೋಷ್ಟಕ ೪. ೯: ಒಟ್ಟು ಕಂದಾಯದಲ್ಲಿ ಸಮುದ್ರ ಕಸ್ಟಂಸ್ ನ ಪಾಲು (ಸರಾಸರಿ)

ವರ್ಷ (೧)	ಸಮುದ್ರ ಕಸ್ಟಂಸ್ (೨)	ಒಟ್ಟು ಕಂದಾಯ (೩)	೩ರಲ್ಲಿ೨ರ ಪಾಲು (೪)
೧೭೯೯-೧೮೦೫	ರೂ. ೧,೫೯,೦೦೨	ರೂ. ೧೩,೬೦,೧೮೯	೧೧.೬೮%
೧೮೦೬-೧೦	ರೂ. ೧,೩೮,೬೭೯	ರೂ. ೧೩,೬೦,೨೪೦	೧೦.೧೯%
೧೮೧೧-೧೫	ರೂ. ೧,೪೪,೩೭೨	ರೂ. ೧೩,೧೫,೩೩೮	೧೦.೯೭%
೧೮೧೬-೨೦	ರೂ. ೧,೩೮,೪೧೭	ರೂ. ೧೧,೬೭,೨೪೩	೧೧.೮೬%
೧೮೨೧-೨೫	ರೂ. ೧,೦೨,೩೮೪	ರೂ. ೧೨,೫೮,೯೬೮	೮.೧೩%
೧೮೨೬-೩೦	ರೂ. ೧,೨೦,೪೧೨	ರೂ. ೧೩,೧೦,೯೨೭	೯.೧೮%
೧೮೩೧-೩೪	ರೂ. ೮೨,೫೫೫	ರೂ.೧೨,೪೧,೯೯೮	೬.೬೪%
೧೮೩೫-೩೯	ರೂ. ೯೪,೩೮೪	ರೂ. ೧೪,೦೯,೬೭೬	೬.೬೯%

ಆಧಾರ: PMBR; 4-3-1847, No.2070


ಸಮುದ್ರ ಕಸ್ಟಂಸ್‌ನ ಆದಾಯ ನಿಧಾನವಾಗಿ ಇಳಿಕೆಯಾದದನ್ನು ಕಾಣಬಹುದು. ೧೭೯೯ರಿಂದ ರೈತ ಬಂಡಾಯದವರೆಗಿನ ಅವಧಿಯಲ್ಲಿ ಅನೇಕ ಅನಿಶ್ಚಿತತೆಗಳು ತಲೆದೋರಿದ್ದು ಇದಕ್ಕೆ ಬಹುಮುಖ್ಯವಾದ ಕಾರಣವಾಗಿದೆ. ಅಲ್ಲದೆ ಈ ಜಿಲ್ಲೆಯು ವಸಾಹತುಶಾಹಿ ಆಡಳಿತಕ್ಕೆ ಒಳಪಟ್ಟ ಬಳಿಕ ಇಂಗ್ಲೆಂಡಿನಿಂದ ಬರುತ್ತಿದ್ದ ಸರಕುಗಳ ಮೇಲಣ ಸುಂಕ ಸಹಜವಾಗಿ ಕಡಿಮೆಯಾಯಿತು. ಆಮದು ಸುಂಕ ಹೆಚ್ಚು ಮಾಡಿದುದರಿಂದ ಆಯಾತಗಳ ಬೆಲೆ ಹೆಚ್ಚಳವಾಗಿ

ಅವುಗಳ ಬೇಡಿಕೆ ಕುಸಿಯುತ್ತದೆ ಎಂಬ ಭೀತಿ ಸಮುದ್ರ ಕಸ್ಟಂಸ್‌ನ ಇಳಿಕೆಗೆ ಕಾರಣವಾಗಿರಬೇಕು. ಆದುದರಿಂದ ಆರಂಭದಲ್ಲಿ ಒಟ್ಟು ಕಂದಾಯದಲ್ಲಿ ಸಮುದ್ರ ಕಸ್ಟಂಸ್‌ನ ಪಾಲು ೧೧.೭% ಇದ್ದುದು ರೈತ ಬಂಡಾಯದ ಅವಧಿಯಲ್ಲಿ ೬.೭% ಕ್ಕೆ ಇಳಿಯಿತು. ಆದರೆ ಅಬಕಾರಿ,ಹೊಗೆಸೊಪ್ಪು ಮತ್ತು ಉಪ್ಪುಗಳಿಂದ ಬರುವ ಆದಾಯ ಅಧಿಕವಾಯಿತು. (ಚಿತ್ರ ೪.೪ ಮತ್ತು ೪.೫)



ಚಿತ್ರ ೪.೪: ೧೭೯೯/೧೮೦೦ ರಲ್ಲಿ ದ.ಕ ಜಿಲ್ಲೆಯ ಕಂದಾಯ ಸಂಯೋಜನೆ





ಚಿತ್ರ ೪.೫, ೧೮೩೬-೩೭ರಲ್ಲಿ ದ.ಕ ಜಿಲ್ಲೆಯ ಕಂದಾಯ ಸಂಯೋಜನೆ

ವಸಾಹತುಶಾಹಿ ಆಡಳಿತದ ಆರಂಭ ಕಾಲದಲ್ಲಿ ಒಟ್ಟು ಕಂದಾಯದಲ್ಲಿ ಭೂ ಕಂದಾಯದ ಪಾಲು ಶೇ. ೭೬ ಆಗಿತ್ತು. ೧೮೩೬ – ೩೭ ರಲ್ಲಿ ಅದು ಶೇ. ೬೮ಕ್ಕೆ ಕುಸಿಯಿತು. ಇದು ಭೂ ಕಂದಾಯದ ತೀವ್ರತೆಗೆ ಪ್ರತಿಕ್ರಿಯೆಯಾಗಿ ರೈತರು ಭೂ ಕಂದಾಯವನ್ನು ತಪ್ಪಿಸುತ್ತಿದ್ದುದರ ಪರಿಣಾಮವಿರಬೇಕು. ಭೂ ಕಂದಾಯ ಕಟ್ಟಲಾಗದ ರೈತರ ಭೂಮಿ ವ್ಯಾಪಾರಿಗಳಿಗೆ ಮಾರಾಟವಾಗುತ್ತಿತ್ತು. ಅವರು ಭೂ ಕಂದಾಯದಲ್ಲಿ ವಿನಾಯಿತಿ ಪಡೆಯುತ್ತಿದ್ದರು. ಇದು ಕೂಡ ಭೂ ಕಂದಾಯದ ಪಾಲು ಕಡಿಮೆಯಾಗಲು ಕಾರಣವಾಗಿರಬೇಕು.

ಅಬಕಾರಿ ಹೊಗೆಸೊಪ್ಪು ಮತ್ತು ಉಪ್ಪಿನ ಕಂದಾಯದ ಪಾಲು ೧೭೯೯-೧೮೦೦ರಲ್ಲಿ ಶೇ. ೯ರಷ್ಟಿತ್ತು. ೧೮೩೬- ೩೭ರಲ್ಲಿ ಅದು ಶೇ. ೨೪ಕ್ಕೆ ಏರಿತು. ಹೊಗೆಸೊಪ್ಪು ಮತ್ತು ಉಪ್ಪಿನ ಏಕಸ್ವಾಮ್ಯ ಇದಕ್ಕೆ ಕಾರಣವಾಗಿತ್ತು. ಟಿಪ್ಪುವಿನ ಕಾಲದಲ್ಲಿ ಇಲ್ಲದ ಅಬಕಾರಿ ತೆರಿಗೆ ವಸಾಹತುಶಾಹಿ ಕಾಲದಲ್ಲಿ ಹೇರಿಕೆಯಾಯಿತು. ಅಬಕಾರಿ ತೆರಿಗೆ ೧೭೯೯-೧೮೩೭ರ ವರೆಗಿನ ಅವಧಿಯಲ್ಲಿ ಏರಿಕೆಯಾಗುತ್ತಾ ಹೋಯಿತು.



ಆದರೆ ಈ ಅವಧಿಯಲ್ಲಿ ಭೂ ಮತ್ತು ಸಮುದ್ರ ಕಸ್ಟಂಸ್ ನ ಪಾಲು ಗಣನೀಯವಾಗಿ ಕುಸಿಯಿತು. ೧೭೯೯-೧೮೦೦ರಲ್ಲಿ ಒಟ್ಟು ಕಂದಾಯದಲ್ಲಿ ಇವುಗಳ ಪಾಲು ೧೫% ಇದ್ದದ್ದು ೧೮೩೬- ೩೭ರಲ್ಲಿ ೮%ಕ್ಕೆ ಕುಸಿಯಿತು. ಈ ನಷ್ಟವನ್ನು ಉಪ್ಪು ಮತ್ತು ಹೊಗೆಸೊಪ್ಪಿನ ಏಕಸ್ವಾಮ್ಯದ ಮೂಲಕ ವಸಾಹತುಶಾಹಿ ಸರ್ಕಾರ ಸರಿದೂಗಿಸಿಕೊಂಡಿದೆ.

ವಸಾಹತುಶಾಹಿ ಆಡಳಿತದ ಆರಂಭದ ಮೂರು ದಶಕಗಳಲ್ಲಿ ಈ ಜಿಲ್ಲೆಯ ಜನರಿಗೆ ಶೋಷಣೆಯ ಎಲ್ಲಾ ಮುಖಗಳ ಅನುಭವ ದೊರೆಯಿತು. ಭೂ ಕಂದಾಯದ ಹೆಚ್ಚಳದಿಂದ ಬಡ ರೈತರು ಭೂಮಿಯನ್ನು ಮಾರಬೇಕಾದ ಅನಿವಾರ್ಯತೆ ಉಂಟಾಯಿತು. ಅವಶ್ಯಕ ವಸ್ತುಗಳಾದ ಉಪ್ಪು ಮತ್ತು ಹೊಗೆಸೊಪ್ಪಿನ ಬೆಲೆ ವಿಪರೀತ ಹೆಚ್ಚಳವಾಯಿತು. ಮದ್ಯಪಾನಕ್ಕೆ ಸರಕಾರದಿಂದಲೇ ಉತ್ತೇಜನ ದೊರೆಯಿತು. ಜಿಲ್ಲೆಯ ರೈತರ ಉತ್ಪನ್ನಗಳ ಬೆಲೆ ಗಣನೀಯವಾಗಿ ಇಳಿಯಿತು. ಇವೆಲ್ಲವೂ ೧೮೩೭ರ ರೈತ ಕ್ರಾಂತಿಗೆ ಪ್ರಬಲವಾದ ಕಾರಣಗಳಾದವು.

ದ.ಕ. ದಲ್ಲಿ ವಸಾಹತುಶಾಹಿ ಆಡಳಿತದ ಆರಂಭಿಕ ನಾಲ್ಕು ದಶಕಗಳ ಅವಧಿಯ ಆಗು ಹೋಗುಗಳನ್ನು ಸಂಕ್ಷಿಪ್ತವಾಗಿ ಹೀಗೆ ಕ್ರೋಢಿಕರಿಸಬಹುದು.

❖ ಈ ಅವಧಿಯಲ್ಲಿ ಕಂದಾಯ ಗಳಿಕೆಯಲ್ಲಿ ಗಣನೀಯ ಏರಿಕೆ ಉಂಟಾಗಲಿಲ್ಲ. ಅತ್ಯಧಿಕ ಕಂದಾಯ ಹೇರಿಕೆ ಇದಕ್ಕೆ ಕಾರಣ. ಕಂದಾಯದ ಪ್ರಮಾಣ ಸಮಾನವಾಗಿದ್ದರೂ ಬಡರೈತರ ಮೇಲೆ ಹೊರೆ ಅತ್ಯಧಿಕವಾಗಿತ್ತು. ಅವರು ಕಂದಾಯ ಕಟ್ಟಲಾಗದೆ ಬ್ರಾಹ್ಮಣ, ಸಾರಸ್ವತ ಮತ್ತು ಬಂಟ ಸಮುದಾಯಗಳ, ಶ್ರೀಮಂತರಿಗೆ ತಮ್ಮ ಭೂಮಿಯನ್ನು ಮಾರಾಟಮಾಡಬೇಕಾದ ಪರಿಸ್ಥಿತಿ ನಿರ್ಮಾಣವಾಯಿತು. ಕಂದಾಯ ಕಟ್ಟಲಾಗದ ರೈತರ ಭೂಮಿಯನ್ನು ಈ ಮೂರು ಸಮುದಾಯಗಳು ಸಾರ್ವಜನಿಕ ಏಲಂನಲ್ಲಿ ಕೊಳ್ಳುತ್ತಿದ್ದರು. ಇವರು ಬ್ರಿಟಿಷರಿಗೆ ನಿಷ್ಠರಾದ ಒಂದು ಹೊಸವರ್ಗವಾಗಿ ರೂಪುಗೊಂಡರು.

❖ ಹಳೆಯ ರಾಜರುಗಳು ಜಮೀನುದಾರರ ಮಟ್ಟಕ್ಕೆ ಇಳಿಸಲ್ಪಟ್ಟರು. ದ.ಕ ಜಿಲ್ಲೆಯ ಮೊದಲನೆ ಜಿಲ್ಲಾಧಿಕಾರಿ ಮನ್ರೋ ರೈತವಾರಿ ವ್ಯವಸ್ಥೆಯನ್ನು ಇಲ್ಲಿ ಅನುಷ್ಠಾನಗೊಳಿಸಿದ. ಆದರೆ ಭೂ ಕಂದಾಯ ಅತ್ಯಧಿಕವಾಗಿತ್ತು. ವರ್ಷದಿಂದ ವರ್ಷಕ್ಕೆ ಅದು ಏರುತ್ತಾ ಹೋದುದರಿಂದ ರೈತರ ಹಿತಾಸಕ್ತಿಯನ್ನು ಕಾಪಾಡುವಲ್ಲಿ ಸರಕಾರ ಸಂಪೂರ್ಣವಾಗಿ ವಿಫಲವಾಯಿತು.ಹಾಗಾಗಿ ರೈತವಾರಿ ವ್ಯವಸ್ಥೆ ಜಮೀನುದಾರಿ ವ್ಯವಸ್ಥೆಯಾಗಿ ಪರಿವರ್ತನೆಗೊಂಡಿತೆನ್ನಬಹುದು.

❖ ಕಂದಾಯವನ್ನು ವಸ್ತುರೂಪದ ಬದಲು ನಗದು ರೂಪದಲ್ಲಿ ನೀಡಬೇಕೆಂಬ ಕಾನೂನು ಜಾರಿಗೆ ಬಂದುದರಿಂದ ಬಡರೈತರು ವರ್ಣಿಸಲಸದಳವಾದ ಸಂಕಷ್ಟಗಳಿಗೆ ಈಡಾದರು. ಅವರು ಒಟ್ಟು ಉತ್ಪನ್ನದ ಶೇ. ೩೦ರಷ್ಟನ್ನು ಸರಕಾರಕ್ಕೆ ಸಂದಾಯ ಮಾಡಬೇಕಿತ್ತು. ಆದರೆ ಬೇರೆ ಬೇರೆ ಕಾರಣ ನೀಡಿ ಸರಕಾರ ಅವರಿಂದ ಒಟ್ಟು ಉತ್ಪನ್ನದ ಶೇ. ೫೦ರಷ್ಟನ್ನು ತಾನು ವಸೂಲು ಮಾಡುತ್ತಿತ್ತು. ಇದರಿಂದಾಗಿ ಬಡ ರೈತರ ಪಾಲಿಗೆ ಬದುಕು ದುರ್ಭರವಾಗತೊಡಗಿತು.

❖ ಬ್ರಿಟಿಷರು ದ. ಕ. ಜಿಲ್ಲೆಯ ಸಾಮಾಜಿಕ ವ್ಯವಸ್ಥೆಯಲ್ಲಿ ಮೇಲ್ ಸ್ತರದಲ್ಲಿ ಇದ್ದವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅವರಿಗೆ ಕೆಲವು ಅನುಕೂಲತೆಗಳನ್ನು ಕಲ್ಪಿಸಿಕೊಟ್ಟರು. ಇದರಿಂದಾಗಿ ಹೊಸವರ್ಗದಾರರು ಹುಟ್ಟಿಕೊಂಡರು. ಬ್ರಾಹ್ಮಣ ಸಾರಸ್ವತ ಮತ್ತು ಬಂಟ ಸಮುದಾಯಕ್ಕೆ ಸೇರಿದ ಹೊಸ ವರ್ಗದಾರರ ವ್ಯವಸ್ಥೆ ಬಡರೈತರಿಗೆ ವಿರುದ್ಧವಾಗಿ ರೂಪುಗೊಂಡಿತು. ಈ ವರ್ಗಗಳ ಬಹುತೇಕರು ಬ್ರಿಟಿಷರಿಗೆ ನಿಷ್ಠರಾಗಿ ದೇಶ ಸ್ವಾತಂತ್ರ್ಯಗಳಿಸುವವರೆಗೂ ಕೆಲಸ ಮಾಡಿದಂತೆ ಕಂಡುಬರುತ್ತದೆ.

ದ. ಕ. ದಲ್ಲಿ ಅಧಿಕಾರ ಸೂತ್ರವನ್ನು ಹಿಡಿದುಕೊಂಡು ವಸಾಹತುಶಾಹಿಯು ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಯನ್ನು ತನ್ನ ಅನುಕೂಲಕ್ಕೆ ತಕ್ಕಂತೆ ರೂಪಿಸಿಕೊಂಡಿತು. ಕಂದಾಯ ಹೇರಿಕೆ ಮತ್ತು ಭೂ ಸಂಬಂಧಗಳ ಬದಲಾವಣೆಯಲ್ಲಿ ಇದನ್ನು ಸ್ಪಷ್ಟವಾಗಿ ಗುರುತಿಸಬಹುದು. ಮೇಲ್ವರ್ಗ ಮತ್ತು ಮೇಲ್ಜಾತಿಗಳನ್ನು ತಮ್ಮ ಪರವಾಗಿ ಒಲಿಸಿಕೊಂಡ ವಸಾಹತುಶಾಹಿ ವ್ಯವಸ್ಥೆಯು ಬಡ ಮತ್ತು ಕೆಳ ವರ್ಗವನ್ನು ಶೋಷಣೆಗೆ ಈಡು ಮಾಡಿತು. ಅದು ಅಂತಿಮವಾಗಿ ೧೮೩೭ರ ರೈತ ಬಂಡಾಯಕ್ಕೆ ಕಾರಣವಾಯಿತು.

ಉಲ್ಲೇಖಗಳು ಮತ್ತು ಟಿಪ್ಪಣಿಗಳು

೧. Raghavendra Prabhu, 2008, World & Indian History, Jayabharath Prakashana Mangalore.P.119.

೨. Ibid, P. 120

೩. ಬಿಪಿನ್ ಚಂದ್ರ ಮತ್ತಿತರರು,೨೦೦೧, ಸ್ವಾತಂತ್ರ್ಯ ಹೋರಾಟ- ಅನುವಾದ: ಆರ್. ಎಲ್. ಅನಂತರಾಮಯ್ಯ, ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ ಪು. ೩-೬.

೪. Mishra and Puri, 2008, Indian Economy, Himalayan Publishing House, Mumbai, P.47.

೫. Shyama Bhat, 1998, op.cit.,P.72

೬. Ibid, PP. 75- 76.

೭. ವಿವರಗಳನ್ನು ದ.ಕ. ಜಿಲ್ಲಾಧಿಕಾರಿಗಳ ಕಛೇರಿಯಿಂದ ಸಂಗ್ರಹಿಸಲಾಗಿದೆ.

೮. John Sturrock, 2003, P. 81

೯. ಇದು ಅಧ್ಯಯನದ ಆಧಾರದಲ್ಲಿ ರೂಪಿಸಲಾದ ಅಂದಾಜುಪತ್ರ.

೧೦. ಪ್ರಭಾಕರ ಶಿಶಿಲ, ೨೦೦೭, ಆರ್ಥಿಕ ಚಿಂತನಾಧಾರೆ, ಮಂಗಳ ಪ್ರಕಾಶನ ಮಂಗಳೂರು ಪು. ೧೧

೧೧. ಕ್ರಿ. ಶ. ೧೭೭೬ರ ಅಮೇರಿಕಾದ ಸ್ವಾತಂತ್ರ್ಯ ಸಮರ, ೧೭೮೯ರ ಫ್ರಾನ್ಸಿನ ಮಹಾಕ್ರಾಂತಿ ಪ್ರತಿಗಾಮಿ ತೆರಿಗೆಗಳ ವಿರುದ್ಧದ ಬಂಡಾಯಗಳು. ಆದರೆ ಇವುಗಳಿಂದ ಈಸ್ಟ್ ಇಂಡಿಯಾ ಕಂಪೆನಿ ಮತ್ತು ಅದರ ಬೆನ್ನ ಹಿಂದಿದ್ದ ಬ್ರಿಟಿಷ್ ಸರಕಾರ ಪಾಠ ಕಲಿತಂತೆ ಕಾಣಲಿಲ್ಲ. ಅಥವಾ ಭಾರತೀಯರಲ್ಲಿ ಪ್ರಜಾ

ಪ್ರಭುತ್ವದ ಬಗ್ಗೆ ಪ್ರಜ್ಞೆ ಮೂಡದು ಮತ್ತು ಹಾಗಾಗಿ ಪ್ರತಿರೋಧ ಕಾಣಿಸಿಕೊಳ್ಳಲಾರದು ಎಂದು ಬ್ರಿಟಿಷರು ಭಾವಿಸಿರಬಹುದು.

೧೨. Francis Buchanan, 1870, A Journey from Medras through the Countries of Mysore, Canara & Malabar, Vol- 2, Higgin Bothems & Co. Medras, P.234.

೧೩. John Sturrock, 2003, op.cit., p.193.

೧೪. Buchanan, 1870, op. cit, P. 231.

೧೫. John Sturrock,2003, op.cit., P.209

೧೬. ಪ್ರಭಾಕರ ಶಿಶಿಲ ೧೯೮೫, ಶಿಕಾರಿಯ ಸೀಳು ನೋಟ, ಬಡ್ಡಡ್ಕ ಪ್ರಕಾಶನ, ಸುಳ್ಯ. ಪು.೩೫.

೧೭. John Sturrock, 2003, op.cit., P.125.

೧೮. PMBR, 23-02-1809, Vol.485, P.1214.

೧೯. PMBR- 11-12-1800, Vol.26, P.10938.

೨೦. PMBR- 18-09-1828 Vol.1159, P.9074.

೨೧. John Sturrock, 2003,op.cit.,p.197.

೨೨. Burton Stein, Integration of Agrarian System in South India. P.175.

೨೩. Dhanagare, 1983, Peasent Movement in India 1920-50, Oxford University Press New Delhi. PP.29-30.

೨೪. Dharmakumar, 1965, Land and Caste in South India, Cambridge, PP-21-33.

೨೫. Buchanan, 1870, op. cit., P.228

೨೬. John Sturrock,2003, op.cit.,PP.10-11

೨೭. PMBR, 5-4-1827, Vol.1098, P.4, 157.

೨೮. PMBR. 23-4-1800, Vol.249, A. PP-3518-20.

೨೯. PMBR, 24-7-1806, Vol. 4029, PP.4359-60.

೩೦. John Sturrock, 2003, op.cit., P.194.

೩೧. Ibid, P.101.

೩೨. PMBR,9-3-1807, Vol, 441 pp1637-39

೩೩. ಮಾಲತಿ ಮೂರ್ತಿ, ೧೯೯೧. ಪೂರ್ವೋಕ್ತ ಪು. ೨೭೬-೨೭೭

೩೪. ಅದೇ ಪು. ೨೭೮.

೩೫. ಅದೇ ಪು. ೨೮೩.

೩೬. ಅದೇ ಪು. ೨೯೦.

೩೭. PMBR, 17-10-1803, P.11959.

೩೮. PMBR 1-07-1822 Vol 918, P. 6210.

೩೯. PMBR 17-1-1814, Vol. 630, PP.1439-44.

೪೦. ನಿರ್ಯಾತ ಮೌಲ್ಯವು ಆಯಾತ ಮೌಲ್ಯಕ್ಕಿಂತ ಅಧಿಕವಾಗಿರುವುದು ಅನುಕೂಲಕರ ವ್ಯಾಪಾರ ಶಿಲ್ಕು ಎನಿಸುತ್ತದೆ.

೪೧. PMBR 16-18-1802, Vol 324, PP. 9115-16.

೪೨. Ibid, PP.9106 -07.

೪೩. Ibid, PP. 9038-39.

೪೪. Ibid, P.9040.

೪೫. John Keay, 1989, India Discovered, Crupa & Co, New Delhi.

೪೬. ಮಾಲತಿ ಮೂರ್ತಿ, ೧೯೯೧, ಪೂರ್ವೋಕ್ತ ಪು. ೨೫೩.

೪೭. ಹೆಚ್ಚಿನ ವಿವರಣೆ ಎರಡನೆಯ ಅಧ್ಯಾಯದಲ್ಲಿದೆ.

ಅಧ್ಯಾಯ ೫

ವಸಾಹತುಶಾಹಿ ಕೊಡಗು ಆರ್ಥಿಕತೆ

ಕ್ರಿ.ಶ. ೧೮೩೪ರ ಏಪ್ರಿಲ್ ೬ರಂದು ಮಡಿಕೇರಿ ಕರ್ನಲ್‌ಫ್ರೇಸರ್‌ನ ವಶವಾಯಿತು. ಅಲ್ಲಿಯವರೆಗೆ ಅಧಿಕಾರದಲ್ಲಿದ್ದ ಚಿಕ್ಕವೀರರಾಜ ಬ್ರಿಟಿಷರನ್ನು ಎದುರಿಸಲು ಸಾಕಷ್ಟು ಸನ್ನಾಹ ಮಾಡಿದ್ದರೂ ಬೋಪು ದಿವಾನ ಶರಣಾಗತಿ ಅನಿವಾರ್ಯ ಎಂಬ ಭಾವವನ್ನು ರಾಜನಲ್ಲಿ ಮೂಡಿಸಿದ್ದ. ರಾಜನ ಅಂತರಂಗದ ಸಲಹೆಗಾರರಾದ ದಿವಾನ ಕುಂಟಬಸವ ಮತ್ತು ಅಬ್ಬಾಸ್ ಅಲಿಬೇಗ್ ಬ್ರಿಟಿಷರಿಗೆ ಶರಣಾಗುವುದು ಕೊಡಗಿನ ಆತ್ಮಾಭಿಮಾನದ ಮೇಲಿನ ಧಾಳಿ ಎಂದು ಪದೇ ಪದೇ ಹೇಳಿದ್ದರೂ ಈಸ್ಟ್ ಇಂಡಿಯಾ ಕಂಪೆನಿಯು ಆರು ಕಡೆಗಳಿಂದ ಏಕಕಾಲದಲ್ಲಿ ಕೊಡಗನ್ನು ಪ್ರವೇಶಿಸಿದಾಗ ಶಾಂತಿಧೂತನಾಗಿ ಬೋಪುವನ್ನು ಕರ್ನಲ್ ಫ್ರೇಸರ್‌ನಲ್ಲಿಗೆ ಕಳುಹಿಸಿ ಚಿಕ್ಕವೀರ ನಾಲ್ಕು ನಾಡು ಅರಮನೆಗೆ ಕುಟುಂಬ ಸಹಿತ ಪಲಾಯನ ಮಾಡಿದ. ಆದರೆ ಏಪ್ರಿಲ್ ೧೦ ರಂದು ಆತ ಕರ್ನಲ್ ಫ್ರೇಸರ್‌ನ ಆಣತಿಯಂತೆ ಮಡಿಕೇರಿಗೆ ಹಿಂತಿರುಗಬೇಕಾಯಿತು.. ಏಪ್ರಿಲ್ ೧೧ ರಂದು ಕರ್ನಲ್‌ಫ್ರೇಸರ್ ಒಂದು ಪ್ರಕಟಣೆ ಹೊರಡಿಸಿ ಈಸ್ಟ್ ಇಂಡಿಯಾ ಕಂಪೆನಿಯ ಗವರ್ನರ್ ಜನರಲ್ ಲಾರ್ಡ್ ಬೆಂಟಿಂಕ್ ನ ರಾಜಕೀಯ ಪ್ರತಿನಿಧಿಯಾಗಿ ತಾನು ಅಧಿಕಾರ ವಹಿಸಿಕೊಂಡುದನ್ನು ಸಾರಿದ[೧]

ಮಡಿಕೇರಿಯಲ್ಲಿ ಫ್ರೇಸರ್ ಏಪ್ರಿಲ್ ೧೯ರಂದು ಕೊಡಗಿನ ಮುಖ್ಯಸ್ಥರ ಸಭೆ ನಡೆಸಿ ಚಿಕ್ಕವೀರನ ಭವಿಷ್ಯವನ್ನು ಚರ್ಚೆಗಿಟ್ಟ. ಅಂದು ಸಭೆಯಲ್ಲಿ ಭಾಗವಹಿಸಿದ ಕೊಡಗಿನ ಮುಖ್ಯಸ್ಥರು ರಾಜನನ್ನು ಕೊಡಗಿನಲ್ಲಿ ಇರಗೊಡಬೇಕು, ಅವನನ್ನೇ ಕೊಡಗಿನ ರಾಜನನ್ನಾಗಿ ಮುಂದುವರಿಸಬೇಕು ಮತ್ತು ತೀರಾ ಅನಿವಾರ್ಯವೆಂದಾದರೆ ಅವನ ಅಧಿಕಾರವನ್ನು ಮೊಟಕುಗೊಳಿಸಬೇಕು ಎಂದು ಕರ್ನಲ್ ಫ್ರೇಸರ್‌ನಲ್ಲಿ ವಿನಂತಿ ಮಾಡಿದರು. ಕೊಡಗಿನಲ್ಲಿ ರಾಜಾಡಳಿತವನ್ನು ಶಾಶ್ವತವಾಗಿ ಕೊನೆಗೊಳಿಸಬೇಕೆಂಬ ಪೂರ್ವನಿಶ್ಚಯದಿಂದ ಬಂದಿದ್ದ ಕರ್ನಲ್ ಫ್ರೇಸರ್ ಇವರ ಮನವಿಗೆ ಕಿವಿಗೊಡಲಿಲ್ಲ. ಯಾವ ಕಾರಣಕ್ಕೂ ರಾಜನಿಗೆ ಅಧಿಕಾರವನ್ನು ಮರಳಿಸಲು ಸಾಧ್ಯವಿಲ್ಲ ಮತ್ತು ಕೊಡಗಿನ ಆಡಳಿತವನ್ನು ಈಸ್ಟ್ ಇಂಡಿಯಾ ಕಂಪೆನಿ ವಹಿಸಿಕೊಳ್ಳುತ್ತದೆ. ಇದು ಗವರ್ನರ್ ಜನರಲ್‌ನ ಆದೇಶವೆಂದು ಫ್ರೇಸರ್ ತಿಳಿಸಿದಾಗ ಕೊಡಗಿನ ಮುಖ್ಯಸ್ಥರು ಅನಿವಾರ್ಯವಾಗಿ ಒಪ್ಪಿಕೊಳ್ಳಬೇಕಾಯಿತು. ಆದರೂ ೫೮೮ ಮಂದಿ ಮುಖ್ಯಸ್ಥರಲ್ಲಿ ೨೮೦ ಮಂದಿ ಫ್ರೇಸರ್‌ನಿಗೆ ತಾವು ಹಾಕಿದ ಅರ್ಜಿಯೊಂದನ್ನು ನೀಡಿ ರಾಜನನ್ನು ಕೊಡಗಿನಿಂದ ವರ್ಗಾಯಿಸಬಾರದೆಂದು ಪ್ರತಿಪಾದಿಸಿದರು. ಫ್ರೇಸರ್ ಅದಕ್ಕೆ ಒಪ್ಪಲೇ ಇಲ್ಲ. ರಾಜ ಪರಿವಾರವನ್ನು ಕ್ರಿ.ಶ. ೧೮೩೪ರ ಏಪ್ರಿಲ್ ೨೬ರಂದು ಮಡಿಕೇರಿಯಿಂದ ಗಡಿಪಾರು

ಮಾಡಲಾಯಿತು. ೧೮೩೪ರ ಮೇ ೭ರಂದು ಈಸ್ಟ್ ಇಂಡಿಯಾ ಕಂಪೆನಿ ಕೊಡಗಿನ ಆಡಳಿತವನ್ನು ತಾನು ವಹಿಸಿಕೊಂಡ ಘೋಷಣೆಯನ್ನು ಹೊರಡಿಸಿತು. ಕೊಡಗಿನ ಅಂತಿಮ ರಾಜ ಚಿಕ್ಕವೀರನನ್ನು ೧೮೩೫ರಲ್ಲಿ ವಾರಣಾಸಿಗೆ ವರ್ಗಾಯಿಸಲಾಯಿತು. ಅವನಿಗೆ ಈಸ್ಟ್ ಇಂಡಿಯಾ ಕಂಪೆನಿ ನಿಗದಿತ ಮಾಸಾಶನವನ್ನು ನೀಡುತ್ತಿತ್ತು.[೨] ತನ್ನ ದೊಡ್ಡಪ್ಪ ದೊಡ್ಡವೀರರಾಜ ಕಂಪೆನಿಯಲ್ಲಿ ಇಟ್ಟ ಎಂಟುವರೆ ಲಕ್ಷ[೩] ಡೆಪೋಸಿಟ್ ಹಣವನ್ನು ಹಿಂದಕ್ಕೆ ಪಡೆಯುವ ಉದ್ದೇಶದಿಂದ ತನ್ನ ಇಬ್ಬರು ರಾಣಿಯರು ಮತ್ತು ಮಗಳಾದ ಗೌರಮ್ಮಳೊಡನೆ ಚಿಕ್ಕವೀರ ೧೮೫೨ ರಲ್ಲಿ ಇಂಗ್ಲೆಂಡಿಗೆ ತೆರಳಿದ. ತನ್ನ ಅಂತಿಮ ಆಸೆ ಈಡೇರದೆ ಕ್ರಿ.ಶ. ೧೮೫೯ ರಲ್ಲಿ ಅಲ್ಲೇ ಕೊನೆಯುಸಿರೆಳೆದ.

೫.೧. ವಸಾಹತುಶಾಹಿ ಪ್ರವೇಶದ ಹಿನ್ನೆಲೆ

ಕೊಡಗಿನಲ್ಲಿ ೧೬ನೇ ಶತಮಾನದ ಕೊನೆಯಲ್ಲಿ ರಾಜಾಡಳಿತ ಆರಂಭವಾಯಿತು. ಅಲ್ಲಿಯವರೆಗೆ ಕೊಡಗಿನ ಭೂಪ್ರದೇಶ ಎಷ್ಟು ಎಂಬ ಬಗ್ಗೆ ಯಾವ ಖಚಿತತೆಯೂ ಇರಲಿಲ್ಲ. ಈಗ ನಾವು ಕಾಣುವ ಕೊಡಗು ಆಗ ತುಂಡರಸರ ಅಥವಾ ಕೆಲವು ಗುಂಪುಗಳ ವಶದಲ್ಲಿತ್ತು. ಅಂತಹ ಗುಂಪುಗಳಿಂದ ಆಗಾಗ ದರೋಡೆಗೊಳಗಾಗುವುದು, ಹೆಣ್ಣುಗಳ ಮಾನಭಂಗವಾಗುವುದು, ಕೊಡಗಿನ ನಿವಾಸಿಗಳಿಗೆ ಸಹಿಸಲು ಸಾಧ್ಯವಿಲ್ಲದ ಸಂಗತಿಗಳಾಗಿದ್ದವು. ಹಾಲೇರಿ ಅರಸರು ನಿಧಾನವಾಗಿ ಕೊಡಗನ್ನು ಏಕೀಕರಿಸಿದರು. ವಿಭಿನ್ನ ಸಂಸ್ಕೃತಿಗಳ ಉತ್ತರ ಕೊಡಗು, ದಕ್ಷಿಣ ಕೊಡಗು ಮತ್ತು ಅಮರ ಸುಳ್ಯ ಮಾಗಣೆಗಳನ್ನು ಏಕೀಕರಿಸಿ ಒಂದು ತಕ್ಕಮಟ್ಟಿನ ವ್ಯವಸ್ಥಿತ ಆಡಳಿತವನ್ನು ನೀಡಿದರು. ಟಿಪ್ಪುವಿನ ಕಾಲದ ಅರಾಜಕ ಸನ್ನಿವೇಶದಲ್ಲಿ ಕೊಡಗಿನ ಜನರು ದೊಡ್ಡವೀರನನ್ನು ಪಿರಿಯಾಪಟ್ಟಣದ ಸೆರೆಯಿಂದ ಬಿಡಿಸಿಕೊಂಡು ಬಂದುದರ ಹಿನ್ನೆಲೆಯಲ್ಲಿ ಕೊಡಗಿಗೆ ಒಬ್ಬ ಸಮರ್ಥ ನಾಯಕ ಬೇಕೆನ್ನುವ ಮಹತ್ವಾಕಾಂಕ್ಷೆಯಿತ್ತು.[೪]

ದೊಡ್ಡವೀರ ಬ್ರಿಟಿಷರ ಸೇನಾಧಿಕಾರಿ ಅಬರ್ ಕ್ರಾಂಬಿಯೊಡನೆ ಒಂದು ಒಪ್ಪಂದ ಮಾಡಿಕೊಂಡು ಕೊಡಗಿನ ಮೂಲಕ ಶ್ರೀರಂಗಪಟ್ಟಣಕ್ಕೆ ಈಸ್ಟ್ ಇಂಡಿಯಾ ಸೇನೆ ಸಾಗಿಹೋಗಲು ಮತ್ತು ಆರು ತಿಂಗಳುಗಳ ಕಾಲ ಸೇನೆಯ ಊಟವಸತಿ ನೋಡಿಕೊಳ್ಳಲು ತಾನು ಬದ್ಧ ಎಂಬ ಒಪ್ಪಂದವನ್ನು ಮಾಡಿಕೊಂಡ.[೫] ಈ ಒಪ್ಪಂದದೊಡನೆ ವಸಾಹತುಶಾಹಿ ಆಡಳಿತ ಪರೋಕ್ಷವಾಗಿ ಕೊಡಗಿನ ಮೇಲೆ ಹೇರಲ್ಪಟ್ಟಂತೆ ಕಾಣುತ್ತದೆ. ದೊಡ್ಡವೀರನಿಗೆ ಈ ಒಪ್ಪಂದದ ಅನಿವಾರ್ಯತೆ ಏನಿತ್ತು ಎನ್ನುವುದನ್ನು ವಿಶ್ಲೇಷಿಸಿದರೆ ಆತ ಸಂದರ್ಭದ ಶಿಶುವಾಗಿದ್ದ ಎಂದು ಕಂಡುಬರುತ್ತದೆ. ಈ ಸಂದರ್ಭವನ್ನು ಹೀಗೆ ವಿಶ್ಲೇಷಿಸಬಹುದು.

❖ ಅಂಗರಾಜೇಂದ್ರ ದೊರೆ ಸತ್ತಾಗ ನ್ಯಾಯಬದ್ಧವಾಗಿ ದೊಡ್ಡವೀರನಿಗೆ ಕೊಡಗಿನ ಪ್ರಭುತ್ವ ದೊರಕಬೇಕಿತ್ತು. ಆದರೆ ಹೈದರಾಲಿ ಆತನನ್ನು ಪಿರಿಯಾಪಟ್ಟಣದ ಸೆರೆಯಲ್ಲಿಟ್ಟು ಕೊಡಗನ್ನು ತನ್ನ ನೇರ ಆಡಳಿತಕ್ಕೆ ಒಳಪಡಿಸಿದ. ಅಲ್ಲದೆ ದೊಡ್ಡವೀರರಾಜ, ಅಪ್ಪಾಜಿರಾಜ ಮತ್ತು ಅಂಗರಾಜನ ಸುನ್ನತಿ ನಡೆಸಿ ಅವರನ್ನು ಒಂದರ್ಥದಲ್ಲಿ ಇಸ್ಲಾಂಗೆ ಸೇರಿಸಿಕೊಂಡ. ಇದರ ಹಿಂದೆ ಧರ್ಮಪ್ರಸರಣದ ಉದ್ದೇಶ ಇರದಿದ್ದರೂ ದೊಡ್ಡವೀರನನ್ನು ಅನಿವಾರ್ಯವಾಗಿ ಕೊಡಗಿನ ಅರಸನನ್ನಾಗಿ ಮಾಡಬೇಕಾದ ಸಂದರ್ಭ ಬಂದರೆ ತನ್ನ ಧರ್ಮಕ್ಕೆ ಸೇರಿದ ಓರ್ವ ವ್ಯಕ್ತಿ ಕೊಡಗನ್ನಾಳುವುದು ತನಗೆ ವಿಹಿತವೆಂದು ಹೈದರಾಲಿ ಭಾವಿಸಿದಂತಿದೆ.[೬]

❖ ಟಿಪ್ಪು ಸುಲ್ತಾನ ಪಟ್ಟಕ್ಕೆ ಬಂದಾಗ ಕೊಡಗು ಅರಾಜಕವಾಗಿತ್ತು. ಮೈಸೂರಿನಿಂದ ಮಲಬಾರಿಗೆ ಹೋಗುವ ಹಾದಿಯಲ್ಲಿ ಕೊಡಗಿನ ಬುಡಕಟ್ಟು ಜನಾಂಗಗಳು ಬ್ರಿಟಿಷರಿಂದ ಪ್ರೇರಿತರಾಗಿ ಟಿಪ್ಪುವಿನ ಸೇನೆಗೆ ಗೆರಿಲ್ಲಾ ಮಾದರಿ ಯುದ್ಧದಿಂದ ನಷ್ಟವನ್ನು ಉಂಟುಮಾಡುತ್ತಿದ್ದರು. ಅವರನ್ನು ಮಾತುಕತೆಗೆ ಆಹ್ವಾನಿಸಿದರೂ ಅವರು ಧನಾತ್ಮಕ ಪ್ರತಿಕ್ರಿಯೆ ತೋರದಿರುವಾಗ ಟಿಪ್ಪು ಸುಲ್ತಾನನ ಸೇನೆ ಕಾಡಿಗೆ ನುಗ್ಗಿ ಸಿಕ್ಕಿದವರನ್ನು ಶ್ರೀರಂಗಪಟ್ಟಣಕ್ಕೆ ಒಯ್ದು ಇಸ್ಲಾಂಗೆ ಬಲಾತ್ಕಾರದಿಂದ ಮತಾಂತರಿಸಿತು. ಇದರ ಹಿಂದೆಯೂ ರಾಜಕೀಯ ಉದ್ದೇಶವಿತ್ತೇ ವಿನಾ ಧರ್ಮ ಪ್ರಸರಣದ ಉದ್ದೇಶವಿದ್ದಂತೆ ಕಾಣುವುದಿಲ್ಲ.[೭]

❖ ಪಿರಿಯಾ ಪಟ್ಟಣದ ಸೆರೆಯಲ್ಲಿದ್ದ ದೊಡ್ಡವೀರ ರಾಜನ ಇಬ್ಬರು ಸಹೋದರಿಯರನ್ನು ಟಿಪ್ಪು ಸುಲ್ತಾನ ಇಸ್ಲಾಂಗೆ ಮತಾಂತರಿಸಿ ಸೂರ್ಯ ಚಂದ್ರ ಎಂದು ಹೆಸರಿಟ್ಟಿದ್ದ. ಪರಮತ ಸಹಿಷ್ಣುವಾದ ಆತ ಇದನ್ನು ತನ್ನ ರಾಜಕೀಯದ ಒಂದು ಭಾಗವಾಗಿ ಪರಿಗಣಿಸಿದ್ದರೂ[೮] ಅವರಿಗೆ ಅರಮನೆಯಲ್ಲಿ ಧಾರ್ಮಿಕ ಸ್ವಾತಂತ್ರ್ಯ ಕಲ್ಪಿಸಿಕೊಟ್ಟಿದ್ದ. ಆದರೆ ಇದೊಂದು ಮಾಸದ ಗಾಯವಾಗಿ ದೊಡ್ಡವೀರ ರಾಜನ ಮನಸ್ಸಿನ ಆಳದಲ್ಲಿ ಕೂತಿತ್ತು. ಅದು ಟಿಪ್ಪು ದ್ವೇಷವಾಗಿ ಪರಿವರ್ತನೆ ಹೊಂದಿದ್ದರಲ್ಲಿ ಆಶ್ಚರ್ಯವಿರಲಿಲ್ಲ.

❖ ಕೊಡಗಿನ ದಕ್ಷಿಣಭಾಗದ ಚಿರಕಲ್ಲಿನ ರಾಜ ಮತ್ತು ಕೋಟೆಯಂಗಡಿ ರಾಜ ಕೊಡಗನ್ನು ತಮ್ಮ ರಾಜ್ಯಕ್ಕೆ ಶತಾಯಗತಾಯ ಸೇರಿಸಿಕೊಳ್ಳಲು ಹಿಂದಿನಿಂದಲೂ ಯತ್ನಿಸುತ್ತಿದ್ದರು. ಕೇರಳದ ನಾಯಮ್ಮಾರರ ಪಡೆ ಮತ್ತು ಮಾಪಿಳ್ಳೆ ಪಡೆ ಕೊಡಗನ್ನು ಸಂದರ್ಭ ಬಂದಾಗಲೆಲ್ಲ ದೋಚುತ್ತಿದ್ದವು. ಮಲಬಾರದ ಎಲ್ಲಾ ರಾಜರುಗಳಿಗೂ, ನಾಯಮ್ಮಾರರು ಮತ್ತು ಮಾಪಿಳ್ಳೆಗಳಿಗೂ ಟಿಪ್ಪುವಿನ ಬಗ್ಗೆ ಅಪಾರ ಗೌರವವಿತ್ತು. ಅವರು ಯಾರೂ ದೊಡ್ಡವೀರ ರಾಜನನ್ನು ಬೆಂಬಲಿಸುವ ಸಂದರ್ಭವಿರಲಿಲ್ಲ.[೯] ಆದುದರಿಂದ ಅನಿವಾರ್ಯವಾಗಿ ದೊಡ್ಡವೀರರಾಜ ಬ್ರಿಟಿಷರ ನೆರವನ್ನು ಪಡೆಯಬೇಕಾಯಿತು. ಆದರೆ ಇದರಿಂದ ಕೊಡಗು ಮುಂದೊಂದು ದಿನ ವಸಾಹತುಶಾಹಿ ಆಡಳಿತಕ್ಕೆ ಒಳಪಡಬಹುದೆಂಬ ಶಂಕೆ ಆತನಲ್ಲಿ ಇದ್ದಂತೆ ಕಂಡು ಬರುವುದಿಲ್ಲ.

೧೭೯೦ನೇ ಇಸವಿ ಅಕ್ಟೋಬರ್ ೧೫ರಂದು ದೊಡ್ಡವೀರರಾಜ ಮತ್ತು ಕಂಪೆನಿ ಸರಕಾರ ಮಾಡಿಕೊಂಡ ಒಪ್ಪಂದದಿಂದಾಗಿ ಕೊಡಗಿನ ಮೇಲೆ ವಸಾಹತುಶಾಹಿ ಕರಿನೆರಳು ಬೀಳುವಂತಾಯಿತು.[೧೦] ಕ್ರಿ.ಶ. ೧೭೯೨ರ ಮೂರನೇ ಆಂಗ್ಲೋ ಮೈಸೂರು ಯುದ್ಧದಲ್ಲಿ ಟಿಪ್ಪು ಸೋಲಲು ಈ ಒಪ್ಪಂದ ಬಹುಮುಖ್ಯ ಕಾರಣವಾದಂತೆ ಕಂಡುಬರುತ್ತದೆ. ಬ್ರಿಟಿಷರೊಡನೆ ಮಾಡಿಕೊಂಡ ಒಪ್ಪಂದದ ನೆನಪಿಗೆ ಒಪ್ಪಂದವಾದ ಸ್ಥಳದಲ್ಲಿ ಕ್ರಿ.ಶ. ೧೭೯೨ರಲ್ಲಿ ವಿರಾಜಪೇಟೆ ನಿರ್ಮಾಣವಾಯಿತು. ಅದು ಕೊಡಗಿನ ಮೊದಲ ಯೋಜನಾ ಬದ್ಧ ನಗರವಾಗಿ ರಾಜ್ಯದ ಆರ್ಥಿಕ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸತೊಡಗಿತು. ಇದರೊಂದಿಗೆ ಅವರೆಗೆ ಬರಿಯ ಅರಣ್ಯಮಯವಾಗಿದ್ದ ದಕ್ಷಿಣಕೊಡಗು ನಗರೀಕರಣ ಪ್ರಕ್ರಿಯೆಗೆ ನಿಧಾನವಾಗಿ ಒಳಗಾಯಿತೆಂದು ಹೇಳಬಹುದು. ಹೊರನಾಡಿನ ವ್ಯಾಪಾರಸ್ಥರಿಗೆ ಸೋಮವಾರ ಪೇಟೆ ಮತ್ತು ವೀರ ರಾಜ ಪೇಟೆಗಳಲ್ಲಿ ಮಾತ್ರ ವ್ಯಾಪಾರ ನಡೆಸಲು ಅನುಮತಿ ನೀಡಲಾಯಿತು.[೧೧] ಬ್ರಿಟಿಷರೊಡನೆ ನಡೆದ ಒಪ್ಪಂದವನ್ನು ಕೊಡಗರು ತಮ್ಮ ಆರ್ಥಿಕ ಅಭ್ಯುದಯದ ಮುನ್ಸೂಚನೆ ಎಂದು ಭಾವಿಸತೊಡಗಿದ್ದಂತೆ ಕಂಡುಬರುತ್ತದೆ. ಏಕೆಂದರೆ ಕೊಡಗಿನಲ್ಲಿ ಈ ಒಪ್ಪಂದಕ್ಕೆ ಯಾರಿಂದಲೂ ಪ್ರತಿರೋಧ ವ್ಯಕ್ತವಾಗಲೇ ಇಲ್ಲ.

ಮೂರನೇ ಆಂಗ್ಲೋ - ಮೈಸೂರು ಯುದ್ಧದಲ್ಲಿ ಟಿಪ್ಪು ಸೋತ ಬಳಿಕ ಕಂಪೆನಿಯು ಟಿಪ್ಪುವಿನೊಡನೆ ಮಾಡಿಕೊಂಡ ಒಪ್ಪಂದದಲ್ಲಿ ದೊಡ್ಡ ವೀರ ರಾಜನಿಗೆ ಯಾವ ಪಾತ್ರವೂ ಇರಲಿಲ್ಲ.[೧೨] ಅಮರ ಸುಳ್ಯ ಸೀಮೆ ಮೈಸೂರಿಗೆ ಸೇರಿದ್ದೆಂದೂ, ಅಲ್ಲಿಂದ ತನಗೆ ೮೦೦ ವರಹ ವಾರ್ಷಿಕ ಪೊಗದಿ ಬರುತ್ತಿತ್ತೆಂದೂ ಟಿಪ್ಪು ಒಪ್ಪಂದದಲ್ಲಿ ಉಲ್ಲೇಖಿಸಿದ್ದ. ಅದನ್ನು ನಿಜವೆಂದು ನಂಬಿದ ಬ್ರಿಟಿಷರು ಅಮರ ಮತ್ತು ಸುಳ್ಯ ಮಾಗಣೆಗಳನ್ನೂ, ಪೊಗದಿ ಹಣವನ್ನೂ, ದೊಡ್ಡ ವೀರ ರಾಜ ತಮಗೆ ಕೊಡಬೇಕೆಂದು ಶರತ್ತು ವಿಧಿಸಿದರು. ಇದನ್ನು ವೀರರಾಜ ವಿರೋಧಿಸಿದ.[೧೩] ಆದರೆ ಪೊಗದಿ ನೀಡದೇ ಬ್ರಿಟಿಷರನ್ನು ಎದುರು ಹಾಕಿಕೊಳ್ಳಲು ಅವನಿಂದ ಸಾಧ್ಯವಾಗಲಿಲ್ಲ.

ದೊಡ್ಡವೀರರಾಜನ ನಡವಳಿಕೆಗಳ ಬಗ್ಗೆ ಬ್ರಿಟಿಷರಲ್ಲಿ ಗೊಂದಲಗಳಿದ್ದವು. ಅವನು ಟಿಪ್ಪುವಿನ ಪಕ್ಷ ವಹಿಸಬಹುದೆಂಬ ಸಂದೇಹವೂ ಇತ್ತು. ಟಿಪ್ಪುವಿನ ಸೆರೆಯಲ್ಲಿರುವಾಗಲೇ ದೊಡ್ಡ ವೀರನ ಸುನ್ನತ್ ನಡೆದದ್ದು ಮತ್ತು ದೊಡ್ಡವೀರನ ಇಬ್ಬರೂ ಸಹೋದರಿಯನ್ನು ಟಿಪ್ಪು ತನ್ನ ರಾಣಿಯರನ್ನಾಗಿ ಮಾಡಿಕೊಂಡದ್ದು ಈ ಸಂಶಯಕ್ಕೆ ತಳಹದಿಯಾಗಿತ್ತು. ಸೆರೆಯಿಂದ ತಪ್ಪಿಸಿದಾಗಲೇ ದೊಡ್ಡ ವೀರ ರಾಜನಿಗೆ ಕೊಡಗಿನ ಆಡಳಿತವನ್ನು ಬಿಟ್ಟು ಕೊಡುತ್ತಿದ್ದರೆ ಆತ ಬ್ರಿಟಿಷರೊಡನೆ ಒಪ್ಪಂದ ಮಾಡಿಕೊಳ್ಳುವ ಪ್ರಮೇಯ ಉದ್ಭವಿಸುತ್ತಿರಲಿಲ್ಲವೆಂದು ಬ್ರಿಟಿಷರು ಭಾವಿಸಿರುವ ಸಾಧ್ಯತೆಗಳಿವೆ. ಮೂರನೇ ಆಂಗ್ಲೋ – ಮೈಸೂರು ಯುದ್ಧದ ಬಳಿಕ ಮೈಸೂರನ್ನು ಮತ್ತು ಮಂಗಳೂರನ್ನು ಏಕ ಕಾಲದಲ್ಲಿ ತನ್ನ ಅಧೀನಕ್ಕೆ ಒಳಪಡಿಸಬೇಕೆಂದು ಕಂಪೆನಿ ಸರಕಾರ ಭಾವಿಸಿದಂತೆ ಕಂಡು ಬರುತ್ತದೆ. ಅದಕ್ಕಾಗಿ ಟಿಪ್ಪು ಒಬ್ಬ ಮತಾಂಧನೆಂದು

ಜನರಲ್ಲಿ ಭೀತಿ ಹಬ್ಬಿಸಿದಲ್ಲದೆ ದೊಡ್ಡ ವೀರ ರಾಜನ ಪಡೆ ಕೊಡಗು, ದ.ಕ. ಮತ್ತು ಮೈಸೂರು ರಾಜ್ಯದ ಸರಹದ್ದಿನಲ್ಲಿ ದರೋಡೆಗಳನ್ನು ನಡೆಸಿ ಅದು ತುರ್ಕರ ದಂಡಿನ ಕೃತ್ಯ ಎಂದು ಅಪ ಪ್ರಚಾರ ಮಾಡಿ ಟಿಪ್ಪುವಿನ ವಿರುದ್ಧ ಜನರು ಆಕ್ರೋಶಗೊಳ್ಳುವಂತೆ ಮಾಡಿತ್ತು. ದಕ್ಷಿಣ ಕನ್ನಡ ಜಿಲ್ಲೆಗೆ ಹೊಂಬಾಳೆ ನಾಯಕ ಮತ್ತು ಬೋಪ ಗೌಡನ ನೇತೃತ್ವದಲ್ಲಿ ಕೊಡಗಿನ ದೊಡ್ಡ ಪಡೆ ಆಗಮಿಸಿ ಜಿಲ್ಲೆಯನ್ನು ತಲ್ಲಣಗೊಳಿಸಿತ್ತು. ಬಂಟವಾಳದ ವೆಂಕಟ್ರಮಣ ದೇವಾಲಯದ ಮೂರ್ತಿಯನ್ನು ಕೂಡಾ ಈ ಪಡೆ ಬಲಾತ್ಕಾರದಿಂದ ಮಡಿಕೇರಿಗೆ ಒಯ್ಯಿತು.[೧೪] ಆದುದರಿಂದ ಕೊಡಗರ ಪಡೆಯೆಂದರೆ ಅದು ಕಾಟಕಾಯಿಯ ದಂಡು ಎಂದು ಜನರು ಭಾವಿಸುವಂತಾಯಿತು. ಈಸ್ಟ್ ಇಂಡಿಯಾ ಕಂಪೆನಿಯ ಕುಮ್ಮಕ್ಕಿನಿಂದಲೇ ನಡೆದ ಈ ಕೃತ್ಯದ ಹಿಂದೆ ಸ್ಥಳೀಯ ರಾಜರುಗಳನ್ನು ಪ್ರಜೆಗಳು ದ್ವೇಷಿಸುವಂತೆ ಮಾಡುವ ವಸಾಹತುಶಾಹಿ ತಂತ್ರ ಕಾರ್ಯ ಪ್ರವೃತ್ತವಾಗಿದ್ದಂತೆ ಕಂಡು ಬರುತ್ತದೆ.[೧೫] ದೊಡ್ಡವೀರ ಪರಿಸ್ಥಿತಿ ಅನಿವಾರ್ಯತೆಯಿಂದ ಬ್ರಿಟಿಷರೊಡನೆ ಒಪ್ಪಂದ ಮಾಡಿಕೊಂಡರೂ ಅವರು ಅಮರ ಮತ್ತು ಸುಳ್ಯದ ಪೊಗದಿಯ ವಿಷಯದಲ್ಲಿ ತನಗೆ ಅನ್ಯಾಯ ಮಾಡಿದುದನ್ನು ಅವನು ಮರೆಯಲು ಸಾಧ್ಯವಿರಲಿಲ್ಲ. ಇದರಿಂದಾಗಿ ಈಸ್ಟ್ ಇಂಡಿಯಾ ಕಂಪೆನಿ ಟಿಪ್ಪುವಿನೊಡನೆ ಎರಡನೆಯ ಬಾರಿ ಒಪ್ಪಂದ ಮಾಡಿಕೊಳ್ಳಬೇಕಾಯಿತು.[೧೬]

ಕ್ರಿ.ಶ. ೧೭೯೯ ರ ಮೇ ೪ ರಂದು ಟಿಪ್ಪು ಹತನಾದ ಮೇಲೆ ಮೈಸೂರಿನಿಂದ ಮಂಗಳೂರಿನವರೆಗೆ ಕಂಪೆನಿಯನ್ನು ಎದುರಿಸಿ ನಿಲ್ಲುವವರು ಯಾರೂ ಇರಲಿಲ್ಲ. ಆದರೆ ಕೊಡಗಿನಲ್ಲಿ ಜನಪ್ರಿಯನಾಗಿದ್ದ ದೊಡ್ಡವೀರ ರಾಜನನ್ನು ಮಾನಸಿಕವಾಗಿ ಸದೆಬಡಿಯಲು ಮಹಾರಾಜ ದುರ್ಗದ ಸುಲಿಗೆ ಪ್ರಕರಣವನ್ನು ಬ್ರಿಟಿಷರು ಸಮರ್ಥವಾಗಿ ಬಳಸಿಕೊಂಡರು.[೧೭] ಈ ಹಿಂದೆ ತುರ್ಕರ ದಂಡಿನ ಹೆಸರಲ್ಲಿ ದೊಡ್ಡ ವೀರ ರಾಜನ ಪಡೆ ಆಗಿನ ಕಾಲದಲ್ಲಿ ಸುಮಾರು ೪೦ ಲಕ್ಷ ರೂಪಾಯಿ ದರೋಡೆ ಮಾಡಿದ್ದನೆಂದು ಲಿಕ್ಟರ್ ಉಲ್ಲೇಖಿಸಿದ್ದಾನೆ.[೧೮] ಹಾಗಿದ್ದರೂ ಕರ್ನಲ್ ಬ್ಯಾರಿ ಕ್ಲೋಸ್ ಅಂತದ್ದೊಂದು ಪತ್ರ ಬರೆದಿದ್ದರ ಹಿನ್ನೆಲೆಯಲ್ಲಿ ಕೊಡಗನ್ನು ವಸಾಹತುಶಾಹಿ ಆಡಳಿತಕ್ಕೆ ನೇರವಾಗಿ ಒಳಪಡಿಸುವ ಮುನ್ಸೂಚನೆ ಇದ್ದಂತೆ ಕಂಡುಬರುತ್ತದೆ. ಪರಿಸ್ಥಿತಿಯ ಸರಿಯಾದ ವಿಶ್ಲೇಷಣೆ ನಡೆಸಿದ ದೊಡ್ಡ ವೀರ ರಾಜ ಕರ್ನಲ್ ಬ್ಯಾರಿ ಕ್ಲೋಸ್‌ನ ಪತ್ರಕ್ಕೆ ನೀಡಿದ ಉತ್ತರ ಆತನ ದೈನ್ಯಾವಸ್ಥೆಯನ್ನು ಬಯಲುಗೊಳಿಸುತ್ತದೆ.[೧೯] ದೊಡ್ಡ ವೀರ ರಾಜನ ಶರಣಾಗತಿಯಿಂದ ಸಂಪ್ರೀತರಾಗದ ಬ್ರಿಟಿಷರನ್ನು ಆತ ಕಂಪೆನಿಯಲ್ಲಿ ಎಂಟೂವರೆ ಲಕ್ಷ ರೂಪಾಯಿ ಡೆಪಾಸಿಟ್ಟು ಇಟ್ಟು ಒಲಿಸಿಕೊಂಡಂತೆ ಕಂಡು ಬರುತ್ತದೆ. ಏಕೆಂದರೆ ಆ ಬಳಿಕ ಕಂಪೆನಿಯು ಕೊಡಗಿಗೆ ಸಂಬಂಧಿಸಿದಂತೆ ದೊಡ್ಡವೀರ ರಾಜನ ಕಾಲದಲ್ಲಿ ಯಾವುದೇ ಅಪಸ್ವರವನ್ನು ಎತ್ತಿದ್ದು ಎಲ್ಲೂ ದಾಖಲಾಗಿಲ್ಲ.

ಟಿಪ್ಪು ಹತನಾದ ಮೇಲೆ ದೊಡ್ಡವೀರ ರಾಜ ಕೊಡಗಿನ ಅಧಿಕೃತ ಅರಸನಾದ. ಕ್ರಿ. ಶ. ೧೮೦೪ ರಲ್ಲಿ ಬ್ರಿಟಿಷರು ಸುಳ್ಯ ಮತ್ತು ಪುತ್ತೂರುಗಳ ೧೧೦ ಗ್ರಾಮಗಳನ್ನು ದೊಡ್ಡ ವೀರ ರಾಜನಿಗೆ ಅವನು ತಮಗೆ ಮಾಡಿದ ಸಹಾಯಕ್ಕಾಗಿ ಬಿಟ್ಟು ಕೊಟ್ಟರು. ನಾಲ್ಕು ನಾಡು ಅರಮನೆಯ ಪ್ರಾರಂಭೋತ್ಸವ ಮತ್ತು ರಾಣಿ ಮಹಾದೇವಮ್ಮಾಜಿಯೊಡನೆ ಅವನ ವಿವಾಹ ಮಹೋತ್ಸವ ಕಾಲದಲ್ಲಿ ಈಸ್ಟ್ ಇಂಡಿಯಾ ಕಂಪೆನಿಯ ಪ್ರಮುಖರು ಭಾಗವಹಿಸಿದ್ದರು.[೨೦] ದೊಡ್ಡ ವೀರ ರಾಜನಿಗೆ ರಾಣಿ ಮಹಾದೇವಮ್ಮಾಜಿಯ ನಿಧನದ ಬಳಿಕ ಕಾಡಿದ ಏಕಾಕಿತನ ಅನೇಕ ಅನಾಹುತಗಳಿಗೆ ಕಾರಣವಾಯಿತು. ತನ್ನನ್ನು ಹಿಂದೆ ಕೊಲ್ಲ ಬಯಸಿದ್ದ ತನ್ನ ಸಹೋದರರಾದ ಅಪ್ಪಂಗಳದ ಅಪ್ಪಾಜಿರಾಜ ಮತ್ತು ಹಾಲೇರಿಯ ಎರಡನೆಯ ಲಿಂಗರಾಜರನ್ನು ಮುಗಿಸಲು ಅವನು ತನ್ನ ಭಟರಿಗೆ ಆಜ್ಞೆಯಿತ್ತ. ಲಿಂಗರಾಜ ಅದು ಹೇಗೋ ಬದುಕಿಕೊಂಡ. ಅಪ್ಪಾಜಿ ರಾಜ ಹತನಾದ. ಇದರಿಂದ ಈಸ್ಟ್ ಇಂಡಿಯಾ ಕಂಪೆನಿ ತನ್ನ ಮೇಲೆ ಕ್ರೋಧಗೊಂಡು ವಿಚಾರಣೆ ನಡೆಸಬಹುದು ಎಂಬ ಭೀತಿಯಿಂದ ಅವನು ಮಾನಸಿಕ ಅಸ್ವಸ್ಥನಂತೆ ವ್ಯವಹರಿಸಿ ಮತ್ತಷ್ಟು ಅನಾಹುತಗಳಿಗೆ ಕಾರಣನಾದಂತೆ ಕಂಡುಬರುತ್ತದೆ. ಅವನ ಚಿಕಿತ್ಸೆಗೆಂದು ಈಸ್ಟ್ ಇಂಡಿಯಾ ಕಂಪೆನಿ ಡಾ. ಇಂಗಲ್ ಡ್ಯೂ ನನ್ನು ಕಳುಹಿಸಿಕೊಟ್ಟಿತು. ಕಂಪೆನಿಯನ್ನು ಒಲಿಸಿಕೊಳ್ಳಲು ಅವನು ರೂ. ಎಂಟೂವರೆ ಲಕ್ಷ ರೂಪಾಯಿ ಡೆಪೋಸಿಟ್ ಇಟ್ಟು ತನ್ನ ಬಳಿಕ ಈ ಹಣ ತನ್ನ ಮಗಳಾದ ದೇವಮ್ಮಾಜಿಗೆ ಸಲ್ಲತಕ್ಕದೆಂದು ಹಕ್ಕು ಪತ್ರದಲ್ಲಿ ಉಲ್ಲೇಖಿಸಿದ್ದ. ತನ್ನ ತಮ್ಮಂದಿರಲ್ಲಿ ಬದುಕುಳಿದ ಲಿಂಗರಾಜನು ಮಗಳ ಸಿಂಹಾಸನಾರೋಹಣಕ್ಕೆ ಅಡ್ಡಿಯಾಗಕೂಡದೆಂಬ ಕಾರಣಕ್ಕೆ ಮರಣ ಪತ್ರವನ್ನು ಬರೆದಿರಿಸಿ ಅದನ್ನು ಜಾರಿಗೆ ತರುವಂತೆ ಇಂಗಲ್ ಡ್ಯೂನಲ್ಲಿ ವಿನಂತಿಸಿದ. ಇಂಗ್ಲೀಷರನ್ನು ಮೆಚ್ಚಿಕೊಳ್ಳದಿದ್ದರೂ ನೇರವಾಗಿ ಎದುರುಹಾಕಿಕೊಳ್ಳದ ಕಾರಣ ಅವನ ಕಾಲದಲ್ಲಿ ಕೊಡಗನ್ನು ವಶಪಡಿಸಿಕೊಳ್ಳಬೇಕಾದ ಅನಿವಾರ್ಯತೆ ಈಸ್ಟ್ ಇಂಡಿಯಾ ಕಂಪೆನಿಗೆ ಉಂಟಾಗಲಿಲ್ಲ.[೨೧]

ದೊಡ್ಡ ವೀರ ರಾಜನ ಮಗಳು ದೇವಮ್ಮಾಜಿ ತಾನಾಗಿಯೇ ಅಧಿಕಾರವನ್ನು ಚಿಕ್ಕಪ್ಪನ ನಯವಂಚನೆಗೆ ಬಲಿಯಾಗಿ ಲಿಂಗರಾಜನಿಗೆ ವರ್ಗಾಯಿಸಿದಳು. ಈ ಬಗ್ಗೆ ಅವಳು ಬರೆದ ವಿನಂತಿ ಪತ್ರಕ್ಕೆ ತಕ್ಷಣ ಸ್ಪಂದಿಸಿದ ಈಸ್ಟ್ ಇಂಡಿಯಾ ಕಂಪೆನಿ ಇಂಗಲ್ ಡ್ಯೂನನ್ನು ಹಿಂದಕ್ಕೆ ಬರುವಂತೆ ಸೂಚಿಸಿತ್ತು. [೨೨]

ದೊಡ್ಡವೀರ ರಾಜ ಬ್ರಿಟಿಷರನ್ನು ವಿರೋಧಿಸದಿರಲು ತೀರಾ ಭಿನ್ನವಾದ ಇನ್ನೊಂದು ಕಾರಣವನ್ನು ಕೂಡಾ ನೀಡಲಾಗಿದೆ.[೨೩] ಈ ಕಾರಣದ ಪ್ರಕಾರ ಕ್ರಿ.ಶ. ೧೭೯೨ರಲ್ಲಿ ಕೊಡಗನ್ನು ಬ್ರಿಟಿಷರು ವಶಪಡಿಸಿಕೊಂಡು ಮರು ವರ್ಷ ಒಬ್ಬ ಅನಾಮಧೇಯನಿಗೆ ವೀರ ರಾಜೇಂದ್ರನೆಂದು ಹೆಸರಿಟ್ಟು ಕೊಡಗನ್ನು ಅವನ ವಶಕ್ಕೆ ನೀಡಿ ಅವನ ನಿಷ್ಠೆಯನ್ನು ಪರೀಕ್ಷಿಸಿ ಕ್ರಿ. ಶ. ೧೭೯೪ ರಲ್ಲಿ ಅವನಿಗೆ ಪಟ್ಟಾಭಿಷೇಕ ಮಾಡಿಸುತ್ತಾರೆ. ಟಿಪ್ಪು ಸುಲ್ತಾನನ ಹೆಸರನ್ನು ಹೇಳಿಕೊಂಡು ಹಳ್ಳಿಗಳನ್ನು

ದೋಚುವುದು ಆತನಿಗೆ ವಹಿಸಿದ ಕೆಲಸವಾಗಿದ್ದು ಅವನು ತನ್ನ ತಂಡಕ್ಕೆ ತುರ್ಕರ ದಂಡು ಎಂದು ಹೆಸರಿಟ್ಟಿದ್ದ. ಕೊಡಗರು ಟಿಪ್ಪುವನ್ನು ವಿರೋಧಿಸಲು ದೊಡ್ಡ ವೀರರಾಜನು ತುರ್ಕರ ದಂಡಿನ ಮೂಲಕ ನಡೆಸುತ್ತಿದ್ದ ದರೋಡೆ ಕಾರಣವಾಗಿತ್ತು. ಇದಕ್ಕೆ ಪೂರಕವಾಗಿ ಮಹಾ ರಾಜದುರ್ಗ ಜಿಲ್ಲೆಯಲ್ಲಿ ಕೊಡಗರು ಮಾಡಿದ ಸುಲಿಗೆಯನ್ನು ಉದಾಹರಣೆಯಾಗಿ ನೀಡಲಾಗಿದೆ. ಕೊಡಗಿನ ಹಾಲೇರಿ ರಾಜರ ಇತಿಹಾಸದ ಬಗ್ಗೆ ಸಿಗುವ ಆಧಾರ ಗ್ರಂಥ ರಾಜೇಂದ್ರ ನಾಮೆಯ ನೈಜತ್ವದ ಬಗ್ಗೆಯೂ ಸಂದೇಹ ವ್ಯಕ್ತಪಡಿಸಲಾಗಿದೆ. [೨೮] ರಾಜೇಂದ್ರ ನಾಮೆಯಲ್ಲಿ ಬರೆದಿರುವುದನ್ನು ಒಪ್ಪಿಕೊಳ್ಳಲು ಯಾವುದೇ ಸಾಕ್ಷ್ಯಾಧಾರಗಳು ಎಲ್ಲಿಯೂ ಸಿಗುವುದಿಲ್ಲ. ಕಟ್ಟಡ ಶಿಲಾ ಶಾಸನ, ತಾಮ್ರ ಶಾಸನವಾಗಲಿ, ನೆರೆಯ ರಾಜ್ಯದ ಇತಿಹಾಸದಲ್ಲಾಗಲೀ ಇದಕ್ಕೆ ಆಧಾರಗಳು ಸಿಗುವುದಿಲ್ಲ. ೨೦೦ ವರ್ಷಗಳ ಇತಿಹಾಸ ಒಮ್ಮಿಂದೊಮ್ಮೆಗೆ ೧೮೦೭ ರಲ್ಲಿ ಬರೆಸಲ್ಪಟ್ಟಿತು. ಅದೇ ವರ್ಷ ದೊಡ್ಡವೀರ ರಾಜನ ಪತ್ನಿ ಮಹಾದೇವಮ್ಮಾಜಿಯ ಮರಣದಿಂದಾಗಿ ಆತನಿಗೆ ಮತಿಭ್ರಮಣೆ ಉಂಟಾಗಿತ್ತು ಎಂದು ದಾಖಲಿಸಲ್ಪಟ್ಟಿದೆ. ಹಾಗಿದ್ದೂ ಅದೇ ವರ್ಷ ಆತ ರಾಜೇಂದ್ರ ನಾಮೆ ಬರೆಸಿದನೆಂದು ಹೇಳಲಾಗಿದೆ. ಇದನ್ನು ಬ್ರಿಟಿಷರ ಸೇನಾಧಿಕಾರಿ ಅಬರ್ ಕ್ರಾಂಬಿ ಮೂಲತಃ ಇಂಗ್ಲೀಷಲ್ಲಿ ಬರೆಸಿ ಆಗಿನ ಉರ್ದು ಮಿಶ್ರಿತ ಕನ್ನಡಕ್ಕೆ ಅನುವಾದ ಮಾಡಿಸಿದಂತೆ ಕಂಡು ಬರುತ್ತದೆ. [೨೯] ಈ ಕಾರಣಕ್ಕಾಗಿ ಮುಂದೆ ಬ್ರಿಟಿಷ್ ಇತಿಹಾಸಕಾರರು ಅದನ್ನೇ ಪ್ರಶ್ನಾತೀತ ಆಕರ ಗ್ರಂಥವಾಗಿ ಬಳಸಿಕೊಂಡಿರಬೇಕು.

ಮೇಲಿನ ಅಭಿಪ್ರಾಯವು 'ಕೊಡಗಿನ ಇತಿಹಾಸ'ದಲ್ಲಿ ಮತ್ತು 'ಕೊಡಗಿನ ಹಾಲೇರಿ ರಾಜವಂಶವೂ' ಎಂಬ ಕೃತಿಗಳಲ್ಲಿ ದಾಖಲಾದ ವಿಷಯಗಳಿಗೆ ತದ್ವಿರುದ್ಧವಾದ ಒಂದು ಅಭಿಪ್ರಾಯವಾಗಿದೆ. ಇದನ್ನು ಸಮರ್ಥಿಸುವ ಇನ್ನಷ್ಟು ದಾಖಲೆಗಳು ದೊರೆತ ಬಳಿಕ ಈ ಅಭಿಪ್ರಾಯವು ಅಧಿಕೃತವಾಗಬಹುದು. ಅದೇನಿದ್ದರೂ ಹಾಲೇರಿ ರಾಜವಂಶದ ಒಟ್ಟು ಇತಿಹಾಸದ ಹಿನ್ನೆಲೆಯಲ್ಲಿ ನೋಡುವಾಗ ದೊಡ್ಡ ವೀರರಾಜ ಕೊಡಗಿನ ಏಕೀಕರಣದ ಶಕ್ತಿಯಾಗಿ ಕಂಡು ಬರುತ್ತಾನೆ. ಆತನ ನಡವಳಿಕೆ ಮತ್ತು ನಿರ್ಣಯಗಳು ಆ ಕಾಲದ ಅನಿವಾರ್ಯತೆಗಳಾಗಿದ್ದಂತೆ ತೋರುತ್ತದೆ. ಅಲ್ಲದೆ ದೊಡ್ಡ ವೀರರಾಜ ಬ್ರಿಟಿಷರ ಸೃಷ್ಟಿಯೇ ಆಗಿದ್ದರೆ ಕ್ರಿ. ಶ. ೧೭೯೯ರಲ್ಲಿ ಟಿಪ್ಪುವಿನ ಮರಣವಾದ ಕೂಡಲೇ ಕೊಡಗನ್ನು ಬೇರಿಲ್ಲದ ಒಬ್ಬ ಮನುಷ್ಯನಿಗೆ ಒಪ್ಪಿಸಬೇಕಾದ ಯಾವ ಅನಿವಾರ್ಯತೆಯೂ ಬ್ರಿಟಿಷರಿಗೆ ಇರಲಿಲ್ಲ.

ಲಿಂಗರಾಜನು ಬ್ರಿಟಿಷರ ವಿರುದ್ಧವಾದ ಯಾವುದೇ ಚಟುವಟಿಕೆಗಳನ್ನು ನಡೆಸಲಿಲ್ಲ. ಕೊಡಗಿನ ಸಿಂಹಾಸನವನ್ನು ಏರುವಾಗ ಅದು ಅನಿವಾರ್ಯ ಎಂಬ ಭಾವನೆಯನ್ನು ಉಂಟು ಮಾಡಿದ್ದು ಅವನ ಬುದ್ಧಿವಂತಿಕೆಯ ದ್ಯೋತಕವಾಗಿತ್ತು. ಅವನ ಕಾಲದಲ್ಲಿ ಹೊರಡಿಸಲ್ಪಟ್ಟ ಹುಕುಂನಾಮೆಗಳು ಅವನು ಓರ್ವ ಸುಧಾರಕ ಎಂಬ ಭಾವನೆಯನ್ನು ಇಂಗ್ಲೀಷರಲ್ಲಿ ಉಂಟುಮಾಡಿದವು. ಹೊರನೋಟಕ್ಕೆ ಈ ಹುಕುಂನಾಮೆಗಳು ಸುಧಾರಣೆಗಳಂತೆ ಕಂಡು


ಬಂದರೂ ಆಂತರ್ಯದಲ್ಲಿ ಅವು ರಾಜಸತ್ತೆಯನ್ನು ಬಲಗೊಳಿಸುವ ಉದ್ದೇಶವನ್ನು ಹೊಂದಿದ್ದವು. ಜಾತಿ ಕಟ್ಟಳೆ ಮೀರಿ ಮದುವೆಯಾಗುವಂತಿಲ್ಲ[೨೬] ಎಂಬ ಅವನ ಹುಕುಂನಾಮೆಯು ಜಾತಿವ್ಯವಸ್ಥೆಯನ್ನು ಬಲಗೊಳಿಸಿ ಆ ಮೂಲಕ ಸಾಮಾಜಿಕ ಸಂಕ್ರಮಣ ಸಂಭವಿಸದಂತೆ ನೋಡಿಕೊಳ್ಳುವ ಒಂದು ತಂತ್ರವಾಗಿತ್ತು. ಜಾತಿ ವ್ಯವಸ್ಥೆ ಪ್ರಬಲವಾಗಿರುವಲ್ಲಿ ಭೇದೋಪಾಯದಿಂದ ಆಡಳಿತ ನಡೆಸುವುದು ಸುಲಭ ಎನ್ನುವುದು ಬ್ರಿಟಿಷರ ಅನುಭವ ಜ್ಞಾನವಾಗಿತ್ತು. ಆದುದರಿಂದ ಅವರು ಅಂಗರಾಜನ ಹುಕುಂನಾಮೆಯನ್ನು ವಿರೋಧಿಸಬೇಕಾದ ಕಾರಣಗಳೇ ಇರಲಿಲ್ಲ.

ಅಂಗರಾಜ ಬ್ರಿಟಿಷರ ಭೇದೋಪಾಯ ತಂತ್ರಗಳನ್ನು ಕರಗತ ಮಾಡಿಕೊಂಡಿದ್ದಂತೆ ಕಂಡುಬರುತ್ತದೆ. ಇದಕ್ಕೆ ಅವನು ಸಂಘಟನೆ ಇಲ್ಲದ ಅಥವಾ ಹೆಚ್ಚು ಪ್ರತಿರೋಧ ತೋರಲಾಗದ ಜಾತಿಗಳಿಗೆ ಹೆಚ್ಚು ಸುಂಕ ವಿಧಿಸಿದ್ದು ಮತ್ತು ಅತ್ಯಂತ ಪ್ರಬಲ ವರ್ಗಗಳಾದ ಕೊಡವ ಮತ್ತು ಗೌಡರ ಮೇಲೆ ಯಾವುದೇ ಸುಂಕ ಹೇರದ್ದು ಸಾಕ್ಷಿಯಾಗಿದೆ.[೨೭] ಇದಲ್ಲದೆ ಅವನು ಕೊಡಗಿನ ಪ್ರಬಲ ಜಮೀನ್ದಾರಿ ವರ್ಗವಾದ ಕೊಡವರನ್ನು ತನ್ನ ಸಮೀಪವರ್ತಿಗಳನ್ನಾಗಿ ಇಟ್ಟುಕೊಂಡಿದ್ದ.[೨೮] ಮಡಿಕೇರಿಯಲ್ಲಿ ಹೊಸದಾದ ಕೋಟೆಯನ್ನು ನಿರ್ಮಿಸಿದ್ದು, ಓಂಕಾರೇಶ್ವರ ದೇವಾಲಯವನ್ನು ಕಟ್ಟಿಸಿದ್ದು,[೨೯] ಅನೇಕ ದೇವಾಲಯಗಳಿಗೆ ಮತ್ತು ವಿರಾಜಪೇಟೆಯ ಇಗರ್ಜಿಯೊಂದಕ್ಕೆ ದಾನ ಮಾಡಿದ್ದು ಇವನು ಪ್ರಜೆಗಳನ್ನು ಸಮಾನತೆಯ ಭಾವದಿಂದ ಕಾಣುತ್ತಿದ್ದ ಎಂಬುದಕ್ಕೆ ಸಾಕ್ಷಿಯಂತಿದೆ. ಕೃಷಿಕರಿಗೆ ಅಪಾರ ಹಾನಿಯುಂಟು ಮಾಡುತ್ತಿದ್ದ ಆನೆಗಳನ್ನು ಬೇಟೆಯಾಡಿ ಬೇಸಾಯಗಾರರ ಸಂತೋಷಕ್ಕೆ ಈತ ಕಾರಣನಾಗಿದ್ದ. ಪುಂಡ ಆನೆಗಳನ್ನು ಹಿಡಿದು ಪಳಗಿಸಿ ಬ್ರಿಟಿಷರಿಗೆ ಉಡುಗೊರೆಯಾಗಿ ನೀಡಿ ಅವರು ಕೊಡಗನ್ನು ವಶಪಡಿಸಿಕೊಳ್ಳುವುದನ್ನು ಮುಂದೂಡುವಂತೆ ಮಾಡುವಲ್ಲಿ ಅಂಗರಾಜ ಸಫಲನಾಗಿದ್ದ.

ಇವನ ಕಾಲದಲ್ಲಿ ಕಾನರ್ ಎಂಬಾತ ಕೊಡಗಿನ ಸರ್ವೆ ಮಾಡಿ ಒಂದು ಭೂಪಟವನ್ನು ಸಿದ್ಧಗೊಳಿಸಿದ್ದ.[೩೦] (ಭೂಪಟ ೫.೧.) ಇವನ ನಕ್ಷೆ, ಶಿಸ್ತು ಕ್ರಮ ಮತ್ತು ಕೋಲು ಪದ್ಧತಿಯು ಈಸ್ಟ್ ಇಂಡಿಯಾ ಕಂಪೆನಿಯ ಮಾನ್ಯತೆಗೆ ಕಾರಣವಾಯಿತು. ಸಾಹಿತ್ಯ ಪ್ರಿಯನಾಗಿದ್ದ ಈತ ಕೆಲವು ಕೃತಿಗಳನ್ನು ರಚಿಸಿದ್ದ.[೩೧] ಯಾವ ಕಾರಣಕ್ಕೂ ಬ್ರಿಟಿಷರನ್ನು ಎದುರು ಹಾಕಿಕೊಳ್ಳಲು ಅಂಗರಾಜ ಹೋಗಲಿಲ್ಲ.

ಅಂಗರಾಜನ ಒಂದು ತೀರ್ಮಾನ ಕೊಡಗಿನ ಇತಿಹಾಸವನ್ನು ಬದಲಾಯಿಸಿದ್ದು ಒಂದು ವಿಪರ್ಯಾಸ. ಅದು ಮುಕ್ಕಾಟಿರ ಐಪಣ್ಣನೆಂಬಾತನನ್ನು ಲಿಂಗಾಯಿತನನ್ನಾಗಿ ಮತಾಂತರಿಸಿ ಚೆನ್ನಬಸಪ್ಪನೆಂದು ಹೆಸರಿಟ್ಟು ತನ್ನ ಮಗಳನ್ನು ಮದುವೆ ಮಾಡಿಸಿಕೊಟ್ಟದ್ದು. ದಿವಾನ ಅಪ್ಪಾರಂಡ ಬೋಪುವಿಗೆ ಕೊಡಗವನೊಬ್ಬನನ್ನು ಕೊಡಗಿನ ರಾಜನನ್ನಾಗಿ ಮಾಡಬೇಕೆಂಬ ಸುಪ್ತ ಹಂಬಲವಿದ್ದಂತೆ ಅವನ ನಡುವಳಿಕೆಗಳಿಂದ ಕಂಡುಬರುತ್ತದೆ.

ಅ.೧ 1804 ರಿಂದ 1834 ರ ವರೆಗಿನ ಕೊಡಗು



ದಿವಾನನಾದ ತಾನು ರಾಜನಾಗಲು ಸಾಧ್ಯವಿಲ್ಲವೆಂಬ ಸತ್ಯದ ಅರಿವು ಅವನಿಗಿತ್ತು. ಆದುದರಿಂದ ಅವನು ಮೂಲತಃ ಕೊಡವನೇ ಆದ ಚೆನ್ನಬಸಪ್ಪನನ್ನು ಲಿಂಗರಾಜನ ಮಗ ಚಿಕ್ಕವೀರನ ವಿರುದ್ಧ ಎತ್ತಿ ಕಟ್ಟಿರಬೇಕು. ಇದು ಚಿಕ್ಕ ವೀರನ ಕಾಲದಲ್ಲಿ ಬ್ರಿಟಿಷರು ಆಡಳಿತದಲ್ಲಿ ಮೂಗು ತೂರಿಸಲು ಕಾರಣವಾದಂತೆ ಕಂಡುಬರುತ್ತದೆ.

ಚಿಕ್ಕವೀರನ ಕೆಲವು ನಡವಳಿಕೆಗಳು ಕೂಡಾ ಕೊಡಗನ್ನು ವಶಪಡಿಸಿಕೊಳ್ಳಲು ವಸಾಹತುಶಾಹಿಗೆ ಅವಕಾಶವನ್ನು ಕಲ್ಪಿಸಿಕೊಟ್ಟವು. ಎಳವೆಯಲ್ಲಿ ಆತನಿಗಿದ್ದ ವಿಷಯಾಸಕ್ತಿಯಿಂದಾಗಿ ಅವನು ಅನೇಕ ಪ್ರಮುಖ ಕೊಡವ ಕುಟುಂಬಗಳ ಮನಸ್ತಾಪ ಕಟ್ಟಿಕೊಂಡ. ಈ ವಿಷಯವನ್ನು ಬೋಪು ದಿವಾನ ತನ್ನ ಪರವಾಗಿ ಬಳಸಿಕೊಂಡು ಚೆನ್ನಬಸಪ್ಪ ಮತ್ತು ಚಿಕ್ಕ ವೀರನ ನಡುವಣ ಅಂತರವನ್ನು ಹೆಚ್ಚಿಸಿ ಅಂತಿಮವಾಗಿ ಚೆನ್ನ ಬಸಪ್ಪ ಬ್ರಿಟಿಷರ ಆಶ್ರಯ ಪಡೆಯುವಂತೆ ಪ್ರೇರೇಪಿಸಿದ. ಚೆನ್ನ ಬಸಪ್ಪನನ್ನು ಗಾಳವಾಗಿ ಬಳಸಿಕೊಂಡು ಮೈಸೂರಿನ ರೆಸಿಡೆಂಟ್ ಕಾಸ್ ಮೈಜರನು ರಾಜನ ವಿರುದ್ಧ ಗವರ್ನರ್ ಜನರಲ್ ಲಾರ್ಡ್ ಬೆಂಟಿಂಕ್‌ನಿಗೆ ಕೊಡಗನ್ನು ವಶಪಡಿಸಿಕೊಳ್ಳಲು ಇದು ತಕ್ಕ ಸಮಯವೆಂದು ಸಂದೇಶ ರವಾನಿಸಿದ. ಅಪಾಯವರಿತ ಚಿಕ್ಕವೀರನು ಮಾತುಕತೆಗೆ ಹಿರಿಯ ಇಂಗ್ಲೀಷ್ ಅಧಿಕಾರಿಗಳನ್ನು ಆಹ್ವಾನಿಸಿದರೆ ಬ್ರಿಟಿಷರು ವಕೀಲ ಕರುಣಾಕರ ಮೆನನ್‌ನನ್ನು ಕಳುಹಿಸಿಕೊಟ್ಟು ರಾಜನನ್ನು ಅಪಮಾನಿಸಿದ್ದು ಅವನ ಸ್ವಾಭಿಮಾನವನ್ನು ಕೆರಳಿಸಿರಬೇಕು. ಕುಪಿತನಾದ ಚಿಕ್ಕವೀರ ಕರುಣಾಕರ ಮೆನನ್‌ನನ್ನು ಬಂಧಿಸಿ ಸೆರೆಮನೆಗೆ ತಳ್ಳಿ ಲಾರ್ಡ್ ಬೆಂಟಿಂಕ್‌ನ ಎಲ್ಲಾ ಪತ್ರಗಳನ್ನು ಅವಗಣಿಸಿದ್ದು ಕೊಡಗಿನ ಮೇಲಣ ಆಕ್ರಮಣಕ್ಕೆ ಅವಕಾಶ ಕಲ್ಪಿಸಿಕೊಟ್ಟಿತು.[೩೨] ಅದಕ್ಕಿಂತಲೂ ಮುಖ್ಯವಾಗಿ ದೊಡ್ಡ ವೀರ ರಾಜ ಕಂಪೆನಿ ಸರಕಾರದಲ್ಲಿ ಇರಿಸಿದ ಎಂಟೂವರೆ ಲಕ್ಷ ರೂಪಾಯಿ ಡೆಫಾಸಿಟ್‌ನ್ನು ಹಿಂತಿರುಗಿಸುವ ಮನಸ್ಸಾಗಲೀ ಸಾಮರ್ಥ್ಯವಾಗಲೀ ಆ ಸಂದರ್ಭದಲ್ಲಿ ಕಂಪೆನಿ ಸರಕಾರಕ್ಕೆ ಇರಲಿಲ್ಲ. ಅಲ್ಲದೇ ಚಿಕ್ಕವೀರ ರಾಜ ಕೊಡಗು ಇಂಗ್ಲೀಷರ ಆಶ್ರಯ ರಾಜ್ಯವಲ್ಲ ; ಒಂದು ಸ್ವತಂತ್ರ ರಾಜ್ಯ ಎಂದು ಪೊಗದಿ ಕಟ್ಟಲು ನಿರಾಕರಿಸಿದ್ದ. ಚೆನ್ನ ಬಸಪ್ಪ ಮತ್ತು ಬೋಪು ದಿವಾನ ತಮ್ಮ ಕಡೆಗೆ ಇರುವುದರಿಂದ ಕೊಡಗನ್ನು ಗೆಲ್ಲುವುದು ಏನೇನೂ ಕಷ್ಟವಲ್ಲ ಎಂಬ ಭಾವನೆ ಇಂಗ್ಲೀಷರಲ್ಲಿ ಮೂಡಿದ್ದು ಕೊಡಗಿನ ಶೀಘ್ರ ಆಕ್ರಮಣಕ್ಕೆ ಕಾರಣವಾಯಿತು. ಒಟ್ಟಿನಲ್ಲಿ ಕೊಡಗನ್ನು ಬ್ರಿಟಿಷರು ವಶಪಡಿಸಿಕೊಳ್ಳಲು ಆರ್ಥಿಕ ಅಂಶಗಳು ಪ್ರಧಾನ ಕಾರಣಗಳಾದವು.

ಸಮಷ್ಟಿ ನೆಲೆಯಲ್ಲಿ ಕೊಡಗಿನ ಆಕ್ರಮಣವನ್ನು ಸಮಗ್ರ ಭಾರತದ ಮೇಲಣ ವಸಾಹತುಶಾಹಿ ಆಕ್ರಮಣದ ಒಂದು ಭಾಗವಾಗಿ ಪರಿಗಣಿಸಬಹುದು. ಕೊಡಗನ್ನು ಬ್ರಿಟಿಷರು ಆಕ್ರಮಿಸುವುದಕ್ಕೆ ಮುನ್ನ ಕರ್ನಾಟಕದಲ್ಲಿ ಕಿತ್ತೂರು ರಾಣಿ ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ, ದೊಂಢಿಯಾವಾಘ್, ನಗರ ಬೂದಿ ಬಸವಯ್ಯ ಮುಂತಾದವರು ಬ್ರಿಟಿಷ್ ವಸಾಹತು

ಶಾಹಿಯನ್ನು ವಿರೋಧಿಸಿ ಬಂಡೆದ್ದು ಸೋಲುಂಡಿದ್ದರು. ಈ ಪ್ರಕರಣಗಳು ಪ್ರತ್ಯ ಪ್ರತ್ಯೇಕ ಕಾಲ ಘಟ್ಟಗಳಲ್ಲಿ ನಡೆದುದರಿಂದ ಸ್ಥಳೀಯ ಶಕ್ತಿಗಳ ಬಿಕ್ಕಟ್ಟು ವಸಾಹತುಶಕ್ತಿಯ ವಿಜಯಕ್ಕೆ ಕಾರಣವಾಗಿತ್ತು. ಬಂಡಾಯದಲ್ಲಿ ಪಾಲ್ಗೊಂಡಿದ್ದ ನಗರೆಯ ಪಾಳೆಗಾರ ಸರ್ಜಪ್ಪ ನಾಯಕ ಕೊಡಗಿಗೆ ಬಂದು ಚಿಕ್ಕ ವೀರರಾಜನ ಆಶ್ರಯ ಬೇಡಿದಾಗ ಅವನಿಗೆ ನೆಲೆಯೊದಗಿಸಿದ ರಾಜ ಬ್ರಿಟಿಷ್ ವಸಾಹತುಶಕ್ತಿಯ ಬಗ್ಗೆ ಕೀಳಂದಾಜು ಹೊಂದಿದ್ದ ಹಾಗೆ ಕಂಡುಬರುತ್ತದೆ. ಇದಕ್ಕೆ ಪೂರಕವಾಗಿ ಅವನು ಚಿತ್ರದುರ್ಗದ ಬೇಡರ ಪಡೆಯನ್ನು ಮತ್ತು ಬಲಾಢ್ಯ ಸಿದ್ಧಿ ಕಾವಲುಗಾರನನ್ನು ಯುದ್ಧಕ್ಕೆ ಸಿದ್ಧತೆಗೊಳಿಸಿದ್ದು ಸಾಕ್ಷಿಯಾಗಿದೆ.[೩೩]

ಏಳು ಸಾವಿರ ಸೀಮೆಯ ಒಕ್ಕಲಿಗ ಲಿಂಗಾಯತ ಮುಖ್ಯಸ್ಥರನ್ನು ಆತ ಅರಮನೆಗೆ ಕರೆಸಿ ಅವರಿಗೆ ಕಸೂತಿ ಹಾಕಿದ ಶಾಲ್ ಪಚ್ಚಡ ಸಾಲು ಹೊದಿಸಿ, ಸನ್ಮಾನಿಸಿ ಬ್ರಿಟಿಷರ ವಿರುದ್ಧದ ಯುದ್ಧದಲ್ಲಿ ಕೊಡಗಿನ ಸ್ವಾಭಿಮಾನವನ್ನು ಸಂರಕ್ಷಿಸುವ ತನ್ನ ಯತ್ನಕ್ಕೆ ಪೂರ್ಣ ಬೆಂಬಲವನ್ನು ಕೋರಿದ. ಆ ಬಳಿಕ ಕೊಡವ ಪ್ರಮುಖರನ್ನು ಅರಮನೆಗೆ ಕರೆಸಿ ಹಾಲು ಅನ್ನ ಊಟ ಹಾಕಿಸಿ ಇಂಗ್ಲಿಷರ ವಿರುದ್ಧ ಸಂದರ್ಭ ಬಂದಾಗ ಪ್ರಾಣ ಕೊಟ್ಟು ಕೊಡಗನ್ನು ರಕ್ಷಿಸುವುದಾಗಿ ಪ್ರಮಾಣ ಮಾಡಿಸಿದ.[೩೪] ಏಳು ಸಾವಿರ ಸೀಮೆಯ ಪ್ರಮುಖರಿಂದ ಅಂತಹ ಪ್ರಮಾಣವನ್ನು ಆತ ಮಾಡಿಸಿರಲಿಲ್ಲ. ಬೋಪು ದಿವಾನ ಮತ್ತು ಚೆನ್ನ ಬಸಪ್ಪರಿಂದಾಗಿ ಕೊಡವರು ಬ್ರಿಟಿಷರ ಪರ ವಹಿಸಬಹುದು ಎಂಬ ಗುಮಾನಿ ಆತನಲ್ಲಿದ್ದುದು ಈ ಪ್ರಮಾಣ ಪ್ರಕರಣಕ್ಕೆ ಕಾರಣವಾಗಿರಬೇಕು. ಸರ್ಜಪ್ಪ ನಾಯಕನನ್ನು ತಮ್ಮ ವಿರೋಧಿಯೆಂದು ಪರಿಗಣಿಸಿ ಆತನನ್ನು ಬಿಟ್ಟು ಕೊಡುವಂತೆ ಬ್ರಿಟಿಷರು ಮಾಡಿದ ಮನವಿಯನ್ನು ಸ್ವಾಭಿಮಾನದ ಕಾರಣದಿಂದಾಗಿ ಚಿಕ್ಕ ವೀರರಾಜ ಲಕ್ಷ್ಯಕ್ಕೇ ತೆಗೆದುಕೊಳ್ಳಲಿಲ್ಲ. ವಸಾಹತುಶಾಹಿ ಸರ್ಜಪ್ಪ ನಾಯಕನನ್ನು ಪಡೆಯಲೇ ಬೇಕೆಂಬ ಪ್ರಾಮಾಣಿಕ ಉತ್ಸುಕತೆಯನ್ನು ತೋರಿದಂತೆ ಕಂಡು ಬರುವುದಿಲ್ಲ. ಆದರೆ ಇದನ್ನು ಚಿಕ್ಕ ವೀರನ ಮೇಲೆ ಒತ್ತಡ ಹೇರುವ ಒಂದು ತಂತ್ರವಾಗಿ ಬಳಸುವಲ್ಲಿ ಅದು ಯಶಸ್ವಿಯಾಯಿತು. ಆರ್ಥಿಕ ಕಾರಣಗಳೊಡನೆ ನಾಡಪ್ರೇಮ ಮತ್ತು ಸ್ವಾಭಿಮಾನ ವಸಾಹತುಶಕ್ತಿಯ ಪ್ರವೇಶಕ್ಕೆ ಕಾರಣಗಳಾಗಿಬಿಟ್ಟವು.

೫.೨. ವಸಾಹತುಶಾಹಿಯ ಪ್ರವೇಶ

ಬ್ರಿಟಿಷರ ಸೇನೆ ಕೊಡಗನ್ನು ಪ್ರವೇಶಿಸಿದಾಗ ಸ್ವಲ್ಪ ಸ್ವಲ್ಪ ಪ್ರತಿಭಟನೆ ಕಂಡುಬಂದರೂ ಅದರಿಂದ ಪ್ರಯೋಜನವೇನೂ ಆಗಲಿಲ್ಲ. ಚಿಕ್ಕವೀರರಾಜ ಶರಣಾಗತಿಯ ಘೋಷಣೆ ಹೊರಡಿಸಿ ನಾಲ್ಕು ನಾಡಿಗೆ ಪಲಾಯನ ಮಾಡಿದ ಮೇಲೆ ಅಂತಹ ಪ್ರತಿಭಟನೆಗಳು ನಿಂತು ಹೋದವು. ಶರಣಾಗತಿಯ ಹಿನ್ನೆಲೆಯಲ್ಲಿ ಕೆಲಸಮಾಡಿದ್ದು ದಿವಾನ ಬೋಪುವಿನ ಸಲಹೆ ರಾಜನ ಪದಚ್ಯುತಿಯ ಬಳಿಕ ಕೊಡಗಿನಲ್ಲಿ ಆಡಳಿತ ಪ್ರತಿನಿಧಿಯಾಗಿ ಚಿಕ್ಕವೀರನನ್ನು

ಉಳಿಸಿಕೊಳ್ಳಬಹುದೆಂಬ ನಿರೀಕ್ಷೆ ಸುಳ್ಳಾಯಿತು. ತನ್ನನ್ನು ಅಥವಾ ಚೆನ್ನ ಬಸಪ್ಪನನ್ನು ಸಿಂಹಾಸನದಲ್ಲಿ ಕೂರಿಸಬಹುದೆಂಬ ಬೋಪುವಿನ ನಿರೀಕ್ಷೆಯೂ ಹುಸಿಯಾಯಿತು. ಕೊಡಗು ಕಂಪೆನಿ ಸರಕಾರದ ಅಧೀನ ಸಂಸ್ಥಾನವಾಯಿತು. ಕ್ಯಾಪ್ಟನ್ ಫ್ರೇಸರನ ಚಾಕಚಕ್ಯತೆ ಇದಕ್ಕೆ ಕಾರಣವಾಗಿತ್ತು.[೩೫] ಅಲ್ಲಿಗೆ ಕೊಡಗಿನಲ್ಲಿ ರಾಜ ಮನೆತನದ ಆಳ್ವಿಕೆ ಶಾಶ್ವತವಾಗಿ ಕೊನೆಗೊಂಡಿತು. ಕ್ರಿ . ಶ. ೧೭೯೯ರಲ್ಲಿ ದಕ್ಷಿಣ ಕನ್ನಡದ ಆಡಳಿತವನ್ನು ಕೈಗೆತ್ತಿಕೊಂಡ ಬ್ರಿಟಿಷರು ಕೊಡಗನ್ನು ವಶಪಡಿಸಿಕೊಳ್ಳಲು ೩೫ ವರ್ಷ ಕಾಯಬೇಕಾದುದ್ದರ ಹಿನ್ನೆಲೆಯ ಕಾರಣಗಳನ್ನು ಹೀಗೆ ವಿಶ್ಲೇಷಿಸಬಹುದು:

❖ ದೊಡ್ಡ ವೀರರಾಜನನ್ನು ಟಿಪ್ಪುವಿಗೆ ಎದುರಾಗಿ ನಿಲ್ಲಿಸಿದವರು ಬ್ರಿಟಿಷರು. ಅವನ ಸುತ್ತ ಮುತ್ತ ಇದ್ದವರು ಬಲಾಢ್ಯ ಜಮೀನುದಾರೀ ವರ್ಗಕ್ಕೆ ಸೇರಿದ ಕೊಡವರು. ಟಿಪ್ಪುವನ್ನು ನಿವಾರಿಸುವವರೆಗೂ ಇವರಿಬ್ಬರ ಬೆಂಬಲ ಬ್ರಿಟಿಷರಿಗೆ ಅನಿವಾರ್ಯವಾಗಿ ಬೇಕಿತ್ತು. ಟಿಪ್ಪು ಸತ್ತ ಕೂಡಲೇ ಕೊಡಗನ್ನು ವಶಪಡಿಸಿಕೊಳ್ಳುತ್ತಿದ್ದರೆ ಈಸ್ಟ್ ಇಂಡಿಯಾ ಕಂಪೆನಿ ಮಿತ್ರ ದ್ರೋಹದ ಆಪಾದನೆಯನ್ನು ಹೊರಬೇಕಾಗಿತ್ತು. ದೊಡ್ಡವೀರ ರಾಜ ಕೊಡಗಿನ ರಾಜನಾದ ಮೇಲೆ ಕಂಪೆನಿಯಲ್ಲಿ ಎಂಟೂವರೆ ಲಕ್ಷ ರೂಪಾಯಿ ಠೇವಣಿ ಇರಿಸಿದ್ದ.[೩೬] ಈಸ್ಟ್ ಇಂಡಿಯಾ ಕಂಪೆನಿ ಅವನ ಕಾಲದಲ್ಲಿ ಕೊಡಗನ್ನು ವಶಪಡಿಸಿಕೊಂಡಿದ್ದರೆ ಅದರ ಠೇವಣಿದಾರರಿಗೆ ತಪ್ಪು ಸಂದೇಶ ರವಾನೆಯಾಗುತ್ತಿತ್ತು. ಆ ಕಾಲದಲ್ಲಿ ದೊಡ್ಡವೀರ ರಾಜ ಅಷ್ಟು ದೊಡ್ಡ ಮೊತ್ತವನ್ನು ಕಂಪೆನಿಯಲ್ಲಿ ಇರಿಸದೇ ಇರುತ್ತಿದ್ದರೆ ಕಂಪೆನಿ ಆರ್ಥಿಕ ಮುಗ್ಗಟ್ಟಿನಿಂದ ಕುಸಿಯುವ ಸಂಭವವಿತ್ತು. ಕಂಪೆನಿಯನ್ನು ಮುಗ್ಗಟ್ಟಿನಿಂದ ರಕ್ಷಿಸಿದ ದೊಡ್ಡವೀರನಿಗೆ ವಿರುದ್ಧವಾಗಿ ಹೋಗಲು ಕಂಪೆನಿಗೆ ಯಾವ ತರ್ಕವೂ ಇರಲಿಲ್ಲ.

❖ ಲಿಂಗರಾಜನ ಕಾಲದಲ್ಲಿ ಬ್ರಿಟಿಷರು ಕೊಡಗನ್ನು ಆಕ್ರಮಿಸಬೇಕಾದ ಪ್ರಮೇಯವನ್ನು ಆತ ಒದಗಿಸಿಕೊಡಲಿಲ್ಲ. ಕೊಡಗಿನ ಆಕ್ರಮಣಕ್ಕೆ ಮುನ್ನ ರಾಜನ ಆಡಳಿತ ಪ್ರದೇಶದ ವ್ಯಾಪ್ತಿ ಮತ್ತು ಭೌಗೋಳಿಕ ಸ್ಥಿತಿಗತಿಗಳನ್ನು ತಿಳಿಯುವ ಕಾರಣಕ್ಕಾಗಿ ಕ್ರಿ. ಶ. ೧೮೧೭ರಲ್ಲಿ ಕಾನರ್‌ನಿಂದ ಕೊಡಗಿನ ಸರ್ವೆ ಮಾಡಿಸಿ ಕೊಡಗಿನ ಭೂಪಟವನ್ನು ಸಿದ್ಧಗೊಳಿಸಲಾಯಿತು. ಲಿಂಗರಾಜನಿಗೆ ಸರ್ವೆಯ ಉದ್ದೇಶದ ಬಗ್ಗೆ ಖಚಿತ ಜ್ಞಾನ ಇದ್ದಂತಿಲ್ಲ. ಅಥವಾ ಅರ್ಥವಾದರೂ ಅವನು ಏನನ್ನೂ ಬ್ರಿಟಿಷರ ವಿರುದ್ಧ ಮಾಡುವ ಸ್ಥಿತಿಯಲ್ಲಿ ಇರಲಿಲ್ಲ ಎನಿಸುತ್ತದೆ. ಅಲ್ಲದೆ ತನ್ನ ಅಣ್ಣನ ಮಗಳಾದ ದೇವಮ್ಮಾಜಿಗೆ ಮೋಸ ಮಾಡಿ ತಾನು ರಾಜನಾದೆನೆಂಬ ಅಪರಾಧಿ ಪ್ರಜ್ಞೆಯಿಂದ ಬಳಲುತ್ತಿದ್ದ ಆತ ನೈತಿಕವಾಗಿಯೂ ಕುಸಿದಿದ್ದ. ದೇವಮ್ಮಾಜಿ ಮೆಜಾರಿಟಿಗೆ ಬಂದಾಗ ಈಸ್ಟ್ ಇಂಡಿಯಾ ಕಂಪೆನಿಯು ಸಿಂಹಾಸನದ ಮೇಲೆ ಅವಳಿಗಿರುವ ಹಕ್ಕನ್ನು ಬೆಂಬಲಿಸಿದರೆ ತಾನು ಮೊದಲಿನಂತೆ ಹಾಲೇರಿಯಲ್ಲಿ ಕೃಷಿ ಕೆಲಸದಲ್ಲಿ

ಬದುಕನ್ನು ಸಾಗಿಸಬೇಕಾದಿತೆಂಬ ಭೀತಿ ಅವನನ್ನು ಕಾಡುತ್ತಿದ್ದಂತೆ ಕಂಡುಬರುತ್ತದೆ. ಹಾಗಾಗಿ ಆತ ಯಾವುದೇ ಕಾರಣಕ್ಕೆ ಬ್ರಿಟಿಷರನ್ನು ಎದುರು ಹಾಕಿಕೊಳ್ಳುವಂತೆ ಇರಲಿಲ್ಲ. ಅಲ್ಲದೇ ದೊಡ್ಡ ವೀರ ರಾಜನಿಗೆ ಇದ್ದ ಹಾಗೆ ಅಂಗರಾಜನಿಗೂ ಕೊಡಗರ ಬೆಂಬಲವಿತ್ತು. ಕಾರಣವಿಲ್ಲದೆ ಅವನನ್ನು ಕೆಳಗಿಳಿಸಿದರೆ ಕೊಡಗರ ಅನಗತ್ಯ ಆಗ್ರಹಕ್ಕೆ ತಾವು ತುತ್ತಾಗಬೇಕಾದೀತು ಎಂಬ ಅರಿವೂ ಇತ್ತು. ಇದು ಕೊಡಗನ್ನು ಬ್ರಿಟಿಷರು ಅಂಗರಾಜನ ಕಾಲದಲ್ಲಿ ಆಕ್ರಮಿಸದಿರಲು ಕಾರಣವಾಗಿರಬೇಕು .

❖ ಕ್ರಿ.ಶ. ೧೭೮೦ರಲ್ಲಿ ಅಂಗರಾಜೇಂದ್ರನ ನೆರವಿಗಾಗಿ ಹೈದರಾಲಿಯ ಸೇನೆ ಕೊಡಗನ್ನು ಪ್ರವೇಶಿಸಿದಾಗ ಅದು ಹೀನಾಯ ಸೋಲನ್ನು ಉಂಡಿತ್ತು. ಆದರೆ ದಕ್ಷಿಣ ಕೊಡಗಿನ ಜನರ ನೆರವನ್ನು ಪಡೆದ ಮೇಲೆ ಮಡಿಕೇರಿಯನ್ನು ಮುತ್ತಿ ದೇವಪ್ಪರಾಜನನ್ನು ಸೋಲಿಸಿ ಅಂಗರಾಜೇಂದ್ರನಿಗೆ ರಾಜ್ಯವನ್ನು ಬಿಟ್ಟು ಕೊಡಲು ಹೈದರಾಲಿಗೆ ಸಾಧ್ಯವಾಗಿತ್ತು. ಅಂಗರಾಜೇಂದ್ರನ ಮರಣಾನಂತರ ಕೊಡಗಿನ ಆಡಳಿತವನ್ನು ಟಿಪ್ಪು ವಹಿಸಿಕೊಂಡ. ಆದರೆ ಬ್ರಿಟಿಷರ ವಿರುದ್ಧದ ನಿರಂತರ ಯುದ್ಧದಿಂದಾಗಿ ಕೊಡಗಿಗೆ ಹೆಚ್ಚು ಗಮನ ನೀಡಲು ಅವನಿಂದ ಸಾಧ್ಯವಾಗಲಿಲ್ಲ. ಅದರ ಪರಿಣಾಮವಾಗಿ ನಾಗಪ್ಪಯ್ಯನಂತಹ ಸುಲಿಗೆಕೋರರು ಹುಟ್ಟಿಕೊಂಡು ಕೊಡಗಿನ ಜನರು ಟಿಪ್ಪುವನ್ನು ದ್ವೇಷಿಸುವಂತಾಯಿತು. ಸ್ಥಳೀಯರ ನೆರವಿಲ್ಲದಿದ್ದರೆ ಕೊಡಗನ್ನು ವಶಪಡಿಸಿಕೊಳ್ಳಲು ಮತ್ತು ಹಿಡಿದಿಟ್ಟುಕೊಳ್ಳಲು ಸಾಧ್ಯವಿಲ್ಲ ಎಂಬ ಪಾಠವನ್ನು ಹೈದರ್ ಮತ್ತು ಟಿಪ್ಪು ಪ್ರಕರಣಗಳಲ್ಲಿ ಬ್ರಿಟಿಷರು ಕಲಿತಂತೆ ಕಂಡುಬರುತ್ತದೆ. ಹಾಗಾಗಿ ಕೊಡಗಿನ ವಶೀಕರಣ ತುಂಬಾ ನಿಧಾನವಾಯಿತು.

❖ ಬಹುತೇಕವಾಗಿ ಗುಡ್ಡಗಾಡು ಅರಣ್ಯ ಪ್ರದೇಶವಾಗಿದ್ದ ಕೊಡಗಿನ ಆರ್ಥಿಕತೆ ದಕ್ಷಿಣಕನ್ನಡದ ಆರ್ಥಿಕತೆಯಷ್ಟು ಅಭಿವೃದ್ಧಿ ಹೊಂದಿರಲಿಲ್ಲ. ಕೊಡಗಿಗೆ ಜಲಮಾರ್ಗವಾಗಲೀ, ಭೂಮಾರ್ಗವಾಗಲೀ ಇರಲಿಲ್ಲ.ಮತ್ತು ಹೈದರಾಲಿ ಮತ್ತು ಟಿಪ್ಪು ಮಲಬಾರದೊಡನೆ ಸಂಬಂಧ ಇರಿಸಿಕೊಳ್ಳದಿರುತ್ತಿದ್ದರೆ ಬಹುಶಃ ಕೊಡಗು ಮತ್ತೂ ನೂರು ವರ್ಷ ಯಾರ ಗಮನಕ್ಕೂ ಬರುತ್ತಿರಲಿಲ್ಲ. ಕೊಡಗಿನಲ್ಲಿ ಬೆಳೆಯುತ್ತಿದ್ದ ಅಕ್ಕಿ ಹೆಚ್ಚು ಕಡಿಮೆ ಸ್ಥಳೀಯ ಅನುಭೋಗಕ್ಕೆ ಸಾಕಾಗುತ್ತಿತ್ತು. ದಟ್ಟ ಅರಣ್ಯಮಯ ಪ್ರದೇಶವಾಗಿದ್ದ, ವರ್ಷದಲ್ಲಿ ನಾಲ್ಕು ತಿಂಗಳು ಎಡೆಬಿಡದೆ ಜಡಿ ಮಳೆ ಬೀಳುವ, ಅಸಾಧ್ಯ ಚಳಿಯ ಕೊಡಗಿನಲ್ಲಿ ಕಾಡು ಮೃಗಗಳ ವಿಪರೀತ ಹಾವಳಿ ಇದ್ದುದರಿಂದ ಅದು ಒಂದು ಕೃಷಿ ಆರ್ಥಿಕತೆಯಾಗಿ ಬೆಳವಣಿಗೆ ಹೊಂದಲಿಲ್ಲ. ವರ್ಷಕ್ಕೆ ಇಪ್ಪತ್ತನಾಲ್ಕು ಸಾವಿರ ಪೊಗದಿ ವಸೂಲು ಮಾಡಿ, ಬೇಕೆಂದಾಗ ರಾಜಾತಿಥ್ಯ ಪಡೆದು, ಆಮೋದ ಪ್ರಮೋದಗಳಲ್ಲಿ ಮೈ ಮರೆತು ಮನಸ್ಸಾದಾಗ ಮೃಗಯಾ ವಿಹಾರದ ಮನರಂಜನೆ ದೊರೆಯುವಾಗ ಆಡಳಿತದ ಅನಗತ್ಯ ತಲೆನೋವನ್ನು ಭರಿಸುವುದು ಈಸ್ಟ್ ಇಂಡಿಯಾ ಕಂಪೆನಿಗೆ ಬೇಕಾಗಿರಲಿಲ್ಲ ಎನಿಸುತ್ತದೆ.

❖ ದಕ್ಷಿಣ ಭಾರತದಲ್ಲಿ ಬ್ರಿಟಿಷರ ಎದುರಾಳಿಯಾಗಿದ್ದವನು ಟಿಪ್ಪು ಮಾತ್ರ. ಅವನು ತಮ್ಮ ಶಾಶ್ವತ ಶತ್ರುಗಳಾದ ಫ್ರೆಂಚರೊಡನೆ ಕೈ ಜೋಡಿಸಿದರೆ ತಮಗೆ ಅಪಾಯ ತಪ್ಪಿದ್ದಲ್ಲ ಎನ್ನುವ ಸತ್ಯದ ಅರಿವು ಬ್ರಿಟಿಷರಿಗಿತ್ತು. ದುರ್ಬಲ ಮಹತ್ವಾಕಾಂಕ್ಷಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಪ್ರಬಲರನ್ನು ಮಣಿಸಿ ಆಮೇಲೆ ದುರ್ಬಲರನ್ನು ತಮ್ಮ ದಾಸರಂತೆ ನಡೆಸಿಕೊಳ್ಳುವುದು ವಸಾಹತುಶಾಹಿಯ ಒಂದು ಸಾಮಾನ್ಯ ತಂತ್ರವಾಗಿತ್ತು. ಟಿಪ್ಪುವನ್ನು ಸೋಲಿಸಲು ಬ್ರಿಟಿಷರು ವಿಟ್ಲ, ಕುಂಬಳೆ ಮತ್ತು ನೀಲೇಶ್ವರಗಳ ರಾಜರುಗಳ ಸಹಾಯ ಪಡಕೊಂಡರು. ಟಿಪ್ಪು ಸತ್ತ ಕೂಡಲೇ ಈ ರಾಜರುಗಳನ್ನು ಪದಚ್ಯುತಿಗೊಳಿಸಿ ಅವರನ್ನು ಜಮೀನುದಾರರ ಮಟ್ಟಕ್ಕಿಳಿಸಿದರು.[೩೭] ಇದೇ ತಂತ್ರ ಕೊಡಗಿನಲ್ಲಿ ಸ್ವಲ್ಪ ನಿಧಾನವಾಗಿ ಬಳಕೆಯಾಯಿತು. ಟಿಪ್ಪು ಸತ್ತ ಮೇಲೆ ತಾವು ಕೊಡಗರ ಮತ್ತು ಹಾಲೇರಿ ಅರಸರ ಸಂರಕ್ಷಕರೆಂಬಂತೆ ಬ್ರಿಟಿಷರು ಬಿಂಬಿಸಲ್ಪಟ್ಟರು. ಇಡೀ ದಕ್ಷಿಣ ಕನ್ನಡವು ಒಬ್ಬನೇ ರಾಜನ ಆಡಳಿತದಲ್ಲಿ ಎಂದೂ ಇರಲಿಲ್ಲ. ಸದಾ ಕಚ್ಚಾಡುತ್ತಿದ್ದ ದಕ್ಷಿಣ ಕನ್ನಡ ಅರಸರನ್ನು ಪದಚ್ಯುತಿಗೊಳಿಸಿದಾಗ ಜನರ ವಿರೋಧ ಎದುರಾಗಲಾರದೆಂಬ ಬ್ರಿಟಿಷರ ಊಹೆ ನಿಜವಾಗಿ ಹೋಯಿತು. ಆದರೆ ಇಡೀ ಕೊಡಗಿಗೆ ಒಬ್ಬನೇ ರಾಜನಿದ್ದ. ಚಿಕ್ಕವೀರನನ್ನು ಹೊರತುಪಡಿಸಿದರೆ ಉಳಿದಿಬ್ಬ ರಾಜರುಗಳಿಗೆ ಪ್ರಜೆಗಳ ಬೆಂಬಲವಿತ್ತು. ರಾಜರನ್ನು ಪದಚ್ಯುತಿಗೊಳಿಸಿದರೆ ಪ್ರಜೆಗಳು ಬ್ರಿಟಿಷರ ವಿರುದ್ಧ ಬಂಡೇಳಬಹುದೆಂಬ ಸಂಶಯ ಬ್ರಿಟಿಷರಲ್ಲಿತ್ತು. ಹಾಗಾಗಿ ಅವರು ರಾಜ ತಾನಾಗಿಯೇ ತಪ್ಪು ಮಾಡಲಿ ಎಂದು ಸಂದರ್ಭಕ್ಕಾಗಿ ಕಾಯುತಿದ್ದರು.

❖ ಚಿಕ್ಕವೀರನ ಕಾಲದಲ್ಲಿ ಪರಿಸ್ಥಿತಿ ಬದಲಾಯಿತು. ಅವನು ಮೇಲ್ಜಾತಿ ಕೊಡವರ ಕುಲಶ್ರೇಷ್ಠತೆಯ ಅಹಂನ್ನು ಕುಂಟಬಸವನನ್ನು ದಿವಾನನ್ನಾಗಿ ಮಾಡುವುದರ ಮೂಲಕ ಒಡೆದು ಹಾಕಿದ. ಪ್ರಾಯಸಹಜ ಇಂದ್ರಿಯ ಚಾಪಲ್ಯದಿಂದ ಕೆಲವು ತಪ್ಪುಗಳನ್ನು ಮಾಡಿ ಕೊಡವರ ಸಿಟ್ಟಿಗೆ ಗುರಿಯಾಗಿದ್ದ. ಬೋಪು ದಿವಾನ ಚೆನ್ನ ವೀರಪ್ಪನ ಮೂಲಕ ರಾಜನನ್ನು ಹಣಿಯುವ ತಂತ್ರವನ್ನು ಹೂಡಿದ್ದ. ಸಂದರ್ಭವನ್ನು ಕಾಯುತ್ತಿದ್ದ ಬ್ರಿಟಿಷರು ತಮಗೆ ಬೇಕಾದ ಸನ್ನಿವೇಶಗಳನ್ನು ಸೃಷ್ಟಿಸಿಕೊಂಡು ಕೊಡಗನ್ನು ಆಕ್ರಮಿಸಲು ಸ್ವಲ್ಪ ಕಾಲ ಹಿಡಿಯಿತು.

❖ ಯಾವುದಾದರೂ ನೆವನದಿಂದ ಸ್ಥಳೀಯ ರಾಜರುಗಳನ್ನು ಪದಚ್ಯುತಗೊಳಿಸಿ ರಾಜ್ಯವನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುವುದು ಈಸ್ಟಿಂಡಿಯಾ ಕಂಪೆನಿ ಅನುಸರಿಸಿಕೊಂಡು ಬಂದ ವಸಾಹತುಶಾಹಿ ನೀತಿಯಾಗಿತ್ತು. ಇದಕ್ಕೆ ಕ್ರಿ. ಶ. ೧೮೨೪ರಲ್ಲಿ ಕಿತ್ತೂರು ರಾಣಿ ಚೆನ್ನಮ್ಮನ ಪದಚ್ಯುತಿ, ೧೮೩೦ರಲ್ಲಿ ಬೂದಿಬಸವಯ್ಯನ ಪದಚ್ಯುತಿ, ೧೮೩೧ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ ಪದಚ್ಯುತಿ ಕೆಲವು ಉದಾಹರಣೆಗಳು.[೩೮] ಅದು ಮುಂದುವರಿದು ೧೮೩೪ರಲ್ಲಿ ಚಿಕ್ಕ ವೀರನನ್ನು ಪದಚ್ಯುತಿಗೊಳಿಸಲಾಯಿತು. ಇಲ್ಲೂ ಒಂದು ಕುಟಿಲೋಪಾಯ ಕೆಲಸ ಮಾಡಿದೆ. ಯಾವುದೇ ಒಂದು ನಿರ್ದಿಷ್ಟ ವರ್ಷದಲ್ಲಿ ಎಲ್ಲಾ ರಾಜರುಗಳನ್ನು

ಪದಚ್ಯುತಿಗೊಳಿಸುವ ಬದಲು ಬೇರೆ ಬೇರೆ ವರ್ಷಗಳಲ್ಲಿ ಪದಚ್ಯುತಗೊಳಿಸಿದ್ದು ಪ್ರತಿರೋಧದ ಕಾವು ಬೃಹತ್ ಪ್ರಮಾಣವನ್ನು ತಾಳದಿರಲಿ ಎಂಬುದು ವಸಾಹತುಶಾಹಿ ಉದ್ದೇಶದ ಒಂದು ಅಂಗವಾಗಿತ್ತು. ಇದು ಸಫಲವೂ ಆಯಿತು. ಕಿತ್ತೂರು ರಾಣಿ ಚೆನ್ನಮ್ಮಳ ಪ್ರಕರಣವನ್ನು ಉಳಿದ ರಾಜರುಗಳು ಗಂಭೀರವಾಗಿ ಪರಿಗಣಿಸಲಿಲ್ಲ. ತಮ್ಮ ತಂಟೆಗೆ ಬ್ರಿಟಿಷರು ಬಾರದಿದ್ದರೆ ಸಾಕು ಎಂಬ ಭಾವನೆಯಲ್ಲಿದ್ದರು. ನೆರೆಮನೆಗೆ ಬಿದ್ದ ಬೆಂಕಿ ತಮ್ಮ ಮನೆಯನ್ನೂ ಸುಡದೆ ಬಿಡಲಾರದು ಎಂಬ ಸಾಮಾನ್ಯ ಜ್ಞಾನವೂ ಈ ರಾಜರುಗಳಿಗೆ ಇಲ್ಲದೆ ಹೋದದ್ದು ವಸಾಹತುಶಾಹಿಯ ಪ್ರಸರಣಕ್ಕೆ ಸುಲಭವಾದ ವೇದಿಕೆಯನ್ನು ಒದಗಿಸಿತ್ತು.

❖ ವಸಾಹತುಶಾಹಿ ಆಡಳಿತವು ಆಹಾರ ಬೆಳೆಗಳಿಗಿಂತ ವಾಣಿಜ್ಯ ಬೆಳೆಗಳಿಗೆ ಹೆಚ್ಚು ಮಹತ್ವವನ್ನು ನೀಡಿತ್ತು. ಇಡೀ ದೇಶದಲ್ಲಿ ಕೈಗಾರಿಕೀಕರಣಕ್ಕಿಂತ ಕೃಷಿಯ ವಾಣಿಜ್ಯೀಕರಣ ಸುಲಭ ಮತ್ತು ಲಾಭದಾಯಕ ಎಂಬುದನ್ನು ಈಸ್ಟ್ ಇಂಡಿಯಾ ಕಂಪೆನಿ ಅರ್ಥ ಮಾಡಿಕೊಂಡಿತ್ತು. ಟಿಪ್ಪುವಿನ ಪತನಾನಂತರ ಕೊಡಗಿನ ಕೃಷಿ ಸಂರಚನೆಯನ್ನು ಅಧ್ಯಯನ ಮಾಡಿದ ಬ್ರಿಟಿಷರು ಕೊಡಗು ವಾಣಿಜ್ಯ ಬೆಳೆಗೆ ಸೂಕ್ತವಾದ ಪ್ರದೇಶ ಎಂಬುದನ್ನು ಅರ್ಥಮಾಡಿಕೊಂಡದ್ದು ಅದಕ್ಕೆ ಬೇಕಾದ ಪರಿಸರವನ್ನು ರೂಪಿಸಲು ಬ್ರಿಟಿಷರು ರಾಜನಿಂದ ರಹದಾರಿ ಪಡೆದು ಫಲವತ್ತಾದ ಪ್ರದೇಶಗಳಲ್ಲಿ ನೆಲೆಗೊಂಡರು. ಈ ಪೂರ್ವ ಸಿದ್ಧತೆಗಳ ಬಳಿಕವಷ್ಟೇ ಕೊಡಗನ್ನು ಆಕ್ರಮಿಸಿದರೆ ಮಾತ್ರ ತಮ್ಮ ಉದ್ದೇಶ ಈಡೇರಬಹುದು ಎಂಬುದು ಬ್ರಿಟಿಷರ ಅಭಿಪ್ರಾಯವಾಗಿತ್ತು.ಅಲ್ಲದೆ ಕಾಫಿಯಂತಹ ನಿರ್ಯಾತ ಬೆಳೆಗಳನ್ನು ಬೆಳೆಸಲು ಸಾಕಷ್ಟು ಕಾಲಾವಧಿ ಬೇಕಿತ್ತು. ಇದು ಕೊಡಗಿನ ವಶೀಕರಣವನ್ನು ಮುಂದೂಡುವಂತೆ ಮಾಡಿತು.

೫. ೩. ವಸಾಹತುಶಾಹಿ ಆರ್ಥಿಕ ವ್ಯವಸ್ಥೆ

ಚಿಕ್ಕವೀರನ ಪದಚ್ಯುತಿಯೊಂದಿಗೆ ಕ್ರಿ.ಶ. ೧೮೩೪ರ ಏಪ್ರಿಲ್ ೫ ರಿಂದ ಕೊಡಗಿನಲ್ಲಿ ವಸಾಹತುಶಾಹಿ ಆಡಳಿತ ಆರಂಭವಾಯಿತು. ಈ ಹಿಂದೆ ಮೈಸೂರಿನ ದೊರೆ ಮುಮ್ಮಡಿ ಕೃಷ್ಣರಾಜ ಒಡೆಯರನ್ನು ೧೮೩೧ರಲ್ಲಿ ಬ್ರಿಟಿಷರು ಪದಚ್ಯುತಿಗೊಳಿಸಿದ್ದರೂ ಆತನನ್ನು ರಾಜ್ಯದಿಂದ ಗಡಿಪಾರು ಮಾಡಿರಲಿಲ್ಲ. ಏಕೆಂದರೆ ಆತನ ಪರವಾಗಿ ಬಂಡೇಳುವವರು ರಾಜ್ಯದಲ್ಲಿ ಯಾರೂ ಇರಲಾರರು ಎಂಬುದನ್ನು ಬ್ರಿಟಿಷರು ಸರಿಯಾಗಿಯೇ ಊಹಿಸಿದ್ದರು. ಪದಚ್ಯುತಿಯ ಬಳಿಕ ಕೃಷ್ಣರಾಜ ಒಡೆಯರು ಬ್ರಿಟಿಷರ ಪರವಾಗಿಯೇ ಇದ್ದರು. ಕೊಡಗು ಬಂಡಾಯದ ಮೂಲಸ್ಥಾನ ಮೈಸೂರು ಸಮೀಪದ ಅರಪುರವಾಗಿದ್ದು ಅಲ್ಲಿ ನಡೆಯುತ್ತಿದ್ದ ಸಮಾಲೋಚನಾ ಸಭೆಗಳ ರಹಸ್ಯ ಮಾಹಿತಿಯನ್ನು ಕೃಷ್ಣರಾಜ ಒಡೆಯರು ಬ್ರಿಟಿಷರಿಗೆ ಒದಗಿಸುತ್ತಿದ್ದರು.[೩೯]

ಚಿಕ್ಕವೀರನನ್ನು ಪದಚ್ಯುತಿಗೊಳಿಸಿ ಹಂತಹಂತವಾಗಿ ಕಾಶಿಗೆ ಗಡಿಪಾರು ಮಾಡಲಾಯಿತು. ಇದಕ್ಕೆ ಚಿಕ್ಕವೀರನ ಸ್ವಾತಂತ್ರ್ಯ ಪ್ರೇಮ ಮತ್ತು ಕೊಡಗನ್ನು ಸ್ವಾಯತ್ತ ಸಾರ್ವಭೌಮ ದೇಶವಾಗಿ ಉಳಿಸಿಕೊಳ್ಳಬೇಕೆಂಬ ಹಂಬಲ ವಸಾಹತುಶಾಹಿ ಪ್ರಸರಣಕ್ಕೆ ಅಡ್ಡಿಯಾಗಿರುವುದು ಕಾರಣವಾಗಿರುವಂತೆ ತೋರುತ್ತದೆ. ಪದಚ್ಯುತಿಯ ಬಳಿಕವೂ ಆತನನ್ನು ಕೊಡಗಿನಲ್ಲಿ ಉಳಿಸಿಕೊಳ್ಳಬೇಕೆಂದು ಕೊಡಗಿನ ಮುಖ್ಯಸ್ಥರು ಕಂಪೆನಿಯನ್ನು ಒತ್ತಾಯಿಸಿದ್ದರು. ಪ್ರಜೆಗಳ ಒಲವು ರಾಜನ ಮೇಲೆ ಇದ್ದರೆ ತಮ್ಮ ಗುಪ್ತ ಕಾರ್ಯಸೂಚಿಯನ್ನು ಜಾರಿಗೆ ತರಲು ಸಾಧ್ಯವಿಲ್ಲವೆಂಬ ಅರಿವು ಕಂಪೆನಿಗೆ ಇದ್ದುದರಿಂದ ರಾಜನನ್ನು ನಿರ್ದಾಕ್ಷಿಣ್ಯವಾಗಿ ಗಡಿಪಾರು ಮಾಡಲಾಯಿತು. ಅದಕ್ಕೆ ಇನ್ನೊಂದು ಕಾರಣವೂ ಇತ್ತು. ಮೈಸೂರಿನಿಂದ ಕೊಡಗಿನ ಮೂಲಕ ಮಲಬಾರಿಗೆ ರಸ್ತೆ ನಿರ್ಮಾಣ ಮಾಡಲು ಬ್ರಿಟಿಷರು ಬಯಸಿದ್ದರು. ಚಿಕ್ಕವೀರ ಅದಕ್ಕೆ ಅವಕಾಶ ನೀಡಲಿಲ್ಲ. ಚಿಕ್ಕವೀರನ ಕಾಲದಲ್ಲಿ ಬಿಗಿಯಾದ ರಹದಾರಿ ನೀತಿ ಅಸ್ತಿತ್ವದಲ್ಲಿತ್ತು. ಹಾಗಾಗಿ ಬ್ರಿಟಿಷರು ಮುಕ್ತವಾಗಿ ಕೊಡಗಿಗೆ ಪ್ರವೇಶಿಸುವಂತಿರಲಿಲ್ಲ. ಕೊಡಗರಲ್ಲಿ ಆತ್ಮಾಭಿಮಾನ ಬೆಳೆದರೆ ತಮಗೆ ಕೊಡಗನ್ನು ವಶಪಡಿಸಿಕೊಳ್ಳಲು ಸಾಧ್ಯವಾಗಲಿಕ್ಕಿಲ್ಲ ಎಂಬ ಭೀತಿಯು ಚಿಕ್ಕವೀರನ ಗಡಿಪಾರಿಗೆ ಕಾರಣವಾದಂತೆ ಕಂಡು ಬರುತ್ತದೆ.

ಕೊಡಗು ತಮ್ಮ ವಶವಾದ ಮೇಲೆ ಕರ್ನಲ್ ಫ್ರೇಸರ್ ಮೈಸೂರು ಮತ್ತು ಕೊಡಗುಗಳ ಕಮೀಷನರ್ ಆಗಿ ನೇಮಕಗೊಂಡ. ಅವನು ಕ್ಯಾಪ್ಟನ್ ಲೀಹಾರ್ಡಿಯನ್ನು ಕೊಡಗಿನ ಆಡಳಿತಾಧಿಕಾರಿಯನ್ನಾಗಿ ಮಾಡಿದ. ೧೮೩೪ರ ಅಕ್ಟೋಬರ್‌ವರೆಗೆ ಕೊಡಗಿನಲ್ಲಿ ಉಳಿದುಕೊಂಡ ಕರ್ನಲ್‌ಫ್ರೇಸರ್ ಚಿಕ್ಕವೀರನ ತಂಗಿ ದೇವಮ್ಮಾಜಿ ಮತ್ತು ಆಕೆಯ ಗಂಡ ಚೆನ್ನಬಸಪ್ಪರನ್ನು ಕೊಡಗಿಗೆ ಬರುವಂತೆ ವ್ಯವಸ್ಥೆ ಮಾಡಿದ.[೪೦] ೧೮೩೪ರ ಮೇ ೧೫ ರಂದು ಚೆನ್ನಬಸಪ್ಪ ಮಡಿಕೇರಿಗೆ ಬಂದಾಗ ಅವನ ಅಪ್ಪಂಗಳದ ಸ್ಥಿರ ಮತ್ತು ಚರ ಆಸ್ತಿಗಳು ಬ್ರಿಟಿಷ್ ಅಧಿಕಾರಿಯೊಬ್ಬರ ಸುಪರ್ದಿಯಲ್ಲಿತ್ತು. ಆತ ತನ್ನನ್ನು ಕೊಡಗಿನ ರಾಜನನ್ನಾಗಿ ಮಾಡಬಹುದೆಂಬ ಆಸೆಯಿಂದ ಮಡಿಕೇರಿಯ ರಾಜ ಗದ್ದುಗೆಯ ಸಮೀಪದ ಮನೆಯೊಂದರಲ್ಲಿ ವಾಸ ಮಾಡಿಕೊಂಡು ಕೊಡಗಿನ ಸಿಂಹಾಸನದ ಮೇಲೆ ತನ್ನ ಹಕ್ಕುದಾರಿಕೆಯನ್ನು ಮಂಡಿಸಿದ. ತನ್ನ ವಾಸಕ್ಕೆ ನಾಲ್ಕುನಾಡು ಅರಮನೆಯನ್ನು ಬಿಟ್ಟು ಕೊಡಬೇಕೆಂದು ಕೇಳಿಕೊಂಡ. ಕರ್ನಲ್‌ಫ್ರೇಸರ್ ಚೆನ್ನಬಸಪ್ಪನ ಬೇಡಿಕೆಗಳನ್ನು ಕೊಡಗಿನ ದಿವಾನರುಗಳ ಮತ್ತು ಮುಖ್ಯಸ್ಥರ ಮುಂದೆ ಇರಿಸಿದ. ಅವರು ಚೆನ್ನಬಸಪ್ಪ ಕೊಡಗಿನ ರಾಜನಾಗುವುದನ್ನು ಒಪ್ಪಿಕೊಳ್ಳಲು ಸಿದ್ಧರಿರಲಿಲ್ಲ. ಇದಕ್ಕೆ ಖಚಿತವಾದ ಕಾರಣಗಳು ಏನೆಂಬುದಕ್ಕೆ ಸಾಕಷ್ಟು ಸಾಕ್ಷ್ಯಾಧಾರಗಳಿಲ್ಲ. ಆದರೆ ಮೂಲತಃ ಕೊಡವನಾದ ಲಿಂಗರಾಜನಿಂದಾಗಿ ವೀರಶೈವನಾದ ಚೆನ್ನಬಸಪ್ಪನನ್ನು ಕೊಡಗಿನ ಸಮಸ್ತ ಜನರು ತಮ್ಮ ರಾಜನನ್ನಾಗಿ ಅಂಗೀಕರಿಸಲಾರರು ಎಂಬ ಭೀತಿ ದಿವಾನರುಗಳ ಮತ್ತು ಮುಖ್ಯಸ್ಥರ ಮನಸ್ಸಿನಲ್ಲಿ ಇದ್ದಿರಬೇಕು. ಅಲ್ಲದೆ ಚಿಕ್ಕವೀರರಾಜ ಬ್ರಿಟಿಷರ

ವಿರುದ್ಧ ತಿರುಗಿ ಬಿದ್ದು ಪದಚ್ಯುತನಾದ ಮೇಲೆ ಸಹಜವಾಗಿ ಜನರ ಕನಿಕರ ಅವನ ಬಗ್ಗೆ ಇರುತ್ತದೆಂಬ ವಾಸ್ತವ ಪ್ರಜ್ಞೆ ಅವರಲ್ಲಿ ಇದ್ದಿರಬಹುದು. ಚೆನ್ನಬಸಪ್ಪ ಮಾಡಿದ ರಾಜದ್ರೋಹವನ್ನು ಜನರು ಅಷ್ಟು ಸುಲಭವಾಗಿ ಮರೆತಿರಲು ಸಾಧ್ಯವಿಲ್ಲವೆಂಬ ಭಾವನೆ ಅವರಲ್ಲಿ ಇದ್ದಿದ್ದರೆ ಅದರಲ್ಲಿ ಆಶ್ಚರ್ಯವೇನೂ ಇರಲಿಲ್ಲ. ಇದಕ್ಕಿಂತಲೂ ಹೆಚ್ಚಾಗಿ ಚೆನ್ನಬಸಪ್ಪ ಬ್ರಿಟಿಷರ ಆಶ್ರಯದಲ್ಲಿದ್ದು ಕೊಡಗಿನ ಬಗ್ಗೆ ಅವರಲ್ಲಿ ತಪ್ಪು ಕಲ್ಪನೆ ಮೂಡಿಸಲು ಮತ್ತು ಆ ಮೂಲಕ ಚಿಕ್ಕವೀರನ ಪದಚ್ಯುತಿ ಮಾಡಿಸಲು ಸಫಲನಾದ ಘಟನೆಯು ಸ್ವಾಭಿಮಾನಿ ಕೊಡಗರಲ್ಲಿ ಆತ್ಮಾವಹೇಳನದ ಪರಾಕಾಷ್ಠೆಯೆಂದು ಕಂಡಿರಬಹುದಾದ ಸಾಧ್ಯತೆಯೂ ಇದೆ.

ಈ ಸಂಬಂಧ ಕರ್ನಲ್ ಫ್ರೇಸರ್ ೧೮೩೪ನೇ ಏಪ್ರಿಲ್‌ನಲ್ಲಿ ಇಸ್ತಿಹಾರೊಂದನ್ನು ಹೊರಡಿಸಿದ.[೪೧] ಅದರಲ್ಲಿ ಆತ-ಬ್ರಿಟಿಷರ ಆಡಳಿತವು – ಕೊಡಗರ ಸಾಮಾಜಿಕ ಮತ್ತು ಧಾರ್ಮಿಕ ಆಚಾರ ವಿಚಾರ ಸಂಪ್ರದಾಯಗಳನ್ನು ಗೌರವಿಸುತ್ತದೆ; ಹಾಲೇರಿ ಆಡಳಿತ ಪದ್ಧತಿಯನ್ನು ಮುಂದುವರಿಸುತ್ತದೆ; ಚಿಕ್ಕವೀರರಾಜನ ಕಾಲದ ಅಧಿಕಾರಿಗಳನ್ನು ಮತ್ತು ಆಡಳಿತ ಸಿಬ್ಬಂದಿಗಳನ್ನು ಹಾಗೆಯೇ ಉಳಿಸಿಕೊಳ್ಳುತ್ತದೆ – ಎನ್ನುವುದನ್ನು ಸ್ಪಷ್ಟವಾಗಿ ಉಲ್ಲೇಖಿಸಿದ್ದ[೪೨] ಕರ್ನಲ್‌ಫ್ರೇಸರ್ ಹಾಲೇರಿ ರಾಜ ವಂಶಸ್ಥರ ಕಂದಾಯ ನೀತಿ ಮತ್ತು ಆಡಳಿತ ನೀತಿಯ ಬಗ್ಗೆ ಸಮಗ್ರ ಅಧ್ಯಯನ ನಡೆಸಿ ಅದರ ಕುಂದುಕೊರತೆಗಳನ್ನು ಕಂಡುಕೊಂಡ. ಅವುಗಳನ್ನು ಪರಿಷ್ಕರಿಸಿ ೧೮೩೪ ರ ಅಗೋಸ್ತು ತಿಂಗಳಲ್ಲಿ ಭೂ ವ್ಯವಸಾಯ ಕಂದಾಯ ವಸೂಲಾತಿ, ವ್ಯಾಜ್ಯ ಇತ್ಯರ್ಥ, ನ್ಯಾಯ ವಿತರಣೆ, ಇತ್ಯಾದಿಗಳಿಗೆ ಸಂಬಂಧಿಸಿದಂತೆ ಕೆಲವು ಹುಕುಂಗಳನ್ನು ಹೊರಡಿಸಿದ್ದ. ಅವು ೧೮೬೧ರ ವರೆಗೂ ಜಾರಿಯಲ್ಲಿದ್ದವು.

ವಸಾಹತುಶಾಹಿ ಆಡಳಿತದಲ್ಲಿ ಕೊಡಗಿನ ಕಂದಾಯ ವ್ಯವಸ್ಥೆ ಬದಲಾಗಲಿಲ್ಲ. ಧೂಳೀಭತ್ತ, ಭತ್ತಗಂದಾಯ ಅಥವಾ ನಗದುರೂಪದಲ್ಲಿ ಕಂದಾಯ ಪಾವತಿಸಲು ಅವಕಾಶ ಕಲ್ಪಿಸಿಕೊಡಲಾಯಿತು. ಲಾಗಾಯ್ತಿನಿಂದ ಇದ್ದ ಜಮ್ಮ ಭೂಮಿ ವ್ಯವಸ್ಥೆಯನ್ನಾಗಲೀ, ಪನ್ನ ಭೂಮಿ ವ್ಯವಸ್ಥೆಯನ್ನಾಗಲೀ ಬ್ರಿಟಿಷರು ಬದಲಾಯಿಸಲು ಹೋಗಲಿಲ್ಲ. ತಮ್ಮ ಉದ್ದೇಶ ರಾಜನನ್ನು ಬದಲಾಯಿಸುವುದೇ ಹೊರತು ವ್ಯವಸ್ಥೆಯನ್ನಲ್ಲ ಎಂದು ಬ್ರಿಟಿಷರು ತೋರಿಸಲು ಬಯಸಿದ್ದು ಇದಕ್ಕೆ ಕಾರಣ. ರಾಜರುಗಳ ಕಾಲದಲ್ಲಿದ್ದ ಮುತುರ್ಪ ಅಥವಾ ವೃತ್ತಿ ತೆರಿಗೆ ವಸಾಹತುಶಾಹಿ ಆಡಳಿತ ಕಾಲದಲ್ಲಿಯೂ ಮುಂದುವರಿಯಿತು. ಪ್ರಬಲ ಜಮೀನುದಾರೀ ವರ್ಗವಾದ ಕೊಡವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಬ್ರಿಟಿಷರು ಕೊಡವ ಸಂಸ್ಕೃತಿಗೆ ಸೇರಿದ ಉಳಿದ ೧೭ ಜಾತಿಗಳನ್ನು ದೂರ ಇಟ್ಟರು. ಕೊಡಗಿನ ಬಹುಸಂಖ್ಯಾತರಾದ ಗೌಡರುಗಳನ್ನು ಪೂರ್ತಿಯಾಗಿ ಅವಗಣಿಸಿದರು.

ಆಡಳಿತಾತ್ಮಕವಾಗಿ ಕೊಡಗನ್ನು ವಿಭಜಿಸಿದರೆ ಕಂದಾಯ ಹೆಚ್ಚಬಹುದೆಂಬ ದೃಷ್ಟಿಯಿಂದ ಕೊಡಗಿನ ವಿಭಜನೆಗೆ ಬ್ರಿಟಿಷರು ಕೈ ಹಾಕಿದರು. ಅದರ ಪರಿಣಾಮವಾಗಿ ಸುಳ್ಯ

ಮತ್ತು ಪುತ್ತೂರು ತಾಲೂಕುಗಳ ೧೧೦ ಗ್ರಾಮಗಳನ್ನು ಕೊಡಗಿನಿಂದ ಪ್ರತ್ಯೇಕಿಸಿ ದ. ಕ. ಕ್ಕೆ ಸೇರಿಸಿದರು. ವಸಾಹತುಶಾಹಿ ಆಡಳಿತ ವ್ಯವಸ್ಥೆ ಇದ್ದರೂ ಎರಡು ಜಿಲ್ಲೆಗಳಲ್ಲಿ ಎರಡು ರೀತಿಯ ಆರ್ಥಿಕ ನೀತಿಗಳು ಅನುಷ್ಠಾನಕ್ಕೆ ಬಂದವು. ದ.ಕ. ದಲ್ಲಿ ಉತ್ಪತ್ತಿಯ ಸುಮಾರು ಶೇ.೪೦ ರಷ್ಟು ಭೂಕಂದಾಯವಿತ್ತು. ಕಂದಾಯವನ್ನು ಹಣದ ರೂಪದಲ್ಲೇ ಕಟ್ಟಬೇಕಿತ್ತು. ದಕ್ಷಿಣ ಕನ್ನಡದಲ್ಲಿ ಇದ್ದ ಹೊಗೆಸೊಪ್ಪು ಮತ್ತು ಉಪ್ಪಿನ ನಿಯಂತ್ರಣ ಕೊಡಗಿನಲ್ಲಿ ಇದ್ದದ್ದು ಕಂಡುಬರುವುದಿಲ್ಲ. ಆದರೆ ಸಾಮಾಜಿಕವಾಗಿ ಪ್ರಬಲರನ್ನು ತಮ್ಮ ಹತ್ತಿರ ಸೇರಿಸಿಕೊಳ್ಳುವ ಬ್ರಿಟಿಷರ ಜಾಯಮಾನಕ್ಕೆ ಎರಡೂ ಜಿಲ್ಲೆಗಳಲ್ಲಿ ದೃಷ್ಟಾಂತ ದೊರೆಯುತ್ತದೆ. ಕೊಡಗಿನಲ್ಲಿ ಪ್ರಬಲ ಕೊಡವರನ್ನು ತಮ್ಮ ನಿಷ್ಠರನ್ನಾಗಿ ಮಾಡಿಕೊಂಡ ವಸಾಹತುಶಾಹಿ ಆಡಳಿತವು ದ. ಕ. ದಲ್ಲಿ ಬ್ರಾಹ್ಮಣರನ್ನು, ಕೊಂಕಣಿಗಳನ್ನು ಮತ್ತು ಬಂಟರುಗಳನ್ನು ತಮ್ಮ ನಿಕಟವರ್ತಿಗಳನ್ನಾಗಿ ಮಾಡಿಕೊಂಡಿತು. ವಸಾಹತುಶಾಹಿ ಆಡಳಿತದಿಂದಾಗಿ ಜಾತಿಗಳ ಧ್ರುವೀಕರಣ ಆರಂಭವಾಯಿತು ಎನ್ನಬಹುದು.

ಕೊಡಗಿನ ಆಡಳಿತ ವ್ಯವಸ್ಥೆಯಲ್ಲಿ ಬ್ರಿಟಿಷರು ಸುಧಾರಣೆಯನ್ನು ಮಾಡಹೋಗಲಿಲ್ಲ. ಆದರೆ ತಮಗೆ ಅನುಕೂಲರಲ್ಲದ ದಿವಾನರುಗಳ ಅಧಿಕಾರವನ್ನು ಮೊಟಕುಗೊಳಿಸಿದರು. ಬ್ರಾಹ್ಮಣ ದಿವಾನ ಲಕ್ಷ್ಮೀನಾರಾಯಣನನ್ನು ಬಂಧನದಲ್ಲಿರಿಸಿದರು. ಆದರೆ ತಮಗೆ ಸಂಪೂರ್ಣ ನಿಷ್ಠರಾಗಿದ್ದ ದಿವಾನ ಬೋಪುವನ್ನು ಮತ್ತು ದಿವಾನ ಚೆಪ್ಪುಡೀರ ಪೊನ್ನಪ್ಪನನ್ನು ಇನ್ನಷ್ಟು ಹತ್ತಿರ ಮಾಡಿಕೊಂಡರು. ದಿವಾನ ಅಪ್ಪಾರಂಡ ಬೋಪುವಿನ ವರ್ತನೆ ಮೊದಲಿನಿಂದಲೇ ಸಂಶಯಾಸ್ಪದವಾಗಿತ್ತು. ಅವನ ಕುಮ್ಮಕ್ಕೇ ಚೆನ್ನಬಸಪ್ಪ ಚಿಕ್ಕವೀರರಾಜನ ವಿರುದ್ಧ ತಿರುಗಿ ಬೀಳಲು ಕಾರಣವಾಗಿರಬೇಕೆಂದು ಕೆಲವು ಅಭಿಪ್ರಾಯಗಳು ವ್ಯಕ್ತವಾಗಿವೆ.[೪೩] ಆದರೆ ಚೆಪ್ಪುಡೀರ ಪೊನ್ನಪ್ಪ ರಾಜನಿಷ್ಠನಾಗಿಯೇ ಇದ್ದ. ಅವನು ಪದಚ್ಯುತ ಚಿಕ್ಕವೀರರಾಜನ ಜೊತೆ ಬೆಂಗಳೂರಿನಲ್ಲಿ ಕೆಲಕಾಲ ವಾಸವಾಗಿದ್ದ. ಆಗ ಇನ್ನೂ ಅನೇಕ ಕೊಡಗರು ರಾಜನಿಷ್ಠರಾಗಿ ಅವನ ಜತೆ ಉಳಿದುಕೊಂಡಿದ್ದರು. ಕೊಡಗರ ರಾಜನಿಷ್ಠೆ ತಮ್ಮ ಆಡಳಿತಕ್ಕೆ ಮುಳ್ಳಾಗಬಹುದೆಂದು ಭಾವಿಸಿದ ಕರ್ನಲ್‌ಫ್ರೇಸರ್, ಭೇದೋಪಾಯ ಮಾಡಿ ದಿವಾನ ಪೂನ್ನಪ್ಪ, ಕಾರ್ಯಕಾರ ಬಿದ್ದಂಡ ಸೋಮಯ್ಯ ಮತ್ತಿತರ ಕೊಡವ ಅಧಿಕಾರಿಗಳನ್ನು ಮಡಿಕೇರಿಗೆ ಕರೆಯಿಸಿಕೊಂಡ ಪೊನ್ನಪ್ಪನನ್ನು ಹಿರಿಯ ದಿವಾನನ್ನಾಗಿ ನೇಮಿಸಿದ. ಇದರಿಂದಾಗಿ ಪೊನ್ನಪ್ಪ ಅನಿವಾರ್ಯವಾಗಿ ಬ್ರಿಟಿಷ್ ನಿಷ್ಠನಾಗಿ ಬದುಕಬೇಕಾಯಿತು.[೪೪] ದಿವಾನ ಅಪ್ಪಾರಂಡ ಬೋಪು ಬಹುಶಃ ತನ್ನನ್ನು ಕೊಡಗಿನ ಪ್ರತಿನಿಧಿಯಾಗಿ ನೇಮಿಸಬಹುದು ಎಂಬ ಭಾವನೆಯಿಂದ ಕಂಪೆನಿ ಆಡಳಿತಕ್ಕೆ ಅತಿನಿಷ್ಠೆಯನ್ನು ತೋರತೊಡಗಿದ. ಆದರೂ ಅವನನ್ನು ಕ್ಯಾಪ್ಟನ್ ಲೀಹಾರ್ಡಿ ತುಂಬಾ ನಿಕೃಷ್ಟವಾಗಿ ನಡೆಸಿಕೊಂಡ. ದುರಂತವೆಂದರೆ ಬೋಪುವಾಗಲಿ ಅವನಂತೆ ಬ್ರಿಟಿಷರನ್ನು ಒಲೈಸಿದ ಇತರ ಕೊಡವರಾಗಲೀ ಬ್ರಿಟಿಷರ ತುಚ್ಛೀಕರಣದಿಂದ ಪಾರ ಕಲಿಯಲಿಲ್ಲ.

ಕರ್ನಲ್‌ಫ್ರೇಸರ್‌ನು ಮುಕ್ತ ಆರ್ಥಿಕ ನೀತಿಯನ್ನು ಕೊಡಗಿನಲ್ಲಿ ಅನುಷ್ಠಾನಕ್ಕೆ ತಂದ. ಅದರ ಪರಿಣಾಮವಾಗಿ ಕೊಡಗಿನ ಆಮದುಗಳ ಮೇಲಿನ ಸುಂಕ ಮತ್ತು ರಫ್ತುಗಳ ಮೇಲಿನ ಸುಂಕ ತೆಗೆದು ಹಾಕಲ್ಪಟ್ಟಿತು. ಗಡಿಗಳ ಉಕ್ಕಡಗಳು ಅರ್ಥವನ್ನು ಕಳಕೊಂಡವು. ಹಾಲೇರಿ ರಾಜರುಗಳ ಕಾಲದಲ್ಲಿ ಆಮದು – ರಫ್ತು ಸುಂಕ ವಿಪರೀತ ಇದ್ದುದರಿಂದ ಜನರು ಸಂಕಷ್ಟಕ್ಕೀಡಾಗಿದ್ದರು. ಕರ್ನಲ್‌ಫ್ರೇಸರ್‌ನ ಈ ಸುಧಾರಣೆಗಳು ಕೊಡಗರಿಗೆ ಇಷ್ಟವಾಗಿ ಅವರು ಕಂಪೆನಿಯ ಆಡಳಿತವನ್ನು ಸುಲಭವಾಗಿ ಒಪ್ಪಿಕೊಳ್ಳುವಂತಾಯಿತು.

ಒಮ್ಮೆ ಕೊಡಗರು ತನ್ನನ್ನು ಒಪ್ಪಿಕೊಂಡರೆನ್ನುವುದು ಖಚಿತವಾದ ಮೇಲೆ ಕರ್ನಲ್‌ಫ್ರೇಸರ್ ತನ್ನ ನಿಜಬಣ್ಣವನ್ನು ತೋರತೊಡಗಿದ. ಕುಶಾಲನಗರಕ್ಕೆ ಫ್ರೇಸರ್ ಟೌನ್ ಎಂದು ಹೆಸರಿಟ್ಟದ್ದು ಮತ್ತು ಕೊಡಗರನ್ನು ಪ್ರಾಟೆಸ್ಟೆಂಟ್ ಮತಕ್ಕೆ ಪರಿವರ್ತಿಸಲು ಯತ್ನಿಸಿದ್ದು ಕೊಡಗರು ತಾನೂ ಏನು ಮಾಡಿದರೂ ಸಹಿಸಿಕೊಳ್ಳುತ್ತಾರೆ ಎಂಬ ಉದ್ಧಟತನದ ನಂಬಿಕೆಯಿಂದ. ದೊಡ್ಡವೀರರಾಜನ ಕಾಲದಲ್ಲಿ ನಂಜರಾಜ ಪಟ್ಟಣದಲ್ಲಿದ್ದ ತಾಲೂಕು ಕಛೇರಿಯನ್ನು ಕುಶಾಲನಗರಕ್ಕೆ ವರ್ಗಾಯಿಸಿಕೊಂಡ. ಆಗಲೂ ಜನರಿಂದ ಅದಕ್ಕೆ ವಿರೋಧ ವ್ಯಕ್ತವಾಗಲಿಲ್ಲ. ಇದರ ಮುಂದುವರಿದ ಭಾಗವೇ ಅವನ ಮತಾಂತರ ಚಟುವಟಿಕೆ. ಕೊಡಗನ್ನು ಗೆದ್ದುದಕ್ಕಾಗಿ ಅವನಿಗೆ ಸಿಕ್ಕ ಬಹುಮಾನದ ಹಣವನ್ನು ಕ್ರೈಸ್ತ ಮಿಷಿನರಿ ಸಂಸ್ಥೆಗಳಿಗೆ ಮತಾಂತರ ಚಟುವಟಿಕೆಗಳಿಗಾಗಿ ನೀಡುವುದಾಗಿ ಆತ ಪ್ರಕಟಿಸಿದ. ಆದರೆ ಬಹುದೂರದ ಲಂಡನ್ನಿನ ಕ್ರೈಸ್ತ ಮಿಷನರಿ ಸಂಸ್ಥೆಗಳು ಮತಾಂತರ ಚಟುವಟಿಕೆಗಳಿಗಾಗಿ ಭಯಾನಕ ಕಾಡು ಪ್ರದೇಶವಾಗಿದ್ದ ಕೊಡಗಿಗೆ ಬರಲು ಯಾವ ಉತ್ಸಾಹವನ್ನು ತೋರಿಸಲಿಲ್ಲ. ಅನಿವಾರ್ಯವಾಗಿ ಫ್ರೇಸರ್ ಮತಾಂತರ ಚಟುವಟಿಕೆಯನ್ನು ಕೈಬಿಟ್ಟ. ಬದಲಾಗಿ ಫ್ರೇಸರ್‌ಟೌನ್ ಎಂದು ಕರೆಯಲ್ಪಡುವ ಕುಶಾಲನಗರದಲ್ಲಿ ಒಂದು ಪ್ರಾಥಮಿಕ ಶಾಲೆಯನ್ನು ಆರಂಭಿಸಿದ. ಅದು ಆತ ಮಾಡಿದ ಅತ್ಯಂತ ಒಳ್ಳೆಯ ಕಾರ್ಯವಾಗಿತ್ತು.

ಹಾಲೇರಿ ರಾಜವಂಶೀಯರಿಗೆ ಹೆಣ್ಣುಗಳ ಬಗ್ಗೆ ಒಂದು ದೌರ್ಬಲ್ಯ ಇದ್ದಂತೆ ಕಂಡುಬರುತ್ತದೆ. ಅದಕ್ಕೆ ಅವರು ಹಿಂಡುಹಿಂಡಾಗಿ ರಾಣಿಯರು ಮತ್ತು ಉಪಪತ್ನಿಯರನ್ನು ಇಟ್ಟುಕೊಂಡದ್ದು ದೃಷ್ಟಾಂತವಾಗಿದೆ. ಚಿಕ್ಕವೀರ ರಾಜೇಂದ್ರ ೧೩ ಹೆಂಡತಿಯರನ್ನು ಹೊಂದಿದ್ದ. ಆತನಿಗೆ ಎಷ್ಟು ಉಪಪತ್ನಿಯರಿದ್ದರು ಎನ್ನುವುದಕ್ಕೆ ಖಚಿತ ಆಧಾರವಿಲ್ಲ. ರಾಜನ ಪದಚ್ಯುತಿಯ ಬಳಿಕ ರಾಜಮನೆತನಕ್ಕೆ ಸೇರಿದ ಮಹಿಳೆಯರು ಮತ್ತು ರಾಜಸಂಬಂಧಿ ಮಹಿಳೆಯರು ತಮ್ಮ ಜೀವನ ಸಾಗಿಸಲು ಮಾಸಾಶನ ನೀಡಬೇಕೆಂದು ಕರ್ನಲ್‌ಫ್ರೇಸರ್‌ನನ್ನು ಕೇಳಿಕೊಂಡರು. ಅವನು ಆ ಕೇಳಿಕೆಯನ್ನು ಮನ್ನಿಸಿ ಅವರ ಸ್ಥಾನಮಾನಕ್ಕೆ ತಕ್ಕಂತೆ ಮಾಸಾಶನ ನಿಗದಿ ಮಾಡಿದ. ಅರಮನೆಯ ಕೆಲಸಗಾರರಿಗೆ ವೇತನ ನಿಗದಿ ಮಾಡಿ ಅವರು ಬದುಕಿರುವವರೆಗೂ

ಸೇವೆಯಲ್ಲಿರುವಂತೆ ನೋಡಿಕೊಂಡ. ಇದರಿಂದಾಗಿ ರಾಜ ಮನೆತನಕ್ಕೆ ಮತ್ತು ಸೇವಕ ವರ್ಗಕ್ಕೆ ಬ್ರಿಟಿಷ್ ಆಡಳಿತ ವ್ಯವಸ್ಥೆಯಲ್ಲಿ ನಂಬಿಕೆ ಮೂಡುವಂತಾಯಿತು.[೪೫]

ಕರ್ನಲ್‌ಫ್ರೇಸರ್ ಕೊಡಗರನ್ನು ಭಾವನಾತ್ಮಕವಾಗಿ ಒಲಿಸಿಕೊಳ್ಳುವ ದೃಷ್ಟಿಯಿಂದ ೧೮೩೫ರಲ್ಲಿ ಗೋಹತ್ಯಾ ನಿಷೇಧ ಆಜ್ಞೆಯನ್ನು ಜಾರಿಗೊಳಿಸಿದ.[೪೬] ಕೊಡಗಿನಲ್ಲಿ ಆಗ ಮುಸಲ್ಮಾನರ ಸಂಖ್ಯೆ ಬಹಳ ಕಡಿಮೆ ಇತ್ತು. ಇದ್ದ ಮುಸಲ್ಮಾನರಲ್ಲಿ ಬಹುತೇಕರು ಟಿಪ್ಪುವಿನ ಕಾಲದಲ್ಲಿ ಅನಿವಾರ್ಯ ಮತಾಂತರಕ್ಕೆ ಒಳಗಾಗಿದ್ದ ಹಿಂದುಗಳಾಗಿದ್ದುದರಿಂದ ಅವರಲ್ಲಿ ಗೋಮಾಂಸ ಭಕ್ಷಣೆ ಇದ್ದಂತೆ ಕಂಡುಬರುವುದಿಲ್ಲ. ಕೊಡಗರ ಭಾವನೆಯನ್ನು ಗೌರವಿಸಲಿಕ್ಕಾಗಿ ಮತ್ತು ಕೊಡಗರಿಗೆ ಬ್ರಿಟಿಷ್ ಆಡಳಿತದ ಮೇಲೆ ಭಾವನಾತ್ಮಕ ಪ್ರೀತಿ ಮೂಡುವುದಕ್ಕಾಗಿ ಕರ್ನಲ್‌ಫ್ರೇಸರ್ ಈ ಆಜ್ಞೆ ಹೊರಡಿಸಿದಂತೆ ಕಂಡುಬರುತ್ತದೆ. ಇದು ಎಷ್ಟು ಫಲಕಾರಿಯಾಯಿತೆಂದರೆ ೧೯೪೭ರ ಬಳಿಕವೂ ಅಲಿಖಿತ ಶಾಸನವಾಗಿ ಅನುಷ್ಠಾನದಲ್ಲಿ ಉಳಿದು ಬಿಟ್ಟಿತು. ಕರ್ನಲ್‌ಫ್ರೇಸರ್‌ನ ಇಂತಹ ನಡವಳಿಕೆಗಳು ಕೊಡಗು ಕೆನರಾ ರೈತ ಬಂಡಾಯದ ಸಂದರ್ಭದಲ್ಲಿ ಬಹುಸಂಖ್ಯೆಯ ಕೊಡಗರನ್ನು ತಟಸ್ಥರನ್ನಾಗಿ ಉಳಿಯುವಂತೆ ಮಾಡಿಬಿಟ್ಟಿತು.

ಹಾಲೇರಿ ರಾಜರುಗಳ ಪನ್ಯ ಭೂಮಿಯಲ್ಲಿ ದುಡಿಯುತ್ತಿದ್ದ ಜಮ್ಮದಾಳುಗಳು ವಸ್ತುಶಃ ಗುಲಾಮರಾಗಿದ್ದರು. ಅವರು ಭೂವ್ಯವಸಾಯದಲ್ಲಿ ತಮ್ಮನ್ನು ತೊಡಗಿಸುವುದರೊಂದಿಗೆ ರಾಜರುಗಳೊಡನೆ ಬೇಟೆ ಇತ್ಯಾದಿ ಚಟುವಟಿಕೆಗಳಲ್ಲಿ ಭಾಗವಹಿಸಬೇಕಿತ್ತು. ಮತ್ತು ಅರಮನೆಯ ಹಿಟ್ಟಿಬಿಟ್ಟಿ ಚಾಕರಿ ಮಾಡಬೇಕಿತ್ತು. ರಾಜರ ಆಳ್ವಿಕೆ ಕೊನೆಗೊಳ್ಳುವುದರೊಂದಿಗೆ ಗುಲಾಮಗಿರಿ ತಾನೇ ತಾನಾಗಿ ರದ್ದಾಯಿತು. ಆದರೆ ಪನ್ಯ ಭೂಮಿಯ ಜಮ್ಮದಾಳುಗಳು ಭೂಮಿಯ ಒಡೆಯರಾಗುವಂತಿರಲಿಲ್ಲ. ಈ ಭೂಮಿ ತಾತ್ಕಾಲಿಕವಾಗಿ ಕಂಪೆನಿಯ ಆಸ್ತಿಯಾಯಿತು. ಜಮ್ಮದಾಳುಗಳು ಪನ್ಯ ಭೂಮಿಯಲ್ಲಿ ಒಕ್ಕಲುಗಳಾಗಿ ನೆಲೆಗೊಳ್ಳಬೇಕಾಯಿತು.

ಈ ಬದಲಾವಣೆ ಪನ್ಯ ಭೂಮಿಯ ಹೊರತಾದ ಜಮ್ಮ ಭೂಮಿ ಹೊಂದಿರುವವರಲ್ಲಿ ಹೊಸ ಆಲೋಚನೆಗೆ ಕಾರಣವಾಯಿತು. ಜಮ್ಮದ ಆಳುಗಳಲ್ಲಿ ಭೂಮಿ ಜಮ್ಮದಾಳುಗಳು ಒಂದೇ ಭೂಮಿಯಲ್ಲಿ ಸ್ಥಿರವಾಗಿ ನೆಲೆಗೊಂಡು ಕೃಷಿಕಾರ್ಯ ನಡೆಸುತ್ತಿದ್ದರು. ಭೂ ಒಡೆತನ ಬೇರೆಯವರಿಗೆ ಹೋದರೂ ಭೂಮಿ ಜಮ್ಮದಾಳುಗಳು ಆ ಭೂಮಿಯಿಂದ ಎಲ್ಲಿಗೂ ಹೋಗಬೇಕಾಗಿರಲಿಲ್ಲ. ಆದರೆ ಒಕ್ಕಲು ಜಮ್ಮದಾಳುಗಳು ಭೂಮಿಯ ಯಜಮಾನಿಕೆ ಬದಲಾದಾಗ ತಮ್ಮ ಮೂಲ ಯಜಮಾನರುಗಳೊಟ್ಟಿಗೆ ಬೇರೆ ಕಡೆಗೆ ಹೋಗಬೇಕಿತ್ತು. ಇದು ಒಂದು ಶಾಶ್ವತ ಗುಲಾಮಗಿರಿ ವ್ಯವಸ್ಥೆಯಂತಿತ್ತು. ಕರ್ನಲ್‌ಫ್ರೇಸರ್ ೧೮೩೬ರಲ್ಲಿ ಜಮ್ಮದಾಳುಗಳಿಗೆ ಸ್ವಾತಂತ್ರ್ಯ ನೀಡಲು ಯತ್ನಿಸಿದ. ಇದಕ್ಕೆ ಕೊಡಗಿನ ಪ್ರಬಲ ಭೂಮಾಲಿಕ ವರ್ಗದಿಂದ ತೀವ್ರವಾದ ಪ್ರತಿರೋಧ ವ್ಯಕ್ತವಾಯಿತು. ಕೊಡಗಿನಲ್ಲಿರುವ ಯಾವುದೇ ವ್ಯವಸ್ಥೆಯನ್ನು ಬದಲಾಯಿಸ ಹೊರಟರೆ ಸಮಸ್ಯೆ ತಪ್ಪಿದ್ದಲ್ಲ ಎನ್ನುವುದು ಕರ್ನಲ್‌ಫ್ರೇಸರ್‌ನಿಗೆ

ಖಚಿತವಾಯಿತು. ಆದುದರಿಂದ ಅವನು ಯಥಾಸ್ಥಿತಿಯನ್ನು ಮುಂದುವರಿಸಿಕೊಂಡು ಹೋಗಲು ಅವಕಾಶ ಕಲ್ಪಿಸಿಕೊಟ್ಟ. ಇದರಿಂದ ಕಂಪೆನಿ ಸರಕಾರಕ್ಕೆ ಅಪರಿಮಿತ ಲಾಭವಾಯಿತು. ೧೮೩೭ರ ರೈತ ದಂಗೆಯನ್ನು ಅಡಗಿಸಲು ಕೊಡಗಿನ ಬಹುತೇಕ ಭೂ ಮಾಲಿಕರು ಈಸ್ಟ್ ಇಂಡಿಯಾ ಕಂಪೆನಿಗೆ ನೆರವಾದರು. ಆ ಬಳಿಕವೂ ಬಹುತೇಕ ಕೊಡವರು ಬ್ರಿಟಿಷ್ ನಿಷ್ಠರಾಗಿ ಉಳಿದುಬಿಟ್ಟರು.

ಕ್ರಿ. ಶ. ೧೭೯೯ ರಲ್ಲಿ ದ. ಕ.ವನ್ನು ವಶಪಡಿಸಿಕೊಂಡ ಬ್ರಿಟಿಷರು ಅಲ್ಲಿಯ ಕಂದಾಯ ವ್ಯವಸ್ಥೆಯನ್ನು ಬದಲಾಯಿಸಿದರು. ಸಾಧ್ಯವಿರುವ ಸರಕುಗಳು ಮೇಲೆಲ್ಲಾ ತೆರಿಗೆ ಹೇರಿದರು. ಉಪ್ಪು ಮತ್ತು ಹೊಗೆಸೊಪ್ಪಿನ ವ್ಯಾಪಾರವನ್ನು ಕೇಂದ್ರೀಕರಿಸಿದರು. ಆದರೆ ತಾವು ವಶಪಡಿಸಿಕೊಂಡ ಕೊಡಗಿನಲ್ಲಿ ಯಾವ ಬದಲಾವಣೆಯನ್ನೂ ಮಾಡ ಹೋಗಲಿಲ್ಲ. ತಮಗೆ ಅನುಕೂಲಕರವಾದ ಜಮೀನುದಾರಿ ಪದ್ಧತಿಯನ್ನು ಉಳಿಸಿಕೊಂಡರು. ಹಾಗಾಗಿ ದ.ಕ. ದ ಜನರು ಬ್ರಿಟಿಷರನ್ನು ವಿರೋಧಿಸತೊಡಗಿದರೆ ಕೊಡಗರು ವಿರೋಧಿಸಬೇಕಾದ ಪ್ರಮೇಯ ಉದ್ಭವಿಸಲಿಲ್ಲ.

ಉಲ್ಲೇಖಗಳು ಮತ್ತು ಟಿಪ್ಪಣಿಗಳು

೧. ಸೂರ್ಯನಾಥ ಕಾಮತ್,೧೯೯೨ ,ಕೊಡಗು ಜಿಲ್ಲಾ ಗಜೆಟಿಯರ್, ಪೂರ್ವೋಕ್ತ, ಪು. ೧೦೪

೨. ಇಂಡಿಯಾದ ಗವರ್ನರ್ ಜನರಲ್‌ನು ವಿಕ್ಟೋರಿಯಾ ಮಹಾರಾಣಿಯ ಅನುಮತಿಯ ನಿರೀಕ್ಷೆಯಲ್ಲಿ ಕಾಶಿಯಲ್ಲಿದ್ದ ಚಿಕ್ಕವೀರ ರಾಜೇಂದ್ರನ ಕುಟುಂಬದವರಿಗೆ ತಿಂಗಳಿಗೆ ಮೂರು ಸಾವಿರ ರೂಪಾಯಿಗಳ ವೇತನವನ್ನು ಮಂಜೂರು ಮಾಡಿದ್ದನ್ನು ಡಿ. ಎನ್. ಕೃಷ್ಣಯ್ಯನವರು ಉಲ್ಲೇಖಿಸಿದ್ದಾರೆ. ಪು. ೬೦೧

೩. ದೊಡ್ಡವೀರರಾಜ ಕಂಪೆನಿಯಲ್ಲಿ ಇಟ್ಟ ಡೆಪೋಸಿಟ್ ಮೊತ್ತದ ಬಗ್ಗೆ ಗೊಂದಲಗಳಿವೆ. ಬಹುತೇಕ ಕೃತಿಗಳಲ್ಲಿ ಅದು ಆರೂವರೆ ಲಕ್ಷ ರೂಪಾಯಿಗಳೆಂದು ಉಲ್ಲೇಖವಾದರೆ ಎಂ. ಜಿ. ನಾಗರಾಜ್ ಎಂಟೂವರೆಲಕ್ಷ ರೂಪಾಯಿಗಳೆಂದು ಎಂದು ದಾಖಲಿಸಿದ್ದಾರೆ. ಎಷ್ಟಿದ್ದರೂ ಅದು ಆ ಕಾಲದಲ್ಲಿ ಬಹುದೊಡ್ಡ ಮೊತ್ತವೇ.

೪. ಪಟ್ಟಚೆರವನ ಬೋಳುಕನ ಮತ್ತು ಅಪ್ಪನೆರವನ ಅಚ್ಚಯ್ಯನ ನೇತೃತ್ವದಲ್ಲಿ ದಕ್ಷಿಣ ಕೊಡಗಿನ ಯುವಕರ ತಂಡವೊಂದು ದೊಡ್ಡವೀರರಾಜ ಮತ್ತು ಅವನ ಕುಟುಂಬದವರನ್ನು ಪಿರಿಯಾಪಟ್ಟಣದ ಸೆರೆಮನೆಯಿಂದ ಬಿಡಿಸಿಕೊಂಡು ಬಂತೆಂದು ಡಿ.ಎನ್ ಕೃಷ್ಣಯ್ಯ ದಾಖಲಿಸಿದ್ದಾರೆ..

೫. "ಟಿಪ್ಪು ಸುಲ್ತಾನನಿಗೂ ಅವನ ಕಡೆ ಇರುವ ಪಕ್ಷದವರು ಯಾವತ್ತೂ, ಯರಡು ಕಡೆಯವರು ಅವರು ನಮಗೆ ಶತ್ರುಯಂತ ಭಾವಿಸಿಕೊಂಡು ಬರಬೇಕು. ಇಂಗ್ರೇಜರಿಗೂ ಅವನಿಗೂ ನಡೆದು ಬರುವಂಥ ಲಡಾಯಿಯಲ್ಲಿ ಅರಸುಗಳಿಗೆ ಸಮಯ ಸಿಕ್ಕಿದರೆ ಶತ್ರುವಿಗೆ ತಮ್ಮಿಂದ ಆಗುವಷ್ಟು ನಾಶಮಾಡುವುದಕ್ಕೆ ಹಾಜರಾಗಿ ಇರಬೇಕು. ಬೇರೆ ಕೊಡಗು ಮಲೆದಾಳಿ ಇಂಗ್ರೇಜರ ಪಾಳ್ಯ ಎಂದು ಸಮಯಕ್ಕೆ ಹೋಗುವಾಗ್ಗೆ ಸನ್‌ಮತ ಇರಬೇಕು. ಯಾವರಿಂದ ಯಂದರೆ ಟಿಪ್ಪು ಸುಲ್ತಾನನ ಕಡೆಗೆ ಹೋಗುವ ಸಮಯ ಬಂದರೆ ಆವಾಗ್ಯೆ ನಮ್ಮ ಪಾಳಯದವರಿಗೆ ರಾಥೀಪು ಜೀನಸು ನಿಮ್ಮ ಊರಲ್ಲಿರುವಂಥಾದ್ದು ಸಹಾಯಕ್ರಯಕ್ಕೆ ಕೊಡಿಸಿ ಸಹಾಯ ಮಾಡಬೇಕು. ಫಟ್ಟದ ಮೇಲೆ ಟಿಪ್ಪು ಊರಲ್ಲೂ ನಮಗೂ ಆತನಿಗೂ ಲಡಾಯಿ ಆಗುವಾಗ್ಯೆ ರಾಜರು ತಮಗೆ ಕೂಡಿದಷ್ಟು ಬಲ ತೆಗೆದುಕೊಂಡು ಇಂಗ್ರೇಜರ ಕಡೆಯಲ್ಲೂ ಕೂಡಿ ಇರಬೇಕು" – ರಾಜೇಂದ್ರನಾಮೆ

೬. ಈ ಅಭಿಪ್ರಾಯ ಬಾರ್ಕೂರು ಉದಯ ಅವರ ಹೈದರಾಲಿ ಟಿಪೂ ಇತಿಹಾಸ ಕಥನ ಕೃತಿಯಲ್ಲಿ ಅಮೂರ್ತವಾಗಿ ಪ್ರಭಾಕರ ಶಿಶಿಲ ನದಿ ಎರಡರ ನಡುವೆಯಲ್ಲಿ ಕೃತಿಯಲ್ಲಿ ಮೂರ್ತವಾಗಿ ಕಾಣಿಸಿಕೊಂಡಿದೆ.

೭. ನೋಡಿ: ಕೊಡಗಿನ ಐತಿಹ್ಯ ಕತೆಗಳು ೨೦೧೦.

೮. ನೋಡಿ, ನದಿ ಎರಡರ ನಡುವೆ ,೨೦೦೬.

೯. ಕೊಡಗು ಕ.ಸಾ.ಪ. ಮಡಿಕೇರಿಯಲ್ಲಿ ಏರ್ಪಡಿಸಿದ 2 ದಿನಗಳ ಸಂಶೋಧನಾ ಶಿಬಿರದ ಸಮಾರೋಪದಲ್ಲಿ ಎಂ. ಜಿ. ನಾಗರಾಜ್ ವ್ಯಕ್ತಪಡಿಸಿದ ಅಭಿಪ್ರಾಯ.

೧೦. ಟಿಪ್ಪು ನ್ಯಾಯಬದ್ಧವಾಗಿ ಕೊಡಗನ್ನು ದೊಡ್ಡವೀರರಾಜನಿಗೆ ಬಿಟ್ಟು ಕೊಡುತ್ತಿದ್ದರೆ ಈ ಒಪ್ಪಂದದ ಅವಶ್ಯಕತೆ ಇರುತ್ತಿರಲಿಲ್ಲ.ಟಪ್ಪುವಿನ ಈ ವರ್ತನೆಗೆ ಯಾವ ಸಮರ್ಥನೆಯೂ ಸಿಗುವುದಿಲ್ಲ. ಆದರೆ ಆತ ದೊಡ್ಡವೀರರಾಜನನ್ನು ಪುಂಡುಪೋಕರಿಗಳ ದಂಡೊಂದರ ನಾಯಕವೆಂದು ತಪ್ಪಾಗಿ ಭಾವಿಸಿ ಅವನನ್ನು ಉಪೇಕ್ಷಿಸಿರಬೇಕೆಂದು ಅನಿಸುತ್ತದೆ.

೧೧. ಕೊಡಗಿನ ಉಳಿದ ಪ್ರದೇಶಗಳು ಆಗ ನಗರಗಳಾಗಿ ಬೆಳೆದಿರಲಿಲ್ಲ. ಮಡಿಕೇರಿಯಲ್ಲಿ ಬಹುಶಃ ರಕ್ಷಣೆಯ ದೃಷ್ಟಿಯಿಂದ ಹೊರದೇಶದ ವ್ಯಾಪಾರಿಗಳಿಗೆ ಅವಕಾಶ ನಿರಾಕರಿಸಿರಬೇಕು.

೧೨. ಶ್ರೀರಂಗಪಟ್ಟಣದ ಒಪ್ಪಂದದ ಪೂರ್ಣ ಪಾಠಕ್ಕೆ ನೋಡಿ: – ಮೊಹಿಬ್ಬುಲ್ ಹಸನ್ ಸಮೇತನ ಹಳ್ಳಿ ರಾಮರಾಯ ೧೯೮೮, ಟಿಪ್ಪು ಸುಲ್ತಾನನ ಇತಿಹಾಸ, ಕನ್ನಡ ಅಧ್ಯಯನ ಸಂಸ್ಥೆ ಮೈಸೂರು.

೧೩. ಡಿ.ಎನ್. ಕೃಷ್ಣಯ್ಯ ಮತ್ತು ಸುಬ್ಬರಾಯ ೧೯೫೭ ಪೂರ್ವೋಕ್ತ ಪು. ೨೫೪ – ೨೬೧

೧೪. ಪ್ರಭಾಕರ ಶಿಶಿಲ, ೨೦೧೦, ಮೂಡಣದ ಕೆಂಪು ಕಿರಣ, ರಾಜ್‌ಪ್ರಕಾಶನ ಮೈಸೂರು, ಪು. ೧೦

೧೫. ಪ್ರಭಾಕರ ನೀರಮಾರ್ಗ, ೨೦೦೯, ಮಂಗಳೂರು ಕ್ರಾಂತಿ, ಹೇಮಾವತಿ ಪ್ರಕಾಶನ, ಕುಲಶೇಖರ, ಮಂಗಳೂರು ಪು. – ೩೫

೧೬. ಈ ಒಪ್ಪಂದದ ವಿವರಗಳು ಮೂರನೆಯ ಅಧ್ಯಾಯದಲ್ಲಿದೆ.

೧೭. ಕರ್ನಲ್ ಬ್ಯಾರಿಕ್ಲೋಸ್ ಸಾಹೇಬರವರಿಂದ ಶ್ರೀರಂಗಪಟ್ಟಣ ೧೬ ನವೆಂಬರ್ ೧೭೯೯

ಕೊಡಗಿನ ರಾಜನಿಗೆ,

ಲಾರ್ಡ್ ಮಾರ್ನ್ಂಗ್‌ಟನ್ ನನ್ನನ್ನು ಮೈಸೂರು ರಾಜ್ಯದ ಕಮೀಷನರಾಗಿ ನೇಮಿಸಿ ಶ್ರೀರಂಗಪಟ್ಟಣಕ್ಕೆ ವರ್ಗಾಯಿಸಿರುವರೆಂಬುದು ನಿನಗೆ ತಿಳಿದಿರಬಹುದು. ಶ್ರೀರಂಗಪಟ್ಟಣವು ನಮ್ಮ ಕೈಗೆ ಬಿದ್ದ 5 ದಿನಗಳ ನಂತರ ನಿನ್ನ ಜನರು ಮಹಾರಾಜ ದುರ್ಗ ಜಿಲ್ಲೆಯನ್ನು ಹೊಕ್ಕು ಹದಿನೇಳು ಗ್ರಾಮಗಳನ್ನು ಸುಲಿಗೆ ಮಾಡಿ ಹೆಂಗಸರು, ಮಕ್ಕಳು, ದನಕರುಗಳು, ಚಿನ್ನ, ಬೆಳ್ಳಿ, ಅಕ್ಕಿ ಮತ್ತು ಬಿತ್ತನೆ ಧಾನ್ಯಗಳನ್ನು ರೈತರಿಂದ ಕಿತ್ತುಕೊಂಡು ಗಡಿಯಾಚೆ ಸಾಗಿಸಿರುವರು ಎಂದು ಮಂಜರಾಬಾದು ಗಡಿಯಿಂದ ನನಗೆ ವರದಿ ಬಂದಿದೆ. ಈ ಪತ್ರದೊಡನೆ ಸುಲಿಗೆ ಮಾಡಲ್ಪಟ್ಟ ವಸ್ತುಗಳ ಪಟ್ಟಿಯೊಂದನ್ನು ಸೇರಿಸಿದ್ದೇನೆ..

ಮಹಾರಾಜಗುರ್ಗ ಜಿಲ್ಲೆಯಲ್ಲಿ ಕೊಡಗು ಜನರಿಂದ ಸುಲಿಗೆ ಮಾಡಲ್ಪಟ್ಟ ವಸ್ತುಗಳ ಪಟ್ಟಿ. ೬೭ ಹೆಂಗಸರು, ೧೧ ಹುಡುಗರು, ೧೦ ಹುಡುಗಿಯರು, ೧೩೮೩ ದನಗಳು, ೫೭೪ ಎಮ್ಮೆಕೋಣಗಳು, ೮೩೪ ಎತ್ತುಗಳು, ೧೨೧ ಕರುಗಳು ೭೨೯ ಕಂಠೀರಾಯ ಪಗೋಡಗಳು, ೮೨ ಬೆಳ್ಳಿ ನಗಗಳು, ೩೯ ಬೆಳ್ಳಿ ಕಡಗಗಳು, ೨೭ ಹವಳದ ಸರಗಳು, ೬೩ ಬೆಳ್ಳಿ ಸೊಂಟದ ಒಡ್ಯಾಣಗಳು, ೫೪ ಜತೆ ಚಿನ್ನದ ಕಿವಿಯೋಲೆಗಳು, ೯೩ ತಾಮ್ರದ ಪಾತ್ರೆ, ೬೭ ಕೋವಿಗಳು, ೬ ಕುದುರೆಗಳು, ೧೫೫ ಕುಲಿಗಳು, ೧೫ ಚೂರಿಗಳು, ೯೬ ಹುಲ್ಲು ಕೊಯ್ಯುವ ಕತ್ತಿಗಳು, ೯೦ ಕೊಡಲಿಗಳು, ೫ ಹಿತ್ತಾಳೆ ತಟ್ಟೆಗಳು, ೭ ಕಜ್ಜಿಣದ ಸರಪಣಿಗಳು, ೭೨ ಬಟ್ಟೆಯ ಕಟ್ಟುಗಳು.

೧೮. ದೇವಿಪ್ರಸಾದ್ ಸಂಪಾಜೆ, ೧೯೯೯, ಪೂರ್ವೋಕ್ತ ಪು. ೫೧–೫೪

೧೯. ಕನ್ನಡ ತಿಳಿಯದ ಕರ್ನಲ್‌ಕ್ಲೋಸ್ ಹೆಸರಲ್ಲಿ ಈ ಬ್ರಾಹ್ಮಣ (ದಿವಾನ ಪೂರ್ಣಯ್ಯ) ನನ್ನನ್ನು ಒಬ್ಬ ಗುಲಾಮ ಎಂಬಂತೆ ಸಂಬೋಧಿಸಿ ಪತ್ರ ಬರೆದಿದ್ದಾನೆ. ಇದರಿಂದ ನನಗೆ ಬಹಳ ದುಃಖವಾಗಿದೆ. ನನ್ನ ಜನ ಲೂಟಿ ಮಾಡಿದರೆ ನಾನು ಹೊಣೆಯಾಗಿ ತಕ್ಕ ಪ್ರತಿಫಲ ಸಲ್ಲಿಸುತ್ತೇನೆ. ಕಂಪೆನಿಯುದ್ಧದ ಕ್ಯಾಂಪ್‌ಗಳಿಗೆ ನನ್ನ ಜನರ ಹೆಂಗಸರು, ಮಕ್ಕಳು ಭತ್ತ ಕುಟ್ಟಿ ತರುತ್ತಿದ್ದುದು ತಮಗೆ ತಿಳಿದ ವಿಚಾರ. ಒಟ್ಟಿನಲ್ಲಿ ನನಗೆ ಬೇಕಾದ್ದು ನನ್ನ ೬೦೦೦ ಅಥವಾ ೭೦೦೦ ಕೊಡಗರ ಹೊಟ್ಟೆ ಬಟ್ಟೆಯ ಅವಶ್ಯಕತೆಗಳು ಮತ್ತು ಸತ್ತವರ ಸಂಬಂಧಿಕರ ಹಾಗೂ ಗಾಯಾಳುಗಳ ರಕ್ಷಣೆ ಮಾತ್ರ ಆಗಿರುತ್ತದೆ". – ಅದೇ ಪುಟ ೧೨

೨೦. ಡಿ. ಎನ್. ಕೃಷ್ಣಯ್ಯ, ೧೯೭೪ ಕೊಡಗಿನ ಇತಿಹಾಸ ಮೈಸೂರು ವಿಶ್ವವಿದ್ಯಾಲಯ ಪು.೨೬೧

೨೧. ಇಂಗ್ಲೀಷರೊಡನೆ ಒಪ್ಪಂದ ಮಾಡಿಕೊಳ್ಳದಿರುತ್ತಿದ್ದರೆ ತನಗೆ ಕೊಡಗಿನ ರಾಜನಾಗಲು ಸಾಧ್ಯವಿರಲಿಲ್ಲವೆಂಬ ವಾಸ್ತವಿಕ ಅಂಶ ದೊಡ್ಡವೀರ ಆ ಬಳಿಕ ಇಂಗ್ಲಿಷರನ್ನು ಎದುರು ಹಾಕಿಕೊಳ್ಳದಿರಲು ಕಾರಣವಾಗಿದ್ದಂತೆ ಕಂಡುಬರುತ್ತದೆ.

೨೨. ಲಿಂಗರಾಜನು ಒಬ್ಬ ಸಮಯ ಸಾಧಕನಂತೆ ಕಂಡುಬರುತ್ತದೆ. ಆರಂಭದಲ್ಲಿ ಅಣ್ಣ ದೊಡ್ಡ ವೀರರಾಜನಿಂದ ತನ್ನನ್ನು ರಕ್ಷಿಸಿಕೊಳ್ಳಲು ತನಗೆ ಸಿಂಹಾಸನದ ಮೇಲೆ ಯಾವುದೇ ಒಲವಿಲ್ಲ ಎಂಬಂತೆ ನಟಿಸಿದ. ಅಣ್ಣನ ಮಗಳು ದೇವಮ್ಮಾಜಿ ಪಟ್ಟವೇರಿದಾಗ ತಾನು ಅವಳ ಹಿತ ಚಿಂತಕನಂತೆ ನಟಿಸಿ ಕೊಡಗಿನ ಸಿಂಹಾಸನ ತನಗೆ ದಕ್ಕುವಂತೆ ನೋಡಿಕೊಂಡ. ದೇವಮ್ಮಾಜಿ ಕೇವಲ ೧೩ರ ಎಳೆಯ ಹುಡುಗಿಯಾಗಿದ್ದುದು ಆತನ ಸಮಯ ಸಾಧಕತನಕ್ಕೆ ಅನುಕೂಲಕರವಾಗಿತ್ತು.

೨೩.ದೊಡ್ಡವೀರರಾಜ ಮೂಲತಃ ಹಾಲೇರಿ ವಂಶೀಯನಲ್ಲ. ಆತ ಬ್ರಿಟಿಷರ ಸೃಷ್ಟಿ. ಈ ಕಾರಣಕ್ಕಾಗಿ ಆತ ಬ್ರಿಟಿಷರನ್ನು ಎದುರು ಹಾಕಿಕೊಳ್ಳಲು ಹೋಗಲಿಲ್ಲ. ಎಂಬ ಅಭಿಪ್ರಾಯವನ್ನು ಕೊಡಗಿನ ಬಗ್ಗೆ ಸಂಶೋಧನೆ ನಡೆಸಿದ ಸಂಪಾಜೆ ದೇವಿಪ್ರಸಾದ್ ವ್ಯಕ್ತಪಡಿಸಿದ್ದಾರೆ.

೨೪. ದೇವಿಪ್ರಸಾದ್ ಸಂಪಾಜೆ, ೧೯೯೯, ಪೂರ್ವೋಕ್ತ ಪು.೧೦.

೨೫. ಅದೇ ಪು. ೧೦

೨೬. ಪುರುಷೋತ್ತಮ ಬಿಳಿಮಲೆ ೧೯೮೬ ಪೂರ್ವೋಕ್ತ ಪು ೨೩೭ – ೨೩೯

೨೭. "ಕಸಬಿ ತಾಲೂಕು ಬಣ್ಣಾಂತರದ ಜಾತಿ ಕಟ್ಟಳೆ. ಕುಳದಿಂದ ಯತ್ತಾವಳಿ ಮಾಡುವ ಹಣವಿನ ವಿವರ : ಕುರುಬರ ಜಾತಿ ಕುಳವೊಂದಕ್ಕೆ ಗುಡ್ಲುವೊಂದಕ್ಕೆ ಕಂಠೀರಾಯ ಹಣ ಒಂದು ಹಣ, ಕುಂಬಾರ ಜಾತಿ ಕುಳವೊಂದಕ್ಕೆ ಚಕ್ರಗಾಣಿತ ಕಂಠೀರಾಯ ಹಣ ಮೂರು

ಹಣ, ಅಗಸರ ಜಾತಿ ಕುಳವೊಂದಕ್ಕೆ ಉಬ್ಬೆ ಕಂದಾಯ ಕಂ ಹಣ ಮೂರು ಹಣ, ಐರಿ ಜಾತಿ ಕುಳವೊಂದಕ್ಕೆ ಕುಲುಮೆಗಾಣಿಕೆ ಕಂ. ಹಣ ಮೂರು ಹಣ, ಕಣಿಯರ ಕುಳವೊಂದಕ್ಕೆ ಪ್ರಶ್ನೆ ಕಾಣಿಕೆ ಹಣ ಒಂದು ಹಣ, ಬಸವಿ ಮುದ್ರೆಗಾಣಿಕೆ ಕಂ ಹಣ ಎರಡು ಹಣ, ಹೊಸಮನೆ ಪ್ರವೇಶದ ಬಗೆಯಲ್ಲಿ ಕಂ ಹಣ ಹಾಗೆ (೧/೪ ಹಣ) ಮದುವೆ ಕಾಣಿಕೆಗಳನ್ನು ಅರಮನೆಗೆ ಕೊಡಬೇಕು" – ಕೃಷ್ಣಯ್ಯ ೧೯೯೫, ಪೂರ್ವೋಕ್ತ ಪು. ೪೯

೨೮.ಇವನ ಪಟ್ಟದ ರಾಣಿ ದೇವಕಿ ಮೂಲತಃ ಕಾಂತು ಮೂರ್ನಾಡಿನ ಕೊಡವತಿಯಾಗಿದ್ದಳು. ಅಂಗರಾಜನ ಮಗಳು ದೇವಮ್ಮಾಜಿಯ ಗಂಡ ಚೆನ್ನಬಸಪ್ಪ ಮುಕ್ಕಾಟಿರ ಮನೆತನದ ಐಪಣ್ಣನೆಂಬ ಕೊಡವನಾಗಿದ್ದ. ಪ್ರಧಾನ ದಿವಾನನ್ನಾಗಿ ಅಪ್ಪಾರಂಡ ಬೋಪುವನ್ನು ಇವನು ನೇಮಕ ಮಾಡಿಕೊಂಡಿದ್ದ. ಕೊಡವ ಜನಾಂಗದ ಬಗ್ಗೆ ಹೈದರಾಲಿಯ ಕಾಲದಲ್ಲೇ ಒಲವು ಬೆಳೆಸಿಕೊಂಡಿದ್ದ ಬ್ರಿಟಿಷರಿಗೆ ಅಂಗರಾಜನ ಕೊಡವ ಪ್ರೀತಿ ಒಂದು ಧನಾತ್ಮಕವಾದ ಸಂಕೇತವಾಗಿತ್ತು.

೨೯. ಓಂಕಾರೇಶ್ವರ ದೇವಾಲಯದ ನಿರ್ಮಾಣದ ಬಗೆಗಿನ ಐತಿಹ್ಯಕ್ಕೆ ನೋಡಿ ಪ್ರಭಾಕರ ಶಿಶಿಲ, ೨೦೧೧ ಬ್ರಹ್ಮರಕ್ಕಸನಿಂದಾಗಿ ಮಂಗಳ ಸಂ. ೨೮ ಸಂಚಿಕೆ ೩೫, ದಿನಾಂಕ ೩೧–೮–೧೧ ಪುಟ ೩೬–೩೭

೩೦.Cannor 1870, op. cit

೩೧. ನಿಜಗುಣ ಶಿವಯೋಗಿಯು ಕನ್ನಡದಲ್ಲಿ ಬರೆದ 'ವಿವೇಕ ಚಿಂತಾಮಣಿ' ಗ್ರಂಥವನ್ನು ಅಂಗರಾಜ ಒಡೆಯ ಸಂಸ್ಕೃತಕ್ಕೆ ಭಾಷಾಂತರಿಸಿದ. ಆತ ಕವಿತೆಗಳನ್ನು ಬರೆಯುತ್ತಿದ್ದುದನ್ನು ಮೂರ್ಲಿಂಗ್‌ನು ಉಲ್ಲೇಖಿಸಿದ್ದಾನೆ.

೩೨. ಯದರಿಂದ ತಿಳಿಸುವದು ಯೇನೆಂದರೆ ಯಿಂಗ್ರೇಜ ಸರಕಾರ ದವರ ದಂಡು ಕೊಡಗು ಶೀಮೆ ಮೇಲೆ ಬಂದು ಜೀಲೂ ಹೋಗುತ್ತದೆ ಮತ್ತು ವೀರರಾಜೇಂದ್ರ ವಡೆಯರವರ್‍ರು ಯಿನ್ನು ಮುಂದೆ ಕೊಡಗು ದೇಶದ ಅರಸರಾಗಿ ಯಿರ್‍ರುವರ್‍ರೆಂದು ಯುಣಿಸ ತಕ್ಕದಿಲ್ಲಾ, ಜಗಳಾ ಮಾಡದೆಯಾಗಲಿ ಯಿಂಗ್ರೇಜಿಯವ ದಂಡಿನ ಕಾರ್‍ಯಗಳಿಗೆ ಸಹಾಯ ಮಾಡುವವರೆಲ್ಲಿಯಾಗಲಿ ಯಿರ್‍ರುವ ಮನುಷ್ಯರುಗಳು ಆದರ್‍ರಿಸಲ್ಪಡುವರ್‍ರು ಮತ್ತು ಅಂತಾವರ ಆಸ್ತಿಗಳ ಜೊತೆ ಮಾಡಿ ಕೊಡುವರು ಜನಗಳ ಸುವುಖ್ಯಾಕಾದರ್‍ರೂ ಯಾವ ಬಗೆಯಿಂದಾಗಲಿ ಅವನ್ನು ಕಾಪಾಡುವುದಕ್ಕೆ ಸರ್ವೋತ್ತಮವಾಗಿ ಯಂಣಿಸಲ್ಪಡುವಂತ್ತ ನಿಬಂಧನೆಯನ್ನು ಯಿಂಗ್ರೇಟಿ ಪರಕರದವರ್‍ರು ನಿರ್ಣಯಿಸುವುರ್‍ರು" – ಡಿ. ಎನ್. ಕೃಷ್ಣಯ್ಯ ೧೯೯೫ ಪುಟ ೪೯೭

೩೩. ಬ್ರಿಟಿಷರ ವಿರುದ್ಧ ಯುದ್ಧ ಸಿದ್ಧತೆಗೆ ಚಿಕ್ಕವೀರ ರಾಜ ಸಂಪೂರ್ಣವಾಗಿ ದಿವಾನ ಕುಂಟಬಸವನನ್ನು ಮತ್ತು ಅವನ ಸಹಾಯಕ ಅಬ್ಬಾಸ್ ಅಲಿಯವರ ಸಲಹೆಯನ್ನು

ಅವಲಂಬಿಸಿದ್ದ. ಬೋಪು ದಿವಾನ, ಪೊನ್ನಪ್ಪ ದಿವಾನ ಮತ್ತು ಲಕ್ಷ್ಮೀನಾರಾಯಣ ದಿವಾನ ಇವರುಗಳನ್ನು ಕಡೆಗಣಿಸಿದ್ದ.

೩೪. ಡಾ। ಪ್ರಭಾಕರ ಶಿಶಿಲ, ೨೦೦೯, ಪೂರ್ವೋಕ್ತ, ಪು. ೧೨೧.

೩೫. ನಡಿಕೇರಿಯಂಡ ಚಿಣ್ಣಪ್ಪ, ೧೯೯೫, ಪೂರ್ವೋಕ್ತ. ಪು. ೬೮

೩೬. ನಡಿಕೇರಿಯಂಡ ಚಿಣ್ಣಪ್ಪನವರು ಈ ರೇವಣಿಯ ಮೊತ್ತ ಆರೂವರೆ ಲಕ್ಷ ಎಂದು ದಾಖಲಿಸಿದ್ದಾರೆ ಅದೇ ಪು. ೬೯.

೩೭. ವಿವರಣೆ ನಾಲ್ಕನೇ ಅಧ್ಯಾಯದಲ್ಲಿ ನೀಡಲಾಗಿದೆ.

೩೮. ಬ್ರಿಟಿಷರು ಸ್ಥಳೀಯ ರಾಜರುಗಳನ್ನು ಏಕಕಾಲದಲ್ಲಿ ಪದಚ್ಯುತಿಗೊಳಿಸದೆ ಹಂತಹಂತವಾಗಿ ಪದಚ್ಯುತಿಗೊಳಿಸಿದ್ದು ಅವರ ರಾಜಕೀಯ ತಂತ್ರಕ್ಕೆ ಸಾಕ್ಷಿಯಾಗಿದೆ.

೩೯. ದೇವಿಪ್ರಸಾದ್ ಸಂಪಾಜೆ ೧೯೯೯ ಪೂರ್ವೋಕ್ತ. ಪು. ೧೬

೪೦. ತಾನು ಕೊಡಗಿನ ರಾಜನಾಗಬೇಕೆಂಬ ಮಹತ್ವಾಕಾಂಕ್ಷೆಯಿಂದ ಚಿಕ್ಕವೀರ ರಾಜನಿಗೆ ವಿರುದ್ಧವಾಗಿ ನಿಂತು ಬ್ರಿಟಿಷರ ಪರವಹಿಸಿದ, ಚೆನ್ನಬಸಪ್ಪನ ಆಕಾಂಕ್ಷೆ ಕೊನೆಗೂ ಈಡೇರದೆ ಕೊಡಗು ಶಾಶ್ವತವಾಗಿ ಬ್ರಿಟಿಷರ ಕೈಸೇರುವಂತಾಯಿತು. ಇದರ ಅರಿವು ಮೊದಲೇ ಇರುತ್ತಿದ್ದರೆ ಚೆನ್ನಬಸಪ್ಪ ಮತ್ತು ಬೋಪುದಿವಾನ ಬ್ರಿಟಿಷರ ಪರ ವಹಿಸುತ್ತಿರಲಿಲ್ಲವೆಂದು ಕಾಣುತ್ತದೆ.

೪೧. ಡಿ. ಎನ್. ಕೃಷ್ಣಯ್ಯ, ೧೯೭೫ ಪೂರ್ವೋಕ್ತ ಪು. ೫೧೬

೪೨. ಅದೇ ಪುಟ. ೫೩೫

೪೩. ಪ್ರಭಾಕರ ಶಿಶಿಲ, ೨೦೧೧, ಸುವರ್ಣ ಕಥಾ ಸಂಪುಟ, ರಾಜ್ ಪ್ರಕಾಶನ, ಮೈಸೂರು. ಪು. ೭೦

೪೪. ಡಿ. ಎನ್. ಕೃಷ್ಣಯ್ಯ, ೧೯೭೫, ಪೂರ್ವೋಕ್ತ. ಪು. ೫೩೬

೪೫. ಒಂದು ಕಾಲದ ರಾಜ ನಿಷ್ಠರು ಬ್ರಿಟಿಷರ ವಿರುದ್ಧ ದಂಗೆ ಏಳದಿರಲು ಇದು ಒಂದು ಕಾರಣವಾಗಿರುವಂತೆ ಕಂಡುಬರುತ್ತದೆ.

೪೬. ಇದರಿಂದ ಕೊಡಗಿನ ಏಕತೆಗೆ ಯಾವ ಪ್ರಯೋಜನವೂ ಆಗಲಿಲ್ಲ. ಬದಲಾಗಿ ಹಿಂದು ಮುಸ್ಲಿಂರ ನಡುವಿನ ಕಂದರ ಹೆಚ್ಚಾದಂತೆ ಕಂಡುಬರುತ್ತದೆ.

ಅಧ್ಯಾಯ ೩

ಕೊಡಗು ಕೆನರಾ ಆರ್ಥಿಕ ಬಂಡಾಯದ ಹಿನ್ನೋಟ

ದಕ್ಷಿಣ ಕನ್ನಡ ಜಿಲ್ಲೆಯು ಕ್ರಿ. ಶ. ೧೭೯೯ರಲ್ಲಿ ವಸಾಹತುಶಾಹಿ ಆಡಳಿತಕ್ಕೆ ಒಳಪಟ್ಟ ೩೫ ವರ್ಷಗಳ ಬಳಿಕ ಕೊಡಗನ್ನು ಈಸ್ಟ್ ಇಂಡಿಯಾ ಕಂಪೆನಿಯು ತನ್ನ ವಶಕ್ಕೆ ತೆಗೆದುಕೊಂಡಿತು. ರಾಜನ ಪದಚ್ಯುತಿ ಮತ್ತು ಕೊಡಗಿನಿಂದ ಬೇರ್ಪಡಿಸಿದ ಸುಳ್ಯ - ಪುತ್ತೂರು ಮಾಗಣೆಗಳ ೧೧೦ ಗ್ರಾಮಗಳಲ್ಲಿ ಹೊಸ ಶೋಷಣಾತ್ಮಕ ಕಂದಾಯ ವ್ಯವಸ್ಥೆ ಜಾರಿಗೆ ಬಂದದ್ದು ೧೮೩೭ರ ಕೊಡಗು – ಕೆನರಾ ಬಂಡಾಯಕ್ಕೆ ಕಾರಣ ಮತ್ತು ಪ್ರೇರಣೆಯನ್ನು ಒದಗಿಸಿತು. ದ. ಕ. ಜಿಲ್ಲೆಯವರು ಆರ್ಥಿಕ ಕಾರಣಗಳಿಗಾಗಿ ಈ ಬಂಡಾಯದಲ್ಲಿ ಪಾಲ್ಗೊಂಡರೆ ರಾಜನಿಷ್ಠೆಯ ಕೊಡಗರು ಭಾವನಾತ್ಮಕ ನೆಲೆಯಲ್ಲಿ ರೈತ ಬಂಡಾಯದಲ್ಲಿ ಪಾಲ್ಗೊಂಡರು. ವಸಾಹತುಶಾಹಿಯು ದೇಶೀ ಸಂಸ್ಕೃತಿಯನ್ನು ನಾಶಮಾಡುವ ಭೀತಿ ಎರಡೂ ಜಿಲ್ಲೆಗಳಲ್ಲೂ ಇತ್ತು. ಅಮರಸುಳ್ಯ ಸೀಮೆಯ ಕೂಜುಗೋಡು ಮತ್ತು ಕೆದಂಬಾಡಿ ಮನೆತನಗಳು ಮಾತ್ರವಲ್ಲದೆ ಅಮರ ಮತ್ತು ಸುಳ್ಯ ಸೀಮೆಗಳ ಹಲವಾರು ಗೌಡ ಮನೆತನಗಳು ಲಿಂಗಾಯಿತ ಮೂಲದವುಗಳಾಗಿ ರಾಜನೊಡನೆ ಕುಲಸಂಬಂಧೀ ಭಾವನಾತ್ಮಕತೆಯನ್ನು ಬೆಳೆಸಿಕೊಂಡಿದ್ದವು. ಚಿಕ್ಕವೀರರಾಜನ ಆಸ್ಥಾನದಲ್ಲಿ ಅಮರ ಸುಳ್ಯ ಸೀಮೆಯ ಗೌಡ ಮತ್ತು ಬ್ರಾಹ್ಮಣ ಕುಟುಂಬಗಳಿಗೆ ಉನ್ನತ ಹುದ್ದೆಗಳಿದ್ದವು. ಲಿಂಗರಾಜೇಂದ್ರನ ಬಲಗೈಯಂತಿದ್ದ ಕುಂಭ ಗೌಡ, ಕೂಜುಗೋಡಿನ ಪಟೇಲ ಅಪ್ಪಯ್ಯ ಮತ್ತು ಮಲ್ಲಪ್ಪ, ಅಜ್ಜಾವರದ ಲಕ್ಷ್ಮೀನಾರಾಯಣ ದಿವಾನ ಮತ್ತು ರಾಮಪ್ಪಯ್ಯ, ಪೆರಾಜೆ ಕಡೆಯ ಕರಣಿಕ ಸುಬ್ಬಯ್ಯ ಮತ್ತು ಕರಣಿಕ ಕೃಷ್ಣಯ್ಯ ಮುಂತಾಗಿ ಅನೇಕರು ಚಿಕ್ಕವೀರನ ಆಸ್ಥಾನದ ಉದ್ಯೋಗಿಗಳಾಗಿದ್ದರು. ಸುಳ್ಯ ಸೀಮೆ ಮತ್ತು ಪುತ್ತೂರುಗಳ ೧೧೦ ಗ್ರಾಮಗಳು ಕೊಡಗಿನಿಂದ ಬೇರ್ಪಟ್ಟಾಗ ಇವರೆಲ್ಲರ ಮಹತ್ವ ಸಹಜವಾಗಿ ಕಡಿಮೆಯಾಯಿತು. ಇದು ಬಂಡಾಯಕ್ಕೆ ರಾಜಕೀಯ ಆಯಾಮವನ್ನು ಒದಗಿಸಿಕೊಟ್ಟಿತು.

ದ. ಕ. ದಲ್ಲಿ ಕ್ರಿ. ಶ. ೧೭೯೯ಲಿಂದಲೇ ವಸಾಹತುಶಾಹಿ ವ್ಯವಸ್ಥೆಗೆ ಒಂದು ರೀತಿಯ ಪ್ರತಿರೋಧವಿತ್ತು. ಕೊಡಗಿನಲ್ಲಿ ಈ ಪ್ರತಿರೋಧ ಕ್ರಿ. ಶ. ೧೮೩೪ರಲ್ಲಿ ಕಾಣಿಸಿಕೊಂಡಿತು. ಅಂತಿಮವಾಗಿ ರೈತ ಬಂಡಾಯಕ್ಕೆ ಕಾರಣವಾದ ಈ ಪ್ರತಿರೋಧಗಳು ಒಮ್ಮೆಲೇ ಕಾಣಿಸಿಕೊಂಡದ್ದಲ್ಲ. ಹಂತಹಂತವಾಗಿ ರೂಪುಗೊಂಡ ಬಂಡಾಯದ ಕ್ರಾಂತಿಯ ಹಿನ್ನೆಲೆಯನ್ನು ವಸ್ತುನಿಷ್ಠವಾಗಿ ಇಲ್ಲಿ ದಾಖಲಿಸಲಾಗಿದೆ.

೬.೧. ದಕ್ಷಿಣ ಕನ್ನಡದಲ್ಲಿ ವಸಾಹತುಶಾಹಿಗೆ ಪ್ರತಿರೋಧ

ದ.ಕ.ದ ಪ್ರಮುಖ ಬೆಳೆ ಭತ್ತಕ್ಕೆ ವಿದೇಶಗಳಲ್ಲಿ ಅಪಾರ ಬೇಡಿಕೆ ಇದ್ದುದರಿಂದ ಕ್ರಿ.ಶ ೪ನೇ ಶತಮಾನದಲ್ಲೇ ವಿದೇಶಿ ವರ್ತಕರ ಕಣ್ಣು ಈ ಪ್ರದೇಶದ ಮೇಲೆ ಬಿದ್ದಿತ್ತು.[೧] ಕ್ರಿ.ಶ. ೧೭೯೯ರ ವರೆಗೆ ಇಲ್ಲಿದ್ದುದು ಮಾಂಡಲಿಕರ ಆಡಳಿತ. ಇಡೀ ಜಿಲ್ಲೆಯನ್ನು ಹತೋಟಿಯಲ್ಲಿಡಬಲ್ಲ ಸ್ಥಳೀಯ ಅರಸರುಗಳೇ ಇರಲಿಲ್ಲ. ಹಾಗಾಗಿ ಪೋರ್ಚುಗೀಸ್ ವ್ಯಾಪಾರಿಗಳು ಬಂದಾಗ ರಾಣಿ ಅಬ್ಬಕ್ಕನ ಹೊರತಾಗಿ ಬೇರಾರಿಂದಲೂ ಪ್ರತಿರೋಧ ಕಂಡುಬಂದದ್ದು ದಾಖಲಾಗಿಲ್ಲ.[೨] ಈಸ್ಟ್ ಇಂಡಿಯಾ ಕಂಪೆನಿ ಜಿಲ್ಲೆಯ ಆಡಳಿತವನ್ನು ಕೈಗೆತ್ತಿಕೊಂಡ ಮೇಲೆ ಕಂದಾಯ ವ್ಯವಸ್ಥೆಯಲ್ಲಿ ಯಾವುದೇ ಬದಲಾವಣೆಯನ್ನು ಮಾಡಲು ಹೋಗಲಿಲ್ಲ. ಆದರೆ ಕಂದಾಯ ನಿಗದಿ ಮಾಡುವುದು ಹೇಗೆನ್ನುವ ಗೊಂದಲ ಪರಿಹಾರಕ್ಕೆ ಯಾವ ಮಾರ್ಗವೂ ಇರಲಿಲ್ಲ. ಮನ್ರೋ ಮತ್ತು ಅವನ ಬಳಿಕ ಜಿಲ್ಲಾಧಿಕಾರಿಯಾದ ರೆವೆನ್‌ಷಾ ಹಾಗೂ ಅಲೆಗ್ಸಾಂಡರ್ ರೀಡ್ ೧೭ ವರ್ಷಗಳ ಸರಾಸರಿ ಆಧಾರದಲ್ಲಿ ಕಂದಾಯ ನಿಗದಿ ಮಾಡುವುದು ಸಮರ್ಪಕ ಪದ್ಧತಿ ಎಂದು ಭಾವಿಸಿದರು. ಇದು ವೈಜ್ಞಾನಿಕ ವಿಧಾನವಲ್ಲದುದರಿಂದ ಅನುಷ್ಠಾನಗೊಳಿಸಲು ಸಾಧ್ಯವಾಗಲಿಲ್ಲ. ಅದರ ಬದಲು ತೆರಾವೊ ಅಥವಾ ಶಾಶ್ವತ ಕಂದಾಯ ನಿಗದಿ ಮಾಡಲಾಯಿತು. ತೆರವೊದಿಂದಾಗಿ ಕ್ರಿ. ಶ. ೧೮೨೦ರಿಂದ ಕ್ರಿ.ಶ. ೧೮೨೫ರ ವರೆಗೆ ಕಂದಾಯ ನಿಧಾನವಾಗಿ ಹೆಚ್ಚಾಗುತ್ತಾ ಹೋಯಿತು. ಆದರೆ ಕ್ರಿ.ಶ. ೧೮೨೫ರಿಂದ ಕ್ರಿ. ಶ. ೧೮೩೧ರ ವರೆಗೆ ಕಂದಾಯ ಇಳಿಯುತ್ತಾ ಹೋಯಿತು.[೩] ಭತ್ತದ ಬೆಲೆ ಇಳಿಕೆಯಾದದ್ದು ಇದಕ್ಕೆ ಕಾರಣ. ಈ ಸಮಯದಲ್ಲಿ ದ.ಕ ಜಿಲ್ಲೆಯಲ್ಲಿ ಭೂ ಕಂದಾಯಕ್ಕೆ ಸಂಬಂಧಿಸಿದಂತೆ ಮೂರು ಸಮಸ್ಯೆಗಳು ಹುಟ್ಟಿಕೊಂಡವು:

- ಕ್ರಿ. ಶ. ೧೮೦೦ – ೧೮೨೦ರ ವರೆಗೆ ಜಮಾಬಂಧಿ ಬೆಲೆಗಿಂತ ಭತ್ತದ ಮಾರುಕಟ್ಟೆ ಬೆಲೆ ಅಧಿಕವಾಗಿತ್ತು.[೪] ಪರಿಣಾಮವಾಗಿ ಕಂದಾಯ ಪಾವತಿಯ ಸಮಸ್ಯೆ ಉದ್ಭವವಾಗಲಿಲ್ಲ. ಕ್ರಿ.ಶ. ೧೮೨೦ ರ ಬಳಿಕ ಜಮಾಬಂಧಿ ಬೆಲೆ ಸ್ಥಿರವಾಗಿಯೇ ಉಳಿದರೂ ಭತ್ತದ ಮಾರುಕಟ್ಟೆ ಬೆಲೆ ಕಡಿಮೆಯಾಯಿತು. ಇದು ವಸಾಹತುಶಾಹಿ ಸರಕಾರ ಮತ್ತು ವ್ಯಾಪಾರಿಗಳು ಒಟ್ಟು ಸೇರಿ ರೈತರನ್ನು ಸುಲಿಯಲೆಂದೇ ಮಾಡಿದ ತಂತ್ರವಾಗಿದ್ದಂತೆ ಕಂಡುಬರುತ್ತದೆ. ಇದರಿಂದಾಗಿ ರೈತರು ಕಂದಾಯ ಪಾವತಿಗಾಗಿ ಹೆಚ್ಚು ಹೆಚ್ಚು ಪ್ರಮಾಣದ ಭತ್ತವನ್ನು ಮಾರಾಟ ಮಾಡಬೇಕಾಗಿ ಬಂತು. ಪರಿಣಾಮವಾಗಿ ಅವರ ಮಿಗುತೆಗೆ ಸಂಚಕಾರವಾಗಿ ಸ್ವಂತ ಅನುಭೋಗ ಮತ್ತು ಸುಖಸಾಧನಗಳನ್ನು ಕೊಳ್ಳಲು ಅವರು ಕಷ್ಟಪಡಬೇಕಾಗಿ ಬಂತು.
- ಇನ್ನೊಂದು ಸಮಸ್ಯೆ ಶಾಶ್ವತ ಕಂದಾಯ ಅಥವಾ ತೆರಾವೊ ನಿರ್ಣಯಕ್ಕೆ ಸಂಬಂಧಪಟ್ಟದ್ದು. ಹೊರನೋಟಕ್ಕೆ ಶಾಶ್ವತ ಕಂದಾಯ ವ್ಯವಸ್ಥೆ ಒಂದು ಸರಳ ಮತ್ತು

ಸುಲಭ ಪರಿಹಾರದಂತೆ ಕಂಡುಬಂದರೂ ಅದರಲ್ಲಿ ಸ್ಥಿತಿಸ್ಥಾಪಕತೆಯು ಇರಲಿಲ್ಲ. ಫಸಲು ಕೈಕೊಟ್ಟ ವರ್ಷಗಳಲ್ಲಿ ಕಂದಾಯ ಪಾವತಿಯಲ್ಲಿ ಯಾವುದೇ ರಿಯಾಯಿತಿಗಳು ದೊರೆಯುತ್ತಿರಲಿಲ್ಲ. ಅಲ್ಲದೇ ವಸಾಹತುಶಾಹಿ ಸರಕಾರ ನಿರ್ಣಯಿಸಿದ ತೆರಾವೊ ದರ ಅತ್ಯಧಿಕವಾಗಿತ್ತು. ತೆರಾವೋ ನಿರ್ಣಯವು ಬಡ ಮತ್ತು ಸಾಮಾನ್ಯ ರೈತರ ಪಾಲಿಗೆ ಇನ್ನಿಲ್ಲದ ಸಂಕಷ್ಟವನ್ನು ಉಂಟುಮಾಡಿತು.

❖ ಕಂದಾಯ ನಿರ್ಣಯಕ್ಕೆ ವೈಜ್ಞಾನಿಕ ನೆಲೆಗಟ್ಟು ಇಲ್ಲದ್ದು ಬಹಳ ಗಂಭೀರವಾದ ಸಮಸ್ಯೆಯಾಗಿತ್ತು. ಕಂದಾಯ ನಿರ್ಣಯವನ್ನು ಫಸಲಿನ ಬದಲು ಭೂಮಿಯ ಗಾತ್ರವನ್ನು ಆಧರಿಸಿ ಮಾಡಲಾಗುತ್ತಿತ್ತು. ಕಂದಾಯ ನಿರ್ಧಾರದಲ್ಲಿ ಏಕರೂಪತೆಯಾಗಲಿ, ವೈಜ್ಞಾನಿಕತೆಯಾಗಲೀ, ತಾರ್ಕಿಕ ನೆಲೆಗಟ್ಟಾಗಲೀ ಇರಲಿಲ್ಲ. ಅದು ವಸಾಹತುಶಾಹಿ ಆಡಳಿತದ ಬೊಕ್ಕಸವನ್ನು ತುಂಬಿಸಲೆಂದೇ ರೂಪುಗೊಂಡಂತಿತ್ತು.[೫]

ಭತ್ತದ ಬೆಲೆ ಇಳಿದು ಬಡ ರೈತರು ಕಂದಾಯ ಕಟ್ಟಲಾಗದ ಅನಿವಾರ್ಯತೆಯಿಂದ ಭೂಮಿಯನ್ನು ಶೇ. ೧೨ರ ಬಡ್ಡಿಗೆ ಭೋಗ್ಯಕ್ಕೆ ನೀಡುತ್ತಿದ್ದರು. ಪ್ರಬಲ ಜಮೀನುದಾರ ವರ್ಗಗಳಾದ ಜೈನರು ಮತ್ತು ಬಂಟರು ಭೂಮಿಯನ್ನು ಕೊಳ್ಳುತ್ತಿದ್ದರು. ಹಂತಹಂತವಾಗಿ ಬ್ರಾಹ್ಮಣರು ಮತ್ತು ಕೊಂಕಣಿಗಳು ರೈತರ ಭೂಮಿಯನ್ನು ಕೊಳ್ಳಲು ಆರಂಭಿಸಿದರು. ಸಾಲ ಮರುಪಾವತಿ ಮಾಡಲಾಗದ ರೈತರ ಭೂಮಿ ಸಾಲ ನೀಡಿದವರಿಗೆ ಮಾರಾಟವಾಗುತ್ತಿತ್ತು. ಭೂಕಂದಾಯ ಕಟ್ಟಲಾಗದವರ ಭೂಮಿಯನ್ನು ಸರಕಾರವೇ ಮುಂದೆ ನಿಂತು ಹರಾಜು ಮಾಡಿಸುತ್ತಿತ್ತು. ದ.ಕ.ದ ಸಬ್‌ಕಲೆಕ್ಟರ್ ಆಗಿದ್ದ ಹಡಲ್‌ಸ್ಟನ್ ಈ ಜಿಲ್ಲೆಯಲ್ಲಿ ಕಂದಾಯ ನಿಗದಿ ಅತ್ಯಧಿಕವಾಗಿದೆ ಎಂಬುದನ್ನು ಒಪ್ಪಿಕೊಂಡು ಗಡಿ ಪ್ರದೇಶಗಳಲ್ಲಿ ಮತ್ತು ಕೃಷಿ ಕಡಿಮೆಯಾಗುತ್ತಿರುವ ಬಂಟವಾಳ ಮತ್ತು ಬಾರಕೂರುಗಳಲ್ಲಿ ಕಂದಾಯ ದರ ಕಡಿಮೆ ಮಾಡಬೇಕೆಂದು ಸಲಹೆ ನೀಡಿದ್ದ.[೬] ಅವನ ಸಲಹೆ ವಸಾಹತುಶಾಹೀ ಆಡಳಿತಕ್ಕೆ ಅಪಥ್ಯವಾದುದರಿಂದ ಅದು ಜಾರಿಗೆ ಬರಲಿಲ್ಲ.

ಕ್ರಿ.ಶ. ೧೮೨೮ರಲ್ಲಿ ದ. ಕ. ಜಿಲ್ಲಾ ಕಲೆಕ್ಟರ್ ಡಿಕಿನ್‌ಸನ್ ಜಿಲ್ಲೆಯ ಕಂದಾಯ ವ್ಯವಸ್ಥೆ ಅಸಮರ್ಪಕವಾಗಿದೆ ಎಂಬುದನ್ನು ಒಪ್ಪಿಕೊಂಡು ಕಂದಾಯ ನಿರ್ಧಾರದಲ್ಲಿನ ಅಸಮಾನತೆ ನೀಗಬೇಕೆಂಬ ಸೂಚನೆ ನೀಡಿದ್ದ. ಆದರೆ ಈಸ್ಟಿಂಡಿಯಾ ಕಂಪೆನಿ ತನ್ನ ಆದಾಯ ಕಡಿಮೆಯಾಗುವ ಯಾವುದೇ ಸಲಹೆಯನ್ನು ಒಪ್ಪುವ ಸ್ಥಿತಿಯಲ್ಲಿ ಇರಲಿಲ್ಲ. ಇದಕ್ಕೆ ಕಂಪೆನಿಯ

ಆದಾಯ ಮೂಲಗಳು ಕುಸಿಯುತ್ತಿದ್ದುದು ಕಾರಣವಾಗಿತ್ತು. ಕಂಪೆನಿಯು ಮೂರು ಕಾರಣಗಳಿಂದಾಗಿ ಅಧಿಕ ಕಂದಾಯ ನಿಗದಿಗೊಳಿಸುವುದು ಅನಿವಾರ್ಯವಾಗಿತ್ತು:

❖ ಈಸ್ಟಿಂಡಿಯಾ ಕಂಪೆನಿಯು ಯುರೋಪಿನ ಇತರ ದೇಶಗಳ ಮತ್ತು ಇಂಗ್ಲೆಂಡಿನ ವರ್ತಕರಿಂದ ಪೈಪೋಟಿ ಎದುರಿಸುತ್ತಿತ್ತು. ತನ್ನ ವ್ಯಾಪಾರ ವಾಣಿಜ್ಯ ವಹಿವಾಟುಗಳನ್ನು ವಿಸ್ತರಿಸಲು ಅದು ಬಂಡವಾಳ ಮೂಲವನ್ನು ಭದ್ರಗೊಳಿಸಿ ವಿಸ್ತರಿಸಿಕೊಳ್ಳಬೇಕಾಗಿತ್ತು. ದಕ್ಷಿಣ ಕನ್ನಡ ಜಿಲ್ಲೆಯ ಒಟ್ಟು ಸಾರ್ವಜನಿಕ ಆದಾಯದಲ್ಲಿ ಸುಮಾರು ಶೇ. ೭೦ರಷ್ಟು ಭೂಕಂದಾಯ ಒಂದರಿಂದಲೇ ಸಂಗ್ರಹವಾಗುತ್ತಿದ್ದುದರಿಂದ ತೆರಾವೋ ಹೆಸರಲ್ಲಿ ಅಧಿಕ ಕಂದಾಯ ನಿಗದಿಮಾಡುವುದು ಕಂಪೆನಿಗೆ ಅನಿವಾರ್ಯವಾಗಿತ್ತು.

❖ ೧೮ನೇ ಶತಮಾನದ ಕೊನೆಯ ಭಾಗದಲ್ಲಿ ಮತ್ತು ೧೯ನೇ ಶತಮಾನದ ಆದಿ ಭಾಗದಲ್ಲಿ ಭಾರತದ ಕರಾವಳಿ ತೀರದ ಅನೇಕ ಪ್ರದೇಶಗಳನ್ನು ಈಸ್ಟಿಂಡಿಯಾ ಕಂಪೆನಿ ತನ್ನ ಕೈಗೆತ್ತಿಕೊಂಡಿತು. ಅದಕ್ಕಾಗಿ ಕಂಪೆನಿಯು ಸಾಕಷ್ಟು ಹೋರಾಟಗಳನ್ನು ಮಾಡಬೇಕಾಗಿ ಬಂತು.[2] ಇದರಿಂದಾಗಿ ಕಂಪೆನಿಯು ಲಕ್ಷಗಟ್ಟಲೆ ರೂಪಾಯಿಯನ್ನು ವ್ಯಯಿಸಬೇಕಾಯಿತು. ಈಸ್ಟಿಂಡಿಯಾ ಕಂಪೆನಿ ಒಂದು ಕೂಡು ಬಂಡವಾಳ ಸಂಸ್ಥೆಯಾದುದರಿಂದ ಅದರ ಅಸ್ತಿತ್ವವು ಶೇರುದಾರರಿಗೆ ಎಷ್ಟು ಲಾಭಾಂಶವನ್ನು (Dividend) ಅದು ಕೊಡುತ್ತದೆ ಎನ್ನುವುದನ್ನು ಅವಲಂಬಿಸಿಕೊಂಡಿತ್ತು. ಯುದ್ಧದ ಆ ಅಸ್ಥಿರತೆಯ ದಿನಗಳಲ್ಲಿ ವ್ಯಾಪಾರದಿಂದ ಹೆಚ್ಚು ಲಾಭ ಗಳಿಸಲು ಸಾಧ್ಯವಿರಲಿಲ್ಲ. ಅದಕ್ಕಾಗಿ ಕಂಪೆನಿ ಸರಕಾರ ಅನಿವಾರ್ಯವಾಗಿ ನೆಚ್ಚಿಕೊಂಡದ್ದು ಭೂಕಂದಾಯ ವ್ಯವಸ್ಥೆಯನ್ನು.

❖ ಭಾರತದ ಭೂಪ್ರದೇಶವೊಂದನ್ನು ವಶಪಡಿಸಿಕೊಂಡ ಮೇಲೆ ಅಲ್ಲಿಯ ಸ್ಥಳೀಯ ನಾಯಕರುಗಳನ್ನು ಅಧಿಕಾರದಿಂದ ತೆಗೆದುಹಾಕಿ ಕಂಪೆನಿ ತನ್ನ ಅಧಿಕಾರವನ್ನು ಸ್ಥಾಪಿಸಿದ ಮೇಲೆ ರಾಜ ಕುಟುಂಬಗಳಿಗೆ ನಿಗದಿತ ಮಾಸಾಶನ ನೀಡಬೇಕಾಗಿತ್ತು. ಸ್ಥಳೀಯ ನಾಯಕರುಗಳು ಅನೇಕ ವೇಳೆ ಕಂಪೆನಿಯ ಪರವಾಗಿದ್ದವರೇ ಆಗಿದ್ದರು. ಉದಾಹರಣೆಗೆ ಟಿಪ್ಪುವಿನ ಪತನಾನಂತರ ವಿಟ್ಲ, ಕುಂಬ್ಳೆ ಮತ್ತು ನೀಲೇಶ್ವರದ ಅರಸರುಗಳು ತಾವು ಕಂಪೆನಿ ಸರಕಾರದ ಪರವಾಗಿ ಟಿಪ್ಪುವಿನ ವಿರುದ್ಧ ಹೋರಾಟ ಮಾಡಿದವರಾದುದರಿಂದ ತಮ್ಮ ರಾಜತ್ವ ಉಳಿಯಬಹುದೆಂದು ಭಾವಿಸಿದ್ದರು. ಆದರೆ ಬ್ರಿಟಿಷರು ಅವರನ್ನು ಅಧಿಕಾರದಿಂದ ಕಿತ್ತು ಹಾಕಿ ಜಮೀನುದಾರರ ಮಟ್ಟಕ್ಕೆ ಇಳಿಸಿತು. ಅವರಿಗೆ ಮಾಸಾಶನ ನೀಡುವುದು ಕೂಡಾ ಕಂಪೆನಿಯ

ಬೊಕ್ಕಸಕ್ಕೆ ದೊಡ್ಡಹೊರೆಯೇ ಆಗುತ್ತಿತ್ತು. ಹಾಗಾಗಿ ಕಂಪೆನಿ ಸರಕಾರವು ಕಂದಾಯ ಹೆಚ್ಚಳದ ಮೂಲಕ ಸಮಸ್ಯೆಗೆ ಪರಿಹಾರವನ್ನು ಕಂಡುಕೊಳ್ಳಬೇಕಾದ ಅನಿವಾರ್ಯತೆ ಇತ್ತು.

ಫ್ರಾನ್ಟ್ಜ್ ಫ್ಯಾನನ್‌ನ ಪ್ರಕಾರ ವಸಾಹತುಶಾಹಿ ದೇಶಗಳಲ್ಲಿ ರೈತರು ಮಾತ್ರ ಬಂಡಾಯಗಾರರಾಗಿರುತ್ತಾರೆ. ಏಕೆಂದರೆ ಅವರು ಪಡೆಯುವುದನ್ನು ಬಿಟ್ಟರೆ ಕಳೆದುಕೊಳ್ಳುವುದೇನೂ ಇರುವುದಿಲ್ಲ. ವರ್ಗ ವ್ಯವಸ್ಥೆಯ ಹೊರಗಿರುವ ರೈತ ಮೊದಲು ಶೋಷಣೆಗೆ ಒಳಗಾಗುತ್ತಾನೆ. ಮತ್ತು ಹಿಂಸೆಯಿಂದ ಮಾತ್ರ ಅದನ್ನು ನಿವಾರಿಸಬಹುದು ಎಂದುಕೊಳ್ಳುತ್ತಾನೆ. ಅವನಲ್ಲಿ ರಾಜ ಇರುವುದಿಲ್ಲ. ಒಪ್ಪಂದಕ್ಕೆ ಅವನು ಬರುವ ಸಾಧ್ಯತೆ ಇಲ್ಲ.[೮]

ಕ್ರಿ.ಶ. ೧೮೩೭ರ ಕೊಡಗು ಕೆನರಾ ಆರ್ಥಿಕ ಬಂಡಾಯಕ್ಕೆ ಮುನ್ನ ದ.ಕ.ದಲ್ಲಿ ರೈತರು ಎರಡು ಬಾರಿ ವಸಾಹತುಶಾಹಿಯ ವಿರುದ್ಧ ಬಂಡೆದ್ದಿದ್ದರು. ಅವುಗಳ ವಿಶ್ಲೇಷಣೆ ಪ್ರಸಕ್ತ ಅಧ್ಯಯನಕ್ಕೆ ತಾರ್ಕಿಕ ನೆಲೆಗಟ್ಟನ್ನು ಒದಗಿಸುವುದರಿಂದ ಅವನ್ನು ಸಂಕ್ಷಿಪ್ತವಾಗಿ ಇಲ್ಲಿ ವಿವರಿಸಲಾಗಿದೆ.

೬.೧.೧ ಕಂದಾಯ ನಿರಾಕರಣೆ ೧೮೧೧

ಕ್ರಿ.ಶ. ೧೭೯೯ರಿಂದ ೧೮೧೦ ರ ವರೆಗಿನ ಅವಧಿಯಲ್ಲಿ ದ.ಕ.ಜಿಲ್ಲೆಯ ಆರ್ಥಿಕ ಆಡಳಿತದಲ್ಲಿ ಆದ ಬದಲಾವಣೆಗಳು ಜನಪರವಾಗಿರಲಿಲ್ಲ. ಅವುಗಳ ವಿರುದ್ಧ ರೈತರು ಅಪ್ರಕಟಿತವಾದ ವಿರೋಧವನ್ನು ತಮ್ಮ ವಲಯಗಳಲ್ಲಿ ವ್ಯಕ್ತಪಡಿಸುತ್ತಿದ್ದರು. ಕ್ರಿ.ಶ. ೧೮೧೧ರಲ್ಲಿ ಆ ಅಭಿಪ್ರಾಯಗಳ ಮೂರ್ತರೂಪವಾಗಿ ಕಂದಾಯ ನಿರಾಕರಣೆಯ ಚಳವಳಿ ಆರಂಭವಾಯಿತು. ಅದು ಸೌಮ್ಯ ಸ್ವರೂಪದ್ದೇ ಆಗಿದ್ದರೂ ಬ್ರಿಟಿಷ್ ಬೊಕ್ಕಸಕ್ಕೆ ಸಾಕಷ್ಟು ನಷ್ಟವನ್ನು ಉಂಟುಮಾಡಿತ್ತು. ಮಂಗಳೂರು ಮತ್ತು ಆಸುಪಾಸಿನ ರೈತ ಶಿಸ್ತು ಕಟ್ಟದಿರಲು ಕಾರಣವೇನು ಎಂಬ ಪ್ರಶ್ನೆಗೆ ಆಗಿನ ಕಲೆಕ್ಟರ್ ಅಲೆಗ್ಸಾಂಡರ್ ರೀಡ್ ಒಂದು ಅಧ್ಯಯನಶೀಲ ವರದಿಯನ್ನು ನೀಡಬೇಕಾಯಿತು. ಆತನ ವರದಿಯಲ್ಲಿ ರೈತರ ಶಿಸ್ತು ನಿರಾಕರಣೆಗೆ ನಾಲ್ಕು ಕಾರಣಗಳನ್ನು ನಮೂದಿಸಲಾಗಿತ್ತು.[೯]

- ❖ ಅಸಮರ್ಪಕ ಭೂಕಂದಾಯ : ದ.ಕ. ಜಿಲ್ಲೆಯಲ್ಲಿ ವಸಾಹತುಶಾಹಿ ಆಡಳಿತ ಆರಂಭವಾದ ಬಳಿಕ ಭೂಕಂದಾಯವನ್ನು ಅವೈಜ್ಞಾನಿಕವಾಗಿ ಹೆಚ್ಚಿಸಲಾಯಿತು. ಟಿಪ್ಪು ಕಾಲದಲ್ಲಿ ಕಂದಾಯದರ ಕಡಿಮೆಯಿತ್ತು ಮತ್ತು ಕಂದಾಯ ವಿನಾಯಿತಿಗೆ ಅವಕಾಶವಿತ್ತು.

ವಸಾಹತುಶಾಹಿ ವ್ಯವಸ್ಥೆಯಲ್ಲಿ ಕಂದಾಯವನ್ನು ಏರಿಸಲಾದದ್ದು ಮಾತ್ರವಲ್ಲದೆ ವಿನಾಯತಿಯ ಪ್ರಸ್ತಾಪವೇ ಇರಲಿಲ್ಲ. ಕಂದಾಯ ಏರಿಕೆಯಿಂದಾಗಿ ತೊಂದರೆಗೊಳಗಾದ ರೈತರು ಕಂದಾಯವನ್ನು ಕಟ್ಟಲಾಗದೆ ಚಳವಳಿ ನಡೆಸಬೇಕಾಯಿತು.

❖ ಉಪ್ಪು ಹೊಗೆಸೊಪ್ಪು, ಏಕಸ್ವಾಮ್ಯ : ಅಂದಿನ ದಿನಗಳಲ್ಲಿ ಕಂಪೆನಿ ಸರಕಾರ ಆರ್ಥಿಕ ಸಂಕಷ್ಟಕ್ಕೆ ಸಿಲುಕಿ ಹೊಸ ಆದಾಯ ಮೂಲಗಳನ್ನು ಶೋಧಿಸಬೇಕಾದ ಅನಿವಾರ್ಯತೆ ಉಂಟಾಯಿತು. ಟಿಪ್ಪುವಿನೊಡನೆ ಅನೇಕ ವರ್ಷಗಳ ಕಾಲ ನಡೆದ ಯುದ್ಧಗಳು ಕಂಪೆನಿ ಸರಕಾರದ ಖಜಾನೆಯನ್ನು ಬರಿದುಮಾಡಿದವು. ಅದಕ್ಕಾಗಿ ಕಂಪೆನಿ ಸರಕಾರ ಉಪ್ಪು ಮತ್ತು ಹೊಗೆಸೊಪ್ಪು ವ್ಯಾಪಾರದ ಏಕಸ್ವಾಮ್ಯವನ್ನು ತನ್ನಲ್ಲಿರಿಸಿಕೊಂಡು ಅವುಗಳ ಮೇಲೆ ತೆರಿಗೆ ಹೇರಿ ಅವುಗಳ ಬೆಲೆ ಹೆಚ್ಚಳಕ್ಕೆ ಕಾರಣವಾಯಿತು. ಈ ವಸ್ತುಗಳು ರೈತರ ಮತ್ತು ಜನಸಾಮಾನ್ಯರ ದೈನಂದಿನ ಬಳಕೆಯ ಅಪರೂಪದ ವಸ್ತುಗಳಾಗಿದ್ದುದರಿಂದ ಜನರು ಇತರ ಅನುಭೋಗಗಳನ್ನು ಕಡಿಮೆ ಮಾಡಿ ಉಪ್ಪು ಮತ್ತು ಹೊಗೆಸೊಪ್ಪಿಗೆ ಹೆಚ್ಚು ಹಣ ಬಳಸಬೇಕಾಗಿ ಬಂತು.[೧೦] ಇದು ಜನರ ಜೀವನ ಮಟ್ಟದ ಕುಸಿತಕ್ಕೆ ಕಾರಣವಾಗಿ ರೈತರು ಬಂಡೇಳುವಂತಾಯಿತು.

❖ ಹೊಸ ನ್ಯಾಯಾಂಗ ವ್ಯವಸ್ಥೆ : ವಸಾಹತು ಪೂರ್ವದಲ್ಲಿ ದ. ಕ. ಜಿಲ್ಲೆಯಲ್ಲಿ ಊರಿನ ಸಣ್ಣಪುಟ್ಟ ವ್ಯಾಜ್ಯಗಳನ್ನು ಪಟೇಲರು ಇತ್ಯರ್ಥ ಮಾಡುತ್ತಿದ್ದರು. ವಸಾಹತುಶಾಹಿ ಆಡಳಿತದೊಂದಿಗೆ ಕಛೇರಿ, ಪೋಲಿಸು ಮತ್ತು ನ್ಯಾಯಾಲಯ ವ್ಯವಸ್ಥೆಗಳು ಅನುಷ್ಠಾನಕ್ಕೆ ಬಂದವು. ಎಲ್ಲಾ ವ್ಯಾಜ್ಯಗಳು ಕೋರ್ಟಿನ ಮೂಲಕ ಇತ್ಯರ್ಥವಾಗಬೇಕಾದ ಪರಿಸ್ಥಿತಿ ನಿರ್ಮಾಣವಾಯಿತು. ಅನ್ಯಾಯಕ್ಕೊಳಗಾದವರು ನ್ಯಾಯ ದಕ್ಕಿಸಿಕೊಳ್ಳಲು ಕೋರ್ಟು ಕಛೇರಿ ಅಲೆಯುವಂತಾಯಿತು. ಇಷ್ಟಾಗಿಯೂ ಅನ್ಯಾಯಕ್ಕೊಳಗಾದವರಿಗೆ ನ್ಯಾಯ ದೊರಕ್ಕುತ್ತದೆಂಬ ಯಾವ ಭರವಸೆಯೂ ಇರಲಿಲ್ಲ. ಇದಲ್ಲದೆ ಸರಕಾರದೊಡನೆ ವ್ಯವಹಾರ ನಡೆಸುವಾಗ ಸ್ಟ್ಯಾಂಪು ಪೇಪರುಗಳನ್ನು ಬಳಸಬೇಕೆಂಬ ಕಾನೂನು ಜಾರಿಗೊಂಡದ್ದು ಖರ್ಚನ್ನು ಅನಾವಶ್ಯಕವಾಗಿ ಹೆಚ್ಚಿಸಿತು. ಇವೆಲ್ಲಾ ಕಾರಣಗಳು ರೈತರನ್ನು ಬ್ರಿಟಿಷ್ ಸರಕಾರದ ವಿರುದ್ಧ ಬಂಡೇಳುವಂತೆ ಪ್ರಚೋದಿಸಿದವು.

❖ ಆರ್ಥಿಕ ಹಿಂಜರಿತ: ಕ್ರಿ. ಶ. ೧೮೨೯ ರಲ್ಲಿ ವೀಳ್ಯದೆಲೆ ಒಂದನ್ನು ಬಿಟ್ಟು ಉಳಿದೆಲ್ಲಾ ಕೃಷಿ ಉತ್ಪನ್ನಗಳ ಬೆಲೆ ಕುಸಿಯಿತು. ಒಂದನೆಯ ದರ್ಜೆ ಅಕ್ಕಿಯ ಬೆಲೆ ಕೋರ್ಜಿಗೆ ೧೧ ೫೦ರೂಪಾಯಿ ಇದ್ದುದು ೪೯ ಕ್ಕೆ ಕುಸಿಯಿತು. ಎರಡನೆಯ ದರ್ಜೆ ಅಕ್ಕಿಯ ಬೆಲೆ ರೂಪಾಯಿ

೫೩ರಿಂದ ೪೬ಕ್ಕೆ ಇಳಿಯಿತು. ಏಲಕ್ಕಿಯ ಬೆಲೆ ಒಂದು ಮಣಕ್ಕೆ[೧೨] ರೂಪಾಯಿ ೨೫ ರಿಂದ ರೂಪಾಯಿ ೨೧ಕ್ಕೆ ಕುಸಿಯಿತು. ಒಂದು ಸಾವಿರ ತೆಂಗಿನ ಕಾಯಿಯ ಬೆಲೆ ರೂಪಾಯಿ ೧೪ರಿಂದ ರೂಪಾಯಿ ೧೧ಕ್ಕೆ ಇಳಿಯಿತು. ರೈತರ ಕೈಯಲ್ಲಿ ಹಣ ಇಲ್ಲದೆ ಆರ್ಥಿಕತೆಯಲ್ಲಿ ಹಣ ಚಲಾವಣೆ ಕಡಿಮೆ ಆಗಿ, ಆರ್ಥಿಕ ವ್ಯವಸ್ಥೆ ತೀವ್ರ ಹಿನ್ನಡೆಯನ್ನು ಅನುಭವಿಸಿತು. ರೈತರಲ್ಲಿ ಕಂದಾಯ ಕಟ್ಟಲು ಹಣ ಇಲ್ಲದಾಗಿ ಅವರು ಕಿಸ್ತು ಪಾವತಿಯನ್ನು ನಿರಾಕರಿಸಬೇಕಾಗಿ ಬಂತು.[೧೩]

❖ ಈ ಹಿಂದೆ ಕ್ರಿ. ಶ. ೧೮೦೫ರಲ್ಲಿ ತೀವ್ರ ಆರ್ಥಿಕ ಸಂಕಷ್ಟದಿಂದಾಗಿ ರೈತರು ಕಂದಾಯ ಕಟ್ಟಲಾಗದೆ ಜಿಲ್ಲಾಧಿಕಾರಿಗಳಲ್ಲಿ ತಮ್ಮ ಸಂಕಷ್ಟ ತೋಡಿಕೊಂಡಿದ್ದರು. ಆಗಿನ ಜಿಲ್ಲಾಧಿಕಾರಿ ಅಲೆಗ್ಸಾಂಡರ್ ರೀಡ್ ರೈತರ ಸಮಸ್ಯೆಗಳ ಬಗ್ಗೆ ಅಧ್ಯಯನ ನಡೆಸಿ ಕಂದಾಯ ಮಂಡಳಿಗೆ ವರದಿ ಸಲ್ಲಿಸಿದ[೧೪]. ಅವನ ವರದಿಯ ಪ್ರಕಾರ ರೈತರು ಕಂದಾಯ ಕಟ್ಟಲು ಸಾಧ್ಯವಾಗದುದಕ್ಕೆ ಮೂರು ಕಾರಣಗಳಿದ್ದವು:

- ❖ ತಹಶೀಲ್ದಾರರುಗಳ ಅಧಿಕಾರ ಮತ್ತು ಪ್ರಭಾವ ಕಡಿಮೆಯಾದದ್ದು.
- ❖ ಕ್ರಿ.ಶ. ೧೮೦೨ ರಲ್ಲಿ ಕಂಪೆನಿ ಸರಕಾರ ಪ್ರಸ್ತಾಪಿಸಿದ ನಿಯಂತ್ರಣಗಳನ್ನು ಅನುಷ್ಠಾನಗೊಳಿಸಲು ಸಾಧ್ಯವಾಗದ್ದು.
- ❖ ರೈತರು ಬೇಕೆಂದೇ ಸುಳ್ಳು ಕಾರಣಗಳನ್ನು ನೀಡಿ ಕಂದಾಯ ತಪ್ಪಿಸಿದ್ದು.

ವಾಸ್ತವವಾಗಿ ಅಲೆಗ್ಸಾಂಡರ್ ರೀಡ್ ಸತ್ಯವನ್ನು ಮರೆಮಾಚಿ, ತನ್ನನ್ನು ರಕ್ಷಿಸಿಕೊಳ್ಳಲು ಸರಕಾರಕ್ಕೆ ಸುಳ್ಳು ವರದಿ ಸಲ್ಲಿಸಿದ್ದ. ಈ ಅವಧಿಯಲ್ಲಿ ರೈತರ ಪರಿಸ್ಥಿತಿ ಎಷ್ಟು ಶೋಚನೀಯವಾಗಿತ್ತೆಂದರೆ ಅವರು ಕಂದಾಯ ಕಟ್ಟುವುದು ಇರಲಿ, ಹೊಟ್ಟೆ ಹೊರೆದುಕೊಳ್ಳುವುದೇ ಕಷ್ಟವಾಗಿತ್ತು. ಇಂತಹ ಪರಿಸ್ಥಿತಿಯಲ್ಲಿ ನಡೆದ ಕರನಿರಾಕರಣೆ ಚಳವಳಿಗೆ ಅಲೆಗ್ಸಾಂಡರ್ ರೀಡ್ ಧನಾತ್ಮಕವಾಗಿ ಸ್ಪಂದಿಸಲೇ ಬೇಕಿತ್ತು. ರೈತರ ಸಮಸ್ಯೆಗಳಿಗೆ ಪರಿಹಾರ ರೂಪದಲ್ಲಿ ಅಲೆಗ್ಸಾಂಡರ್ ರೀಡ್ ಮೂರು ಘೋಷಣೆಗಳನ್ನು ಹೊರಡಿಸಿದ:

- ❖ ವಲಸೆ, ಖಾಯಿಲೆ, ಮರಣ ಅಥವಾ ಇನ್ನಾವುದೇ ಬಲವಾದ ಕಾರಣಗಳಿಂದ ಕೃಷಿ ಮಾಡಲಾಗದ ಭೂಮಿಗೆ ಒಂದು ವರ್ಷದ ಮಟ್ಟಿಗೆ ಕಂದಾಯ ವಿನಾಯಿತಿ.
- ❖ ವಿನಾಯತಿಯ ಮರು ವರ್ಷ ಹಿಂದಿನ ವರ್ಷದ ಕಂದಾಯಕ್ಕೆ ಒಂದೂವರೆ ಪಟ್ಟು ಸೇರಿಸಿ ಹೊಸದಾಗಿ ಕಂದಾಯ ಕಟ್ಟುವುದು.
- ❖ ಭೂ ಕಂದಾಯವು ನೂರು ಬಹದ್ದೂರಿ ಪಗೋಡಗಳಿಗಿಂತ[೧೫] ಕಡಿಮೆ ಎಂದಾದರೆ ಸಾಗುವಳಿ ಮಾಡಿದಷ್ಟು ಭಾಗಕ್ಕೆ ಮಾತ್ರ ಕಂದಾಯ ನೀಡುವುದು. ಕಂದಾಯವು ನೂರು

ಬಹದ್ದೂರಿ ಪಗೋಡಗಳಿಗಿಂತ ಹೆಚ್ಚು ಎಂದಾದರೆ ಸಾಗುವಳಿದಾರ ಹೊಂದಿರುವ ಸಂಪೂರ್ಣ ಭೂಮಿಗೆ ಕಂದಾಯ ನೀಡುವುದು.

ಈ ಘೋಷಣೆಗಳು ರೈತರ ಆಕ್ರೋಶವನ್ನು ತಾತ್ಕಾಲಿಕವಾಗಿ ಕಡಿಮೆ ಮಾಡಿದವು. ಆದರೆ ಈ ಘೋಷಣೆಗಳ ಹಿಂದಿದ್ದ ಗುಪ್ತ ಕಾರ್ಯ ಸೂಚಿಯನ್ನು ಅರಿತುಕೊಳ್ಳುವಲ್ಲಿ ವಿಫಲರಾದ ಅವರು ಕಂದಾಯ ವಿನಾಯಿತಿಯ ಮರುವರ್ಷ ಒಂದೂವರೆ ಪಟ್ಟು ಕಂದಾಯವನ್ನು ಕಟ್ಟಬೇಕಾದ ಪ್ರಮೇಯ ಬಂದಾಗ ಕಂಪೆನಿ ಸರಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸತೊಡಗಿದರು. ಸಣ್ಣ ರೈತರು ಕಂದಾಯ ಕಟ್ಟಲು ಭೂಮಿಯನ್ನು ಮಾರಾಟ ಮಾಡಬೇಕಾದ ದುರ್ಬರ ಪರಿಸ್ಥಿತಿ ನಿರ್ಮಾಣವಾಯಿತು. ಮೇಲ್ವರ್ಗದ ಜಮೀನುದಾರರು ಮತ್ತು ವ್ಯಾಪಾರಿಗಳು ಈ ಪರಿಸ್ಥಿತಿಯ ಲಾಭ ಪಡೆದುಕೊಂಡು ವಸಾಹತುಶಾಹಿ ಆಡಳಿತದ ಪರನಿಂತರು. ಜಿಲ್ಲಾಧಿಕಾರಿ ಅಲೆಗ್ಸಾಂಡರ್ ರೀಡ್‌ನ ಮೋಸದ ಅರಿವಾಗಿ ಮತ್ತೆ ರೈತರು ಒಗ್ಗೂಡತೊಡಗಿದರು. ಇದು ಕೂಟು ದಂಗೆಗೆ ಕಾರಣವಾಯಿತು.

೬.೧.೨. ಕೂಟು ದಂಗೆ ೧೮೩೧

ವಸಾಹತುಶಾಹಿ ದಕ್ಷಿಣ ಕನ್ನಡದ ಎರಡನೆಯ ರೈತ ದಂಗೆ ೧೮೩೧ ರಲ್ಲಿ ಸಂಭವಿಸಿತು. ಆ ವರ್ಷ ಬಹುತೇಕವಾಗಿ ಪಟೇಲರುಗಳು ಮತ್ತು ಗ್ರಾಮೀಣ ರೈತ ಮುಖಂಡರುಗಳು ಮುಂದಾಳತ್ವ ವಹಿಸಿ ಕೂಟ ರಚಿಸಿಕೊಂಡು ಬ್ರಿಟಿಷರ ವಿರುದ್ಧ ದಂಗೆ ಎದ್ದುದರಿಂದ ಇದನ್ನು ಕೂಟು ದಂಗೆ ಎಂದು ಕರೆಯಲಾಗುತ್ತದೆ. ಇದು ಸಶಸ್ತ್ರ ದಂಗೆಯಲ್ಲ. ವ್ಯವಸ್ಥೆಯ ಸುಧಾರಣೆಯಷ್ಟೇ ಇದರ ಉದ್ದೇಶವಾಗಿತ್ತು. ಇದರ ಮುಂದಾಳತ್ವ ವಹಿಸಿದವರಲ್ಲಿ ಕಂಪೆನಿ ಸರಕಾರದಲ್ಲಿ ನೌಕರಿ ಮಾಡಿಕೊಂಡಿದ್ದವರೂ ಇದ್ದರು. ಈ ತೆರನಾದ ರೈತ ದಂಗೆಯನ್ನು ಸಮೂಹ ದಂಗೆಯೆಂದು ಡಾ. ಧನಾಗರೆ ಕರೆದಿದ್ದಾರೆ.[೧೬]

ಇಂತಹ ಚಳುವಳಿಗೆ ಏಕ ನಾಯಕನಿರುವುದಿಲ್ಲ. ಇದು ಜಾತ್ಯತೀತವಾಗಿದ್ದು ನಿರ್ದಿಷ್ಟ ಕುಂದು ಕೊರತೆಗಳ ನಿವಾರಣೆ ಇದರ ಉದ್ದೇಶ. ಶಾಂತಿಯುತ ಬಹಿಷ್ಕಾರ ಪ್ರದರ್ಶನ ಇತ್ಯಾದಿಗಳು ಇದರ ಮುಖ್ಯ ಲಕ್ಷಣಗಳು. ಇಂತಹ ಸಮೂಹ ದಂಗೆಯನ್ನು ಉದಾರವಾದಿ, ಸುಧಾರಣಾವಾದಿ ರೈತ ಬಂಡಾಯ ಎಂದೂ ಕರೆಯಬಹುದು.

ಕೂಟು ದಂಗೆಯ ಪ್ರಮುಖ ಕಾರಣಗಳು ಎರಡು:

❖ ಆರ್ಥಿಕ ಹಿಂಜರಿತ [Economic Recession:] ೧೮೨೬ ಲಿಂದ ೩೧ರವರೆಗಿನ ಅವಧಿಯ ೫ ವರ್ಷಗಳಲ್ಲಿ ದ.ಕ ಜಿಲ್ಲೆಯಲ್ಲಿ ಭೀಕರ ಆರ್ಥಿಕ ಹಿಂಜರಿತ ಕಾಣಿಸಿಕೊಂಡಿತು. ಇದಕ್ಕೆ ಅಕ್ಕಿಯ ಬೆಲೆ ಇಳಿಕೆ ಮತ್ತು ನಿರ್ಯಾತಗಳ ಇಳಿಕೆ ಬಹುಮುಖ್ಯ ಕಾರಣಗಳಾಗಿದ್ದವು. ಸಂಕಟ ಸಮಯದಲ್ಲಿ ಅಧಿಕ ಮಾಸ ಎಂಬಂತೆ ಈ ವರ್ಷಗಳಲ್ಲಿ ಹಣದ ಬೇಡಿಕೆ ಹೆಚ್ಚಾಗಲು ಸಾಟಿ ವಿನಿಮಯ ಪದ್ಧತಿಯ ಬದಲಾಗಿ ಹಣದ ವಿನಿಮಯ ವ್ಯವಸ್ಥೆ ಅನುಷ್ಠಾನಗೊಂಡದ್ದು ಮತ್ತು ಎಲ್ಲಾ ವ್ಯವಹಾರಗಳು ನಗದು ರೂಪದಲ್ಲಿ ನಡೆಯಬೇಕೆಂದು ಸರಕಾರ ಆದೇಶ ಹೊರಡಿಸಿದ್ದು ಬಹುಮುಖ್ಯ ಕಾರಣವಾಗಿತ್ತು.[೧೭] ಹಣದ ಪೂರೈಕೆ ಕಡಿಮೆಯಾಗಲು ಚಿನ್ನದ ನಾಣ್ಯಗಳ ಹೊರ ಹರಿವು, ಚಿನ್ನದ ಹಣದ ಅನಾಣ್ಯೀಕರಣ, ಬೆಳ್ಳಿಯ ಹಣದ ನಿರಾಕರಣೆ ಮತ್ತು ಹುಂಡಿ ವ್ಯವಹಾರಗಳ ಹೆಚ್ಚಳ ಕಾರಣವಾಗಿತ್ತು.

ದಕ್ಷಿಣ ಕನ್ನಡದ ಪ್ರಧಾನ ಆಹಾರ ಬೆಳೆಯಾದ ಅಕ್ಕಿಯ ಬೆಲೆ ೧೮೨೭ – ೩೦ ರ ಅವಧಿಯಲ್ಲಿ ಕಡಿಮೆಯಾಗುತ್ತಾ ಹೋದುದನ್ನು ಕೂಟು ದಂಗೆಯ ಬಗ್ಗೆ ವಿಚಾರಣೆ ನಡೆಸಿದ ವಿಶೇಷ ಆಯುಕ್ತ ಜಾನ್ ಸ್ಟಾಕ್ಸ್ ವರದಿ ಮಾಡಿದ್ದಾನೆ.[೧೮] ಇದಕ್ಕೆ ದೇಶಿಯ ಮತ್ತು ವಿದೇಶಿಯ ಬೇಡಿಕೆಯ ಕುಸಿತ ಕಾರಣವೆಂದು ಅವನು ಅಭಿಪ್ರಾಯ ಪಟ್ಟಿದ್ದಾನೆ.೧೮೩೦ರಲ್ಲಿ ದ. ಕ ಉಪ ಜಿಲ್ಲಾಧಿಕಾರಿ ಎ.ಜೆ.ಹಡ್ಲ್‌ಸನ್ ತನ್ನ ವರದಿಯಲ್ಲಿ ಅಕ್ಕಿಯ ಬೆಲೆ ಇಳಿದುದನ್ನು ದಾಖಲಿಸಿದ್ದಾನೆ. ೧೮೨೮ – ೨೯ ರ ಅವಧಿಯಲ್ಲಿ ಅಕ್ಕಿ ಸಾಕಷ್ಟು ಉತ್ಪಾದನೆಯಾದರೂ ಅದರ ಬೇಡಿಕೆ ಕಡಿಮೆಯಾದ ಕಾರಣ ಕಂದಾಯ ವಸೂಲಾತಿ ದೊಡ್ಡ ಸಮಸ್ಯೆಯಾಗಿದೆ. ಮರುವರ್ಷ ಬೆಳೆ ಕಡಿಮೆಯಾದರೂ ಬೆಲೆ ಇನ್ನಷ್ಟು ಕುಸಿದುಬಿಟ್ಟಿತು. ಬಾರ್ಕೂರು ಮತ್ತು ಕುಂದಾಪುರಗಳಲ್ಲಿ ಕೋರ್ಜೆಗೆ ಸರಕಾರಿ ದರ ೧೫ ಬಹುದ್ದೂರಿ ಪಗೋಡಗಳಾಗಿದ್ದವು (೬೦ರೂ). ೧೮೨೮ –೨೯ರಲ್ಲಿ ಅಕ್ಕಿಯ ಮಾರಾಟ ಬೆಲೆ ೧೨ ಬಹುದ್ದೂರಿ ಪಗೋಡ (೪೮ರೂ) ಮತ್ತು ಮರು ವರ್ಷ ೯ ಬಹದ್ದೂರಿ ಪಗೋಡಗಳಾದವು. ಈ ಕನಿಷ್ಠ ಬೆಲೆಯನ್ನು ಪಡೆಯಲು ರೈತರು ಅಕ್ಕಿಯನ್ನು ಉಗ್ರಾಣಕ್ಕೆ ಸಾಗಿಸಬೇಕಾದ ವೆಚ್ಚವನ್ನು ತಾವೇ ಭರಿಸಬೇಕಾಗಿ ಬಂದುದನ್ನು ನಾನು ಗಮನಿಸಿದ್ದೇನೆ.[೧೯] ಭತ್ತದ ಬೆಲೆಯ ಇಳಿಕೆಯೊಂದಿಗೆ ನಿರ್ಯಾತಗಳೂ ಕುಸಿದು ಸರಕುಗಳ ಸಂಗ್ರಹ ಹೆಚ್ಚಿ ಎಲ್ಲಾ ಬಗೆಯ ಕೃಷಿ ಉತ್ಪನ್ನಗಳ ಬೆಲೆಗಳು ಇಳಿದವು. ರೈತರು ಕಂದಾಯ ಕಟ್ಟಲಾಗದ ಪರಿಸ್ಥಿತಿ ನಿರ್ಮಾಣವಾಯಿತು.


❖ ಅಸಮರ್ಪಕ ಭೂ ಕಂದಾಯ ವ್ಯವಸ್ಥೆ: ೧೭೯೯ ರಲ್ಲಿ ದ.ಕ ಜಿಲ್ಲೆ ಬ್ರಿಟಿಷ್ ಆಡಳಿತಕ್ಕೆ ಒಳಪಟ್ಟ ಮೇಲೆ ಶಾಶ್ವತ ಕಂದಾಯ ಪದ್ಧತಿ ತೆರಾವೊ ಅಸ್ತಿತ್ವಕ್ಕೆ ಬಂತು. ಅದರ

ಅನುಕೂಲತೆಗಳಿಂದಾಗಿ ೧೮೧೧ ರಲ್ಲಿ ಮೊದಲ ಬಾರಿಗೆ ಜಿಲ್ಲೆಯ ರೈತರು ಕರ ನಿರಾಕರಣೆ ಚಳುವಳಿ ನಡೆಸಿದರು. ಅದೊಂದು ಶಾಂತಿಯುತ ಪ್ರತಿಭಟನೆಯಾದುದರಿಂದ ಸರಕಾರ ಅದನ್ನು ಗಣನೆಗೆ ತೆಗೆದುಕೊಳ್ಳಲೇ ಇಲ್ಲ. ಮನ್ರೋನಿಂದ ಹಿಡಿದು ಅನೇಕ ಜಿಲ್ಲಾಧಿಕಾರಿಗಳು ಕಂದಾಯ ದರ ಅತ್ಯಧಿಕವಾಗಿದೆಯೆಂದು ಮದರಾಸಿಗೆ ದೂರು ಸಲ್ಲಿಸಿದರೂ ಸರಕಾರ ಯಾವುದೇ ಸುಧಾರಣಾ ಕ್ರಮ ಕೈಗೊಳ್ಳಲಿಲ್ಲ. ವಾಸ್ತವವಾಗಿ ಜಿಲ್ಲೆಯಲ್ಲಿ ಜಮೀನಿನ ಸಮರ್ಪಕ ಸರ್ವೆ ಒಮ್ಮೆಯೂ ನಡೆದಿರಲಿಲ್ಲ. ಅಂದಾಜಿಗೆ ನಿಗದಿಗೊಳ್ಳುತ್ತಿದ್ದ ಕಂದಾಯ ದರಗಳು ಅತ್ಯಧಿಕವಾಗಿ ಕಂದಾಯ ಪಾವತಿಗಾಗಿ ರೈತರು ಭೂಮಿಯನ್ನು ಅಡವು ಇಡುವ ಮತ್ತು ಅನೇಕ ಸಂದರ್ಭಗಳಲ್ಲಿ ಮಾರಾಟ ಮಾಡುವ ಅನಿವಾರ್ಯತೆ ಉಂಟಾಯಿತು. ಜಿಲ್ಲೆಯಲ್ಲಿ ಹಣ ಸಾಲ ನೀಡುವ ವರ್ಗಗಳು ಹುಟ್ಟಿಕೊಂಡವು ಮತ್ತು ಬಡವರಿಗೆ ವಂಶಪಾರಂಪರ್ಯವಾಗಿ ದಕ್ಕಿದ್ದ ಭೂಮಿಗಳ ಕಂದಾಯ ಕಟ್ಟಲಾಗದೆ ಅವರು ಶ್ರೀಮಂತರಿಗೆ ತಮ್ಮ ಜಮೀನುಗಳನ್ನು ವರ್ಗಾವಣೆ ಮಾಡಬೇಕಾಗಿ ಬಂತು.

೧೮೩೦ರಲ್ಲಿ ಜಿಲ್ಲಾ ಕಲೆಕ್ಟರನಾಗಿದ್ದ ಡಿಕಿನ್‌ಸನ್ ಅವಸರದಲ್ಲಿ ತನಗೆ ಇಷ್ಟ ಬಂದಂತೆ ಕಂದಾಯ ನಿಗದಿ ಮಾಡಿದ. ಹೂಜೂರ್ ಜಮಾಬಂಧಿಗೆ ರೈತರ ಸ್ಥಿತಿಗತಿಗಳನ್ನು ಅವನು ಪರಿಗಣಿಸಲೇ ಇಲ್ಲ. ಪರಿಣಾಮವಾಗಿ ಮರು ವರ್ಷ ಜಿಲ್ಲಾಧಿಕಾರಿ ಕ್ಯಾಮರೋನ್ ಕಂದಾಯ ಇತ್ಯರ್ಥ ಮಾಡುವಾಗ ಅರ್ಧಾಂಶ ರೈತರೂ ಹಾಜರಿರಲಿಲ್ಲ. ಅವರ ಪ್ರಾತಿನಿಧ್ಯಕ್ಕೆ ಸರಕಾರದಿಂದ ಕಿಲುಬುಗಾಸಿನ ಬೆಲೆ ಬಾರದಿರುವಾಗ ಬೇಕಲದಲ್ಲಿ ಮೊದಲ ಬಾರಿಗೆ ರೈತರು ಸರಕಾರದ ವಿರುದ್ಧ ಒಂದುಗೂಡಿ ಕಂದಾಯ ಪಾವತಿಸದಿರಲು ನಿರ್ಧರಿಸಿದರು.[೨೦] ತಂಬಾಕು ಬೆಳೆಯುವ ರೈತರು ಅಥವಾ ಉಪ್ಪು ಉತ್ಪಾದಿಸುವ ಜನರು, ಸ್ಟ್ಯಾಂಪು ವೆಚ್ಚ, ಸಾಗಾಟ ವೆಚ್ಚ ಮತ್ತು ಅಬಕಾರಿ ತೆರಿಗೆಯಿಂದಾಗಿ ತಂಬಾಕು ಮತ್ತು ಉಪ್ಪು ಉತ್ಪಾದನೆಯಿಂದ ಲಾಭವನ್ನು ಪಡೆಯದೇ ಹೋದರು. ಕಂದಾಯ ಕಟ್ಟಲಾಗದ ರೈತರು ಭೂಮಿಯನ್ನು ಮಾತ್ರವಲ್ಲದೆ ಚಿನ್ನಾಭರಣಗಳನ್ನು ಕೂಡ ಮಾರಾಟ ಮಾಡಬೇಕಾಗಿ ಬಂತು ಇದರಿಂದಾಗಿ ಅವರು ಗುಂಪುಗೂಡಿ ಸರಕಾರದ ವಿರುದ್ಧ ಪ್ರತಿಭಟಿಸುವುದು ಅನಿವಾರ್ಯವಾಯಿತು.

೧೮೩೧ರ ಜನವರಿ ತಿಂಗಳ ಮೊದಲ ವಾರದಲ್ಲಿ ಬೇಕಲದಲ್ಲಿ ಆರಂಬವಾದ ಕೂಟು ದಂಗೆ ಶೀಘ್ರದಲ್ಲಿ ಕುಂದಾಪುರದವರೆಗೆ ವಿಸ್ತರಿಸಿತು. ಬಾರ್ಕೂರು, ಬಂಟವಾಳ, ಬ್ರಹ್ಮಾವರ, ಮಧೂರು, ಮಂಜೇಶ್ವರ, ಮೂಲ್ಕಿ, ಕದ್ರಿ, ಕುಂಬಳೆ, ವಾಮಂಜೂರು, ಮೊಗ್ರಾಲು, ಉದ್ಯಾವರ, ಉಪ್ಪಿನಂಗಡಿ, ಮತ್ತು ವಿಟ್ಲ ರೈತರ ಕೂಟಗಳು ಸೇರುತ್ತಿದ್ದ ಪ್ರಮುಖ ಸ್ಥಳಗಳಾಗಿದ್ದವು.[೨೧]

(ಭೂಪಟ.೬.೧)


೬.೧. ಕೋಮು ದಂಗೆ ನಡೆದ ಸ್ಥಳಗಳು.
ಉತ್ತರ ಕನ್ನಡ
ಸ್ಕೇಲ್: 1 ಇಂಚು - 16 ಮೈಲ್
(1 cm. - 10.24 ಕಿ.ಮೀ)
ಬಂಟ್ವಾಳ
ಉಡುಪಿ
ತಾಲೂಕು
3. ಬಂಟ್ವಾಳ
4. ಮಂಗಳೂರು
5. ಪುತ್ತೂರು
6. ಉಡುಪಿ.
• - ಕೋಮು ದಂಗೆ ನಡೆದ ಸ್ಥಳಗಳು

ಬಹುತೇಕವಾಗಿ ದೇವಾಲಯಗಳಲ್ಲಿ ಒಟ್ಟುಗೂಡುತ್ತಿದ್ದ ರೈತರು ಮುಂದೇನು ಮಾಡಬೇಕೆಂಬುದರ ನಿಷ್ಕರ್ಷ ಮಾಡುತ್ತಿದ್ದರು. ಕೃಷ್ಣ ರಾವ್ ಎಂಬ ಮುಖ್ಯ ಶಿರಸ್ತೆದಾರ ಕೂಟು ದಂಗೆಯ ಮುಂಚೂಣಿ ನಾಯಕರಲ್ಲಿ ಒಬ್ಬನಾಗಿದ್ದ. ಗ್ರಾಮ ಮಟ್ಟದಲ್ಲಿ ಪಟೇಲ ಮತ್ತು ಇಬ್ಬರು ರೈತ ಮುಖಂಡರುಗಳು ದಂಗೆಯ ನಾಯಕರುಗಳಾಗಿದ್ದರು.[೨೨] ಪ್ರತಿ ಕೂಟಗಳಿಗೆ ಅವುಗಳದ್ದೇ ಆದ ನಾಯಕರುಗಳಿದ್ದು ಅವರು ಅಂತಿಮವಾಗಿ ಕದ್ರಿಯ ಮಹಾಕೂಟದಲ್ಲಿ ಸಭೆ ಸೇರುತ್ತಿದ್ದರು. ಅಲ್ಲದೇ ಅವರು ಒಂದು ಗುಪ್ತ ಸಮಿತಿಯನ್ನು ರಚಿಸಿ ಪರಸ್ಪರ ಸಂಪರ್ಕ ಇರಿಸಿಕೊಂಡಿದ್ದರು. ಈ ಗುಪ್ತ ಸಮಿತಿಯು ವಸ್ತುಶಃ ಚಿಂತನ ಚಾವಡಿಯಂತೆ ಕೆಲಸ ಮಾಡುತ್ತಿತ್ತು. ರೈತರು ಸರಕಾರಿ ಅಧಿಕಾರಿಗಳನ್ನು ಆಕ್ರಮಿಸುವ ಧೈರ್ಯ ತೋರಿದರು. ಅಲ್ಲದೆ ಹೊಸ ಇತ್ಯರ್ಥ ಆಗುವವರೆಗೆ ಕಿಸ್ತು ಕಟ್ಟಲು ನಿರಾಕರಿಸಿದರು. ಈಲ್ಲಾಧಿಕಾರಿ ಕ್ಯಾಮಾರೂನ್ ರೈತರ ನಷ್ಟಗಳನ್ನು ತಾನು ಅಂದಾಜು ಮಾಡಿ ಅವರಿಗೆ ಪರಿಹಾರವನ್ನು ಒದಗಿಸುತ್ತೇನೆಂದು ೧೮೩೧ ರ ಮಾರ್ಚ್ ತಿಂಗಳಲ್ಲಿ ಆಶ್ವಾಸನೆ ನೀಡಿದ. ಪರಿಣಾಮವಾಗಿ ೧೮೩೧ ರ ಏಪ್ರಿಲ್ ತಿಂಗಳಲ್ಲಿ ಕೂಟು ದಂಗೆ ಅವಸಾನವಾಯಿತು.

ಕೂಟು ದಂಗೆಯು ಜಿಲ್ಲೆಯಲ್ಲಿ ಮೇಲ್ವರ್ಗದ ರೈತರು ಮತ್ತು ಕೆಳವರ್ಗದ ರೈತರು ಎಂಬ ಎರಡು ಸ್ಪಷ್ಟ ವಿಭಾಗಗಳನ್ನು ಸೃಷ್ಟಿಸಿ ಬಿಟ್ಟಿತು. ಮೇಲ್ವರ್ಗದ ರೈತರು ಕೂಟು ದಂಗೆಯ ವಿರುದ್ಧವಾಗಿ ಸರಕಾರದ ಪರ ನಿಂತರು. ಸಣ್ಣ ಹಿಡುವಳಿಗಳನ್ನು ಹೊಂದಿದ ಸರಕಾರಿ ನೌಕರರು ಸರಕಾರದ ವಿರುದ್ಧ ಕೂಟು ದಂಗೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡರು. ದಂಗೆಯ ಕಾಲದಲ್ಲಿ ಕೆಲವು ಅಧಿಕಾರಿಗಳನ್ನು ರೈತರು ದೈಹಿಕವಾಗಿ ಆಕ್ರಮಿಸಿದರು. ಆಕ್ರಮಣಕ್ಕೆ ಒಳಗಾದ ಸರ್ಕಾರಿ ಅಧಿಕಾರಿಗಳು ಬಹುತೇಕರು ಕ್ರಿಶ್ಚಿಯನ್ನರಾಗಿದ್ದರು. ಆಕ್ರಮಿಸಿದ ರೈತರಲ್ಲಿ ಕೆಲವರು ಬ್ರಾಹ್ಮಣರಿದ್ದರು. ಆದುದರಿಂದ ಇದನ್ನು ಕ್ರಿಶ್ಚಿಯನ್ ಬ್ರಾಹ್ಮಣ ಸಂಘರ್ಷವಾಗಿ ಪರಿವರ್ತಿಸಲು ವಸಾಹತುಶಾಹಿ ಸರ್ಕಾರ ಇನ್ನಿಲ್ಲದ ಯತ್ನವನ್ನು ಮಾಡಿತು. ಆದರೆ ರೈತರಿಗೆ ದಂಗೆಯ ಸ್ವರೂಪದ ಸ್ಪಷ್ಟ ಪರಿಚಯ ಇದ್ದುದರಿಂದ ಸರಕಾರದ ಯತ್ನ ಫಲ ಕಾಣಲಿಲ್ಲ. ದಂಗೆಯಲ್ಲಿ ಪಾಲ್ಗೊಂಡ ಸರಕಾರಿ ನೌಕರರನ್ನು ಸರಕಾರ ವಜಾಗೊಳಿಸಿತು. ಕಣ್ಣೊರೆಸುವ ಕೆಲವು ತಾತ್ಕಾಲಿಕ ಪರಿಹಾರಗಳನ್ನು ನೀಡಿ ರೈತರನ್ನು ಸಮಾಧಾನ ಪಡಿಸಿತು. ಆದರೆ ಯಾವುದೇ ಶಾಶ್ವತ ಪರಿಹಾರ ಕ್ರಮಗಳನ್ನು ಸರಕಾರ ಕೈಗೊಳ್ಳಲಿಲ್ಲ. ಆದುದರಿಂದ ದಕ್ಷಿಣ ಕನ್ನಡ ಜಿಲ್ಲೆಯ ರೈತರ ಆಕ್ರೋಶ ಬೂದಿ ಮುಚ್ಚಿದ ಕೆಂಡದಂತಿದ್ದು ಅದು ಆಸ್ಫೋಟಗೊಳ್ಳುವ ಒಂದು ಅವಕಾಶಕ್ಕಾಗಿ ಕಾಯುತ್ತಿತ್ತು.

೬.೨. ಕೊಡಗಿನಲ್ಲಿ ವಸಾಹತುಶಾಹಿಗೆ ಪ್ರತಿರೋಧ

ಕ್ರಿ. ಶ ೧೮೩೪ರಲ್ಲಿ ಕೊಡಗು ವಸಾಹತುಶಾಹಿ ಆಡಳಿತಕ್ಕೆ ಒಳಪಟ್ಟ ಬಳಿಕ ಅಲ್ಲಿನ ಕಂದಾಯ ವ್ಯವಸ್ಥೆ ಬದಲಾಗಲಿಲ್ಲ. ನಗದು ರೂಪದಲ್ಲಿ ಕಂದಾಯವನ್ನು ಪಾವತಿಸಬೇಕೆಂಬ ದ.ಕ ದಲ್ಲಿದ್ದ ನಿಯಮ ಕೊಡಗಿನಲ್ಲಿ ಅನ್ವಯಗೊಳ್ಳಲಿಲ್ಲ. ಲಿಂಗರಾಜನ ಕಾಲದಲ್ಲಿದ್ದ ಕಂದಾಯ ವ್ಯವಸ್ಥೆ ೧೮೩೪ ರ ಬಳಿಕವೂ ಮುಂದುವರಿಯಿತು. ಸುಳ್ಯ ಮತ್ತು ಪುತ್ತೂರುಗಳ ೧೧೦ ಗ್ರಾಮಗಳನ್ನು ಕೊಡಗಿನಿಂದ ಬೇರ್ಪಡಿಸಿದ್ದನ್ನು ಬಿಟ್ಟರೆ ಹೇಳಿಕೊಳ್ಳುವಂತಹ ಯಾವ ಬದಲಾವಣೆಗಳೂ ಕೊಡಗಿನಲ್ಲಿ ಸಂಭವಿಸಲಿಲ್ಲ. ಇವೆರಡೂ ತಾಲೂಕುಗಳು ಹವಾಮಾನದಲ್ಲಾಗಲಿ, ಸಂಸ್ಕೃತಿಯಲ್ಲಾಗಲಿ ಕೊಡಗಿನೊಡನೆ ಸಾದೃಶ್ಯವನ್ನು ಹೊಂದಿರಲಿಲ್ಲ. ಆದುದರಿಂದ ಸುಳ್ಯ ಪುತ್ತೂರುಗಳು ಕೊಡಗಿನಿಂದ ಬೇರ್ಪಟ್ಟಾಗ ಕೊಡಗಿನವರು ಅದನ್ನು ಒಂದು ಭಾವನಾತ್ಮಕ ವಿಷಯವನ್ನಾಗಿ ಮಾಡಲಿಲ್ಲ. ಅಲ್ಲದೇ ಅಪ್ಪಾರಂಡ ಬೋಪು ದಿವಾನ ಮತ್ತು ಚೆಪ್ಪುಡೀರ ಪೊನ್ನಪ್ಪ ದಿವಾನರ ಬ್ರಿಟಿಷ್ ಪರ ನೀತಿಯಿಂದಾಗಿ ಕೊಡವರು ರಾಜನ ಪದಚ್ಯುತಿಗೆ ಬಾಯಿಮಾತಿನ ಸಹಾನುಭೂತಿಯನ್ನು ಬಿಟ್ಟರೆ ಬೇರೆ ಯಾವ ಪ್ರತಿಕ್ರಿಯೆಯನ್ನೂ ತೋರಲಿಲ್ಲ. ಆದರೂ ಕೊಡಗಿನಲ್ಲಿ ಅನೂಹ್ಯ ರೀತಿಯಲ್ಲಿ ಎರಡು ರೀತಿಯ ಪ್ರತಿರೋಧಗಳು ಕಾಣಿಸಿಕೊಂಡವು. ಮೊದಲನೆಯದು ಅಪರಂಪರನ ಬಂಡಾಯ ಮತ್ತು ಎರಡನೆಯದು ಕಲ್ಯಾಣಪ್ಪನ ದಂಗೆ.

೬.೨.೧ ಅಪರಂಪಾರನ ಬಂಡಾಯ

ಚಿಕ್ಕವೀರನ ಪದಚ್ಯುತಿಗೆ ಮುಂಚಿತವಾಗಿ ೧೮೩೩ರಲ್ಲಿ ಮಂಜರಾಬಾದ್ ತಾಲೂಕಿನಲ್ಲಿ ಜಂಗಮ ವೇಷಧಾರಿ ಒಬ್ಬ ಕಾಣಿಸಿಕೊಂಡು ತಾನು ಸ್ವಾಮಿ ಅಪರಂಪಾರನೆಂದೂ, ಚಿಕ್ಕವೀರ ರಾಜನ ದೊಡ್ಡಪ್ಪ ಅಪ್ಪಾಜಿ ರಾಜನ ಹಿರಿಯ ಮಗ ವೀರಪ್ಪನೆಂದೂ ಹೇಳಿಕೊಂಡು ಜನರನ್ನು ಸಂಘಟಿಸತೊಡಗಿದ. ಅಪ್ಪಾಜಿರಾಜನನ್ನು ಅವನ ಅಣ್ಣ ದೊಡ್ಡ ವೀರೇಂದ್ರ ದೊರೆ ತನ್ನ ಮಗಳು ದೇವಮ್ಮಾಜಿಗೆ ಕಂಟಕನಾದಾನೆಂದು ಕೊಲ್ಲಿಸಿ ಹಾಕಿದ್ದ. ಅಪ್ಪಾಜಿಯ ಇಬ್ಬರು ಮಕ್ಕಳನ್ನು ದಿವಾನ ಕುಂಟ ಬಸವ ದೊರೆ ಚಿಕ್ಕ ವೀರನ ಅನುಗ್ರಹಗಳಿಸಲೆಂದು ಮಡಿಕೇರಿಯಲ್ಲಿ ಸೆರೆಮನೆಗೆ ಹಾಕಿಸಿ ಆಹಾರ ನೀಡದೆ ಸತ್ತವರನ್ನು ದಟ್ಟ ಅರಣ್ಯದಲ್ಲಿ ಗುಂಡಿ ತೋಡಿ ಹೂಳಿಸಿದ್ದ. ತಾನು ಅಪ್ಪಾಜಿರಾಜನ ಮಗನೆಂದು ಹೇಳಿಕೊಂಡು ತಿರುಗುವ ಒಬ್ಬ ಜಂಗಮನ ಬಗ್ಗೆ ಚಿಕ್ಕವೀರನಿಗೆ ಕುತೂಹಲ ಕೆರಳಿತಲ್ಲದೆ ಈತ

ತನ್ನ ಪಟ್ಟಕ್ಕೆ ಸಂಚಕಾರ ತಂದಾನು ಎಂಬ ಭೀತಿಯೂ ಮೂಡಿತು. ಅಪರಂಪಾರನನ್ನು ತನ್ನ ಆಸ್ಥಾನಕ್ಕೆ ಕರೆಸಿ ಚಿಕ್ಕವೀರರಾಜ ವಿಚಾರಣೆ ನಡೆಸಿದಾಗ ಅಪರಂಪಾರ ನೀಡಿದ ಆಧ್ಯಾತ್ಮಿಕ ಉತ್ತರಗಳು ಅರ್ಥವಾಗದಿದ್ದರೂ ಅವನು ಜನರನ್ನು ಸಂಘಟಿಸುತ್ತಿರುವುದು ಬ್ರಿಟಿಷರ ವಿರುದ್ಧ ಎಂಬ ಅರಿವಾದ ಮೇಲೆ ಅವನನ್ನು ಶಿಕ್ಷಿಸಬೇಕಾದ ಯಾವುದೇ ಕಾರಣ ಗೋಚರಿಸದೆ ಚಿಕ್ಕ ವೀರರಾಜ ಆತನನ್ನು ಬಿಟ್ಟು ಬಿಟ್ಟ.

ಅಪರಂಪಾರ ಮೂಲತಃ ಮೈಸೂರು ಸೀಮೆಯ ತುಮಕೂರು ಜಿಲ್ಲೆಯ ಹನುಮಂತರಾಯ ಗೋಪಮ್ಮ ದಂಪತಿಯರ ಮಗನಾಗಿದ್ದು ಈತನಿಗೆ ಹೆಂಡತಿ ಮತ್ತು ಒಬ್ಬಾಕೆ ಮಗಳಿದ್ದಳೆಂದು ಡಿ.ಎನ್ ಕೃಷ್ಣಯ್ಯ ದಾಖಲಿಸಿದ್ದಾರೆ. ಅವನು ಎಳವೆಯಲ್ಲಿಯೇ ಸಂಸಾರ ತ್ಯಜಿಸಿ ಸನ್ಯಾಸಿಯಾಗಿ ಕೊಡಗಿನ ಉತ್ತರ ಭಾಗದಲ್ಲಿ ಕಾಣಿಸಿಕೊಂಡ. ಬ್ರಿಟಿಷರನ್ನು ಕೊಡಗಿನಿಂದ ಓಡಿಸಿ ರಾಜರ ಆಡಳಿತವನ್ನು ಮರಳಿ ಸ್ಥಾಪಿಸುವುದು ತನ್ನ ಗುರಿಯೆಂದು ಹೇಳುತ್ತಾ ಕೆಲವು ಪವಾಡಗಳನ್ನು ಪ್ರದರ್ಶಿಸುತ್ತಾ ಜನರನ್ನು ತನ್ನ ಹಿಂಬಾಲಕರನ್ನಾಗಿ ಮಾಡಿಕೊಳ್ಳುವುದರಲ್ಲಿ ಆತ ಯಶಸ್ವಿಯಾದ. ಕೊಡಗಿನ ಕೆಲವು ಜಮ್ಮದ ರೈತರು ಆತ ಅಪ್ಪಾಜಿ ರಾಜನ ಮಗನೆಂದೇ ನಂಬಿ ಅವನ ಹಿಂಬಾಲಕರಾದದ್ದು ವಸಾಹತುಶಾಹೀ ಆಡಳಿತಕ್ಕೆ ನುಂಗಲಾರದ ತುತ್ತಾಗಿತ್ತು. ಹಾಲೇರಿಯ ರಾಜಮ್ಮಾಜಿಯು ಆತನನ್ನು ತನ್ನ ಪತಿ ವೀರಪ್ಪರಾಜನೆಂದೇ ಭಾವಿಸಿ ತನ್ನದೊಂದು ಚಿನ್ನದ ಸರವನ್ನು ಅವನಿಗೆ ಕಳುಹಿಸಿಕೊಟ್ಟು ಅದು ಕೊಡಗಿನ ಆಡಳಿತಾಧಿಕಾರಿ ಲೀಹಾರ್ಡಿಯ ಕಿವಿಗೆ ಬಿದ್ದು ಆತ ಅವಳನ್ನು ವಿಚಾರಣೆಗೆ ಒಳಪಡಿಸಿದ.[೨೩] ಅವನ ಹಿಂಬಾಲಕರು ಆತನನ್ನು ಅಪ್ಪಾಜಿ ಅರಸರ ಮಗ ವೀರಪ್ಪ ಒಡೆಯನೆಂದು ಘೋಷಿಸಿ ಆತ ಸಿಂಹಾಸನವೇರಲು ಜನರ ಬೆಂಬಲ ಅಗತ್ಯವೆಂದು ಬಹಿರಂಗಪಡಿಸಿದರು. ಕೊಡಗಿನಲ್ಲಿ ತನ್ನ ಪರವಾದ ದಂಗೆ ನಡೆದರೆ ಅದರ ಪರಿಣಾಮ ಗಂಭಿರವಾಗಬಹುದೆಂಬ ಅರಿವು ಅವನಿಗಿತ್ತು. ಆದರೆ ಕೊಡಗಿನಲ್ಲಿ ಅವನಿಗೆ ಹೇಳಿಕೊಳ್ಳುವಷ್ಟು ಜನರ ಬೆಂಬಲ ದೊರೆಯಲಿಲ್ಲ. ಆದುದರಿಂದ ಅವನು ಬಿಸಿಲೆಘಾಟಿಯ ಮೂಲಕ ದಕ್ಷಿಣ ಕನ್ನಡಕ್ಕೆ ಕಾಲಿರಿಸಿದ.

ದ.ಕ ಜಿಲ್ಲೆಯಲ್ಲಿ ಅವನ ನಿಷ್ಠಾವಂತ ಅನುಯಾಯಿಗಳಾದವರು ಕೂಜುಗೋಡು ಪಟೇಲ ಮಲ್ಲಪ್ಪ ಮತ್ತು ಆತನ ಸೋದರ ಅಪ್ಪಯ್ಯ.[೨೪] ಆಗ ತಾನೇ ಅಮರ ಸುಳ್ಯ ಸೀಮೆ ಕೊಡಗಿನಿಂದ ಬೇರ್ಪಟ್ಟು ದ.ಕ ದ ಕಂದಾಯ ಆಡಳಿತಕ್ಕೆ ಒಳಪಟ್ಟಿತ್ತು. ಅತ್ಯಂತ ಉಗ್ರವಾದ ದ.ಕ ಜಿಲ್ಲೆಯ ಕಂದಾಯ ವ್ಯವಸ್ಥೆಯಿಂದ ಮತ್ತು ಉಪ್ಪು ಹೊಗೆಸೊಪ್ಪುಗಳ ಏಕಸ್ವಾಮ್ಯದ ಬೆಲೆಯಿಂದ ಕಂಗೆಟ್ಟಿದ್ದ ಕಡಬ ಸುಬ್ರಹ್ಮಣ್ಯದ ರೈತರಿಗೆ ಅಪರಂಪಾರ ತಮ್ಮ ವಿಮೋಚಕನಂತೆ

ಕಂಡು ಬಂದುದರಲ್ಲಿ ಆಶ್ಚರ್ಯವಿರಲಿಲ್ಲ. ಆದರೆ ಕ್ಯಾಪ್ಟನ್ ಲೀಹಾರ್ಡಿಯು ತಾನು ನಿಷ್ಠಾವಂತ ಅನುಯಾಯಿ ಬೋಪು ದಿವಾನನ ಗೂಢ ಚರ್ಯೆಯ ಫಲವಾಗಿ ಅಪರಂಪರನನ್ನುಮಂಜರಾಬಾದಿನಲ್ಲಿ ಬಂಧಿಸುವಲ್ಲಿ ಸಫಲನಾದ. ಅಪರಂಪಾರನ ಎಡಗೈ ಮತ್ತು ಬಲಗೈಯಂತಿದ್ದ ಕಲ್ಯಾಣ ಸ್ವಾಮಿ ಮತ್ತು ಪುಟ್ಟ ಬಸವರು ಹೇಗೋ ತಪ್ಪಿಸಿಕೊಂಡು ಪರಾರಿಯಾದರು. ಅಪರಂಪಾರನನ್ನು ಬಂಧಿಸಿ ತಿರುಚಿನಾಪಳ್ಳಿಯಲ್ಲಿ ಬಂಧನದಲ್ಲಿಡಲಾಯಿತು. ೧೮೩೯ ರಲ್ಲಿ ಅವನ ಬಿಡುಗಡೆಯಾಗಿ ಬೆಂಗಳೂರಿಗೆ ಅವನನ್ನು ಕಳುಹಿಸಲಾಯಿತು ಅಲ್ಲಿಂದ ೧೮೭೦ರಲ್ಲಿ ಅವನನ್ನು ಮೈಸೂರಿಗೆ ಕಳುಹಿಸುವಾಗ ಶ್ರೀರಂಗಪಟ್ಟಣದಲ್ಲಿ ಅವನು ಕೊನೆಯುಸಿರೆಳೆದ.[೨೫] ಅಲ್ಲಿಗೆ ಒಬ್ಬ ಅಪೂರ್ವ ಆಧ್ಯಾತ್ಮಿಕ ಪ್ರತಿಭೆಯ ಜನನಾಯಕನ ಹೋರಾಟ ದುರಂತದಲ್ಲಿ ಅವಸಾನವಾಯಿತು.

೬.೨.೨. ಕಲ್ಯಾಣಪ್ಪನ ಪ್ರತಿಭಟನೆ

ಅಪರಂಪಾರನ ಬಂಧನ ಕಾಲದಲ್ಲಿ ಕೊಡ್ಲಿಪೇಟೆಗೆ ಪಲಾಯನ ಮಾಡಿದ ಅವನ ಆಪ್ತರಾದ ಕಲ್ಯಾಣಸ್ವಾಮಿ ಮತ್ತು ಪುಟ್ಟ ಬಸವರಲ್ಲಿ ಮೊದಲವನೆಯವನು ತಾನು ಅಪ್ಪಾಜಿ ರಾಜನ ಎರಡನೆಯ ಮಗ ನಂಜುಂಡರಸನೆಂದು ಹೇಳಿಕೊಂಡು ಕೊಡಗಿನ ಉತ್ತರಭಾಗದಲ್ಲಿ ಜನರನ್ನು ಸಂಘಟಿಸಿದ. ಈತ ಕೊಡಗು ರಾಜನ ಸೇನಾಧಿಕಾರಿಯಾಗಿರಬಹುದೆಂದು ನಿರಂಜನರು ಅಭಿಪ್ರಾಯ ಪಟ್ಟಿದ್ದಾರೆ.[೨೬] ಅಪರಂಪಾರ ಮಾಡಿದ ಕಾರ್ಯಗಳನ್ನು ಮುಂದುವರಿಸುವುದು ಅವನ ಉದ್ದೇಶವಾಗಿತ್ತು. ಅಪರಂಪಾರ ಕಲ್ಯಾಣ ಸ್ವಾಮಿ ಮತ್ತು ಪುಟ್ಟ ಬಸವರಿಗೆ ಸಲಹೆ ಮತ್ತು ನಿರ್ದೇಶನಗಳನ್ನು ನೀಡುತ್ತಿದ್ದವನು ಹುಲಿ ಕಡಿದ ನಂಜಯ್ಯ [೨೭] ಇವರಿಬ್ಬರ ಕಾರ್ಯವಿಧಾನಗಳಲ್ಲಿ ಏಕರೂಪತೆ ಇತ್ತು. ಅಪರಂಪಾರ ಕೊಡಗಿನಲ್ಲಿ ಶೀಘ್ರ ದಂಗೆ ಸಂಭವಿಸಿ ತಾನು ರಾಜನಾಗಲಿದ್ದು ತನ್ನ ಪರವಿಲ್ಲದವರನ್ನು ರಾಜಾಧಿಕಾರ ಬಳಸಿ ಶಿಕ್ಷಿಸುವುದಾಗಿ ಇಸ್ತಿಹಾರು ಹೊರಡಿಸಿದ್ದ[೨೮] ಅಪರಂಪಾರನ ಜತೆಗಿದ್ದಾಗ ಕಲ್ಯಾಣ ಸ್ವಾಮಿ ತಾನು ಅವನ ತಮ್ಮನೆಂದು ಪರಿಚಯಿಸಿಕೊಳ್ಳುತ್ತಿದ್ದ. ಸುಳ್ಯ ಮತ್ತು ಪುತ್ತೂರುಗಳ ೧೧೦ ಗ್ರಾಮಗಳಲ್ಲಿ ಅನುಷ್ಠಾನಗೊಂಡ ಬ್ರಿಟಿಷರ ಕಂದಾಯ ವ್ಯವಸ್ಥೆಯ ವಿರುದ್ಧ ಆಕ್ರೋಶವೆದ್ದಾಗ ಅದರ ಸದುಪಯೋಗವನ್ನು ಪಡೆಯಲೆಂದು ದಕ್ಷಿಣ ಕನ್ನಡಕ್ಕೆ ಬಂದ ಅಪರಂಪಾರನ ಜತೆಯಲ್ಲಿ ಕಲ್ಯಾಣ ಸ್ವಾಮಿ ಮತ್ತು ಪುಟ್ಟ ಬಸವ ಇಬ್ಬರೂ ಇದ್ದರು. ಕೆಲವೊಮ್ಮೆ ಅಪರಂಪಾರ ತಾನೇ ಕಲ್ಯಾಣ ಸ್ವಾಮಿಯೆಂದು ಹೇಳಿಕೊಂಡು ಬ್ರಿಟಿಷರ ವಿರುದ್ಧ ಜನರನ್ನು ಸಂಘಟಿಸಿದ್ದೂ ಇದೆ. ತನಗೇನಾದರೂ ಸಂಭವಿಸಿದರೆ ಅಪರಂಪಾರ ಮತ್ತು ಕಲ್ಯಾಣ ಸ್ವಾಮಿ ಎಂಬ ಎರಡು ಹೆಸರುಗಳನ್ನು ಅಸ್ತಿತ್ವಕ್ಕೆ ತಕ್ಕಂತೆ ಬಳಸಿಕೊಂಡು ಬಂಡಾಯಕ್ಕೆ ನಾಯಕತ್ವ ನೀಡಬೇಕೆಂದು

ಈತ ಉಳಿದಿಬ್ಬರಿಗೆ ಸೂಚಿಸಿದ್ದಂತೆ ಕಂಡು ಬರುತ್ತದೆ. ಅಥವಾ ಈ ಸೂಚನೆಯನ್ನು ಹುಲಿ ಕಡಿದ ನಂಜಯ್ಯ ನೀಡಿರುವ ಸಾಧ್ಯತೆಗಳೂ ಇವೆ. ೧೮೩೭ರಲ್ಲಿ ರೈತ ದಂಡಿನ ನೇತಾರನಾಗಿ ಪುಟ್ಟ ಬಸವ ಕಲ್ಯಾಣ ಸ್ವಾಮಿ ಎಂಬ ಹೆಸರಿಟ್ಟುಕೊಂಡದ್ದು ಮತ್ತು ಅಪರಂಪಾರನ ಹೆಸರಿನಲ್ಲಿ ನಿರೂಪಗಳನ್ನು ಕಳುಹಿಸುತ್ತಿದ್ದದು ಜಂಗಮ ವೇಷದ ಈ ತ್ರಿಮೂರ್ತಿಗಳು ಕೊಡಗು – ಕೆನರಾ ಬಂಡಾಯಕ್ಕೆ ಸಾಕಷ್ಟು ಪೂರ್ವ ತಯಾರಿಯ ಮೂಲಕ ಯೋಜನೆ ತಯಾರಿಸಿದ್ದರು ಎನ್ನುವುದನ್ನು ಸೂಚಿಸುತ್ತದೆ.

ಕಲ್ಯಾಣ ಸ್ವಾಮಿಗೆ ಘಟ್ಟದ ಕೆಳಗಿನ ಕೊಡಗಿನ ಪ್ರದೇಶಗಳ ರೈತರು ಹೊಸ ಕಂದಾಯ ವ್ಯವಸ್ಥೆಯಿಂದ ತೊಂದರೆಗೀಡಾದುದರ ಸ್ಪಷ್ಟ ಅರಿವಿತ್ತು. ಆದರೂ ಆತ ಉತ್ತರ ಕೊಡಗಿನ ಗಡಿನಾಡು, ಎಡೆ ನಾಡು, ಉಮ್ಮತ್ತ ನಾಡು ಮತ್ತು ಏಳು ಸಾವಿರ ಸೀಮೆಗಳಲ್ಲಿ ಸಂಚರಿಸಿ ತಾನು ಅಪ್ಪಾಜಿ ರಾಜನ ಎರಡನೇ ಮಗನೆಂದು ಪ್ರಚುರ ಪಡಿಸಿದ. ಅಪರಂಪಾರನ ಹಾಗೆ ಅವನು ಕೂಡ ಈ ಪ್ರದೇಶಗಳ ಜನರಿಗೆ ನಿರೂಪ ಕಳುಹಿಸಿ ಕೊಡಗಿನಲ್ಲಿ ರಾಜನ ಆಡಳಿತವನು ಮರಳಿ ಸ್ಥಾಪಿಸಲು ಯತ್ನಿಸುವ ತನಗೆ ಸಹಾಯ ನೀಡದವರನ್ನು ಶಿಕ್ಷೆಗೆ ಒಳಪಡಿಸುವುದಾಗಿ ಎಚ್ಚರಿಸಿದ.

ಅಪರಂಪಾರನ ಉದ್ದೇಶ ಕಡಬ, ಸುಬ್ರಹ್ಮಣ್ಯ, ಅಮರ ಸುಳ್ಯ ಸೀಮೆಗಳಲ್ಲಿ ಕಂದಾಯ ವ್ಯವಸ್ಥೆಯ ವಿರುದ್ಧ ಜನರಿಗಿದ್ದ ಆಕ್ರೋಶವನ್ನು ವಸಾಹತುಶಾಹಿಯ ವಿರುದ್ಧ ತಿರುಗಿಸುವುದಾಗಿತ್ತು. ಆದರೆ ಎರಡೋ ಮೂರೋ ಸೀಮೆಯ ರೈತರಷ್ಟೇ ದಂಗೆ ಎದ್ದರೆ ಯೋಜಿತ ಉದ್ದೇಶವನ್ನು ಸಾಧಿಸಲು ಸಾಧ್ಯವಿಲ್ಲ ಎಂಬ ಅರಿವು ಸ್ಪಷ್ಟವಾಗಿ ಅಪರಂಪಾರನಿಗೆ ಇದ್ದಂತೆ ಕಂಡು ಬರುತ್ತದೆ. ಅದಕ್ಕೆ ಉತ್ತರಕೊಡಗಿನ ನೆರವು ಬೇಕಿತ್ತು. ಅದನ್ನು ಕಲ್ಯಾಣ ಸ್ವಾಮಿಯ ಮೂಲಕ ಸಾಧಿಸಲು ಆತ ಪ್ರಯತ್ನಿಸಿದ. ಈ ಸಂದರ್ಭಗಳಲ್ಲಿ ಪುಟ್ಟ ಬಸವ ಅನನ್ಯತೆ ಇಲ್ಲದ ಒಬ್ಬ ರಾಜನಿಷ್ಠನಂತೆ ವರ್ತಿಸಿದ. ಹಾಗಾಗಿ ಅವನ ಬಗ್ಗೆ ಬ್ರಿಟಿಷರಿಗಾಗಲೀ ಬೋಪು ದಿವಾನನಿಗಾಗಲೀ ಯಾವುದೇ ಸಂಶಯಗಳು ಉದ್ಭವಿಸಲಿಲ್ಲವೆಂದು ಕಾಣುತ್ತದೆ.

ಅಪರಂಪಾರನಾಗಲೀ, ಕಲ್ಯಾಣ ಸ್ವಾಮಿಯಾಗಲೀ ದಕ್ಷಿಣ ಕೊಡಗನ್ನು ತಮ್ಮ ಕಾರ್ಯ ಕ್ಷೇತ್ರವನ್ನಾಗಿ ಮಾಡಿಕೊಳ್ಳದಿರುವುದಕ್ಕೆ ಕಾರಣಗಳಿದ್ದವು. ದಕ್ಷಿಣ ಕೊಡಗಿನಲ್ಲಿ ಕೊಡವರು ಗಣನೀಯ ಸಂಖ್ಯೆಯಲ್ಲಿದ್ದರು. ಅವರು ಚೆನ್ನ ಬಸಪ್ಪನ ಪ್ರಕರಣದಿಂದಾಗಿ ಚಿಕ್ಕ ವೀರರಾಜನ ಬಗ್ಗೆ ಯಾವುದೇ ಸಹಾನುಭೂತಿಯನ್ನು ಹೊಂದಿರಲಿಲ್ಲ. ಕೊಡಗು ಎಂಬ ನಾಡನ್ನು ದೊಡ್ಡವೀರ ರಾಜನಿಗೆ ಕಟ್ಟಲು ಸಾಧ್ಯವಾದದ್ದು ಬ್ರಿಟಿಷರ ಬೆಂಬಲದಿಂದ ಎಂಬ ಕೃತಜ್ಞತಾಭಾವ ಅವರಲ್ಲಿದ್ದಿರಬೇಕು. ಅಲ್ಲದೆ ಬೋಪು ದಿವಾನ ಮತ್ತು ಪೊನ್ನಪ್ಪ ದಿವಾನ ರಾಜನಿಗೆ ವಿರುದ್ಧವಾಗಿ ಬ್ರಿಟಿಷರ ಪರವಾಗಿ ನಿಂತದ್ದು ಮತ್ತು ತಮ್ಮ ಕುಲಬಾಂಧವರನ್ನು ವಸಾಹತುಶಾಹಿಯ ಪರವಾಗಿ

ನಿಲ್ಲುವಂತೆ ಮಾಡಿದ್ದು, ಕಲ್ಯಾಣ ಸ್ವಾಮಿ ದಕ್ಷಿಣ ಕೊಡಗನ್ನು ತನ್ನ ಕಾರ್ಯ ಕ್ಷೇತ್ರವನ್ನಾಗಿ ಮಾಡದಿರಲು ಕಾರಣವಾಗಿರುವಂತೆ ಕಾಣುತ್ತದೆ.

ಕಲ್ಯಾಣ ಸ್ವಾಮಿಯು ಅಮರ ಸುಳ್ಯ ಸೀಮೆಯಲ್ಲಿ ರೈತರನ್ನು ಒಗ್ಗೂಡಿಸುವ ಕಾಯಕದಲ್ಲಿ ತೊಡಗಿರಲಿಲ್ಲ. ಈ ಕೆಲಸವನ್ನು ಅಪರಂಪಾರ ತಾನೇ ವಹಿಸಿಕೊಂಡಿರಬೇಕು. ಅವರಿಬ್ಬರೂ ಏಕಕಾಲದಲ್ಲಿ ಅಮರ ಸುಳ್ಯ ಸೀಮೆಯಲ್ಲಿ ಕಾಣಿಸಿಕೊಂಡರೆ ಅಪರಂಪಾರ ಮತ್ತು ಕಲ್ಯಾಣ ಸ್ವಾಮಿ ಬೇರೆ ಬೇರೆ ವ್ಯಕ್ತಿಗಳು ಎಂದು ಗೊತ್ತಾಗಿ ಬಿಡುವ ಸಂಭವ ಇದ್ದುದರಿಂದ ಅವರು ವಿಭಿನ್ನ ಕಾರ್ಯಕ್ಷೇತ್ರಗಳನ್ನು ಆರಿಸಿಕೊಂಡಿರಬಹುದು. ಆದರೆ ಏಕಕಾಲದಲ್ಲಿ ಎರಡು ಕಡೆಗಳಿಂದ ದಂಡುಗಳನ್ನು ಹೊರಡಿಸಿ ಮಡಿಕೇರಿಯನ್ನು ಮುತ್ತಿ ಬ್ರಿಟಿಷರನ್ನು ನಿರ್ನಾಮ ಮಾಡಲು ಅವರು ಉದ್ದೇಶಿಸಿದ್ದರು. ಈ ಎಲ್ಲ ವಿಷಯಗಳು ಬೋಪು ದಿವಾನನಿಗೆ ಯಾರಿಂದಲೋ ವರದಿಯಾಗುತ್ತಿದ್ದವು. ಬೋಪು ದಿವಾನನ ನಿಷ್ಠೆಯನ್ನು ಮಡಿಕೇರಿಯ ಸೂಪರಿಟೆಂಡೆಂಟ್ ಲೀಹಾರ್ಡಿ ಪದೇ ಪದೇ ಸಂದೇಹಿಸುತ್ತಿದ್ದುದರಿಂದ ಅವನು ಅಸಾಧಾರಣವಾದುದ್ದನ್ನು ಏನನ್ನಾದರೂ ಹೇಗಾದರೂ ಸಾಧಿಸಲೇ ಬೇಕಿತ್ತು. ಎಡೆಬಿಡದೆ ಅಪರಂಪಾರನ ಹೆಜ್ಜೆ ಜಾಡನ್ನು ಹಿಡಿದು ಮುಂದುವರಿದ ಬೋಪು ದಿವಾನ ಅವನನ್ನು ಬಂಧಿಸುವಲ್ಲಿ ಸಫಲನಾದ. ಲೀಹಾರ್ಡಿಯ ಮೆಚ್ಚುಗೆ ಗಳಿಸಲು ಕೊಡಗಿನಲ್ಲಿ ಜನರು ಲಕ್ಷ್ಮೀ ನಾರಾಯಣನ ಕುಮ್ಮಕ್ಕಿನಿಂದ ದಂಗೆಯೇಳುವ ಸಂಭವವಿದೆಯೆಂದು ಚಾಡಿ ಹೇಳಿದ. ಪರಿಣಾಮವಾಗಿ ಲೀಹಾರ್ಡಿ ಲಕ್ಷ್ಮೀ ನಾರಾಯಣನನ್ನು ಬಂಧಿಸಿ ಸೆರೆಯಲ್ಲಿಟ್ಟ.

ಅಪರಂಪಾರನಿಗೆ ತನ್ನ ಬಂಧನವಾಗುವ ಮೊದಲೇ ಪೂರ್ವ ಸೂಚನೆ ಸಿಕ್ಕಿದ್ದರಿಂದ ಕಲ್ಯಾಣ ಸ್ವಾಮಿ ಮತ್ತು ಪುಟ್ಟ ಬಸವರನನ್ನು ಬೇರೆ ದಾರಿಯಲ್ಲಿ ಕೊಡಲೀ ಪೇಟೆಗೆ ಪಲಾಯನ ಮಾಡಲು ತಿಳಿಸಿದ್ದ. ಕೊಡಲೀ ಪೇಟೆಯಲ್ಲಿ ಅಪಾಯದ ಮುನ್ಸೂಚನೆ ದೊರೆತು ಕಲ್ಯಾಣ ಸ್ವಾಮಿ ಕೊಡಗಿನತ್ತ ಪಲಾಯನ ಮಾಡಿದ. ಉಮ್ಮತ್ತ ನಾಡಿನ ಕೊಡಗರು ಅವನನ್ನು ಅಪ್ಪಾಜಿರಾಜನ ಮಗನೆಂದೇ ತಿಳಿದು ಗೌರವಿಸಿ ಬ್ರಿಟಿಷರಿಂದ ರಕ್ಷಿಸಲು ಬೈತೂರಿಗೆ ಕಳುಹಿಸಿದರು. ಆದರೆ ಲೀ ಹಾರ್ಡಿ ಸೈನಿಕರು ಮಲೆಯಾಳದ ಸೈನಿಕರ ನೆರವು ಪಡೆದು ಅವನನ್ನು ಬಂಧಿಸಿ ಮಡಿಕೇರಿಗೆ ಕರೆ ತಂದರು. ಲೀಹಾರ್ಡಿ ಠಕ್ಕು ವಿಚಾರಣೆ ನಡೆಸಿ ಕಲ್ಯಾಣ ಸ್ವಾಮಿಯನ್ನು ಮೈಸೂರಿನ ಸೆರೆಮನೆಗೆ ಅಟ್ಟಿದ. ಅವನ ಬಂಧನ ಒಂದು ಸುದ್ದಿಯಾಗದ ಕಾರಣ ಅದಕ್ಕೆ ಜನರ ಪ್ರತಿಸ್ಪಂದನ ಇರಲಿಲ್ಲ. ಇದರಿಂದಾಗಿ ಕಲ್ಯಾಣ ಸ್ವಾಮಿ ಇನ್ನೂ ಸ್ವತಂತ್ರನಾಗಿದ್ದು ತಮ್ಮ ವಿಮೋಚನೆ ಮಾಡಬಹುದೆಂದು ಸುಳ್ಯ ಭಾಗದ ರೈತರು ನಂಬಿ ಅವನ ಬರವಿಗಾಗಿ ಕಾದಿದ್ದರು.. ಇದು ಕೊಡಗು – ಕೆನರಾ ರೈತ ಬಂಡಾಯದ ಆರಂಭಿಕ ಯಶಸ್ಸಿಗೆ ಮುಖ್ಯ ಕಾರಣವಾಯಿತು.

ಉಲ್ಲೇಖಗಳು ಮತ್ತು ಟಿಪ್ಪಣಿಗಳು

೧. ಕೇಶವ ಕೃಷ್ಣ ಕುಡ್ವ, ೧೯೪೮, ಪೂರ್ವೋಕ್ತ ಪು ೧೯

೨. ಕೆ. ಜಿ. ವಸಂತ ಮಾಧವ, ೧೯೯೮, ಅಬ್ಬಕ್ಕ ದೇವಿಯರು, ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಮಂಗಳೂರು ಪು. ೨೫-೨೬

೩. PMBR, 16- 9-1833 Vol. No. 1378, PP- 1166-67

೪. ಜಮಾ ಬಂಥಿಯು ಸರಕಾರ ಲೆಕ್ಕ ಹಾಕುವ ಬೆಲೆ. ಸಾಮಾನ್ಯವಾಗಿ ಅದನ್ನು ಆಧರಿಸಿ ಮಾರುಕಟ್ಟೆ ಬೆಲೆ ನಿರ್ಣಯವಾಗುತ್ತದೆ. ಅರ್ಥಶಾಸ್ತ್ರಿಯವಾಗಿ ಜಮಾ ಬಂಥಿ ಬೆಲೆಯನ್ನು ಸಹಜ ಬೆಲೆಯೆಂದು ಪರಿಗಣಿಸಬಹುದು.

೫. ದಕ್ಷಿಣ ಕನ್ನಡದಲ್ಲಿ ಬಂಗಾಳ ಮಾದರಿಯ ರೈತವಾರಿ ಪದ್ಧತಿಯನ್ನು ಅನುಷ್ಠಾನಗೊಳಿಸಲು ಮನ್ರೋ ಬಯಸಿದ್ದ. ಆದರೆ ಈಸ್ಟ್ ಇಂಡಿಯಾ ಕಂಪೆನಿಯ ಹಣಕಾಸಿನ ತುರ್ತುಗಳು ಕಂದಾಯ ವ್ಯವಸ್ಥೆಯನ್ನು ತೀರಾ ಸಂಕೀರ್ಣಗೊಳಿಸಿಜ್ಜಿತ್ತು. ಸ್ಥಳೀಯ ಪ್ರತಿರೋಧಗಳನ್ನು ಎದುರಿಸುವುದರೊಂದಿಗೆ ಕಂಪೆನಿಯು ಯುರೋಪಿನ ಇತರ ಕಂಪೆನಿಗಳ ಪೈಪೋಟಿಯನ್ನು ಎದುರಿಸಬೇಕಿತ್ತು. ಆದುದರಿಂದ ಅಧಿಕ ಕಂದಾಯ ಹೇರಿಕೆ ಅನಿವಾರ್ಯವಾಗಿತ್ತು.

೬. Shyama Bhat, 1998, op. cit; P 111

೭. ಪ್ಲಾಸಿ ಕದನ, ಬಕ್ಸಾರ್ ಕದನ, ಆಂಗ್ಲೋ ಮೈಸೂರು ಕದನ, ಅಂಗ್ಲೋ-ಮರಾಠ ಕದನ ಇತ್ಯಾದಿ.

೮. ಎ.ಆರ್. ದೇಸಾಯಿ (ಸಂ) ೧೯೮೫ ಭಾರತದಲ್ಲಿ ರೈತರ ಹೋರಾಟಗಳು ಆಕ್ಸ್ ಫರ್ಡ್ ವಿ.ವಿ ಮುದ್ರಣಾಲಯ, ನವದೆಹಲಿ. ಪುಟ ೯೪

೯. Shyama Bhat, 1998, op. cit; P 144

೧೦. ಉಪ್ಪು ಮತ್ತು ಹೊಗೆಸೊಪ್ಪು ಏಕಸ್ವಾಮ್ಯದ ಹಿಂದೆ ಕಂಪೆನಿ ಸರಕಾರದ ಯಾವುದೇ ತಾರ್ಕಿಕ ಜಿಜ್ಞಾಸೆ ಇದ್ದಂತೆ ಕಂಡುಬರುವುದಿಲ್ಲ. ಅಮೇರಿಕಾದ ಸ್ವಾತಂತ್ರ್ಯ ಹೋರಾಟದಿಂದಾಗಲೀ ಪ್ರೆಂಚ್ ಕ್ರಾಂತಿಯಿಂದಾಗಲೀ ಈಸ್ಟ್ ಇಂಡಿಯಾ ಕಂಪೆನಿ ಪಾಠ ಕಲಿತಂತೆ ಕಂಡು ಬರುವುದಿಲ್ಲ. ಇವೆರಡು ಕ್ರಾಂತಿಗಳ ಬಗ್ಗೆ ಭಾರತದ ರೈತರಿಗೆ ಯಾವುದೇ ಮಾಹಿತಿ ದೊರೆತಿರುವ ಸಾಧ್ಯತೆಗಳಿಲ್ಲವೆಂಬ ಹುಂಭ ಧೈರ್ಯವು ಇದಕ್ಕೆ ಕಾರಣವಾಗಿರಬಹುದು.

೧೧. ಒಂದು ಕೋರ್ಜೆ = ೪೨ ಮುಡಿ ಅಥವಾ ೧.೪೧ ಲಕ್ಷ ತೊಲ.

೧೨. ಮಣ ಎಂದರೆ ಒಂದು ಮಾಪನ . ೧ ಮಣವು ೧೩ ಕೆ. ಜಿಗಳಿಗೆ ಸಮಾನ.

೧೩. ಈ ಆರ್ಥಿಕ ಹಿಂಜರಿತಕ್ಕೆ ಸಮರ್ಪಕ ಕಾರಣಗಳೇನೆಂದು ಖಚಿತವಾಗಿ ಗೊತ್ತಾಗುವುದಿಲ್ಲ. ಕಂಪೆನಿ ಸರಕಾರವು ಸ್ವಲಾಭಕ್ಕಾಗಿ ಈ ರೀತಿಯ ಆರ್ಥಿಕ ಹಿಂಜರಿತಕ್ಕೆ ಕಾರಣವಾಗಿರುವ ಸಾಧ್ಯತೆಗಳಿವೆ. ಕೃಷಿ ಉತ್ಪನ್ನಗಳ ಬೆಲೆ ಇಳಿದಾಗ ಕಂದಾಯ ಕಟ್ಟಲಾಗದ ರೈತರು ತಮ್ಮ ಭೂಮಿಯನ್ನು ವ್ಯಾಪಾರಿಗಳಿಗೆ ಅಥವಾ ಜಮೀನುದಾರರಿಗೆ ಮಾರಾಟ ಮಾಡಬೇಕಾದ ಪರಿಸ್ಥಿತಿ ಉದ್ಭವವಾಗುತ್ತಿತ್ತು. ಕಂಪೆನಿ ಸರಕಾರವು ದ.ಕ ಜಿಲ್ಲೆಯ ವ್ಯಾಪಾರಿ ಮತ್ತು ಜಮೀನುದಾರಿ ವರ್ಗಗಳೊಡನೆ ಕೈ ಜೋಡಿಸಿ ಆರ್ಥಿಕ ಹಿಂಜರಿತವನ್ನು ಉಂಟುಮಾಡಿರುವ ಸಾಧ್ಯತೆಗಳಿವೆ.

೧೪. ಅಲೆಗ್ಸಾಂಡರ್ ರೀಡ್, ಕಂದಾಯ ಮಂಡಳಿಗೆ ೧೦-೧೧-೧೮೧೧ ರಂದು ಕಳುಹಿಸಿದ ವರದಿ ಪು. ೨೫೮ -೨೫೯

೧೫. ಒಂದು ಬಹದ್ದೂರಿ ನಾಲ್ಕು ರೂಪಾಯಿಗಳ ಮೌಲ್ಯದ ಒಂದು ನಾಣ್ಯ.

೧೬. ಡಿ. ಎನ್ ಧನಾಗರೆ, ೧೯೮೩, ಪೂರ್ವೋಕ್ತ ಪು. ೨೧೩ – ೨೧೪

೧೭. Abhishankar. K (Ed.) 1973 Karnataka State Gazeteer, South Canara, Government of Karnataka, Bangalore.

೧೮. PMJD, 3 -01 -1832

೧೯. PMBR ,20-01-1831,P 1236

೨೦. John Sturrock 2003, OP.cit,PP. 27 - 28

೨೧. Ibid,P 112

೨೨. Shyama Bhat, 1998, op cit. P 153

೨೩. ಡಿ.ಎನ್ ಕೃಷ್ಣಯ್ಯ ೧೯೭೪ ಪೂರ್ವೋಕ್ತ ಪು ೫೪೩

೨೪. ಕೆ.ಆರ್.ವಿದ್ಯಾಧರ್ "ಕುಡೆಕಲ್ಲು ಪುಟ್ಟ ಗೌಡರ ಕೇಸ್ ನಂ ೧/೧೮೩೮, ವಾರ್ತಾಭಾರತಿ ಏಪ್ರಿಲ್ ೫, ೨೦೦೯, ಒಳಪುಟ ೧-೩

೨೫. ಡಿ.ಎನ್ ಕೃಷ್ಣಯ್ಯ, ೧೯೭೪ ಪು ೫೪೫

೨೬. ನಿರಂಜನರು ತಮ್ಮ ಕಾದಂಬರಿ ಅಪರಂಪಾರದಲ್ಲಿ ನಾಯಕನನ್ನು ಅಪ್ಪಾಜಿ ರಾಜನ ಮಗನೆಂದೇ ದಾಖಲಿಸಿದ್ದಾರೆ. ಕೊಡಗಿನ ಇತಿಹಾಸದಲ್ಲಿ ಡಿ. ಎನ್ ಕೃಷ್ಣಯ್ಯ ಅಪ್ಪಾಜಿ ರಾಜನ ಮಕ್ಕಳಾದ ವೀರ ರಾಜ ಮತ್ತು ನಂಜುಂಡರಸರನ್ನು

ಹೂಳಲು ಕಾಡಿಗೆ ಹೋದಾಗ ಅವರಲ್ಲಿ ಕುಟುಕು ಜೀವವಿದ್ದುದನ್ನು ಗಮನಿಸಿ ಅವರನ್ನು ಬಿಟ್ಟು ಬಿಟ್ಟರೆಂದು ಬ್ರಿಟಿಷ್ ಇತಿಹಾಸಕಾರನೊಬ್ಬ ದಾಖಲಿಸಿದುದನ್ನು ಉಲ್ಲೇಖಿಸಿದ್ದಾರೆ.

೨೭. ಈತ ಮೂಲತಃ ಒಬ್ಬ ವ್ಯಾಪಾರಿಯಾಗಿದ್ದು ಮೈಸೂರಿನ ಅರಸರನ್ನು ಬ್ರಿಟಿಷರು ಪದಚ್ಯುತಿಗೊಳಿಸಿದ ಬಳಿಕ ಅವರ ಹುನ್ನಾರದ ಅರಿವಾಗಿ ಅವರನ್ನು ಮೈಸೂರು ಮತ್ತು ಕೊಡಗುಗಳಿಂದ ಓಡಿಸಬೇಕೆಂಬ ಸಂಕಲ್ಪವನ್ನು ಹೊಂದಿದ್ದ.

೨೮. ಡಿ.ಎನ್ ಕೃಷ್ಣಯ್ಯ, ೧೯೭೪ ಪೂರ್ವೋಕ್ತ ಪು ೫೪೪.

ಅಧ್ಯಾಯ-೭

ಕೊಡಗು ಕೆನರಾ ಆರ್ಥಿಕ ಬಂಡಾಯ

ಭಾರತದ ಪ್ರಥಮ ಸ್ವಾತಂತ್ರ್ಯ ಸಮರದ ಇಪ್ಪತ್ತು ವರ್ಷಕ್ಕೆ ಮುಂಚಿತವಾಗಿ ಇಂದಿನ ಸುಳ್ಯದಲ್ಲಿ ಹುಟ್ಟಿದ ಕ್ರಾಂತಿಯ ಕಿಡಿಯೊಂದು ಕೊಡಗಿಗೆ ಮತ್ತು ಕೆನರಾಕ್ಕೆ ಹಬ್ಬಿ ಕೊಡಗು ಕೆನರಾ ಆರ್ಥಿಕ ಬಂಡಾಯ ಎನಿಸಿತು. ಜನಪದರು ಮತ್ತು ಇತಿಹಾಸಕಾರರು ಈ ಹೋರಾಟವನ್ನು ಕಲ್ಯಾಣಪ್ಪನ ಕಾಟಕಾಯಿ ಎಂದು ಗುರುತಿಸಿದ್ದಾರೆ.[೧] ಈ ರೈತ ಬಂಡಾಯವನ್ನು ಇತಿಹಾಸಕಾರರು ಲಘುವಾಗಿ ಪರಿಗಣಿಸಿದುದರಿಂದ ಇದಕ್ಕೆ ಇತಿಹಾಸದ ಪುಟಗಳಲ್ಲಿ ತಕ್ಕ ಮನ್ನಣೆ ಸಿಗಲಿಲ್ಲ. ಇದೊಂದು ಬಗೆಯ ಸಾಮಾಜಿಕ ಢಕಾಯಿತಿಯ ರೈತ ಚಳುವಳಿ ಎಂದು ಭಾವಿಸಲಾಗಿದೆ. 'ಸಾಮಾಜಿಕ ಢಕಾಯಿತಿ' ಎಂಬ ಪದಪುಂಜವನ್ನು ಕಾನೂನು ಭಂಗ ಮಾಡುವ ರೈತರು ಎಂಬರ್ಥದಲ್ಲಿ ಧನಾಗರೆಯವರು ಬಳಸಿದ್ದಾರೆ. ಅವರು ಭಾರತದ ರೈತ ಚಳುವಳಿಗಳನ್ನು ಪುನರುತ್ಥಾನವಾದಿ, ಧಾರ್ಮಿಕ, ನಾಯಕರಹಿತ, ಭಯೋತ್ಪಾದಕ, ಸುಧಾರಣಾವಾದಿ ಮತ್ತು ಸಾಮಾಜಿಕ ಢಕಾಯಿತಿ ರೈತ ಚಳುವಳಿ ಎಂದು ವಿಭಜಿಸಿದ್ದಾರೆ. ಪ್ರಭುತ್ವವನ್ನು ಕಾನೂನುಭಂಗ ಮಾಡಿ ವಿರೋಧಿಸುವುದು ಮತ್ತು ಬೊಕ್ಕಸವನ್ನು ವಶಪಡಿಸಿಕೊಳ್ಳುವುದು ಸಾಮಾಜಿಕ ಢಕಾಯಿತಿ ಚಳುವಳಿಯ ಮುಖ್ಯ ಲಕ್ಷಣ.[೨] ಕೊಡಗು ಕೆನರಾ ರೈತ ಬಂಡಾಯದಲ್ಲಿ ನಡೆದದ್ದು ಇದೇ.

ಈ ರೈತ ಬಂಡಾಯದ ಬಗ್ಗೆ ನಿರ್ವಿವಾದ ವಿವರಣೆ ನೀಡಲು ಇತಿಹಾಸಕಾರರಿಂದ ಸಾಧ್ಯವಾಗದೆ ಹೋದುದರಿಂದ ಬಂಡಾಯದ ನಾಯಕ ಕಲ್ಯಾಣ ಸ್ವಾಮಿ ನಾಮಾಂಕಿತ ಪುಟ್ಟಬಸವನು ದರೋಡೆ ಕೋರನಾಗಿ, ಸ್ವಾತಂತ್ರ್ಯ ಹೋರಾಟಗಾರನಾಗಿ, ರಾಜನಿಷ್ಠನಾಗಿ, ರೈತ ನಾಯಕನಾಗಿ, ಸಂದರ್ಭದ ಶಿಶುವಾಗಿ ವಿಭಿನ್ನ ಪಾತ್ರಗಳಲ್ಲಿ ಬಿಂಬಿತನಾಗಿದ್ದಾನೆ. ಬ್ರಿಟಿಷ್ ವಸಾಹತುಶಾಹಿಗೆ ಆರಂಭಿಕ ಆಘಾತವನ್ನು ನೀಡಿದವರಲ್ಲಿ ಒಬ್ಬನಾದ ಕಲ್ಯಾಣಸ್ವಾಮಿಯ ನೈಜ ವ್ಯಕ್ತಿತ್ವವನ್ನು ಮತ್ತು ಹೋರಾಟದ ಸ್ಪಷ್ಟ ರೂಪುರೇಷೆಯನ್ನು ಖಚಿತವಾಗಿ ನೀಡಲು ಯಾರಿಂದಲೂ ಸಾಧ್ಯವಾಗಿಲ್ಲ. ಅದನ್ನು ಅಪ್ರಾಮುಖ್ಯವೆಂದು ಕಾಟನ್[೩] ಮತ್ತು ಕಬ್ಬನ್[೪] ಚಿತ್ರಿಸಲು ಯತ್ನಿಸಿದ್ದಾರೆ. ರಿಕ್ಟರ್‌ನ್ನು[೫] ತನ್ನ ಗಜೆಟಿಯರ್‌ನಲ್ಲಿ ಅದನ್ನು ಗೌಡರ ಮೇಲ್ಬಿಳುವಿಕೆ ಎಂದು ಕರೆದು ಅದಕ್ಕೊಂದು ಕೋಮು ಸ್ವರೂಪ ನೀಡಲು ಯತ್ನಿಸಿದ್ದಾನೆ. ತಿ.ತಾ.ಶರ್ಮ[೬], ಡಿ.ಎನ್.ಕೃಷ್ಣಯ್ಯ[೭], ಎಂ. ವಿ. ಕೃಷ್ಣರಾವ್ ಮತ್ತು ಹಾಲಪ್ಪ[೮] ಮುಂತಾದ ಲೇಖಕರು ಮತ್ತು ರೈತ ಬಂಡಾಯ ನಡೆದ ಪ್ರದೇಶದ ಇತಿಹಾಸಕಾರರು ಕಲ್ಯಾಣಪ್ಪನ ಹೋರಾಟದ ಬಗ್ಗೆ ವಸ್ತುನಿಷ್ಠವಾದ ಭಿನ್ನ ಅಭಿಪ್ರಾಯಗಳನ್ನು ದಾಖಲಿಸಿದ್ದಾರೆ.

೭.೧. ಆರ್ಥಿಕ ಬಂಡಾಯ ಪೂರ್ವದ ಬೆಳವಣಿಗೆ

ಇಂದಿನ ಸುಳ್ಯ ತಾಲೂಕು ವಸಾಹತುಶಾಹಿ ಆಡಳಿತದ ಕಾಲದಲ್ಲಿ ಪಂಜ, ಬೆಳ್ಳಾರೆ, ಅಮರ ಮತ್ತು ಸುಳ್ಯ ಎಂಬ ನಾಲ್ಕು ಮಾಗಣೆಗಳಾಗಿ ವಿಭಜನೆ ಹೊಂದಿತ್ತು. (ಭೂಪಟ ೭.೧) ಐತಿಹಾಸಿಕವಾಗಿ ಬೆಳ್ಳಾರೆ ಈ ನಾಲ್ಕು ಮಾಗಣೆಗಳ ಕೇಂದ್ರ ಸ್ಥಾನವಾಗಿ ಇಲ್ಲಿ ಕ್ರಿ.ಶ ೧೬೨೮ರಲ್ಲಿ ವೆಂಕಟಪ್ಪನಾಯಕ ಒಂದು ಕೋಟೆಯನ್ನು ನಿರ್ಮಿಸಿ ತನ್ನ ಸೈನ್ಯವನ್ನು ಇರಿಸಿದ್ದ[೯] ಕೊಡಗನ್ನು ಮುದ್ದುರಾಜ ಆಳುತ್ತಿದ್ದ ಕಾಲದಲ್ಲಿ ಅಮರಸುಳ್ಯ ಮಾಗಣೆಗಳು ಇಕ್ಕೇರಿಯ ಶಿವಪ್ಪನಾಯಕನಿಂದ ಕೊಡಗಿಗೆ ಹಸ್ತಾಂತರಿಸಲ್ಪಟ್ಟವು.ಇಕ್ಕೇರಿ ನಾಯಕರ ಪತನಾನಂತರ ಈ ಪ್ರದೇಶಗಳು ಹೈದರಾಲಿ ಮತ್ತು ಟಿಪ್ಪುವಿನ ವಶಕ್ಕೆ ಹೋದವು. ದೊಡ್ಡವೀರರಾಜನ ಕಾಲದಲ್ಲಿ ಅವನಿಗೂ ಟಿಪ್ಪುವಿನ ನಿಗ್ರಹದಲ್ಲಿ ಅವನು ಸಲ್ಲಿಸಿದ ಸೇವೆಗೆ ಪ್ರತಿಫಲವಾಗಿ ಬ್ರಿಟಿಷರು ಈ ಪ್ರದೇಶವನ್ನು ಕೊಡಗಿಗೆ ಸೇರಿಸಿ ಬೆಳ್ಳಾರೆಯಲ್ಲಿ ಒಂದು ಆಡಳಿತ ಕಛೇರಿಯನ್ನು ತೆರೆದು ಖಜಾನೆಯನ್ನು ಸ್ಥಾಪಿಸಿದರು[೧೦]. ಕ್ರಿ.ಶ. ೧೮೩೪ರಲ್ಲಿ ಚಿಕ್ಕವೀರ ರಾಜನ ಪದಚ್ಯುತಿಯಾದಾಗ ಸುಳ್ಯ ಮತ್ತು ಕೊಡಗಿನ ೧೧೦ ಗ್ರಾಮಗಳು ಕೊಡಗಿನಿಂದ ದ. ಕ.ಕ್ಕೆ ಸೇರ್ಪಡೆಯಾದವು.

ಈ ಬೇರ್ಪಡಿಸುವಿಕೆಯಿಂದಾಗಿ ಸುಳ್ಯ ಸೀಮೆಯಲ್ಲಿ ಕಾಣಿಸಿಕೊಂಡ ಆರ್ಥಿಕ ಸಂಕಷ್ಟಗಳು ಇವು:

- ಈವರೆಗೆ ಕೊಡಗಿನ ರಾಜನಿಗೆ ಕಂದಾಯ ಸಲ್ಲಿಸುತ್ತಿದ್ದವರು ಈಗ ಪರದೇಶಿ ಕಲೆಕ್ಟರನಿಗೆ ಕಂದಾಯ ಸಲ್ಲಿಸಬೇಕಾಗಿ ಬಂತು. ತಮ್ಮ ಸ್ವಾತಂತ್ರ್ಯ ಒಬ್ಬ ಪರದೇಶಿಯ ಕೈಯಲ್ಲಿರುವುದು ಅವರ ಅಭಿಮಾನಕ್ಕೆ ಕುತ್ತನ್ನು ಉಂಟು ಮಾಡಿತ್ತು.
- ಈವರೆಗೆ ರೈತರು ತಾವು ಬೆಳೆದ ಭತ್ತದಲ್ಲಿ ೧/೧೦ರಷ್ಟನ್ನು ಕಂದಾಯ ರೂಪದಲ್ಲಿ ಸಲ್ಲಿಸಿದರೆ ಸಾಕಿತ್ತು. ಅನಿವಾರ್ಯ ಪರಿಸ್ಥಿತಿಗಳಲ್ಲಿ ಕಂದಾಯ ಕಟ್ಟಲಾಗದಿದ್ದರೆ ರಾಜನಲ್ಲಿಗೆ ಹೋಗಿ ಅಡ್ಡಬಿದ್ದು ನಿವೇದಿಸಿಕೊಂಡಾಗ ಕಂದಾಯ ಮನ್ನ ಮಾಡಲಾಗುತ್ತಿತ್ತು. ಆದರೆ ೧೮೩೪ರಲ್ಲಿ ವಸಾಹತುಶಾಹಿ ಆಡಳಿತಕ್ಕೆ ಒಳಗಾದಾಗ ಈ ಪ್ರದೇಶದ ರೈತರು ಕಂದಾಯವನ್ನು ನಗದು ರೂಪದಲ್ಲಿ ನೀಡಬೇಕಾಗಿ ಬಂತು. ಕಷ್ಟಕಾಲದಲ್ಲಿ ವಸಾಹತುಶಾಹಿ ಸರ್ಕಾರದಿಂದ ಯಾವ ರಿಯಾಯಿತಿಯೂ ಸಿಗುತ್ತಿರಲಿಲ್ಲ.
- ದ.ಕ.ಕ್ಕೆ ಸೇರಿದ ಬಳಿಕ ಸುಳ್ಯ ಸೀಮೆಯ ರೈತರು ಆರ್ಥಿಕ ಭೂ ಕಂದಾಯ ತೆರಬೇಕಾಗಿ ಬಂತು. ಉತ್ಪನ್ನದ ಶೇ.೪೦ ರೂ. ನಿಂದ ಶೇ.೫೦ ರ ವರೆಗೆ ಕಂದಾಯ ರೂಪದಲ್ಲಿ ನೀಡಬೇಕಾಗಿ ಬಂದುದರಿಂದ, ಕೊಯ್ಲಿನ ಸಮಯದಲ್ಲೇ ಕಡಿಮೆ ಬೆಲೆಗೆ ಬೆಳೆಯನ್ನು ಮಾರಾಟ ಮಾಡಬೇಕಾದ ದುಸ್ಥಿತಿ ನಿರ್ಮಾಣವಾಯಿತು. ಬೆಳೆಯ ಬದಲು ಭೂಗಾತ್ರಕ್ಕೆ

ಅನುಗುಣವಾಗಿ ಕಂದಾಯ ನಿರ್ಣಯವಾಗಲು ಆರಂಭವಾದ ಮೇಲೆ ಪರಿಸ್ಥಿತಿ ಇನ್ನಷ್ಟು ಬಿಗಡಾಯಿಸಿತು. ಉಳುಮೆ ಮಾಡಲಾಗದ ಭೂಮಿಗೂ ರೈತರು ಕಂದಾಯ ಕೊಡಬೇಕಾಗಿ ಬಂತು. ಕಂದಾಯ ಕಟ್ಟಲಾಗದೆ ಸಾಲದಲ್ಲಿ ಬಿದ್ದ ರೈತರು ಭೂಮಿಯನ್ನು ಮಾರಾಟ ಮಾಡಬೇಕಾದ ದೈನೇಸಿ ಸ್ಥಿತಿಗೆ ಇಳಿದರು[೧೧]

- ಸುಳ್ಯ ಮತ್ತು ಪುತ್ತೂರುಗಳ ೧೧೦ ಗ್ರಾಮಗಳು ದಕ್ಷಿಣಕನ್ನಡಕ್ಕೆ ಸೇರಿದ ಮೇಲೆ ಜಿಲ್ಲಾ ಕಲೆಕ್ಟರ್ ಬಂಟವಾಳ ಕಡೆಯ ವರ್ತಕರಿಗೆ ಬೆಳ್ಳಾರೆ ಸುಳ್ಯಗಳಿಗೆ ಬಂದು ನೆಲೆಯೂರಲು ಅನುಮತಿ ನೀಡಿದ್ದು ಇನ್ನೊಂದು ಸಮಸ್ಯೆಯನ್ನು ಸೃಷ್ಟಿಸಿತು. ಈ ವರ್ತಕರು ರೈತರಿಗೆ ಸಾಲ ನೀಡಲಾರಂಭಿಸಿದರು. ರೈತರು ಕಂದಾಯ ಪಾವತಿಗಾಗಿ ಕಡಿಮೆ ಬೆಲೆಗೆ ಉತ್ಪನ್ನಗಳನ್ನು ತಮಗೆ ಮಾರಾಟ ಮಾಡಬೇಕಾದ ಅನಿವಾರ್ಯತೆಯನ್ನು ವರ್ತಕರು ಸೃಷ್ಟಿಸಿದರು. ಸಾಲ ಮತ್ತು ಕಂದಾಯ ಕಟ್ಟಲಾಗದ ರೈತರು ಭೂಮಿಗಳನ್ನು ಕಡಿಮೆ ಬೆಲೆಗೆ ತಾವು ಕೊಂಡುಕೊಂಡು ಭೂರಹಿತ ರೈತ ವರ್ಗವನ್ನು (Landless farmers) ಸೃಷ್ಟಿಸಿದರು[೧೨]. ೧೭೯೯ರಲ್ಲಿ ದ.ಕ.ವನ್ನು ಈಸ್ಟಿಂಡಿಯಾ ಕಂಪೆನಿ ತನ್ನ ಕೈಗೆತ್ತಿಕೊಂಡ ಮೇಲೆ ಬ್ರಿಟಿಷರಿಗೆ ಸ್ಥಳೀಯ ವ್ಯಾಪಾರಿಗಳು ನಿಕಟವಾದರು. ಅವರು ಮತ್ತು ಬ್ರಿಟಿಷ್ ಪ್ರಭುತ್ವ ಒಟ್ಟಾಗಿ ತಮ್ಮನ್ನು ಶೋಷಿಸುತ್ತಿರುವುದು ಸ್ಥಳೀಯ ರೈತರಿಗೆ ಸ್ಪಷ್ಟವಾಗಿ ಅರಿವಾದ ಮೇಲೆ ಅವರು ಬಂಡಾಯವೇಳದೆ ನಿರ್ವಾಹ ಇರಲಿಲ್ಲ.

ದ.ಕ.ದಲ್ಲಿದ್ದ ಉಪ್ಪು ಮತ್ತು ಹೊಗೆಸೊಪ್ಪಿನ ಸರಕಾರಿ ಏಕಸ್ವಾಮ್ಯ ವ್ಯವಸ್ಥೆ ೧೮೩೪ರಲ್ಲಿ ಸುಳ್ಯ ಮತ್ತು ಪುತ್ತೂರುಗಳಿಗೆ ಅನ್ವಯವಾಯಿತು. ಇದರಿಂದಾಗಿ ಜನರ ಅಗತ್ಯದ ಉತ್ಪನ್ನಗಳ ಬೆಲೆ ಹೆಚ್ಚಾಗಿ ಅನುಭೋಗಿಯ ಮಿಗುತೆ[೧೩] ಕಡಿಮೆಯಾಯಿತು. ಇದು ಬ್ರಿಟಿಷರ ವಿರುದ್ಧ ರೈತರ ಅಸಹನೆಗೆ ಪ್ರಮುಖ ಕಾರಣವಾಯಿತು.

೧೮೩೪ರಲ್ಲಿ ಕೊಡಗಿನ ಪತನವಾದ ಬಳಿಕ ಕರ್ನಲ್ ಫ್ರೇಸರ್ ಕೊಡಗರನ್ನು ಮತಾಂತರಿಸಲು ಯತ್ನಿಸಿದ ಎಂಬ ಗುಲ್ಲು ಹಬ್ಬಿತ್ತು. ತಾವೀಗ ಬ್ರಿಟಿಷ್ ಆಡಳಿತಕ್ಕೆ ಒಳಪಟ್ಟುದುದರಿಂದ ತಮ್ಮನ್ನು ಆಂಗ್ಲರು ಕ್ರಿಶ್ಚನ್ ಧರ್ಮಕ್ಕೆ ಪರಿವರ್ತಿಸುವ ಸಾಧ್ಯತೆಗಳಿವೆಯೆಂದು ಅಮರಸುಳ್ಯ ಸೀಮೆಯ ಕೆಲವು ಪ್ರಮುಖರು ಭಾವಿಸತೊಡಗಿದರು. ತಮ್ಮ ಮತ ಧರ್ಮಗಳ ಬಗ್ಗೆ ಅಪಾರ ನಂಬಿಕೆ ಮತ್ತು ಶ್ರದ್ಧೆಗಳನ್ನು ಬೆಳೆಸಿಕೊಂಡಿದ್ದ. ಈ ಸೀಮೆಯ ಜನರು ಬಂಡಾಯದ ಮೂಲಕ ತಮ್ಮ ಮತಾಂತರ ಪ್ರಕ್ರಿಯೆಯನ್ನು ತಡೆಗಟ್ಟಬಹುದು ಎಂದು ಭಾವಿಸಿದಂತೆ ಕಂಡು ಬರುತ್ತದೆ. ಸುಳ್ಯ ಸೀಮೆಯಲ್ಲಿ ಲಿಂಗಾಯಿತ ಮೂಲದ ಕೆಲವು ಒಕ್ಕಲಿಗ ಕುಟುಂಬಗಳು ಇದ್ದವು. ಅವುಗಳ ಮೂಲ ಪುರುಷ ಇಕ್ಕೇರಿಯ ಒಬ್ಬ

ರಾಜಕುಮಾರನಾಗಿದ್ದ[೧೪]. ತಮ್ಮ ಕುಲಕ್ಕೆ ಸೇರಿದ ಅರಸನ ಪದಚ್ಯುತಿ ಈ ಒಕ್ಕಲಿಗ ಕುಟುಂಬಗಳಿಗೆ ಅರಗಿಸಿಕೊಳ್ಳಲಾಗದ ಕಟುಸತ್ಯವಾಗಿತ್ತು. ಆರ್ಥಿಕ ಮತ್ತು ಭಾವನಾತ್ಮಕ ಕಾರಣಗಳು ಒಂದಾಗಿ ರೈತ ಬಂಡಾಯಕ್ಕೆ ಸೂಕ್ತ ವೇದಿಕೆ ನಿರ್ಮಿಸಲ್ಪಟ್ಟು ಒಬ್ಬ ಸಮರ್ಥ ನಾಯಕನ ಆಗಮನಕ್ಕೆ ಇಲ್ಲಿನ ರೈತರು ಕಾಯುವಂತಾಯಿತು.

ಕೊಡಗಿನಲ್ಲಿ ವಸಾಹತುಶಾಹಿ ಆಡಳಿತಕ್ಕೆ ಮೊದಲ ಪ್ರತಿರೋಧ ತೋರಿಸಿದ ಸ್ವಾಮಿ ಅಪರಂಪಾರ ದ.ಕ ಜಿಲ್ಲೆಯ ಕಡಬ ಮತ್ತು ಸುಬ್ರಹ್ಮಣ್ಯವನ್ನು ತನ್ನ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡಿದ್ದ. ಈ ದಂಗೆ ವಿಫಲವಾಗಿ, ಅವನ ಸೆರೆಸಿಕ್ಕ ಬಳಿಕ ಅವನ ಬಲಗೈಂತಿದ್ದ ಕಲ್ಯಾಣಸ್ವಾಮಿ ಕೊಡಗಿನಲ್ಲಿ ಗುಡ್ಡೆಮನೆ ಅಪ್ಪಯ್ಯ ಮತ್ತು ತಮ್ಮಯ್ಯರ ನೇತೃತ್ವದಲ್ಲಿ ತಂಡವೊಂದನ್ನು ಸಿದ್ಧಪಡಿಸಲು ಯತ್ನಿಸಿದರೂ ಅದರಲ್ಲಿ ಸಫಲತೆಯನ್ನು ಕಾಣಲಿಲ್ಲ. ಅಮರ ಸುಳ್ಯ ಪ್ರಾಂತ್ಯದಲ್ಲಿ ಅಪರಂಪರ ಮತ್ತು ಕಲ್ಯಾಣಸ್ವಾಮಿ ಒಬ್ಬನೇ ವ್ಯಕ್ತಿ ಎಂಬ ಸುದ್ದಿ ಹಬ್ಬಿದ್ದು ಆತನ ಬಂಧನದ ವಿಷಯ ಯಾರಿಗೂ ತಿಳಿದಿರಲಿಲ್ಲ. ಸುಳ್ಯದ ರೈತ ಮುಖಂಡರುಗಳು ದಂಡೊಂದನ್ನು ಸಿದ್ಧಪಡಿಸಿ ಕಲ್ಯಾಣಸ್ವಾಮಿ ಅವರ ನಾಯಕತ್ವ ವಹಿಸಲು ಬರುತ್ತಾನೆಂದು ಕಾದಿದ್ದರು. ಹಾಲೇರಿ ವಂಶದೊಡನೆ ರಕ್ತ ಸಂಬಂಧ ಹೊಂದಿದ್ದನೆಂದು ಭಾವಿಸಲಾದ ಕೆದಂಬಾಡಿ ರಾಮಗೌಡ, ಕೊಡಗಿನಲ್ಲಿ ರೈತರನ್ನು ಒಗ್ಗೂಡಿಸಲು ಯತ್ನಿಸುತ್ತಿದ್ದ ಗುಡ್ಡೆಮನೆ ಅಪ್ಪಯ್ಯ ಮತ್ತು ತಮ್ಮಯ್ಯ, ಕುಕ್ಕೆ ಸುಬ್ರಹ್ಮಣ್ಯ ದೇವಾಲಯ ಮೊಕ್ತೇಸರ ಕೂಜುಗೋಡು ಮಲ್ಲಪ್ಪಗೌಡ ಮತ್ತು ಆತನ ತಮ್ಮ ಅಪ್ಪಯ್ಯಗೌಡ ಕೊಡಗು – ಕೆನರಾ ಬಂಡಾಯದ ಪ್ರಮುಖ ರೈತ ಮುಖಂಡರುಗಳು.[೧೫] ಹುಲಿಕಡಿದ ನಂಜಯ್ಯ ಮತ್ತು ಪುಟ್ಟಬಸವ ಇವರೊಡನೆ ಸೇರಿಕೊಂಡ ಬಳಿಕ ಬಂಡಾಯದ ಖಚಿತ ರೂಪುರೇಷೆ ಸಿದ್ಧಗೊಂಡಿತು.

ದಕ್ಷಿಣ ಭಾರತದಲ್ಲಿ ಬ್ರಿಟಿಷರ ವಿರುದ್ಧ ಬಂಡಾಯ ಹೂಡಿದವರೊಡನೆ ಸಂಬಂಧ ಹೊಂದಿದ್ದ ಹುಲಿಕಡಿದ ನಂಜಯ್ಯ ಮೂಲತಃ ಹಾಸನ ಜಿಲ್ಲೆಯ ಅರಕಲಗೂಡಿನ ಒಬ್ಬ ಅಕ್ಕಿ ವ್ಯಾಪಾರಿ. ತನ್ನ ಮೈಮೇಲೆ ಬಿದ್ದ ಹುಲಿಯನ್ನು ಕತ್ತಿಯಿಂದ ಕಡಿದು ಓಡಿಸಿದ ಧೀರನೆಂಬುದಕ್ಕಾಗಿ ಅವನ ಹೆಸರಿನ ಹಿಂದೆ 'ಹುಲಿಕಡಿದ' ಸೇರಿಕೊಂಡಿತು. ಅವನು ಅಪರಂಪರನ ಸಂಪರ್ಕಕ್ಕೆ ಬಂದ ಬಳಿಕ ಕೆದಂಬಾಡಿ ರಾಮಗೌಡ, ಕೂಜುಗೋಡು ಮತ್ತು ಗುಡ್ಡೆಮನೆ ಸಹೋದರರ ನಡುವೆ ಸಂಪರ್ಕ ಸೇತುವಿನಂತೆ ಕೆಲಸ ಮಾಡಿದ. ಅಪರಂಪರ ಮತ್ತು ಕಲ್ಯಾಣಸ್ವಾಮಿಯ ಬಂಧನವಾದಾಗ ಆ ಸುದ್ದಿ ಎಲ್ಲೂ ಹಬ್ಬದಂತೆ ನೋಡಿಕೊಳ್ಳಬೇಕೆಂದು ದಂಗೆಯ ಐವರು ಪ್ರಮುಖ ಮುಖಂಡರುಗಳಿಗೆ ಇವನೇ ತಿಳಿಸಿರಬೇಕೆಂದು ಕಾಣುತ್ತದೆ. ಅಪರಂಪರನ ಎಡಗೈಂತಿದ್ದ ಪುಟ್ಟ ಬಸವನನ್ನು ಬದಲಿ ಕಲ್ಯಾಣಸ್ವಾಮಿಯಾಗಿ

ಪ್ರಕಟಗೊಳ್ಳುವಂತೆ ಒಪ್ಪಿಸಿ ಪೂಮಲೆ ಕೆದಂಬಾಡಿಗೆ ಅವನನ್ನು ಕರೆದುಕೊಂಡು ಬಂದವನು ಇದೇ ಹುಲಿಕಡಿದ ನಂಜಯ್ಯ[೧೬].

ಪುಟ್ಟಬಸವನು ಕಲ್ಯಾಣ ಸ್ವಾಮಿಯಾದ ಮೇಲೆ ರೈತ ಮುಖಂಡರುಗಳು ಅಮರ ಮತ್ತು ಸುಳ್ಯ ಮಾಗಣೆಗಳ ರೈತರುಗಳ ಮನವೊಲಿಸಿ ಬ್ರಿಟಿಷರ ವಿರುದ್ಧ ಬಂಡೇಳದಿದ್ದರೆ ತಮಗೆ ಅಸ್ತಿತ್ವವಿಲ್ಲವೆಂಬುದನ್ನು ಮನಗಾಣಿಸಿಕೊಟ್ಟರು. ಇಂತದೇ ಕಾರ್ಯ ಬೆಳ್ಳಾರೆ ಮತ್ತು ಪಂಜ ಮಾಗಣೆಯಲ್ಲೂ ನಡೆಯಿತು. ನಗದು ರೂಪದಲ್ಲಿ ತಮ್ಮ ಕಂದಾಯ ಸಂಗ್ರಹ ಮಾಡುತ್ತಿದ್ದ ಬೆಳ್ಳಾರೆ ಖಜಾನೆಯ ಬಗ್ಗೆ ನಾಲ್ಕು ಮಾಗಣೆಗಳ ರೈತರಿಗೆ ತೀವ್ರ ಅಸಹನೆ ಇತ್ತು. ಪ್ರತಿದಿನ ಸಾಯುತ್ತಾ ಬದುಕುವುದಕ್ಕಿಂತ ಒಮ್ಮೆಲೇ ಸತ್ತು ಬಿಡುವುದು ಉತ್ತಮ ಎಂದು ಅವರು ಅಂದುಕೊಂಡಿದ್ದರೆ ಅದರಲ್ಲಿ ಆಶ್ಚರ್ಯವಿರಲಿಲ್ಲ. ಕೆದಂಬಾಡಿ ರಾಮಗೌಡ ಬಂಡೇಳಲು ಸಿದ್ಧರಾದ ಸುಮಾರು ೧,೨೦೦ ರೈತರನ್ನು ತನ್ನ ಮನೆಯ ಸಮೀಪದ ಪೂಮಲೆಯ ದಟ್ಟ ಅರಣ್ಯದಲ್ಲಿ ಶಸ್ತ್ರಾಸ್ತ್ರ ತರಬೇತಿಗಾಗಿ ಒಗ್ಗೂಡಿಸಿದ. ಇವರಿಗೆ ಗುಡ್ಡೆ ಮನೆ ಅಪ್ಪಯ್ಯ, ಚಿಕ್ಕವೀರನಿಗೆ ಬಂದೂಕ ಪ್ರಯೋಗ ಕಲಿಸಿದ ಚೆಟ್ಟಿಕುಡಿಯ ಮತ್ತು ಕರ್ತು ಕುಡಿಯ ಸಹೋದರರು ಶಸ್ತ್ರಾಸ್ತ್ರ ತರಬೇತಿ ನೀಡಿದರು. ರೈತರು ಕೆದಂಬಾಡಿ ಪೂಮಲೆಗೆ ದೊಡ್ಡ ಸಂಖ್ಯೆಯಲ್ಲಿ ಹೋಗಿಬರುತ್ತಿರುವುದು ಬ್ರಿಟಿಷರ ಸಂಶಯಕ್ಕೆ ಎಡೆಮಾಡಿ ಕೊಡಬಾರದೆಂಬ ಕಾರಣಕ್ಕಾಗಿ ಕೆದಂಬಾಡಿ ರಾಮಗೌಡನ ಮಗನ ವಿವಾಹದ ಸಿದ್ಧತೆ ನಡೆಯುತ್ತಿದೆ ಎಂಬ ಸುದ್ದಿ ಹಬ್ಬಿಸಲಾಯಿತು.[೧೭] ಮಾನಸಿಕವಾಗಿ ಮತ್ತು ದೈಹಿಕವಾಗಿ ಬ್ರಿಟಿಷರ ವಿರುದ್ಧ ಹೋರಾಟಕ್ಕೆ ಪ್ರಬಲವಾದ ರೈತ ದಂಡೊಂದು ಸಿದ್ಧಗೊಂಡಿತು.

ರೈತ ಬಂಡಾಯದ ರೂಪುರೇಷೆಯನ್ನು ಕೆದಂಬಾಡಿ ರಾಮಗೌಡ ಮತ್ತು ಹುಲಿಕಡಿದ ನಂಜಯ್ಯ ಸಿದ್ಧಗೊಳಿಸಿದಂತೆ ಕಂಡುಬರುತ್ತದೆ. ಹುಲಿಕಡಿದ ನಂಜಯ್ಯನ ವ್ಯೂಹ ರಚನೆ ತುಂಬಾ ಸಮರ್ಪಕವಾಗಿತ್ತು. ಗುಡ್ಡೆಮನೆ ಸೋದರರ ನೇತೃತ್ವದಲ್ಲಿ ಒಂದು ರೈತಸೇನೆ ಮಡಿಕೇರಿಯನ್ನು ಮುತ್ತುವುದು; ಕಲ್ಯಾಣ ಸ್ವಾಮಿ ನಾಮಾಂಕಿತ ಪುಟ್ಟ ಬಸವನ ನೇತೃತ್ವದಲ್ಲಿ ಬೆಳ್ಳಾರೆಯಿಂದ ಪುತ್ತೂರಿಗಾಗಿ ಮಂಗಳೂರಿಗೆ, ಕೂಜುಗೋಡು ಸಹೋದರರ ನೇತೃತ್ವದಲ್ಲಿ ಬಿಸಿಲೆಘಾಟಿ ಮಡಿಕೇರಿಗೆ; ಕುಂಚಡ್ಕ ತಿಮ್ಮ ಮತ್ತು ಕುಡೆಕಲ್ಲು ಪುಟ್ಟರ ನೇತೃತ್ವದಲ್ಲಿ ಬೇಕಲ, ಕುಂಬಳೆಗಾಗಿ ಮಂಗಳೂರಿಗೆ ಹೀಗೆ ನಾಲ್ಕು ತಂಡಗಳಲ್ಲಿ ರೈತರನ್ನು ವಿಭಜಿಸಲಾಯಿತು[೧೮]. ಅದರಲ್ಲಿ ಬಹುಸಂಖ್ಯಾತ ರೈತರನ್ನು ಪೂಮಲೆಯಿಂದ ಬೆಳ್ಳಾರೆಗಾಗಿ ಮಂಗಳೂರಿಗೆ ಹೋಗುವ ತಂಡದಲ್ಲಿ ನಿಯೋಜಿಸಲಾಯಿತು. ಮಂಗಳೂರಿನಲ್ಲಿದ್ದ ಆ ಬ್ರಿಟಿಷ್ ಸೈನ್ಯದ ಸಾಮರ್ಥ್ಯ ಬಹಳ ಕಡಿಮೆ ಎಂದು ಬಂಡುಕೋರರು ಅಂದಾಜಿಸಿದ್ದು ಇದಕ್ಕೆ ಒಂದು ಕಾರಣವಾದರೆ ಪಂಜದ ಒಬ್ಬ

ಜ್ಯೋತಿಷಿ[೧೯] ಮಂಗಳೂರಿಗೆ ಹೋದರೆ ಗೆಲುವು ಸಾಧ್ಯವಾಗುತ್ತದೆ ಎಂದು ಹೇಳಿದ್ದನ್ನು ಮುಗ್ಧರಾದ ರೈತರು ನಂಬಿದ್ದು ಇನ್ನೊಂದು ಕಾರಣವಾಗಿತ್ತು.

"ಕೆದಂಬಾಡಿ ರಾಮಗೌಡನು ಒಬ್ಬ ಮುದುಕ ಕೊಂಕಣಿ ಪಂಜದ ಮುಜತ್ತಾಯ ನೆಂಬಾತನಲ್ಲಿ ಭವಿಷ್ಯದ ಗಣಿತ ಪ್ರಕಾರ ಸೈನ್ಯವನ್ನು ಎಲ್ಲಿಗೆ ಜಯಪ್ರದವಾಗುವಂತೆ ಕೊಂಡೊಯ್ಯಬಹುದೆಂದು ಕೇಳಿದ. ಅವರಿಗೆ ಸಿಕ್ಕಿದ ಗಣಿತ ಸ್ಥಿತಿಯಲ್ಲಿ ಅವರು ಮೊದಲು ಕೊಡಗಿನ ಕಡೆ ಹೋದರೆ ಜಯಗಳಿಸಲು ಸಾಧ್ಯವಾಗುವುದಿಲ್ಲ. ಆದರೆ ಅವರು ಮೊದಲು ಮಂಗಳೂರು ಕಡೆಗೆ ಹೋದರೆ ಹೆಚ್ಚಿನ ಬೆಂಬಲವನ್ನು ಗಳಿಸುವ ಅದೃಷ್ಟವಿದೆ. ಆ ಮೇಲೆ ಕೊಡಗಿನ ಕಡೆ ಹೋಗಬಹುದು. ರಾಮಯ್ಯಗೌಡ ಅದೇ ಪ್ರಕಾರ ದೇರಾಜೆ ಬಚ್ಚ, ಗುಡ್ಡದ ಸುಬ್ಬಪ್ಪ, ಮಡಿಯಾಲ ತಿಮ್ಮ ಹೋಮಯ್ಯ ತಿಮ್ಮ ಮೊದಲಾದವರೊಂದಿಗೆ ಸೈನ್ಯವನ್ನು ಮಂಗಳೂರು ಕಡೆಗೆ ಕೊಂಡೊಯ್ಯಲು ನನಗೆ ಹೇಳಿದರು[೨೦].

೭.೨ ಆರ್ಥಿಕ ಬಂಡಾಯದ ಆರಂಭ ಮತ್ತು ಪ್ರಸರಣ

ರೈತರು ಆರಂಭದಲ್ಲಿ ಎಪ್ರಿಲ್ ೬ ರಂದು ಬಂಡೇಳುವುದೆಂದು ತೀರ್ಮಾನಿಸಿದ್ದರೂ ರಾಮಪ್ಪಯ್ಯನಿಂದಾಗಿ ನಿಗದಿತ ದಿನಕ್ಕಿಂತ ಒಂದು ವಾರ ಮುಂಚಿತವಾಗಿ ದಂಗೆ ಆರಂಭಿಸುವುದು ಅನಿವಾರ್ಯವಾಯಿತು. ಈ ರಾಮಪ್ಪಯ್ಯ ದಿವಾನ ಲಕ್ಷ್ಮಿನಾರಾಯಣನ ಸೋದರ. ಸುಳ್ಯ ಸೀಮೆಯಲ್ಲಿ ಇವನು ಅಮಲ್ದಾರನಾಗಿದ್ದು ತನ್ನ ಸೋದರ ದಿವಾನ ಲಕ್ಷ್ಮಿನಾರಾಯಣನ ಹೆಸರಿನಲ್ಲಿ ತೀರಾ ದಬ್ಬಾಳಿಕೆ ನಡೆಸುತ್ತಿದ್ದ. ೧೬೨೪ರಲ್ಲಿ ಕೆಳದಿಯ ವೆಂಕಟಪ್ಪ ನಾಯಕ ಸುಳ್ಯ ಸಮೀಪದ ಕಾಂತಮಂಗಲದಲ್ಲಿ ಕೋಟೆಯೊಂದನ್ನು ನಿರ್ಮಿಸಿ ಕೋಟೆ ಕ್ಷತ್ರಿಯರನ್ನು ಕಾವಲಿಗಿರಿಸಿದ್ದ. ರಾಮಪ್ಪಯ್ಯ ಇಲ್ಲಿಂದಲೇ ತನ್ನ ಅಧಿಕಾರ ಚಲಾಯಿಸಿ ಬಡಪಾಯಿ ರೈತರ ಜಮೀನನ್ನು ನಾನಾ ಕಾರಣ ನೀಡಿ ವಶಪಡಿಸಿಕೊಳ್ಳುತ್ತಿದ್ದ. ಸುಳ್ಯ, ಜಾಲ್ಸೂರು, ಆಲೆಟ್ಟಿ, ಕೋಲ್ಚಾರು, ಅಜ್ಜಾವರ, ಮಂಡೆಕೋಲುಗಳ ಕಡೆಯ ಅವಿದ್ಯಾವಂತ ಜನಾಂಗ ಈತನ ಮಾತನ್ನು ನಂಬಿ ಖಾಲಿ ಕಾಗದಕ್ಕೆ ಹೆಬ್ಬೆಟ್ಟು ಒತ್ತಿ ತಮ್ಮ ಆಸ್ತಿಯನ್ನು ಕಳೆದುಕೊಳ್ಳುತ್ತಿದ್ದರು.[೨೧]

ಆತನನ್ನು ಹತ್ತೂರ ದೊರೆ ಎಂದು ಸ್ವಯಂ ಆತನೇ ಕರೆದುಕೊಳ್ಳುತ್ತಿದ್ದನು. ಕಾಂತಮಂಗಲಕ್ಕೆ ಸಮೀಪ ಅಟ್ಲೂರು ಎಂಬ ಪ್ರದೇಶವಿತ್ತು. ಕೆಲವರು ಹತ್ತೂರು ದೊರೆಯನ್ನು ಅಟ್ಲೂರು ದೊರೆ ಮಾಡಿದ್ದೂ ಇದೆ.[22] ಇವನು ನೂರು ಜನ ಹೊಲೆಯರ ದಂಡನ್ನು ಸಿದ್ಧಪಡಿಸಿ ಸುಳ್ಯ ಸೀಮೆಯಲ್ಲಿ ಭಯೋತ್ಪಾದನೆ ಉಂಟುಮಾಡಿದ್ದ. ಕಾಂತಮಂಗಲದ ಅಣ್ಣಿಗೌಡ

ಎಂಬಾತನ ಆಸ್ತಿಯನ್ನು ಅಕ್ರಮವಾಗಿ ಈತ ವಶಪಡಿಸಿಕೊಂಡದ್ದನ್ನು ಕೆದಂಬಾಡಿ ರಾಮಗೌಡ ಪ್ರಶ್ನಿಸಿದ್ದ. ರಾಮಪ್ಪಯ್ಯನಿಂದ ಮೋಸ ಹೋದವರಲ್ಲಿ ಬಹುತೇಕರು ಸುಳ್ಯದ ಒಕ್ಕಲಿಗ ಸಮುದಾಯಕ್ಕೆ ಸೇರಿದವರಾದುದರಿಂದ ಒಕ್ಕಲಿಗರಿಗೆ ಅವನ ಬಗ್ಗೆ ದ್ವೇಷವೂ, ಅವನು ದಿವಾನನ ತಮ್ಮ ಮತ್ತು ಸುಳ್ಯದ ಅಮಲ್ದಾರನಾದುದರಿಂದ ಅವನ ಬಗ್ಗೆ ಭೀತಿಯೂ ಏಕಕಾಲದಲ್ಲಿದ್ದವು.

ಕೊಡಗು ವಸಾಹತುಶಾಹಿ ಆಡಳಿತಕ್ಕೆ ಒಳಪಟ್ಟ ಬಳಿಕ ಆಡಳಿತಾಧಿಕಾರಿ ಲೀಹಾರ್ಡಿಯು ದಿವಾನ ಲಕ್ಷ್ಮೀ ನಾರಾಯಣನನ್ನು ಬಂಧನದಲ್ಲಿ ಇರಿಸಿದ್ದ. ಆದರೆ ಅವನ ಸಹೋದರ ರಾಮಪ್ಪಯ್ಯನನ್ನು ಅಮಲ್ದಾರಿಕೆಯಿಂದ ವಜಾಗೊಳಿಸಿರಲಿಲ್ಲ. ಇದರ ಹಿಂದೆ ಎರಡು ಕಾರಣಗಳಿದ್ದಂತೆ ಕಂಡುಬರುತ್ತದೆ. ಮೊದಲನೆಯದು, ಸುಳ್ಯ, ಬೆಳ್ಳಾರೆ ಪ್ರದೇಶಗಳಲ್ಲಿ ಗಣನೀಯ ಸಂಖ್ಯೆಯಲ್ಲಿದ್ದ ಮತ್ತು ಬಹುತೇಕವಾಗಿ ಕರಣಿಕ ವೃತ್ತಿಯಲ್ಲಿದ್ದ ಸ್ಥಾನಿಕ ಬ್ರಾಹ್ಮಣ ಸಮುದಾಯವನ್ನು ಎದುರುಹಾಕಿಕೊಳ್ಳುವುದು ರಾಜಕೀಯವಾಗಿ ಜಾಣತನದ ನಡಿಗೆಯಲ್ಲ ಎನ್ನುವುದು ಲೀಹಾರ್ಡಿಯ ಅಭಿಪ್ರಾಯವಾಗಿರಬೇಕು. ಎರಡನೆಯದು, ಸ್ವಲ್ಪ ಹೊಗಳಿದರೆ ಯಾವ ಕೆಲಸವನ್ನೂ ಮಾಡಬಲ್ಲ ರಾಮಪ್ಪಯ್ಯನಂತಹ ನಿಷ್ಠನನ್ನು ಕಳಕೊಳ್ಳುವುದು ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಬುದ್ಧಿವಂತಿಕೆಯಾಗಿರಲಿಲ್ಲ. ಈ ಕಾರಣಗಳಿಂದಾಗಿ ಅಮರ ಸುಳ್ಯ ಪ್ರದೇಶ ದ.ಕ ಕ್ಕೆ ಸೇರಿದ ಮೇಲೂ ಲೀಹಾರ್ಡಿಯಿಂದಾಗಿ ಬೋಪು ದಿವಾನನ ಮೂಲಕ ರಾಮಪ್ಪಯ್ಯ ಕೊಡಗಿನ ಆಡಳಿತವನ್ನು ಎದುರು ಹಾಕಿಕೊಳ್ಳಲು ಹೋಗಲಿಲ್ಲ. ಅವನು ತನ್ನ ವ್ಯವಹಾರಗಳನ್ನು ಬೆಳ್ಳಾರೆಯ ಖಜಾನೆಯಲ್ಲಿ ಮಾಡಬೇಕಾಗಿದ್ದರೂ ಮಡಿಕೇರಿಯೆಡೆಗೆ ಅವನ ನಿಷ್ಠೆ ಏನೇನೂ ಕಡಿಮೆಯಾಗಿರಲಿಲ್ಲ.

ಬ್ರಿಟಿಷರ ವಿರುದ್ಧ ಬಂಡೇಳಬೇಕೆಂದು ಸಂಕಲ್ಪಿಸಿಕೊಂಡಿದ್ದ ಸುಳ್ಯದ ರೈತ ಮುಖಂಡರುಗಳಿಗೆ ರಾಮಪ್ಪಯ್ಯ ವಸ್ತುಶಃ ಗಂಟಲ ಮುಳ್ಳಾಗಿದ್ದ.[೩೩] ಆತನನ್ನು ಒಪ್ಪಿಸಿ ಬಂಡಾಯ ತಂಡಕ್ಕೆ ಸೇರ್ಪಡಿಸಲು ಗುಡ್ಡೆಮನೆ ಅಪ್ಪಯ್ಯನ ನೇತೃತ್ವದಲ್ಲಿ ಮಾಡಿದ ಪ್ರಯತ್ನಗಳು ವಿಫಲವಾದವು. ರೈತ ಸೇನೆಯ ನಾಯಕತ್ವವನ್ನು ತನಗೆ ಕೊಟ್ಟರೆ ಮಾತ್ರ ತಾನು ಬಂಡಾಯಗಾರರೊಡನೆ ಸೇರಲು ಸಾಧ್ಯ ಎಂದು ರಾಮಪ್ಪಯ್ಯ ನೇರವಾಗಿ ಹೇಳಿದ. ಆತನನ್ನು ಬಂಡಾಯದ ನಾಯಕನನ್ನಾಗಿ ಮಾಡುವುದರಲ್ಲಿ ಎರಡು ತೊಡಕುಗಳಿದ್ದವು. ಮೊದಲನೆಯದು ಬಂಡಾಯದ ನಾಯಕನಾಗಿ ರಾಜವಂಶೀಯನೆಂದು ಪ್ರಚಾರ ಪಡೆದ ಕಲ್ಯಾಣ ಸ್ವಾಮಿ ನಾಮಾಂಕಿತ ಪುಟ್ಟಬಸವ ಈಗಾಗಲೇ ಪೂಮಲೆಯಲ್ಲಿ ಕಾಣಿಸಿಕೊಂಡಿದ್ದ. ರಾಜ ವಂಶೀಯರಲ್ಲದವರಿಗೆ ಜನರ ಬೆಂಬಲ ಸಿಗುವ ಸಂಭವವಿರಲಿಲ್ಲ. ಎರಡನೆಯದು

ರಾಮಪ್ಪಯ್ಯ ಈಗಾಗಲೇ ತನ್ನ ದರ್ಪ ದಬ್ಬಾಳಿಕೆಗಳಿಂದ ಹೆಸರು ಕೆಡಿಸಿಕೊಂಡಿದ್ದ. ಸುಳ್ಯದ ಬಹುಸಂಖ್ಯಾತ ಗೌಡರು ಅವನನ್ನು ನಾಯಕನೆಂದು ಒಪ್ಪಿಕೊಳ್ಳಲು ಸಾಧ್ಯವಿರಲಿಲ್ಲ.

ರಾಮಪ್ಪಯ್ಯನಿಗೆ ಕೊಡಗಿನ ಸಿಂಹಾಸನದ ನಿಜವಾದ ಹಕ್ಕುದಾರ ಕಲ್ಯಾಣ ಸ್ವಾಮಿ ನಾಮಾಂಕಿತ ಪುಟ್ಟಬಸವ ಅಲ್ಲವೆಂಬ ಸತ್ಯ ತಿಳಿದಿತ್ತು. ಅವನು ಅನಿವಾರ್ಯವಾಗಿ ಕೆದಂಬಾಡಿ ರಾಮಗೌಡನ ಕಡೆಯವರು ತನ್ನನ್ನು ಬಂಡಾಯದ ನಾಯಕನೆಂದು ಒಪ್ಪಿಕೊಂಡಾರೆಂಬ ನಿರೀಕ್ಷೆಯಲ್ಲಿದ್ದ. ಅದು ಸಾಧ್ಯವಿಲ್ಲವೆಂದು ರಾಮಗೌಡ ಖಡಾಖಂಡಿತವಾಗಿ ತಿಳಿಸಿದಾಗ ಅವನನ್ನು ಮಾತುಕತೆಗೆಂದು ಅಜ್ಜಾವರದ ತನ್ನ ಮನೆಗೆ ಕರೆಯಿಸಿ ಅವನ ಆಸ್ತಿಯನ್ನು ತನಗೆ ಬಿಟ್ಟುಕೊಟ್ಟಂತೆ ಕರಾರು ಸಿದ್ಧಪಡಿಸಿ ಹೆಬ್ಬೆಟ್ಟು ಗುರುತು ಹಾಕಿಸಿಕೊಂಡ. ಅಂದಿನಿಂದ ಆತನನ್ನು ನಿವಾರಿಸದೆ ರೈತ ಕ್ರಾಂತಿ ಆರಂಭಿಸಲು ಸಾಧ್ಯವೇ ಇಲ್ಲ ಎಂಬ ಸತ್ಯ ರಾಮಗೌಡನಿಗೆ ಅರಿವಾಗಿ ಅವನು ಭೇದೋಪಾಯದಿಂದ ರಾಮಪ್ಪಯ್ಯನ ಕಾವಲು ಭಟ್ಟರನ್ನು ಮತ್ತು ಸೇವಕರನ್ನು ತನ್ನ ಪಕ್ಷ ವಹಿಸುವಂತೆ ಮಾಡಿದ. ರಾಮಪ್ಪಯ್ಯನಿಗೆ ಇದು ಅರಿವಾಗಿ ಅವನು ಬಂಡಾಯದ ವಿಷಯವನ್ನು ಮಂಗಳೂರಿನ ಕಲೆಕ್ಟರ್‌ನಿಗೆ ತಿಳಿಸುವ ಬೆದರಿಕೆ ಹಾಕಿದ. ಮಾತುಕತೆಗಳ ಮೂಲಕ ಸಮಸ್ಯೆಯನ್ನು ಬಗೆಹರಿಸಿಕೊಳ್ಳುವ ಎಂದು ಕೆದಂಬಾಡಿ ರಾಮಗೌಡ ಆಹ್ವಾನ ನೀಡಿದಾಗ ರಾಮಪ್ಪಯ್ಯನಿಗೆ ಒಪ್ಪದೇ ನಿರ್ವಾಹವಿರಲಿಲ್ಲ. ಹಾಗೆ ಮಾತುಕತೆಗೆ ಬಂದ ರಾಮಪ್ಪಯ್ಯನನ್ನು ಮಾತಿಗೆ ಮಾತು ಬೆಳೆದು ಬಂಡಾಯಗಾರರು ಮದುವೆಗದ್ದೆಯಲ್ಲಿ ಕೊಂದು ಹಾಕಿದರು[೨೪] ಬಂಡಾಯಗಾರರು ರಾಮಪ್ಪಯ್ಯನ ಅಂತ್ಯವನ್ನು ಬಂಡಾಯದ ಆರಂಭವೆಂದು ಬಂಡಾಯಗಾರರು ಪರಿಗಣಿಸಿದರು.

೧೮೩೭ರ ಮಾರ್ಚ್ ೩೦ ರಂದು ಪೂಮಲೆಯಿಂದ ಹೊರಟ ೧,೫೦೦ಕ್ಕಿಂತಲೂ ಹೆಚ್ಚು ರೈತರ ದಂಡು ಬೆಳ್ಳಾರೆಗೆ ಹೋಗುವಾಗ ಎಲ್ಲೂ ಪ್ರತಿರೋಧ ಎದುರಾಗಲಿಲ್ಲ. ಕೂಜುಗೋಡು ಕಟ್ಟೆಮನೆಯವರು ಸುಳ್ಯ ಪರಿಸರದ ಗೌಡ ಸಮುದಾಯದ ಅನಧಿಕೃತ ನ್ಯಾಯಾಲಯದಂತೆ ಕಾರ್ಯ ನಿರ್ವಹಿಸುತ್ತಿದ್ದವರು ಪಟೇಲ ಮಲ್ಲಪ್ಪ ಮತ್ತು ಆತನ ತಮ್ಮ ಅಪ್ಪಯ್ಯನ ಬಗ್ಗೆ ಹಾಗೂ ರೈತ ಮುಖಂಡ ಕೆದಂಬಾಡಿ ರಾಮಗೌಡನ ಬಗ್ಗೆ ರೈತಾಪಿ ಜನರಿಗೆ ಇದ್ದ ಗೌರವವನ್ನು ಬಂಡವಾಳವನ್ನಾಗಿ ಮಾಡಿಕೊಂಡು ಅಮರಸುಳ್ಯ ಮತ್ತು ಬೆಳ್ಳಾರೆ ಮಾಗಣೆಯ ರೈತರುಗಳನ್ನು ಇವರು ತಮ್ಮ ಪರವಾಗಿ ನಿಲ್ಲುವಂತೆ ಮಾಡಿದರು.[೨೫] ಬ್ರಿಟಿಷರ ಶೋಷಕ ಕಂದಾಯ ವ್ಯವಸ್ಥೆಯ ಪರಿಣಾಮವಾಗಿ ಅನೇಕ ರೈತರು ಬಂಟವಾಳ ಕಡೆಯ ಕೊಂಕಣಿ ವ್ಯಾಪಾರಸ್ಥರಿಗೆ ತಮ್ಮ ಭೂಮಿಯನ್ನು ಮಾರಾಟ ಮಾಡಬೇಕಾಗಿ ಬಂದ ದುರವಸ್ಥೆ ಇದಕ್ಕೆ ಬಹುಮುಖ್ಯ ಕಾರಣವಾಗಿತ್ತು. ಮಾರ್ಕ್ ಕಬ್ಬನ್ ಅಭಿಪ್ರಾಯಪಡುವಂತೆ "ಪಿತ್ರಾರ್ಜಿತ ಆಸ್ತಿಯನ್ನು

ಕಳಕೊಳ್ಳುವುದು ಭಾರತೀಯ ರೈತರ ಪಾಲಿಗೆ ಅತ್ಯಂತ ದೊಡ್ಡ ದುರಾದೃಷ್ಟ. ಕೆಳಕೊಡಗಿನ ನಿವಾಸಿಗಳು ತಮ್ಮ ತೊಂದರೆಗಳನ್ನು ಸರಕಾರಕ್ಕೆ ನಿವೇದಿಸಲು ಮುಂದಾಗಿದ್ದರೆಂದರೆ ಅವರು ವಿದೇಶೀ ಜಮೀನುದಾರಿಕೆಯ ವಿರುದ್ಧವಾಗಿದ್ದಾರೆಂಬುದರ ಸೂಚನೆ”,[೨೬] ಈ ಮಾತುಗಳಲ್ಲಿನ ಒಳಾರ್ಥದ ಪ್ರಕಾರ ಕೊಂಕಣಿಗಳು ಕೊಳ್ಳುತ್ತಿದ್ದ ರೈತರ ಭೂಮಿ ಅಂತಿಮವಾಗಿ ಬ್ರಿಟಿಷರ ಯಜಮಾನಿಕೆಗೆ ಒಳಪಡುತ್ತಿತ್ತು. ಇದರ ಅರಿವು ಬಂಡಾಯದ ನಾಯಕರಿಗಿತ್ತು. ಅವರು ತಮ್ಮ ಭೂಮಿಯನ್ನು ತಾವು ಶಾಶ್ವತವಾಗಿ ವಿದೇಶಿಯರಿಗೆ ಕಳಕೊಳ್ಳುತ್ತಿದ್ದೇವೆ ಎಂಬ ಭೀತಿಗೆ ಒಳಗಾಗಿ ವಸಾಹತುಶಾಹಿಯನ್ನು ಎದುರಿಸಲು ಸಾಕಷ್ಟು ತಯಾರಿ ಮಾಡಿಕೊಂಡಂತೆ ಕಂಡುಬರುತ್ತದೆ. ಅದಲ್ಲದಿರುತ್ತಿದ್ದರೆ ಅಪರಂಪಾರ ಮತ್ತು ನಿಜವಾದ ಕಲ್ಯಾಣಸ್ವಾಮಿ ತಮ್ಮ ಗುರಿ ಸಾಧನೆಯಲ್ಲಿ ವಿಫಲರಾದ ಮೇಲೂ ಬದಲಿ ಕಲ್ಯಾಣಸ್ವಾಮಿಯನ್ನು ಅವರು ಸೃಷ್ಟಿಸುವ ಅಗತ್ಯವಿರಲಿಲ್ಲ.

ಸುಳ್ಯ ಸೀಮೆಯ ರೈತರು ಕರ್ನಲ್ ಫ್ರೇಸರ್‌ನ ಚಟುವಟಿಕೆಯ ಹಿಂದೆ ಸ್ಥಳೀಯರನ್ನು ಪ್ರಾಟೆಸ್ಟಂಟ್ ಕ್ರಿಶ್ಚಿಯನ್ನರನ್ನಾಗಿ ಪರಿವರ್ತಿಸುವ ಹುನ್ನಾರವಿದೆ ಎಂಬ ರೈತ ನಾಯಕರ ಪ್ರಚಾರವನ್ನು ನಂಬಿದಂತೆ ಕಂಡುಬರುತ್ತದೆ. ೧೮೩೪ರಲ್ಲಿ ಕರ್ನಲ್ ಫ್ರೇಸರ್ ಒಂದು ಪತ್ರದಲ್ಲಿ ಹೀಗೆ ಉಲ್ಲೇಖಿಸಿದ್ದ. “ಈ ದೇಶದ ಮೂಢನಂಬಿಕೆಗಳ ಬಗ್ಗೆ ಜನರಲ್ಲಿ ಯಾವುದೇ ಭಾವತೀವ್ರತೆ ಇದ್ದಂತಿಲ್ಲ. ಇತರ ಭಾರತೀಯರಿಗಿಂತ ಇವರು ಮುಕ್ತ ಮನಸ್ಸಿನವರಂತಿದ್ದು ಕ್ರೈಸ್ತ ಧರ್ಮವನ್ನು ಒಪ್ಪಿಕೊಳ್ಳುವವರಂತೆ ಕಂಡುಬರುತ್ತಾರೆ.[೨೭]

ಕರ್ನಲ್ ಫ್ರೇಸರ್‌ನ ಈ ಮಾತುಗಳು ಮಡಿಕೇರಿ ಮತ್ತು ವಿರಾಜಪೇಟೆ ಭಾಗದ ಕೊಡವರನ್ನು ಉಲ್ಲೇಖಿಸಿ ಬರೆದಂತಿದೆ. ಕೊಡವ ಜನಾಂಗದ ಮೂಲ ಯಾವುದೆಂಬುದರ ಬಗ್ಗೆ ಅನೇಕ ಗೊಂದಲಗಳಿದ್ದರೂ ಅವರು ಮಲೆಯಾಳಿ ಪ್ರಭಾವದ ಬುಡಕಟ್ಟು ಸಂಸ್ಕೃತಿಗೆ ಸೇರಿದವರೆಂದು ಬಹುತೇಕ ವಿದ್ವಾಂಸರು ಭಾವಿಸುತ್ತಾರೆ.[೨೮] ದೇವಿಪ್ರಸಾದರು ಕೊಡವ ಜನಾಂಗಕ್ಕೆ ಹೆಚ್ಚೆಂದರೆ ೨೫೦ ವರ್ಷಗಳ ಇತಿಹಾಸ ಇರಬಹುದೆಂದು ಅಭಿಪ್ರಾಯಪಡುತ್ತಾರೆ. ಕೊಡವರಲ್ಲಿ ಸಂಘಟನೆಯ ಕೊರತೆಯಿತ್ತು ಮತ್ತು ಸಾಮಾಜಿಕವಾಗಿ ರಾಜನ ಆಸ್ಥಾನವನ್ನು ಹೊರತುಪಡಿಸಿದರೆ ಬೇರೆಲ್ಲೂ ನೆಲೆಗಳಿರಲಿಲ್ಲ. ಬ್ರಿಟಿಷರು ಅವರ ಅನೈಕ್ಯತೆಯ ದುರುಪಯೋಗ ಪಡೆದುಕೊಂಡು ಬೋಪು ದಿವಾನನ ಮೂಲಕ ಅವರಲ್ಲಿ ಬಹುತೇಕರನ್ನು ತಮ್ಮ ಕಡೆಗೆ ಒಲಿಸಿಕೊಂಡರು. ಚಿಕ್ಕವೀರ ರಾಜ ತನ್ನ ಕೆಲವು ದೌರ್ಬಲ್ಯಗಳಿಂದಾಗಿ ಕೊಡವರ ಆಗ್ರಹಕ್ಕೆ ತುತ್ತಾಗಿದ್ದ[೨೯]. ಏನಿದ್ದರೂ ಅಸಂಘಟಿತ ಜನಾಂಗವೊಂದು ಬ್ರಿಟಿಷರನ್ನು ತಮ್ಮ ವಿಮೋಚಕರೆಂದು ಭಾವಿಸಿದ್ದರೆ ಅದರಲ್ಲಿ ಆಶ್ಚರ್ಯವಿರಲಿಲ್ಲ. ಅಲ್ಲದೇ ಹಾಲೇರಿ ಅರಸರುಗಳು

ತಮಗೆ ಇಷ್ಟಬಂದ ಹೆಣ್ಣಿಗೆ ಅಂಗಕಟ್ಟಿ ಮದುವೆಯಾಗುವುದು ಮತ್ತು ತಮಗೆ ಇಷ್ಟವಾದ ಯುವಕರನ್ನು ಅಂಗಕಟ್ಟಿಸಿ ಅಳಿಯಂದಿರನ್ನಾಗಿ ಮಾಡಿಕೊಳ್ಳುವುದು ಆಗಿನ ವ್ಯವಸ್ಥೆಯಲ್ಲಿ ಎಲ್ಲರ ಒಪ್ಪಿಗೆಯ ಒಂದು ವಿಧ್ಯಮಾನವಾಗಿತ್ತು. ಕರ್ನಲ್ ಫ್ರೇಸರ್‌ನು ಇವನ್ನೆಲ್ಲ ಪರಿಗಣಿಸಿ ಅಂತದ್ದೊಂದು ಪತ್ರ ಬರೆದಿರಬೇಕು.

ಆದರೆ ಅಮರಸುಳ್ಯ ಸೀಮೆಯ ಜನರಲ್ಲಿ ಬ್ರಿಟಿಷರ ಬಗ್ಗೆ ಭೀತಿಯೊಂದನ್ನು ಬಿಟ್ಟರೆ ಬೇರಾವ ಭಾವನೆಯೂ ಇದ್ದುದಕ್ಕೆ ಯಾವುದೇ ಸಾಕ್ಷ್ಯಾಧಾರಗಳಿಲ್ಲ. ಟಿಪ್ಪುವಿನ ಕಾಲದಲ್ಲಾದ ಮತ್ತು ಹಾಲೇರಿ ಅರಸರುಗಳು ಮಾಡಿದ ಸೀಮಿತ ಉದ್ದೇಶದ ಮತಾಂತರಗಳನ್ನು ಅವರು ಒಪ್ಪಿಕೊಂಡಿದ್ದರು. ಸುಳ್ಯದ ಒಕ್ಕಲಿಗ ಸಮುದಾಯದಲ್ಲಿ ಚಾರಿತ್ರಿಕವಾಗಿ ಸಾಂಸ್ಕೃತಿಕ ಮಿಶ್ರಣವಾದುದನ್ನು ಸಮರ್ಥಿಸುವ ಐತಿಹ್ಯಗಳು ಸಾಕಷ್ಟಿವೆ[೩೦]. ಪರಕೀಯ ಸಂಸ್ಕೃತಿಯ ಬಗ್ಗೆ ಒಕ್ಕಲಿಗ ಜನಾಂಗದಲ್ಲಿ ಭೀತಿ ಇದ್ದದು ಸಹಜ. ಆದರೆ ಮತಾಂತರದ ಭೀತಿಯಿಂದ ಇಲ್ಲಿನ ರೈತರು ಬ್ರಿಟಿಷರನ್ನು ವಿರೋಧಿಸಿದರು ಎಂಬುದಕ್ಕೆ ಸಾಕಷ್ಟು ಸಾಕ್ಷ್ಯಾಧಾರಗಳಿಲ್ಲ. ತಮ್ಮ ಭೂಮಿಯನ್ನು ಕಳಕೊಳ್ಳುವ ಭೀತಿಯೇ ಇವರನ್ನು ದಂಗೆಗೆ ಪ್ರೇರೇಪಿಸಿದಂತೆ ಕಂಡುಬರುತ್ತದೆ.

ಮಾರ್ಚ್ ೩೦ ರಂದು ಬೆಳ್ಳಾರೆಯನ್ನು ರೈತರು ಮುತ್ತಿಗೆ ಹಾಕಿದ್ದು ಬಂಡಾಯದ ನಿಜವಾದ ಆರಂಭವಾಗಿತ್ತು. ಬಂಡಾಯದ ಬಗ್ಗೆ ಲೆವಿನ್ ನೀಡಿದ ವರದಿಯಲ್ಲಿ ಹೀಗೆ ಹೇಳಲಾಗಿದೆ. "ಮಾರ್ಚ್ ೩೦ನೇ ರಾತ್ರಿ ೧೧ ಘಂಟೆಗೆ ನನ್ನ ವಿಳಾಸಕ್ಕೆ ಬಂಟ್ವಾಳದ ಶಿರೆಸ್ತೆದಾರನ ಒಂದು ವರದಿ ಬಂದು ತಲುಪಿತ್ತು. ಅದರ ಪ್ರಕಾರ ಸುಮಾರು ೨೦೦೦ ಸಶಸ್ತ್ರ ಜನರು ಬೆಳ್ಳಾರೆ ಪೇಟೆಯಲ್ಲಿ ಸೇರಿದ್ದಾರೆ. ಪೈಶ್ಕಾರನ ಕಛೇರಿಯನ್ನು ವಶಪಡಿಸಿಕೊಂಡಿದ್ದಾರೆ. ಮುಖ್ಯ ಶಿರೆಸ್ತೆದಾರ, ತಹಶೀಲ್ದಾರ ಮತ್ತಿತರ ಉದ್ಯೋಗಿಗಳನ್ನು ಬಂಧಿಸಿಟ್ಟಿದ್ದಾರೆ"[೩೧]

ಬೆಳ್ಳಾರೆಯನ್ನು ವಶಪಡಿಸಿಕೊಂಡ ಮೇಲೆ ಕೊಡಗಿನ ಪ್ರಜೆಗಳನ್ನು ಸಂಬೋಧಿಸಿ ಸ್ವಾಮಿ ಅಪರಂಪಾರನ ಹೆಸರಿನಲ್ಲಿ ಒಂದು ನಿರೂಪ ಹೊರಡಿಸಲಾಯಿತು.

"ನಾವು ಬೆಳ್ಳಾರೆಯಲ್ಲಿ ವಾಸಮಾಡುತ್ತಿದ್ದೇವೆ. ಎಂದಿನಂತೆಯೇ ನಿಮ್ಮೆಲ್ಲರ ಸಂರಕ್ಷಣಾ ಕಾರ್ಯಕ್ಕೆ ಈಗಲೂ ಬದ್ಧರಾಗಿದ್ದೇವೆ. ಆದಕಾರಣ ನಮ್ಮ ಸನ್ನಿಧಾನಕ್ಕೆ ಬಂದು ನೀವುಗಳು ಪಾದದರ್ಶನ ಮಾಡಿ ನಿಮ್ಮ ಸಕಲಾಭಿಷ್ಟಗಳನ್ನು ನೆರವೇರಿಸಿಕೊಳ್ಳತಕ್ಕದ್ದು. ಹೀಗೆ ಮಾಡಲು ನೀವು ತಡಮಾಡಿದರೆ ಶಿವಮಹಾದೇವನು ನಿಮ್ಮ ಮೇಲೆ ಮುನಿಯುತ್ತಾನೆ. ಆದುದರಿಂದ ನಮಗೆ ಕೃತಜ್ಞರಾಗಿರಿ"[೩೨]

ಅದೇ ದಿನ ಕೂಜುಗೋಡು ಅಪ್ಪಯ್ಯ ಮತ್ತು ಮಲ್ಲಪ್ಪರಿಗೆ ಹಾಲೇರಿ ಸಂಸ್ಥಾನದ ಅಪರಂಪರನೆಂದುಕೊಂಡು ಒಂದು ನಿರೂಪವನ್ನು ಕಳುಹಿಸಿಕೊಡಲಾಯಿತು. "ನಾನು ಬೆಳ್ಳಾರೆ ಕಛೇರಿಗೆ ಬಂದಿದ್ದೇನೆ. ನೀವು ತಕ್ಷಣ ನಿಮ್ಮ ಕೈಕೆಳಗಿನ ಗ್ರಾಮಗಳ ಜನರನ್ನು ಕರೆದುಕೊಂಡು ಕೂಜುಗೋಡಿಗೆ ಹೊರಡತಕ್ಕದ್ದು. ಅಲ್ಲಿ ಐವತ್ತು ಜನರನ್ನು ಕಾವಲಿಗೆ ಹಾಕಿ ಕಂಪೆನಿಯ ವಾಹನಗಳೂ, ಟಪ್ಪಾಲುಗಳೂ ಹೋಗದಂತೆ ವಿರೋಧಿಸತಕ್ಕದ್ದು. ಆ ರಸ್ತೆಯಲ್ಲಿ ಬ್ರಿಟಿಷರ ಪರರಾದವರು ಓಡಾಡದಂತೆ ಈ ಸುದ್ದಿಯನ್ನು ಒಯ್ಯದಂತೆ ನೋಡಿಕೊಳ್ಳತಕ್ಕದ್ದು. ದಾರಿಯಲ್ಲಿ ಯಾರೇ ಸುಳಿದಾಡಲಿ ಅವರನ್ನು ಶಸ್ತ್ರಗಳಿಂದ ಎದುರಿಸತಕ್ಕದ್ದು. ನೀವು ಯಾರನ್ನಾದರೂ ಬಿಟ್ಟದ್ದೇ ಆದರೆ ನಿಮಗೆ ಉಗ್ರ ಶಿಕ್ಷೆಯಾಗುತ್ತದೆ. ಆದುದರಿಂದ ಆಜ್ಞೆಯನ್ನು ಪಾಲಿಸಿ ಕರ್ತವ್ಯವನ್ನು ಪ್ರಾಮಾಣಿಕತೆಯಿಂದ ನೇರವೇರಿಸಿ"[೩೩]

ಈ ನಿರೂಪವು ಎರಡು ಅಂಶಗಳನ್ನು ಸ್ಪಷ್ಟಪಡಿಸುತ್ತದೆ. ಮೊದಲನೆಯದು ಅಪರಂಪರನೇ ಬಂಡಾಯದ ನಾಯಕನೆಂದು ಸುಳ್ಯ ಮತ್ತು ಕೊಡಗಿನಲ್ಲಿ ಪ್ರಚುರಪಡಿಸುವುದು. ಎರಡನೆಯದು, ಸುಬ್ರಹ್ಮಣ್ಯದಿಂದ ಮಡಿಕೇರಿಗೆ ಹೋಗುವ ಎಲ್ಲಾ ಸಂಪರ್ಕಗಳನ್ನು ತಡೆಯುವುದು. ಈ ನಿರೂಪ ಹೊರಡಿಸುವಾಗ ಕೂಜುಗೋಡು ಸಹೋದರರು ಕೂಜುಗೋಡಿನಲ್ಲಿರಲಿಲ್ಲ ಎನ್ನುವುದು ಸ್ಪಷ್ಟವಾಗುತ್ತದೆ. ಅವರಿಗೆ ಕೊಡಗಿನಿಂದ ಗಾಳಿಬೀಡಿನ ಮಾರ್ಗವಾಗಿ ಅಥವಾ ಬಿಸಿಲೆ ಹಾದಿಯಾಗಿ ದ.ಕ.ಕ್ಕೆ ಬ್ರಿಟಿಷರ ಸೇನೆ ಬಾರದಂತೆ ತಡೆಗಟ್ಟುವ ಲಿಖಿತ ಆಜ್ಞೆ ಇದಕ್ಕೆ ಮೊದಲೇ ನೀಡಲ್ಪಟ್ಟಿರಬೇಕು.

ಒಂದು ಅಂದಾಜಿನ ಪ್ರಕಾರ ಬೆಳ್ಳಾರೆ ಸರ್ಕಾರಿ ಕಛೇರಿಯನ್ನು ಸ್ವಾಧೀನಕ್ಕೆ ತೆಗೆದುಕೊಂಡ ರೈತರ ಸಂಖ್ಯೆ ೨೦೦೦. ಅಂದು ೨೦೦ ರೈತರು ಕುಂಚಡ್ಕ ತಿಮ್ಮ ಮತ್ತು ಕುಡೇಕಲ್ಲು ಪುಟ್ಟರ ನೇತೃತ್ವದಲ್ಲಿ ಕಾಸರಗೋಡಿಗೆ, ಅಷ್ಟೇ ಸಂಖ್ಯೆಯ ರೈತರು ಕೂಜುಗೋಡು ಸಹೋದರರ ನೇತೃತ್ವದಲ್ಲಿ ಬಿಸ್ಲೆ ಕಡೆಗೆ ತೆರಳುತ್ತದೆ.[೩೪] ಬೆಳ್ಳಾರೆಯನ್ನು ವಶಪಡಿಸಿಕೊಂಡ ತಕ್ಷಣ ಪುಟ್ಟ ಬಸವ ಕೂಜುಗೋಡು ಸಹೋದರರಿಗೆ ಅಲ್ಲೇ ನಿರೂಪ ನೀಡಿರಬೇಕು. ತಿಮ್ಮ ಮತ್ತು ಪುಟ್ಟರಿಗೂ ನಿರೂಪ ನೀಡದಿರಲು ಸಾಧ್ಯವಿರಲಿಲ್ಲ. ನಿರೂಪವು ಸ್ಪಷ್ಟವಾಗಿ ದಂಗೆಯ ಸ್ವರೂಪ ಮತ್ತು ಉದ್ದೇಶವನ್ನು ತಿಳಿಸುತ್ತದೆ.

- ಬಂಡುಕೋರರು ಖಜಾನೆಗಳನ್ನು ಮಾತ್ರ ವಶಪಡಿಸಿ, ಬ್ರಿಟಿಷರ ಸಂಪರ್ಕ ವ್ಯವಸ್ಥೆಗಳನ್ನು ಕಡಿದು ಹಾಕುವುದು.
- ಎಲ್ಲಾ ಸರ್ಕಾರಿ ಕಛೇರಿಗಳಲ್ಲಿ ಬಂಡುಕೋರರ ಪರವಿರುವ ತಹಶೀಲ್ದಾರ ಮತ್ತು ನೌಕರರನ್ನು ನೇಮಿಸಿ ಅವರಿಗೆ ಒಂದು ತಿಂಗಳ ವೇತನ ಮುಂಚಿತವಾಗಿ ನೀಡಿ ತಮ್ಮ ಸರ್ಕಾರಕ್ಕೆ ವಿಧೇಯರಾಗಿರುವಂತೆ ಮುಚ್ಚಳಿಕೆ ಬರೆಸಿಕೊಳ್ಳುವುದು.

- ವಿರೋಧಿಸುವವರನ್ನು ಸೆರೆಹಿಡಿದು ಕಲ್ಯಾಣ ಸ್ವಾಮಿಯಲ್ಲಿಗೆ ವಿಚಾರಣೆಗೆ ಕರೆತರುವುದು.

ಬೆಳ್ಳಾರೆ ಪತನದ ಸುದ್ದಿ ತಿಳಿದ ತಕ್ಷಣ ತನ್ನ ನೂರರಷ್ಟಿದ್ದ ಸೈನಿಕರೊಡನೆ ಮಂಗಳೂರಿನಿಂದ ಹೊರಟು ಪುತ್ತೂರಿಗೆ ಬಂದವರಿಗೆ ಆಶ್ಚರ್ಯ ಕಾದಿದ್ದನ್ನು ಲೆವಿನ್ ಹೀಗೆ ಹೇಳಿಕೊಂಡಿದ್ದಾನೆ.

"ನಾವು ಪುತ್ತೂರು ತಲುಪಿದಾಗ ನನ್ನ ಅಂದಾಜಿನ ಪ್ರಕಾರ ಸುಮಾರು ೧೨೦೦ ಜನ ಅಲ್ಲಿ ಸೇರಿದ್ದರು. ದೇಶದಲ್ಲಿ ಗೊಂದಲ ಹುಟ್ಟಿಸಲು ಈ ಸಾಹಸಿಯು ಸಮರ್ಥನಿದ್ದಾನೆ ಅನ್ನುವುದು ಖಚಿತವಾದರೂ ಏನು ಮಾಡಬೇಕೆಂದು ನನಗೆ ತೋಚಲಿಲ್ಲ. ಬಂಡಾಯದ ಪ್ರಮುಖನನ್ನು ಹಿಡಿದು ಕೊಟ್ಟವರಿಗೆ ಒಂದು ಸಾವಿರ ರೂಪಾಯಿ ನೀಡುವುದಾಗಿ ನಾನು ಮಾಡಿದ ಘೋಷಣೆಯನ್ನು ಲಕ್ಷಿಸುವ ಸ್ಥಿತಿಯಲ್ಲಿ ನಮ್ಮ ಸೈನಿಕರಲ್ಲಿ ಯಾರೂ ಇರಲಿಲ್ಲ. ನಾವು ಪುತ್ತೂರಿಗೆ ತಲುಪಿದ ಸ್ವಲ್ಪ ಹೊತ್ತಿನಲ್ಲಿ ಒಂದು ವಿಚಾರ ಸ್ಪಷ್ಟವಾಯಿತು. ನಾವು ಎದುರಿಸಬೇಕಾದದ್ದು ಓರ್ವ ನಕಲಿ ಉತ್ತರಾಧಿಕಾರಿಯನ್ನು ಮಾತ್ರವಲ್ಲ. ಇಡೀ ದೇಶ ಮತ್ತು ನೆರೆ ಕರೆಯವರನ್ನು ಎನ್ನುವುದು. ಸರಕಾರೀ ನೌಕರರ, ಪಟೇಲರ ಮತ್ತು ಶ್ಯಾನುಭೋಗರ ಪೈಕಿ ಒಬ್ಬನೇ ಒಬ್ಬ ನಮ್ಮ ಕಡೆ ಬರುವ ಸಂಭವವಿರಲಿಲ್ಲ. ಬಂಡುಕೋರರಿಗೆ ನಮ್ಮ ಬಗ್ಗೆ ಅತೃಪ್ತಿ ಮಾತ್ರವಲ್ಲ - ನಿಜವಾದ ಶತ್ರುತ್ವವಿತ್ತು ಎನ್ನುವುದಕ್ಕೆ ಸಾಕಷ್ಟು ಆಧಾರಗಳಿದ್ದವು."[೩೫]

ದಂಗೆಕೋರರಿಗೆ ಪ್ರಜೆಗಳನ್ನು ಲೂಟಿಮಾಡುವ ಉದ್ದೇಶವಿರಲಿಲ್ಲ ಎನ್ನುವುದನ್ನು ಈ ಹೇಳಿಕೆ ಸ್ಪಷ್ಟೀಕರಿಸುತ್ತದೆ. ಅಲ್ಲದೆ ಅವರು ತಾತ್ಕಾಲಿಕ ಪರಿಹಾರವನ್ನು ಬಯಸದೆ ನಾಡಿನಿಂದ ಬ್ರಿಟಿಷರನ್ನು ಓಡಿಸುವ ದೀರ್ಘಾವಧಿ ಉದ್ದೇಶವುಳ್ಳವರೆಂಬುದನ್ನು ಲೆವಿನ್ ತನ್ನ ವರದಿಯಲ್ಲಿ ಧ್ವನಿಸಿದ್ದಾನೆ. ಕಾಟನ್ ಕೂಡಾ ತನ್ನ ವರದಿಯಲ್ಲಿ "ಪಿತೂರಿಗಾರರ ತಕ್ಷಣದ ಉದ್ದೇಶ ಕೊಡಗಿನಲ್ಲಿ ಬ್ರಿಟಿಷ್ ಪ್ರಭುತ್ವವನ್ನು ಕೊನೆಗಾಣಿಸಿ ಹಿಂದೂ ರಾಜಮನೆತನದ ಪ್ರಭುತ್ವವನ್ನು ಪುನಃ ಸ್ಥಾಪಿಸುವುದು. ಅವರ ಅಂತಿಮ ಉದ್ದೇಶ ಬ್ರಿಟಿಷ್ ಪ್ರಭುತ್ವವನ್ನು ಧ್ವಂಸ ಮಾಡುವುದಾಗಿತ್ತೆ ಎಂದು ಹೇಳಿದ್ದಾನೆ.[೩೬]

ಈ ವರದಿಗಳು ಉತ್ಪ್ರೇಕ್ಷೆಯಲ್ಲವೆಂಬುದಕ್ಕೆ ಕಲ್ಯಾಣ ಸ್ವಾಮಿ ಹೊರಡಿಸಿದ ಇಸ್ತಿಹಾರು ಸಾಕ್ಷಿಯಾಗಿತ್ತು.[೩೭]

ಪುತ್ತೂರಿನ ಖಜಾನೆ ಆಕ್ರಮಣದ ಸಂದರ್ಭದಲ್ಲಿ ಅಲ್ಲಿನ ನೌಕರರು ಸ್ವಲ್ಪಮಟ್ಟಿಗೆ ಪ್ರತಿರೋಧ ತೋರಿದ್ದರು. ಆಗ ರೈತರ ದಂಡು "ನಾವು ನಿಮ್ಮ ಸ್ನೇಹಿತರು ನಿಮ್ಮೊಡನೆ ಯುದ್ಧ

ಮಾಡಬಂದವರಲ್ಲ. ಇಂಗ್ಲೀಷರನ್ನು ವಿರೋಧಿಸುವ ನಾವು ಅವರನ್ನು ಹೊಡೆದಟ್ಟುತ್ತೇವೆ. ನಮ್ಮೊಡನೆ ಸೇರಿಕೊಳ್ಳಿ" ಎಂದು ಹೇಳಿರುವುದನ್ನು ಲೆವಿನ್ ತನ್ನ ವರದಿಯಲ್ಲಿ ಕಾಣಿಸಿದ್ದಾನೆ.[೩೮]

ರೈತರು ಕೊಲೆ ಸುಲಿಗೆ ರಕ್ತಪಾತಗಳ ಉದ್ದೇಶ ಹೊಂದಿರಲಿಲ್ಲವೆನ್ನುವುದನ್ನು ಸ್ವಯಂ ಬ್ರಿಟಿಷ್ ಅಧಿಕಾರಿಯೊಬ್ಬ ದಾಖಲಿಸುವುದು ಕಲ್ಯಾಣ ಸ್ವಾಮಿಯದು ದರೋಡೆಯಲ್ಲ ಎನ್ನುವುದಕ್ಕೆ ದೃಷ್ಟಾಂತವಾಗಿದೆ. ಕಲ್ಯಾಣ ಸ್ವಾಮಿಯ ಇಸ್ತಿವಾರು ಕಂದಾಯ ಕಟ್ಟಲಾಗದೆ ಕೊನೆಯುಸಿರೆಳೆವ ಕಳೆದ ಸ್ಥಿತಿಯಲ್ಲಿದ್ದ ದ.ಕ.ದ ರೈತವರ್ಗಕ್ಕೆ ಕಗ್ಗತ್ತಲ ಕರಾಳ ಬದುಕಲ್ಲಿ ಭರವಸೆಯ ಬೆಳ್ಳಿ ರೇಖೆಯೊಂದನ್ನು ಮೂಡಿಸಿದಂತಾಗಿ ಅನೇಕರು ತಾವಾಗಿಯೇ ದಂಡು ಸೇರಿಕೊಂಡರು.

ಪೂಮಲೆಯಿಂದ ಹೊರಟ ರೈತದಂಡು ಕೋವಿಗಳನ್ನು ಹೊಂದಿತ್ತು. ಸ್ವ ಇಚ್ಛೆಯಿಂದ ದಂಡನ್ನು ಸೇರಿಕೊಂಡ ರೈತರಿಗೆ ಕೈಗೆ ಸಿಕ್ಕಿದ್ದೆ ಆಯುಧಗಳಾದುದರಿಂದ ಅವರನ್ನು ಕೊತ್ತಳಿಗೆ ಭಂಟರು ಎಂದು ಜನಸಾಮಾನ್ಯರು ಕರೆದಿರಬೇಕು.[೩೯] ನಂದಾವರದಲ್ಲಿ ಈ ದಂಡನ್ನು ಲಕ್ಷ್ಮಪ್ಪ ಬಂಗರಸ ಎದುರುಗೊಂಡು ಸ್ವಾಗತಿಸಿದ. ಅಲ್ಲಿಗೆ ವಿಟ್ಲದ ಅರಸ ತನ್ನ ದಂಡಿನೊಡನೆ ಬಂದು ಸೇರಿಕೊಂಡ. ಇವರಿಬ್ಬರೂ ತಮ್ಮ ರಾಜತ್ವ ಕಳಕೊಂಡು ಬ್ರಿಟಿಷರು ಕೊಡುವ ಮಾಸಾಶನದಲ್ಲಿ ಜೀವನ ಸಾಗಿಸುತ್ತಿದ್ದವರು.[೪೦] ರೈತದಂಡು ನಂದಾವರದಲ್ಲಿದ್ದಾಗ ಧರ್ಮಸ್ಥಳದ ಮಂಜಯ್ಯ ಹೆಗ್ಗಡೆ ಎರಡು ಫಿರಂಗಿಗಳನ್ನು ಕಳುಹಿಸಿಕೊಟ್ಟನೆಂಬುದಕ್ಕೆ ದಾಖಲೆಗಳಿವೆ.[೪೧] ಅದಕ್ಕೆ ಕ್ರಾಂತಿಕಾರರು ಕಲ್ಯಾಣಸ್ವಾಮಿಯೊಡನೆ ಸೇರಿಕೊಳ್ಳಬೇಕು ಮತ್ತು ಕ್ರಾಂತಿಕಾರರಿಗೆ ಆಯುಧ ಒದಗಿಸುವಂತೆ ಬೆದರಿಕೆ ಪತ್ರ ಬರೆದದ್ದು ಕಾರಣವಾಗಿತ್ತು.[೪೨] ಲಕ್ಷ್ಮಪ್ಪ ಬಂಗರಸ ಒಂದು ಫಿರಂಗಿ ಮತ್ತು ಕೋವಿಪೌಡರು ತಯಾರಿಕೆಗೆ ಮೂರು ಬೃಹತ್ ಕಡಾಯಿಗಳನ್ನು ನೀಡಿದ್ದ. ಮೂಡಬಿದಿರೆಯ ಚಂದ್ರಶೇಖರ ಚೌಟನ ದಂಡೊಂದು ಬಂದು ಕಲ್ಯಾಣ ಸ್ವಾಮಿಯನ್ನು ಸೇರಿಕೊಂಡದು[೪೩], ಮೂಡಬಿದಿರೆ ಬಸದಿಯಿಂದ ಒಂದು ಫಿರಂಗಿ ಕಳುಹಿಸಿಕೊಟ್ಟದು, ರೈತ ಬಂಡಾಯವನ್ನು ಮೇಲ್ವರ್ಗ ಬೆಂಬಲಿಸಿದ್ದಕ್ಕೆ ಸಾಕ್ಷಿ. ಎಲ್ಲಾ ಜಾತಿ, ವರ್ಗಗಳ ಜನರು ಕ್ರಾಂತಿ ಪಡೆಯನ್ನು ಸೇರಿಕೊಂಡು ಬ್ರಿಟೀಷರನ್ನು ದ.ಕ ದಿಂದ ಓಡಿಸಲು ಮಾನಸಿಕವಾಗಿ ಮತ್ತು ದೈಹಿಕವಾಗಿ ಮಾಡಿದ ಪ್ರಯತ್ನವನ್ನು ಲಿಕ್ಷರನು 'ಗೌಡರ ಮೇಲ್ ಚೀಳುವಿಕೆ' ಎಂದು ಒಂದು ಕೋಮಿನ ಅಧಿಕ ಪ್ರಸಂಗವೆಂಬಂತೆ ಚಿತ್ರಿಸಿರುವುದಕ್ಕೆ ಕೊಡಗಿನಲ್ಲಿ ಕೊಡವರು ಮತ್ತು ಗೌಡರು ಒಂದಾದರೆ ಬ್ರಿಟಿಷರು ಇಲ್ಲಿಂದ ಕಾಲು ಕೀಳಬೇಕಾದೀತು ಎಂಬ ಭಯವು ಕಾರಣವಾಗಿರುವಂತೆ ಕಂಡುಬರುತ್ತದೆ.

ಎಪ್ರಿಲ್ ೫ ರಂದು ಮಂಗಳೂರನ್ನು ತಲುಪಿದ ರೈತದಂಡು, ಅಲ್ಲಿನ ನಿಶಾನಿ ಗುಡ್ಡೆಯಲ್ಲಿ (ಈಗಿನ ಬಾವುಟಗುಡ್ಡೆ) ಗಾಳಿಗೆ ಪಟಪಟಿಸುತ್ತಾ 'ಇದು ಮಂಗಳೂರು' ಎಂಬುದನ್ನು

ಸಮುದ್ರದಲ್ಲಿ ಸಂಚಲಿಸುವ ಹಡಗುಗಳಿಗೆ ಸೂಚಿಸುತ್ತಿದ್ದ ಬ್ರಿಟಿಷರ ಧ್ವಜವನ್ನು ಕೆಳಗಿಳಿಸಿ ಸುಟ್ಟು ದೊಡ್ಡವೀರರಾಜನ ಕಾಲದ 'ವಿ' ಮುದ್ರಾಂಕಿತ ಧ್ವಜವನ್ನು ಏರಿಸಿ ವಸಾಹತುಶಾಹಿ ಆಡಳಿತವು ಅಂತ್ಯಗೊಂಡದ್ದನ್ನು ಸಾರಿತು. ಕಲ್ಯಾಣಸ್ವಾಮಿಯ ಇಸ್ತಿಹಾರು ಅಲ್ಲಿ ಮತ್ತೆ ಪ್ರಕಟವಾಯಿತು. ಮೂರು ವರ್ಷ ಕಂದಾಯ ಮಾಫಿ ಎಂಬ ಘೋಷಣೆ ರೈತ ಸಮುದಾಯಕ್ಕೆ ಕರ್ಣಾನಂದಕರವಾಗಿತ್ತು. ರೈತರ ರಕ್ತಹೀರಿ ಬದುಕುತ್ತಿದ್ದ ಪರಾನ್ನಜೀವಿ ವ್ಯಾಪಾರಿಗಳಿಗೆ ಕಲ್ಯಾಣಪ್ಪನ ಇಸ್ತಿಹಾರು ಕಿವಿಗೆ ಹೊೖದ ಕಾದ ಸೀಸವಾಗಿ ಅವರು ರೈತ ಬಂಡಾಯವನ್ನು ಕಲ್ಯಾಣಪ್ಪನ ಕಾಟಕಾಯಿಯೆಂದು ಕರೆದರು. ಬಂಟವಾಳದಲ್ಲಿ ರಂಗಬಾಳಿಗನೆಂಬ ವ್ಯಾಪಾರಿ ರೈತರ ದಂಡನ್ನು ವಿರೋಧಿಸಿದ್ದು ಇದೇ ಕಾರಣಕ್ಕಾಗಿ,[೪೪] ಅವನು ಮತ್ತು ಅವನ ಕಡೆಯವರು ಕಲ್ಯಾಣಪ್ಪನ ದಂಡು ತಮ್ಮನ್ನು ದೋಚಿದೆಯೆಂದು ಪುಕಾರು ಹಬ್ಬಿಸಿ ಅದಕ್ಕೆ ದರೋಡೆಕೋರರ ತಂಡವೆಂದು ಹಣೆಪಟ್ಟಿ ಕಟ್ಟಲು ನಡೆಸಿದ ಸರ್ವ ಪ್ರಯತ್ನಗಳು ವಿಫಲವಾಗಿ ಬಂಡಾಯ ತಾತ್ಕಾಲಿಕವಾಗಿ ಸಫಲವಾಯಿತು. ಆದರೆ ೧೮೩೭ರ ಬಳಿಕಿನ ವಸಾಹತುಶಾಹಿ ಆರ್ಥಿಕ ನೀತಿಯ ಪೂರ್ಣ ಪ್ರಯೋಜನ ಪಡೆದ ಬ್ರಾಹ್ಮಣ, ಬಂಟ, ಕೊಂಕಣಿ ಸಮುದಾಯದ ಬಹುತೇಕರು ಕ್ರಾಂತಿ ವಿಫಲವಾದ ಬಳಿಕ ಬ್ರಿಟಿಷ್ ಅಧಿಕಾರಿಗಳ ನೆರವಿನಿಂದ ಅದನ್ನು ದರೋಡೆಯೆಂದು ಅಪಪ್ರಚಾರ ನಡೆಸಿದ್ದು ಯಶಸ್ವಿಯಾಗಿ ಅದು ಕಲ್ಯಾಣಪ್ಪನ ಕಾಟಕಾಯಿಯಾಗಿ ಬಿಟ್ಟಿತ್ತು.

ರೈತ ಬಂಡಾಯ ಕಾಟಕಾಯಿಯಲ್ಲ ಎನ್ನುವುದಕ್ಕೆ ಲೆವಿನನ ವರದಿಯಲ್ಲಿನ ಈ ಸಾಲುಗಳು ಆಧಾರವಾಗಿವೆ.

"ನಮಗೆ ಸಹಕಾರ ನೀಡಬಲ್ಲ ಜನರು ಮಂಗಳೂರಲ್ಲಿ ಇದ್ದರೂ ಕೂಡ ಅವರು ಇದ್ದಕ್ಕಿದ್ದಂತೆ ಮನಸ್ಸು ಬದಲಾಯಿಸಿದ್ದರು. ನಗರದ ಕಾವಲು ಪಡೆಯೇ ಕೊಳ್ಳೆ ಹೊಡೆಯಲು ತೊಡಗಿತ್ತು.. ಅದನ್ನು ತಡೆಯಬಲ್ಲ ಅಧಿಕಾರಿಗಳು ನಿರ್ಲಕ್ಷ್ಯದಿಂದ ನಡಕೊಂಡರು. ಅಧಿಕಾರಿ ಬಾಗಿಲು ಭದ್ರಪಡಿಸಿದ ಕಾರಣ ಖಜಾನೆ ಉಳಿಯಿತು."[೪೫]

ಇದು ಆಗಿನ ಬ್ರಿಟಿಷ್ ಪರ ನೌಕರರ ಮತ್ತು ಅಧಿಕಾರಿಗಳ ಮನಸ್ಥಿತಿ ಹೇಗಿತ್ತು ಎನ್ನುವುದನ್ನು ಬಿಂಬಿಸುತ್ತದೆ. ಗಲಭೆ, ಲೂಟಿ, ದೋಚುವಿಕೆಗಳನ್ನು ನಡೆಸಿದ್ದು ಬ್ರಿಟಿಷ್ ಪರ ನೌಕರರು ಎನ್ನುವುದನ್ನು ಜಿಲ್ಲಾಧಿಕಾರಿ ಲೆವಿನ್ ಒಪ್ಪಿಕೊಂಡುದನ್ನು ಸೂಚಿಸುತ್ತದೆ. ಲೆವಿನ್ ತನ್ನ ವರದಿಯಲ್ಲಿ ಉಲ್ಲೇಖಿಸಿದಂತೆ ಕೆಳಕೊಡಗು ಮತ್ತು ಕೆನರಾ ಜಿಲ್ಲೆಯ ದಕ್ಷಿಣದಲ್ಲಿ ಕೆಲವು ಅಪವಾದಗಳನ್ನು ಹೊರತು ಪಡಿಸಿದರೆ, ಮಂಗಳೂರಿನಿಂದ ಬಿಸ್ಲೆಯವರೆಗೆ ನೇರವಾದ ರೇಖೆಯೊಳಗಿರುವ ಜನರೆಲ್ಲರೂ ಶಸ್ತ್ರಧಾರಿಗಳಾಗಿ ಸರಕಾರಕ್ಕೆ ಎದುರಾಗಿದ್ದಾರೆ,

ಬಂಡಾಯಗಾರರು ತಹಶೀಲ್ದಾರರ ಕಛೇರಿ, ಖಜಾನೆ ಮತ್ತು ಸಾರ್ವಜನಿಕ ಕಟ್ಟಡಗಳನ್ನು ವಶಪಡಿಸಿ ತಮ್ಮ ಕಡೆಯವರನ್ನು ತಹಶೀಲ್ದಾರ ಮತ್ತು ಅಧಿಕಾರಿಗಳನ್ನಾಗಿ ನೇಮಿಸಿ, ನೌಕರರಿಗೆ ವೇತನ ವಿತರಿಸಿ, ಅವರಿಂದ ತಮಗೆ (ಕಲ್ಯಾಣಸ್ವಾಮಿಗೆ) ವಿದೇಯರಾಗಿರುವ ಮುಚ್ಚಳಿಗೆ ಪತ್ರ ಬರೆಸಿಕೊಂಡರು. ಬಂಡಾಯಗಾರರು ತಮ್ಮದೊಂದು ಸ್ಥಾಪಿತ ಸರ್ಕಾರ ಎಂಬಂತೆ ಕ್ರಮವತ್ತಾಗಿ ನಡೆದುಕೊಂಡಿದ್ದರು.[೪೬]

ಪೂಮಲೆಯಿಂದ ನೇರವಾಗಿ ಮಂಗಳೂರಿಗೆ ಹೋದ ರೈತ ದಂಡು ಹಾದಿಯುದ್ದಕ್ಕೂ ವಿಜಯ ಸಾಧಿಸಿತು. (ಭೂಪಟ ೭.೧) ಪುತ್ತೂರಿನಲ್ಲಿ ಲೆವಿನನ ಸೇನೆ ಕ್ರಾಂತಿ ಪಡೆಯ ಮೇಲೆ ಗುಂಡೆಸೆದರೂ, ದಂಡಿನ ಅಗಾಧತೆಗೆ ಬೆದರಿ ಮಂಗಳೂರಿನತ್ತ ಪಲಾಯನ ಮಾಡಿತು. ಹಾದಿಯುದ್ದಕ್ಕೂ ಜನರು ಲೆವಿನನಿಗೆ ಪ್ರತಿರೋಧ ಒಡ್ಡಿದ್ದರು. ಆತನ ಸೈನಿಕರ ಬಂದೂಕುಗಳು ಮಾತಾಡಬಹುದೆಂಬ ಭೀತಿಯಿಂದ ದೈಹಿಕ ಹಲ್ಲೆ ನಡೆಸಲಿಲ್ಲ. ಮೂಡಬಿದಿರೆ, ಕಾರ್ಕಳದ ರೈತರು ಬಂಡಾಯದಲ್ಲಿ ಪಾಲ್ಗೊಳ್ಳಲು ಸ್ವಯಂಪ್ರೇರಿತರಾಗಿ ಮುಂದಕ್ಕೆ ಬಂದರೆ, ಮೂಲ್ಕಿ, ಪಣಂಬೂರುಗಳಲ್ಲಿ ಸ್ಥಾಪಿತ ಹಿತಗಳು ಸಂದರ್ಭದ ದುರುಪಯೋಗ ಪಡೆದುಕೊಂಡು ಸುಲಿಗೆ ನಡೆಸಿದ್ದನ್ನು ಲೆವಿನ್ ದಾಖಲಿಸಿದ್ದಾನೆ. ಕೂಜುಗೋಡು ಅಪ್ಪಯ್ಯ ಮತ್ತು ಮಲ್ಲಪ್ಪರ, ಗುಡ್ಡೆಮನೆ ಅಪ್ಪಯ್ಯ ಮತ್ತು ತಮ್ಮಯ್ಯರ ಪ್ರಯತ್ನಗಳನ್ನು ಬೋಪು ದಿವಾನ ವಿಫಲಗೊಳಿಸಿ ಅವರನ್ನು ಬಂಧಿಸಿ ಲೀ ಹಾರ್ಡಿಯ ಮೆಚ್ಚುಗೆಗೆ ಪಾತ್ರನಾದ. ಕುಡೇಕಲ್ಲು ಪುಟ್ಟ ಮತು ಕುಂಚಡ್ಕ ತಿಮ್ಮ ತಮಗೆ ವಹಿಸಿಕೊಟ್ಟ ಕಾರ್ಯದಲ್ಲಿ ಸಫಲರಾದರು. (ಭೂಪಟ ೭.೧)

ಕುಂಬಳೆ ಸುಬ್ರಾಯ ಹೆಗಡೆಯ ದುರಂತವೊಂದನ್ನು ಬಿಟ್ಟರೆ ಬೇರಾವ ಅನಾಹುತವೂ ಈ ಸಂದರ್ಭದಲ್ಲಿ ಸಂಭವಿಸಲಿಲ್ಲ.[೪೭]

ಬಂಡಾಯದ ಯಶಸ್ಸಿನ ಬಗ್ಗೆ ಲೆವಿನ್ ಹೀಗೆ ಬರೆದಿದ್ದಾನೆ. "ತೆರಿಗೆ ವಿನಾಯಿತಿಯ ಭರವಸೆ,ಏಕಸ್ವಾಮ್ಯವನ್ನು ರದ್ದುಪಡಿಸುವುದು ಮತ್ತು ಇತರ ಆರ್ಥಿಕ ನೀತಿಗಳನ್ನು ಜನರಿಗೆ ಒತ್ತಿ ಹೇಳಲಾಗಿತ್ತು. ಇದರ ನಿಜಾಂಶವನ್ನು ಸಾಬೀತು ಪಡಿಸುವುದಕ್ಕಾಗಿ ಅವರು ಉಪ್ಪಿನ ಮತ್ತು ಹೊಗೆ ಸೊಪ್ಪಿನ ಬೆಲೆಯನ್ನು ಒಮ್ಮಿಂದೊಮ್ಮೆಗೆ ಇಳಿಸಿದರು. ಇವುಗಳ ಪ್ರಚಾರಕ್ಕೆ ಸರಕಾರಿ ನೌಕರರನ್ನು ಬಳಸಿಕೊಂಡನು. ಬಂಡುಕೋರರ ನಡವಳಿಕೆ ಮೇಲ್ಮಟ್ಟದ್ದು ಮತ್ತು ನ್ಯಾಯ ಬದ್ಧವಾದದ್ದು ಎನ್ನುವುದು ಅಲ್ಲಗಳೆಯುವಂತಿಲ್ಲ."[೪೮]


೭.೩ ಆರ್ಥಿಕ ಬಂಡಾಯಕ್ಕೆ ಪ್ರತಿಕ್ರಿಯೆ

ಕ್ರಿ.ಶ. ೧೮೩೭ ರ ರೈತ ಬಂಡಾಯ ದ.ಕ ಜಿಲ್ಲೆಯಾದ್ಯಂತ ವಿಭಿನ್ನ ರೀತಿಯ ಕಂಪನಗಳನ್ನುಂಟು ಮಾಡಿತ್ತು. ಮೂಡಬಿದಿರೆ ಮತ್ತು ಕಾರ್ಕಳದ ಕಡೆಯ ಅನೇಕ ರೈತರು ಇದರಲ್ಲಿ ಪಾಲ್ಗೊಂಡಿದನ್ನು ಲೆವಿನ್ ವರದಿ ಉಲ್ಲೇಖಿಸುತ್ತದೆ.. ಮಂಗಳೂರು ಪಟ್ಟಣದಲ್ಲಂತೂ ಬ್ರಿಟಿಷರ ಪರ ನಿಲ್ಲುವ ಒಬ್ಬನೆ ಒಬ್ಬ ವ್ಯಕ್ತಿ ಇರಲಿಲ್ಲವೆಂದು ಲೆವಿನ್ ಹೇಳಿಕೊಂಡಿದ್ದಾನೆ. ಪಣಂಬೂರು ಮತ್ತು ಮೂಲ್ಕಿಗಳಲ್ಲಿ ಗಲಭೆ ದೊಂಬಿಗಳಾದವು. ಇದು ಸ್ಥಳೀಯ ಹಿತಾಸಕ್ತಿಗಳ ಕೃತ್ಯವೆಂದು ಸ್ವತಃ ಲೆವಿನನೇ ಅಭಿಪ್ರಾಯಪಟ್ಟಿದ್ದಾನೆ. ಬಂಡುಕೋರರು ಜನಸಾಮಾನ್ಯರ ಸುಲಿಗೆ ಮಾಡುವ ದರೋಡೆಕೋರರಾಗಿರದೆ ಬ್ರಿಟಿಷರನ್ನು ಓಡಿಸುವ ಏಕೈಕ ಉದ್ದೇಶದಿಂದ ಬಂಡೆದ್ದರು ಎನ್ನುವುದನ್ನು ಲೆವಿನ್ ವರದಿ ಪುಷ್ಟೀಕರಿಸುತ್ತದೆ.

ಮಂಗಳೂರನ್ನು ವಶಪಡಿಸಿಕೊಂಡ ಮೇಲೆ ಸುಮಾರು ಎರಡು ವಾರಗಳಷ್ಟು ಕಾಲ ದ.ಕ ಜಿಲ್ಲೆಯನ್ನು ರೈತ ಸೇನೆ ತನ್ನ ವಶದಲ್ಲಿಟ್ಟುಕೊಂಡು ಆಡಳಿತ ನಡೆಸಿತು. ಟಿಪ್ಪು ಪೂರ್ವದ ಕಂದಾಯ ವ್ಯವಸ್ಥೆ ಮರಳಿ ಅನುಷ್ಠಾನಕ್ಕೆ ಬಂದದ್ದು; ಹೊಗೆಸೊಪ್ಪು ಉಪ್ಪು ಬೆಲೆ ತಕ್ಷಣ ಕಡಿಮೆಯಾದದ್ದು ಜನಸಾಮಾನ್ಯರಿಗೆ ಅನುಭವ ವೇದ್ಯವಾಗಿ ಅವರು ರೈತ ಬಂಡಾಯವನ್ನು ಬೆಂಬಲಿಸಿದರೆ, ಉಪ್ಪಿನ ಏಕಸ್ವಾಮ್ಯದ ಪ್ರಯೋಜನ ಪಡೆಯುತ್ತಿದ್ದ ಬಂಟವಾಳದ ಕೊಂಕಣಿ ವ್ಯಾಪಾರಸ್ಥರ ಲಾಭ ಕಡಿಮೆಯಾಗಿ ಅವರಿಗೆ ಕಲ್ಯಾಣಪ್ಪ ದರೋಡೆಕೋರನಂತೆ ಭಾಸವಾಗಿರಬೇಕು.

ಮಂಗಳೂರು ಕಂಟೋನ್ಮೆಂಟು ಪ್ರದೇಶದಲ್ಲಿ ನೆಲೆಗೊಂಡಿದ್ದ ಬ್ರಿಟಿಷರು ಆತಂಕಕ್ಕೆ ಒಳಗಾದದ್ದು ಕ್ರಾಂತಿ ಪಡೆಯಿಂದಲ್ಲ ಪರಿಸ್ಥಿತಿಯ ದುರ್ಲಾಭ ಪಡೆದ ಸ್ಥಾಪಿತ ಹಿತಗಳಿಂದ. ದಂಗೆಯ ಅವಧಿಯಲ್ಲಿ ಮಂಗಳೂರು ಖಜಾನೆ ಮತ್ತು ಶಸ್ತ್ರಾಗಾರ ಲೂಟಿಯಾಯಿತು. ಜೈಲಿನಿಂದ ಕೈದಿಗಳು ತಪ್ಪಿಸಿಕೊಂಡರು. ಹಾಗೆ ತಪ್ಪಿಸಿಕೊಂಡವರು ಬ್ರಿಟಿಷರ ಮತ್ತು ಶೋಷಕ ವರ್ತಕರ ವಿರುದ್ಧ ಪ್ರತೀಕಾರ ತೀರಿಸಿಕೊಂಡದ್ದಕ್ಕೊಂದು ತರ್ಕವೂ ಇತ್ತು. ರೈತ ಬಂಡಾಯ ಮಂಗಳೂರಿನಲ್ಲಿ ಮಾಡಿದ ಪರಿಣಾಮ ಹೀಗಿತ್ತು.

೭.೧. ಕಲ್ಯಾಣ ಸ್ವಾಮಿಯ ದಂಗೆ ನಡೆದ ಪ್ರಮುಖ ಸ್ಥಳಗಳು:



"ಮಂಗಳೂರಿನ ಆಂಗ್ಲ ಸೈನಿಕರು ಬಂಡಾಯಗಾರರನ್ನು ಎದುರಿಸಲಾಗದೆ ಅಲ್ಲಿನ ಖಜಾನೆಯನ್ನು ಕಂಟೋನ್ಮೆಂಟಿಗೆ ಸಾಗಿಸಿ ರಕ್ಷಿಸಿದರು. ತಮ್ಮ ಪ್ರಾಣ ಉಳಿಸಿಕೊಳ್ಳಲು ಸಿಪಾಯಿಗಳು ಮತ್ತು ಸೇವಕರು ಆ ಕ್ಷೇತ್ರವನ್ನು ಆಶ್ರಯಿಸಿದರು. ಧ್ವಜಸ್ತಂಭದ ಮೇಲೆ 'ಕಷ್ಟಕ್ಕೆ ಸಿಕ್ಕಿದ್ದೇವೆ' ಎಂದು ಸೂಚಿಸುವ ಬಾವುಟವನ್ನು ಹಾರಿಸಿದರು. ಮುಂಬಯಿಯಿಂದ ಅದೃಷ್ಟವಶಾತ್ ಮದರಾಸು ಕಡೆ ಹೋಗುತ್ತಿದ್ದ ಹಡಗಿನ ದಂಡನಾಯಕ ಈ ಸಂಕಟಸೂಚಕ ಧ್ವಜವನ್ನು ಕಂಡ. ಹಡಗನ್ನು ನಿಲ್ಲಿಸಿದ. ವೇಗ ವೇಗವಾಗಿ ಬಂದು ಸರ್ವನಾಶಕ್ಕೆ ಗುರಿಯಾಗಿದ್ದ ಹೆಂಗಸರು ಮಕ್ಕಳನ್ನೆಲ್ಲ ಕಾಪಾಡಿದ. ಅಲ್ಲಿಂದ ಆ ಹಡಗು ಕಣ್ಣಾನೂರಿಗೆ ಓಡಿತು."[೨೯]

ಏಪ್ರಿಲ್ ೩ ರಂದು ಮಂಗಳೂರನ್ನು ಕ್ರಾಂತಿ ಪಡೆ ವಶಪಡಿಸಿಕೊಂಡ ಬಳಿಕ ಸರದಾರ ಸುಬ್ಬರಾಯನು ರಾಜಾವೀರ ವಸಂತ ಪ್ರತಾಪ ಅಪರಂಪರ ಸ್ವಾಮಿಯ ಹೆಸರಲ್ಲಿ ಪುರ ಪ್ರಮುಖರಿಗೊಂದು ನಿರೂಪ ಕಳುಹಿಸಿಕೊಟ್ಟ.

"ಆಂಗ್ಲರ ವಿರುದ್ಧ ಯುದ್ಧ ಮಾಡಲು ಸ್ವಾಮಿಗಳ ಸೈನಿಕರು ಬಂದಿಳಿದಿದ್ದಾರೆ. ನೀವೆಲ್ಲಾ ನಮ್ಮೊಂದಿಗೆ ಸೇರಬೇಕೆಂದು ನಿಮಗೆ ಅಪ್ಪಣೆ ಮಾಡಲು ನಾನು ಆಜ್ಞಪ್ತನಾಗಿದ್ದೇನೆ. ನೀವೆಲ್ಲಾ ನಿಮ್ಮ ಆಯುಧಗಳನ್ನು ಹಿಡಿದು ಬರತಕ್ಕದ್ದು. ನೀವೀ ಆಜ್ಞೆಗೆ ತಪ್ಪಿ ನಡೆದರೆ ನಿಮ್ಮ ಮನೆತನದವರೆಲ್ಲರ ತಲೆಗಳನ್ನು ಕತ್ತರಿಸಿ ಹಾಕಲಾದೀತು. ಹನ್ನೆರಡು ಲಕ್ಷ ಸೈನಿಕರ ದಂಡು ಸೇರಲಿದೆ. ಆದ ಕಾರಣ ನೀವು ತಕ್ಷಣ ಸ್ವಾಮಿಗಳ ಸಹಾಯಕ್ಕೆ ಬಂದು ಸೈನ್ಯ ಸೇರುವಿರೆಂದು ಸುದ್ದಿಯನ್ನು ಕಳುಹಿಸತಕ್ಕದ್ದು. ಇಲ್ಲವಾದರೆ ಇದರ ದುಷ್ಪರಿಣಾಮಕ್ಕೆ ನೀವೂ ಗುರಿಯಾಗುವಿರಿ. ನೀವೆಲ್ಲಾ ಸ್ವಾಮಿಗಳ ಸೈನ್ಯ ಸೇರಿದಿರಾದರೆ ನಿಮ್ಮನ್ನು ಕಾಪಾಡಲಾಗುತ್ತದೆ. ಈ ನಿರೂಪ ಮುಟ್ಟಿದ ಕೂಡಲೇ ಉತ್ತರ ಬರೆಯತಕ್ಕದ್ದು." [೩೦]

ಮಂಗಳೂರಿನಲ್ಲಿ ಮತ್ತು ಆಸು - ಪಾಸಿನಲ್ಲಿ ಬಂಡಾಯದ ಬಳಿಕ ನಡೆದ ಕೆಲವು ಘಟನೆಗಳನ್ನು ಲೆವಿನ್ ವರದಿ ಮಾಡಿದ್ದಾನೆ.

"ಇಲ್ಲಿನ ನಿವಾಸಿಗಳು ಅವರ ನೆರೆಯವರೊಂದಿಗೆ ನಡೆದುಕೊಂಡ ರೀತಿ ಅಸಹ್ಯಕರ ಸ್ವರೂಪದ್ದಾಗಿತ್ತು. ಹೀಗೆ ಆದಾಗ ಸರಕಾರದ ನೌಕರರು ಅದನ್ನು ಸರಿಪಡಿಸುವ ಅಥವಾ ಯಥಾಸ್ಥಿತಿಗೆ ತರುವ ಕೆಲಸ ಮಾಡಲಿಲ್ಲವೆಂದು ಗೊತ್ತಾಗುತ್ತದೆ. ಹೊಸರಾಜ ಸಂತತಿ ಬಂದಿದೆ ಎಂದು ಸಾರುತ್ತಾ ದೊಡ್ಡ ಸಂಖ್ಯೆಯಲ್ಲಿ ದುರಾತ್ಮರ ತಂಡಗಳು ಬರತೊಡಗಿದ್ದವು. ಹಿಂದುಗಳ ದೇವಾಲಯದ ಸ್ವತ್ತುಗಳನ್ನು ಅಪಹರಿಸಿದರು. ಅವರು ಹೋದಲೆಲ್ಲಾ ಗಲಭೆ ಮತ್ತು ಭಯೋತ್ಪಾದನೆ ಹರಡಿತ್ತು. ಹೊನ್ನಾವರದ ಸುತ್ತಮುತ್ತ ಅತೃಪ್ತಿ ಪ್ರದರ್ಶಿಸಲ್ಪಟ್ಟಿತು. ಉತ್ತರ

ಕೆನರಾದ ಸಬ್ ಕಲೆಕ್ಟರ್ ಕಾರ್ಯಾಲಯದಲ್ಲಿ ರೈತರು ಗುಂಪಾಗಿ ಸೇರಿ ಮುಂದಿನ ಕಂದಾಯದಲ್ಲಿ ವಿನಾಯಿತಿ ಕೇಳಿದ್ದರು.[೩೧]

ಅಮರ ಸುಳ್ಯದ ಪೂಮಲೆಯಲ್ಲಿ ಆರಂಭವಾದ ಕ್ರಾಂತಿಯ ಕಿಡಿ ದ.ಕ ದಲ್ಲಿ ಪಸರಿಸಿ ಉ.ಕ ದಲ್ಲೂ ರೈತರು ವಸಾಹತುಶಾಹಿಯ ಎದುರು ನಿಲ್ಲುವಂತೆ ಮಾಡಿತು. ಬಂಡುಕೋರರು ಮಂಗಳೂರನ್ನು ತಮ್ಮ ವಶದಲ್ಲಿರಿಸಿಕೊಳ್ಳಲು ಬೆದರಿಕೆ ತಂತ್ರವನ್ನು ಬಳಸಿದ್ದನ್ನು ಅಪರಂಪಾರನ ಹೆಸರಲ್ಲಿ ತಿಮ್ಮಯ್ಯ ಮತ್ತು ದೇವಪ್ಪರಾಯರು ಕೊಡಿಯಾಲಬೈಲು ಮಾಗಣೆ ಬಾಮಾ ಶೆಟ್ಟಿ, ನಾರಾಯಣ ಶೆಟ್ಟಿ ಮುಂತಾದ ಪ್ರಮುಖರಿಗೆ ೧೮೩೭ರ ಏಪ್ರಿಲ್ ೧೨ ರಂದು ಕಳುಹಿಸಿದ ನಿರೂಪದಲ್ಲಿ ಸ್ಪಷ್ಟವಾಗುತ್ತದೆ.

"ಇಲ್ಲಿಗೆ ಖಾಸ್ ಸವಾರಿ ಸೈನ್ಯ ಸಮೇತ ಬಂದು ಹದಿನೈದು ದಿನಗಳಾದವು. ನಮ್ಮ ಭೇಟಿ ತೆಗೆದುಕೊಳ್ಳಲು ಬರಲು ನೀವು ಭಯಪಟ್ಟು ನಿಂತಂತಿದೆ.. ಈ ಪತ್ರ ಬಂದ ಕೂಡಲೇ ನೀವು ಜನರಿಗೆಲ್ಲ ಬುದ್ಧಿ ಹೇಳಿ ಅವರನ್ನು ಸಮಾಧಾನ ಪಡಿಸಿ ತಕ್ಷಣ ನೀವು ಫಿರಂಗಿ ಪೇಟೆಗೆ ಬರತಕ್ಕದ್ದು. ಅಲ್ಲೇ ನಾವು ತಂಗಿರುವುದು. ಈ ಕಂಪೆನಿಯವರು ಬಂದು ಗಲಾಟೆಗಳನ್ನೆಬ್ಬಿಸಿರುವಷ್ಟೆ?. ಈ ಕೋಲಾಹಲವನ್ನೆಲ್ಲ ಕೊನೆಗಾಣಿಸಿ, ಶಾಂತಿ ಸಮಾಧಾನಗಳನ್ನು ನೆಲೆಗೊಳಿಸಿ ಜನರಿಗೆ ತೃಪ್ತಿಯನ್ನುಂಟು ಮಾಡುವುದೇ ನಮ್ಮ ಆಗಮನದ ಉದ್ದಿಶ್ಯ. ನೀವು ಇಲ್ಲಿಗೆ ಬಂದ ಮೇಲೆ ಸ್ವಾಮಿಗಳ ಆಜ್ಞೆಯ ವಿವರಗಳೆಲ್ಲ ನಿಮಗೆ ಅರ್ಥವಾಗುತ್ತದೆ. ಖಾಸಾ ಸ್ವಾಮಿಗಳೇ ಮಾಡಿರುವ ಆಜ್ಞೆ ಇದು. ಹೀಗೆ ಭಾವಿಸಿ ತಕ್ಷಣ ಬರತಕ್ಕದ್ದು, ಇಲ್ಲವಾದರೆ ಇದರ ಫಲವುಣ್ಣುವಿರಿ". [೩೨]

ಬಂಡಾಯದ ಬಳಿಕ ರೈತ ಮುಖಂಡರು ಫರಂಗಿಪೇಟೆಯಲ್ಲಿ ಬೀಡುಬಿಟ್ಟದ್ದು ಬ್ರಿಟಿಷರು ದೊಡ್ಡಸೇನೆಯೊಡನೆ ಪ್ರತಿಕಾರಕ್ಕಾಗಿ ಬಂದಾಗ ಎದುರಿಸಲು ಅನುವಾಗಲಿ ಎಂಬ ಕಾರಣಕ್ಕಿರಬೇಕು. ಮಂಗಳೂರು ಆಗ ದಟ್ಟ ಕಾಡಿನ ಪ್ರದೇಶವಾಗಿದ್ದು, ಕೊಡಿಯಾಲಬೈಲು ಪ್ರದೇಶ ಬಿಟ್ಟರೆ ಸುತ್ತಮುತ್ತ ಬೇರೆಲ್ಲೂ ಆರ್ಥಿಕ ಚಟುವಟಿಕೆಗಳು ನಡೆಯುತ್ತಿರಲಿಲ್ಲ. ಮಾಗಣೆ ಶೆಟ್ಟರುಗಳು ತಮ್ಮ ಸಾಮಾಜಿಕ ಮತ್ತು ಆರ್ಥಿಕ ಬಲದಿಂದ ಸಮಾಜದಲ್ಲಿ ಅಧಿಕಾರಯುತ ಸ್ಥಾನದಲ್ಲಿದ್ದರು. ವಸಾಹತುಶಾಹಿಯ ಕಂದಾಯ ನೀತಿ ಅವರನ್ನು ಇನ್ನಷ್ಟು ಬಲಾಢ್ಯರನ್ನಾಗಿ ಮತ್ತು ಬ್ರಿಟಿಷರ ಹೃದಯಕ್ಕೆ ಹತ್ತಿರದವರನ್ನಾಗಿ ಮಾಡಿತ್ತು. ವಸ್ತುಶಃ ಸಾಮಾಜಿಕವಾಗಿ ಮಂಗಳೂರು ಮಾಗಣೆ ಕೊಡಿಯಾಲಗುತ್ತಿನ ಶೆಟ್ಟರುಗಳ ಮುಷ್ಠಿಯಲ್ಲಿದ್ದಿರಬೇಕು. ಎಂತಲೇ

ರೈತ ದಂಡು ಅವರನ್ನು ಬೆದರಿಸಿ ತನ್ನ ಆಡಳಿತವನ್ನು ಒಪ್ಪಿಕೊಳ್ಳುವಂತೆ ಮಾಡಲು ಯತ್ನಿಸಿರಬೇಕು.

ದಂಗೆಯ ಬಗ್ಗೆ ಸಮಗ್ರ ವರದಿ ಸಿದ್ಧಪಡಿಸಲು ಕಂಪೆನಿಯಿಂದ ನಿಯುಕ್ತನಾದ ಆಗಿನ ಜಿಲ್ಲಾಧಿಕಾರಿ ಲೆವಿನ್ ಬಂಡುಕೋರರನ್ನು ಎದುರಿಸಲಾಗದೆ ಪಟ್ಟ ಸಂಕಷ್ಟವನ್ನು ದಾಖಲಿಸಿದ್ದಾನೆ.

"ಇಂತಹ ಪರಿಸ್ಥಿತಿಯಲ್ಲಿ ೧೮೩೪ರ ಏಪ್ರಿಲ್ ೪ನೇ ತಾರೀಕು ಮಧ್ಯಾಹ್ನದ ಬಳಿಕ ಯುರೋಪಿಯನ್ ನಾಗರಿಕರ ಸಭೆ ಸೇರಿತ್ತು. ಮಂಗಳೂರನ್ನು ಬಿಟ್ಟು ಹೋಗುವುದಾಗಿಯೂ, ಸರ್ಕಾರದ ಖಜಾನೆಯನ್ನು ಮತ್ತು ಸಿಪಾಯಿಗಳ ಸಂಸಾರವನ್ನು ತಮ್ಮೊಂದಿಗೆ ಒಯ್ಯುವುದಾಗಿಯೂ ತೀರ್ಮಾನಿಸಲಾಯಿತು. ತೀರ್ಮಾನ ಒಳ್ಳೆಯದೋ, ಕೆಟ್ಟದ್ದೋ ಬಹಳ ಸಂಕಷ್ಟಕ್ಕೆ ತಂದಿಟ್ಟಿತು. ಹಾಗಾಗಿ ಆ ತೀರ್ಮಾನವನ್ನು ಕೈ ಬಿಡಲಾಯಿತು. ಅಂದು ರಾತ್ರಿ ಸಿಪಾಯಿಗಳು ಶಸ್ತ್ರ ಹಿಡಿದು ಕಾಯುತ್ತಾ ಹೋರಾಟವನ್ನು ಎದುರಿಸಬೇಕಾಯಿತು. ಅನಂತರದ ದಿನಗಳಲ್ಲಿ ಇದೇ ಸ್ಥಿತಿ ಮುಂದುವರೆಯಿತು".[೫೩]

ಏಪ್ರಿಲ್ ೬ ರಂದು ಬೆಳಿಗ್ಗೆ ಎಂಟು ಗಂಟೆಗೆ ಬಂದ ಹಡಗು ಎರಡು ಫಿರಂಗಿಗಳನ್ನು ಬ್ರಿಟಿಷ್ ಸೇನೆಗೆ ನೀಡಿ ಕೆಲವು ಯುರೋಪಿಯನ್ ಕುಟುಂಬಗಳನ್ನು ಹತ್ತಿಸಿಕೊಂಡು ಕಣ್ಣಾನೂರಿಗೆ ಪಯಣಿಸುವ ಮುನ್ನ ನದಿ ಕಿನಾರೆಯಲ್ಲಿ ಸ್ಥಳೀಯರಿಂದ ಭಾರೀ ಪ್ರತಿರೋಧ ಎದುರಿಸಬೇಕಾಯಿತು. ಅಂದು ಮಧ್ಯಾಹ್ನ ಹೊನ್ನಾವರದಿಂದ ಲೆಫ್ಟಿನೆಂಟ್ ಬ್ಲೇಕನ ೬೦ ಸೈನಿಕರ ಎರಡನೇ ರೆಜಿಮೆಂಟು ಬಂದು ಬ್ರಿಟಿಷರಿಗೆ ನೆರವಿತ್ತರೂ ಪರಿಸ್ಥಿತಿ ಸುಧಾರಿಸಲಿಲ್ಲ. ಹೊರಗಡೆಯಿಂದ ಬರುವ ಎಲ್ಲಾ ದೋಣಿಗಳನ್ನು ಮತ್ತು ನೌಕೆಗಳನ್ನು ಸ್ಥಳೀಯರು ಬಲಾತ್ಕಾರದಿಂದ ಹಿಂದಕ್ಕೆ ಕಳುಹಿಸತೊಡಗಿದರು.

"ಇಲ್ಲಿಯ ನಿವಾಸಿಗಳು ಬಂಡಾಯಗಾರರೊಡನೆ ಕಾರ್ಯಾಚರಣೆಯಲ್ಲಿ ಭಾಗಿಗಳಾಗಿದ್ದರು. ಅವರನ್ನು ಬರಮಾಡಿಕೊಳ್ಳಲು ಪತ್ರ ಕಳುಹಿಸಿದಲ್ಲದೆ ಎದುರುಗೊಳ್ಳಲು ಮುಂದಾದರು. ಅಷ್ಟಲ್ಲದೇ ಅವರಿಗೆ ಬೇಕಾದ ಸರಂಜಾಮುಗಳನ್ನು ಒದಗಿಸಿದರು. ಬ್ರಿಟಿಷರ ತುಪಾಕಿಗಳಿಂದ ತಪ್ಪಿಸಿಕೊಳ್ಳುವುದು ಹೇಗೆಂಬುದನ್ನು ತಿಳಿಸಿಕೊಟ್ಟರು. ಮಂಗಳೂರಿನ ಒಳಗೂ ಹೊರಗೂ ದಾರಿಯನ್ನು ತೋರಿಸಲು ಅವರಿಗೆ ಮಾರ್ಗದರ್ಶಿಗಳನ್ನು ಕಳುಹಿಸಿಕೊಟ್ಟರು. ಈ ಸಂದರ್ಭದಲ್ಲಿ ನಮ್ಮವರಿಗೆ ಬೇಕಾಗುವ ಆಹಾರ ಸಂಗ್ರಹಿಸುವುದು, ತುಂಬಾ ಕಷ್ಟವಾಗಿ ಬಲ ಪ್ರಯೋಗ ಮಾಡಬೇಕಾಗಿ ಬಂತು". [೫೪]

ಇದು ಜನಸಾಮಾನ್ಯರು ಬಂಡುಕೋರರನ್ನು ಸೇರಿಕೊಂಡಿದ್ದರೆಂಬುದಕ್ಕೆ ಸ್ಪಷ್ಟ ಪುರಾವೆಯಾಗಿದೆ. ಕಲ್ಯಾಣಪ್ಪನದು ಕಾಟಕಾಯಿಯಾಗಿರುತ್ತಿದ್ದರೆ ಸ್ಥಳೀಯರು ಅರಾಜಕತೆಯಿಂದ ಬ್ರಿಟಿಷರ ಆಡಳಿತವೇ ಉತ್ತಮವೆಂದು ಕಂಪೆನಿ ಸರಕಾರವನ್ನು ಉಳಿಸಿಕೊಳ್ಳಲು ಸಹಾಯ ಹಸ್ತ ಚಾಚುತ್ತಿದ್ದರು. ಮುಂಬಯಿ ಸಮಿತಿ ಇದನ್ನು ಸ್ಪಷ್ಟವಾಗಿ ಹೇಳಿದೆ. "ನಿಜವಾಗಿಯೂ ಇದು ಜನರ ಬಂಡಾಯ. ಜನರು ಸರಕಾರವನ್ನು ಪ್ರತಿಭಟಿಸಿ ನಿಂತ ದಂಗೆ. ಜನರೊಂದಿಗೆ ಸರಕಾರದ ಅಧಿಕಾರಿಗಳೂ ಗ್ರಾಮಾಧಿಕಾರಿಗಳು ಸೇರಿದ್ದರೆಂದು ನಂಬಲಾಗಿದೆ".[illegible]

ರೈತ ದಂಗೆಯ ಬಗ್ಗೆ ೧೮೪೧ರಲ್ಲಿ ವರದಿ ಸಲ್ಲಿಸಿದ ಅಂದಿನ ಜಿಲ್ಲಾಧಿಕಾರಿ ಬ್ಲೇರ್‌ನ ಹೇಳಿಕೆಯೊಂದು ಬಂಡಾಯದ ನಿಜಸ್ವರೂಪವನ್ನು ತಿಳಿಸುತ್ತದೆ.

"ಈ ರೈತರು ಬ್ರಿಟಿಷ್ ಸರಕಾರಕ್ಕೆ ತಾವು ಸಲ್ಲಿಸಬೇಕಾದ ರಾಜ ಭಕ್ತಿಯನ್ನು ತೊರೆಯಲು ಇದ್ದ ಉದ್ದೇಶಗಳಲ್ಲಿ ಹಲವರು ಭಯ ಪ್ರೇರಣೆಗಳಿಗೆ ಗುರಿಯಾಗಿ ಹಾಗೆ ಮಾಡಿರಬಹುದು. ಆದರೆ ಬಹುಮಂದಿ ತಾವಾಗಿ ತಾವೇ ಮನಃ ಪೂರ್ವಕವಾಗಿ ಬಂಡಾಯದ ನಾಯಕರನ್ನು ಸೇರಿದರೆಂಬುದರಲ್ಲಿ ಸಂಶಯವೇ ಇಲ್ಲ. ಬಂಡಾಯ ನಾಯಕರು ತಮ್ಮ ಪ್ರಕಟಣೆಗಳಲ್ಲಿ ಮಹದಾಶೆಗಳನ್ನು ತೋರಿಸಿದರು. ಇವುಗಳಿಂದ ಜನರು ಆಕರ್ಷಿತರಾಗಿ ನಮ್ಮ ಪ್ರಭುತ್ವವು ಬುಡ ಮೇಲಾಗುತ್ತದೆಂದು ನಂಬಿದರು."[illegible]

ಬೆಳ್ಳಾರೆಯಿಂದ ಮಂಗಳೂರಿನವರೆಗೆ ದ.ಕ.ಜಿಲ್ಲೆ ಸಂಪೂರ್ಣವಾಗಿ ಸುಮಾರು ಎರಡು ವಾರಗಳ ಕಾಲ ಕ್ರಾಂತಿ ಸೇನೆಯ ವಶದಲ್ಲಿತ್ತು. ಆದರೆ ಕೆಳ ಕೊಡಗಿನಲ್ಲಿ ಪರಿಸ್ಥಿತಿ ಭಿನ್ನವಾಗಿತ್ತು. ಬೋಪು ದಿವಾನ ಮತ್ತು ಪೊನ್ನಪ್ಪ ದಿವಾನ ಬಂಡುಕೋರರ ಚಟುವಟಿಕೆಗಳ ಬಗ್ಗೆ ಖಚಿತ ಮಾಹಿತಿಗಳನ್ನು ಕ್ಲಪ್ತ ಸಮಯಕ್ಕೆ ಪಡೆಯುವಂತಹ ಗುಪ್ತಚರ ವ್ಯವಸ್ಥೆಯನ್ನು ಹಣದ ಆಮಿಷವೊಡ್ಡಿ ರೂಪಿಸಿಕೊಂಡಿದ್ದರು. ಹಾಗಾಗಿ ಕೂಜುಗೋಡು ಮತ್ತು ಗುಡ್ಡೆಮನೆ ಸೋದರರ ಧೈರ್ಯ , ಸಾಹಸ ಮತ್ತು ಜಾಣ್ಮೆಗಳು ಮಡಿಕೇರಿಯನ್ನು ಬ್ರಿಟಿಷ್ ಮುಕ್ತವನ್ನಾಗಿಸುವಲ್ಲಿ ನೆರವಿಗೆ ಬರಲಿಲ್ಲ.

ರೈತ ಬಂಡಾಯವನ್ನು 'ಗೌಡರ ಮೇಲ್ಬೀಳುವಿಕೆ' ಎಂದು ತನ್ನ ಗಜೆಟಿಯರಿನಲ್ಲಿ ಕರೆದಿರುವ ರಿಕ್ಟರನು ಬಂಡಾಯಕ್ಕೆ ನೀಡಿದ್ದು ಆರ್ಥಿಕ ಕಾರಣಗಳನ್ನು ಎನ್ನುವುದು ಗಮನಾರ್ಹವಾದುದು. "ಕೊಡಗನ್ನು ಸ್ವಾಧೀನ ಪಡಿಸಿಕೊಂಡ ಮೇಲೆ ಅಮರ ಸುಳ್ಯ, ಪುತ್ತೂರು ಮತ್ತು ಬಂಟವಾಳಗಳು ಮಂಗಳೂರು ಸಮೀಪವಿದ್ದುದರಿಂದ ಇವುಗಳನ್ನು ಕೆನರಾ ಪ್ರಾಂತ್ಯಕ್ಕೆ

ವರ್ಗಾಯಿಸಲಾಯಿತು. ಹಿಂದೆ ಕೆನಾರದಿಂದ ಇವುಗಳನ್ನು ತೆಗೆದುಕೊಂಡುದಾಗಿತ್ತು. ಕೊಡಗು ರಾಜರ ಕಾಲದಲ್ಲಿ ಕಂದಾಯ ವಸ್ತು ರೂಪದಲ್ಲಿತ್ತು. ಮಂಗಳೂರು ಕಲೆಕ್ಟರ್ ಈಗ ಹಣದಲ್ಲಿ ಪಾವತಿಸುವಂತೆ ಒತ್ತಾಯಿಸಿದರು. ಇದರಿಂದ ರೈತರು ವರ್ತಕರ ಕೃಪೆಯಡಿಯಲ್ಲಿರಬೇಕಾಗಿ ಬಂದದ್ದು ಅಸಂತೋಷಕ್ಕೆ ಕಾರಣವಾಯಿತು"[೫೭]

ರಿಕ್ಟರ್ ದಿವಾನ ಲಕ್ಷ್ಮೀನಾರಾಯಣ ಮತ್ತು ಆತನ ಸಹೋದರ ರಾಮಪ್ಪಯ್ಯ ರೈತರ ಪರವಾಗಿದ್ದರು ಮತ್ತು ಅಪರಂಪನ ಪಿತೂರಿಯನ್ನು ಬೆಂಬಲಿಸಿದ್ದರು ಎಂದು ಉಲ್ಲೇಖಿಸಿದುದರಲ್ಲಿ ತಪ್ಪಿರಲಿಲ್ಲ. ಲಕ್ಷ್ಮೀನಾರಾಯಣನು ಕೊಡವ ದಿವಾನರುಗಳಾದ ಬೋಪು ಮತ್ತು ಪೊನ್ನಪ್ಪ ಬ್ರಿಟಿಷರ ಪರವಿರುವುದನ್ನು ಮತ್ತು ದಿವಾನ ಕುಂಟ ಬಸವ ಚಿಕ್ಕ ವೀರರಾಜನ ಪರಮಾಪ್ತನಾಗಿರುವುದನ್ನು ಸಹಿಸುತ್ತಿರಲಿಲ್ಲ. ಬೋಪು ಕಿವಿ ಕಚ್ಚಿದ್ದರಿಂದ ಆಡಳಿತಾಧಿಕಾರಿ ಲೀಹಾರ್ಡಿ ಲಕ್ಷ್ಮೀ ನಾರಾಯಣನನ್ನು ಬಂಧನದಲ್ಲಿರಿಸಿದ್ದ. ಅದನ್ನು ರಾಮಪ್ಪಯ್ಯ ಸಹಿಸಲು ಸಾಧ್ಯವಿರಲಿಲ್ಲ. ಅಮರ ಸುಳ್ಯ ಸೀಮೆಯಲ್ಲಿ ಭೂ ಸಂಬಂಧ ವಿವಾದಗಳಲ್ಲಿ ಸ್ಥಳೀಯ ಗೌಡರುಗಳನ್ನು ಎದುರು ಹಾಕಿಕೊಂಡಿದ್ದ ಅಮಲ್ದಾರ ರಾಮಪ್ಪಯ್ಯ ರೈತ ಪಡೆಯಲ್ಲಿ ಒಬ್ಬ ಸಾಮಾನ್ಯ ದಂಗೆ ಕೋರನಾಗಿ ಕಾರ್ಯ ನಿರ್ವಹಿಸಲು ಸಾಧ್ಯವಿರಲಿಲ್ಲ. ಬ್ರಿಟಿಷರಿಗೆ ನಿಷ್ಠನಾಗಿದ್ದ ರಾಮಪ್ಪಯ್ಯ ತನ್ನ ದರ್ಪವನ್ನು ಕಡಿಮೆಗೊಳಿಸಿ ವಾಸ್ತವವನ್ನು ಒಪ್ಪಿಕೊಂಡಿದ್ದರೆ ಬ್ರಿಟಿಷ ವಿರುದ್ಧ ಹೋರಾಡಿ ವೀರ ಮರಣವನ್ನಪ್ಪುವ ಸೌಭಾಗ್ಯಕ್ಕೆ ಪಾತ್ರನಾಗುತ್ತಿದ್ದ. ತನ್ನ ದುಡುಕು ಸ್ವಭಾವದಿಂದ ಮತ್ತು ಭೂಮಿಯ ಮೇಲಣ ಮೋಹದಿಂದ ಅವನು ದಂಗೆಗೆ ಮುಂಚೆಯೇ ಬಂಡುಕೋರರ ಕತ್ತಿಗಳಿಗೆ ಬಲಿಯಾದ. ಬಂಡುಕೋರರು ಮಂಗಳೂರನ್ನು ವಶಪಡಿಸಿದ ಮೇಲೆ ಪುರ ಪ್ರಮುಖರ, ದ.ಕ ದ ಮಾಗಣೆ ಮುಖ್ಯಸ್ಥರ , ಪಟೇಲರುಗಳ ಮತ್ತು ಮಾಗಣೆ ಶ್ಯಾನುಭೋಗರುಗಳ ಸಭೆ ಕರೆದು, ಕಲ್ಯಾಣಪ್ಪನ ಇಸ್ತಿಹಾರನ್ನು ಪ್ರಕಟಿಸಿದ ಮೇಲೆ ಇಡೀ ನಾಡು ಬ್ರಿಟಿಷರ ವಿರುದ್ಧ ತಿರುಗಿ ಬಿದ್ದಿತು. ದ,ಕ ಜಿಲ್ಲೆ ಯಾವತ್ತೂ ಒಬ್ಬ ಸ್ಥಳೀಯ ರಾಜನ ಆಡಳಿತಕ್ಕೆ ಒಳಪಟ್ಟಿದ್ದಿಲ್ಲ. ಅದುವೇ ಜಿಲ್ಲೆಯಲ್ಲಿ ಒಗ್ಗಟ್ಟು ಇಲ್ಲದಿರಲು ಕಾರಣವೆಂದು ಭಾವಿಸಿ ಎಲ್ಲರೆ ಅಭಿಪ್ರಾಯದಂತೆ ಲಕ್ಷ್ಮಪ್ಪ ಬಂಗರಸನನ್ನು ಸಮಸ್ತ ತುಳುನಾಡಿನ ಕ್ರಾಂತಿ ರಾಜನೆಂದು ಕ್ರಾಂತಿ ಪಡೆ ಘೋಷಿಸುತ್ತದೆಂಬ ಮಾಹಿತಿಯೊಂದು ಸಂಶೋಧನೆಗೆ ಯೋಗ್ಯವಾಗಿದೆ. [೫೮]

ಈ ಚಿಂತನೆಯ ಹಿಂದೆ ಎರಡು ತರ್ಕಗಳಿವೆ. ಮೊದಲನೆಯದು - ಸಮಸ್ತ ತುಳುನಾಡು ಒಬ್ಬನೇ ರಾಜನ ಅಧಿಪತ್ಯಕ್ಕೆ ಒಳಪಟ್ಟಿದ್ದರೆ ಬ್ರಿಟಿಷರನ್ನು ಎದುರಿಸುವುದು ಬಹಳ ಸುಲಭವಾಗುತ್ತಿತ್ತು ಎನ್ನುವುದು. ಎರಡನೆಯದು – ಕ್ರಾಂತಿಕಾರರಲ್ಲಿ ಮೊದಲು ಬಂಗರಸನನ್ನು ನೇಣಿಗೆ ಹಾಕಿ ಬ್ರಿಟಿಷರು ತಮ್ಮ ಸಂಭಾವ್ಯ ಪ್ರಬಲ ಏದುರಾಳಿಯೊಬ್ಬನನ್ನು ನಿವಾರಿಸಿಕೊಂಡರು

ಎನ್ನುವುದು. ಇಡೀ ಜಿಲ್ಲೆಗೆ ಒಬ್ಬನೇ ರಾಜನಿರುತ್ತಿದ್ದರೆ ಆತ ಕೊಡಗಿನ ರಾಜನಂತೆ ವರ್ತಿಸುವ ಸಾಧ್ಯತೆಯೂ ಇತ್ತು. ಆದರೂ ದ.ಕ ಜಿಲ್ಲೆಯಲ್ಲಿ ಜನರಲ್ಲಿ ಐತಿಹಾಸಿಕವಾಗಿ ಒಗ್ಗಟ್ಟಿರಲಿಲ್ಲ ಎನ್ನುವುದು ನಿಜ. ಅದು ಈಗಲೂ ವಾಸ್ತವವಾಗಿರುವುದು ವರ್ತಮಾನದ ಒಂದು ದುರಂತ.

೭.೪ ಆರ್ಥಿಕ ಬಂಡಾಯದ ಅಂತ್ಯ

ದ.ಕ ಜಿಲ್ಲೆಯಲ್ಲಿ ಬಂಡಾಯದ ಯಶಸ್ಸು ಅಲ್ಪಾಯುಷ್ಯದ್ದಾಗಿತ್ತು. ಏಪ್ರಿಲ್ ೬ ರಂದು ಹಡಗಿನಲ್ಲಿ ಕಣ್ಣಾನೂರಿಗೆ ಮುಟ್ಟಿದ್ದ ಯುರೋಪಿಯನ್ ಕುಟುಂಬಗಳಿಂದಾಗಿ ಮಂಗಳೂರು ಕ್ರಾಂತಿಕಾರರ ಕೈವಶವಾದ ವಾಸ್ತವ ಎಲ್ಲೆಡೆಗೆ ವಾರ್ತೆಯಾಗಿ ಪಸರಿಸಿತು. ಕಣ್ಣಾನೂರಿನಲ್ಲಿದ್ದ ಮಲಬಾರ್ ಕೆನರಾಗಳ ಬ್ರಿಟಿಷ್ ಸೈನ್ಯದ ನಾಯಕ ಬ್ರಿಗೇಡಿಯರ್ ಅಲೆನ್ ತುರ್ತಾಗಿ ಅನಾಹುತ ನಿಭಾವಣೆಯ ಕಾಯಕಕ್ಕೆ ಕೈ ಹಚ್ಚಿದ. ಕರ್ನರ್ ಗ್ರೀನನ ನೇತೃತ್ವದಲ್ಲಿ ಕಣ್ಣಾನೂರಿನಿಂದ ಒಂದು ಪಡೆ ಮಂಗಳೂರಿನತ್ತ ಧಾವಿಸಿತು. ೧೮೩೭ ರ ಏಪ್ರಿಲ್ ೧೬ ರಂದು ಮಂಗಳೂರಿನಲ್ಲಿ ಸಭೆ ಸೇರಿದ ಬ್ರಿಟಿಷ್ ಅಧಿಕಾರಿಗಳು ಬಂಡುಕೋರರನ್ನು ಹೇಗೆ ಎದುರಿಸಬೇಕೆಂದು ಸಮಾಲೋಚನೆ ನಡೆಸಿದರು. ಅಂತಿಮವಾಗಿ ೧೨೦೦ ಯುರೋಪಿಯನ್ ಮತ್ತು ಭಾರತೀಯ ಸಿಪಾಯಿಗಳನ್ನು ಒಳಗೊಂಡ ಸೇನೆಯ ನಾಯಕತ್ವವನ್ನು ಕರ್ನಲ್ ಗ್ರೀನನು ವಹಿಸಿ ಆತನ ನೇತೃತ್ವದಲ್ಲಿ ದಂಗೆಯನ್ನು ಅಡಗಿಸುವುದೆಂದು ತೀರ್ಮಾನಿಸಲಾಯಿತು.

ಕರ್ನಲ್‌ಗ್ರೀನ್ ತನ್ನ ಸೇನೆಯನ್ನು ಮೊದಲು ಫರಂಗಿ ಪೇಟೆಗೆ ಒಯ್ದ. ಮೂಲತಃ ಅರ್ಕುಳವೆಂದು ಕರೆಯಲ್ಪಡುತ್ತಿದ್ದ ಈ ಊರು ಬ್ರಿಟಿಷ್ ಸೇನೆಯ ತಂಗುದಾಣವಾಗಿ ಫರಂಗಿಪೇಟೆ ಎನಿಸಿತ್ತು. ಫಿರಂಗಿ ಸಹಿತ ಬೃಹತ್ ಬ್ರಿಟಿಷ್ ಸೇನೆ ತಮ್ಮ ಬೆಂಬತ್ತಿ ಬರುತ್ತಿರುವುದು ತಿಳಿದ ರೈತದಂಡು ಭೀತಿಯಿಂದ ಪಲಾಯನ ಮಾಡಿತು. ಫರಂಗಿ ಪೇಟೆಯಲ್ಲಿ ಕರ್ನಲ್ ಗ್ರೀನನಿಗೆ ಯಾವ ಪ್ರತಿರೋಧವೂ ಎದುರಾಗಲಿಲ್ಲ.ಅವನ ಸೇನೆ ಬಂಟವಾಳಕ್ಕೆ ಬಂದಾಗ ಅಲ್ಲಿಗೆ ಮುಂಬಯಿಯಿಂದ ಮೇಜರ್ ಏವರೆಸ್ಟ್‌ನ ನೇತೃತ್ವದಲ್ಲಿ ಬಂದ ಬೃಹತ್ ಸೇನೆ ಕರ್ನಲ್ ಗ್ರೀನನ ಸೇನೆಯನ್ನು ಸೇರಿಕೊಂಡಿತು. ಬಂಟವಾಳ ಆಗ ಪ್ರಮುಖ ವ್ಯಾಪಾರ ಕೇಂದ್ರವಾಗಿತ್ತು. ಇಡೀ ಜಿಲ್ಲೆಗೆ ಉಪ್ಪು ವಿತರಿಸುವ ಕೋಠಿ ಅಲ್ಲಿತ್ತು. ಸಮುದ್ರದಿಂದ ಅಲ್ಲಿಗೆ ನೇತ್ರಾವತಿ ಮೂಲಕ ಬರಲು ಒಳನಾಡ ಜಲ ಸಾರಿಗೆ ವ್ಯವಸ್ಥೆಯಿತ್ತು. ಇಲ್ಲಿನ ವರ್ತಕರು ತಮ್ಮ ಹಿತಾಸಕ್ತಿಗೆ ತೊಂದರೆಯಾಗುತ್ತದೆಂದು ರೈತ ಬಂಡಾಯವನ್ನು ಕಾಟಕಾಯಿಯೆಂದು ಅಪಪ್ರಚಾರ ಮಾಡಿದ್ದರು. ಅವರಿಂದ ಬ್ರಿಟಿಷ್ ಸೇನೆಗೆ ಸರ್ವ ಸಹಕಾರ ದೊರೆಯಿತು.[೫೯]

೧೮೩೭ ಏಪ್ರಿಲ್ ೨೯ ರಂದು ಬ್ರಿಟಿಷ್ ಸೈನ್ಯ ಬೆಳ್ಳಾರೆಗೆ ಬಂದಾಗ ಅದನ್ನು ಎದುರಿಸುವವರೇ ಇರಲಿಲ್ಲ. ರಕ್ತ ಹರಿಯದೆ ಬಂಡಾಯ ಹತ್ತಿಕ್ಕಲ್ಪಟ್ಟಿತು.

ಕೊಡಗಿನಲ್ಲಿ ಗುಡ್ಡೆಮನೆ ಅಪ್ಪಯ್ಯ ಮತ್ತು ತಮ್ಮಯ್ಯ, ನಾಲ್ಕು ನಾಡು ಉತ್ತ ಮತ್ತು ಶಾಂತಳ್ಳಿ ಮಲ್ಲಯ್ಯ ಕಂಪೆನಿ ಸರಕಾರದ ವಿರುದ್ಧ ಬಂಡೇಳುವಂತೆ ಜನರನ್ನು ಪ್ರಚೋದಿಸಿದರೂ, ಅದು ಸಫಲವಾಗದಿರಲು ಕೊಡಗಿನ ಸಂಭೇದಾರ ಮಾದಯ್ಯ ೧೮೩೭ ರ ಮಾರ್ಚ್ ೩೧ ರಂದೇ ಕಲ್ಯಾಣ ಸ್ವಾಮಿಯ ಯೋಜನೆಗಳನ್ನು ಮತ್ತು ಘೋಷಣೆಯ ಯಥಾ ನಕಲುಗಳನ್ನು ಲೀ ಹಾರ್ಡಿಗೆ ಸಲ್ಲಿಸಿದ್ದು ಪ್ರಮುಖ ಕಾರಣವಾಗಿತ್ತು. ೬೦ ಲೀಹಾರ್ಡಿ ಮತ್ತು ಕರ್ನಲ್ ವಿಲಿಯಂಸನ್ ಮುನ್ನೆಚ್ಚರಿಕೆ ವಹಿಸಿ ಮೂವತ್ತಾರನೇ ರೆಜಿಮೆಂಟನ್ನು ಸನ್ನದ್ಧಗೊಳಿಸಿ ಮೇಲು ಕೊಡಗಿನಲ್ಲಿ ಬಂಡಾಯ ಹರಡದಂತೆ ನೋಡಿಕೊಳ್ಳುವಲ್ಲಿ ಸಫಲರಾದರು. ಏಪ್ರಿಲ್ ೨೬ಕ್ಕಾಗುವಾಗ ಕೊಡಗಿನಲ್ಲಿ ಸಂಪೂರ್ಣವಾಗಿ ಮತ್ತು ಕೆಳ ಕೊಡಗಿನ ಬಹುತೇಕ ಭಾಗಗಳ ದಂಗೆಯನ್ನು ಹತ್ತಿಕ್ಕಲು ಲೀಹಾರ್ಡಿಗೆ ಸಾಧ್ಯವಾಯಿತು. ಏಪ್ರಿಲ್ ೨೯ರಂದು ಬೆಳ್ಳಾರೆಯಲ್ಲಿ ನಡೆದ ಸಣ್ಣದೊಂದು ದಂಗೆಯನ್ನು ನಿರ್ದಾಕ್ಷಿಣ್ಯವಾಗಿ ಹತ್ತಿಕ್ಕಲಾಯಿತು. ಅದಾಗಲೇ ಕೆನರಾ ಸಂಪೂರ್ಣವಾಗಿ ತಣ್ಣಗಾಗಿತ್ತು.[೬೧]

ರೈತ ಬಂಡಾಯದ ಬಗ್ಗೆ ಸ್ವತಃ ಕಬ್ಬನ್ ಹೀಗೆಂದಿದ್ದಾನೆ."ಅಪರಂಪರ ಮತ್ತು ಅವನ ಅನುಯಾಯಿಗಳ ಕೃತ್ಯಗಳು ಅವರು ಜನರಿಗೆ ಕೊಟ್ಟ ಭರವಸೆಗಳೇ ಮೊದಲಾದ ಅವರ ಹಂಚಿಕೆಗಳು ಅವರ ಉದ್ದೇಶವನ್ನು ಸ್ಪಷ್ಟೀಕರಿಸುತ್ತವೆ. ಪ್ರಜೆಗಳನ್ನು ಲೂಟಿ ಮಾಡುವುದು ಅವರ ಉದ್ದೇಶವಾಗಿರಲಿಲ್ಲ. ಬ್ರಿಟಿಷ್ ಪ್ರಭುತ್ವವನ್ನು ಕಿತ್ತೊಗೆದು ತಮ್ಮ ಪ್ರಭುತ್ವ ಸ್ಥಾಪನೆ ಮಾಡುವುದು ಅವರ ಉದ್ದೇಶವಾಗಿತ್ತು. ನಗರಗಳ, ಹಳ್ಳಿಗಳ ಲೂಟಿ ಲಬಾಡು ಮಾಡುವುದು ಅವರ ಉದ್ದೇಶವಾಗಿರದೆ ಸರಕಾರದ ಖಜಾನೆಗಳನ್ನು ಲೂಟಿ ಮಾಡುವುದು ಮಾತ್ರ ಅವರ ಗುರಿಯಾಗಿತ್ತು. ಪುತ್ತೂರು ಅಮರ ಸುಳ್ಯಗಳ ಉದಾಹರಣೆಗಳಿಂದ ಇದು ಸ್ಪಷ್ಟವಾಗದಿರದು. ಬಂಡಾಯವನ್ನು ಬೆಳೆಸಿದವರು ಇಲ್ಲಿನ ನಿವಾಸಿಗಳೇ. ಜಿಲ್ಲೆಯ ಇತರ ಕಡೆಗಳಲ್ಲೂ ಬಂಡಾಯ ತಲೆಯೆತ್ತಿತ್ತು. ಎಲ್ಲೂ ಊರು ಕೇರಿಗಳಲ್ಲಿ ಲೂಟಿಯಾಗಲಿಲ್ಲ, ಬಂಡಾಯಗಾರರು ದೇಶದಲ್ಲೆಡೆ ಲೂಟಿ ನಡೆಸಿದ್ದರೆ ಅದರ ಫಲವನ್ನು ಅವರೇ ಉಣ್ಣಬೇಕಾಗುತ್ತಿತ್ತು. "[೬೨]

ಕೊಡಗಿನವರು ರೈತ ಬಂಡಾಯದುದ್ದಕ್ಕೂ ವರ್ತಿಸಿದ ರೀತಿಯನ್ನು ಅಕ್ಷಮ್ಯವೆಂದು ತಿ.ತಾ ಶರ್ಮರಂತಹ ಅನೇಕ ಇತಿಹಾಸ ವಿಶ್ಲೇಷಣಾಕಾರರು ಭಾವಿಸುತ್ತಾರೆ. ಕೊಡಗಿನವರು ಬ್ರಿಟಿಷರ ಪರವಾಗಿದ್ದರೂ ಕಲ್ಯಾಣ ಸ್ವಾಮಿಯ ಬಂಧನವಾಗದೆ ಕ್ರಾಂತಿಯ ಹುಟ್ಟಡಗಿಸಲು

ಸಾಧ್ಯವಿಲ್ಲವೆಂಬುದನ್ನು ಚೆನ್ನಾಗಿ ಅರಿತಿದ್ದ ಜಿಲ್ಲಾಧಿಕಾರಿ ಲೆವಿನ್ ಆತನನ್ನು ಅವನ ಅನುಯಾಯಿಗಳನ್ನು ಹಿಡಿದು ಕೊಟ್ಟವರಿಗೆ ಹತ್ತು ಸಾವಿರ ರೂಪಾಯಿಗಳ ನಗದು ಇನಾಮು ನೀಡುವುದಾಗಿ ಹೊರಡಿಸಿದ ಘೋಷಣೆ ೧೮೩೭ರ ಮೇ.೧೩ರಂದು ಪುಟ್ಟಬಸವ ಮತ್ತು ಅವನ ಸಹಾಯಕರ ಬಂಧನದಲ್ಲಿ ಯಶಸ್ಸನ್ನು ಕಂಡಿತು.

"ಈ ಕಾರ್ಯ ಸಿದ್ಧಿಗೆ ಮತ್ತು ಬಂಡಾಯವನ್ನು ಸಂಪೂರ್ಣವಾಗಿ ಮಟ್ಟ ಹಾಕಲಿಕ್ಕೆ ಮುಖ್ಯ ಕಾರಣ ಕೊಡಗಿನ ಬೋಪು ದಿವಾನ ಮತ್ತು ಕೊಡಗಿನ ಸೇನೆ. ಕೆನಾರ ಜಿಲ್ಲೆಯಲ್ಲೆಲ್ಲ ಹರಡಿ ನೆರೆಹೊರೆ ಪ್ರಾಂತ್ಯಗಳಿಗೆ ಪಸರಿಸಿದ ಈ ಬಂಡಾಯವನ್ನು ಆರು ವಾರಗಳಲ್ಲಿ ತಣ್ಣಗೆ ಮಾಡಲಾಯಿತು. ಈ ಮಹಾತ್ಕಾರ್ಯ ಸಾಧನೆಯಲ್ಲಿ ವಿಶೇಷ ಸೇವೆ ಸಲ್ಲಿಸಿದ ಬೋಪು ದಿವಾನ ಮತ್ತು ಅವನ ಪಕ್ಷದವರಿಗೆ ಬಂಡಾಯಗಾರರಿಂದ ವಶಪಡಿಸಿಕೊಂಡ ಭಂಡಾರವನ್ನೆಲ್ಲ ಬಹುಮಾನವಾಗಿ ಕೊಡಲಾಯಿತು."[೬೩]

ದಂಗೆಯನ್ನು ನಿರ್ದಾಕ್ಷಿಣ್ಯವಾಗಿ ಹತ್ತಿಕ್ಕುವಾಗ ನಾಯಕರುಗಳನ್ನು ಬಂಧಿಸಲಾಯಿತು. ೧೮೩೭,ಏಪ್ರಿಲ್ ೨೮ ರಂದು ಕಲ್ಯಾಣ ಸ್ವಾಮಿಯನ್ನು ಹಿಡಕೊಟ್ಟವರಿಗೆ ರೂ.೧೦,೦೦೦, ಕುಕನೂರು ಚೆನ್ನಯ ಮತ್ತು ಕರಣಿಕ ಸುಬ್ರಾಯರನ್ನು ಹಿಡಕೊಟ್ಟವರಿಗೆ ರೂ.೫೦೦೦ಇನಾಮು ಘೋಷಿಸಲಾಯಿತು.[೬೪] ೧೮೩೭ರ ಮೇ.೧೩ ರಂದು ಕಲ್ಯಾಣಸ್ವಾಮಿಯನ್ನು ಬ್ರಿಟಿಷರು ಸುಬೇದಾರ್ ಮಾದಯ್ಯ ಮತ್ತು ಕರಿಬಸವಯ್ಯನ ನೆರವಿನಿಂದ ಮಂಜರಾಬಾದಿನಲ್ಲಿ ಬಂಧಿಸಿದರು. ಅವನ ವಿಚಾರಣೆ ನಡೆಸಿ ೧೮೩೭ರ ಜೂನ್ ೧೯ ರಂದು ಮಂಗಳೂರಲ್ಲಿ ಗಲ್ಲಿಗೇರಿಸಲಾಯಿತು.[೬೫] ಕೊಡಗಿನಲ್ಲಿ ಕಲ್ಯಾಣಸ್ವಾಮಿಯ ಬಲಗೈಯಂತಿದ್ದ ಗುಡ್ಡೆರ ಅಪ್ಪಯ್ಯನನ್ನು ೧೮೩೭ರ ಅಕ್ಟೋಬರ್ ೩೧ರಂದು ಮಡಿಕೇರಿ ಕೋಟೆಯೆದುರು ತೂಗು ಹಾಕಲಾಯಿತು. ಬೆಳ್ಳಾರೆಯ ಕುಕನೂರು ಚೆನ್ನಯ್ಯ, ಕಾಯತೋಡಿ ಸುಬ್ರಾಯ ಮತ್ತು ಕೆದಂಬಾಡಿ ಅಣ್ಣಯ್ಯರ ವಿಚಾರಣೆ ನಡೆಸಿ ಮರಣದಂಡನೆ ವಿಧಿಸಲಾಯಿತು.[೬೬]

೨೩ಮೇ ೧೮೩೭ರಂದು ನಂದಾವರದ ಲಕ್ಷ್ಮಪ್ಪ ಬಂಗರಸನಿಗೆ ಗಲ್ಲು ಶಿಕ್ಷೆ ನೀಡಲಾಯಿತು.[೬೭] ಉಪ್ಪಿನಂಗಡಿಯ ಪ್ಯೂನು ಮಂಜನಿಗೆ ಬ್ರಿಟಿಷರ ವಿರುದ್ಧ ಶಸ್ತ್ರಾಸ್ತ್ರ ಸಾಗಿಸುತ್ತಿದುದಕ್ಕೆ ಮರಣ ದಂಡನೆಯಾಯಿತು.[೬೮] ಆರಂಭದಲ್ಲಿ ಕೆದಂಬಾಡಿ ರಾಮಗೌಡನಿಗೆ ಮರಣ ದಂಡನೆ ನೀಡಲು ಕೋರ್ಟು ನಿರ್ಧರಿಸಿತು. ಆ ಬಳಿಕ ಅದನ್ನು ಜೀವಾವಧಿ ಶಿಕ್ಷೆಗಿಳಿಸಿ ಆತನನ್ನು ಸಿಂಗಾಪುರಕ್ಕೆ ಕಳುಹಿಸಲಾಯಿತು. ಆತ ಬದುಕಿರುವವರೆಗೆ ಕಬ್ಬಿಣದ ಸಂಕೋಲೆಗಳಲ್ಲಿ ಬಂಧಿಸಿ ರಸ್ತೆ ಮತ್ತು ಸಾರ್ವಜನಿಕ ಕಾಮಗಾರಿಗಳಲ್ಲಿ ಅವನನ್ನು ಕಠಿಣವಾಗಿ

ದುಡಿಸಲಾಯಿತು. [೧೯] ಚೆಟ್ಟಿ ಕುಡಿಯ, ಕರ್ತು ಕುಡಿಯ ಪೆರಾಜೆ ಕೃಷ್ಣಯ್ಯ ಮತ್ತು ಜೀರಣ್ಣ ಬಂಟರನ್ನು ಆಜೀವ ಕಾರಾಗೃಹ ಶಿಕ್ಷೆ ವಿಧಿಸಿ ಸಿಂಗಾಪುರಕ್ಕೆ ಕಳುಹಿಸಲಾಯಿತು. ಶಾಂತಯ್ಯ, ಉತ್ತಯ್ಯ, ಮಲ್ಲಯ್ಯರಂತಹ ನಾಯಕರುಗಳಿಗೆ ೧೫ವರ್ಷಗಳ ಕಾರಾಗೃಹ ಶಿಕ್ಷೆಯಾಯಿತು.[೨೦] ೧೮೩೭ ರ ನವೆಂಬರ್ ೨೭ರಂದು ಮದ್ರಾಸು ಕೋರ್ಟಿಗೆ ಲೆವಿನ್ ಕಳಿಸಿದ ವರದಿಯಲ್ಲಿ ೧೮೩೭ರ ನವೆಂಬರ್ ೨೧ ರವರೆಗೆ ೧೧೧೩ ಕೈದಿಗಳ ವಿಚಾರಣೆ ನಡೆಸಲಾಗಿದೆ. ಎಂಬ ಉಲ್ಲೇಖವಿದೆ.[೨೧]

ದಂಗೆ ಅಭೂತಪೂರ್ವವಾಗಿತ್ತು. ದಂಗೆಕೋರರ ಉದ್ದೇಶ ಮಾತ್ರ ಈಡೇರಲಿಲ್ಲ. ದಂಗೆಯ ಬಗ್ಗೆ ಅಧ್ಯಯನ ಮಾಡಿದ ಸಿ.ಆರ್ ಕಾಟನ್ – ಕೆನರಾದಲ್ಲಿ ಸೇನಾಬಲ ಕಡಿಮೆಯಿದ್ದದ್ದೇ ದಂಗೆಕೋರರು ಮಡಿಕೇರಿಗೆ ಹೋಗದೆ ಮಂಗಳೂರಿಗೆ ಹೋಗಲು ಕಾರಣವೆಂದಿದ್ದಾನೆ. ಆ ಬಳಿಕ ಕೆನರಾದಲ್ಲಿ ಸೇನಾಬಲವನ್ನು ಹೆಚ್ಚಿಸಲಾಯಿತು. ಕ್ರಾಂತಿ ವಿಫಲವಾದರೂ ವಸಾಹತುಶಾಹಿ ಆಡಳಿತದ ಪರಿಣಾಮ ಮತ್ತು ಅದಕ್ಕೆ ಜನರ ಪ್ರತಿಕ್ರಿಯೆ ಏನು ಎಂಬುದು ಈ ಕ್ರಾಂತಿಯಿಂದ ವಿದಿತವಾಯಿತು.

ಮುಂಬೈ ಸಮಿತಿ ಅಭಿಪ್ರಾಯ ಪಟ್ಟಂತೆ " ಈ ಬಂಡಾಯದ ಅವಧಿಯ ಉದ್ದಕ್ಕೂ ಕೊಡಗಿನ ಜನರು ಸರಕಾರದ ಭಕ್ತರಾಗಿ ವರ್ತಿಸಿದವರೆಂಬುದೊಂದು ಅತ್ಯಂತ ನಿರಾಶಾದಾಯಕ ವಾಸ್ತವ ಸಂಗತಿ. ಈ ಕಾರಣದಿಂದ ಬೋಪು ದಿವಾನನಿಗೆ ಬಂಡಾಯದ ನಾಯಕರನ್ನು ಹುಡುಕಿ ಹಿಡಿದು ಅವರ ದ್ರೋಹ ಕೃತ್ಯಗಳ ಹುಟ್ಟಡಗಿಸಲು ಸಾಧ್ಯವಾಯಿತು. ಈ ಬಂಡಾಯದ ನಾಯಕರನ್ನೆಲ್ಲ ಬಂಧಿಸಿ ವಿಚಾರಣೆಗೆ ಒಳಪಡಿಸಿ ಮರಣಶಿಕ್ಷೆ ವಿಧಿಸಿದ್ದಾಯಿತು". [೨೨]

ಬ್ರಿಟಿಷರ ಪರವಹಿಸಿ ಬಂಡಾಯವನ್ನು ಅಡಗಿಸಲು ಕೊಡವರು ಸಮರ್ಥರಾದುದನ್ನು ಹೀಗೆ ದಾಖಲಿಸಲಾಗಿದೆ. " ದಿವಾನ ಲಕ್ಷ್ಮಿನಾರಾಯಣಯ್ಯನ ತಮ್ಮನು ಮತ್ತು ಅಪರಂಪರನು ಸುಳ್ಯದಲ್ಲಿ ದಂಗೆ ಎದ್ದು ಮಂಗಳೂರಿಗೆ ಹೋಗಿ ಅಲ್ಲಿ ಖಜಾನೆಯನ್ನು ಲೂಟಿ ಮಾಡಿದರು ಈ ಸಮಯದಲ್ಲಿ ಕೊಡಗು ದೇಶದ ಗೌಡರು ಮತ್ತು ಶಿವಾಚಾರದವರು ಅಪರಂಪರನ ಹೆಸರಿನಲ್ಲಿ ದಂಗೆಯೇಳಲು ಸನ್ನಾಹ ನಡೆಸಿದರು. ಕೊಡಗರು ಏನು ಮಾಡಬೇಕೆಂಬುದು ಗೊತ್ತಿಲ್ಲದೆ ಗಾಬರಿಯಲ್ಲಿದ್ದರು. ಎಲ್ಲವೂ ಇಂಗ್ಲೀಷರ ತಿಳುವಳಿಕೆಗೆ ಬಂದು ಅಪ್ಪಾರಂಡ ಬೋಪರ್ಣ ದಿವಾನನು ಈ ಕಾಟಕಾಯಿಯನ್ನು ಅಡಗಿಸಿ ಬಿಟ್ಟನು.[೨೩]

ಇದಕ್ಕೆ ಇಂಗ್ಲೀಷ್ ಸರಕಾರವು ಸಂತೋಷಪಟ್ಟು ಮಂಗಳೂರು ಖಜಾನೆ ಲೂಟಿಯಲ್ಲಿ ದಂಗೆಕೋರರಿಗೆ ಸಿಕ್ಕಿದ ೨೦ ಸಾವಿರ ರೂಗಳನ್ನು ಕಾಟಕಾಯಿಯನ್ನು ಅಡಗಿಸಿದವರಿಗೆ ಬಟವಾಡೆ ಮಾಡಲು ಅಪ್ಪಣೆ ಮಾಡಿದರು. ಕೊಡಗರು ಹಣವನ್ನು ತೆಗೆದುಕೊಳ್ಳಲು ಒಪ್ಪದೇ ಇದ್ದುದರಿಂದ ಅವರಿಗೆ ಜಹಗೀರ ಉಂಬಳಿ ಪಿಂಚಣಿ ಮತ್ತು ಪದಕ ನೀಡಲ್ಪಟ್ಟವು.[೭೪]

ಕೂರ್ಗ್ ಮೆಮೊಯರ್ಸ್ ಕೃತಿಯಲ್ಲಿ ಐ.ಮ ಮುತ್ತಣ್ಣನವರು ಬ್ರಿಟಿಷ್ ದಂಗೆಯನ್ನು ಅಡಗಿಸಲು ಸಹಾಯ ಮಾಡಿದ ೭ ಕೊಡವ ಕುಟುಂಬಗಳನ್ನು ಹೆಸರಿಸಿದ್ದಾರೆ. ಚಿನ್ನಪ್ಪನವರು ೩೨ ಕೊಡವ ಕುಟುಂಬಗಳು ಬೋಪು ದಿವಾನನನ್ನು ಬೆಂಬಲಿಸಿ ಬ್ರಿಟಿಷರಿಂದ ಜಹಗೀರು ಪಡೆದುದನ್ನು ದಾಖಲಿಸಿದ್ದಾರೆ.[೭೫]

ದಂಗೆಯನ್ನು ಅಡಗಿಸಲು ನೆರವಾದವರಿಗೆ ೧೧.೫ ತೊಲ ಚಿನ್ನದ ಕೊಡಗು ಪದಕ ಮತ್ತು ಚೈನನ್ನು ಉಡುಗೊರೆಯಾಗಿ ನೀಡಲಾಯಿತು. ಇದರ ವ್ಯಾಸ 2". ಕೊಡಗು ಪದಕದ ಒಂದು ಬದಿಯಲ್ಲಿ ಕೊಡಗು ಯೋಧ ಹೋರಾಡುವ ಭಂಗಿಯ ಚಿತ್ರ, ಇನ್ನೊಂದು ಬದಿಯಲ್ಲಿ ವೃತ್ತಾಕಾರದ ಹೂಮಾಲೆಯೊಳಗೆ ಪೀಚೆಕತ್ತಿ ಮತ್ತು ಒಡಿ ಕತ್ತಿ ಚಿತ್ರದೊಡನೆ ಇಂಗ್ಲೀಷ್ ಮತ್ತು ಕನ್ನಡದಲ್ಲಿ ಕೊಡಗರು ಬ್ರಿಟಿಷ್ ಸರ್ಕಾರಕ್ಕೆ ತೋರಿಸಿದ ನಿಷ್ಠೆ ಮತ್ತು ಮೇಲ್ಮಟ್ಟದ ವರ್ತನೆಗಾಗಿ ಎಂದು ಬರೆಯಲಾಗಿತ್ತು. ("For distinguished conduct and loyalty to the British Government, Coorg, April – 1837".)[೭೬]

ದಿವಾನ್ ಅಪ್ಪಾರಂಡ ಬೋಪು ದಂಗೆಯನ್ನು ಅಡಗಿಸಿದ ತನ್ನ ಸೇವೆಗೆ ಬ್ರಿಟಿಷರಿಂದ ಸಿಕ್ಕಿದ ನಗದು ಹಣವನ್ನು ಅವರಿಗೆ ಹಿಂತಿರುಗಿಸಿ ೧೮೩೭ ಮೇ.೫ ರಂದು ಲೆವಿನ್‌ಗೆ ಒಂದು ಪತ್ರ ಬರೆದಿದ್ದ.

"ನಾನಾಗಲೀ ನನ್ನ ಜನರಾಗಲಿ ಹಣದ ಆಸೆಯಿಂದ ನಮ್ಮ ಸೇವೆಯನ್ನು ಸಲ್ಲಿಸಿದ್ದಲ್ಲ. ನಮ್ಮ ಕೊಡಗು ದೇಶದ ಮತ್ತು ನಮ್ಮ ಖಾವಂದರಾದ ಕ್ಯಾಪ್ಟನ್ ಲೀ ಹಾರ್ಡಿಯವರ ಹೆಸರನ್ನು ಮೇಲಕ್ಕೆತ್ತಲು, ನಮಗೆ ಸಂತೃಪ್ತಿಯನ್ನುಂಟುಮಾಡಲು, ಅಪರಂಪಾರನ ಸೋದರನೆಂದು ನಟಿಸುವ ಮತ್ತು ಕೆನಾರಾದಲ್ಲಿ ದಂಗೆಯೇಳಲು ಕಾರಣ ಕರ್ತರಾದ ಅಂತಹ ದಂಗೆಕೋರನನ್ನು ಹಿಡಿದು ಶಿಕ್ಷಿಸಲು ನಮ್ಮ ಸೇವೆ ಸಲ್ಲಿಸಿರುತ್ತೇವೆ. ಹಾಗೆ ಮಾಡುವ ಮೂಲಕ ಕೊಡಗಿನ ಬ್ರಿಟಿಷ್ ಸರಕಾರದಡಿಯಲ್ಲಿ ವಿಶೇಷ ಸ್ಥಾನಮಾನ ದೊರೆಯುತ್ತದೆ ಎಂಬ ನಿಷ್ಠೆ ಮತ್ತು ಹೆಸರುಗಳಿಸುವ ಇಚ್ಛೆಯಿಂದ ನಮ್ಮ ಸೇವೆಗಳನ್ನು ಸಲ್ಲಿಸಿದ್ದೆವೆಯೋ ಹೊರತು ಇನ್ನಾವುದೇ ಆಸೆಗಳಿಂದಲ್ಲ."[೭೭]

ದ.ಕ ದಲ್ಲಿ ಬ್ರಿಟಿಷರ ಪರವಾಗಿ ನಿಂತವರಿಗೆ ಲೆವಿನ್ ಸಾಕಷ್ಟು ಪುರಸ್ಕಾರಗಳನ್ನು ನೀಡಿದ. ಅವನ ಸಲಹೆಯಂತೆ ಬಂಟವಾಳದ ರಂಗ ಬಾಳಿಗನಿಗೆ ಆತ ಬ್ರಿಟಿಷರ ಸೇನೆಯ ೨ನೇ ರೆಜಿಮೆಂಟನ್ನು ಕಳುಹಿಸಲು ಮಾಡಿದ ಸಾಮಯಿಕ ಸಹಾಯಕ್ಕಾಗಿ ಕೆಲವು ವಿನಾಯಿತಿಗಳನ್ನು ಮತ್ತು ಅವನ ೩ ತಲೆಮಾರುಗಳಿಗೆ ಭೂ ಕಂದಾಯ ಮನ್ನಾ ಸವಲತ್ತನ್ನು ನೀಡಲಾಯಿತು.[೭೮]

೧೮೩೭ರ ಮೇ ೨೦ರಂದು ಲೀಹಾರ್ಡಿಯು ಬೆಂಗಳೂರಿನಲ್ಲಿ ಕಛೇರಿ ಕಾರ್ಯದರ್ಶಿಯಾಗಿ ಕೆಲಸ ಮಾಡುವ ಎಂ. ಕ್ಲಾರ್ಕ್‌ನಿಗೆ ಪತ್ರ ಬರೆದು "ಬ್ರಿಟಿಷ್ ಸರಕಾರಕ್ಕೆ ಕೊಡಗರಂತಹ ಸ್ವ ಇಚ್ಛೆಯ ವಿಶ್ವಾಸಿಗ ಮತ್ತು ಭಕ್ತಿಯ ಪ್ರಜೆಗಳು ಬೇರೆಲ್ಲೂ ಸಿಗಲಾರರು" ಎಂದು ವರ್ಣಿಸಿ ಬೋಪು, ಪೊನ್ನಪ್ಪ ಮತ್ತು ಅವರ ತಂಡಕ್ಕೆ ಬಹುಮಾನಗಳನ್ನು ನೀಡಬೇಕೆಂದು ಶಿಫಾರಸು ಮಾಡಿದ.[೭೯]

ಕೊಡಗರು ರೈತ ದಂಗೆಯನ್ನು ಬೆಂಬಲಿಸದಿರಲು ಗೌಡ ಮತ್ತು ಕೊಡಗರ ನಡುವೆ ಬ್ರಿಟಿಷರು ಬಿರುಕುಂಟು ಮಾಡಿದ್ದು ಕಾರಣವೆಂದು ಅಭಿಪ್ರಾಯ ವ್ಯಕ್ತಪಡಿಸಲಾಗಿದೆ. [೮೦]

ವಾಸ್ತವವಾಗಿ ಬ್ರಿಟಿಷರನ್ನು ಕೊಡಗರು ಬೆಂಬಲಿಸಿದ್ದಕ್ಕೆ ಚಾರಿತ್ರಿಕ ಕಾರಣಗಳಿವೆ. ಹಾಲೇರಿ ಮೂಲ ಸಂಸ್ಥಾನ ಹುಟ್ಟಿಕೊಡದ್ದು ಉತ್ತರ ಕೊಡಗಿನಲ್ಲಿ, ಅದು ನಿಧಾನವಾಗಿ ದಕ್ಷಿಣ ಕೊಡಗಿಗೆ ಪಸರಿಸುವಾಗ ಇಂಗ್ಲೀಷರ ಪ್ರಭಾವ ಕೊಡವರ ಮೇಲೆ ಬಿದ್ದಿರಬೇಕು. ಮೂಲತಃ ಬುಡಕಟ್ಟು ಜನಾಂಗವಾದ ಕೊಡವರು ಸಂಘಟಿತರಾಗಿದ್ದರೆ, ಅದಕ್ಕೆ ಟಿಪ್ಪುವಿನ ಭೀತಿ ಕಾರಣವಾಗಿರಬೇಕು. ಹೈದರ್ ಮತ್ತು ಟಿಪ್ಪುವನ್ನು ಎದುರಿಸಲೆಂದೇ ಬ್ರಿಟಿಷರು ಕೊಡವರನ್ನು ಸಂಘಟಿಸಿದಂತೆ ಕಂಡು ಬರುತ್ತದೆ. ಕೊಡಗು ಎಂಬ ನಾಡನ್ನು ಕಟ್ಟಿದ್ದ ದೊಡ್ಡವೀರ ರಾಜ ಇಂಗ್ಲೀಷರೊಡನೆ ಮೈತ್ರಿಯಿಂದ ಇದ್ದುದರಿಂದ ಕೊಡಗರು ಅವನ ಪರವಾಗಿದ್ದರು. ಚಿಕ್ಕ ವೀರನು ಬ್ರಿಟಿಷರನ್ನು ವಿರೋಧಿಸಿದಾಗ ಸಹಜವಾಗಿ ಕೊಡವರ ವಿರೋಧ ಕಟ್ಟಿಕೊಂಡ. ಅವನು ತನಗಿಂತ ಹಿರಿಯನಾದ ಬೋಪು ದಿವಾನನಿಗೆ ಯಾವುದೇ ಗೌರವ ನೀಡದೆ ಇದ್ದುದು ಮತ್ತು ಕೊಡವನೊಬ್ಬ ಕೊಡಗಿನ ಸಿಂಹಾಸನದಲ್ಲಿ ವಿರಾಜಮಾನನಾಗಬೇಕೆಂಬ ಕನಸನ್ನು ಸಾಕ್ಷಾತ್ಕರಿಸಲು ಬೋಪು ಯತ್ನಿಸಿದ್ದು ಚಿಕ್ಕ ವೀರನ ಪದಚ್ಯುತಿಗೆ ಕಾರಣವಾಯಿತು. ಕಂದಾಯ ವ್ಯವಸ್ಥೆ ಬದಲಾಗದ ಕಾರಣ ಮತ್ತು ಬ್ರಿಟಿಷರು ಎಂದೂ ಕೊಡವರನ್ನು ಎದುರು ಹಾಕಿಕೊಳ್ಳಲು ಹೋಗದ ಕಾರಣ ಕೊಡವರಿಗೆ ಬ್ರಿಟಿಷರನ್ನು ವಿರೋಧಿಸಲು ಕಾರಣಗಳೇ

ಇರಲಿಲ್ಲ. ಹಾಗಾಗಿ ರೈತ ಬಂಡಾಯದಿಂದ ಕೊಡವರು ದೂರ ಉಳಿದು ಬಿಟ್ಟಂತೆ ಕಂಡು ಬರುತ್ತದೆ.

ಉಲ್ಲೇಖಗಳು ಮತ್ತು ಟಿಪ್ಪಣಿಗಳು

೧. ಕಾಟಕಾಯಿ ಎಂಬ ಪದಕ್ಕೆ ದರೋಡೆ ಮತ್ತು ಬಂಡಾಯ ಎಂಬ ಅರ್ಥಗಳಿವೆ. ಅದು ದರೋಡೆ ಅಲ್ಲ ಎನ್ನುವುದಕ್ಕೆ ಅದರ ಬಗ್ಗೆ ಅಧ್ಯಯನ ನಡೆಸಿ ಆಗಿನ ಕಲೆಕ್ಟರ್ ಲೆವಿನ್ ಒಪ್ಪಿಸಿದ ವರದಿ ಸಾಕ್ಷಿಯಾಗಿದೆ. ಈ ದಂಗೆಯ ತೋರಿಕೆಯ ನಾಯಕ ಕಲ್ಯಾಣಪ್ಪನಾದರೂ ಅದು ವಾಸ್ತವವಾಗಿ ರೈತರ ದಂಗೆ. ಆದುದರಿಂದ ಅದನ್ನು ಯಾವ ಅರ್ಥದಲ್ಲೂ ಕಾಟಕಾಯಿ ಎನ್ನುವಂತಿಲ್ಲ.

೨. ಧನಾಗರೆ ಡಿ.ಎನ್, ೧೯೮೩, ಪೂರ್ವೋಕ್ತ ಪು ೨೦೩ – ೨೦೪

೩. C.R, Cotton, 1837, Report on the Insurrection in Canara & Coorg (Unpublished)

೪. Mark Cubbon, 1839, Observation on Cotton's Report on the Insurrection in Canara and Coorg.

೫. Richter,1984,Gazetter of Coorg,PP 360- 61

೬. ತಿ. ತಾ. ಶರ್ಮ, ೧೯೫೭, ಪೂರ್ವೋಕ್ತ, ಬೆಂಗಳೂರು, ಪು. ೨೬–೪೨

೭. D.N Krishnayya, 1957, The South Canara Insurrection 1837, The quarterly journal of Mythic Society, Vol. XLVIII

೮. M.V. Krishna Rao & Halappa, 1962, History of Freedom Movement in Karnataka, Vol.I Bangalore pp -198-212.

೯. ಈ ಮಣ್ಣಿನ ಕೋಟೆಯ ಅವಶೇಷಗಳನ್ನು ಬೆಳ್ಳಾರೆ ಪದವಿಪೂರ್ವ ಕಾಲೇಜು ಬಳಿ ಈಗಲೂ ಕಾಣಬಹುದು.

೧೦.ಮಹಾಬಲ ಕುಳ (ಸಂ)೨೦೦೭ 'ಬೆಳ್ಳಾರೆ ಬೆಳಕು' ಕನ್ನಡ ಸಾಹಿತ್ಯ ಪರಿಷತ್ತು, ಸುಳ್ಯ ಘಟಕ ಸುಳ್ಯ .

೧೧. ಈ ಕಾರಣಕ್ಕಾಗಿ ಈಗಾಗಲೇ ದ.ಕ. ಜಿಲ್ಲೆಯಲ್ಲಿ ೧೮೧೧ರಲ್ಲಿ ಕಂದಾಯ ನಿರಾಕರಣೆ ಚಳುವಳಿ ಮತ್ತು ೧೮೩೧ರಲ್ಲಿ ಕೂಟು ದಂಗೆ ನಡೆದಿದ್ದವು.

೧೨. ಡಿ.ಎನ್ ಕೃಷ್ಣಯ್ಯ,೧೯೫೨ ರಾಜ್ಯಾಭಿಯೋಗಿ ಕಲ್ಯಾಣ ಸ್ವಾಮಿ ಅಥವಾ ಅಮರ ಸುಳ್ಯದ ಕಾಟಕಾಯಿ, ಪಂಜೆ ಸ್ಮಾರಕ ಗ್ರಂಥ ಸಮಿತಿ, ಪುತ್ತೂರು, ಪು. ೧೯೬ –೨೦೫

೧೩. ಉಪಯೋಗ ಮತ್ತು ಬೆಲೆಯ ನಡುವಣ ಅಂತರವೇ ಅನುಭೋಗಿಯ ಮಿಗುತೆ. ಬೆಲೆ ಕಡಿಮೆಯಾದಾಗ ಅನುಭೋಗಿಯ ಮಿಗುತೆ ಅಧಿಕವಾಗುತ್ತದೆ. ಆರ್ಥಿಕ ಕಲ್ಯಾಣ ಪರಿಕಲ್ಪನೆಗೆ ಇದುವೇ ಮೂಲ.

೧೪.ಪ್ರಭಾಕರ ಶಿಶಿಲ, ೧೯೮೫, ಶಿಕಾರಿಯ ಸೀಳುನೋಟ, ಬಡ್ಡಡ್ಕ ಪ್ರಕಾಶನ ಸುಳ್ಯ ಪು.೯–೧೦

೧೫. ತಿ. ತಾ ಶರ್ಮ, ೧೯೫೬ ಪೂರ್ವೋಕ್ತ ಪು. ೨೬

೧೬.ದುರ್ಗಾಕುಮಾರ್ ನಾಯರ್‌ಕೆರೆ, 'ಅವಗಣನೆಗೆ ತುತ್ತಾದ ಅಮರ ಕ್ರಾಂತಿ', ಕನ್ನಡ ಪ್ರಭ ೧೫ ಅಗೋಸ್ತು ೨೦೧೧ ವಿಶೇಷ ಪು.೧.

೧೭.ಕೆದಂಬಾಡಿ ರಾಮಗೌಡನ ಮಗನಿಗೆ ಆ ಸಂದರ್ಭದಲ್ಲಿ ಮದುವೆ ಆಯಿತೇ ಇಲ್ಲವೇ ಎಂಬ ಬಗ್ಗೆ ಖಚಿತವಾದ ಆಧಾರಗಳು ದೊರೆಯುವುದಿಲ್ಲ. ಆದರೆ ಎರಡು ಕಾದಂಬರಿಗಳಲ್ಲಿ ನದಿ -ಎರಡರ ನಡುವೆ ಮತ್ತು ಮೂಡಣದ ಕೆಂಪುಕಿರಣ-ಅಲ್ಲಿ ಮದುವೆ ನಡೆದಿದೆ ಎಂಬಂತೆ ಚಿತ್ರಿಸಲಾಗಿದೆ.

೧೮. ತಿ. ತಾ ಶರ್ಮ, ೧೯೫೬, ಪೂರ್ವೋಕ್ತ ಪು.೨೯

೧೯.ಲೆವಿನ್ ವರದಿಯಲ್ಲಿ ಈ ಜ್ಯೋತಿಷ್ಯನನ್ನು ಮುಜೆತ್ತಾಯನೆಂಬ ಮುದುಕ ಕೊಂಕಣಿ ಎಂದು ಕಾಣಿಸಲಾಗಿದೆ. ಈ ಹೆಸರು ಸಂದೇಹಾಸ್ಪದವಾಗಿದೆ. ಏಕೆಂದರೆ ಮುಜೆತ್ತಾಯನೆಂಬ ಕುಲನಾಮದ ಕುಟುಂಬಗಳು ಇಲ್ಲಿ ಎಲ್ಲೂ ಕಂಡುಬರುವುದಿಲ್ಲ. ಆದರೆ ಶಿವಳ್ಳಿ ಬ್ರಾಹ್ಮಣರಲ್ಲಿ ಮೂಡೆತ್ತಾಯ ಎಂಬ ಕುಲನಾಮ ಇದೆ. ಇದು ಲೆವಿನ್‌ನ ವರದಿಯಲ್ಲಿ ಉಲ್ಲೇಖಿತವಾದ ಮೂಜೆತ್ತಾಯ ಪದಕ್ಕೆ ಪರ್ಯಾಯವಾಗುವುದಿಲ್ಲ. ಏಕೆಂದರೆ ಲೆವಿನ್ ವರದಿಯಲ್ಲಿ ಮೂಜೆತ್ತಾಯನನ್ನು ಒಬ್ಬ ಕೊಂಕಣಿ ಮುದುಕನೆಂದು ಕಾಣಿಸಲಾಗಿದೆ.

೨೦. ಸೆರೆ ಸಿಕ್ಕ ಕುಕ್ಕನ್ನೂರು ಚೆನ್ನಯ್ಯ ಕ್ಯಾಪ್ಟನ್ ಲೀಹಾರ್ಡಿಯ ಪ್ರಶ್ನೆಗೆ ನೀಡಿದ ಉತ್ತರ ಲೆವಿನ್ ವರದಿಯಿಂದ ಉಧೃತ ಪು.೬

೨೧. ಈ ಕೋಟೆ ಪ್ರದೇಶದಲ್ಲಿ ಈಗ ವಾಸಿಸುತ್ತಿರುವ ೯೨ ಹರೆಯದ ಕೋಟೆ ಕ್ಷತ್ರಿಯ ಅಪ್ಪಾಜಿರಾಯರು ನೀಡಿದ ಮಾಹಿತಿ.

೨೨. ಆಲೆಟ್ಟಿ ರಾಮಣ್ಣ ಶಗ್ರಿತ್ತಾಯ,೧೯೫೬, ಪೂರ್ವೋಕ್ತ, ಪು-೨-೩

೨೩. ಕೊಡಗು- ಸುಳ್ಯ ಇತಿಹಾಸ ಆಧರಿತ ಕಾದಂಬರಿ ನದಿ ಎರಡರ ನಡುವೆಯಲ್ಲಿ ರಾಮಪ್ಪಯ್ಯನಿಗೆ ಸಂಬಂಧಿಸಿದಂತೆ ' ಗಂಟಲು ಮುಳ್ಳನು ತೆಗೆಯೇ' ಎಂಬ ಅಧ್ಯಾಯವೊಂದಿದೆ. ಪು ೨೦೦ – ೨೦೯

೨೪. ರಾಮಪ್ಪಯ್ಯನ ಕೊಲೆಯ ವಿಷಯವನ್ನು ನಾಯಕರು ದಂಗೆಯ ಆರಂಭದಲ್ಲಿ ಬಹಿರಂಗ ಪಡಿಸಿದಂತೆ ಕಂಡುಬರುವುದಿಲ್ಲ. ಆತನ ಕುಲಬಾಂಧವರು ಅನೇಕರು ರೈತ ದಂಡಿನಲ್ಲಿದ್ದರು. ರಾಮಪ್ಪಯ್ಯನ ಕೊಲೆ ವಿಷಯ ಬಹಿರಂಗವಾದರೆ ರೈತ ದಂಡಿನಲ್ಲಿ ಬಿರುಕು ಕಾಣಿಸಿಕೊಳ್ಳಬಹುದಾದ ಭೀತಿಯಿಂದ ಅವರು ಹಾಗೆ ಮಾಡಿರಬೇಕು.

೨೫. ಸಂಶೋಧಕ ಡಿ.ಜಿ.ನಡ್ಕ ಈ ಬಗ್ಗೆ ಸಾಕಷ್ಟು ಸಂಶೋಧನೆ ನಡೆಸಿ ಕೂಜುಗೋಡು ಮಲ್ಲಪ್ಪ ನಿಜವಾಗಿ ಅಮ್ಮೈ ಮಲ್ಲಪ್ಪನಾಗಿರಬೇಕೆಂದು ಅಭಿಪ್ರಾಯಪಟ್ಟಿದ್ದಾರೆ. ಈ ಮನೆತನದ ಕಿರಿಯರಲ್ಲಿ ಈ ಬಗ್ಗೆ ಒಮ್ಮತ ಅಭಿಪ್ರಾಯಕ್ಕೆ ಬರುವ ದಾಖಲೆಗಳಿಲ್ಲ.

೨೬. ಕಾಟನ್ನ ವರದಿಯ ಬಗ್ಗೆ ಕಬ್ಬನನ ಅಭಿಪ್ರಾಯ

೨೭. ಡಿ.ಎನ್ ಕೃಷ್ಣಯ್ಯ, ೧೯೭೪, ಪೂರ್ವೋಕ್ತ ಪು. ೩೩೭–೩೩೮

೨೮. ದೇವಿಪ್ರಸಾದ್ ಸಂಪಾಜೆ, (ಸಂ) ೨೦೦೩, ಪೂರ್ವೋಕ್ತ ಪು. ೧೭– ೨೫

೨೯. ಮಾಸ್ತಿಯವರ ಚಿಕ್ಕವೀರ ರಾಜೇಂದ್ರ ಕೃತಿಯ ಮೂಲವಸ್ತು ಇದುವೇ, ಅವರು ಚಿಕ್ಕವೀರನನ್ನು ಲಂಪಟನೆಂದು, ತನಗೆ ಇಷ್ಟ ಬಂದ ಕೊಡವ ಹೆಣ್ಣುಗಳನ್ನು ಭೋಗದ ವಸ್ತುಗಳಂತೆ ನಡೆಸಿಕೊಳ್ಳುತ್ತಿದ್ದನೆಂದು ಕಾದಂಬರಿಯಲ್ಲಿ ವಿವರಿಸಿದ್ದಾರೆ. ಈ ಕಾದಂಬರಿಯ ಐತಿಹಾಸಿಕತೆಯ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯವಿದೆ.

೩೦.ಪುರುಷೋತ್ತಮ ಬಿಳಿಮಲೆ, ೧೯೮೫ ಪೂರ್ವೋಕ್ತ. ಪುಟ ೫೮

೩೧. ಲೆವಿನ್ ವರದಿ ಪೂರ್ವೋಕ್ತ ಪು. ೧

೩೨. ಕಾಟನ್ ವರದಿಯಿಂದ ಉದ್ಧೃತ, ದೇವಿ ಪ್ರಸಾದ್ ಸಂಪಾಜೆ, ೧೯೯೯, ಪೂರ್ವೋಕ್ತ ಪು. ೫೮.

೩೩.ತಿ.ತಾ ಶರ್ಮ ೧೯೫೭ ಪೂರ್ವೋಕ್ತ. ಪು. ೨೯

೩೪.ದೇವಿಪ್ರಸಾದ್ ಸಂಪಾಜೆ ೧೯೯೯ ಪೂರ್ವೋಕ್ತ ಪು.೧೭

೩೫. ಲೆವಿನ್ ವರದಿ, ಪು. ೨

೩೬.ಕಾಟನ್ ವರದಿ, ಪಾರಾ ೧೫, ಮೈಸೂರು ರಾಜ್ಯ ಪತ್ರಾಗಾರ.

೩೭.ಒಂದು : ಸನ್ ೧೮೦೪ರಲ್ಲಿ ಕೊಡಗಿಗೆ ಸೇರ್ಪಡೆಯಾದ ಸನ್ ೧೮೩೪ರಲ್ಲಿ ಕೊಡಗಿನಿಂದ ಬೇರ್ಪಡಿಸಲಾದ ಅಮರ ಸುಳ್ಯ, ಪಂಜ, ಬೆಳ್ಳಾರೆ, ಕಡಬ, ಉಪ್ಪಿನಂಗಡಿ ಪುತ್ತೂರು, ವಿಟ್ಲ, ನಂದಾವರ, ಮಾಗಣೆಗಳನ್ನು ಮತ್ತೆ ಕೊಡಗು ಸಂಸ್ಥಾನಕ್ಕೆ ಸೇರ್ಪಡಿಸಲಾಗಿದೆ.

ಎರಡು: ಇನ್ನು ಮೂರು ವರ್ಷಗಳವರೆಗೆ ಕೊಡಗು ಮತ್ತು ಕನ್ನಡ ಜಿಲ್ಲೆಗಳ ರೈತರ ಕಂದಾಯವನ್ನು ಸಂಪೂರ್ಣವಾಗಿ ಮನ್ನಾ ಮಾಡಲಾಗಿದೆ.

ಮೂರು: ಇಂಗ್ಲೀಷರ ಕಂಪೆನಿ ಸರ್ಕಾರ ಜಾರಿಗೆ ತಂದಿದ್ದ ಕಾನೂನುಗಳು ರದ್ದಾಗಿವೆ. ದೊಡ್ಡವೀರರಾಜರ ಕಾಲದ ಕಾನೂನುಗಳನ್ನು ಮತ್ತು ಲಿಂಗರಾಜರ ಕಾಲದ ಕಂದಾಯ ವ್ಯವಸ್ಥೆಯನ್ನು ಊರ್ಜಿತಗೊಳಿಸಲಾಗಿದೆ.

೩೮. ಲೆವಿನ್ ವರದಿ ಪು. ೨

೩೯.ಅಲೆಟ್ಟಿ ರಾಮಣ್ಣ ಶಗ್ರಿತ್ತಾಯರ ಯಕ್ಷಗಾನ ಪ್ರಸಂಗ ಕಲ್ಯಾಣಪ್ಪನ ಕಾಟಕಾಯಿಯಲ್ಲಿ ರೈತರನ್ನು ಕೊತ್ತಳಿಂಗೆ ಭಂಟರು ಎದು ಕರೆಯಲಾಗಿದೆ.

೪೦.ಪ್ರಭಾಕರ ಶಿಶಿಲ, ೨೦೦೫, ಅಮರಕ್ರಾಂತಿ ವೀರರು ಪೂರ್ವೋಕ್ತ ಪು. ೧೫

೪೧.ಬೂನಳ್ಳೀ ಜವರೇ ಗೌಡ, ೧೯೮೭, ಪೂರ್ವೋಕ್ತ ಪು-೧೮

೪೨. PMJD;Jan.2,1838,Vol 336,P.120.

೪೩.PMBR,July 1,1841,Vol 1761,P.8380-82.

೪೪.ಪ್ರಭಾಕರ ಶಿಶಿಲ, 'ಕೊಡಗರ ಕಾಟಕಾಯಿ' ಮಂಗಳ ೨೩, ನವಂಬರ್ ೨೦೧೧,ಪು.೧೪-೧೫

೪೫. ಲೆವಿನ್ ವರದಿ, ಪು ೬

೪೬.ಅದೇ ಪು ೭

೪೭.ಕುಂಬಳೆಯ ರಾಜನಾಗಿದ್ದ ಸುಬ್ರಾಯ ಹೆಗ್ಗಡೆ ತಾನಾಗಿ ಕುಂಜಡ್ಕ ತಿಮ್ಮ ಮತ್ತು ಕುಡೆಕಲ್ಲು ಪುಟ್ಟರ ಜತೆ ತನ್ನ ಪುಟ್ಟ ಪಡೆಯೊಡನೆ ಸೇರಿಕೊಂಡು ಮಂಗಳೂರಿನತ್ತ ಬರುವಾಗ ನೇತ್ರಾವತಿ ನದಿಯಲ್ಲಿ ಬ್ರಿಟಿಷರ ನಾವೆ ಪಲಾಯನಕ್ಕೆ ಸಿದ್ಧವಾಗಿತ್ತು. ಅತ್ಯುತ್ಸಾಹದಿಂದ ಅದರ ಮೇಲೆ ಗುಂಡುಹಾರಿಸಿದ ಕುಂಬಳೆ ಸುಬ್ರಾಯ ಹೆಗ್ಗಡೆಯನ್ನು ಮತ್ತು ಆತನ ದಂಡನ್ನು ಬ್ರಿಟಿಷರು ಫಿರಂಗಿ ಉಡಾಯಿಸಿ ನಿರ್ನಾಮ ಮಾಡುತ್ತಾರೆ. ಆದರೆ ಕುಂಜಡ್ಕ ತಿಮ್ಮ ಮತ್ತು ಕುಡೆಕಲ್ಲು ಪುಟ್ಟ ಹೇಗೋ ಪಾರಾಗಿ ತಮ್ಮ ಪಡೆಯೊಡನೆ ಏ. ೫ರಂದು ಬಾವುಟ ಗುಡ್ಡೆಯಲ್ಲಿ ಕಲ್ಯಾಣ ಸ್ವಾಮಿಯನ್ನು ಸೇರಿಕೊಳ್ಳುತ್ತಾರೆ.

೪೮. ಲೆವಿನ್ ವರದಿ ಪೂರ್ವೋಕ್ತ ಪು. ೮

೪೯.ತಿ .ತಾ ಶರ್ಮ, ೧೯೫೭ ಪೂರ್ವೋಕ್ತ, ಪು. ೩೪

೫೦.ಕಾಟನ್ ವರದಿ, ತಿ.ತಾ ಶರ್ಮರಿಂದ ಉದ್ಧೃತ, ಪು. ೩೦

೫೧. ಲೆವಿನ್ ವರದಿ, ೧೮೩೭, ಪೂರ್ವೋಕ್ತ, ಪು. ೧೩

೫೨. ಕಾಟನ್ ವರದಿ, ತಿ.ತಾ ಶರ್ಮರಿಂದ ಉಲ್ಲೇಖಿತ, ಪು.೩೦–೩೧

೫೩. ಲೆವಿನ್ ವರದಿ, ೧೮೩೭, ಪೂರ್ವೋಕ್ತ ಪು.೪

೫೪. ಅದೇ, ಪು.೫

೫೫. ತಿ.ತಾ ಶರ್ಮ, ೧೯೫೭ ಪೂರ್ವೋಕ್ತ, ಪು.೩೬

೫೬.ಪ್ರಧಾನ ಕಾರ್ಯದರ್ಶಿಗೆ ಬ್ಲೇರ್ ೧೮೪೨ ರ ಮಾರ್ಚ್೧೪ರಂದು ಸಲ್ಲಿಸಿದ ವರದಿ.

೫೭.ದೇವಿಪ್ರಸಾದ್ ಸಂಪಾಜೆ, ೧೯೯೯, ಪೂರ್ವೋಕ್ತ, ಪು.೫೧

೫೮. ಆಗೋಸ್ತು ೨೯, ೨೦೧೧ರಂದು ಸುಳ್ಯದ ಶಾರದ ಪದವಿ ಕಾಲೇಜಿನಲ್ಲಿ ನಡೆದ 'ಕೊಡಗಿನ ಇತಿಹಾಸಕ್ಕೆ ದೇವಿಪ್ರಸಾದರ ಕೊಡುಗೆ" ವಿಚಾರ ಸಂಕಿರಣದ ಅಧ್ಯಕ್ಷೀಯ ಭಾಷಣದಲ್ಲಿ ಡಾ. ನರೇಂದ್ರ ರೈ ದೇರ್ಲ ಮಂಡಿಸಿದ ಅಭಿಪ್ರಾಯ.

೫೯.ಸುಧೀರ ಕಾಂತಮಂಗಲ,೨೦೦೩,ಕಲ್ಯಾಣಪ್ಪನ ಕಾಟಕಾಯಿ,ಹೆಜ್ಜೆ ಅಭಿನಂದನಾ ಸಂಪುಟ,ಡಾ.ಶಿಶಿಲ ಅಭಿನಂದನಾ ಸಮಿತಿ ಸುಳ್ಯ,ಪು.೨೪೦–೪೧

೬೦.ಮಾರ್ಕ್ ಕಬ್ಬನ್, ೧೮೩೭, ಪೂರ್ವೋಕ್ತ, ಪು.೩

೬೧.ಕಾಟನ್ ಆರ್. ಸಿ ಅನುಬಂಧ ಸಂ ಎ. ೭

೬೨. ಕಬ್ಬನ್ ವರದಿ, ೧೮೩೭. ಪು.೧೬೪

೬೩.ಮುಂಬೈ ಸಮಿತಿ ವರದಿ, ತಿ. ತಾ ಶರ್ಮರಿಂದ ಉದ್ಧೃತ.

೬೪.ಡಿ.ಎನ್ .ಕೃಷ್ಣಯ್ಯ , ೧೯೭೪, ಪೂರ್ವೋಕ್ತ ಪು. ೫೬೫– ೬೭

೬೫.RC. Cotton, Appendix A. No. 3

೬೬.PMJD,11 – 07 -1837,Vol 328,PP 3755 -760, 3786 - 88.

೬೭.Cotton, Appenix A No. 3

೬೮.PMJD, 9-6-1837,Vol 326 A.pp 3047 – 64

೬೯.Judicial Consultation ; 23 -01- 1838, Vol. 339, P-1170

೭೦.ಪುರುಷೋತ್ತಮ ಬಿಳಿಮಲೆ, ೧೯೮೫, ಪೂರ್ವೋಕ್ತ, ಪು.೫೧

೭೧.PMJD ,2-1-1838, Vol 336, PP 66-67

೭೨. ಮುಂಬೈ ಸಮಿತಿ, ತಿ. ತಾ ಶರ್ಮರಿಂದ ಉದ್ಧೃತ, ಪು. ೩೭

೨೩.ಚಿನ್ನಪ್ಪನವರು ಘಟನೆಯಲ್ಲಿ ಒಳಗೊಂಡ ವ್ಯಕ್ತಿಗಳ ತಪ್ಪು ಉಲ್ಲೇಖವನ್ನು ಮಾಡಿರುತ್ತಾರೆ. ದಿವಾನ ಲಕ್ಷ್ಮಿ ನಾರಾಯಣನ ತಮ್ಮ ರಾಮಪ್ಪಯ್ಯನನ್ನು ದಂಗೆಗೆ ಮೋದಲೇ ರೈತದಂಡು ಕೊಂದಿರುತ್ತದೆ. ಅಲ್ಲದೆ ಬಂಡಾಯ ಪೂರ್ವದಲ್ಲೇ ಅಪರಂಪಾರನ ಬಂಧನವಾಗಿರುತ್ತದೆ,

೨೪.ದೇವಿಪ್ರಸಾದ್ ಸಂಪಾಜೆ, ೧೯೯೯ ಪೂರ್ವೋಕ್ತ, ಪು.೭೦

೨೫.ಅದೇ, ಪು.೭೧

೨೬.ನಿರಂಜನ, ೨೦೦೩, ಪೂರ್ವೋಕ್ತ, ಪು.೧೮೬

೨೭.Political Consultations 9 -6 -1837, Vol 1262, PP – 2549 – 55

೨೮.ಡಿ. ಎನ್ ಕೃಷ್ಣಯ್ಯ ೧೯೬೪, ಪೂರ್ವೋಕ್ತ ಪು ೩೬೩

೨೯.Political Consultations 9 – 6-1837, Vol 262, pp 2549 - 55

೩೦.ಪುರುಷೋತ್ತಮ ಬಿಳಿಮಲೆ, ೧೯೮೫, ಪೂರ್ವೋಕ್ತ, ಪು.೯೬

ಅಧ್ಯಾಯ ೮

ಸಮೀಕ್ಷೆ :ವಿಶ್ಲೇಷಣೆ ಮತ್ತು ಫಲಿತಗಳು

ಕೊಡಗು ಕೆನರಾ ಆರ್ಥಿಕ ಬಂಡಾಯದ ಬಗೆಗಿನ ಅಭಿಪ್ರಾಯಗಳನ್ನು ನಿಗದಿತ ಪ್ರಶ್ನಾವಳಿಗಳ ಮೂಲಕ ಸಂಗ್ರಹಿಸಿ ಈ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ.

೮.೧ ಸಮೀಕ್ಷೆಯ ವಿಶ್ಲೇಷಣೆ

ಈ ಘಟನೆ ಕ್ರಿ. ಶ ೧೮೩೭ರಲ್ಲಿ ನಡೆದಿದ್ದು ಇದರ ಬಗ್ಗೆ ಮಾಹಿತಿ ನೀಡಬಲ್ಲವರ ಸಂಖ್ಯೆ ಈಗಬಹಳ ಕಡಿಮೆ ಇರುವುದರಿಂದ ೧೨೫ ಮಂದಿ ವಕ್ತೃಗಳನ್ನು ಮಾತ್ರ ಸಮೀಕ್ಷೆಗೆ ಆಯ್ದುಕೊಳ್ಳಬೇಕಾಯಿತು.ಹಾಗೆ ಆಯ್ಕೆ ಮಾಡಿಕೊಂಡವರ ವಿವರಗಳನ್ನು ಕೋಷ್ಟಕ ೮.೧ ರಲ್ಲಿ ಕಾಣಿಸಲಾಗಿದೆ.

ಕೋಷ್ಟಕ ೮.೧:ವಕ್ತೃಗಳ ವಿವರ

ವಯೋ ವಿತರಣೆ	ಸಂಖ್ಯೆ	ಶೇಕಡಾ
೨೦- ೪೦	೨೫	೨೦%
೪೧ -೬೦	೫೦	೪೦%
೬೦ ಕ್ಕಿಂತ ಅಧಿಕ	೫೦	೪೦%
ಒಟ್ಟು	೧೨೫	೧೦೦%

ಒಟ್ಟು ೧೨೫ ವಕ್ತೃಗಳಲ್ಲಿ ೪೦ರಿಂದ ಕೆಳಗಿನ ವಯೋಮಾನದವರ ಸಂಖ್ಯೆ ಇಪ್ಪತ್ತೈದು. ೪೧ರಿಂದ ೬೦ರ ವರೆಗಿನ ವಯೋಮಾನದ ೫೦ ಮಂದಿ ವಕ್ತೃಗಳನ್ನು ಅಧ್ಯಯನಕ್ಕೆ ಆರಿಸಲಾಗಿದೆ.ಅಷ್ಟೇ ಸಂಖ್ಯೆಯ ವಕ್ತೃಗಳನ್ನು ೬೦ಕ್ಕಿಂತ ಹೆಚ್ಚಿನ ವಯೋಮಾನದ ಗುಂಪಿನಿಂದ ಆಯ್ದುಕೊಳ್ಳಲಾಯಿತು.ಇವರಲ್ಲಿ ೮೦ ಮಂದಿ ಹಿಂದೂ ಧರ್ಮಕ್ಕೆ ಸೇರಿದವರು, ೩೦ ಮಂದಿ ಮುಸ್ಲೀಮರು ಮತ್ತು ೧೫ ವಕ್ತಗಳು ಕ್ರಿಶ್ಚಿಯನ್ನರು.ವಕ್ತೃಗಳಿಗೆ ಮುಂಚಿತವಾಗಿ ಮಾಹಿತಿ ತಿಳಿಸಿ ಅವರಿಂದ ಒಪ್ಪಿಗೆ ಪಡೆದು ಈ ಸಮೀಕ್ಷೆಯನ್ನು ನಡೆಸಲಾಯಿತು.

ವಕ್ತೃಗಳ ಪ್ರಾದೇಶಿಕ ವಿತರಣೆ ಮತ್ತು ಶೈಕ್ಷಣಿಕ ಮಟ್ಟವನ್ನು ಕೋಷ್ಟಕ ೮.೨ರಲ್ಲಿ ತೋರಿಸಲಾಗಿದೆ.

ಕೋಷ್ಟಕ ೮.೨ : ವಕ್ತೃಗಳ ಪ್ರಾದೇಶಿಕ ವಿತರಣೆ ಮತ್ತು ಶೈಕ್ಷಣಿಕ ಮಟ್ಟ

ಪ್ರದೇಶ	ಸಂಖ್ಯೆ	ಶಿಕ್ಷಣ	ಸಂಖ್ಯೆ
ಕೊಡಗು	೨೫ (೨೦%)	ಮೆಟ್ರಿಕ್ಯುಲೇಶನ್ ವರಗೆ	೫೦ (೪೦%)
ಸುಳ್ಯ	೨೫ (೨೦%)	ಸ್ನಾತಕ	೨೫ (೨೦%)
ಸುಬ್ರಹ್ಮಣ್ಯ	೨೫ (೨೦%)	ಸ್ನಾತಕೋತ್ತರ	೨೦ (೧೬%)
ಬೆಳ್ಳಾರೆ	೨೫ (೨೦%)	ಇತರ	೩೦ (೨೪%)
ಇತರ	೨೫ (೨೦%)	----	---
ಒಟ್ಟು	೧೨೫ (೧೦೦%)	ಒಟ್ಟು	೧೨೫ (೧೦೦%)

ಈ ಅಧ್ಯಯನವು ಕೊಡಗು ಮತ್ತು ಕೆನರಾ ಜಿಲ್ಲೆಗೆ ಸೀಮಿತವಾದುದು.ಆದರೆ ಈ ಆರ್ಥಿಕ ಬಂಡಾಯದ ಉಗಮಸ್ಥಾನ ಅಮರ ಮತ್ತು ಸುಳ್ಯ ಮಾಗಣೆಗಳು.ಇದಕ್ಕೆ ಕಾರಣ ಈ ಮಾಗಣೆಗಳನ್ನು ಕ್ರಿ. ಶ ೧೮೩೪ ರಲ್ಲಿ ಕೊಡಗಿನಿಂದ ಬೇರ್ಪಡಿಸಿದ್ದು.ಆದುದರಿಂದ ಕೊಡಗು, ಸುಳ್ಯ ಸುಬ್ರಹ್ಮಣ್ಯ ಮತ್ತು ಬೆಳ್ಳಾರೆಗಳಿಂದ ಸಮಾನ ಸಂಖ್ಯೆಯ ವಕ್ತೃಗಳನ್ನು ಸಮೀಕ್ಷೆಗೆ ಆರಿಸಿಕೊಳ್ಳಲಾಗಿದೆ.ಇದಲ್ಲದೆ ಈ ಬಂಡಾಯದ ಬಗ್ಗೆ ತಿಳಿದಿರುವ ಸುಮಾರು ೨೫ ವಿದ್ವಾಂಸರನ್ನು ಬೇರೆ ಬೇರೆ ಪ್ರದೇಶಗಳಿಂದ ಆಯ್ದುಕೊಂಡು ಅವರಿಗೆ ಪ್ರಶ್ನಾವಳಿಯನ್ನು ಅಂಚೆಯ ಮೂಲಕ ಕಳುಹಿಸಿ ಉತ್ತರಗಳನ್ನು ಪಡೆಯಲಾಗಿದೆ.

ವಕ್ತೃಗಳನ್ನುಆಯ್ಕೆ ಮಾಡುವಾಗ ಅವರ ಶೈಕ್ಷಣಿಕ ಹಂತವನ್ನು ಗಮನದಲ್ಲಿ ಇಟ್ಟುಕೊಳ್ಳಲಾಗಿದೆ.ಶೇ.೪೦ ರಷ್ಟು ವಕ್ತೃಗಳು ಮೆಟ್ರಿಕ್ಯುಲೇಶನ್ ಮತ್ತು ಅದಕ್ಕಿಂತ ಕಡಿಮೆ ಹಂತದ ಶಿಕ್ಷಣ ಪಡೆದವರು.ಓದು ಬರಹ ಬಾರದ, ಆದರೆ ಈ ಘಟನೆಯ ಬಗ್ಗೆ ಗೊತ್ತಿರುವ

ಕೆಲವು ಹಿರಿಯರಿಂದಲೂ ಮಾಹಿತಿ ಕಲೆ ಹಾಕಲಾಗಿದೆ.ಇದರಿಂದ ಸುಮಾರು ಎಲ್ಲಾ ವರ್ಗಗಳಿಗೆ ಈ ಸಮೀಕ್ಷೆಯಲ್ಲಿ ಪಾಲು ಸಿಕ್ಕಂತಾಗಿದೆ.

ವಕ್ತೃಗಳ ವೃತ್ತಿವಾರು ವಿತರಣೆಯನ್ನು ಕೋಷ್ಟಕ ೮.೩ತೋರಿಸುತ್ತದೆ.

ಕೋಷ್ಟಕ:೮.೩ ವಕ್ತೃಗಳ ವೃತ್ತಿ ವಿತರಣೆ

ವೃತ್ತಿ	ಸಂಖ್ಯೆ	ಶೇಕಡಾ
ಕೃಷಿಕರು	೩೦	೨೪%
ಕೃಷಿ ಕಾರ್ಮಿಕರು	೧೫	೧೨%
ವ್ಯಾಪಾರಿಗಳು	೨೫	೨೦%
ಶಿಕ್ಷಕರು	೨೦	೧೬%
ವಿದ್ಯಾರ್ಥಿಗಳು	೨೦	೧೬%
ಇತರರು	೧೫	೧೨%
ಒಟ್ಟು	೧೨೫	೧೦೦%

ವಕ್ತೃಗಳ ಆಯ್ಕೆಯಲ್ಲಿ ಹೆಚ್ಚಿನ ಮಹತ್ವವನ್ನು ಕೃಷಿಕರಿಗೆ ನೀಡಲಾಗಿದೆ.ಆನಂತರದ ಸ್ಥಾನ ವ್ಯಾಪಾರಿ ವರ್ಗಕ್ಕೆ ಸಂದಿದೆ .ಏಕೆಂದರೆ ಕ್ರಿ. ಶ ೧೮೩೭ರ ಆರ್ಥಿಕ ಬಂಡಾಯದ ಹಿಂದೆ ರೈತರ ಮತ್ತು ವ್ಯಾಪಾರಿಗಳ ಹಿತಾಸಕ್ತಿಗಳ ಸಂಘರ್ಷವನ್ನು ಗುರುತಿಸಬಹುದು. ಇಂತದೊಂದು ಐತಿಹಾಸಿಕ ಘಟನೆಯ ಬಗ್ಗೆ ಇಂದಿನ ಶಿಕ್ಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಎಷ್ಟರ ಮಟ್ಟಿಗೆ ಪರಿಜ್ಞಾನವಿದೆ ಮತ್ತು ಇದಕ್ಕೆ ಅವರ ಪ್ರತಿಕ್ರಿಯೆ ಏನು ಎನ್ನುವುದನ್ನು ಕಂಡುಹಿಡಿಯಲು ಈ ಎರಡು ವರ್ಗಕ್ಕೆ ಸಮಾನ ಪ್ರಾತಿನಿಧ್ಯ ನೀಡಲಾಗಿದೆ. ಓದು ಬರಹ ಬಾರದ ಕೆಲವು ಕೃಷಿ ಕಾರ್ಮಿಕರನ್ನು ಕೂಡಾ ಸಮೀಕ್ಷೆಗೆ ಒಳಪಡಿಸಲಾಗಿದೆ.ಇತರರ ಗುಂಪಿನಲ್ಲಿ ನಿವೃತ್ತ ಯೋಧರು, ಸಾಹಿತಿ, ಕಲಾವಿದರು ಮತ್ತು ಸೇವಾ ನಿವೃತ್ತರು ಒಳಗೊಂಡಿರುತ್ತಾರೆ.


ಈ ಘಟನೆಯ ಬಗ್ಗೆ ವಕ್ತೃಗಳು ಯಾವ ಮೂಲಗಳಿಂದ ತಿಳಿವಳಿಕೆ ಹೊಂದಿದ್ದಾರೆ ಎಂಬುದನ್ನು ಕೋಷ್ಟಕ ೮.೪ ರಲ್ಲಿ ಕಾಣಿಸಲಾಗಿದೆ.

ಕೋಷ್ಟಕ ೮.೪ ವಕ್ತೃಗಳ ತಿಳಿವಳಿಕೆಯ ಮೂಲ

ಮೂಲ	ಸಂಖ್ಯೆ	ಶೇಕಡಾ
ಲೇಖನಗಳು	೩೫	೨೮%
ಪುಸ್ತಕಗಳು	೨೫	೨೦%
ಮೌಖಿಕ	೩೦	೨೪%
ಮಾಧ್ಯಮಗಳು	೧೫	೧೨%
ಇತರ	೨೦	೧೬%
ಒಟ್ಟು	೧೨೫	೧೦೦%

ವಕ್ತೃಗಳಲ್ಲಿ ಬಹುತೇಕರು ಸಂಶೋಧನಾ ಮತ್ತು ಸಾಂದರ್ಭಿಕ ಲೇಖನಗಳಿಂದ ಮಾಹಿತಿಯನ್ನು ಪಡೆದುಕೊಂಡಿದ್ದಾರೆ.[೧] ಈ ಐತಿಹಾಸಿಕ ಘಟನೆ ಈಗಲೂ ಹಿರಿಯರಿಂದ ಮೌಖಿಕ ಪರಂಪರೆಯಾಗಿ ಮುಂದುವರೆಯುತ್ತಿರುವುದು ಅಧ್ಯಯನದ ಕಾಲದಲ್ಲಿ ವೇದ್ಯವಾಗಿದೆ.[೨] ಗಣಪತಿ ರಾವ್ ಐಗಳ್, ಕೇಶವ ಕೃಷ್ಣ ಕುಡ್ವ, ಡಿ ಎನ್ ಕೃಷ್ಣಯ್ಯ, ಎಂ. ಜಿ ನಾಗರಾಜ್, ದೇವಿ ಪ್ರಸಾದ್ ಸಂಪಾಜೆ, ತಂಬಂಡ ವಿಜಯ ಪೂಣಚ್ಚ ಮುಂತಾದವರ ಕೃತಿಗಳಿಂದ ಮಾಹಿತಿ ಪಡೆದವರ ಸಂಖ್ಯೆ ಗಣನೀಯವಾಗಿದೆ. ಆಕಾಶವಾಣಿಯಂತಹ ಮಾಧ್ಯಮಗಳಿಂದ[೩] ಶೆ.೧೨ ರಷ್ಟು ವಕ್ತೃಗಳು ಈ ಘಟನೆಯ ಬಗ್ಗೆ ತಿಳಿದುಕೊಂಡಿದ್ದಾರೆ.ಅಮರ ಕ್ರಾಂತಿ ಉತ್ಸವ ಸಮಿತಿ ೧೯೯೮ರಲ್ಲಿ ಏರ್ಪಡಿಸಿದ ಸುಳ್ಯದಿಂದ ಮಂಗಳೂರುವರೆಗಿನ ಏಳು ದಿನಗಳ ಕಾಲ್ನಡಿಗೆ ಜಾಥಾ ಮತ್ತು ಆಗ ಪ್ರದರ್ಶಿಸಿದ ಬೀದಿ ನಾಟಕ[೪], ಪ್ರೊ.ಜವರೇ ಗೌಡರ ಕಲ್ಯಾಣ ಸ್ವಾಮಿ ನಾಟಕ, ಬಡ್ಡಡ್ಕ ವಿದ್ಯಾಧರರ ಕೆದಂಬಾಡಿ ರಾಮ ಗೌಡ ನಾಟಕಗಳಿಂದ ಹಾಗೂ ಡಾ। ಶಿಶಿಲರ ನದಿ ಎರಡರ ನಡುವೆ, ಮೂಡಣದ ಕೆಂಪು ಕಿರಣ, ಕೊಡಗು ಕಥನ, ಕೊಡಗಿನ ಐತಿಹ್ಯ ಕಥೆಗಳು ಮುಂತಾದ ಸಾಹಿತ್ಯ ಕೃತಿಗಳಿಂದ ಶೇ.೧೬ ರಷ್ಟು ವಕ್ತೃಗಳು ಈ ಘಟನೆಯ ಬಗ್ಗೆ ತಿಳಿವಳಿಕೆ ಹೊಂದಿದ್ದಾರೆ.[೫]

ಸಂದರ್ಶನ ಕಾಲದಲ್ಲಿ ವಕ್ತೃಗಳ ಹಿರಿಯರು ಈ ಬಂಡಾಯದೊಡನೆ ಹೊಂದಿರುವ ಸಂಬಂಧದ ಬಗ್ಗೆ ಪ್ರಶ್ನಿಸಲಾಯಿತು.ದೊರೆತ ಉತ್ತರವನ್ನು ಚಿತ್ರ ೮.೧ ರಲ್ಲಿ ತೋರಿಸಲಾಗಿದೆ.



ಚಿತ್ರ೮.೧ ಹಿರಿಯರ ಪಾಲ್ಗೊಳ್ಳುವಿಕೆ

ವಕ್ತೃಗಳಲ್ಲಿ ಶೇ.೯.೮ ರಷ್ಟು ಮಂದಿ ಈ ಬಂಡಾಯದಲ್ಲಿ ಪಾಲ್ಗೊಂಡವರ ಕುಟುಂಬಕ್ಕೆ ಸೇರಿದವರು.ಶೇ.೨೮.೮ ಮಂದಿ ವಕ್ತೃಗಳು ತಮ್ಮ ಕುಟುಂಬದವರಿಗೂ ಬಂಡಾಯಕ್ಕೂ ಸಂಬಂಧ ಇಲ್ಲವೆಂದು ಖಚಿತವಾಗಿ ಹೇಳಿರುತ್ತಾರೆ.ಶೇ.೬೧.೬ ಮಂದಿ ತಮಗೇನೂ ತಿಳಿದಿಲ್ಲವೆಂದು ಉತ್ತರಿಸಿದ್ದಾರೆ.ಬಂಡಾಯದಲ್ಲಿ ಪಾಲ್ಗೊಂಡವರ ಕುಟುಂಬಗಳಿಗೆ ಆದ ಹಿಂಸೆ ಮತ್ತು ಮಾನಸಿಕ ನೋವುಗಳಿಂದ ಅಂದಿನ ಹಿರಿಯರು ಈ ವಿಷಯವನ್ನು ತಮ್ಮ ಮುಂದಿನ ತಲೆಮಾರುಗಳಿಗೆ ತಿಳಿಸದಿರುವ ಸಾಧ್ಯತೆಗಳಿವೆ.

ಪುತ್ತೂರು ಸುಳ್ಯಗಳ ೧೧೦ ಗ್ರಾಮಗಳನ್ನು ಕೊಡಗಿನಿಂದ ಬೇರ್ಪಡಿಸದೇ ಇರುತ್ತಿದ್ದರೆ ಈ ಬಂಡಾಯ ಸಂಭವಿಸುತ್ತಿರಲಿಲ್ಲವೆಂದು ಶೇ.೮೧.೬ ಮಂದಿ ಉತ್ತರಿಸಿರುತ್ತಾರೆ.ಉಳಿದವರು ತಮಗೆ ಖಚಿತವಾಗಿ ಹೇಳಲು ಸಾಧ್ಯವಿಲ್ಲವೆಂದು ಅಭಿಪ್ರಾಯ ಪಟ್ಟಿದ್ದಾರೆ. ಬಂಡಾಯದ ಪ್ರಮುಖ



ಕಾರಣದ ಬಗ್ಗೆ ಕೇಳಲಾದ ಪ್ರಶ್ನೆಗೆ ಬಂದ ಪ್ರತಿಕ್ರಿಯೆಯನ್ನು ಕೋಷ್ಟಕ ೮.೫ ರಲ್ಲಿ ತೋರಿಸಲಾಗಿದೆ.

ಕೋಷ್ಟಕ ೮.೫: ಬಂಡಾಯದ ಪ್ರಮುಖ ಕಾರಣ

ಕಾರಣ	ಸಂಖ್ಯೆ	ಶೇಕಡಾ
ಕೊಡಗು ರಾಜನ ಪದಚ್ಯುತಿ	೦೯	೭.೨%
ಸ್ವಾತಂತ್ರ್ಯ ಪ್ರೇಮ	೧೩	೧೦.೪%
ಬ್ರಿಟಿಷರ ಕಂದಾಯ ವ್ಯವಸ್ಥೆ	೮೬	೬೮.೮%
ಎಲ್ಲವೂ	೧೮	೧೪. ೪%
ಒಟ್ಟು	೧೨೫	೧೦೦%

ಶೇ.೬೮.೮ ಮಂದಿ ವಕ್ತೃಗಳು ೧೮೩೭ ರ ಆರ್ಥಿಕ ಬಂಡಾಯಕ್ಕೆ ಬ್ರಿಟಿಷರ ಕಂದಾಯ ವ್ಯವಸ್ಥೆ ಕಾರಣವೆಂದು ಪ್ರತಿಕ್ರಿಯಿಸಿದ್ದಾರೆ.ಶೇ.೧೦.೪ ರಷ್ಟು ವಕ್ತೃಗಳು ಬಂಡಾಯಕ್ಕೆ ಸ್ವಾತಂತ್ರ್ಯ ಪ್ರೇಮವನ್ನು ಪ್ರಮುಖ ಕಾರಣವಾಗಿ ತೋರಿಸಿದ್ದಾರೆ.ಶೇ.೭.೨ರಷ್ಟು ವಕ್ತೃಗಳ ಪ್ರಕಾರ ಕೊಡಗು ರಾಜನ ಪದಚ್ಯುತಿ ಈ ಬಂಡಾಯಕ್ಕೆ ಕಾರಣವಾಗಿದೆ.ಈ ಮೂರೂ ಕಾರಣಗಳನ್ನು ಬಂಡಾಯಕ್ಕೆ ಪ್ರೇರಣೆ ಎಂದು ಭಾವಿಸಿದವರ ಪ್ರಮಾಣ ಶೇ.೧೪.೪ ರಷ್ಟು.ಸಮೀಕ್ಷೆಯ ಪ್ರಕಾರ ಆರ್ಥಿಕ ಅಂಶ ಬಂಡಾಯಕ್ಕೆ ಮೂಲ ಕಾರಣ ಎನ್ನುವುದು ಸ್ಪಷ್ಟವಾಗುತ್ತದೆ.

೧೮೩೭ರ ಈ ರೈತ ಬಂಡಾಯದ ಪ್ರೇರಕ ವ್ಯಕ್ತಿಯ ಬಗ್ಗೆ ಕೇಳಲಾದ ಪ್ರಶ್ನೆಗೆ ಶೇ.೨೮ ವಕ್ತೃಗಳು ತಮಗೆ ಸರಿಯಾಗಿ ಗೊತ್ತಿಲ್ಲವೆಂದು ಉತ್ತರಿಸಿದ್ದಾರೆ.ಕಲ್ಯಾಣ ಸ್ವಾಮಿಯನ್ನು ನಾಯಕನೆಂದು ತಿಳಿದುಕೊಂಡವರ ಸಂಖ್ಯೆ ಶೇ.೨೫.೬ವಕ್ತೃಗಳು.ಶೇ.೨೦ಮಂದಿ ಕೆದಂಬಾಡಿ ರಾಮ ಗೌಡನನ್ನು ನಾಯಕನೆಂದು ಭಾವಿಸಿದ್ದಾರೆ.ಶೇ.೧೪.೪ಮಂದಿ ಹುಲಿ ಕಡಿದ ನಂಜಯ್ಯನನ್ನು ಮತ್ತು ಶೇ.೯.೬ಮಂದಿ.ಸ್ವಾಮಿ ಅಪರಂಪಾರನನ್ನು ಪ್ರೇರಕ ವ್ಯಕ್ತಿ ಎಂದು ಗುರುತಿಸಿದ್ದಾರೆ.ಕಲ್ಯಾಣ ಸ್ವಾಮಿಯಾಗಿ ನಟಿಸಿದ ಪುಟ್ಟ ಬಸವನ ಹೆಸರನ್ನು ಸೂಚಿಸಿದವರು ಕೇವಲ ಶೇ.೧.೬ ಮಂದಿ ವಾಸ್ತವವಾಗಿ ಈ ಬಂಡಾಯದ ಪ್ರೇರಕ ಶಕ್ತಿ ಹುಲಿ ಕಡಿದ ನಂಜಯ್ಯ. ಆದರೆ ಇತಿಹಾಸದಲ್ಲಿ ಅನೇಕ ಸಾಧಕರು ಸರಿಯಾಗಿ ಗುರುತಿಸಲ್ಪಡುವುದಿಲ್ಲ ಎನ್ನುವುದಕ್ಕೆ ಈ ಸಮೀಕ್ಷೆ ಸಮರ್ಥನೆ ನೀಡುತ್ತದೆ.

ಕೊಡಗಿನ ರಾಜ ಚಿಕ್ಕ ವೀರನನ್ನು ೧೮೩೪ ರಲ್ಲಿ ಪದಚ್ಯುತಿಗೊಳಿಸಿ ಬ್ರಿಟಿಷರು ಕೊಡಗನ್ನು ವಶಪಡಿಸಿಕೊಂಡರು.ಇದಕ್ಕೆ ವಸಾಹತು ವಿಸ್ತರಣೆಯ ಹಂಬಲ ಕಾರಣವೆಂದು ಶೇ.೩೮.೪ ಮಂದಿ ಅಭಿಪ್ರಾಯ ಪಟ್ಟಿದ್ದಾರೆ.ಶೇ.೩೦.೪ ಮಂದಿಗಳ ಪ್ರಕಾರ ಬೋಪು ದಿವಾನನ ಪಿತೂರಿಯಿಂದಾಗಿ ಕೊಡಗು ಬ್ರಿಟಿಷರ ವಶವಾಯಿತು.ಶೇ.೨೫.೬ ಮಂದಿ ಚೆನ್ನ ಬಸಪ್ಪನ ರಾಜದ್ರೋಹವನ್ನು ಇದಕ್ಕೆ ಕಾರಣವಾಗಿ ಕಾಣಿಸಿದ್ದಾರೆ.ಶೇ.೨.೪ ಮಂದಿ ಚಿಕ್ಕ ವೀರನ ಉದ್ಧಟತನ ಈ ಘಟನೆಗೆ ಕಾರಣವೆಂದು ಉಲ್ಲೇಖಿಸಿದ್ದಾರೆ.[೭]


ಚಿಕ್ಕ ವೀರ ರಾಜನ ದೊಡ್ಡಪ್ಪ ದೊಡ್ಡ ವೀರರಾಜ ತನ್ನ ಆಡಳಿತದ ಅವಧಿಯಲ್ಲಿ ಈಸ್ಟ್ ಇಂಡಿಯಾ ಕಂಪೆನಿಯಲ್ಲಿ ಎಂಟೂವರೆ ಲಕ್ಷ ರೂಪಾಯಿ ಡೆಪಾಸಿಟ್ಟು ಇರಿಸಿದ್ದ. ಇದರಿಂದಾಗಿ ಈಸ್ಟ್ ಇಂಡಿಯಾ ಕಂಪೆನಿ ಹಣಕಾಸಿನ ಮುಗ್ಗಟ್ಟಿನಿಂದ ಪಾರಾಗಿತ್ತು.ಚಿಕ್ಕ ವೀರ ರಾಜ ಈ ಹಣವನ್ನು ಹಿಂದಕ್ಕೆ ಕೇಳಿದ್ದು ಅವನ ಪದಚ್ಯುತಿಗೆ ಕಾರಣವೆಂದು ಶೇ.೧೯.೨ ವಕ್ತೃಗಳು ಭಾವಿಸುತ್ತಾರೆ. ಅದನ್ನು ಹಿಂದಕ್ಕೆ ಕೇಳದಿದ್ದರೂ ಬ್ರಿಟಿಷರು ಚಿಕ್ಕವೀರನನ್ನು ಪದಚ್ಯುತಗೊಳಿಸುತ್ತಿದ್ದರೆಂದು ಶೇ.೬೯.೬ವಕ್ತೃಗಳುಉತ್ತರಿಸಿದ್ದಾರೆ.[೮] ಉಳಿದವರು ಇದರ ಬಗ್ಗೆ ಏನನ್ನೂ ಹೇಳಲೂ ಸಾಧ್ಯವಿಲ್ಲವೆಂದು ಪ್ರತಿಕ್ರಿಯಿಸಿದ್ದಾರೆ.

ಕ್ರಿ.ಶ ೧೭೯೯ ರಲ್ಲಿ ಟಿಪ್ಪು ಸತ್ತ ಕೂಡಲೇ ಬ್ರಿಟಿಷರು ದ.ಕವನ್ನು ವಶಪಡಿಸಿಕೊಂಡರು.ಆದರೆ ಕೊಡಗನ್ನು ವಶಪಡಿಸಿಕೊಳ್ಳಲು ಕ್ರಿ. ಶ ೧೮೩೪ರವರೆಗೂ ಕಾದರು.ಇದು ಒಂದು ವಸಾಹತುಶಾಹಿ ತಂತ್ರವೆಂದು ಶೇ.೨೬.೪ ವಕ್ತೃಗಳು ಅಭಿಪ್ರಾಯ ಪಟ್ಟರೆ, ಕೊಡಗಿನವರು ಬಂಡೇಳಬಹುದೆಂಬ ಭೀತಿ ಇದಕ್ಕೆ ಕಾರಣವೆಂದು ಶೇ.೨೧.೬ ವಕ್ತೃಗಳು ಉತ್ತರಿಸಿದ್ದಾರೆ.ಕೊಡಗಿನಿಂದ ಉತ್ಪತ್ತಿಯಾಗುವ ಕಂದಾಯ ಬಹಳ ಕಡಿಮೆಯಾಗಿರುವುದು ಇದಕ್ಕೆ ಕಾರಣವೆಂದು ಶೇ.೩೪.೪ಮಂದಿ ಭಾವಿಸಿದರೆ, ಶೇ.೧೭.೬ ವಕ್ತೃಗಳು ಯಾವುದೇ ಉತ್ತರ ನೀಡಲು ಸಾಧ್ಯವಿಲ್ಲವೆಂದು ಹೇಳಿದ್ದಾರೆ.

ದ.ಕ ಜಿಲ್ಲೆಯನ್ನು ವಶಪಡಿಸಿಕೊಂಡ ಕೂಡಲೇಹೊಸ ಕಂದಾಯ ನೀತಿಯನ್ನು ಅನುಷ್ಠಾನಗೊಳಿಸಿದ ಈಸ್ಟ್ ಇಂಡಿಯಾ ಕಂಪೆನಿ ೧೮೩೪ ರಲ್ಲಿ ಕೊಡಗನ್ನು ವಶಪಡಿಸಿಕೊಂಡಾಗ ವಸಾಹತುಶಾಹಿ ಕಂದಾಯ ನೀತಿಯನ್ನು ಅನುಷ್ಠಾನಗೊಳಿಸಲಿಲ್ಲ.[೯]ಇದಕ್ಕೆ ಬಂಡಾಯದ ಭೀತಿ ಕಾರಣವೆಂದು ಶೇ.೨೧.೬ ವಕ್ತೃಗಳು, ಜನರ ಪ್ರೀತಿ ಗಳಿಕೆ ಕಾರಣವೆಂದು ಶೇ.೩೪.೪ವಕ್ತೃಗಳು, ಕಂದಾಯ ಹೆಚ್ಚಾಗುವ ಅಸಂಭವನೀಯತೆ ಕಾರಣವೆಂದು ಶೇ.೨೬.೪ ವಕ್ತೃಗಳು ಉತ್ತರಿಸಿದ್ದಾರೆ. ಶೇ.೧೭.೬ ವಕ್ತೃಗಳು ಗೊತ್ತಿಲ್ಲವೆಂದು ಪ್ರತಿಕ್ರಿಯಿಸಿದ್ದಾರೆ.

ಕೊಡಗಿನಲ್ಲಿ ದ.ಕ ಜಿಲ್ಲೆಯಲ್ಲಿದ್ದಂತಹ ವಸಾಹತು ನೀತಿ ಅನುಷ್ಠಾನಗೊಳ್ಳುತ್ತಿದ್ದರೆ ಕೊಡಗರು ಬಂಡೇಳುತ್ತಿದ್ದರೆ ಎಂಬ ಪ್ರಶ್ನೆಗೆ ಶೇ.೨೦.೮ ಮಂದಿ ಹೌದು ಎಂದು, ಶೇ.೪೦.೮ ಮಂದಿ ಗೊತ್ತಿಲ್ಲವೆಂದು ಉತ್ತರಿಸಿದ್ದಾರೆ.ಶೇ.೩೮.೪ ಮಂದಿ ವಕ್ತೃಗಳು ಕೊಡಗರು ಬಂಡೇಳುತ್ತಿರಲಿಲ್ಲ ಎಂದು ಪ್ರತಿಕ್ರಿಯಿಸಿದ್ದಾರೆ.ಇದಕ್ಕೆ ಶೇಕಡಾ ೫೦ ರಷ್ಟು ವಕ್ತೃಗಳು ಒಗ್ಗಟ್ಟಿನ ಕೊರತೆಯನ್ನು ಕಾರಣವಾಗಿ ಸೂಚಿಸಿದ್ದಾರೆ.ಶೇ.೧೧.೨ ವಕ್ತೃಗಳ ಪ್ರಕಾರ ಇಂಗ್ಲೀಷರ ಸೇನೆಯ ಬಗೆಗಿನ ಭೀತಿ ಇದಕ್ಕೆ ಕಾರಣವಾದರೆ ಶೇ.೮ ಮಂದಿಯ ಪ್ರಕಾರ ರಾಜನ ಬಗ್ಗೆ ಇದ್ದ ದ್ವೇಷದಿಂದಾಗಿ ಕೊಡಗರು ಬಂಡೇಳಲು ಸಾಧ್ಯವಿರಲಿಲ್ಲ.[೧೦]

೧೮೩೭ ರ ಮಾರ್ಚ್ ೩೦ರಂದು ಆರಂಭಗೊಂಡ ಕೊಡಗು – ಕೆನರಾ ಬಂಡಾಯ ಆರಂಭಿಕ ಯಶಸ್ಸನ್ನು ಕಂಡಿತು.ರೈತ ದಂಡು ಬೆಳ್ಳಾರೆ ಪುತ್ತೂರುಗಳನ್ನು ವಶಪಡಿಸಿಕೊಂಡು ಏಪ್ರಿಲ್ ಐದರಂದು ಮಂಗಳೂರನ್ನು ತಲುಪಿ ನಿಶಾನಿಗುಡ್ಡೆಯಲ್ಲಿ ವಿಜಯಧ್ವಜವನ್ನು ಹಾರಿಸಿತು. ಆ ಬಳಿಕ ಸುಮಾರು ಹದಿಮೂರು ದಿವಸಗಳ ಕಾಲ ಇಡೀ ಜಿಲ್ಲೆ ರೈತ ದಂಡಿನ ವಶದಲ್ಲಿತ್ತು. ಈ ಆರಂಭಿಕ ಯಶಸ್ಸಿನ ಪ್ರಮುಖ ಕಾರಣಗಳನ್ನು ಚಿತ್ರ ೮.೨ರಲ್ಲಿ ತೋರಿಸಲಾಗಿದೆ.



ಚಿತ್ರ೮.೨ ಬಂಡಾಯದ ಆರಂಭಿಕ ಯಶಸ್ವಿಗೆ ಕಾರಣಗಳು


ಶೇ.೩೦.೪ ವಕ್ತೃಗಳ ಪ್ರಕಾರ ಈ ಬಂಡಾಯದ ಆರಂಭಿಕ ಯಶಸ್ಸಿಗೆ ರೈತರ ಬದ್ಧತೆ ಕಾರಣವಾಗಿದೆ.ಸ್ವಾತಂತ್ರ್ಯ ಪ್ರೇಮ ಕಾರಣವೆಂದು ಶೇ.೨೫.೬ ವಕ್ತೃಗಳು, ಕಲ್ಯಾಣ ಸ್ವಾಮಿ ಹೊರಡಿಸಿದ ಇಸ್ತಿಹಾರಿನಲ್ಲಿದ್ದ ಕಂದಾಯ ರಿಯಾಯಿತಿಗಳು ಕಾರಣವೆಂದು ಶೇ.೨೩.೩ ವಕ್ತೃಗಳು ಮತ್ತು ಸಮರ್ಥ ನಾಯಕತ್ವ ಕಾರಣವೆಂದು ಶೇ.೨೦.೮ವಕ್ತೃಗಳು



ಉತ್ತರಿಸಿದ್ದಾರೆ.ರೈತದಂಡಿನ ನಾಯಕತ್ವ ನಿಜವಾದ ರಾಜ ಕುಟುಂಬದಲ್ಲಿರುತ್ತಿದ್ದರೂ ಬಂಡಾಯ ಯಶಸ್ವಿಯಾಗುತ್ತಿರಲಿಲ್ಲವೆಂದು ಶೇ.೫೫.೨ ಮಂದಿ, ಬಂಡಾಯ ಯಶಸ್ವಿಯಾಗುತ್ತಿತ್ತೆಂದು ಶೇ.೧೨.೮ ಮಂದಿ ಮತ್ತು ಏನನ್ನೂ ಹೇಳಲು ಸಾಧ್ಯವಿಲ್ಲವೆಂದು ಶೇ.೩.೨ ಮಂದಿ ಅಭಿಪ್ರಾಯ ಪಟ್ಟಿದ್ದಾರೆ.

ರೈತ ದಂಡು ಮಂಗಳೂರಿನ ಬದಲು ಮಡಿಕೇರಿಗೆ ಹೋಗುತ್ತಿದ್ದರೆ ಕೊಡಗಿನ ವಿಮೋಚನೆ ಸಾಧ್ಯವಿತ್ತೆಂದು ಶೇ.೨೦.೮ ವಕ್ತೃಗಳು, ಸಾಧ್ಯ ಇರಲಿಲ್ಲವೆಂದು ಶೇ.೩೭.೬ ವಕ್ತೃಗಳು ಮತ್ತು ಏನನ್ನೂ ಹೇಳಲು ಸಾಧ್ಯವಿಲ್ಲವೆಂದು ಶೇ.೪೧.೬ ವಕ್ತೃಗಳು ಉತ್ತರಿಸಿದ್ದಾರೆ.[೧೧]

ಆರಂಭಿಕ ಯಶಸ್ಸನ್ನು ಕಂಡ ರೈತ ಬಂಡಾಯ ಅಂತಿಮವಾಗಿ ಸೋಲಿನಲ್ಲಿ ಪರ್ಯಾವಸಾನವಾಯಿತು.ಈ ಸೋಲಿನ ಕಾರಣಗಳನ್ನು ಚಿತ್ರ.೮.೩ರಲ್ಲಿ ತೋರಿಸಲಾಗಿದೆ.



ಚಿತ್ರ.೮.೩ ಬಂಡಾಯದ ಸೋಲಿಗೆ ಕಾರಣಗಳು


ಶೇ.೧೯.೨ಮಂದಿ ವಕ್ತೃಗಳ ಪ್ರಕಾರ ಕೊಡಗರ ಅಸಹಕಾರದಿಂದಾಗಿ ರೈತಬಂಡಾಯ ಸೋಲಿನಲ್ಲಿ ಪರ್ಯಾಯವಸಾನವಾಯಿತು.ಶೇ.೧೬.೮ ವಕ್ತೃಗಳು ಬೋಪು ದಿವಾನನ ಕುತಂತ್ರವನ್ನು, ಶೇ.೨೪ ವಕ್ತೃಗಳು ಒಗ್ಗಟ್ಟಿನ ಕೊರತೆಯನ್ನು, ಶೇ.೮ ವಕ್ತೃಗಳು ರಣತಂತ್ರದ ಕೊರತೆಯನ್ನು, ಶೇ.೫.೬ ವಕ್ತೃಗಳು ವ್ಯಾಪಾರಿಗಳ ಕುಯುಕ್ತಿಯನ್ನು ಸೋಲಿಗೆ



ಕಾರಣವೆಂದು ದಾಖಲಿಸಿದ್ದಾರೆ. ಈ ಎಲ್ಲಾ ಐದು ಕಾರಣಗಳಿಂದಾಗಿ ಬಂಡಾಯ ಸೋತಿತೆಂದುಶೇ.೨೬.೪ ವಕ್ತೃಗಳು ಪ್ರತಿಕ್ರಿಯಿಸಿದ್ದಾರೆ.[೧೨]

ಆರ್ಥಿಕ ಬಂಡಾಯವನ್ನು ಅಡಗಿಸಿದ ಬಳಿಕ ಬ್ರಿಟಿಷರು ಬಂಡಾಯ ನಡೆದ ಪ್ರದೇಶಗಳಲ್ಲಿ ಕೆಲವನ್ನು ನಿರ್ಲಕ್ಷಿಸಿದರು.ಇದರಿಂದಾಗಿ ಆ ಪ್ರದೇಶಗಳ ಅಭಿವೃದ್ಧಿ ಕುಂಠಿತವಾಯಿತು. ಇದರ ಬಗ್ಗೆ ಕೇಳಲಾದ ಪ್ರಶ್ನೆಗೆ ವಕ್ತೃಗಳಲ್ಲಿ ಶೇ.೪೬.೪ ರಷ್ಟು ಅತ್ಯಂತ ನಿರ್ಲಕ್ಷ್ಯಕ್ಕೆ ಒಳಗಾದ ಪ್ರದೇಶ ಅಮರ ಸುಳ್ಯವೆಂದು, ಶೆ.೩೬.೬ರಷ್ಟು ವಕ್ತೃಗಳು ಪುತ್ತೂರೆಂದು, ಶೇ.೧೦.೪ ರಷ್ಟು ವಕ್ತೃಗಳು ಕೊಡಗೆಂದೂ, ಶೇ.೫.೬ರಷ್ಟು ವಕ್ತೃಗಳು ಮಂಗಳೂರೆಂದು ಅಭಿಪ್ರಾಯ ಪಟ್ಟಿದ್ದಾರೆ.[೧೩]

ಅಮರ ಸುಳ್ಯ ಪ್ರದೇಶ ಈಗಲೂ ಅಲಕ್ಷಿತವಾಗಿದೆಯೆಂದು ಶೇ.೬೪ ರಷ್ಟು ವಕ್ತೃಗಳು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.ಈ ಪ್ರದೇಶ ಅಲಕ್ಷಿತವಾಗಲು ವಕ್ತೃಗಳು ನೀಡಿರುವ ಕಾರಣವನ್ನು ಚಿತ್ರ ೮.೪ ರಲ್ಲಿ ತೋರಿಸಲಾಗಿದೆ.




ಚಿತ್ರ೮.೪ ಅಮರ ಸುಳ್ಯದ ಅಲಕ್ಷ್ಯಕ್ಕೆ ಕಾರಣ

ಅಮರ ಸುಳ್ಯ ಪ್ರದೇಶ ಅಲಕ್ಷಿತವಾಗಿದೆಯೆಂದು ಅಭಿಪ್ರಾಯ ಪಟ್ಟವರಲ್ಲಿ ಶೇ.೪೧.೭೫ ಅದಕ್ಕೆ ಸಮರ್ಥ ನಾಯಕತ್ವದ ಕೊರತೆ ಕಾರಣವೆಂದಿದ್ದಾರೆ.ಶೇ.೩೦ ಮಂದಿ ಜಾತಿ ರಾಜಕಾರಣದಿಂದಾಗಿ ಜನರಲ್ಲಿ ಒಗ್ಗಟ್ಟಿಲ್ಲದಿರುವುದನ್ನು ಗೊತ್ತು ಮಾಡಿ ತೋರಿಸಿದ್ದಾರೆ.ಶೇ.೧೫ವಕ್ತೃಗಳ ಪ್ರಕಾರ ಇಲ್ಲಿನ ಜನರು ಭಾವನಾತ್ಮಕ ವಿಷಯಗಳಿಗೆ ಮಹತ್ವ



ನೀಡುವುದು ಈ ಪ್ರದೇಶ ಅಲಕ್ಷಿತವಾಗಲು ಕಾರಣವಾಗಿದೆ.ಶೇ.೧೩.೭೫ ವಕ್ತೃಗಳು ಜನರಲ್ಲಿ ಇಚ್ಛಾಶಕ್ತಿಯ ಕೊರತೆ ಇರುವುದನ್ನು ಕಾರಣವಾಗಿ ಸೂಚಿಸಿದ್ದಾರೆ.

ಕೊಡಗು–ಕೆನರಾ ಬಂಡಾಯಗಾರರ ನೆನಪಿಗಾಗಿ ನಾವು ಮತ್ತು ಸರಕಾರ ಏನನ್ನು ಮಾಡಬಹುದು ಎಂಬ ಪ್ರಶ್ನೆಗೆ ಬಂದ ಉತ್ತರಗಳನ್ನು ಚಿತ್ರ ೮.೫ ರಲ್ಲಿ ತೋರಿಸಲಾಗಿದೆ.



ಚಿತ್ರ೮. ೫ ಬಂಡಾಯದ ನೆನಪಿನ ಕಾರ್ಯಕ್ರಮಗಳು.

ಶೇ.೧೨.೮ ವಕ್ತೃಗಳು ಬೆಳ್ಳಾರೆ ಕೋಟೆಯ ಪುನರ್ ನಿರ್ಮಾಣದಿಂದ ಕೊಡಗು ಕೆನರಾ ಬಂಡಾಯದ ನೆನಪನ್ನು ಚಿರಸ್ಥಾಯಿಗೊಳಿಸಬಹುದೆಂದು ಭಾವಿಸುತ್ತಾರೆ.ಶೇ.೯.೪ ಮಂದಿ ಈ ಘಟನೆ ಪಠ್ಯಕ್ಕೆ ಸೇರ್ಪಡೆಗೊಳಿಸಬೇಕೆಂದು ಬಯಸುತ್ತಾರೆ.ಶೇ.೮.೮ ವಕ್ತೃಗಳ ಪ್ರಕಾರ ಪ್ರತಿ ವರ್ಷ ಅಮರಕ್ರಾಂತಿ ಉತ್ಸವ ಆಚರಿಸುವ ಮೂಲಕ ಬಂಡಾಯದ ನೆನಪನ್ನು ಉಳಿಸಲು ಸಾಧ್ಯವಿದೆ.ಶೇ.೫.೬ ವಕ್ತೃಗಳು ಮಂಗಳೂರು ವಿಶ್ವವಿದ್ಯಾಲಯದಲ್ಲಿ ಅಮರಕ್ರಾಂತಿ ಅಧ್ಯಯನ ಪೀಠ ರಚನೆಯಾಗಬೇಕೆಂದು ಬಯಸುತ್ತಾರೆ. ಈ ಐದು ಅಂಶಗಳೂ ಕಾರ್ಯ ರೂಪಕ್ಕೆ ಬರಬೇಕೆಂದು ಶೇ.೪೨.೪ ವಕ್ತೃಗಳು ಅಭಿಪ್ರಾಯ ಪಡುತ್ತಾರೆ.[೧೪]

ಕೊಡಗು ಕೆನರಾ ಆರ್ಥಿಕ ಬಂಡಾಯದಲ್ಲಿ ಬಹುತೇಕಕೊಡವರು ಪಾಲ್ಗೊಳ್ಳದಿದ್ದರೂ ಅದರಿಂದ ಕೊಡಗಿಗೆ ವಿಶೇಷ ಪ್ರಯೋಜನವೇನೂ ಆಗಲಿಲ್ಲ. ವಕ್ತೃಗಳಲ್ಲಿ ಶೇ.೭೭ರಷ್ಟು ಮಂದಿ ಕೊಡಗು ಈಗಲೂ ಅಭಿವೃದ್ಧಿ ಹೊಂದಿಲ್ಲ ಎನ್ನುತ್ತಾರೆ.ಅದಕ್ಕೆ ೧೫.೫೭% ಮಂದಿ ಪ್ರತ್ಯೇಕತೆಯ ಭಾವನೆಯನ್ನು ಶೇ.೨೨.೭%ರಷ್ಟು ಮಂದಿ ನಾಯಕತ್ವದ ಕೊರತೆಯನ್ನು ಮತ್ತು ೩೫.೦೬% ರಷ್ಟು ಈ ಮೂರೂ ಅಂಶಗಳನ್ನು ಕಾರಣಗಳೆಂದು ಪರಿಗಣಿಸಿದ್ದಾರೆ.



ಕೊಡಗು ಮತ್ತು ದ.ಕ.ಜಿಲ್ಲೆಯ ಬಹುಭಾಗ ಈಗಲೂ ಅಭಿವೃದ್ಧಿ ಸಾಧಿಸದೇ ಇರುವುದರಿಂದ ಇಲ್ಲಿ ಪ್ರತ್ಯೇಕತೆಯ ಕೂಗು ಎದ್ದಿದೆ.ಸುಳ್ಯ, ಪುತ್ತೂರು, ಬೆಳ್ತಂಗಡಿ ಮತ್ತು ಬಂಟವಾಳ ತಾಲೂಕಿನ ಜನರು ಪ್ರತ್ಯೇಕ ಜಿಲ್ಲೆಯೊಂದನ್ನು ಕೇಳುತ್ತಿದ್ದಾರೆ.ಪ್ರತ್ಯೇಕ ಜಿಲ್ಲೆಯಾದರೆ ಅಮರ ಸುಳ್ಯದ ಅಭಿವೃದ್ಧಿ ಸಾಧ್ಯವೆಂದು ಶೇ.೨೭.೨ ಮಂದಿ, ಸಾಧ್ಯವಿಲ್ಲವೆಂದು ಶೇ.೬೪.೮ ಮಂದಿ, ಈ ಬಗ್ಗೆ ಏನನ್ನೂ ಹೇಳಲು ಸಾಧ್ಯವಿಲ್ಲವೆಂದು ಶೇ.೮ಮಂದಿ ಅಭಿಪ್ರಾಯಪಟ್ಟಿದ್ದಾರೆ. ಇದಕ್ಕೆ ಜಾತಿಗಳ ರಾಜಕೀಯ, ಒಗ್ಗಟ್ಟಿನ ಕೊರತೆ, ಮತ್ತು ಸಮರ್ಥ ನಾಯಕತ್ವದ ಕೊರತೆಯನ್ನು ಕಾರಣವಾಗಿ ಇವರು ಸೂಚಿಸಿದ್ದಾರೆ.[೧೫]

೨೦ನೇ ಶತಮಾನದ ಕೊನೆಯ ದಶಕದಲ್ಲಿ ಪ್ರತ್ಯೇಕ ಕೊಡಗು ರಾಜ್ಯದ ಬಗ್ಗೆ ಬಲವಾದ ಕೂಗು ಕೇಳಿಬಂದಿತ್ತು.ಕೊಡಗು ಒಂದು ರಾಜ್ಯವಾದರೆ ಅಭಿವೃದ್ಧಿ ಸಾಧ್ಯವೆಂದು ಶೇ.೨೭.೨ ವಕ್ತೃಗಳು ಅಭಿಪ್ರಾಯಪಟ್ಟರೆ, ಶೇ.೬೧.೬ ಮಂದಿಗಳ ಪ್ರಕಾರ ಕೊಡಗು ಪ್ರತ್ಯೇಕ ರಾಜ್ಯವಾದರೆ ಅಭಿವೃದ್ಧಿ ಹೊಂದಲು ಸಾಧ್ಯವಿಲ್ಲ. ಇದರ ಬಗ್ಗೆ ಖಚಿತವಾಗಿ ಏನನ್ನೂ ಹೇಳಲಾಗುತ್ತಿಲ್ಲವೆಂದು ಶೇ.೧೧.೨ಮಂದಿ ಅಭಿಪ್ರಾಯಪಟ್ಟಿದ್ದಾರೆ. ಕೊಡಗಿನಲ್ಲಿ ಒಗ್ಗಟ್ಟಿನ ಕೊರತೆ, ಸಂಪನ್ಮೂಲಗಳ ಕೊರತೆ, ಬಲಾಢ್ಯ ಜಾತಿಗಳ ರಾಜಕೀಯ ಮತ್ತು ನಾಯಕತ್ವದ ಕೊರತೆಯನ್ನು ಈ ಜಿಲ್ಲೆ ಒಂದು ರಾಜ್ಯವಾದರೂ ಅಭಿವೃದ್ಧಿ ಹೊಂದಲು ಸಾಧ್ಯವಿಲ್ಲ ಎನ್ನುವುದಕ್ಕೆ ಕಾರಣವಾಗಿ ತೋರಿಸಿದ್ದಾರೆ.[೧೬]

ಕೊಡಗು ಕೆನರಾ ಆರ್ಥಿಕ ಬಂಡಾಯದ ನೆನಪನ್ನು ಮರುಕಳಿಸಿ ೧೮೩೭ರ ಹುತಾತ್ಮರ ಬಲಿದಾನದ ಘಟನೆಯನ್ನು ಶಾಶ್ವತ ನೆನಪಾಗಿಸುವ ಉದ್ದೇಶದಿಂದ ೧೯೯೮ರಲ್ಲಿ ಸುಳ್ಯದ ಇತಿಹಾಸ ಆಸಕ್ತರು ಒಟ್ಟು ಸೇರಿ ಅಮರಕ್ರಾಂತಿ ಉತ್ಸವ ಸಮಿತಿಯೊಂದನ್ನು ಹುಟ್ಟು ಹಾಕಿದರು.[೧೭] ಅದು ಸುವರ್ಣ ಸ್ವಾತಂತ್ರ್ಯದ ವರ್ಷವಾಗಿದುದರಿಂದ ಸಮಿತಿಗೊಂದು ಐತಿಹಾಸಿಕ ಮಹತ್ವ ಪ್ರಾಪ್ತವಾಯಿತು. ಅದು ಪ್ರತಿವರ್ಷ ಒಂದೊಂದು ವಿಶಿಷ್ಟ ಕಾರ್ಯಕ್ರಮವನ್ನು ಹಮ್ಮಿಕೊಂಡು ಆರ್ಥಿಕ ಬಂಡಾಯದ ನೆನಪನ್ನು ಗಟ್ಟಿಗೊಳಿಸುವ ಯತ್ನ ಮಾಡಿತು.ವಕ್ತೃಗಳಲ್ಲಿ ಶೇ.೬೯.೬ ಮಂದಿ ಈ ಸಮಿತಿಯ ಕಾರ್ಯ ಚಟುವಟಿಕೆಗಳ ಬಗ್ಗೆ ಪರಿಜ್ಞಾನ ಹೊಂದಿದ್ದಾರೆ.ಶೇ.೩೦.೪ ಮಂದಿಗೆ ಅದರ ಬಗ್ಗೆ ಏನೇನೂ ಗೊತ್ತಿಲ್ಲ.

ಕ್ರಿ. ಶ. ೧೯೯೮ರಲ್ಲಿ ಅಮರಕ್ರಾಂತಿ ಉತ್ಸವ ಸಮಿತಿ ಸುಳ್ಯದಿಂದ ಮಂಗಳೂರುವರೆಗೆ ಮಾರ್ಚ್ ೩೦ ರಿಂದ ಏಪ್ರಿಲ್ ೫ ರ ವರೆಗೆ ಕಾಲ್ನಡಿಗೆ ಜಾಥಾವನ್ನು ಹಮ್ಮಿಕೊಂಡಿತ್ತು.ವಕ್ತೃಗಳಲ್ಲಿ ಶೇ.೩೭.೬ ಮಂದಿ ಈ ಜಾಥಾದಲ್ಲಿ ಪಾಲ್ಗೊಂಡಿದ್ದಾರೆ.ಶೇ.೧೩.೬ ಮಂದಿಗೆ ಕಾಲ್ನಡಿಗೆ ಜಾಥಾದ ಬಗ್ಗೆ ಏನೇನೂ ಗೊತ್ತಿಲ್ಲ. ವಕ್ತೃಗಳಲ್ಲಿ ಶೇ.೪೮.೮ ಮಂದಿ ಕಾಲ್ನಡಿಗೆ ಜಾಥಾದಲ್ಲಿ ಪಾಲ್ಗೊಂಡಿಲ್ಲ. ಏಳು ದಿವಸ ಬಿಡುವು ಮಾಡಿಕೊಳ್ಳಲು ಸಾಧ್ಯವಾಗದ್ದನ್ನು ಅದಕ್ಕೆ ಕಾರಣವಾಗಿ ಬಹುತೇಕರು ನೀಡಿದ್ದರೆ, ಇನ್ನುಳಿದವರು ಅನಾರೋಗ್ಯ ಮತ್ತು ವಾರ್ಧಕ್ಯವನ್ನು ನೆಪವಾಗಿ ಕಾಣಿಸಿದ್ದಾರೆ.

ವಕ್ತೃಗಳಲ್ಲಿ ಎಲ್ಲರೂ ಕ್ರಿ.ಶ. ೧೮೩೭ರ ಈ ಘಟನೆಯನ್ನು ಇತಿಹಾಸದ ಒಂದು ಮಹಾನ್ ವಿದ್ಯಮಾನವೆಂದು ಒಪ್ಪುತ್ತಾರೆ. ಕೆಲವರು ಅದನ್ನು ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವೆಂದು ಮನ್ನಿಸಬೇಕೆಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.ವಕ್ತೃಗಳಲ್ಲಿ ಶೇ.೬೭.೨ ಮಂದಿ ಕೊಡಗು – ಕೆನರಾ ಬಂಡಾಯದ ಹಿರಿಯರ ನೆನಪಲ್ಲಿ ಯಾವುದೇ ಸಾಧನೆ ಮಾಡಿಲ್ಲ. ಕಾರ್ಯಕ್ರಮ ಹಮ್ಮಿಕೊಂಡಿಲ್ಲ. ಶೇ.೧೩.೬ ರಷ್ಟು ಮಂದಿ ಏನನ್ನಾದರು ಮಾಡಬೇಕೆಂಬ ಉತ್ಸಾಹ ತೋರಿಸಿದ್ದಾರೆ.ಶೇ.೧೯.೨ವಕ್ತೃಗಳು ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ.ಅವರಲ್ಲಿ ಶೇ.೬೬.೬ ಮಂದಿ ಲೇಖನಗಳ ಮೂಲಕ ಈ ವಿದ್ಯಮಾನವನ್ನು ಬೇರೆ ಬೇರೆ ಸಂದರ್ಭಗಳಲ್ಲಿ ಜನರಿಗೆ ಮುಟ್ಟಿಸಿದ್ದಾರೆ.ಈ ಘಟನೆಯನ್ನು ಆಧರಿಸಿ ಕೃತಿಗಳನ್ನು ರಚಿಸಿರುವ ವಕ್ತೃಗಳ ವಿವರಗಳನ್ನು ಕೋಷ್ಟಕ ೮.೬ ರಲ್ಲಿ ತೋರಿಸಲಾಗಿದೆ.


ಸುಳ್ಯದ ಅಭಿನಯ ನಾಟಕ ತಂಡವು ಕಲ್ಯಾಣ ಸ್ವಾಮಿ ನಾಟಕವನ್ನು ಸುಳ್ಯ ಪುತ್ತೂರು, ಬೆಳ್ತಂಗಡಿಗಳಲ್ಲಿ ಪ್ರದರ್ಶಿಸಿದೆ.ಕೆದಂಬಾಡಿ ರಾಮಗೌಡ ನಾಟಕ, ಬಡ್ಡಡ್ಕದಲ್ಲಿ ಪ್ರದರ್ಶನ ಕಂಡಿದೆ.ಅಮರಕ್ರಾಂತಿ ವೀರರು ೧೯೯೮ರ ಮಾರ್ಚ್ ೩೦ ರಿಂದ ಎಪ್ರಿಲ್ ೫ ರ ವರೆಗಿನ ಅಮರ ಕ್ರಾಂತಿ ಕಾಲ್ನಡಿಗೆ ಜಾಥಾದಲ್ಲಿ ಬೀದಿ ನಾಟಕವಾಗಿ ಇಪ್ಪತ್ತೈದಕ್ಕಿಂತಲೂ ಹೆಚ್ಚಿನ ಸ್ಥಳಗಳಲ್ಲಿ ಪ್ರದರ್ಶಿತವಾಗಿದೆ.

ವಸಾಹತುಶಾಹಿ ಆಡಳಿತವು ರೈತರ ವಿರುದ್ಧವಾಗಿದ್ದುದರಿಂದ ೧೮೩೭ರ ಕೊಡಗು – ಕೆನರಾ ಆರ್ಥಿಕ ಬಂಡಾಯ ಸಂಭವಿಸಿತು.ಸ್ವತಂತ್ರ ಭಾರತದಲ್ಲೂ ಅನೇಕ ರೈತ ಚಳವಳಿಗಳು ನಡೆದಿವೆ. ಪ್ರಜಾಪ್ರಭುತ್ವ ವ್ಯವಸ್ಥೆಯೂ ಕೂಡಾ ಸಂಪೂರ್ಣವಾಗಿ ರೈತರ ಪರವಾಗಿಲ್ಲವೆನ್ನುವುದನ್ನು ಇದು ಸೂಚಿಸುತ್ತದೆ.ಜಾಗತೀಕರಣ ಪ್ರಕ್ರಿಯೆಯಲ್ಲಿ ಕೃಷಿಗೆ ಮಹತ್ವವಿಲ್ಲದ ಕಾರಣ ರೈತರ ಆತ್ಮಹತ್ಯೆಗಳು ಸಾರ್ವತ್ರಿಕವಾಗುತ್ತಿವೆ. ಆದುದರಿಂದ ೧೯೯೧ರ ಬಳಿಕ ಸಾಕಷ್ಟು ರೈತ ಚಳವಳಿಗಳು ನಡೆದಿವೆ. ದಕ್ಷಿಣ ಕನ್ನಡದಲ್ಲಿ ವಿಶೇಷ ವಿತ್ತ ವಲಯದ ಮತ್ತು ಉಡುಪಿಯಲ್ಲಿ ನಂದಿಕೂರು ಉಷ್ಣ ವಿದ್ಯುತ್ ಸ್ಥಾವರದ ವಿರುದ್ಧದ ರೈತ ಬಂಡಾಯ ಇನ್ನೂ ಕೊನೆಗೊಂಡಿಲ್ಲ.

ಈ ಹಿನ್ನೆಲೆಯಲ್ಲಿ ವಾಸ್ತವವಾಗಿ ರೈತರನ್ನು ಬಂಡೇಳುವಂತೆ ಪ್ರಚೋದಿಸುವ ಅಂಶ ಯಾವುದು ಎಂಬ ಪ್ರಶ್ನೆ ಹಾಕಲಾಯಿತು.ಅದಕ್ಕೆ ಬಂದ ಉತ್ತರವನ್ನು ಚಿತ್ರ ೮.೬ ರಲ್ಲಿ ತೋರಿಸಲಾಗಿದೆ.

ಕೋಷ್ಟಕ ೮.೬ ವಕ್ತೃಗಳ ಕೃತಿಗಳು

ವಕ್ತೃ	ಕೃತಿಯ ಹೆಸರು	ಪ್ರಕಾರ
ಡಾ।ಎಂ.ಜಿ. ನಾಗರಾಜ್	ಹಾಲೇರಿ ರಾಜವಂಶವು	ಸಂಶೋಧನೆ
ದೇವಿಪ್ರಸಾದ್ ಸಂಪಾಜೆ	ಅಮರಸುಳ್ಯದ ಸ್ವಾತಂತ್ರ್ಯ ಸಮರ	ಸಂಶೋಧನೆ
ಡಾ। ತಂಬಂಡ ವಿಜಯ ಪೂಣಚ್ಚ	ಪಳಮೆ	ಸಂಶೋಧನೆ
ಡಾ। ಪುರುಷೋತ್ತಮ ಬಿಳಿಮಲೆ	ಸುಳ್ಯ ಪರಿಸರದ ಗೌಡಜನಾಂಗ	ಸಂಶೋಧನೆ
ಪ್ರೊ। ಜವರೇಗೌಡ	ಕಲ್ಯಾಣಸ್ವಾಮಿ	ನಾಟಕ
ಡಾ। ಪ್ರಭಾಕರ ಶಿಶಿಲ	ಅಮರಕ್ರಾಂತಿ ವೀರರು	ಬೀದಿ ನಾಟಕ
ವಿದ್ಯಾಧರ ಬಡ್ಡಡ್ಕ	ಕೆದಂಬಾಡಿ ರಾಮಗೌಡ	ನಾಟಕ
ಡಿ.ಜಿ.ನಡ್ಕ	ಕಲ್ಯಾಣಪ್ಪನ ಸ್ವಾತಂತ್ರ್ಯ ಸಮರ	ನಾಟಕ
ಟಿ.ಜಿ.ಮುಡೂರು	ಅಮರ ಕಲ್ಯಾಣ ಕ್ರಾಂತಿ	ನಾಟಕ
ಡಾ। ಪ್ರಭಾಕರ ಶಿಶಿಲ	ಬೇಟೆ	ಅರೆಭಾಷೆ ಸಣ್ಣಕತೆ
ಡಾ॥ ಪ್ರಭಾಕರ ಶಿಶಿಲ	ಕೊಡಗಿನ ಐತಿಹ್ಯ ಕತೆಗಳು	ಕಥಾ ಸಂಕಲನ
ಡಾ॥ ಪ್ರಭಾಕರ ಶಿಶಿಲ	ನದಿ ಎರಡರ ನಡುವೆ	ಕಾದಂಬರಿ
ಡಾ॥ ಪ್ರಭಾಕರ ಶಿಶಿಲ	ಮೂಡಣದ ಕೆಂಪು ಕಿರಣ	ಕಾದಂಬರಿ
ಡಾ॥ ಪ್ರಭಾಕರ ಶಿಶಿಲ	ಕೊಡಗು ಕಥನ	ಸಂಕಥನ




ಚಿತ್ರ೮.೬ರೈತ ಬಂಡಾಯಕ್ಕೆ ಪ್ರಚೋದನೆ

ರೈತ ಬಂಡಾಯಕ್ಕೆ ಪ್ರಚೋದನೆ ಒದಗುವುದು ಆರ್ಥಿಕ ಕಾರಣಗಳಿಂದ ಎಂದು ಶೇ.೪೪.೮ ವಕ್ತೃಗಳು ಅಭಿಪ್ರಾಯ ಪಟ್ಟಿದ್ದಾರೆ. ಶೇ.೨೨ ವಕ್ತೃಗಳ ಪ್ರಕಾರ ಸಾಮಾಜಿಕ ಕಾರಣಗಳು ರೈತ ಬಂಡಾಯಕ್ಕೆ ಪ್ರಚೋದನೆ ನೀಡುತ್ತವೆ. ಶೇ.೧೮.೮ ವಕ್ತೃಗಳು ಸಾಂಸ್ಕೃತಿಕ ಕಾರಣಗಳು ಮತ್ತು ಶೇ.೧೪.೪ ವಕ್ತೃಗಳು ಧಾರ್ಮಿಕ ಕಾರಣಗಳನ್ನು ರೈತ ಬಂಡಾಯಕ್ಕೆ ಪ್ರಚೋದನೆ ಎಂದು ಉಲ್ಲೇಖಿಸಿದ್ದಾರೆ.

೧೯೯೦ರ ದಶಕದ ಆದಿಯಲ್ಲಿ ಆರಂಭಗೊಂಡ ಉದಾರೀಕರಣ ಖಾಸಗೀಕರಣ ಮತ್ತು ಜಾಗತೀಕರಣ ಪ್ರಕ್ರಿಯೆಗಳು ವಿಶ್ವದ ಆರ್ಥಿಕ ಮುಖವನ್ನು ಬದಲಾಯಿಸಿದವು.೧೯೯೫ರಲ್ಲಿ ವಿಶ್ವ ವ್ಯಾಪಾರ ಸಂಘಟನೆ ರಚನೆಯಾದ ಮೇಲೆ ಸದಸ್ಯ ರಾಷ್ಟ್ರಗಳು ಅನೇಕ ಆರ್ಥಿಕ ಸುಧಾರಣೆಗಳನ್ನು ಅನುಷ್ಠಾನಗೊಳಿಸಿದವು.ಭಾರತದಲ್ಲೂ ಹೊಸ ಗಾಳಿ ಬಲವಾಗಿ ಬೀಸಿತು. ಹೊಸ ಆರ್ಥಿಕ ಸುಧಾರಣೆಗಳು ರೈತರ ಪರವಾಗಿವೆಯೆಂದು ಶೇ. ೧೧.೨ರಷ್ಟು ವಕ್ತೃಗಳು ಭಾವಿಸುತ್ತಾರೆ.ರೈತರ ವಿರುದ್ಧವಾಗಿವೆಯೆಂದು ಶೇ. ೫೪.೪ರಷ್ಟು ವಕ್ತೃಗಳು ಉತ್ತರಿಸಿದ್ದಾರೆ.ಈ ಬಗ್ಗೆ ಖಚಿತವಾಗಿ ಏನನ್ನೂ ಹೇಳಲು ಸಾಧ್ಯವಿಲ್ಲವೆಂದು ಶೇ.೩೨.೮ರಷ್ಟು ವಕ್ತೃಗಳು ಹೇಳುತ್ತಾರೆ.




ಈಗ ರೈತರು ಎದುರಿಸುತ್ತಿರುವ ಅತ್ಯಂತ ದೊಡ್ಡ ಸಮಸ್ಯೆ ಯಾವುದು ಎಂಬ ಪ್ರಶ್ನೆಗೆ ವಕ್ತೃಗಳು ನೀಡಿರುವ ಉತ್ತರವನ್ನು ಚಿತ್ರ ೮.೭ರಲ್ಲಿ ಅಭಿವ್ಯಕ್ತಿಸಲಾಗಿದೆ.



ಚಿತ್ರ ೮.೭ : ರೈತರ ಪ್ರಮುಖ ಸಮಸ್ಯೆ

ವಕ್ತೃಗಳಲ್ಲಿ ಶೇ.೪೨ ಮಂದಿ ಕೃಷಿ ಬೆಳೆಗಳ ಮತ್ತು ಬೆಲೆಗಳ ಅಸ್ಥಿರತೆಯನ್ನು ಪ್ರಮುಖ ಸಮಸ್ಯೆಯನ್ನಾಗಿ ಕಾಣಿಸಿದ್ದಾರೆ.ಶೇ.೧೨.೮ ಮಂದಿ ಮಾರಾಟ ವ್ಯವಸ್ಥೆಯಲ್ಲಿನ ದೋಷವನ್ನು ಪ್ರಮುಖ ಸಮಸ್ಯೆಯಾಗಿ ಗುರುತಿಸಿದ್ದಾರೆ.ಕೃಷಿ ಕೂಲಿ ಕಾರ್ಮಿಕರ ಕೊರತೆಯನ್ನು ಪ್ರಮುಖ ಸಮಸ್ಯೆಯೆಂದು ಶೇ.೨೦.೮ ವಕ್ತೃಗಳು ಕಾಣಿಸಿದ್ದಾರೆ.ಶೇ.೧೦.೪ ಮಂದಿ ಹಣಕಾಸಿನ ಸಮಸ್ಯೆಗೆ ಮೊದಲ ಸ್ಥಾನ ನೀಡಿದ್ದಾರೆ.ಸರಕಾರದ ನಿರ್ಲಕ್ಷ್ಯವೇ ಬಹುದೊಡ್ಡ ಸಮಸ್ಯೆಯೆಂದು ಶೇ.೨೨.೪ ವಕ್ತೃಗಳು ಉಲ್ಲೇಖಿಸಿದ್ದಾರೆ.ಸರಕಾರದ ನಿರ್ಲಕ್ಷ್ಯಕ್ಕೆ ಜಾಗತೀಕರಣ ಪ್ರಕ್ರಿಯೆ ಬಹುಮುಖ್ಯ ಕಾರಣವೆಂಬ ಅಂಶದ ಅರಿವು ಬಹುತೇಕರಿಗಿದೆ.ಇತ್ತೀಚಿನ ಆರ್ಥಿಕ ಸುಧಾರಣೆಗಳು ಬಹುತೇಕವಾಗಿ ರೈತರ ವಿರುದ್ಧವಿರುವುದರಿಂದ ಅವರು ಆಗಾಗ ಬೀದಿಗಿಳಿದು ಚಳುವಳಿ ನಡೆಸಬೇಕಾಗುತ್ತದೆ. ಆದರೆ ಇಂತಹ ರೈತ ಹೋರಾಟಗಳು ಯಶಸ್ವಿಯಾಗುತ್ತವೆಯೇ?ಹೌದೆಂದು ಶೇ. ೧೧.೨ರಷ್ಟು ವಕ್ತೃಗಳು ಅಭಿಪ್ರಾಯ ಪಟ್ಟರೆ ಶೇ.೩೦.೪ರಷ್ಟು ವಕ್ತೃಗಳು ಖಚಿತವಾಗಿ ಏನನ್ನೂ ಹೇಳಲಾಗುತ್ತಿಲ್ಲವೆಂದಿದ್ದಾರೆ.ಆದರೆ ಶೇ.೫೮.೪ರಷ್ಟು ವಕ್ತೃಗಳು ರೈತ ಹೋರಾಟಗಳು ಯಶಸ್ಸನ್ನು ಕಾಣುವುದಿಲ್ಲವೆಂದು ಹೇಳಿದ್ದಾರೆ.ಅದಕ್ಕೆ ನೀಡಿರುವ ಕಾರಣಗಳನ್ನು ಚಿತ್ರ ೮.೮ ಅಭಿವ್ಯಕ್ತಿಸುತ್ತದೆ.





ಚಿತ್ರ. ೮.೮ರೈತ ಹೋರಾಟದ ಸೋಲಿಗೆ ಕಾರಣ

ವಕ್ತೃಗಳಲ್ಲಿ ೧೦೦ ಮಂದಿ ರೈತ ಹೋರಾಟಗಳು ಸೋಲಿನಲ್ಲಿ ಪರ್ಯಾವಸಾನಗೊಳ್ಳುತ್ತವೆಂದು ಭಾವಿಸಿದ್ದಾರೆ. ಅದಕ್ಕೆ ಜಾತಿ ಭಾವನೆಯಿಂದ ಮೂಡುವ ಅನೈಕ್ಯತೆ ಕಾರಣವೆಂದು ಶೇ.೨೮.೭ ರಷ್ಟು ವಕ್ತೃಗಳು ಭಾವಿಸುತ್ತಾರೆ.ಶೇ.೮.೮ರಷ್ಟು ವಕ್ತೃಗಳು ಸಮರ್ಥ ನಾಯಕತ್ವದ ಕೊರತೆಯನ್ನು ಶೇ.೭.೨ರಷ್ಟು ವಕ್ತೃಗಳು ಹೋರಾಟಗಾರರಲ್ಲಿ ಇಚ್ಛಾಶಕ್ತಿಯ ಕೊರತೆ ಇರುವುದನ್ನು ಮತ್ತು ಶೇ. ೫.೬ರಷ್ಟು ವಕ್ತೃಗಳು ಪಕ್ಷಗಳ ಕುಟಿಲ ರಾಜಕಾರಣವನ್ನು ರೈತ ಹೋರಾಟಗಳ ಸೋಲಿಗೆ ಕಾರಣವಾಗಿ ಕಾಣಿಸಿದ್ದಾರೆ. ಈ ನಾಲ್ಕು ಕಾರಣಗಳು ಒಟ್ಟಾಗಿ ರೈತ ಚಳುವಳಿಗಳ ಹಾದಿ ತಪ್ಪಿಸಿ ಸೋಲಿನತ್ತ ಒಯ್ಯುತ್ತವೆಂದು ಶೇ.೪೯.೭ ರಷ್ಟು ವಕ್ತೃಗಳು ಉಲ್ಲೇಖಿಸಿದ್ದಾರೆ.


ರೈತರನ್ನು ಒಂದು ಕಾಲದಲ್ಲಿ ಭಾರತದ ಬೆನ್ನೆಲುಬು ಎಂದು ಕರೆಯಲಾಗುತ್ತಿತ್ತು. ಕೃಷಿತೋ ನಾಸ್ತಿ ದುರ್ಭಿಕ್ಷಂ ಎನ್ನುವುದು ಒಂದು ಆರ್ಷೇಯ ಮಾತು.ಆದರೂ ರೈತರ ಸಮಸ್ಯೆಗಳನ್ನು ಆಲಿಸುವ ಕಿವಿಗಳ ಮತ್ತು ಸಮಸ್ಯೆಗಳಿಗೆ ಸ್ಪಂದಿಸುವ ಹೃದಯಗಳ ಕೊರತೆ



ಇದೆ.ಇದನ್ನು ಸರಿಪಡಿಸಲು ರೈತರು ಒಂದು ರಾಜಕೀಯ ಪಕ್ಷವನ್ನು ಕಟ್ಟಬೇಕೆ? ಹೌದೆನ್ನುತ್ತಾರೆ ಶೇ.೪೧.೬ರಷ್ಟು ವಕ್ತೃಗಳು. ಬೇಡವೆನ್ನುತ್ತಾರೆ ಶೇ.೩೫.೨ರಷ್ಟು ವಕ್ತೃಗಳು.ತಮ್ಮಿಂದ ಈ ಬಗ್ಗೆ ಯಾವುದೇ ಪ್ರತಿಕ್ರಿಯೆ ನೀಡಲು ಸಾಧ್ಯವಾಗುತ್ತಿಲ್ಲವೆಂದು ಶೇ.೨೩.೨ರಷ್ಟು ವಕ್ತೃಗಳು ತಮ್ಮ ಅಸಹಾಯಕತೆಯನ್ನು ತೋಡಿಕೊಂಡಿದ್ದಾರೆ.[೧೮]

ದೊಡ್ಡ, ಮಧ್ಯಮ ಮತ್ತು ಸಣ್ಣ ರೈತರ ಪೈಕಿ ಅತ್ಯಂತ ಹೆಚ್ಚು ಸಂಕಷ್ಟಗಳಿಗೆ ಸಿಲುಕಿ ಬಳಲುತ್ತಿರುವವರು ಕೊನೆಯ ವರ್ಗಕ್ಕೆ ಸೇರಿದವರು. ಶಾಸನ ಸಭೆಗಳಲ್ಲಿ ಮತ್ತು ಸ್ಥಳೀಯ ಸಂಸ್ಥೆಗಳಲ್ಲಿ ಸಣ್ಣ ರೈತರಿಗೆ ಮೀಸಲಾಗಿ ಸೌಲಭ್ಯ ನೀಡಿದರೆ, ಪರಿಸ್ಥಿತಿ ಬದಲಾಗಬಹುದೆಂದು ಶೇ.೪೧.೬ರಷ್ಟು ವಕ್ತೃಗಳು ಅಭಿಪ್ರಾಯ ಪಟ್ಟಿದ್ದಾರೆ.ಶೇ.೩೫.೨ರಷ್ಟು ವಕ್ತೃಗಳು ಅಂತಹ ಮೀಸಲಾತಿಯಿಂದ ವ್ಯವಸ್ಥೆ ಬದಲಾಗಲು ಸಾಧ್ಯವಿಲ್ಲವೆಂದಿದ್ದಾರೆ.ಶೇ.೨೩.೨ ರಷ್ಟು ವಕ್ತೃಗಳು ತಮಗದು ಗೊತ್ತಾಗುತ್ತಿಲ್ಲವೆಂಬ ಉತ್ತರ ನೀಡಿದ್ದಾರೆ.

ರೈತರ ಸಮಸ್ಯೆಗಳನ್ನು ಬಗೆ ಹರಿಸಲು ಮಾಡಬೇಕಾದುದೇನು ಎನ್ನುವುದು ಕೊನೆಯ ಪ್ರಶ್ನೆ. ಈ ಪ್ರಶ್ನೆಗೆ ಬಂದ ಉತ್ತರಗಳನ್ನು ಚಿತ್ರ ೮.೯ರಲ್ಲಿ ಅಭಿವ್ಯಕ್ತಿಸಲಾಗಿದೆ.



ಚಿತ್ರ೮.೯ರೈತರ ಸಮಸ್ಯೆಗೆ ಪರಿಹಾರಗಳು



ವಕ್ತೃಗಳಲ್ಲಿ ಶೇ.೨೪.೪ ಮಂದಿ ಸಣ್ಣ ರೈತರ ಬಲಿಷ್ಠ ಸಂಘಟನೆಯಿಂದ ರೈತರ ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯವೆಂದು ಅಭಿಪ್ರಾಯಪಟ್ಟಿದ್ದಾರೆ.ಶೇ.೨೦ಮಂದಿ ಜಾತಿ ವ್ಯವಸ್ಥೆಯ ವಿನಾಶವನ್ನು ,ಶೇ.೧೭ ಮಂದಿ ರೈತ ಪರ ಸರಕಾರದ ನಿರ್ಮಾಣವನ್ನು ಶೇ.೨೦.೮ ಮಂದಿ ಮಧ್ಯಮವರ್ತಿಗಳ ನಿರ್ಮೂಲನವನ್ನು ಮತ್ತು ಶೇ.೨೧.೭ ಮಂದಿ ಕೃಷಿಗೆ ಉದ್ದಿಮೆಯ ಸ್ಥಾನಮಾನ ನೀಡುವುದನ್ನು ಸಮಸ್ಯೆಗೆ ಪರಿಹಾರವೆಂದು ಕಾಣಿಸಿದ್ದಾರೆ.[೧೯]

೮.೨ ಸಮೀಕ್ಷೆಯ ಫಲಿತಗಳು

೮.೨.೧ ಬಂಡಾಯದ ಕಾರಣ ಮತ್ತು ಪ್ರೇರಣೆ

೧. ಬಂಡಾಯದ ಬಗ್ಗೆ ತಿಳಿವಳಿಕೆ ಮೂಡಿಸುವಲ್ಲಿ ಸಂಶೋಧನಾ ಲೇಖನಗಳದ್ದು ಪ್ರಧಾನ ಪಾತ್ರ. ಈ ಘಟನೆಯ ಬಗ್ಗೆ ಆಗಾಗ ಬೇರೆ ಬೇರೆ ಲೇಖಕರು ತಮಗೆ ಲಭ್ಯವಾದ ಮಾಹಿತಿಗಳನ್ನು ಆಧರಿಸಿ ಲೇಖನ ಪ್ರಕಟಿಸುತ್ತಿದ್ದಾರೆ. ಮೌಖಿಕವಾದ ಐತಿಹ್ಯಗಳನ್ನು ಕೂಡಾ ಹಿರಿಯರಿಂದ ಕಿರಿಯರಿಗೆ ಪಿತ್ರಾರ್ಜಿತವಾಗಿ ಬರುತ್ತಿವೆ. ಇದು ಈ ಘಟನೆ ಜನಮಾನಸದಲ್ಲಿ ಉಂಟು ಮಾಡಿದ ಪ್ರಭಾವಕ್ಕೆ ಮತ್ತು ಇಲ್ಲಿನ ಜನತೆ ಈ ವಿದ್ಯಮಾನವನ್ನು ಒಂದು ಅಭಿಮಾನದ ಸಂಕೇತವಾಗಿ ಸ್ವೀಕರಿಸಿರುವುದಕ್ಕೆ ಸಾಕ್ಷಿಯಾಗಿದೆ.

೨. ಆರ್ಥಿಕ ಬಂಡಾಯದ ಪ್ರಮುಖ ಕಾರಣವೆಂದು ವಕ್ತೃಗಳು ಬ್ರಿಟಿಷ್ ಕಂದಾಯ ವ್ಯವಸ್ಥೆಯನ್ನು ಉಲ್ಲೇಖಿಸಿದ್ದಾರೆ. ೧೮೩೪ ರಲ್ಲಿ ಕೊಡಗಿನಿಂದ ಸುಳ್ಯ ಮತ್ತು ಪುತ್ತೂರುಗಳ ೧೧೦ ಗ್ರಾಮಗಳಲ್ಲಿ ಪ್ರತ್ಯೇಕಿಸಿ ದ.ಕ ಜಿಲ್ಲೆಗೆ ಸೇರಿಸಿದಾಗ ಈ ಗ್ರಾಮಗಳಲ್ಲಿ ವಸಾಹತುಶಾಹಿ ಕಂದಾಯ ವ್ಯವಸ್ಥೆ ಜಾರಿಗೆ ಬಾರದಿರುತ್ತಿದ್ದರೆ ಈ ಬಂಡಾಯ ಸಂಭವಿಸುತ್ತಿರಲಿಲ್ಲ. ೧೭೯೯ರಲ್ಲಿ ಟಿಪ್ಪು ಸತ್ತಾಗ ದ.ಕ ಜಿಲ್ಲೆ ಇಂಗ್ಲೀಷರ ಆಳ್ವಿಕೆಗೊಳಪಟ್ಟಾಗ ಹೊಸ ಕಂದಾಯ ನೀತಿ ಅನುಷ್ಠಾನಕ್ಕೆ ಬಂದಿತ್ತು.ಇದರ ವಿರುದ್ಧ ೧೮೧೧ರಲ್ಲೊಮ್ಮೆ ಮತ್ತು ೧೮೩೧ ಇನ್ನೊಮ್ಮೆ ಸೌಮ್ಯ ರೂಪದ ಚಳವಳಿಗಳು ಸಂಭವಿಸಿದ್ದವು.ಶಸ್ತ್ರ ಸಜ್ಜಿತ ದಂಗೆಗಳಲ್ಲದ ಕಾರಣ ಅವನ್ನು ಹತ್ತಿಕ್ಕಲು ವಸಾಹತುಶಾಹಿಗೆ ಯಾವ ಸಮಸ್ಯೆಯೂ ಆಗಲಿಲ್ಲ. ೧೮೩೭ ರ ಆರ್ಥಿಕ ಬಂಡಾಯ ಶಸ್ತ್ರ ಸಜ್ಜಿತ ಸಂಘರ್ಷವಾದುದರಿಂದ ಅದರ ಆಳ ವಿಸ್ತಾರಗಳು ಸಹಜವಾಗಿ ಮೊದಲಿನ ಎರಡು ಬಂಡಾಯಗಳಿಗಿಂತ ತೀಕ್ಷ್ಣವಾಗಿದ್ದವು.

೩. ಕೊಡಗನ್ನು ಬ್ರಿಟಿಷರು ೧೮೩೪ರಲ್ಲಿ ವಶ ಪಡಿಸಿಕೊಂಡ ಕೂಡಲೇ ಆಡಳಿತದ ಸುಲಭೀಕರಣಕ್ಕಾಗಿ ಸುಳ್ಯ ಮತ್ತು ಪುತ್ತೂರುಗಳ ೧೧೦ ಗ್ರಾಮಗಳನ್ನು ಕೊಡಗಿನಿಂದ ಬೇರ್ಪಡಿಸಿ ದ.ಕ ಜಿಲ್ಲೆಗೆ ಸೇರಿಸಿದರು. ಈ ಗ್ರಾಮಗಳಿಂದ ಮಡಿಕೇರಿಗೆ ಹೋಗಲು ಆಗ ರಸ್ತೆ

ಇರಲಿಲ್ಲ. ಬಹಳ ಕಷ್ಟ ಪಟ್ಟು ಗಾಳಿಬೀಡು ಅಥವಾ ಪಟ್ಟೆ ಹಾದಿಯಾಗಿ ಮಡಿಕೇರಿಗೆ ಹೋಗಬೇಕಾಗುತ್ತಿತ್ತು. ಕೊಡಗನ್ನು ಅರಸರು ಆಳುತ್ತಿದ್ದ ಕಾಲದಲ್ಲಿ ಈ ಪ್ರದೇಶದಿಂದ ಎಷ್ಟು ಕಂದಾಯ ವಸೂಲಿಯಾಗುತ್ತಿತ್ತುಎಂಬ ಬಗ್ಗೆ ಖಚಿತ ಮಾಹಿತಿ ದೊರೆಯುವುದಿಲ್ಲ. ಕೊಡಗಿನ ರಾಜರುಗಳು ಬಲಾತ್ಕಾರದಿಂದ ಕಂದಾಯ ವಸೂಲಿ ಮಾಡುತ್ತಿರಲಿಲ್ಲ. ಅಲ್ಲದೆ ವಸ್ತು ರೂಪದಲ್ಲಿ ಕಂದಾಯ ನೀಡಲು ರೈತರಿಗೆ ಕಷ್ಟವಾಗುತ್ತಿರಲಿಲ್ಲ. ಹೊಸ ಆಡಳಿತ ವ್ಯವಸ್ಥೆಯಲ್ಲಿ ಕಡ್ಡಾಯವಾಗಿ ಹಣದ ರೂಪದಲ್ಲಿ, ವ್ಯವಸಾಯ ಮಾಡದ ಜಮೀನಿಗೂ ಕಂದಾಯ ಕಟ್ಟಬೇಕಾಗಿ ಬಂದ ಅನಿವಾರ್ಯತೆ ರೈತರನ್ನು ಶಸ್ತ್ರಾಸ್ತ್ರ ಕೈಗೆತ್ತಿಕೊಳ್ಳುವಂತೆ ಮಾಡಿತು. ಸುಳ್ಯ ಪುತ್ತೂರುಗಳ ೧೧೦ ಗ್ರಾಮಗಳನ್ನು ಕೊಡಗಿನಿಂದ ಬೇರ್ಪಡಿಸಿ ದ.ಕ ಜಿಲ್ಲೆಗೆ ಸೇರಿಸದಿರುತ್ತಿದ್ದರೆ ಈ ದಂಗೆ ಸಂಭವಿಸುತ್ತಿರಲಿಲ್ಲ.

೪. ಅರ್ಥಿಕ ಬಂಡಾಯ ಒಂದು ಸಾಮೂಹಿಕ ನಾಯಕತ್ವದ ದಂಗೆ.ಅದರ ನಿಜವಾದ ನಾಯಕನೆಂದು ಬಿಂಬಿತನಾದ ಕಲ್ಯಾಣ ಸ್ವಾಮಿಯ ಮೂಲ ಹೆಸರು ಪುಟ್ಟ ಬಸವ. ಅವನು ಕೊಡಗಿನ ಶನಿವಾರ ಸಂತೆಯ ರೈತ.ಬಂಡಾಯದ ಯೋಜನೆಯನ್ನು ರೂಪಿಸಿದವನು ಶನಿವಾರ ಸಂತೆ ಬಳಿಯ ಹುಲಿಕಡಿದ ನಂಜಯ್ಯ.ಅದನ್ನು ಕಾರ್ಯ ರೂಪಕ್ಕಿಳಿಸಲು ರೈತ ದಂಡೊಂದನ್ನು ರೂಪಿಸಿದವನು ಕೆದಂಬಾಡಿ ರಾಮ ಗೌಡ.ಈ ಹಿಂದೆ ಹುಲಿ ಕಡಿದ ನಂಜಯ್ಯನ ಕಾರ್ಯ ತಂತ್ರವನ್ನು ಅನುಷ್ಠಾನಗೊಳಿಸುವಾಗ ಆದ ಎಡವಟ್ಟುಗಳು ಮತ್ತು ಬೋಪು ದಿವಾನನ ಇಂಗ್ಲೀಷ್ ನಿಷ್ಠೆ ಅಪರಂಪಾರ ಮತ್ತು ಕಲ್ಯಾಣ ಸ್ವಾಮಿಯರ ಬಂಧನದಲ್ಲಿ ಪರ್ಯಾವಸಾನವಾಗಿತ್ತು.ಕೊಡಗಿನಲ್ಲಿ ಬಂಡಾಯಕ್ಕೆ ವೇದಿಕೆ ರೂಪುಗೊಳ್ಳದೆ ಇದ್ದದ್ದು ಕೂಡಾ ಅದಕ್ಕೆ ಬಹುಮುಖ್ಯ ಕಾರಣವಾಗಿತ್ತು.ದಂಗೆಯ ನಾಯಕನನ್ನು ರಾಜ ಸಂಬಂಧಿಯೆಂದು ಪ್ರಚುರ ಪಡಿಸದಿರುತ್ತಿದ್ದರೆ ಜನರು ಬಂಡಾಯಗಾರರನ್ನು ಬೆಂಬಲಿಸುವ ಸಂಭವವಿರಲಿಲ್ಲ. ಆದುದರಿಂದ ಅನಿವಾರ್ಯವಾಗಿ ಪುಟ್ಟ ಬಸವನನ್ನು ಕೊಡಗಿನ ರಾಜ ಸಂಬಂಧಿ ಕಲ್ಯಾಣ ಸ್ವಾಮಿಯೆಂದು ಬಿಂಬಿಸಿ, ಮಂಗಳೂರು ಕಡೆಗೆ ದಂಡೆತ್ತಿ ಹೋಗಬೇಕಾಗಿ ಬಂತು.

೫. ಬ್ರಿಟಿಷರ ವಿರುದ್ಧ ಕ್ರಿ. ಶ ೧೮೩೭ ರಲ್ಲಿ ನಡೆದ ರೈತ ಬಂಡಾಯದಲ್ಲಿ ಕೊಡಗು, ಸುಳ್ಯ , ಪುತ್ತೂರುಗಳ ಕನಿಷ್ಠ ೧೨೦೦ ರೈತರು ಭಾಗವಹಿಸಿದ್ದರೆಂಬ ಉಲ್ಲೇಖ ಲೆವಿನ್ ವರದಿಯಲ್ಲಿ ದೊರೆಯುತ್ತದೆ. ಆದರೆ ನಮ್ಮದು ಆ ಬಂಡಾಯದಲ್ಲಿ ಭಾಗವಹಿಸಿದವರ ಕುಟುಂಬವೆಂದು ಹೆಮ್ಮೆಯಿಂದ ಆಧಾರ ಸಹಿತವಾಗಿ ಹೇಳ ಬಲ್ಲವರ ಸಂಖ್ಯೆ ಬಹಳ ವಿರಳ.೧೮೩೭ರ ದಂಗೆಯನ್ನು ನಿರ್ದಯವಾಗಿ ಅಡಗಿಸಿದ ಇಂಗ್ಲೀಷರು ಮತ್ತು ಬ್ರಿಟಿಷ್ ನಿಷ್ಠರು ಈ ದಂಗೆಯಲ್ಲಿ ಪಾಲ್ಗೊಂಡು ಸಿಕ್ಕಿ ಬಿದ್ದ ಪ್ರಮುಖ ನಾಯಕರನ್ನು ಮರಗಳಲ್ಲಿ ನೇತು ಹಾಕಿ ಹೆಣಗಳನ್ನು ಹದ್ದು ಕಾಗೆಗಳಿಗೆ ಆಹಾರವಾಗಿಸಿದ ಕ್ರೌರ್ಯ; ಬಂಡಾಯಗಾರರ

ಕುಟುಂಬಗಳಿಗೆ ನೀಡಿದ ಮಾನಸಿಕ ಮತ್ತು ದೈಹಿಕ ಹಿಂಸೆ – ಇದಕ್ಕೆ ಪ್ರಮುಖ ಕಾರಣಗಳು.ಆ ಕಾಲದಲ್ಲಿ ಬ್ರಿಟಿಷರ ವಿರುದ್ಧ ದಂಗೆಯೆದ್ದವರನ್ನು ದೇಶ ದ್ರೋಹಿಗಳು ಅಥವಾ ದರೋಡೆಕೋರರು ಎಂಬಂತೆ ಚಿತ್ರಿಸಲಾಗುತ್ತಿತ್ತು. ಈ ದಂಗೆಯನ್ನು ಅಡಗಿಸಲು ನೆರವಾದವರಿಗೆ ನೀಡಲಾದ ೧೧.೫ ತೊಲ ಚಿನ್ನದ ಪದಕದಲ್ಲಿ ಹೀಗೆ ಬರೆಯಲಾಗಿದೆ.

For distinguished conduct and loyalty to the British government Coorg- April 1837.

ನಡಿಕೇರಿಯಂಡ ಚಿಣ್ಣಪ್ಪನವರ ಪಟ್ಟೋಳೆ ಪಳಮೆಯಲ್ಲಿ ಅಮರ ಸುಳ್ಯದ ರೈತ ಬಂಡಾಯವನ್ನು ಅಡಗಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ ಕೊಡಗರ ಹೆಸರನ್ನು ಹೆಮ್ಮೆಯಿಂದ ಉಲ್ಲೇಖಿಸಲಾಗಿದೆ! ಬ್ರಿಟಿಷರು ಮತ್ತು ಅವರ ಪರರು ಬಿತ್ತಿದ ಭಯದ ಬೀಜದಿಂದಾಗಿ ಕುಟುಂಬದವರು ಬಂಡಾಯಗಾರರ ಹೆಸರನ್ನು ಉಲ್ಲೇಖಿಸುವುದೇ ಅಪಾಯ ಎಂಬ ತೀರ್ಮಾನಕ್ಕೆ ಬಂದಿರಬೇಕು.ಸಮಗ್ರವಾಗಿ ಈ ಘಟನೆ ಜನಮಾನಸದಿಂದ ಸಂಪೂರ್ಣವಾಗಿ ಅಳಿದು ಹೋಗಿಲ್ಲವಾದರೂ, ಬಂಡಾಯದಲ್ಲಿ ಪಾಲ್ಗೊಂಡ ಎಲ್ಲಾ ರೈತರ ಬಗ್ಗೆ ಪೂರ್ಣ ಮಾಹಿತಿ ಲಭ್ಯವಾಗುವುದಿಲ್ಲ.

೬. ದ.ಕ ಜಿಲ್ಲೆಯನ್ನು ಕ್ರಿ.ಶ ೧೭೯೯ರಲ್ಲಿ ವಶ ಪಡಿಸಿಕೊಂಡ ಬ್ರಿಟಿಷರು ಕೊಡಗನ್ನು ವಶ ಪಡಿಸಿಕೊಳ್ಳಲು ಮತ್ತೂ ಮೂವತ್ತೈದು ವರ್ಷ ಕಾದರು. ಇದಕ್ಕೆ ಕೊಡಗಿನಿಂದ ಹುಟ್ಟುತ್ತಿದ್ದ ಕಂದಾಯ ಬಹಳ ಕಡಿಮೆಯಿದ್ದದ್ದು ಬಹುಮುಖ್ಯ ಕಾರಣ.ಅದೊಂದು ವಸಾಹತುಶಾಹಿ ತಂತ್ರವೂ ಆಗಿತ್ತು.ಟಿಪ್ಪುವನ್ನು ಮಟ್ಟ ಹಾಕಲು ಈಸ್ಟಿಂಡಿಯಾ ಕಂಪೆನಿ ಕೊಡಗಿನ ನೆರವನ್ನು ಬಳಸಿಕೊಂಡಿತ್ತು. ಟಿಪ್ಪು ಸತ್ತ ಕೂಡಲೇ ಕೊಡಗನ್ನು ಅದು ಕಬಳಿಸುತ್ತಿದ್ದರೆ ಕೊಡಗರು ಅದರ ವಿರುದ್ಧ ಬಂಡೇಳುವ ಸಂಭವವಿತ್ತು. ಅದಕ್ಕಾಗಿ ಕಂಪೆನಿಯು ತಾನು ಕೊಡಗಿನ ಹಿತ ಸಂರಕ್ಷಕನಂತೆ ನಟಿಸಿ ಚಿಕ್ಕವೀರ ರಾಜನನ್ನು ಪ್ರಜಾ ವಿರೋಧಿ ಎಂಬಂತೆ ಬಿಂಬಿಸಿ ಅವನ ಬಾವ ಚೆನ್ನ ಬಸಪ್ಪನನ್ನು ರಾಜನ ವಿರುದ್ಧ ಎತ್ತಿ ಕಟ್ಟಿ ಕೊಡಗಿನ ಏಕತೆಯ ತಳಪಾಯವನ್ನು ಪುಡಿ ಮಾಡಿ, ಸಂದರ್ಭ ತನಗನುಕೂಲಕರವಾದಾಗ ಕಂಪೆನಿ ಕೊಡಗನ್ನು ವಶಪಡಿಸಿಕೊಂಡಿತು. ಅದರ ಹಿಂದಿನ ಉದ್ದೇಶ ವಸಾಹತು ವಿಸ್ತರಣೆಯ ಹಂಬಲವಾಗಿತ್ತು.

೭.ದ.ಕ ಜಿಲ್ಲೆಯನ್ನು ಕ್ರಿ.ಶ.೧೭೯೯ರಲ್ಲಿ ತನ್ನ ಆಡಳಿತಕ್ಕೆ ತೆಗೆದುಕೊಂಡ ಈಸ್ಟಿಂಡಿಯಾ ಕಂಪೆನಿ ಅಲ್ಲಿ ಅವೈಜ್ಞಾನಿಕವಾದ ಕಂದಾಯ ವ್ಯವಸ್ಥೆಯನ್ನು ಜಾರಿಗೊಳಿಸಿತು. ಬೆಳೆಯ ಪ್ರಮಾಣದ ಬದಲು ರೈತ ಹೊಂದಿರುವ ಒಟ್ಟು ಭೂಮಿಯ ವಿಸ್ತೀರ್ಣವನ್ನು

ಆಧಾರವಾಗಿರಿಸಿಕೊಂಡ ಕಂದಾಯ ನೀತಿಯದು.ರೈತರು ಭೂಮಿಯನ್ನು ಒಂದು ವರ್ಷ ಉಳುಮೆ ಮಾಡದೆ ಬಿಟ್ಟರೆ ಮರು ವರ್ಷ ಎರಡೂವರೆ ಪಟ್ಟು ಕಂದಾಯ ಕಟ್ಟಬೇಕಿತ್ತು. ಸಾಟಿ ವಿನಿಮಯ ಪದ್ಧತಿಯನ್ನು ರದ್ದುಗೊಳಿಸಿ ಹಣದ ರೂಪದಲ್ಲೇ ವ್ಯವಹಾರಗಳು ನಡೆಯಬೇಕೆಂಬ ಕಾನೂನು ಜಾರಿಗೊಂಡಿತ್ತು.ಕಂದಾಯವನ್ನು ಭತ್ತದ ರೂಪದಲ್ಲಿ ನೀಡುತ್ತಿದ್ದ ವ್ಯವಸ್ಥೆ ಕೊನೆಗೊಂಡು ನಗದು ರೂಪದಲ್ಲಿ ನಿಗದಿತ ಸಮಯಕ್ಕೆ ಸರಿಯಾಗಿ ಕಡ್ಡಾಯವಾಗಿ ಕಟ್ಟಲೇಬೇಕಿತ್ತು.ಜನರ ಅವಶ್ಯಕ ಸರಕುಗಳಾದ ಉಪ್ಪು ಮತ್ತು ಹೊಗೆಸೊಪ್ಪಿನ ವ್ಯಾಪಾರ ಸರಕಾರದ ನಿಯಂತ್ರಣಕ್ಕೆ ಒಳಪಟ್ಟಿತು. ಟಿಪ್ಪು ಆಡಳಿತ ಕಾಲದಲ್ಲಿ ನಿಷೇಧಕ್ಕೆ ಒಳಗಾಗಿದ್ದ ಶರಾಬು ತಯಾರಿಗೆ ಬ್ರಿಟಿಷರ ಕಾಲದಲ್ಲಿ ಉತ್ತೇಜನ ದೊರೆಯಿತು. ಆರ್ಥಿಕ ಮುಗ್ಗಟ್ಟಿನಲ್ಲಿ ಮುಳುಗಿ ಹೋಗಿದ್ದ ಈಸ್ಟ್ ಇಂಡಿಯಾ ಕಂಪೆನಿಗೆ ಹೇಗಾದರೂ ಹಣ ಗಳಿಸಲೇಬೇಕಿತ್ತು.ಹಣಗಳಿಕೆಯ ಹಾದಿಯ ಬಗ್ಗೆ ಅದು ಯೋಚಿಸಲೇ ಇಲ್ಲ. ಆದರೆ ಕೊಡಗಿನಲ್ಲಿ ಈ ರೀತಿಯ ಯಾವುದೇ ಬದಲಾವಣೆಯನ್ನು ಈಸ್ಟ್ ಇಂಡಿಯಾ ಕಂಪೆನಿ ತರಲಿಲ್ಲ. ತಾನು ಕೊಡಗರ ಹಿತಸಂರಕ್ಷಕನೆಂಬಂತೆ ನಟಿಸಿ ಜನರ ಪ್ರೀತಿ ಗಳಿಸಿದ ಬಳಿಕ ನಿಧಾನವಾಗಿ ಬದಲಾವಣೆಗಳನ್ನು ತರುವುದು ಕಂಪೆನಿಯ ಉದ್ದೇಶವಾಗಿತ್ತು.ಅಲ್ಲದೇ ಕೊಡಗಿನ ಲಿಂಗರಾಜ ಅನುಷ್ಠಾನಗೊಳಿಸಿದ್ದ ಕಂದಾಯ ವ್ಯವಸ್ಥೆಯನ್ನು ಕಂಪೆನಿ ಸರಕಾರ ಬದಲಾಯಿಸುತ್ತಿದ್ದರೂ ಹೆಚ್ಚು ಕಂದಾಯ ಉತ್ಪತ್ತಿಯಾಗುವ ಸಂಭವ ಇರಲಿಲ್ಲ.

೮.೨.೨ ಬಂಡಾಯದ ಯಶಸ್ಸು ಮತ್ತು ಸೋಲು

೧. ಕ್ರಿ.ಶ ೧೮೩೭ರ ಮಾರ್ಚ್ ೩೦ರಂದು ಪೂಮಲೆ ಕೆದಂಬಾಡಿಯಿಂದ ಹೊರಟ ರೈತದಂಡು ಬೆಳ್ಳಾರೆ ಕೋಟೆಯನ್ನು ಗೆದ್ದು ಖಜಾನೆಯನ್ನು ವಶಪಡಿಸಿಕೊಂಡಿತು. ಆಮೇಲೆ ಪುತ್ತೂರು ರೈತ ದಂಡಿನ ವಶವಾಯಿತು.ಜಿಲ್ಲಾಧಿಕಾರಿ ಲೆವಿನ್‌ನ ಆಜ್ಞೆಯಂತೆ ರೈತ ದಂಡನ್ನು ಎದುರಿಸ ಬಂದ ಮೇಜರ್ ಡೌಕರನ ೧೫೦ ಯೋಧರ ಪ್ಲಟೂನು ಹೆದರಿ ಮಂಗಳೂರಿಗೆ ಪಲಾಯನ ಮಾಡಿತು.ಏಪ್ರಿಲ್ ೫ರಂದು ಮಂಗಳೂರನ್ನು ತಲುಪಿದ ರೈತ ದಂಡು ನಿಶಾನಿ ಗುಡ್ಡೆಯಲ್ಲಿ ಹಾಲೇರಿ ರಾಜ ವಂಶೀಯರ ವಿಜಯ ಧ್ವಜವನ್ನು ಹಾರಿಸಿ ಹದಿಮೂರು ದಿವಸ ದ.ಕ ಜಿಲ್ಲೆಯನ್ನು ತನ್ನ ವಶದಲ್ಲಿಟ್ಟುಕೊಂಡಿತು.ಅದು ಖಜಾನೆಗಳನ್ನು ವಶಪಡಿಸಿಕೊಂಡದ್ದನ್ನು ಬಿಟ್ಟರೆ ಖಾಸಗಿ ಆಸ್ತಿ-ಪಾಸ್ತಿಗೆ ಹಾನಿ ಮಾಡದೆ ವ್ಯವಸ್ಥಿತ ಸರ್ಕಾರದಂತೆ ನಡೆದುಕೊಂಡಿತು.ಅದರ ನಡವಳಿಕೆ ಅತ್ಯುನ್ನತ ಮಟ್ಟದಾಗಿತ್ತು ಎಂದು ಜಿಲ್ಲಾಧಿಕಾರಿ ಲೆವಿನ್ ದಂಗೆಯ ಬಗೆಗಿನ ತನ್ನ ವರದಿಯಲ್ಲಿ ಉಲ್ಲೇಖಿಸಿದ್ದಾನೆ. ದಂಡಿನ ಆರಂಭಿಕ ಯಶಸ್ಸಿಗೆ ರೈತರ ಬದ್ಧತೆ ಬಹುಮುಖ್ಯ ಕಾರಣವಾಗಿತ್ತು.ದಂಡಿನಲ್ಲಿದ್ದ ರೈತರಲ್ಲಿ ಬಹುತೇಕರು ಹೊಸ ಕಂದಾಯ

ವ್ಯವಸ್ಥೆಯಿಂದಾಗಿ ಭೂಮಿ ಕಳಕೊಂಡವರಾಗಿದ್ದುದರಿಂದ ಅವರಲ್ಲಿ ಸ್ವಾತಂತ್ರ್ಯದ ಹಂಬಲವಿತ್ತು. ಅದು ಅವರ ಬದ್ಧತೆಗೆ ಕಾರಣವಾಯಿತು.ಪುತ್ತೂರನ್ನು ಗೆದ್ದ ಬಳಿಕ ಕಲ್ಯಾಣ ಸ್ವಾಮಿ ಹೊರಡಿಸಿದ ಇಸ್ತಿಹಾರು ಅಂಗರಾಜನ ಕಾಲದ ಕಂದಾಯ ವ್ಯವಸ್ಥೆಯನ್ನು ಮರಳಿ ಸ್ಥಾಪಿಸುವ ಘೋಷಣೆಯಾಗಿತ್ತು.ಅದರಲ್ಲಿ ಮೂರು ವರ್ಷ ಕಂದಾಯ ಮನ್ನಾ ಎಂಬ ಘೋಷಣೆಯಿದ್ದುದರಿಂದ ಪುತ್ತೂರಿನಾಚೆಗಿನ ರೈತರು ಸ್ವ ಇಚ್ಛೆಯಿಂದ ದಂಡನ್ನು ಸೇರಿ ಆರ್ಥಿಕ ಬಂಡಾಯದ ಆರಂಭಿಕ ಯಶಸ್ಸಿಗೆ ಕಾರಣರಾದರು.

೨.ರೈತ ದಂಡಿನ ವಿಜಯ ಅಲ್ಪಾಯುಷ್ಯದ್ದಾಗಿತ್ತು. ೧೮೩೭ ರ ಏಪ್ರಿಲ್ ೫ ರಂದು ಮಂಗಳೂರನ್ನು ವಶಪಡಿಸಿಕೊಂಡ ಬಳಿಕ ಸುಮಾರು ಎರಡು ವಾರಗಳ ಪರ್ಯಂತ ದ.ಕ ಜಿಲ್ಲೆಯಲ್ಲಿ ರೈತರ ಆಡಳಿತವಿತ್ತು.ಎಲ್ಲಾ ಖಜಾನೆಗಳಲ್ಲಿ ಮೇಲ್ವಿಚಾರಕರಿಗೆ, ಆಡಳಿತಾಧಿಕಾರಿಗಳಿಗೆ ಉಗ್ರಾಣಿ ಪಟೇಲರುಗಳಿಗೆ ಎರಡು ತಿಂಗಳ ವೇತನವನ್ನು ಮುಂಚಿತವಾಗಿ ನೀಡಿ ಅವರ ಬ್ರಿಟಿಷ್ ನಿಷ್ಠೆಯನ್ನು ಬದಲಾಯಿಸಲು ರೈತ ದಂಡಿಗೆ ಸಾಧ್ಯವಾಗಿತ್ತು. ಇದುವೇ " ಸ್ಥಾಪಿತ ಸರಕಾರದಂತೆ ನಡಕೊಂಡರು" ಎಂದು ಲೆವಿನ್ ತನ್ನ ವರದಿಯಲ್ಲಿ ಕಾಣಿಸಲು ಮುಖ್ಯ ಕಾರಣ,ರೈತ ದಂಡಿನ ನಾಯಕನಾಗಿ ಕಲ್ಯಾಣಪ್ಪನಂತೆ ನಟಿಸಿದವನು ಶನಿವಾರ ಸಂತೆಯ ರೈತ ಪುಟ್ಟ ಬಸವ. 'ರಿಂಗ್ ಮಾಸ್ತರ್' ರಂತೆ ಕೆಲಸ ಮಾಡಿದವರು ಹುಲಿ ಕಡಿದ ನಂಜಯ್ಯ ಮತ್ತು ಕೆದಂಬಾಡಿ ರಾಮ ಗೌಡ. ಒಂದು ವೇಳೆ ನಿಜವಾದ ರಾಜ ಸಂಬಂಧಿಯೊಬ್ಬ ನಾಯಕತ್ವ ವಹಿಸುತ್ತಿದ್ದರೂ ರೈತ ದಂಡು ಶಾಶ್ವತ ವಿಜಯಿಯಾಗಲು ಸಾಧ್ಯವಿರಲಿಲ್ಲ. ಮಹಾ ರಣತಂತ್ರ ನಿಪುಣ ಟಿಪ್ಪುವಿಗೂ ಬ್ರಿಟೀಷರನ್ನು ಗೆಲ್ಲಲು ಸಾಧ್ಯವಾಗಿರಲಿಲ್ಲ. ಕಿತ್ತೂರ ರಾಣಿ ಚೆನ್ನಮ್ಮಳೂ ಬ್ರಿಟಿಷರ ತಂತ್ರಗಳಿಂದಾಗಿ ವೀರೋಚಿತ ಸೋಲು ಉಂಡಿದ್ದಳು.ರೈತದಂಡು ಮಂಗಳೂರಿಗೆ ಹೋಗುವ ಬದಲು ಮಡಿಕೇರಿಗೆ ಹೋಗುತ್ತಿದ್ದರೂ ಬ್ರಿಟಿಷರನ್ನು ಗೆಲ್ಲಲು ಸಾಧ್ಯವಿರುತ್ತಿರಲಿಲ್ಲ. ದ.ಕ ದಲ್ಲಿ ಬ್ರಿಟಿಷ್ ಕಂದಾಯ ನೀತಿಯಿಂದ ಮನೆ ಮಠ ಆಸ್ತಿ ಪಾಸ್ತಿ ಕಳಕೊಂಡವರು ರೈತ ದಂಡಿನ ಪರ ನಿಂತರು. ಕಂದಾಯ ನೀತಿ ಬದಲಾಗದ ಕಾರಣ ಕೊಡಗಿನ ರೈತರು ರೈತ ದಂಡಿನ ಪರ ನಿಲ್ಲುತ್ತಿರಲಿಲ್ಲ. ಈ ಹಿಂದೆ ಅಪರಂಪಾರ ಮತ್ತು ನಿಜವಾದ ಕಲ್ಯಾಣ ಸ್ವಾಮಿ ಕೊಡಗಿನಲ್ಲಿ ರೈತರನ್ನು ಬ್ರಿಟಿಷರ ವಿರುದ್ಧ ಸಂಘಟಿಸಲು ಯತ್ನಸಿ ವಿಫಲರಾಗಿದ್ದರು.ಪುಟ್ಟ ಬಸವನ ನೇತೃತ್ವದಲ್ಲಿ ರೈತದಂಡು ಮಂಗಳೂರು ಕಡೆಗೆ ಹೋಗುವಾಗ ಗುಡ್ಡೆಮನೆ ಅಪ್ಪಯ್ಯ ಕೂಜುಗೋಡು ಪಟೇಲ ಮಲ್ಲಪ್ಪ ಮತ್ತು ಆತನ ತಮ್ಮ ಅಪ್ಪಯ್ಯರ ನೇತೃತ್ವದ ದಂಡು ಬಿಸಿಲೆ ಘಾಟಿ ಹಾದಿಯಾಗಿ ಮಡಿಕೇರಿಯತ್ತ ಹೊರಟಿತ್ತು.ಈ ದಂಡನ್ನು ಬ್ರಿಟಿಷ್ ನಿಷ್ಠ ಬೋಪು ದಿವಾನನ ಪಡೆ ಸುಲಭವಾಗಿ ಬಗ್ಗು ಬಡಿದು ಗುಡ್ಡೆಮನೆ ಅಪ್ಪಯ್ಯನನ್ನು ಬಂಧಿಸಿತ್ತು.ಬ್ರಿಟಿಷರ

ಫಿರಂಗಿ ಮತ್ತು ಶಿಸ್ತು ಬದ್ಧ ಸೇನೆಯೆದುರು ರೈತದಂಡು ವಿಜಯ ಸಾಧಿಸುವುದು ಸುಲಭದ ಮಾತಾಗಿರಲಿಲ್ಲ.

೩. ರೈತ ಬಂಡಾಯ ಅಂತಿಮವಾಗಿ ಸೋಲಲು ಒಗ್ಗಟ್ಟಿನ ಕೊರತೆ ಮುಖ್ಯ ಕಾರಣ. ಬೆಳ್ಳಾರೆ, ಪುತ್ತೂರು, ಬಂಟವಾಳ ಮತ್ತು ಮಂಗಳೂರುಗಳಲ್ಲಿನ ವರ್ತಕರು ಕೃಷಿ ಉತ್ಪನ್ನಗಳನ್ನು ಮಡಿಗಾಸಿಗೆ ಕೊಂಡು ವಸಾಹತುಶಾಹಿ ಕಂದಾಯ ಮತ್ತು ವ್ಯಾಪಾರ ನೀತಿಗಳ ಪೂರ್ಣ ಲಾಭ ಪಡೆದವರು.ಅವರು ಬಂಡಾಯದುದ್ದಕ್ಕೂ ಬ್ರಿಟಿಷ್ ಪರ ನಿಂತರು.ಮೇಲ್ಜಾತಿ ಜಮೀನುದಾರರಿಗೆ ಮತ್ತು ಪುರೋಹಿತ ಶಾಹಿಗೆ ವಸಾಹತುಶಾಹಿ ಆಡಳಿತ ಕೆಲವು ಪ್ರಯೋಜನಗಳನ್ನು ನೀಡಿ ತನ್ನ ಪರವಾಗಿ ನಿಲ್ಲುವಂತೆ ಮಾಡಿತ್ತು.ರೈತದಂಡಿನಲ್ಲಿ ಬೆರಳೆಣಿಕೆಯ ಮೇಲ್ಜಾತಿ, ಮೇಲ್ವರ್ಗಗಳ ಜನರಿದ್ದದ್ದು ನಿಜ. ಆದರೆ ಇವೆರಡು ಗುಂಪುಗಳ ಬಹುತೇಕ ಜನರು ಬ್ರಿಟೀಷರ ಪರವಾಗಿದ್ದರು. ರೈತ ದಂಡಿನಲ್ಲಿದ್ದ ಬಹತೇಕ ಮಂದಿಗಳು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಬಲ ಹೀನರಾದವರು. ಬಂಡಾಯದುದ್ದಕ್ಕೂ ಬೆರಳೆಣಿಕೆಯಷ್ಟು ಮಂದಿಗಳನ್ನು ಬಿಟ್ಟರೆ ಬಹುತೇಕ ಕೊಡಗರು ತಮಗೂ ಬಂಡಾಯಕ್ಕೂ ಸಂಬಂಧವೇ ಇಲ್ಲವೆಂಬಂತೆ ನಿರ್ಲಿಪ್ತರಾಗಿ ಬಿಟ್ಟಿದ್ದರು. ಒಂದು ವೇಳೆ ಕೊಡಗು ಮತ್ತು ದ.ಕ ದ ಸಮಸ್ತ ಜಾತಿ- ವರ್ಗಗಳ ಜನರು ಏಕತ್ರವಾಗಿ ಬ್ರಿಟಿಷರ ವಿರುದ್ಧ ನಿಲ್ಲುತ್ತಿದ್ದರೆ ೧೮೩೭ರಲ್ಲಿ ಇವೆರಡು ಜಿಲ್ಲೆಗಳು ಸ್ವಾತಂತ್ರ್ಯ ಪಡೆಯುವ ಸಂಭವವಿತ್ತೆಂದು ಕಾಣುತ್ತದೆ. ಇದನ್ನು ಮಾದರಿಯಾಗಿ ಅನುಸರಿಸಿ ಉಳಿದ ಪ್ರಾಂತ್ಯಗಳ ಜನರೂ ಬಂಡೇಳುತ್ತಿದ್ದರೆಭಾರತದ ಇತಿಹಾಸ ಬೇರೆ ಆಯಾಮವನ್ನು ಪಡಕೊಳ್ಳುವ ಸಂಭವವಿತ್ತು.

೮.೨.೩ ವರ್ತಮಾನದ ರೈತ ಸಮಸ್ಯೆಗಳು

ಬಂಡಾಯ ನಡೆದ ಪ್ರದೇಶವನ್ನು ಪ್ರಭುತ್ವವು ಆಡಳಿತಾತ್ಮಕವಾಗಿ ನಿರ್ಲಕ್ಷಿಸುತ್ತದೆಂಬ ಪೂರ್ವ ಕಲ್ಪನೆಯನ್ನು ವಕ್ತೃಗಳ ಉತ್ತರಗಳು ಸಮರ್ಥಿಸುತ್ತವೆ. ೧೮೩೭ ರ ಬಂಡಾಯ ವಿಫಲವಾದರೂ ಅದರ ಹಿಂದಿನ ತಾತ್ವಿಕ ನೆಲೆಗಟ್ಟು ಇನ್ನಷ್ಟು ಪ್ರತಿಭಟನೆಗಳು ನಡೆಯಲು ಕಾರಣವಾದವು. ೧೮೫೭ ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ಈ ಬಂಡಾಯ ಸ್ಪೂರ್ತಿಯನ್ನು ನೀಡಿರುವ ಸಾಧ್ಯತೆಗಳಿವೆ. ೧೯೩೦ರಲ್ಲಿ ನಡೆದ ಉಪ್ಪಿನ ಸತ್ಯಾಗ್ರಹವು ಕೊಡಗು ಕೆನರಾ ಬಂಡಾಯಕ್ಕೆ ಕಾರಣವಾದ ಉಪ್ಪಿನ ಏಕಸ್ವಾಮ್ಯವನ್ನು ನೆನಪಿಗೆ ತಂದರೆ ಅದರಲ್ಲಿ ಆಶ್ಚರ್ಯವೇನಿಲ್ಲ.

ಅಧ್ಯಯನ ಕಾಲದಲ್ಲಿ ಕಂಡುಕೊಂಡಂತೆ ರೈತರ ಈಗಿನ ಸಮಸ್ಯೆಗಳು ಇವು:

❖ ಕಳೆದ ಶತಮಾನದ ಕೊನೆಯ ದಶಕದಲ್ಲಿ ವಿಶ್ವದಾದ್ಯಂತ ಜಾಗತೀಕರಣದ ಹೆಸರಲ್ಲಿ ಸಂಭವಿಸಿದ ಆರ್ಥಿಕ ಸುಧಾರಣೆಗಳು ರೈತರ ಪರವಾಗಿಲ್ಲ. ವಿಶ್ವ ವ್ಯಾಪಾರ ಸಂಘಟನೆಯ ಒಪ್ಪಂದದಲ್ಲಿ ತೃತೀಯ ವಲಯಕ್ಕೆ (ವ್ಯಾಪಾರ, ವಾಣಿಜ್ಯ ಸೇವೆ) ಮಾತ್ರ ವಿಶೇಷ ಮಹತ್ವ ನೀಡಿರುವುದು ಇದಕ್ಕೆ ಕಾರಣ. ಬಡ ರೈತರಿಗೆ ದೊರೆಯುತ್ತಿದ್ದ ಎಲ್ಲಾ ಸಬ್ಸಿಡಿಗಳು ಕಡಿಮೆಯಾಗಿವೆ. ಬಡತನದ ರೇಖೆಯನ್ನು ಕೆಳಗಿಳಿಸಿ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಹಂತ ಹಂತವಾಗಿ ನಿಲ್ಲಿಸುವ ಪ್ರಯತ್ನಗಳು ನಡೆಯುತ್ತಿವೆ. ಉದ್ದಿಮೆಗಳ ಸ್ಥಾಪನೆಗಾಗಿ ಕೃಷಿ ಭೂಮಿಯನ್ನು ರೈತರಿಂದ ವಶಪಡಿಸಿಕೊಳ್ಳಲಾಗುತ್ತಿದೆ. ಅಭಿವೃದ್ಧಿ ಯೋಜನೆಗಳ ಹೆಸರಲ್ಲಿ ಫಲವತ್ತಾದ ಕೃಷಿ ಭೂಮಿ ಬೃಹತ್ ಬಂಡವಾಳಶಾಹಿಗಳ ಕೈ ವಶವಾಗುತ್ತಿದೆ. ವಿಶೇಷ ವಿತ್ತ ವಲಯಗಳ ನಿರ್ಮಾಣದಿಂದ ರೈತರು ಭೂಮಿಯನ್ನು ಕಳೆದುಕೊಳ್ಳುತ್ತಿದ್ದಾರೆ. ಹಾಗಾಗಿ ಜಾಗತೀಕರಣವು ರೈತರ ವಿರುದ್ಧವಾಗಿದೆ ಎಂಬ ಅಭಿಪ್ರಾಯಕ್ಕೆ ಬರಲಾಗಿದೆ.

❖ ಇತಿಹಾಸದುದ್ದಕ್ಕೂ ನಡೆದಿರುವ ರೈತರ ಶೋಷಣೆಗೆ ಇನ್ನೂ ಪರಿಹಾರ ದೊರೆತಿಲ್ಲ. ಬೆಳೆಗಳ ಮತ್ತು ಬೆಲೆಗಳ ಅಸ್ಥಿರತೆ, ಪ್ರಭುತ್ವದ ದಿವ್ಯ ನಿರ್ಲಕ್ಷ್ಯ, ಕೃಷಿ ಕೂಲಿ ಕಾರ್ಮಿಕರ ಕೊರತೆ, ಮಾರಾಟ ವ್ಯವಸ್ಥೆಯಲ್ಲಿನ ದೋಷ ಮತ್ತು ಹಣಕಾಸಿನ ಸಾಮಯಿಕ ಅಲಭ್ಯತೆ ಇವು ರೈತರು ಎದುರಿಸುತ್ತಿರುವ ಸಮಸ್ಯೆಗಳು. ಜಾಗತೀಕರಣ ಪ್ರಕ್ರಿಯೆಯ ಮಾರುಕಟ್ಟೆ ನಿಯಂತ್ರಣ ರಾಹಿತ್ಯದಿಂದ ಮತ್ತು ಸರಕಾರದ ಅನಿಯಂತ್ರಣದಿಂದ ರೈತರ ಸಮಸ್ಯೆಗಳು ಉಲ್ಬಣವಾಗಿದೆ. ಕೃಷಿಯನ್ನು ಭಾರತದ ಬೆನ್ನೆಲುಬು ಎಂದು ಕರೆಯಲಾಗುತ್ತದೆ. ಜೀವ ವೈವಿಧ್ಯಗಳ ಅತಿ ಸೂಕ್ಷ್ಮ ಪ್ರದೇಶವಾದ ಪಶ್ಚಿಮ ಘಟ್ಟಗಳ ಕೆಳಗಿರುವ ಕರಾವಳಿ ಕರ್ನಾಟಕದಲ್ಲಿ ಮತ್ತು ಕೊಡಗಿನಲ್ಲಿ ಬೃಹತ್ ಉದ್ದಿಮೆಗಳನ್ನು ಸ್ಥಾಪಿಸಿದರೆ ತಾಪಮಾನ ಹೆಚ್ಚಾಗಿ ಜೀವವೈವಿಧ್ಯ ನಾಶವಾಗಲಿದೆ. ಕರಾವಳಿ ಕರ್ನಾಟಕದ ಮೊತ್ತ ಮೊದಲ ಬ್ರಿಟಿಷ್ ಕಲೆಕ್ಟರ್ ಮನ್ರೋ ಈ ಪ್ರದೇಶವು ಕೈಗಾರಿಕೆಗಳ ಸ್ಥಾಪನೆಗೆ ಸೂಕ್ತವಾದುದಲ್ಲ ಎಂದು ೧೮೦೦ರಲ್ಲಿ ಹೇಳಿದ್ದನ್ನು ನಾವು ಈಗಲೂ ಕಡೆಗಣಿಸುವಂತಿಲ್ಲ. ಆದುದರಿಂದ ಕರಾವಳಿ ಕರ್ನಾಟಕ ಮತ್ತು ಕೊಡಗಿನಲ್ಲಿ ಕೃಷಿಗೆ ಉತ್ತೇಜನ ದೊರೆಯಬೇಕೇ ವಿನಃ ಕೈಗಾರಿಕೆಗಳಿಗಲ್ಲ.

❖ ರೈತ ಹೋರಾಟಗಳು ಕೆಲವು ಸಂದರ್ಭಗಳಲ್ಲಿ ಯಶಸ್ವಿಯಾಗಿವೆ. ಉದಾಹರಣೆಗೆ ಕರಾವಳಿಯ ವಿಶೇಷ ಆರ್ಥಿಕ ವಲಯದ ವಿರುದ್ಧ ಮಾಡಿದ ಹೋರಾಟ ಮತ್ತು ಪೋಸ್ಕೋ ಕಂಪೆನಿಯ ವಿರುದ್ಧ ರೈತರು ಮಾಡಿದ ಹೋರಾಟ. ಆದರೆ ಈ ವಿಜಯಗಳನ್ನು ಶಾಶ್ವತ

ಎನ್ನುವಂತಿಲ್ಲ. ಯಾವುದೇ ಪಕ್ಷ ಅಧಿಕಾರದಲ್ಲಿದ್ದರೂ ವಿಶ್ವ ವ್ಯಾಪಾರ ಸಂಘಟನೆಯ ಒಪ್ಪಂದಗಳನ್ನು ಗೌರವಿಸುವುದು ಅನಿವಾರ್ಯ. ಆದುದರಿಂದ ರೈತರು ನಿರಂತರವಾಗಿಹೋರಾಟ ಮಾಡಬೇಕಾಗುತ್ತದೆ. ಈ ಹೋಃರಾಟಗಳು ಪೂರ್ತಿಯಾಗಿ ಯಶಸ್ವಿಯಾಗುವುದಿಲ್ಲ ಎನ್ನುವ ಸತ್ಯ ರೈತರಿಗೆ ಗೊತ್ತಿದೆ. ರೈತರಲ್ಲಿ ಸಮರ್ಥ ನಾಯಕತ್ವದ ಕೊರತೆ ಇದಕ್ಕೆ ಬಹುಮುಖ್ಯ ಕಾರಣ. ಉತ್ತರ ಭಾರತದಲ್ಲಿ ಮಹೇಂದ್ರ ಸಿಂಗ್ ಟಿಕಾಯತ್ ಮತ್ತು ಕರ್ನಾಟಕದಲ್ಲಿ ಪ್ರೊ. ನಂಜುಂಡಸ್ವಾಮಿ ರೈತರಿಗೆ ಸಮರ್ಥ ನಾಯಕತ್ವ ಒದಗಿಸಿದರು. ಅಂತಹ ತಾತ್ವಿಕ ನೆಲೆಗಟ್ಟಿನ ನಾಯಕತ್ವವಿಲ್ಲದೆ ರೈತ ಚಳುವಳಿಗಳು ಸೊರಗಿವೆ. ರೈತರದೇ ಒಂದು ಜಾತಿ; ಅವರಲ್ಲಿ ಜಾತಿ ಭೇದ ಇಲ್ಲ ಎಂಬ ಸುಂದರೇಶ್‌ನಂಥವರು ಈಗ ಕಂಡುಬರುತ್ತಿಲ್ಲ. ರಾಜಕೀಯ ಪಕ್ಷಗಳು ರೈತ ಸಂಘಟನೆಗಳನ್ನು ಒಡೆದುಬಿಟ್ಟಿವೆ. ಹಾಗಾಗಿ ರೈತ ಚಳುವಳಿಗಳು ವಿಫಲವಾಗುತ್ತಿವೆ. ಇಂತಹ ಸಂದರ್ಭದಲ್ಲಿ ರೈತರದೇ ಆದ ಒಂದು ರಾಜಕೀಯ ಪಕ್ಷವನ್ನು ಕಟ್ಟುವ ಅಗತ್ಯವಿದೆಯೆಂಬ ಅಭಿಪ್ರಾಯ ವ್ಯಕ್ತವಾಗಿದೆ. ಸಣ್ಣ ರೈತರಿಗೆ ಶಾಸನ ಸಭೆಗಳಲ್ಲಿ ಮತ್ತು ಸ್ಥಳೀಯ ಸಂಸ್ಥೆಗಳಲ್ಲಿ ಮೀಸಲಾತಿ ನೀಡಬೇಕೆಂಬ ಅಭಿಪ್ರಾಯವೂ ವ್ಯಕ್ತವಾಗಿದೆ.

❖ ರೈತರು ಇಂದಿನ ದಿನಗಳಲ್ಲಿ ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಭಾರತದ ರೈತರಲ್ಲಿ ಎರಡು ಹೆಕ್ಟೇರುಗಿಂತ ಕಡಿಮೆ ಭೂಮಿ ಹೊಂದಿರುವ ಸಣ್ಣ ರೈತರು ಬಹು ಸಂಖ್ಯಾತರಾಗಿದ್ದಾರೆ. ರೈತರ ಸಮಸ್ಯೆ ಎಂದರೆ ವಸ್ತುಶಃ ಅದು ಸಣ್ಣ ಮತ್ತು ಅತಿ ಸಣ್ಣ ರೈತರ ಸಮಸ್ಯೆ. ಈ ವರ್ಗಕ್ಕೆ ಸೇರಿದ ರೈತರ ಬಲಿಷ್ಠ ಸಂಘಟನೆಯೊಂದರ ನಿರ್ಮಾಣದಿಂದ ರೈತರ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದಾಗಿದೆ. ಕೃಷಿಗೆ ಉದ್ದಿಮೆಯ ಸ್ಥಾನಮಾನವನ್ನು ನೀಡಿ, ವಿಶ್ವ ವ್ಯಾಪಾರ ಸಂಘಟನೆಯ ಒಪ್ಪಂದಗಳನ್ನು ರೈತ ಪರವಾಗಿರುವಂತೆ ತಿದ್ದುಪಡಿ ಮಾಡಿ, ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕಿದೆ. ಪರಿಸರ ಸಂರಕ್ಷಣೆಯ ನೆಪದಲ್ಲಿ ಅಮೇರಿಕಾವು ಕೃಷಿಗೆ ಸಬ್ಸಿಡಿಯನ್ನು ನೀಡುತ್ತಿದೆ. ಇದನ್ನು ಹುಟ್ಟುವಳಿ (out put) ಸಬ್ಸಿಡಿ ಎಂದು ಅದು ಕರೆದುಕೊಳ್ಳುತ್ತಿದೆ. ಭಾರತದಲ್ಲಿರುವುದು ಕೂಡುವಳಿ (input) ಸಬ್ಸಿಡಿ. ಇಂತಹ ಸಬ್ಸಿಡಿಯನ್ನು ವಿಶ್ವ ವ್ಯಾಪಾರ ಸಂಘಟನೆ ನಿಷೇಧಿಸದಂತೆ ನೋಡಿಕೊಳ್ಳಬೇಕಿದೆ. ಇದಲ್ಲದೆ ಆಹಾರ ಸಬ್ಸಿಡಿಯನ್ನು ನಿಲ್ಲಿಸುವ ಪ್ರಸ್ತಾಪವನ್ನು ವಿರೋಧಿಸಬೇಕಾಗಿದೆ. ಇವೆಲ್ಲಾ ಪ್ರಯತ್ನಗಳ ಮೂಲಕ ರೈತರ ಮತ್ತು ಅತಿ ಸಣ್ಣ ರೈತರ ಸಮಸ್ಯೆಗಳನ್ನು ಬಗೆಹರಿಸಬೇಕೆಂಬ ಅಭಿಪ್ರಾಯ ವ್ಯಕ್ತವಾಗಿದೆ. ಸ್ವ ಸಹಾಯ ಸಂಘಗಳ ರಚನೆಯಿಂದ ಮತ್ತು ಅವುಗಳ ಸಮರ್ಥ ಕಾರ್ಯ ನಿರ್ವಹಣೆಯಿಂದ ರೈತ ಸಮಸ್ಯೆಗಳು ಬಗೆಹರಿಯಬಹುದೆಂಬ ಆಶಾವಾದ ವ್ಯಕ್ತವಾಗಿದೆ.

❖ ಕೊಡಗಿನ ಮತ್ತು ಅಮರಸುಳ್ಯದ ಸಾಹಿತಿ ಕಲಾವಿದರು ಮತ್ತು ಸಂಶೋಧಕರು, ಸಂಪಾಜೆ ದೇವಿಪ್ರಸಾದರ ನೇತೃತ್ವದಲ್ಲಿ ೧೯೯೮ ರಲ್ಲಿ ಅಮರ ಕ್ರಾಂತಿ ಉತ್ಸವ ಸಮಿತಿಯನ್ನು ಹುಟ್ಟು ಹಾಕಿದರು. ಕೊಡಗು ಕೆನರಾ ಆರ್ಥಿಕ ಬಂಡಾಯದಲ್ಲಿ ಪಾಲ್ಗೊಂಡ ರೈತರ ಸ್ಮರಣೆಯನ್ನು ಶಾಶ್ವತಗೊಳಿಸುವುದು ಇದರ ಉದ್ದೇಶ. ಇದು ಪ್ರತಿ ವರ್ಷ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಬಂದಿದೆ. ವಿದ್ಯಾರ್ಥಿಗಳನ್ನು ಆ ಕಾರ್ಯಕ್ರಮಗಳಲ್ಲಿ ಒಳಗೊಳಿಸುವ ಪ್ರಯತ್ನ ಮಾಡುತ್ತಿದೆ. ಇದರ ಬಗ್ಗೆ ಬಹುತೇಕ ಜನರಿಗೆ ಒಲವಿದೆ. ಮತ್ತು ಅನೇಕ ನಿರೀಕ್ಷೆಗಳಿವೆ. ಆದರೆ ಇದರ ಕಾರ್ಯಕ್ರಮಗಳಲ್ಲಿ ಜನರ ಪಾಲ್ಗೊಳ್ಳುವಿಕೆ ಬಹಳ ಕಡಿಮೆ ಇದೆ. ಈ ಸಮಿತಿ ೧೯೯೮ ರಲ್ಲಿ ಸುಳ್ಯದಿಂದ ಮಂಗಳೂರುವರೆಗೆ ಏರ್ಪಡಿಸುವ ಕಾಲ್ನಡಿಗೆ ಜಾಥಾದಲ್ಲಿ ಪಾಲ್ಗೊಂಡವರ ಸಂಖ್ಯೆ ಬಹಳ ಕಡಿಮೆ. ಆದುದರಿಂದ ೧೮೩೭ ರ ಆರ್ಥಿಕ ಬಂಡಾಯದ ನೆನಪನ್ನು ಚಿರಸ್ಥಾಯಿಗೊಳಿಸುವ ಪ್ರಯತ್ನಕ್ಕೆ ಯಶಸ್ಸು ಸಿಕ್ಕಿಲ್ಲ.

❖ ಕೊಡಗು ಕೆನರಾ ಆರ್ಥಿಕ ಬಂಡಾಯದ ನೆನಪನ್ನು ಶಾಶ್ವತಗೊಳಿಸುವ ದೃಷ್ಟಿಯಿಂದ ಕೆಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸಾಧ್ಯವಿದೆ. ಅವುಗಳಲ್ಲಿ ಬಹಳ ಮುಖ್ಯವಾದದ್ದು ಬೆಳ್ಳಾರೆ ಕೋಟೆಯ ಪುನರುತ್ಥಾನ. ಈ ಕೋಟೆಯನ್ನು ಇಕ್ಕೇರಿಯ ರಾಜ ವೆಂಕಟಪ್ಪ ನಾಯಕ ಕ್ರಿ.ಶ.೧೬೦೮ ರಲ್ಲಿ ಕಟ್ಟಿಸಿದ. ಕ್ರಿ.ಶ.೧೮೦೪ರಲ್ಲಿ ಇಲ್ಲೊಂದು ಆಡಳಿತ ಕಛೇರಿಯನ್ನು ನಿರ್ಮಿಸಲಾಯಿತು. ಅದು ಕೊಡಗನ್ನು ದೊಡ್ಡವೀರ ರಾಜ ಆಳುತ್ತಿದ್ದ ಕಾಲದಲ್ಲಿ ಸುಳ್ಯದ ಅಧೀಕೃತ ರಾಜಧಾನಿಯಂತೆ ಕಾರ್ಯನಿರ್ವಹಿಸುತ್ತಿತ್ತು. ಕ್ರಿ.ಶ.೧೮೩೪ರಲ್ಲಿ ಸುಳ್ಯ ಮತ್ತು ಪುತ್ತೂರುಗಳ ೧೧೦ ಗಾಮಗಳನ್ನು ಬೇರ್ಪಡಿಸಿದಾಗ ಈ ಕೋಟೆ ದ.ಕ ಜಿಲ್ಲೆಗೆ ಸೇರಿ ಹೋಯಿತು. ಆಗ ಅಲ್ಲಿ ಬ್ರಿಟಿಷರು ತಮ್ಮ ಖಜಾನೆಯನ್ನು ಸ್ಥಾಪಿಸಿದರು. ೧೮೩೭ ರ ಬಂಡಾಯ ಈ ಖಜಾನೆಯನ್ನು ವಶಪಡಿಸಿಕೊಳ್ಳುವುದರೊಂದಿಗೆ ಆರಂಭವಾಯಿತು. ಈಗ ಇಲ್ಲಿನ ಮಣ್ಣಿನ ಕೋಟೆ ಬಿದ್ದು ಹೋಗಿದೆ ಆದರೆ ಅವಶೇಷಗಳು ಉಳಿದುಕೊಂಡಿವೆ. ಆ ಪ್ರದೇಶದಲ್ಲಿ ಕೋಟೆಯನ್ನು ಮತ್ತೆ ಕಟ್ಟಿ ಶಿವಪುರ ಮಾದರಿಯ ಸ್ವಾತಂತ್ರ್ಯ ಹೋರಾಟಗಾರರ ಭವನವೊಂದನ್ನು ನಿರ್ಮಿಸಬೇಕಾಗಿದೆ. ೧೮೩೭ ರ ರೈತ ಬಂಡಾಯದ ಅಲ್ಪ ಸ್ವಲ್ಪ ವಿವರಗಳು ಇತಿಹಾಸದಲ್ಲಿ ಸೇರ್ಪಡೆಯಾಗಿದೆ. ಆದರೆ ಈ ಘಟನೆ ಒಂದು ದರೋಡೆ ಎಂಬಂತೆ ಚಿತ್ರಿತವಾಗಿದೆ. ಇದನ್ನು ಬದಲಾಯಿಸಿ ಆರ್ಥಿಕ ಬಂಡಾಯವನ್ನು ಪ್ರಥಮ ಸ್ವಾತಂತ್ರ್ಯ ಸಂಗ್ರಾಮವೆಂದು ಪರಿಗಣಿಸಬೇಕೆಂಬುದು ಈ ಪ್ರದೇಶದ ಬಹುತೇಕ ಜನರ ಅಭಿಪ್ರಾಯವಾಗಿದೆ.

೮.೨.೪. ಬಂಡಾಯ ಬಳಿಕಿನ ಬೆಳವಣಿಗೆಗಳು

೧. ಬಂಡಾಯದ ಬಳಿಕ ಸುಳ್ಯ ಮತ್ತು ಪುತ್ತೂರುಗಳು ಅತ್ಯಂತ ನಿರ್ಲಕ್ಷ್ಯಕ್ಕೆ ಒಳಗಾದವು. ಬಂಡಾಯದ ಪ್ರಮುಖ ನಾಯಕರುಗಳು ಅಮರ ಸುಳ್ಯ ಸೀಮೆಗೆ ಸೇರಿದವರಾದುದರಿಂದ ವಸಾಹತುಶಾಹಿ ಆಡಳಿತವು ಈ ಪ್ರದೇಶದಲ್ಲಿ ಯಾವುದೇ ಅಭಿವೃದ್ಧಿ ಸಂಭವಿಸದಂತೆ ನೋಡಿಕೊಂಡಿತು. ಒಂದು ಕಾಲದಲ್ಲಿ ದೇವಾಲಯಗಳ ಪೂಜೆ ಮತ್ತು ಮೊಕ್ತೇಸರಿಕೆಯ ಹಕ್ಕನ್ನು ಹೊಂದಿದ್ದ ಸ್ಥಾನಿಕ ಬ್ರಾಹ್ಮಣರನ್ನು, ಈ ಬಂಡಾಯದಲ್ಲಿ ಪಾಲ್ಗೊಂಡರೆಂಬ ಕಾರಣಕ್ಕೆ ಹಕ್ಕಿನಿಂದ ವಂಚಿಸಲಾಯಿತು. ಪ್ರಥಮ ಸ್ವಾತಂತ್ರ್ಯ ಸಂಗ್ರಾಮವೆಂದು ಪರಿಗಣಿತವಾಗಬೇಕಿದ್ದ ಒಂದು ಐತಿಹಾಸಿಕ ಘಟನೆಯನ್ನು ಕಾಟಕಾಯಿಯ ಮಟ್ಟಕ್ಕೆ ಇಳಿಸಲಾಯಿತು. ದ.ಕ ಜಿಲ್ಲೆಯ ವ್ಯಾಪಾರಿ ವರ್ಗ ಬ್ರಿಟಿಷರ ಪರನಿಂತು ಬಂಡುಕೋರ ರೈತರನ್ನು ದರೋಡೆಕೋರರೆಂದು ಕರೆದರು. ಹುತಾತ್ಮರ ಪಟ್ಟ ಸಿಕ್ಕಬೇಕಾಗಿದ್ದ ಈ ಹೋರಾಟಗಾರರು ಬ್ರಿಟಿಷ್ ಪರ ಇತಿಹಾಸಕಾರರಿಂದ ಸಂಪೂರ್ಣವಾಗಿ ಅಲಕ್ಷಿಸಲ್ಪಟ್ಟರು.

೨. ಅಮರ ಸುಳ್ಯ ಪ್ರದೇಶ ಈಗಲೂ ಅಲಕ್ಷಿತವಾಗಿದೆ. ಇದು ಗಡಿನಾಡ ಅತ್ಯಂತ ಹಿಂದುಳಿದ, ಮಲೆನಾಡ ಪ್ರದೇಶ. ಆದುದರಿಂದ ಈ ಪ್ರದೇಶಕ್ಕೆ ಕೇಂದ್ರ ಮತ್ತು ರಾಜ್ಯ ಸರಕಾರದ ಅನೇಕ ಅಭಿವೃದ್ಧಿ ಯೋಜನೆಗಳು ಅನ್ವಯವಾಗುತ್ತವೆ. ಪ್ರಾಮಾಣಿಕ ಮತ್ತು ದಕ್ಷ ರಾಜಕೀಯ ನಾಯಕತ್ವ ಇಲ್ಲದ ಕಾರಣ ಇಲ್ಲಿಗೆ ಬರಬೇಕಾಗಿರುವ ಅನುದಾನವನ್ನು ತಂದುಕೊಡುವಲ್ಲಿ ನಾಯಕತ್ವ ವಿಫಲವಾಗಿದೆ. ಈ ಪ್ರದೇಶದಲ್ಲಿ ಜಾತಿ ರಾಜಕಾರಣದಿಂದಾಗಿ ಜನರಲ್ಲಿ ಒಗ್ಗಟ್ಟಿಲ್ಲ. ಅವರು ಸಾಮಾಜಿಕ ಮತ್ತು ಧಾರ್ಮಿಕ ವಿಷಯಗಳಿಗೆ ಅನಗತ್ಯ ಮಹತ್ವ ನೀಡಿ ಅಭಿವೃದ್ಧಿಯನ್ನು ನಿರ್ಲಕ್ಷಿಸಿದ್ದಾರೆ. ಆದುದರಿಂದ ಅಮರಸುಳ್ಯ ಪ್ರದೇಶ ಅಭಿವೃದ್ಧಿಯಿಂದ ವಂಚಿತವಾಗಿದೆ. ಪುತ್ತೂರನ್ನು ಒಂದು ಜಿಲ್ಲಾ ಕೇಂದ್ರವನ್ನಾಗಿ ಮಾಡಿ ಅದರಲ್ಲಿ ಅಮರಸುಳ್ಯವನ್ನು ಒಳಗೊಳಿಸಿದರೂ ಈ ಪ್ರದೇಶದ ಅಭಿವೃದ್ಧಿ ಸಾಧ್ಯವಾಗುವುದಿಲ್ಲ. ಇದಕ್ಕೆ ನಾಯಕತ್ವದ ಕೊರತೆ, ಒಗ್ಗಟ್ಟಿನ ಕೊರತೆ, ಬಲಾಢ್ಯ ಜಾತಿಗಳ ರಾಜಕೀಯ ಕಾರಣವಾಗಿರುತ್ತದೆ.

೩. ಕೊಡಗು ಕೆನರಾ ಆರ್ಥಿಕ ಬಂಡಾಯದ ಕಾಲದಲ್ಲಿ ಬಹುತೇಕ ಕೊಡಗರು ಬ್ರಿಟಿಷರ ಪರ ವಹಿಸಿದರು. ಇದರಿಂದಾಗಿ ಕೊಡಗಿಗೆ ಅಭಿವೃದ್ಧಿಯ ದೃಷ್ಟಿಯಿಂದ ಪ್ರಯೋಜನವೇನೂ ಆಗಲಿಲ್ಲ. ಈಗಲೂ ಕೊಡಗು ಒಂದು ಹಿಂದುಳಿದ ಜಿಲ್ಲೆಯಾಗಿ ಉಳಿದಿದೆ. ಈ ದೇಶಕ್ಕೆ ಇಬ್ಬರು ಮಹಾನ್ ದಂಡನಾಯಕರನ್ನು ನೀಡಿದ ಮತ್ತು ಅನೇಕ ಒಲಿಂಪಿಯನ್ ಹಾಕಿ ಪಟುಗಳ

ಜನನಕ್ಕೆ ಕಾರಣವಾದ ಕೊಡಗಿಗೆ ರೈಲು ಸಂಪರ್ಕವಿಲ್ಲ. ರಾಷ್ಟ್ರೀಯ ಹೆದ್ದಾರಿಯ ಭಾಗ್ಯ ಮತ್ತು ವಿಮಾನ ನಿಲ್ದಾಣ ಹೊಂದುವ ಭಾಗ್ಯ ಈ ಜಿಲ್ಲೆಗೆ ಇನ್ನೂ ಲಭ್ಯವಾಗಿಲ್ಲ. ಅಮರ ಸುಳ್ಯ ಅಭಿವೃದ್ಧಿ ಹೊಂದದಿರಲು ಕಾರಣವಾದ ಅಂಶಗಳೇ ಕೊಡಗಿನ ಹಿಂದುಳಿಕೆಗೂ ಕಾರಣ. ಈ ಜಿಲ್ಲೆಯಲ್ಲಿ ಸಮರ್ಥ ನಾಯಕತ್ವದ ಕೊರತೆಯಿದೆ. ಜಾತಿ ರಾಜಕಾರಣದಿಂದಾಗಿ ಜಿಲ್ಲೆ ತತ್ತರಿಸಿ ಹೋಗಿದೆ. ಸ್ಥಾಪಿತ ಹಿತಗಳು ಬಿತ್ತುವ ಪ್ರತ್ಯೇಕತೆಯ ಭಾವನೆ ಕೊಡಗನ್ನು ಅಭಿವೃದ್ಧಿ ಹೊಂದದಂತೆ ಮಾಡಿದೆ.

೪. ಕಳೆದ ಶತಮಾನದ ಕೊನೆಯ ದಶಕದಲ್ಲಿ ಕೊಡಗಿನಲ್ಲಿ ಪ್ರತ್ಯೇಕತೆಯ ಕೂಗು ಕೇಳಿ ಬಂತು. ಕೊಡಗನ್ನು ಪ್ರತ್ಯೇಕ ರಾಜ್ಯ ಮಾಡಬೇಕೆಂದು ಒಂದು ನಿರ್ದಿಷ್ಟ ಸಮುದಾಯಕ್ಕೆ ಸೇರಿದ ಬೆರಳೆಣಿಕೆಯ ಜನರು ಅನೇಕ ಪ್ರಯತ್ನಗಳನ್ನು ಮಾಡಿದರು. ಕೊಡಗಿನಲ್ಲಿ ಕೊಡಗು ಭಾಷೆಯನ್ನಾಡುವ ಹದಿನೆಂಟು ಜನಾಂಗಗಳಿವೆ. ಕೊಡಗಿನಲ್ಲಿ ಕೊಡವ ಭಾಷೆಯನ್ನಾಡುವವರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಕನ್ನಡಿಗರು ಮತ್ತು ಇತರ ಭಾಷೆಗಳನ್ನಾಡುವ ಜನಾಂಗದವರಿದ್ದಾರೆ. ಬೆರಳೆಣಿಕೆಯ ಪ್ರತ್ಯೇಕತಾ ವಾದಿಗಳು ಎಲ್ಲರನ್ನೂ ಒಟ್ಟಿಗೆ ಸೇರಿಸಿ ಚಳವಳಿ ನಡೆಸುತ್ತಿದ್ದಾರೆ, ಮತ್ತು ಆ ಚಳವಳಿಯನ್ನು ಅವ್ಯಾಹತವಾಗಿ ಮುಂದುವರೆಸುತ್ತಿದ್ದರೆ, ತೆಲಂಗಾಣದಂತಹ ಇನ್ನೊಂದು ಸಮಸ್ಯೆ ಹುಟ್ಟಿಕೊಳ್ಳುತ್ತಿತ್ತು. ಕೊಡಗು ಒಂದು ರಾಜ್ಯವಾಗುತ್ತಿದ್ದರೂ ಅದರ ಅಭಿವೃದ್ಧಿ ಸಾಧ್ಯವಾಗುತ್ತಿರಲಿಲ್ಲ.

ಟಿಪ್ಪಣಿಗಳು

೧. ಸ್ಥಳೀಯ ಪತ್ರಿಕೆಗಳ ವಿಶೇಷ ಪುರವಣಿಗಳಲ್ಲಿ, ಸಂಘ ಸಂಸ್ಥೆಗಳ ಸ್ಮರಣ ಸಂಚಿಕೆಗಳಲ್ಲಿ ೧೮೩೭ ರ ಆರ್ಥಿಕ ಬಂಡಾಯಕ್ಕೆ ಸಂಬಂಧಿಸಿದ ಲೇಖನಗಳು ಸಾಕಷ್ಟು ಪ್ರಕಟವಾಗಿವೆ. ಇವುಗಳ ಹಿಂದೆ ಸಂಶೋಧನಾ ಪರಿಶ್ರಮ ಇಲ್ಲದಿದ್ದರೂ ಇವು ಮಾಹಿತಿ ಮೂಲಗಳಾಗಿ ಜನರ ನೆನಪು ಮಾಸದಂತೆ ನೋಡಿಕೊಂಡಿವೆ.

೨. ಎಂಬತ್ತರ ದಶಕದಲ್ಲಿರುವ ಪಟ್ಟಿನಂಗಡಿಯ ಡಿ.ಜಿ. ನಡ್ಕ – ಈ ಘಟನೆಗೆ ಸಂಬಂಧಿಸಿದಂತೆ ಅಪೂರ್ವ ಮಾಹಿತಿ ಕೋಶವಾಗಿದ್ದಾರೆ. ಇವರಲ್ಲಿ ಅನೇಕ ದಾಖಲೆಗಳೂ ಕೂಡಾ ಲಭ್ಯ ಇವೆ.

೩. ಮಡಿಕೇರಿ ಆಕಾಶವಾಣಿಯು ಪ್ರತಿ ಭಾನುವಾರ ರಾತ್ರಿ ೭:೩೦ ರಿಂದ ೮:೦೦ ರವರೆಗೆ ಡಾ. ಶಿಶಿಲರ ನದಿ ಎರಡರ ನಡುವೆ ಕಾದಂಬರಿಯನ್ನು ಧಾರವಾಹಿಯಾಗಿ ಪ್ರಸಾರ ಮಾಡುತ್ತಿದೆ. ಸುಳ್ಯದ ಸುದ್ದಿ ಬಿಡುಗಡೆ ಪತ್ರಿಕೆಯಲ್ಲಿ

ಮೂಡಣದ ಕೆಂಪು ಕಿರಣ ಮತ್ತು ಮಂಗಳ ವಾರ ಪತ್ರಿಕೆಯಲ್ಲಿ ಕೊಡಗಿನ ಕತೆಗಳು ಧಾರವಾಹಿಯಾಗಿ ಪ್ರಕಟವಾಗುತ್ತಿದೆ.

೪. ಕಾಲ್ನಡಿಗೆ ಜಾಥಾ ಸಂದರ್ಭದಲ್ಲಿ ಡಾ. ಶಿಶಿಲರ ಅಮರಕ್ರಾಂತಿ ವೀರರು ಬೀದಿ ನಾಟಕ ಜೀವನ್ ರಾಂ ಸುಳ್ಯ – ಇವರ ನಿರ್ದೇಶನದಲ್ಲಿ ಪ್ರದರ್ಶಿತವಾಗಿತ್ತು.

೫. ಮೂಡಣದ ಕೆಂಪು ಕಿರಣ ಕಾದಂಬರಿಯ ಮುನ್ನುಡಿಯಲ್ಲಿ ಮಾಧವ ಪೆರಾಜೆಯವರು, ೧೮೩೭ರ ಬಂಡಾಯವನ್ನು ಈ ಪ್ರದೇಶದ ಜನರು ತಮ್ಮ ಐತಿಹಾಸಿಕ ಅನನ್ಯತೆಯೆಂದು ಗುರುತಿಸಿರುವುದನ್ನು ದಾಖಲಿಸಿದ್ದಾರೆ.

೬. ಕೊಡಗು – ಕೆನರಾ ಬಂಡಾಯವನ್ನು ಜನಸಾಮಾನ್ಯರು ಕಲ್ಯಾಣಪ್ಪನ ಕಾಟಕಾಯಿ ಎಂದೇ ಗುರುತಿಸುತ್ತಾರೆ. ಬಂಡಾಯದ ಬಳಿಕ ಹುಲಿ ಕಡಿದ ನಂಜಯ್ಯ ಮತ್ತು ಕೆದಂಬಾಡಿ ರಾಮ ಗೌಡ ಬ್ರಿಟಿಷರ ಕೈಗೆ ಸಿಕ್ಕಿ ಬೀಳದ ಕಾರಣ, ಅವರ ಪಾತ್ರದ ಬಗ್ಗೆ ಜನರಿಗೆ ಸರಿಯಾದ ಮಾಹಿತಿ ದೊರೆಯಲಿಲ್ಲ.

೭. ತಮ್ಮ ಜ್ಞಾನ ಪೀಠ ಪ್ರಶಸ್ತಿ ವಿಜೇತ ಕೃತಿ ಚಿಕ್ಕವೀರ ರಾಜೇಂದ್ರದಲ್ಲಿ ಮಾಸ್ತಿಯವರು ಚಿಕ್ಕವೀರನನ್ನು ಖಳ ನಾಯಕನಂತೆ ಚಿತ್ರಿಸಿದ್ದಾರೆ. ಅದು ಮಾಹಿತಿಯ ಕೊರತೆಯೋ, ಉದ್ದೇಶ ಪೂರ್ವಕವೋ ಸ್ಪಷ್ಟವಾಗುವುದಿಲ್ಲ. ಚಿಕ್ಕವೀರ ಎಳವೆಯಲ್ಲಿ ಸ್ತ್ರೀಲೋಲನಾಗಿದ್ದರೂ ಆ ಬಳಿಕ ತನ್ನನ್ನು ತಿದ್ದಿಕೊಂಡು ಸರಿದಾರಿಯಲ್ಲಿ ನಡೆದನೆಂಬುದಕ್ಕೆ ಸಾಕಷ್ಟು ಆಧಾರಗಳಿವೆ.

೮. ಬ್ರಿಟಿಷರು ಏಕಕಾಲದಲ್ಲಿ ಎಲ್ಲಾ ರಾಜರುಗಳ ಪದಚ್ಯುತಿಗೆ ಕೈ ಹಾಕಲಿಲ್ಲ. ತಮಗನುಕೂಲವಾಗಿರುವ ರಾಜರಿಗೆ ಅವರ ವಿರೋಧಿಗಳನ್ನು ಮಟ್ಟ ಹಾಕಲು ಬೆಂಬಲ ನೀಡಿ ಕಾಲ ಕ್ರಮೇಣ ತಮ್ಮ ಸ್ನೇಹಿತರ ರಾಜ್ಯವನ್ನು ವಸಾಹತನ್ನಾಗಿ ಮಾಡುವುದು ಅವರ ರಾಜ ನೀತಿಯಾಗಿತ್ತು. ಟಿಪ್ಪುವಿಗೆದುರಾಗಿ ದೊಡ್ಡ ವೀರನನ್ನು ನಿಲ್ಲಿಸಿ ಕೊಡಗನ್ನು ನಿಧಾನವಾಗಿ ವಶ ಪಡಿಸಿಕೊಂಡದ್ದು ಅದಕ್ಕೊಂದು ನಿದರ್ಶನ.

೯. ಕೊಡಗಿನಿಂದ ಬ್ರಿಟಿಷರು ಕಂದಾಯ ಲಾಭವನ್ನು ನಿರೀಕ್ಷಿಸಿದಂತೆ ಕಂಡು ಬರುವುದಿಲ್ಲ. ಮಲಬಾರ ಮತ್ತು ಮೈಸೂರುಗಳ ಹಾಗೂ ಮಂಗಳೂರು ಮತ್ತು ಮೈಸೂರುಗಳ ಸಂಧಿ ಸ್ಥಳವಾಗಿ ಕೊಡಗಿನ ಭೌಗೋಳಿಕ ಅಸ್ತಿತ್ವದ ಮಹತ್ವವನ್ನು ಅವರು ಅರಿತಿರಬೇಕು, ಹಾಗಾಗಿ ಕೊಡಗನ್ನು ತಮ್ಮ ಕೈ ವಶ ಮಾಡಿಕೊಂಡರೆಂದು ಕಾಣುತ್ತದೆ. ಅಲ್ಲದೆ ಕೊಡಗಿನಲ್ಲಿ ವಾಣಿಜ್ಯ ಬೆಳೆಗಳನ್ನು ಬೆಳೆಯಬಹುದಾದ ಹಾಗೂ ಗುಡ್ಡಗಾಡು ಜನಾಂಗಗಳನ್ನು ಅವರು ಕಂಡು ಕೊಂಡಿರಬೇಕು.

೧೦. ಕೊಡಗರಲ್ಲಿ ರಾಜನ ಬಗ್ಗೆ ದ್ವೇಷ ಮೂಡುವಂತೆ ಮಾಡಿದ್ದು ಚೆನ್ನ ಬಸಪ್ಪನ ಪ್ರಕರಣ. ಇದರಲ್ಲಿ ಇಂಗ್ಲೀಷರ ಕೈವಾಡ ಇದ್ದಂತೆ ಕಾಣುತ್ತದೆ. ಚಿಕ್ಕ ವೀರನ ದಿವಾನರುಗಳಾಗಿದ್ದ ಅಪ್ಪಾರಂಡ ಬೋಪು ಮತ್ತು ಚೆಪ್ಪುಡೀರ ಪೊನ್ನಪ್ಪ ಕೊಡವರು ಬ್ರಿಟಿಷರ ವಿರುದ್ಧ ಬಂಡೇಳದಂತೆ ನೋಡಿಕೊಳ್ಳುವಲ್ಲಿ ಯಶಸ್ವಿಯಾದರು. ಅದಕ್ಕಾಗಿ ಬ್ರಿಟಿಷರಿಂದ ಸಾಕಷ್ಟು ಪ್ರತಿಫಲವನ್ನು ಪಡೆದರು.

೧೧. ರೈತ ದಂಡು ಮಂಗಳೂರಿನತ್ತ ಹೋಗುವ ಬದಲು ಮಡಿಕೇರಿಯತ್ತ ಹೋಗುತ್ತಿದ್ದರೂ ಶಾಶ್ವತ ಜಯ ಸಿಗುತ್ತಿರಲಿಲ್ಲ. ಕೊಡಗಿನಲ್ಲಿ ಬ್ರಿಟಿಷರ ವಿರುದ್ಧ ಯಾವುದೇ ಅಸಮಾಧಾನಗಳಿಲ್ಲದ ಕಾರಣ ಕೊಡಗರು ರೈತ ದಂಡಿಗೆ ಬೆಂಬಲ ನೀಡುತ್ತಿರಲಿಲ್ಲ.

೧೨. ಬಂಡಾಯದ ಸೋಲಿಗೆ ಯಾವುದೇ ಒಂದು ಕಾರಣವನ್ನು ಬೆಟ್ಟು ಮಾಡಿ ತೋರಿಸಲು ಸಾಧ್ಯವಾಗುವುದಿಲ್ಲ. ಶಸ್ತ್ರಾಸ್ತ್ರಗಳಿಂದ ಬ್ರಿಟಿಷರನ್ನು ಸೋಲಿಸಲು ಸಾಧ್ಯವಿಲ್ಲವೆನ್ನುವುದು ಟಿಪ್ಪು ಸುಲ್ತಾನ ಮತ್ತು ಕಿತ್ತೂರ ರಾಣಿ ಚೆನ್ನಮ್ಮರ ಪ್ರಕರಣಗಳಲ್ಲಿ ಸಂಶಯಾತೀತವಾಗಿ ಸಾಬೀತಾಗಿತ್ತು.

೧೩. ಅಮರ ಸುಳ್ಯ ಪ್ರದೇಶ ಈಗಲೂ ನಿರ್ಲಕ್ಷ್ಯಕ್ಕೆ ಒಳಗಾಗಿದೆ. ರಾಜಕೀಯ ಇಚ್ಛಾ ಶಕ್ತಿಯ ಕೊರತೆ, ನಾಯಕತ್ವದ ಅಭಾವ ಮತ್ತು ವೈಚಾರಿಕ ಹಿಂದುಳಿಕೆ ಇದಕ್ಕೆ ಕಾರಣವೆನ್ನುವುದು ಸಮೀಕ್ಷೆಯಿಂದ ವ್ಯಕ್ತವಾಗುತ್ತದೆ.

೧೪. ವಕ್ತಾ ಪ್ರೊ. ಕೆ.ಆರ್ ಗಂಗಾಧರ ಕೊಡಗು – ಕೆನರಾ ಬಂಡಾಯಗಾರರ ನೆನಪಿಗಾಗಿ ಮಾಡುವ ಯಾವುದೇ ಕಾರ್ಯಕ್ರಮಗಳಿಂದ ಆರ್ಥಿಕ ಅಭಿವೃದ್ಧಿ ಸಾಧ್ಯವಿಲ್ಲವೆಂದು ಅಭಿಪ್ರಾಯ ಪಟ್ಟಿದ್ದಾರೆ. ಅವರ ಪ್ರಕಾರ ಅಮರ ಸುಳ್ಯ ಅಭಿವೃದ್ಧಿಯಾಗಲು ನಿಷ್ಠಾವಂತ ನಾಯಕರುಗಳು ನಿರಂತರ ಹೋರಾಟ ನಡೆಸುವ ಅಗತ್ಯವಿದೆ.

೧೫. ಈಗ ದ.ಕ ದ ರಾಜಧಾನಿಯಾಗಿರುವ ಮಂಗಳೂರು ಭೌಗೋಳಿಕವಾಗಿ ಜಿಲ್ಲೆಯ ಮಧ್ಯಭಾಗದಲ್ಲಿಲ್ಲ. ಮುಂಬಯಿಯ ನಿಕಟ ಸಂಪರ್ಕದಿಂದಾಗಿ ಮತ್ತು ಜನ ಸಂಖ್ಯೆಯ ಸ್ಫೋಟದಿಂದಾಗಿ ಮಂಗಳೂರಲ್ಲಿ ಅಪರಾಧ ಪ್ರಮಾಣ ವಿಪರೀತ ಹೆಚ್ಚಿದೆ. ಮಂಗಳೂರನ್ನು ಕೇಂದ್ರಾಡಳಿತ ಪ್ರದೇಶವನ್ನಾಗಿಸಿ, ಪುತ್ತೂರು ದ.ಕ ದ ರಾಜಧಾನಿಯನ್ನಾಗಿಸಬೇಕೆಂದು ಕೆಲವು ಚಿಂತಕರು ಅಭಿಪ್ರಾಯ ಪಡುತ್ತಾರೆ.

೧೬. ಕೊಡಗು ಪ್ರತ್ಯೇಕ ರಾಜ್ಯವಾಗಬೇಕೆಂದು ಬಯಸುವವರು ಕೆಲವೇ ಮಂದಿ ಕೊಡವರು. ಇವರು ಕೊಡಗಿನ ಸಾಮಾಜಿಕ ವ್ಯವಸ್ಥೆಯಲ್ಲಿ ಮೇಲಸ್ತರದಲ್ಲಿರುವವರು. ಕೆಲವೇ ಮಂದಿ ಕೊಡವರ ಪ್ರತ್ಯೇಕತಾವಾದಕ್ಕೆ ಎಲ್ಲಾ ಕೊಡಗರ ಬೆಂಬಲ ಇನ್ನೂ ಸಿಕ್ಕಿಲ್ಲ. ಕೊಡಗಿನಲ್ಲಿ ಕನ್ನಡಿಗರ, ತುಳುವರ ಮತ್ತು ಮಲೆಯಾಳಿಗಳ ಪ್ರಮಾಣ ಅಧಿಕವಿರುವುದು ಇದಕ್ಕೆ ಕಾರಣವಾಗಿರಬೇಕು.

೧೭. ಸಂಪಾಜೆ ದೇವಿ ಪ್ರಸಾದರ ಅಧ್ಯಕ್ಷತೆಯಲ್ಲಿ ಹುಟ್ಟಿಕೊಂಡ ಈ ಸಮಿತಿ ೧೯೯೮ ರ ಮಾರ್ಚ್ ೩೦ ರಿಂದ ಏಪ್ರಿಲ್‌ವರೆಗೆ ಸುಳ್ಯದಿಂದ ಮಂಗಳೂರುವರೆಗೆ ಕಾಲ್ನಡಿಗೆ ಜಾಥಾವನ್ನು ಹಮ್ಮಿಕೊಂಡಿತು. ಇದು ೧೮೩೭ ರ ರೈತ ಬಂಡಾಯದ ನೆನಪನ್ನು ಮತ್ತೆ ಮೂಡಿಸುವ ಒಂದು ವಿಶಿಷ್ಟ ಪ್ರಯತ್ನವಾಗಿತ್ತು. ಇದರ ನೆನಪಿಗೆ ಸಂಪಾಜೆಯಲ್ಲಿ ದೇವಿ ಪ್ರಸಾದರು ಅಮರಕ್ರಾಂತಿ ಜಂಗಲ್ ಪಾರ್ಕ್ ಹಾಗೂ ಹುಲಿಕಡಿದ ನಂಜಯ್ಯ ಮ್ಯೂಸಿಯಂ ಅನ್ನು ರೂಪಿಸಿದ್ದಾರೆ.

೧೮. ರೈತರು ಒಂದು ರಾಜಕೀಯ ಪಕ್ಷ ಕಟ್ಟುವ ಬದಲು ಬಲವಾದ ಜಾತ್ಯತೀತ ರೈತ ಸಂಘಟನೆಯನ್ನು ನಿರ್ಮಿಸಿ ಒಂದು ಒತ್ತಡ ಹೇರುವ ಶಕ್ತಿಯಾದರೆ ಅಭಿವೃದ್ಧಿ ಕಾರ್ಯಕ್ರಮಗಳನ್ನು ರೈತ ಪರವನ್ನಾಗಿಸಲು ಸಾಧ್ಯವಿದೆ. ಜಾತಿ ವ್ಯತ್ಯಾಸಗಳನ್ನು ಬಂಡವಾಳವನ್ನಾಗಿ ಮಾಡಿಕೊಂಡು ಅಧಿಕಾರ ಗ್ರಹಣಕ್ಕೆ ಯತ್ನಿಸುವ ರಾಜಕೀಯ ಪಕ್ಷಗಳು ರೈತರು ಒಗ್ಗೂಡದಂತೆ ನೋಡಿಕೊಳ್ಳಲು ಯಶಸ್ವಿಯಾಗಿರುವಂತೆ ಕಂಡು ಬರುತ್ತದೆ.

೧೯. ರೈತರ ಸಮಸ್ಯೆ ಬಗೆ ಹರಿಯಲು ನಿರಂತರ ವಿದ್ಯುತ್ ಒದಗಣೆ, ರೈತರ ಬೆಳೆ ವೈಫಲ್ಯಕ್ಕೆ ವೈಜ್ಞಾನಿಕ ರೀತಿಯ ಪರಿಹಾರ ನೀಡಿಕೆ, ಸಹಕಾರಿ ವ್ಯವಸ್ಥೆಯ ಬಲವರ್ಧನೆ, ಕೃಷಿ ಪುನಶ್ಚೇತನ ಕಾರ್ಯಕ್ರಮಗಳ ಅಳವಡಿಕೆ, ಸಾರ್ವಜನಿಕ ಅಧಿಕಾರಿಗಳ ಪ್ರಾಮಾಣಿಕತೆ ಮತ್ತು ಮಾರುಕಟ್ಟೆ ಮಾಹಿತಿಯ ಲಭ್ಯತೆ ಅಗತ್ಯವೆಂದು ವಕ್ತ ಪ್ರೊ. ಕೆ.ಆರ್ ಗಂಗಾಧರ್ ಅಭಿಪ್ರಾಯ ಪಟ್ಟಿದ್ದಾರೆ.

ಅಧ್ಯಾಯ ೬
ಉಪಸಂಹಾರ

೬.೧ ಅಧ್ಯಯನದ ಸಾರ ಸಂಗ್ರಹ

ಪ್ರಸಕ್ತ ಅಧ್ಯಯನದ ಸಾರವನ್ನು ಹೀಗೆ ಸಂಗ್ರಹಿಸಲಾಗಿದೆ:

❖ ಕ್ರಿ.ಶ. ೧೮೩೭ರ ಕೊಡಗು ಕೆನರಾ ಬಂಡಾಯಕ್ಕೆ ವಸಾಹತುಶಾಹಿ ಆರ್ಥಿಕತೆಯು ದೇಶೀಯ ಆರ್ಥಿಕತೆಯೊಡನೆ ಮುಖಾಮುಖಿಯಾದದ್ದು ಕಾರಣ. ದೇಶೀಯ ಆರ್ಥಿಕತೆಯು ಜೀವನೋಪಾಯಕ್ಕಾಗಿ ಆರ್ಥಿಕ ಚಟುವಟಿಕೆಗಳೆಂದು ಭಾವಿಸಿದರೆ, ವಸಾಹತುಶಾಹಿ ಆರ್ಥಿಕತೆಯು ಲಾಭಗಳಿಕೆಗಾಗಿ ಆರ್ಥಿಕ ಚಟುವಟಿಕೆಗಳೆಂದು ಭಾವಿಸುತ್ತದೆ. ಇವೆರಡು ವಿಭಿನ್ನ ತಾತ್ವಿಕತೆಗಳ ಮುಖಾಮುಖಿಯನ್ನು ಕೊಡಗು – ಕೆನರಾ ಬಂಡಾಯದ ಹಿನ್ನೆಲೆಯಲ್ಲಿ ಗುರುತಿಸಬಹುದು. ದ.ಕ. ವನ್ನು ೧೭೯೯ರಲ್ಲಿ ಬ್ರಿಟಿಷರು ವಶಪಡಿಸಿಕೊಂಡ ತಕ್ಷಣ ವಸಾಹತುಶಾಹಿ ಆರ್ಥಿಕ ನೀತಿಯನ್ನು ಜಿಲ್ಲೆಯಲ್ಲಿ ಅನುಷ್ಠಾನಕ್ಕೆ ತಂದರು. ಕಂದಾಯ ಏರಿಕೆ, ಕಂದಾಯವನ್ನು ನಗದುರೂಪದಲ್ಲಿ ನೀಡಬೇಕೆಂಬ ಆದೇಶ, ಉಪ್ಪು ತಂಬಾಕು ವ್ಯಾಪಾರದ ಸರಕಾರಿ ಏಕಸ್ವಾಮ್ಯ – ಈ ಮೂರು ರೂಪದಲ್ಲಿ ವಸಾಹತುಶಾಹಿ ಆರ್ಥಿಕ ನೀತಿ ಜಿಲ್ಲೆಯಲ್ಲಿ ಜಾರಿಗೆ ಬಂತು. ಕಂದಾಯ ಸಂಗ್ರಹಕ್ಕಾಗಿ ಕಲೆಕ್ಟೋರೇಟು, ತಾಲೂಕು ಕಚೇರಿ ಮತ್ತು ಟ್ರಜರಿಗಳನ್ನು ಸ್ಥಾಪಿಸಲಾಯಿತು. ವಸಾಹತುಶಾಹಿ ಆರ್ಥಿಕ ನೀತಿಯಲ್ಲಿ ಪ್ರಜೆಗಳ ಕಲ್ಯಾಣ ಎಂಬ ಪರಿಕಲ್ಪನೆ ಎಲ್ಲಿಯೂ ಕಂಡುಬರುವುದಿಲ್ಲ. ಈಸ್ಟಿಂಡಿಯಾ ಕಂಪೆನಿಯಲ್ಲಿ ಬಂಡವಾಳ ಹೂಡಿದವರಿಗೆ ಹೆಚ್ಚು ಹೆಚ್ಚು ಲಾಭಾಂಶ ನೀಡುವುದಷ್ಟೇ ವಸಾಹತುಶಾಹಿ ಆರ್ಥಿಕ ನೀತಿಯ ಚರಮಗುರಿಯಾಗಿತ್ತು.

❖ ಕೊಡಗನ್ನು ಕ್ರಿ.ಶ. ೧೮೩೪ರಲ್ಲಿ ವಶಪಡಿಸಿಕೊಂಡ ಮೇಲೆ ಬ್ರಿಟಿಷರು ಸುಳ್ಯ ಮತ್ತು ಪುತ್ತೂರುಗಳ ೧೧೦ ಗ್ರಾಮಗಳನ್ನು ಕೊಡಗಿನಿಂದ ಪ್ರತ್ಯೇಕಿಸಿ ದ. ಕ. ಜಿಲ್ಲೆಗೆ ಸೇರಿಸಿದರು. ಈ ಗ್ರಾಮಗಳಲ್ಲಿ ವಸಾಹತುಶಾಹಿ ಆರ್ಥಿಕ ನೀತಿ ಅಳವಡಿಕೆಯಾಗಿ ರೈತರ ಸಂಕಷ್ಟಗಳು ಅಧಿಕವಾದುದರಿಂದ ಬಂಡಾಯಕ್ಕೆ ನೆಲ ಹದನುಗೊಂಡಿತು. ೧೭೯೯ರ ಬಳಿಕ ಎರಡು ಬಾರಿ ದ.ಕ. ದ ರೈತರು ಕಂದಾಯ ವ್ಯವಸ್ಥೆ ಸುಧಾರಣೆಗಾಗಿ ಸರಕಾರದ ವಿರುದ್ಧ ಪ್ರತಿಭಟಿಸಿದ್ದರು. ಅವುಗಳ ವ್ಯಾಪ್ತಿ ಸಣ್ಣದು ಮತ್ತು ಅವು ಶಸ್ತ್ರಾಸ್ತ್ರ ದಂಗೆಯಾಗಿರಲಿಲ್ಲ. ೧೮೩೭ರದು ಮೂರು ವರ್ಷಗಳ ದೀರ್ಘ ಸಿದ್ಧತೆಯ ತಯಾರಿ. ಅಪರಂಪಾರ, ಕಲ್ಯಾಣ ಸ್ವಾಮಿ ಮತ್ತು ಪುಟ್ಟಬಸವರು ಜಂಗಮ ವೇಷಧಾರಿಗಳಾಗಿ ೧೮೩೪ರಿಂದ ೧೮೩೭ರವರೆಗೆ ಹಂತ ಹಂತವಾಗಿ ಬಂಡಾಯಕ್ಕೆ

ಸಿದ್ಧತೆ ನಡೆಸಿದರು. ಇದಕ್ಕೆ ಮಾರ್ಗದರ್ಶನ ಲಾಹೋರಿನಿಂದ ಕನ್ಯಾಕುಮಾರಿಯವರೆಗೆ ಸಂಚರಿಸಿ ಬ್ರಿಟಿಷರ ವಿರುದ್ಧದ ಜನರ ಆಕ್ರೋಶಗಳನ್ನು ಚೆನ್ನಾಗಿ ಅರಿತಿದ್ದ ಹುಲಿ ಕಡಿದ ನಂಜಯ್ಯನದ್ದು. ನಾಯಕರು ಜಂಗಮ ವೇಷ ಹಾಕಲು ಮತ್ತು ರಾಜಸಂಬಂಧಿ ಎಂಬ ಸುದ್ದಿ ಹಬ್ಬಿಸಲು ಪ್ರಾಯಶಃ ಅವನೇ ಕಾರಣನಾಗಿರಬೇಕು. ಅಮರ ಸುಳ್ಯ ಸೀಮೆಯ ರೈತ ಮುಖಂಡ ಕೆದಂಬಾಡಿ ರಾಮಗೌಡ, ಕೂಜುಗೋಡು ಪಟೇಲ ಕುಟುಂಬ, ಗುಡ್ಡೆಮನೆ ಕುಟುಂಬ, ಕುಡೆಕಲ್ಲು, ಕುಂಚಡ್ಕ ಮತ್ತು ಇನ್ನೂ ಅನೇಕ ಕುಟುಂಬಗಳು ಬಂಡಾಯದ ಮುಂಚೂಣಿಯಲ್ಲಿದ್ದವು. ಪೆರಾಜೆಯ ಊಕಣ್ಣ ಬಂಟ, ಬಂಟವಾಳ ಕಡೆಯವನಾದರೂ ಏಳುಸಾವಿರ ಸೀಮೆಯಲ್ಲಿದ್ದ ವೀರಣ್ಣ ಬಂಟ, ಚಿಕ್ಕವೀರರಾಜನಿಗೆ ಬಂದೂಕು ಶಿಕ್ಷಣ ನೀಡಿದ ಚೆಟ್ಟಿಕುಡಿಯ, ಕರ್ತುಕುಡಿಯರು, ದಂಗೆಯನ್ನು ಜಾತ್ಯತೀತ ವಿದ್ಯಮಾನವನ್ನಾಗಿಸಿದರು. ದಂಗೆಯ ಆರಂಭಿಕ ಯಶಸ್ಸಿಗೆ ಇದು ಬಹುಮುಖ್ಯ ಕಾರಣವಾಯಿತು.

- ❖ ಬಂಡಾಯದ ಬಳಿಕ ಬಂಡುಕೋರರಿಗೆ ದ.ಕ. ಜಿಲ್ಲೆಯನ್ನು ಹೆಚ್ಚು ಕಾಲ ವಶದಲ್ಲಿ ಇಟ್ಟುಕೊಳ್ಳಲಾಗಲಿಲ್ಲ. ದ.ಕ.ದಲ್ಲಿ ಬಂಟವಾಳದ ರಂಗ ಬಾಳಿಗ ಮತ್ತವನ ವರ್ಗದ ವ್ಯಾಪಾರಿಗಳು, ಕಾಸರಗೋಡಿನಲ್ಲಿ ಸುಬ್ರಾಯ ಶಾನುಭೋಗರು, ಮಂಗಳೂರಿನ ಬಂಟರುಗಳು ದಂಗೆಯನ್ನು ದರೋಡೆ ಎಂದು ನಂಬಿಸುವಲ್ಲಿ ಯಶಸ್ವಿಯಾದರು. ಬ್ರಿಟಿಷರಿಂದ ಅತ್ಯಂತ ಹೆಚ್ಚು ಪ್ರಯೋಜನ ಪಡೆದ ಈ ಮೂರು ವರ್ಗಗಳು ತಮ್ಮ ಕಡೆಯವರಿಂದ ಲೂಟಿ, ದರೋಡೆ ನಡೆಸಿದ್ದರೂ ಆಶ್ಚರ್ಯವಿಲ್ಲ. ದ.ಕ.ದ ಪ್ರಬಲ ಪುರೋಹಿತಶಾಹಿ ವರ್ಗ, ಜಮೀನುದಾರಿ ವರ್ಗ ಮತ್ತು ವ್ಯಾಪಾರಿವರ್ಗ ಬಡಪಾಯಿ ರೈತರ ವಿರುದ್ಧ ಆರಂಭಿಕ ಪ್ರತಿಭಟನೆ ತೋರಿದ್ದು, ದಂಗೆ ನಡೆದ ಎರಡೇ ವಾರಗಳಲ್ಲಿ ಕಣ್ಣನೂರು ಮತ್ತು ಮುಂಬಯಿಯಿಂದ ಶಸ್ತ್ರಸಜ್ಜಿತ ಬ್ರಿಟಿಷ್ ಸೈನ್ಯ ಆಗಮಿಸಿದ್ದು ಬಂಡಾಯಗಾರರ ಸೋಲಿಗೆ ಕಾರಣವಾಯಿತು. ಬ್ರಿಟಿಷರ ಆಮಿಷಕ್ಕೆ ಬಲಿಯಾಗಿ ಬಂಡಾಯಗಾರರ ಪ್ರಮುಖ ನಾಯಕರುಗಳನ್ನು ಸ್ಥಳೀಯರು ಹಿಡಿದುಕೊಟ್ಟದ್ದರಿಂದ ಬಂಡಾಯವು ಆಮೂಲಾಗ್ರವಾಗಿ ಕೊನೆಗೊಂಡಿತು.
- ❖ ಕೊಡಗಿನಲ್ಲಿ ಬಂಡಾಯಕ್ಕೆ ಯಾವ ಬೆಂಬಲವೂ ಇರಲಿಲ್ಲ. ಕೊಡಗಿನ ಕೊನೆಯ ದೊರೆ ಚಿಕ್ಕವೀರನಿಗೂ ಬೋಪು ದಿವಾನನಿಗೂ ಇದ್ದ ಮನಸ್ತಾಪ ಕೊಡಗಿನ ಪ್ರಬಲ ಜಮೀನುದಾರಿ ವರ್ಗಕ್ಕೆ ಸೇರಿದ ಕೊಡವರನ್ನು ಬ್ರಿಟಿಷ್ ಪರ ವಾಲುವಂತೆ ಮಾಡಿತು. ೧೮೩೪ರಲ್ಲಿ ಕೊಡಗಿನ ರಾಜನ ಪದಚ್ಯುತಿಯಾದಾಗ ಕೊಡವರಲ್ಲಿ ಅದು ಸಂಚಲನವನ್ನು ಮೂಡಿಸಲಿಲ್ಲ. ದ.ಕ.ದಲ್ಲಿ ವಸಾಹತುಶಾಹಿ ಆರ್ಥಿಕ ನೀತಿಯ ವಿರುದ್ಧವಿದ್ದ ಜನಾಭಿಪ್ರಾಯದ ಅರಿವಿದ್ದ ಈಸ್ಟ್ ಇಂಡಿಯಾ ಕಂಪೆನಿ ಕೊಡಗಿನಲ್ಲಿ ಆ ನೀತಿಯನ್ನು ಅನುಷ್ಠಾನಕ್ಕೆ ತರಲಿಲ್ಲ. ಹಾಗಾಗಿ ಕೊಡಗರು ಬ್ರಿಟಿಷರನ್ನು ವಿರೋಧಿಸಲು ಪ್ರಬಲ ಕಾರಣಗಳೇನೂ ಇರಲಿಲ್ಲ.

❖ ಕೊಡಗನ್ನು ೧೮೩೪ರಲ್ಲಿ ವಶಪಡಿಸಿಕೊಂಡ ಬಳಿಕ ಸುಳ್ಯ ಪುತ್ತೂರುಗಳನ್ನು ಬೇರ್ಪಡಿಸಿ ದ.ಕ.ಕ್ಕೆ ಸೇರಿಸಿ ವಸಾಹತುಶಾಹಿ ಆರ್ಥಿಕ ನೀತಿಯನ್ನು ಅನುಷ್ಠಾನಗೊಳಿಸದಿರುತ್ತಿದ್ದರೆ ೧೮೩೭ರ ರೈತ ಬಂಡಾಯ ಸಂಭವಿಸುತ್ತಿರಲಿಲ್ಲ. ರೈತ ಬಂಡಾಯಕ್ಕೆ ಕೊಡಗು ಮತ್ತು ದಕ್ಷಿಣ ಕನ್ನಡದ ಎಲ್ಲಾ ವರ್ಗಗಳ ಜನರು ಮನಪೂರ್ವಕ ಬೆಂಬಲ ನೀಡಿ ದಂಗೆಯಲ್ಲಿ ಶಸ್ತ್ರ ಸಜ್ಜಿತರಾಗಿ ಪಾಲ್ಗೊಂಡಿದ್ದರೆ ೧೮೩೭ರ ಬಂಡಾಯವನ್ನು ಅಷ್ಟು ಸುಲಭವಾಗಿ ಹತ್ತಿಕ್ಕಲು ಸಾಧ್ಯವಿರಲಿಲ್ಲ.

❖ ಬಂಡಾಯದ ಬಳಿಕ ಅಮರ ಸುಳ್ಯ ಪ್ರದೇಶ ಅಭಿವೃದ್ಧಿಯ ದೃಷ್ಟಿಯಿಂದ ನಿರ್ಲಕ್ಷಿತವಾಯಿತು. ಈಗಲೂ ಇದನ್ನು ಹಿಂದುಳಿದ ಮಲೆನಾಡ ಪ್ರದೇಶವೆಂದು ಕರೆಯಲಾಗುತ್ತದೆ. ಇದು ಮೀಸಲು ಕ್ಷೇತ್ರವಾಗಿದ್ದು ಮೀಸಲಾತಿ ವರ್ಗದಲ್ಲಿ ಬಲಿಷ್ಠ ಮತ್ತು ದೂರದೃಷ್ಟಿಯ ನಾಯಕರ ಕೊರತೆ ಇರುವುದು ಅಮರ ಸುಳ್ಯದ ಅಭಿವೃದ್ಧಿಗೆ ಅಡ್ಡಿಯಾಗಿದೆ. ಒಂದು ಜಿಲ್ಲೆಯ ಒಂದೇ ಪ್ರದೇಶವನ್ನು ಸುದೀರ್ಘ ಕಾಲ ಮೀಸಲಾತಿಗೆ ಒಳಪಡಿಸುವಂತಿಲ್ಲ. ಪರ್ಯಾಯ ವ್ಯವಸ್ಥೆಯಲ್ಲಿ ಎಲ್ಲಾ ಪ್ರದೇಶಗಳಿಗೆ ಮೀಸಲಾತಿ ವರ್ಗಾವಣೆಗೊಳ್ಳಬೇಕು. ಆದರೆ ಹಾಗೆ ಮಾಡಿಸ ತಕ್ಕ ಪ್ರಬಲ ನಾಯಕತ್ವ ಈ ಪ್ರದೇಶದಲ್ಲಿಲ್ಲ. ಅದಕ್ಕೆ ವಸಾಹತುಶಾಹಿ ಆಡಳಿತ ಕಾಲದ ಭೀತಿ ಕಾರಣವಾಗಿರಬೇಕು. ಮಂಗಳೂರು – ಮೈಸೂರುಗಳ ಸಂಪರ್ಕ ಕೊಂಡಿಯಂತಿರುವ ಸುಳ್ಯ ಮತ್ತು ಮಡಿಕೇರಿಗಳಿಗೆ ರೈಲು ಸಂಪರ್ಕವಿಲ್ಲ. ಇವುಗಳ ಮೂಲಕ ಯಾವುದೇ ರಾಷ್ಟ್ರೀಯ ಹೆದ್ದಾರಿ ಹಾದು ಹೋಗುವುದಿಲ್ಲ. ಮಡಿಕೇರಿಗೊಂದು ವಿಮಾನ ನಿಲ್ದಾಣದ ಭರವಸೆ ಹುಸಿಯಾಗಿದೆ. ಕೊಡಗು – ಕೆನರಾ ಬಂಡಾಯದ ಬಳಿಕ ಕೆಲವು ಕೊಡವರಿಗೆ ಪ್ರಶಸ್ತಿ - ಪುರಸ್ಕಾರಗಳು ಲಭಿಸಿದ್ದು ನಿಜ. ಆದರೆ ವಸಾಹತುಶಾಹಿ ಆಡಳಿತವು ಅಮರ ಸುಳ್ಯದ ಮತ್ತು ಕೊಡಗಿನ ಅಭಿವೃದ್ಧಿಗೆ ಮಹತ್ವ ನೀಡಲಿಲ್ಲ. ತನಗೆ ಪ್ರಯೋಜನವಾಗುವ ಕಾರ್ಯಕ್ರಮಗಳನ್ನಷ್ಟೇ ಅನುಷ್ಠಾನಗೊಳಿಸಿತು.

❖ ಕೊಡಗು ಮತ್ತು ಕೆನರಾ ಜಿಲ್ಲೆಗಳಲ್ಲಿನ ಜನರಲ್ಲಿ ಸಾಮಾಜಿಕವಾಗಿ ಮೇಲ್ ಸ್ತರದಲ್ಲಿದ್ದ ಸಮುದಾಯಗಳ ಬಹುತೇಕರು ವಸಾಹತುಶಾಹಿ ಆಡಳಿತದೊಡನೆ ತಮ್ಮನ್ನು ಗುರುತಿಸಿಕೊಂಡರು. ಇವರು ವ್ಯಾಪಾರಿಗಳು ಮತ್ತು ಜಮೀನುದಾರರುಗಳು. ವಸಾಹತುಶಾಹಿ ಆಡಳಿತವು ಇವೆರಡು ವರ್ಗಗಳನ್ನು ತನಗೆ ನಿಕಟವಾಗಿಸಿಕೊಂಡು, ಇವುಗಳ ಹಿತಾಸಕ್ತಿಯನ್ನು ಕಾಯ್ದುಕೊಳ್ಳುವಲ್ಲಿ ತೋರಿದ ಕಾಳಜಿಯಿಂದಾಗಿ ಸಾಮಾಜಿಕ ಮತ್ತು ಆರ್ಥಿಕವಾಗಿ ಬಲಾಢ್ಯವಾಗಿದ್ದ ಸಮುದಾಯಗಳು ಬಂಡಾಯದಿಂದ ವಿಮುಖವಾದವು. ಬಂಡಾಯದಲ್ಲಿ ಪಾಲ್ಗೊಂಡಿದ್ದ ರೈತರಲ್ಲಿ ಮತ್ತು ಭೂರಹಿತರಲ್ಲಿ ಬ್ರಿಟಿಷರನ್ನು ಈ ನೆಲದಿಂದ ಓಡಿಸಿ ತಾವು ಸ್ವತಂತ್ರರಾಗಬೇಕೆಂಬ ಅದಮ್ಯ ಕನಸಿತ್ತು.

ಅದನ್ನು ನನಸು ಮಾಡುವ ರಣತಂತ್ರ, ಯುದ್ಧ ಶಿಕ್ಷಣ, ನೈಪುಣ್ಯ ಮತ್ತು ದೂರ ದೃಷ್ಟಿಗಳಿರಲಿಲ್ಲ. ಅನೇಕರಿಗೆ ಬ್ರಿಟಿಷರ ಸಾಮರ್ಥ್ಯದ ನೈಜ ಅರಿವೂ ಇರಲಿಲ್ಲ. ಬದುಕನ್ನು ಸಾಗಿಸಲು ಸಾಧ್ಯವಾಗದಿರುವಾಗ ಹೋರಾಡಿ ಸಾಯುವುದು ಲೇಸೆಂದು ಇವರಲ್ಲಿ ಬಹುತೇಕರು ಭಾವಿಸಿರಬೇಕು. ಕೊಡಗಿನಲ್ಲಿ ರಾಜಸತ್ತೆಯನ್ನು ಮರಳಿ ಸ್ಥಾಪಿಸುವುದು ಇವರ ಗುರಿಯಾಗಿದ್ದಂತೆ ಕಂಡುಬರುವುದಿಲ್ಲ. ಆದರೆ ರಾಜರ ಕಾಲದ ಮೃದು ಸ್ವರೂಪದ ಕಂದಾಯ ನೀತಿಯನ್ನು ಅನುಷ್ಠಾನಗೊಳಿಸಲು ಅವರು ಬಯಸಿದ್ದರು. ಕೊಡಗು – ಕೆನರಾ ಬಂಡಾಯದಲ್ಲಿ ಭಾವನಾತ್ಮಕ ಅಂಶಗಳು ಹಿನ್ನೆಲೆಗೆ ಸರಿದು ಆರ್ಥಿಕ ಅಂಶಗಳು ಮುಂಚೂಣಿಯಲ್ಲಿ ವಿಜ್ರಂಭಿಸಿದ್ದು ನಿಸ್ಸಂಶಯ.

❖ ಕೊಡಗು ರಾಜ್ಯವಾಗಬೇಕು ಮತ್ತು ಪುತ್ತೂರು ಜಿಲ್ಲೆಯಾಗಬೇಕೆಂಬ ವಾದಕ್ಕೆ ಬಹುತೇಕರ ಬೆಂಬಲ ಇಲ್ಲ. ಒಂದು ರಾಜ್ಯಕ್ಕೆ ಬೇಕಾಗುವಷ್ಟು ಸಂಪನ್ಮೂಲಗಳು ಕೊಡಗಿನಲ್ಲಿ ಸೃಷ್ಟಿಯಾಗುತ್ತಿಲ್ಲವೆನ್ನುವುದು ಪ್ರತ್ಯೇಕತೆಯನ್ನು ವಿರೋಧಿಸುವವರ ಅಭಿಪ್ರಾಯ. ಕೊಡಗನ್ನು ಕೊಡವ ಲ್ಯಾಂಡನ್ನಾಗಿಸುವುದಕ್ಕೆ ಬಹುತೇಕರ ವಿರೋಧವಿದೆ. ಇತಿಹಾಸದುದ್ದಕ್ಕೂ ಪ್ರಭುತ್ವದೊಂದಿಗೆ ಕೈಜೋಡಿಸಿಕೊಂಡೇ ಬಂದು ತಮ್ಮ ಹಿತಾಸಕ್ತಿಗಳನ್ನಷ್ಟೇ ಕಾಯ್ದುಕೊಂಡ ಜಮೀನುದಾರೀ ವರ್ಗ ತಮ್ಮನ್ನು ಶೋಷಿಸಬಹುದೆಂಬ ಭೀತಿ ಇತರ ಸಮುದಾಯಗಳಲ್ಲಿದೆ. ಕೊಡಗು ರಾಜ್ಯವಾದರೆ ಕೊಡವ ಭಾಷೆ ಮಾತ್ರ ಮಹತ್ವ ಪಡೆದುಕೊಂಡು ತಮ್ಮ ಮಾತೃ ಭಾಷೆ ಅಸಡ್ಡೆಗೊಳಗಾಗಿ ತಾವು ಸಾಂಸ್ಕೃತಿಕವಾಗಿ ಬಲಹೀನರಾಗಬಹುದೆಂಬ ಭೀತಿ ಇಲ್ಲಿನ ಬಹು ಸಂಖ್ಯಾತರಾದ ಕನ್ನಡಿಗರಲ್ಲಿದೆ. ಗಡಿಗಳೇ ಇರದಿದ್ದ ಕಾಲದಲ್ಲಿ ಕೊಡಗಿಗೆ ಬಂದು ನೆಲೆಗೊಂಡ ಅನ್ಯಭಾಷಿಕರಲ್ಲೂ ಈ ಭೀತಿ ಇದೆ. ಪ್ರತ್ಯೇಕತಾವಾದವು ಸೋಲಲು ಇದು ಬಹುಮುಖ್ಯವಾದ ಕಾರಣವಾಗಿದೆ.

❖ ವಸಾಹತುಶಾಹೀ ಆಡಳಿತದ ಒಡೆದು ಆಳುವ ನೀತಿಯ ಋಣಾತ್ಮಕ ಪರಿಣಾಮ ಕೊಡಗು – ಕೆನರಾ ಜಿಲ್ಲೆಗಳ ಆರ್ಥಿಕ ಅಭಿವೃದ್ಧಿಯ ಮೇಲಾಗಿದೆ. ಇವೆರಡು ಜಿಲ್ಲೆಗಳು ಇಂದು ಜಾತಿ ಗುಂಪುಗಳಾಗಿ ಛಿದ್ರೀಕರಣಗೊಂಡಿವೆ. ಕ್ರಿ.ಶ. ೧೮೯೨ ರಲ್ಲಿ ಶ್ರೀರಂಗ ಪಟ್ಟಣದಿಂದ ಕೊಡಗಿಗೆ ವಾಪಾಸಾದ ಮತಾಂತರಿತ ಕೊಡವರನ್ನು ಅವರ ಮೂಲ ಕುಟುಂಬಗಳು ಸ್ವಾಗತಿಸುತ್ತಿದ್ದರೆ ಪ್ರಾಯಶಃ ಕೊಡಗಿನಲ್ಲಿ ಕೋಮುಗಲಭೆಗಳು ಸಂಭವಿಸುತ್ತಿರಲಿಲ್ಲ. ಕೊಡವರ ಮತ್ತು ಅರೆಭಾಷಿಕ ಗೌಡರ ನಡುವೆ ಭೇದ ಕಲ್ಪಿಸುವ ಲೀಹಾರ್ಡಿಯ ಕುತಂತ್ರಕ್ಕೆ ಬೋಪು ದಿವಾನ ವಿರೋಧ ಸೂಚಿಸುತ್ತಿದ್ದರೆ ಕೊಡಗಿನಲ್ಲಿ ಈಗಿರುವ ಜಾತಿವಾದ ಕಂಡು ಬರಲು ಸಾಧ್ಯವಿರುತ್ತಿರಲಿಲ್ಲ. ಕೊಡವ ಜಮೀನುದಾರರುಗಳು ಕೊಡವ ಭಾಷೆಯನ್ನಾಡುವ ಎಲ್ಲಾ ಹದಿನೆಂಟು

ಸಮುದಾಯಗಳನ್ನು ತಮ್ಮ ಸಮಾನರೆಂದು ಭಾವಿಸಿ ಹಾಗೆ ನಡೆಸಿಕೊಳ್ಳುತ್ತಿದ್ದರೆ ಕೊಡಗು ಜಾತಿ ಗುಂಪಾಗಿ ಧ್ರುವೀಕರಣಗೊಳ್ಳುತ್ತಿರಲಿಲ್ಲ.

- ಕೊಡಗಿಗಿಂತ ಮೊದಲೇ ದ.ಕ.ದ ಆಡಳಿತವನ್ನು ಕೈಗೆತ್ತಿಕೊಂಡ ಕಂಪೆನಿ ಸರಕಾರ ಟಿಪ್ಪುವನ್ನು ಮತಾಂಧನಂತೆ ಚಿತ್ರಿಸುವಲ್ಲಿ ಸಫಲವಾಯಿತು. ಇಂದು ದಕ್ಷಿಣ ಕನ್ನಡವು ಕೋಮು ಸೂಕ್ಷ್ಮ ಜಿಲ್ಲೆ ಎನಿಸಲು ಅಂದು ಬ್ರಿಟಿಷರು ಬಿತ್ತಿದ ಬೀಜ ಹೆಮ್ಮರವಾದದ್ದು ಕಾರಣ. ದ.ಕ. ದ ಪ್ರಬಲ ಸಮುದಾಯಗಳಾದ ಬ್ರಾಹ್ಮಣ, ಕೊಂಕಣಿ ಮತ್ತು ಬಂಟರುಗಳನ್ನು ತಮ್ಮ ಆಪ್ತರನ್ನಾಗಿ ಮಾಡಿಕೊಂಡ ಬ್ರಿಟಿಷರು ಇಲ್ಲಿನ ಬಹುಸಂಖ್ಯಾತ ಸಮುದಾಯಗಳಾದ ಬಿಲ್ಲವ, ಗೌಡ, ಮೊಗವೀರ ಮತ್ತು ಮಾಪಿಳ್ಳೆಗಳನ್ನು ದೂರ ಇಟ್ಟು ಬಿಟ್ಟಿತು. ಬ್ರಿಟಿಷರಿಗೆ ಹತ್ತಿರವಿದ್ದ ಸಮುದಾಯಗಳು ರಾಜಕೀಯ ಆಶ್ರಯದಲ್ಲಿ ಜಾತಿ ಸಂಘಟನೆಗಳ ಮೂಲಕ ಮತ್ತಷ್ಟು ಪ್ರಬಲರಾದದ್ದು, ಅಲಕ್ಷಿತ ಸಮುದಾಯಗಳು ತಮ್ಮ ತಮ್ಮ ಜಾತಿ ಸಂಘಟನೆಗಳನ್ನು ಪ್ರಬಲಗೊಳಿಸುವಂತೆ ಮಾಡಿತು. ಅದರ ಪರಿಣಾಮವಾಗಿ ಇಂದು ಈ ಜಿಲ್ಲೆಯಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳು ಅವಗಣಿತವಾಗಿ ಭಾವನಾತ್ಮಕ ಅಂಶಗಳು ಮಹತ್ವ ಪಡಕೊಂಡವು.
- ಕೊಡಗು ಮತ್ತು ದ.ಕ. ಜಿಲ್ಲೆಯ ಐತಿಹಾಸಿಕ ಕುರುಹುಗಳು ನಶಿಸಿ ಹೋಗುತ್ತಿವೆ. ಕೊಡಗನ್ನು ಕಟ್ಟಿದ ಹಾಲೇರಿ ರಾಜರುಗಳ ಮೂಲ ಸ್ಥಾನವು ಖಾಸಗಿ ಎಸ್ಟೇಟಾಗಿ ಪರಿವರ್ತನೆಯಾಗಿದೆ. ಕೊಡಗಿನ ಕೋಟೆಯು ಸರಕಾರೀ ಕಛೇರಿಯಾಗಿ ಬಿಟ್ಟಿದೆ. ಮಠ ಮಾನ್ಯಗಳು ಅನುರಕ್ಷಣೆ ಇಲ್ಲದೆ ಪಾಳು ಬಿದ್ದಿವೆ. ಬಂಡಾಯ ಆರಂಭಗೊಂಡ ಸುಳ್ಯದ ಪೂಮಲೆ ಪ್ರದೇಶವನ್ನು, ಬೆಳ್ಳಾರೆ, ಕಾಂತಮಂಗಲ ಮತ್ತು ಶಿಶಿಲದ ಕೋಟೆಗಳು ಪೂರ್ಣವಾಗಿ ಜೀರ್ಣಾವಸ್ಥೆಯಲ್ಲಿವೆ. ಇವುಗಳನ್ನು ಪುನಃ ನಿರ್ಮಾಣ ಮಾಡಿ ಇತಿಹಾಸವನ್ನು ಭವಿಷ್ಯಕ್ಕೆ ದಾಟಿಸುವ ಅಗತ್ಯದ ಬಗ್ಗೆ ಅಧ್ಯಯನ ಕಾಲದಲ್ಲಿ ಬಹುತೇಕ ವಕ್ತೃಗಳು ಕಾಳಜಿ ವ್ಯಕ್ತ ಪಡಿಸಿದ್ದಾರೆ.

ಅಧ್ಯಯನ ಪೂರ್ವದಲ್ಲಿ ಮಾಡಿಕೊಂಡ ಮೂರು ಪೂರ್ವಕಲ್ಪನೆಗಳು ಆಧಾರಸಹಿತ ಸಮರ್ಥಿಸಲ್ಪಟ್ಟಿವೆ. ಕೊಡಗು ಕೆನರಾ ಬಂಡಾಯಕ್ಕೆ ವಸಾಹತುಶಾಹಿ ಆರ್ಥಿಕ ನೀತಿಯು ಉಂಟುಮಾಡಿದ ತಲ್ಲಣಗಳು ಕಾರಣವಾಗಿದ್ದು ಆರ್ಥಿಕ ಶೋಷಣೆಯು ಅತಿಯಾದಾಗ ಜನರು ಬ್ರಿಟಿಷ್ ಸರಕಾರದ ವಿರುದ್ಧ ಶಸ್ತ್ರ ಸಜ್ಜಿತ ಹೋರಾಟಕ್ಕಿಳಿದರು. ೧೮೩೭ರ ಬಂಡಾಯ ವಿಫಲವಾದರೂ ಅದರ ಹಿಂದಿನ ತಾತ್ವಿಕ ನೆಲೆಗಟ್ಟು ದೇಶದಲ್ಲಿ ಬ್ರಿಟಿಷರ ವಿರುದ್ಧ ಇನ್ನಷ್ಟು ಪ್ರತಿಭಟನೆಗಳು ನಡೆಯಲು ಕಾರಣವಾದವು. ೧೮೫೭ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ಇದು ಸ್ಫೂರ್ತಿಯನ್ನು ನೀಡಿದಂತೆ ಕಂಡುಬರುತ್ತದೆ. ೧೯೩೦ರಲ್ಲಿ

ನಡೆದ ಉಪ್ಪಿನ ಸತ್ಯಾಗ್ರಹವು ಕೊಡಗು ಬಂಡಾಯವನ್ನು ನೆನಪಿಗೆ ತಂದರೆ ಅದರಲ್ಲಿ ಯಾವ ಆಶ್ಚರ್ಯವು ಇಲ್ಲ.

೯.೨ ಅಧ್ಯಯನದ ತೀರ್ಮಾನಗಳು

ಕ್ರಿ.ಶ. ೧೮೩೭ ರ ಕೊಡಗು – ಕೆನರಾ ಆರ್ಥಿಕ ಬಂಡಾಯವು ನೀತಿ ನಿರೂಪಣೆಯ ದೃಷ್ಟಿಯಿಂದ ತುಂಬಾ ಮಹತ್ವಪೂರ್ಣವಾದುದು. ವರ್ತಮಾನದ ಸಮಾಜ ಮತ್ತು ಆಡಳಿತಗಳು ರೈತ ಬಂಡಾಯದಿಂದ ಕಲಿಯಬೇಕಾದ ಕೆಲವು ಪಾಠಗಳಿವೆ:

❖ ೧೯ನೇ ಶತಮಾನದ ರೈತರು ವಸಾಹತೀಕರಣದ ಸಮಸ್ಯೆಯನ್ನು ಎದುರಿಸಬೇಕಾಯಿತು. ಆಗಿನದು ಕೃಷಿ ಪ್ರಧಾನ ಅರ್ಥಿಕತೆಯಾಗಿದ್ದದರಿಂದ ಸಹಜವಾಗಿ ವಸಾಹತುಶಾಹಿಯು ಕೃಷಿಯನ್ನು ಏಕೈಕ ಆದಾಯ ಮೂಲವಾಗಿ ಪರಿಗಣಿಸಿತ್ತು. ೨೧ನೇ ಶತಮಾನದ ಭಾರತೀಯ ರೈತರು ಜಾಗತೀಕರಣ ಸಮಸ್ಯೆಯನ್ನು ಎದುರಿಸಬೇಕಾಗಿದೆ. ಇಂದಿನ ಭಾರತೀಯ ಆರ್ಥಿಕತೆಯಲ್ಲಿ ಪ್ರಾಥಮಿಕ ವಲಯಕ್ಕಿಂತ ಹೆಚ್ಚಿನ ಮಹತ್ವ ತೃತೀಯ ವಲಯಕ್ಕೆ ಲಭ್ಯವಾಗಿದೆ.ಆದರೆ ಜಾಗತೀಕರಣದಿಂದ ಹೆಚ್ಚು ತೊಂದರೆಗೊಳಗಾಗದವರು ರೈತರು. ವಸಾಹತುಶಾಹಿ ಆರ್ಥಿಕತೆಯಲ್ಲಿ ಕೂಡಾ ಕಂದಾಯ ವ್ಯವಸ್ಥೆಯ ಮೂಲಕ ರೈತರನ್ನು ಶೋಷಿಸಲಾಯಿತು. ಜಾಗತೀಕರಣದ ಆರ್ಥಿಕತೆಯಲ್ಲಿ ತೃತೀಯ ವಲಯದ ವಿಸ್ತರಣೆಗಾಗಿ ಕೃಷಿಯನ್ನು ಬಲಿಕೊಡಲಾಗುತ್ತಿದೆ. ವಿಶೇಷ ಆರ್ಥಿಕ ವಲಯದ ನಿರ್ಮಾಣ ಇದಕ್ಕೊಂದು ಉದಾಹರಣೆ. ಬಹುತೇಕ ಅಭಿವೃದ್ಧಿಪರ ಕಾರ್ಯಕ್ರಮಗಳೆಲ್ಲವೂ ರೈತ ವಿರೋಧಿಯಾಗಿರುತ್ತವೆ. ಕೈಗಾರಿಕೆಗಳಿಗೆ ಭೂಮಿ ನೀಡಿಕೆ, ವಿಮಾನ ನಿಲ್ದಾಣಗಳಿಗೆ ಭೂಮಿ ನೀಡಿಕೆ, ಕಾರಿಡಾರ್ ರಸ್ತೆ ನಿರ್ಮಾಣಗಳಿಗೆ ಭೂಮಿ ನೀಡಿಕೆ – ಇತ್ಯಾದಿ ಸಂದರ್ಭಗಳಲ್ಲಿ ಅಗತ್ಯಕ್ಕಿಂತ ಎಷ್ಟೋ ಹೆಚ್ಚು ಭೂಮಿಯನ್ನು ರೈತರಿಂದ ಬಲಾತ್ಕಾರವಾಗಿ ವಶಪಡಿಸಿಕೊಳ್ಳಲಾಗುತ್ತದೆ. ರಿಯಲ್ ಎಸ್ಟೇಟ್ ಉದ್ಯಮವು ಒಂದು ಲಾಭಬಡುಕ ದಂಧೆಯಾಗಿ ಪರಿವರ್ತನೆಗೊಂಡಿದೆ. ವಸಾಹತು ಆಡಳಿತ ಕಾಲದಿಂದ ಇಂದಿನವರೆಗೆ ಪ್ರಗತಿ ಚಕ್ರಕ್ಕೆ ಸಿಲುಕಿ ನಲುಗಿದ್ದು ಕೃಷಿ ವಲಯ ಮತ್ತು ಅದನ್ನು ನಂಬಿಕೊಂಡಿರುವ ರೈತರು. ಕೃಷಿಯನ್ನು ಮತ್ತು ರೈತರ ಬದುಕನ್ನು ಬಲಿತೆಗೆದುಕೊಳ್ಳದೆ ಆಡಳಿತಕ್ಕೆ ಅಭಿವೃದ್ಧಿ ಸಾಧಿಸಲು ಸಾಧ್ಯವಾಗಬೇಕೆಂಬುದು ಕೊಡಗು ಕೆನರಾ ಬಂಡಾಯ ಕಲಿಸುವ ಬಹಳ ಮುಖ್ಯವಾದ ಪಾಠವಾಗಿದೆ.

❖ ರೈತರ ಹೋರಾಟಗಳು ವಿಫಲವಾಗುವುದೇಕೆ ಎಂಬ ಪ್ರಶ್ನೆಯನ್ನು ಕೊಡಗು – ಕೆನರಾ ಆರ್ಥಿಕ ಬಂಡಾಯವು ಎತ್ತುತ್ತದೆ. ೧೮೧೧ರ, ೧೮೩೧ ರ ಮತ್ತು ೧೮೩೭ ರ ರೈತ ಬಂಡಾಯಗಳು ವಿಫಲವಾಗಿದ್ದವು. ಸಾಂಸ್ಕೃತಿಕ ಶ್ರೇಣೀಕರಣವು ರೈತ ಬಂಡಾಯಗಳನ್ನು ವಿಫಲಗೊಳಿಸುತ್ತವೆ. ಜಾಗತೀಕರಣದ ಇಂದಿನ ಸಂದರ್ಭದಲ್ಲೂ ನಮ್ಮ ಮನಸ್ಸುಗಳು ಸಾಂಸ್ಕೃತಿಕ

ಶ್ರೇಣೀಕರಣದಿಂದಾಗಿ ಛಿದ್ರ ಛಿದ್ರವಾಗಿದೆ. ಆರ್ಥಿಕ ಉದಾರೀಕರಣ ಬಗ್ಗೆ ಮಾತಾಡುವ ನಾವು ಸಾಂಸ್ಕೃತಿಕ ಉದಾರೀಕರಣದ ಬಗ್ಗೆ ಮಾತಾಡುತ್ತಿಲ್ಲ. ಇಂದು ವಿಶ್ವವ್ಯಾಪಾರ ಸಂಘಟನೆಯ ಒಪ್ಪಂದಗಳಿಂದಾಗಿ ರೈತರ ಭವಿಷ್ಯ ಮಂಕಾಗುತ್ತಿರುವಾಗ ನಡೆಯುತ್ತಿರುವ ಹೋರಾಟಗಳು ಕೂಡಾ ಯಶಸ್ಸನ್ನು ಕಾಣುತ್ತಿಲ್ಲ. ಇದಕ್ಕೆ ರೈತರು ಇತಿಹಾಸದಿಂದ ಪಾಠ ಕಲಿಯದಿರುವುದು ಬಹುಮುಖ್ಯ ಕಾರಣವಾಗಿದೆ. ೧೮೩೭ ರ ರೈತ ಬಂಡಾಯದ ವೈಫಲ್ಯದ ಹಿಂದೆ ಮೇಲ್ಜಾತಿ, ಮತ್ತು ಮೇಲ್ವರ್ಗದವರ ಅಸಹಕಾರದ ಕತೆಯಿದೆ. ಇಂದು ರೈತರು ಜಾತಿಗಳಾಗಿ ಹಂಚಿಹೋಗಿದ್ದಾರೆ. ಜಾತಿ ಸಂಘಟನೆಗಳು ಪ್ರಬಲವಾಗಿ ಅಭಿವೃದ್ಧಿ ಕಾರ್ಯಕ್ರಮಗಳು ತೆರೆಮರೆಗೆ ಸರಿದು ಅರ್ಥಹೀನ ಆಚರಣೆಗಳು ವೈಭವೀಕರಣಗೊಳ್ಳುತ್ತವೆ. ನಮ್ಮ ರೈತರಲ್ಲಿ ಸಂಘಟನೆಯ ಕೊರತೆ ಇರುವುದಕ್ಕೆ ಇದುವೇ ಕಾರಣ. ೧೮೩೭ ರ ರೈತ ಬಂಡಾಯವು ರೈತರು ಜಾತಿ, ಕೋಮು, ಪಕ್ಷಭೇದ ಮರೆತು ಸಂಘಟಿತ ಹೋರಾಟದಿಂದ ತಮಗಾಗುತ್ತಿರುವ ಅನ್ಯಾಯವನ್ನು ಸರಿಪಡಿಸಿಕೊಳ್ಳಬೇಕೆನ್ನುವ ತೀರ್ಮಾನಕ್ಕೆ ನಮ್ಮನ್ನು ತಂದು ನಿಲ್ಲಿಸುತ್ತದೆ.

❖ ೧೮೩೭ ರ ಹೋರಾಟ ರೈತ ದಂಗೆಯಾದರೂ ಅದರ ನಾಯಕತ್ವ ಧಾರ್ಮಿಕ ವ್ಯಕ್ತಿಗಳ ಕೈಯಲ್ಲಿದ್ದಂತೆ ಹೊರನೋಟಕ್ಕೆ ಕಂಡುಬರುತ್ತದೆ. ಅಪರಂಪಾರ, ಕಲ್ಯಾಣ ಸ್ವಾಮಿ ಮತ್ತು ಪುಟ್ಟಬಸವ ಎಷ್ಟರ ಮಟ್ಟಿಗೆ ಧಾರ್ಮಿಕ ವ್ಯಕ್ತಿಗಳಾಗಿದ್ದರು ಎನ್ನುವುದು ಇನ್ನೊಂದು ಸಂಶೋಧನೆಯ ವಿಷಯ. ಆದರೆ ವಸಾಹತುಶಾಹಿ ಶಕ್ತಿಗಳನ್ನು ಎದುರಿಸಲು ಧಾರ್ಮಿಕ ನಾಯಕರುಗಳ ಬೆಂಬಲದ ಅಗತ್ಯವಿದೆ. ರೈತರೊಡನೆ ಪುರೋಹಿತ ಶಾಹಿ ವರ್ಗವೂ ಸೇರಿಕೊಂಡರೆ ವಸಾಹತುಶಕ್ತಿಯನ್ನು ಸಮರ್ಥವಾಗಿ ಎದುರಿಸಲು ಸಾಧ್ಯವಿದೆ ಎಂಬ ಸಂದೇಶವನ್ನು ೧೮೩೭ರ ಬಂಡಾಯ ಸಾರುತ್ತದೆ. ಪ್ರಾಯಶ: ಪ್ರಚ್ಛನ್ನ ವೇಷದ ಜಂಗಮರ ನೇತೃತ್ವ ಅಲ್ಲದಿದ್ದರೆ ಕೊಡಗು ಕೆನರಾ ಬಂಡಾಯ ಅಷ್ಟು ವಿಸ್ತರಿಸಲು ಸಾಧ್ಯವಿರಲಿಲ್ಲ. ಇಂದು ಮುಖ್ಯವಾಗಿ ಕರ್ನಾಟಕದಲ್ಲಿ ಆಳುವವರೊಡನೆ ಧಾರ್ಮಿಕ ನಾಯಕರುಗಳು ಮೈತ್ರಿ ಮಾಡಿಕೊಂಡಂತಿದೆ. ಆದರೆ ಆಳುವವರು ಮಾಡುತ್ತಿರುವ ಅನ್ಯಾಯ, ಅನಾಚಾರಗಳನ್ನು ತಡೆಗಟ್ಟಲು ಧಾರ್ಮಿಕ ಶಕ್ತಿಗಳು ಮನಸ್ಸು ಮಾಡುತ್ತಿಲ್ಲ. ಬದಲಾಗಿ ಆಳುವವರ ಅನ್ಯಾಯ, ಭ್ರಷ್ಟಾಚಾರಗಳಿಗೆ ನೈತಿಕ ಬೆಂಬಲ ಕೊಡುವಂತೆ ಭಾಸವಾಗುತ್ತಿದೆ. ೧೮೩೭ರಲ್ಲಿ ರೈತರೊಡನೆ ಸ್ವಾತಂತ್ರ್ಯ ಪ್ರಿಯರು ಧಾರ್ಮಿಕ ಧುರೀಣರಂತೆ ನಟಿಸಿ ವಸಾಹತುಶಾಹಿಯನ್ನು ಯಶ್ವಸಿಯಾಗಿ ಎದುರಿಸಿದರು. ಇಂದಿನ ಧಾರ್ಮಿಕ ಮುಖಂಡರು ರೈತರೊಡನೆ ಸೇರಿಕೊಂಡು ಜಾಗತೀಕರಣವೆಂಬ ವಾಣಿಜ್ಯ ವಸಾಹತುವಾದವನ್ನು ಪ್ರಾಮಾಣಿಕವಾಗಿ ಎದುರಿಸಬೇಕಾಗಿದೆ ಎಂಬ ತೀರ್ಮಾನಕ್ಕೆ ಕೊಡಗು - ಕೆನರಾ ಬಂಡಾಯ ನಮ್ಮನ್ನು ಮುಟ್ಟಿಸುತ್ತದೆ.

❖ ೧೮ ಮತ್ತು ೧೯ನೇ ಶತಮಾನಗಳ ವಸಾಹತುವಾದವು ಆರ್ಥಿಕ ಮತ್ತು ರಾಜಕೀಯ ಆಯಾಮಗಳನ್ನು ಒಳಗೊಂಡಿತ್ತು. ವ್ಯಾಪಾರದ ಕಾರಣಕ್ಕಾಗಿ ಅನ್ಯದೇಶದ

ಒಳಹೊಕ್ಕು ಸೈನಿಕ ಶಕ್ತಿಯ ಮೂಲಕ ಅವುಗಳನ್ನು ತಮ್ಮ ರಾಜಕೀಯ ಆಡಳಿತಕ್ಕೆ ಒಳಪಡಿಸುವುದು ವಸಾಹತುಶಾಹಿ ಶಕ್ತಿಗಳನ್ನು ಬೆಂಬಲಿಸುತ್ತಿದ್ದ ಯುರೋಪಿನ ರಾಷ್ಟ್ರಗಳ ಉದ್ದೇಶವಾಗಿತ್ತು. ೨೦ನೇ ಶತಮಾನದ ಕೊನೆಯ ಗ್ಯಾಟ್ ಒಪ್ಪಂದಗಳು, ವಿಶ್ವ ವ್ಯಾಪಾರ ಸಂಘಟನೆಯ ರಚನೆ ಮತ್ತು ಜಾಗತೀಕರಣವೆಂಬ ಪರಿಕಲ್ಪನೆ ಸೈನಿಕ ಬಲವಿಲ್ಲದೆ ವಾಣಿಜ್ಯ ಶಕ್ತಿಯನ್ನು ಪ್ರಯೋಗಿಸಿ ಹಿಂದುಳಿದ ದೇಶಗಳನ್ನು ತಮ್ಮ ಮುಷ್ಠಿಯಲ್ಲಿ ಇಟ್ಟುಕೊಳ್ಳಲು ಅಮೇರಿಕಾದಂತಹ ಬಲಶಾಲೀ ದೇಶಗಳು ಮಾಡಿಕೊಂಡ ವ್ಯವಸ್ಥೆಯಾಗಿದೆ. ೧೮೩೭ ರ ಬಂಡಾಯವು ರೈತರ ಮತ್ತು ಧಾರ್ಮಿಕ ನಾಯಕರ ಸಹಭಾಗಿತ್ವದಿಂದ ನಡೆಯಿತು. ಇಂದಿನ ರಾಜಕಿಯೇತರ ನವವಸಾಹತು ವಾಣಿಜ್ಯವಾದವನ್ನು ಎದುರಿಸುವ ಶಕ್ತಿಗಳೇ ಇಲ್ಲವಾಗಿವೆ. ಪ್ರತಿಭಟನೆ ಇಲ್ಲದ ಪರಿಸ್ಥಿತಿಯಲ್ಲಿ ನವ ವಸಾಹತುಶಾಹಿ ವಾಣಿಜ್ಯವಾದ ಬಹಳ ಸುಲಭವಾಗಿ ಪ್ರಸರಣಗೊಳ್ಳುತ್ತದೆ. ಅದನ್ನು ತಡೆಗಟ್ಟಲು ಎಲ್ಲ ರೈತರು ತಮ್ಮ ಪೂರ್ವಗ್ರಹಗಳನ್ನು ಬಿಟ್ಟು ಪ್ರಬಲ ಸಂಘಟನೆಯನ್ನು ಮಾಡಿಕೊಂಡು ರಾಜಕೀಯ ಶಕ್ತಿಯಾಗಿ ಹೊರಹೊಮ್ಮಬೇಕು. ಆಗ ರೈತಪರ ಅಭಿವೃದ್ಧಿ ಚಟುವಟಿಕೆಗಳಿಂದ ಆರ್ಥಿಕ ಬಲಾಢ್ಯ ಭಾರತದ ನಿರ್ಮಾಣವಾಗುತ್ತದೆ. ರೈತರು ದೇಶದ ಬೆನ್ನೆಲುಬು ಎಂಬ ಮಾತು ನಿಜವಾಗುತ್ತದೆ.

❖ ಕೊಡಗು ಮತ್ತು ಸುಳ್ಯದ ಮೂಲಕ ರಾಷ್ಟ್ರೀಯ ಹೆದ್ದಾರಿ ಹಾದು ಹೋಗುವುದಿಲ್ಲ. ಮಾಣಿ – ಮೈಸೂರು ರಾಜ್ಯ ಹೆದ್ದಾರಿಯನ್ನು ರಾಷ್ಟ್ರೀಯ ಹೆದ್ದಾರಿಯಾಗಿ ಪರಿವರ್ತಿಸಬೇಕಿದೆ. ಮಂಗಳೂರು – ಮಡಿಕೇರಿ – ಮೈಸೂರುಗಳ ನಡುವೆ ರೈಲು ಸಂಪರ್ಕಕ್ಕೆ ೨೦೦೯ ರ ರೈಲ್ವೆ ಬಜೆಟ್ಟಿನಲ್ಲಿ ಹಸಿರು ನಿಶಾನೆ ತೋರಿಸಲಾಗಿತ್ತು. ದ.ಕ. ಮತ್ತು ಕೊಡಗಿನ ಸಂಸದರು ಪ್ರಾಮಾಣಿಕ ಪ್ರಯತ್ನದ ಮೂಲಕ ಈ ರೈಲು ಹಾದಿಯನ್ನು ಸಾಕಾರಗೊಳಿಸಬೇಕಾಗಿದೆ. ಮಡಿಕೇರಿಯಲ್ಲಿ ಒಂದು ವಿಮಾನ ನಿಲ್ದಾಣ ಸ್ಥಾಪಿಸಿ ಮಂಗಳೂರು – ಮೈಸೂರುಗಳೊಡನೆ ಸುಲಭ ಸಂಪರ್ಕ ಸಾಧಿಸುವ ಅಗತ್ಯವಿದೆ.

❖ ಜಾತಿಗುಂಪುಗಳಾಗಿ ಒಡೆದು ಹೋಗಿರುವ ಇವೆರಡು ಜಿಲ್ಲೆಗಳ ವಿವಿಧ ಸಮುದಾಯಗಳು ಸಾಮಾಜಿಕವಾಗಿ ಧ್ರುವೀಕರಣಗೊಳ್ಳಬೇಕಿದೆ. ಸಾಂಸ್ಕೃತಿಕ ವಿಭಿನ್ನತೆ ಇಲ್ಲದ ಸಮುದಾಯಗಳು ಜಾತಿ ಪ್ರತ್ಯೇಕತೆ ಉಳಿಸಿಕೊಳ್ಳಬೇಕಾದ ಯಾವ ಅಗತ್ಯವೂ ಇಲ್ಲ. ದ.ಕ.ದ ಕೆಲವು ಸಮುದಾಯಗಳಲ್ಲಿ ಲಿಂಗಾನುಪಾತ ಸ್ತ್ರೀಯರ ವಿರುದ್ಧವಿರುವುದರಿಂದ ಅಂತಹ ಸಮುದಾಯಗಳು ಅನ್ಯ ಸಮುದಾಯಗಳಿಂದ ಸಂಬಂಧ ಬೆಳೆಸಿಕೊಳ್ಳುತ್ತಿವೆ. ಸಾಮಾಜಿಕವಾಗಿ ಮೇಲ್ ಸ್ತರದಲ್ಲಿರುವ ಸಮುದಾಯಗಳು ಸಾಮಾಜಿಕ ಧ್ರುವೀಕರಣದ ನಾಯಕತ್ವ ವಹಿಸಿಕೊಂಡರೆ ಈ ಜಿಲ್ಲೆಗಳು ಕೋಮು ಸಂಘರ್ಷದಿಂದ ಮತ್ತು ಜಾತಿ ಕಲಹಗಳಿಂದ ಮುಕ್ತಿ ಹೊಂದಲಿವೆ.

❖ ಕೊಡಗನ್ನು ಪ್ರತ್ಯೇಕ ರಾಜ್ಯವನ್ನಾಗಿಸುವ ಮತ್ತು ದ.ಕ.ವನ್ನು ಒಡೆದು ಪುತ್ತೂರು ಜಿಲ್ಲೆಯನ್ನಾಗಿಸುವ ಪ್ರಯತ್ನಗಳ ಹಿಂದಿರುವ ಹಿತಾಸಕ್ತಿಗಳು ಗೆಲುವನ್ನು ಸಾಧಿಸದಂತೆ ನೋಡಿಕೊಳ್ಳಬೇಕಿದೆ. ಕೊಡಗಿನಲ್ಲಿ ಕೊಡವರೇ ಪ್ರಬಲರಾಗಿರುವುದರಿಂದ ಶೋಷಣೆಯ ಕಾರಣವನ್ನೊಡ್ಡಿ ಪ್ರತ್ಯೇಕ ರಾಜ್ಯವನ್ನು ಕೇಳುವಂತಿಲ್ಲ. ಆದರೆ ದ.ಕ. ಜಿಲ್ಲೆಯ ಆಡಳಿತ ಸುಳ್ಯ ಮತ್ತು ಬೆಳ್ತಂಗಡಿ ತಾಲೂಕುಗಳನ್ನು ನಿರ್ಲಕ್ಷಿಸುತ್ತಿದೆ ಎಂಬ ಅಭಿಪ್ರಾಯ ಜನಸಾಮಾನ್ಯರಲ್ಲಿದೆ. ಇದನ್ನು ಹೋಗಲಾಡಿಸಿ ಪ್ರತ್ಯೇಕತಾವಾದಕ್ಕೆ ಬೆಲೆ ಬಾರದಂತೆ ನೋಡಿಕೊಳ್ಳಬೇಕಿದೆ.

❖ ಇತಿಹಾಸದ ಒಂದು ಪ್ರಮುಖ ಘಟನೆಯಾದ ಕೊಡಗು – ಕೆನರಾ ಬಂಡಾಯದ ನೆನಪಿಗೆ ಬೆಳ್ಳಾರೆ ಕೋಟೆಯಲ್ಲಿ ಒಂದು ಸ್ಮಾರಕ ಮತ್ತು ಗ್ರಂಥಾಲಯ ನಿರ್ಮಾಣವಾಗಬೇಕಿದೆ. ಕೊಡಗಿನ ಮತ್ತು ದಕ್ಷಿಣ ಕನ್ನಡದ ಇತಿಹಾಸ ಪ್ರೌಢ ಮತ್ತು ಸ್ನಾತಕ ಹಂತದಲ್ಲಿ ಪಠ್ಯವಾಗಿ ಅನುಷ್ಠಾನಗೊಳ್ಳಬೇಕಿದೆ. ಪಾಶ್ಚಾತ್ಯ ಸಂಸ್ಕೃತಿಯ ಅಂಧಾನುಕರಣೆಯ ಅಬ್ಬರದ ಅಲೆಗಳಲ್ಲಿ ಸ್ಥಳೀಯ ಐತಿಹಾಸಿಕ ನಾಯಕರ ಸ್ಮರಣೆಯ ಮೂಲಕ ಸಾಂಸ್ಕೃತಿಕ ಅನನ್ಯತೆಗಾಗಿ ಪ್ರಯತ್ನಿಸಬೇಕಾಗಿದೆ. ರೈತ ಸಂಸ್ಕೃತಿಗೆ ಮತ್ತೆ ಮನ್ನಣೆ ದೊರೆಯಬೇಕಾಗಿದೆ.

ಅನುಬಂಧ : ೧

ಕೊಡಗು ಕೆನರಾ ಆರ್ಥಿಕ ಬಂಡಾಯ ೧೮೩೭

ಪ್ರಶ್ನಾವಳಿ

೧. ವಕ್ತೃವಿನ ಹೆಸರು :

೨. ವಯಸ್ಸು /ವಿದ್ಯಾರ್ಹತೆ /ವೃತ್ತಿ :

೩. ಜಾತಿ/ಧರ್ಮ [ಕಡ್ಡಾಯವಲ್ಲ] :

೪. ನಿಮಗೆ ೧೮೩೭ ರ ಕೊಡಗು ಕೆನರಾ ಆರ್ಥಿಕ ಬಂಡಾಯದ ಬಗ್ಗೆ ಯಾವ ಮೂಲದಿಂದ ತಿಳಿದದ್ದು? :

* ಲೇಖನಗಳಿಂದ ☐ * ಪುಸ್ತಕಗಳಿಂದ ☐ * ಹಿರಿಯರಿಂದ ☐

* ಮಾಧ್ಯಮಗಳಿಂದ ☐ * ಇತರ ಮೂಲ [ಹೆಸರಿಸಿ]. ನಾಟಕ/ಕಾಲ್ನಡಿಗೆ ಜಾಥಾ/ಬೀದಿನಾಟಕ

೫. ಈ ಬಂಡಾಯದಲ್ಲಿ ನಿಮ್ಮ ಹಿರಿಯರು ಯಾರಾದರೂ ಪಾಲ್ಗೊಂಡಿದ್ದಾರೆಯೇ ?

* ಹೌದು ☐ * ಇಲ್ಲ ☐ * ಗೊತ್ತಿಲ್ಲ ☐ * ಹೌದು ಎಂದಾದರೆ ವಿವರ.

೬ ಸುಳ್ಯ ಪುತ್ತೂರುಗಳ 110 ಗ್ರಾಮಗಳನ್ನು ಕೊಡಗಿನಿಂದ ಬೇರ್ಪಡಿಸದಿರುತ್ತಿದ್ದರೆ ಈ ಬಂಡಾಯ ಸಂಭವಿಸುತ್ತಿತ್ತೆ ?

ಹೌದು ☐ ಇಲ್ಲ ☐ ಗೊತ್ತಿಲ್ಲ ☐

೭ ಈ ಬಂಡಾಯಕ್ಕೆ ಪ್ರಮುಖ ಕಾರಣವೇನು?

* ಕೊಡಗು ರಾಜನ ಪದಚ್ಯುತಿ ☐ * ಸ್ವಾತಂತ್ರ್ಯ ಪ್ರೇಮ ☐

* ಬ್ರಿಟಿಷರ ಕಂದಾಯ ವ್ಯವಸ್ಥೆ ☐ * ಎಲ್ಲವೂ ☐

೮ ನಿಮ್ಮ ತಿಳುವಳಿಕೆ ಪ್ರಕಾರ ಈ ಬಂಡಾಯದ ಹಿಂದಿನ ಪ್ರೇರಕ ವ್ಯಕ್ತಿ ಯಾರು ?

* ಸ್ವಾಮಿ ಅಪರಂಪಾರ ☐ * ಕಲ್ಯಾಣ ಸ್ವಾಮಿ ☐ *ಪುಟ್ಟ ಬಸವ ☐

* ಹುಲಿ ಕಡಿದ ನಂಜಯ್ಯ ☐ * ಕೆದಂಬಾಡಿ ರಾಮ ಗೌಡ ☐

* ಸರಿಯಾಗಿ ಗೊತ್ತಿಲ್ಲ ☐

೯. ಕೊಡಗನ್ನು ೧೮೩೪ರಲ್ಲಿ ಬ್ರಿಟಿಷರು ವಶಪಡಿಸಿಕೊಳ್ಳಲು ಕಾರಣವೇನು?

* ಚಿಕ್ಕ ವೀರನ ಉದ್ಧಟತನ ☐ * ಚೆನ್ನಬಸಪ್ಪನ ರಾಜದ್ರೋಹ ☐

* ಬೋಪು ದಿವಾನನ ಪಿತೂರಿ ☐ * ವಸಾಹತು ವಿಸ್ತರಣೆ ಹಂಬಲ ☐

೧೦ ಟಿಪ್ಪು ಸತ್ತ ಕೂಡಲೇ ದ.ಕ.ವನ್ನು ವಶಪಡಿಸಿಕೊಂಡ ಬ್ರಿಟಿಷರು ಕೊಡಗನ್ನು ವಶಪಡಿಸಿಕೊಳ್ಳಲು ೧೮೩೪ ರ ವರೆಗೆ ಕಾದರೇಕೆ?

* ಬಂಡಾಯದ ಭೀತಿ ☐ * ವಸಾಹತು ಶಾಹಿ ತಂತ್ರ ☐

* ಆಶ್ರಿತ ರಾಜ್ಯ ಪರಿಕಲ್ಪನೆ ☐ * ಕಡಿಮೆ ಕಂದಾಯ ☐

೧೧. ಚಿಕ್ಕ ವೀರರಾಜ ತನ್ನ ದೊಡ್ಡಪ್ಪ ಈಸ್ಟ್ ಇಂಡಿಯಾ ಕಂಪೆನಿಯಲ್ಲಿರಿಸಿದ್ದ ಎಂಟೂವರೆ ಲಕ್ಷ ಡಿಪಾಸಿಟ್ಟನ್ನು ಹಿಂದಕ್ಕೆ ಕೇಳದಿರುತ್ತಿದ್ದರೆ ಬ್ರಿಟಿಷರು ಅವನನ್ನು ಪದಚ್ಯುತಿಗೊಳಿಸುತ್ತಿದ್ದರೆ ?

* ಹೌದು ☐ * ಇಲ್ಲ ☐ * ಗೊತ್ತಿಲ್ಲ ☐

೧೨. ದ.ಕ. ದಲ್ಲಿದ್ದ ವಸಾಹತು ಶಾಹಿ ಕಂದಾಯ ನೀತಿಯನ್ನು ಬ್ರಿಟಿಷರು ಕೊಡಗಿನಲ್ಲಿ ಅನುಷ್ಠಾನಗೊಳಿಸಲಿಲ್ಲವೇಕೆ ?

* ಬಂಡಾಯದ ಭೀತಿ ☐ * ಜನರ ಪ್ರೀತಿ ಗಳಿಕೆ ☐

*ಕಂದಾಯ ಹೆಚ್ಚಾಗುವ ಅಸಂಭವನೀಯತೆ ☐ * ಗೊತ್ತಿಲ್ಲ ☐

೧೩. ಕೊಡಗಿನಲ್ಲಿ ದ. ಕ. ಜಿಲ್ಲೆಯಲ್ಲಿದ್ದಂತಹ ವಸಾಹತು ನೀತಿ ಅನುಷ್ಠಾನಗೊಳ್ಳುತ್ತಿದ್ದರೆ ಕೊಡಗರು ಬಂಡೇಳುತ್ತಿದ್ದರೆ?

* ಹೌದು ☐ * ಇಲ್ಲ ☐ * ಗೊತ್ತಿಲ್ಲ ☐

ಇಲ್ಲವೆಂದಾದರೆ ಯಾಕೆ?

* ಇಂಗ್ಲೀಷರ ಮಿಲಿಟರಿ ಬಗ್ಗೆ ಪ್ರೀತಿ ☐ * ರಾಜನ ಬಗ್ಗೆ ದ್ವೇಷ ☐

* ಒಗ್ಗಟ್ಟಿನ ಕೊರತೆ ☐

೧೪. ಕೊಡಗು–ಕೆನರಾ ಬಂಡಾಯ ಆರಂಭದಲ್ಲಿ ಯಶಸ್ಸು ಕಾಣಲು ಕಾರಣ.

* ಸಮರ್ಥ ನಾಯಕತ್ವ ☐ * ಸ್ವಾತಂತ್ರ್ಯ ಪ್ರೇಮ ☐

* ರೈತರ ಬದ್ಧತೆ ☐ * ಕಲ್ಯಾಣ ಸ್ವಾಮಿಯ ಇಸ್ತಿಹಾರು ☐

೧೫. ಕೊಡಗು– ಕೆನರಾ ಬಂಡಾಯದ ನಾಯಕತ್ವ ರಾಜ ಕುಟುಂಬದವರಲ್ಲಿರುತ್ತಿದ್ದರೆ ಬಂಡಾಯ ಯಶಸ್ವಿಯಾಗುತ್ತಿತ್ತೆ?

* ಹೌದು ☐ * ಇಲ್ಲ ☐ * ಗೊತ್ತಿಲ್ಲ ☐

೧೬ ರೈತದಂಡು ಮಂಗಳೂರಿನ ಬದಲು ಮಡಿಕೇರಿಗೆ ಹೋಗುತ್ತಿದ್ದರೆ ಕೊಡಗಿನ ವಿಮೋಚನೆ ಸಾಧ್ಯವಿತ್ತೇ?

* ಹೌದು ☐ * ಇಲ್ಲ ☐ * ಗೊತ್ತಿಲ್ಲ ☐

೧೭ ರೈತ ಬಂಡಾಯ ಅಂತಿಮವಾಗಿ ಸೋಲಲು ಕಾರಣ

* ಕೊಡಗರ ಅಸಹಕಾರ ☐ * ಬೋಪು ದಿವಾನನ ಕುತಂತ್ರ ☐
* ಒಗ್ಗಟ್ಟಿನ ಕೊರತೆ ☐ * ರಣತಂತ್ರದ ಕೊರತೆ ☐
* ವ್ಯಾಪಾರಿಗಳ ಕುಯುಕ್ತಿ ☐ * ಎಲ್ಲವೂ ☐

೧೮ ಬಂಡಾಯದ ಬಳಿಕ ಅತ್ಯಂತ ನಿರ್ಲಕ್ಷ್ಯಕ್ಕೆ ಒಳಗಾದ ಪ್ರದೇಶ ಯಾವುದು?

* ಕೊಡಗು ☐ * ಮಂಗಳೂರು ☐
* ಅಮರಸುಳ್ಯ ☐ * ಪುತ್ತೂರು ☐

೧೯ ಈಗಲೂ ಅಮರ ಸುಳ್ಯ ಪ್ರದೇಶ ಅಲಕ್ಷಿತವಾಗಿದೆಯೆಂದು ನಿಮಗೆ ಅನಿಸುತ್ತದೆಯೇ?

* ಹೌದು ☐ * ಇಲ್ಲ ☐ * ಗೊತ್ತಿಲ್ಲ ☐

ಹೌದು ಎಂದಾದರೆ ಅಲಕ್ಷಿತವಾಗಲು ಕಾರಣವೇನು?

- ಜನರಲ್ಲಿ ಇಚ್ಛಾಶಕ್ತಿಯ ಕೊರತೆ. ☐
- ಸಾಮಾಜಿಕ ಮತ್ತು ಧಾರ್ಮಿಕ ವಿಷಯಗಳಿಗೆ ಮಹತ್ವ ನೀಡುವುದು. ☐
- ಜಾತಿ ರಾಜಕಾರಣದಿಂದಾಗಿ ಜನರಲ್ಲಿ ಒಗ್ಗಟ್ಟಿಲ್ಲದಿರುವುದು. ☐
- ಸಮರ್ಥ ಮತ್ತು ಪ್ರಾಮಾಣಿಕ ನಾಯಕತ್ವದ ಕೊರತೆ. ☐

೨೦ ಪುತ್ತೂರು ಜಿಲ್ಲೆಯಾದರೆ ಆಮರ ಸುಳ್ಯದ ಅಭಿವೃದ್ಧಿ ಸಾಧ್ಯವೇ?

* ಹೌದು ☐ * ಇಲ್ಲ ☐ * ಗೊತ್ತಿಲ್ಲ ☐

ಇಲ್ಲವೆಂದಾದರೆ ಕಾರಣ

- ಒಗ್ಗಟ್ಟಿನ ಕೊರತೆ ☐
- ಬಲಾಢ್ಯ ಜಾತಿಗಳ ರಾಜಕೀಯ ☐
- ನಾಯಕತ್ವದ ಕೊರತೆ ☐
- ಎಲ್ಲವೂ ☐

೨೧ ಕೊಡಗು ಈಗ ಅಭಿವೃದ್ಧಿ ಹೊಂದಿದೆಯೇ?

* ಹೌದು ☐ * ಇಲ್ಲ ☐ * ಗೊತ್ತಿಲ್ಲ ☐

ಇಲ್ಲವಾದರೆ ಕಾರಣ

- ಪ್ರತ್ಯೇಕತೆಯ ಭಾವನೆ ☐
- ಜಾತಿ ರಾಜ ಕಾರಣ ☐
- ಸಮರ್ಥ ನಾಯಕತ್ವದ ಕೊರತೆ ☐
- ಎಲ್ಲವೂ ☐

೨೨ ಕೊಡಗು ಪ್ರತ್ಯೇಕ ರಾಜ್ಯವಾದರೆ ಅಭಿವೃದ್ಧಿ ಸಾಧ್ಯವೇ?

* ಹೌದು ☐ * ಇಲ್ಲ ☐ * ಗೊತ್ತಿಲ್ಲ ☐

ಇಲ್ಲವೆಂದಾದರೆ ಕಾರಣ

೨೩ ಕೊಡಗು ಕೆನರಾ ಬಂಡಾಯದ ನೆನಪನ್ನು ಶಾಶ್ವತಗೊಳಿಸಲು ಸುಳ್ಯದಲ್ಲಿ ಹುಟ್ಟಿಕೊಂಡ ಆಮರಕ್ರಾಂತಿ ಉತ್ಸವ ಸಮಿತಿಯ ಬಗ್ಗೆ ನಿಮಗೆ ತಿಳಿದಿದೆಯೆ ?

* ಹೌದು ☐ * ಇಲ್ಲ ☐ * ಗೊತ್ತಿಲ್ಲ ☐

೧೪ ಅಮರಕ್ರಾಂತಿ ಉತ್ಸವ ಸಮಿತಿ ಕೊಡಗು – ಕೆನರಾ ಬಂಡಾಯವನ್ನು ಚಿರಸ್ಥಾಯಿಗೊಳಿಸಲು ೧೯೯೮ ರಲ್ಲಿ ನಡೆಸಿದ ಏಳು ದಿನಗಳ ಸುಳ್ಯ –ಮಂಗಳೂರು ಕಾಲ್ನಡಿಗೆ ಜಾಥಾದಲ್ಲಿ ನೀವು ಪಾಲ್ಗೊಂಡಿದ್ದೀರಾ?

* ಹೌದು ☐ * ಇಲ್ಲ ☐ * ಅದರ ಬಗ್ಗೆ ಕೇಳಿಲ್ಲ ☐

೧೫ ಕೊಡಗು– ಕೆನರಾ ಬಂಡಾಯದ ಹಿರಿಯರ ನೆನಪಲ್ಲಿ ನೀವು ಏನಾದರೂ ಸಾಧನೆ / ಕಾರ್ಯಕ್ರಮ ಮಾಡಿದ್ದೀರಾ ?

* ಹೌದು ☐ * ಇಲ್ಲ ☐ * ಮಾಡಬೇಕೆಂದಿದೆ ☐

ಹೌದು ಎಂದಾದರೆ ವಿವರ.

೧೬ ಆರ್ಥಿಕ ಸುಧಾರಣೆಗಳು (ಜಾಗತೀಕರಣ) ರೈತರ ಪರವಾಗಿದೆಯೇ?

* ಹೌದು ☐ * ಇಲ್ಲ ☐ * ಗೊತ್ತಿಲ್ಲ ☐

ಹೌದು ಎಂದಾದರೆ ಹೇಗೆ?

ಅಲ್ಲ ಎಂದಾದರೆ ಹೇಗೆ ?

೧೭ ಕೊಡಗು–ಕೆನರಾ ಬಂಡಾಯದ ಫಲಶ್ರುತಿ ಮತ್ತು ಸುಳ್ಯ– ಕೊಡಗುಗಳ ಅಭಿವೃದ್ಧಿಯ ಮುನ್ನೋಟದ ಬಗ್ಗೆ ತಮ್ಮ ಅಭಿಪ್ರಾಯ.

೧೮ ಯಾವುದೇ ಪ್ರದೇಶದ ರೈತರನ್ನು ಬಂಡೇಳುವಂತೆ ಪ್ರಚೋದಿಸುವುದು.

* ಧಾರ್ಮಿಕ ಕಾರಣಗಳು ☐ * ಸಾಮಾಜಿಕ ಕಾರಣಗಳು ☐

* ಆರ್ಥಿಕ ಕಾರಣಗಳು ☐ * ಸಾಂಸ್ಕೃತಿಕ ಕಾರಣಗಳು ☐

೨೯ ಕೊಡಗು– ಕೆನರಾ ಬಂಡಾಯದಾರರ ನೆನಪಿಗಾಗಿ ನಾವು ಮತ್ತು ಸರಕಾರ ಏನನ್ನು ಮಾಡಬಹುದು?

- ಬೆಳ್ಳಾರೆ ಕೋಟೆಯ ಪುನರ್‌ನಿರ್ಮಾಣ
- ಈ ಘಟನೆ ಪಠ್ಯಕ್ಕೆ ಸೇರ್ಪಡೆ.
- ಸುಳ್ಯದಲ್ಲಿ ಮ್ಯೂಸಿಯಂ/ ಗ್ರಂಥಾಲಯ ನಿರ್ಮಾಣ.
- ಪ್ರತಿವರ್ಷ ಅಮರಕ್ರಾಂತಿ ಉತ್ಸವ ಆಚರಣೆ
- ಮಂಗಳೂರು ವಿ.ವಿ.ಯಲ್ಲಿ ಅಮರಕ್ರಾಂತಿ ಅಧ್ಯಯನ ಪೀಠ ರಚನೆ
- ಇವೆಲ್ಲವನ್ನೂ

೩೦ ರೈತರ ಹೋರಾಟಗಳು ಯಶಸ್ವಿಯಾಗುತ್ತಿವೆಯೇ?

* ಹೌದು * ಇಲ್ಲ * ಗೊತ್ತಿಲ್ಲ

ಇಲ್ಲವೆಂದಾದರೆ ಕಾರಣ:

* ಜಾತಿಗಳಿಂದಾಗಿ ಒಗ್ಗಟ್ಟಿನ ಕೊರತೆ

* ರಾಜಕೀಯ ಪಕ್ಷಗಳ ಭೇದೋಪಾಯ

* ಸಮರ್ಥ ನಾಯಕತ್ವದ ಕೊರತೆ

* ಇಚ್ಛಾ ಶಕ್ತಿಯ ಕೊರತೆ

* ಇವೆಲ್ಲವೂ

೩೧ ರೈತರು ಈಗ ಎದುರಿಸುತ್ತಿರುವ ದೊಡ್ಡ ಸಮಸ್ಯೆ ಯಾವುದು?

- ಬೆಳೆಗಳ ಮತ್ತು ಬೆಲೆಗಳ ಅಸ್ಥಿರತೆ ☐
- ಮಾರಾಟ ವ್ಯವಸ್ಥೆಯಲ್ಲ ದೋಷ ☐
- ಕೃಷಿ ಕೂಲಿ ಕಾರ್ಮಿಕರ ಕೊರತೆ ☐
- ಹಣಕಾಸಿನ ಸಮಸ್ಯೆ ☐
- ಸರಕಾರದ ನಿರ್ಲಕ್ಷ್ಯ ☐

೩೨ ರೈತರು ಒಂದು ರಾಜಕೀಯ ಪಕ್ಷವನ್ನು ಕಟ್ಟುವ ಅಗತ್ಯವಿದೆಯೆ?

* ಹೌದು ☐ * ಇಲ್ಲ ☐ * ಗೊತ್ತಿಲ್ಲ ☐

೩೩ ಶಾಸನ ಸಭೆಗಳಲ್ಲಿ ಮತ್ತು ಸ್ಥಳೀಯ ಸಂಸ್ಥೆಗಳಲ್ಲಿ ಸಣ್ಣ ರೈತರಿಗೆ ಮೀಸಲಾತಿ ನೀಡಬೇಕೆ?

* ಹೌದು ☐ * ಇಲ್ಲ ☐ * ಗೊತ್ತಿಲ್ಲ ☐

೩೪ ರೈತರ ಸಮಸ್ಯೆ ಬಗೆ ಹರಿಯಲು ಹೇಗೆ ಸಾಧ್ಯ ?

- ಸಣ್ಣ ರೈತರ ಬಲಿಷ್ಠ ಸಂಘಟನೆಯಿಂದ ☐
- ಜಾತಿ ವ್ಯವಸ್ಥೆಯ ವಿನಾಶದಿಂದ ☐
- ರೈತ ಪರ ಸರಕಾರ ನಿರ್ಮಾಣದಿಂದ ☐
- ಮಧ್ಯವರ್ತಿಗಳ ನಿರ್ಮೂಲನದಿಂದ ☐
- ಕೃಷಿಗೆ ಉದ್ದಿಮೆಯ ಸ್ಥಾನಮಾನ ಬಂದಾಗ ☐
- ಇತರ [ತಿಳಿಸಿ] ☐

ಅನುಬಂಧ.೨

ಪದಕೋಶ

ಅಂಬಲ - ದೇವಸ್ಥಾನ

ಅರ್ಧಾಥಿ - ಮೂಲಕಾರನಿಂದ ಸಂಗ್ರಹಿಸಿದ ಅರ್ಧಾಂಶ ತೆರಿಗೆ

ಅಪ್ಪಣೆ - ರಾಜನ ಆಜ್ಞೆಗೆ ತೆರಬೇಕಿದ್ದ ತೆರಿಗೆ

ಅಮಲ್ದಾರ್ - ಕಂದಾಯ ಸಂಗ್ರಾಹಕ ಅಥವಾ ಗುತ್ತಿಗೆದಾರ

ಅಮವುನಿ - ಟ್ರಸ್ಟು ಅಥವಾ ಆಡಳಿತ ನಿರ್ವಹಣೆ ಅಥವಾ ಏಕಸ್ವಾಮ್ಯ ರೂಪದಲ್ಲಿ ಹೊಂದಿರುವ ಸೊತ್ತು.

ಅನ್ಯಾಯ - ನ್ಯಾಯವನ್ನು ಉಲ್ಲಂಘಿಸಿದರೆ ಹೇರುವ ದಂಡ.

ಅರಮನೆ ಪೊಳ್ದು - ಹುತ್ತರಿ ಸಂದರ್ಭದಲ್ಲಿ ನಡೆಸುವ ಆಚರಣೆ.

ಅರಣಹಾಗ - ಮದುವೆ ಕಾಣಿಕೆ

ಅರುವಾರ್, ಇಲ್ಲದರುವಾರ್, ಭೋಗ್ಯದ ಅಡವು - ಜೀವಂತ ಅಡವು ಅಥವಾ ಭೂಮಿಯನ್ನು ಅಡವಿಟ್ಟು ಪಡೆದ ಸಾಲ.

ಆಕಾರ – ಖನಿಜಗಳ ಮೇಲಣ ತೆರಿಗೆ.

ಆರುವಾರ – ಅಡವು ಇಟ್ಟ ಭೂಮಿಯ ಮೇಲಣ ತೆರಿಗೆ.

ಒಕ್ಕ ಪದ್ಧತಿ – ಕೊಡಗಿನ ಕೂಡು ಕುಟುಂಬ ಪದ್ಧತಿ.

ಒಕ್ಕಲು – ವೃತ್ತಿಪರ ಕೃಷಿಕ.

ಒಕ್ಕಲು ಗುತ್ತಿಗೆ - ಭೋಗ್ಯದ ಭೂಮಿಗೆ ಪಾವತಿಸಬೇಕಾದ ತೆರಿಗೆ.

ಒಸಗೆ - ಹಬ್ಬದ ಸಂದರ್ಭದಲ್ಲಿ ಪಾವತಿಸಬೇಕಾದ ತೆರಿಗೆ.

ಕಂಬಳಗದ್ದೆ - ಕೋಣಗಳ ಓಟದ ಗದ್ದೆ

ಕಂಠೀರಾಯ ಪಗೋಡ - ಸುಮಾರು ಮೂರು ರೂಪಾಯಿಗಳಿಗೆ ಸಮನಾದ ಒಂದು ವಿನಿಮಯ ಮಾಧ್ಯಮ.

ಕಡಂಗ – ಮಣ್ಣಿನ ದಿಬ್ಬ.

ಕಡ್ಡಾಯ – ತಪ್ಪಿಸಲಾಗದ ತೆರಿಗೆ

ಕಱಿಕೆಯ ಬಯಲು - ಹುಲ್ಲಿನಿಂದಾವೃತವಾದ ಭೂಮಿ

ಕಾಟಕಾಯಿ – ದಂಗೆ ಮತ್ತು ಲೂಟಿ ಅಥವಾ ಕಾನೂನು ಭಂಗದ ಕೃತ್ಯ

ಕಾಸು, ಹಾಗ, ರೂಪಾಯಿ – ಕೊಡಗಿನಲ್ಲಿ ಚಲಾವಣೆಯಲ್ಲಿದ್ದ ನಾಣ್ಯಗಳು

ಕಾಣಿಕೆ – ಮಹಾರಾಜರಿಗೆ ಕೊಡಬೇಕಾಗಿದ್ದ ಗೌರವದ ಮೊಬಲಗು.

ಕಿಸ್ತು – ಗೇಣಿಯ ಕಂತು

ಕುದುರು - ನದಿಯ ನಡುವೆ ಇರುವ ಭೂ ಪ್ರದೇಶ

ಕುಮರಿ ಬೆಳೆ - ಬೆಟ್ಟ ಗುಡ್ಡಗಳ ಇಳಿಜಾರು ಪ್ರದೇಶಗಳಲ್ಲಿ ಮಳೆಗಾಲದಲ್ಲಿ ಬೆಳೆಸುವ ಬೆಳೆ.

ಕುಮುರೆ – ವರ್ಗ ಭೂಮಿಯಿಂದ ನೂರು ಗಜದೊಳಗಿರುವ ಅರಣ್ಯ ಭೂಮಿ.

ಕುಳ – ಕೃಷಿ ಮಾಡುವವನು ನೀಡಬೇಕಾದ ತೆರಿಗೆ.

ಕೂಟ – ಒಕ್ಕೂಟ

ಕೂಡುವಳಿ - ಉತ್ಪಾದನೆಗೆ ಬಳಸಲಾಗುವ ವಸ್ತುಗಳು.

ಕೆಂಗಳಮೆ – ಕೆಂಪು ಭತ್ತ.

ಕೊಂಬು – ಕೊಂಬಿನ ಕೂಗು ಕೇಳಿಸುವಷ್ಟು ದೂರದ ವಿಸ್ತಾರದ ಭಾಗ.

ಕೊಡುತಲೆದಾರ – ವರ್ಗದಾರನಿಂದ ತುಂಡು ಭೂಮಿಯನ್ನು ಪಡಕೊಂಡು ಸರಕಾರಕ್ಕೆ ನೇರವಾಗಿ ಕಂದಾಯ ಪಾವತಿ ಮಾಡುವಾತ.

ಕೊಳಕೆ ಭೂಮಿ – ವರ್ಷದಲ್ಲಿ ಮೂರು ಬೆಳೆ ತೆಗೆಯಲು ಸಾಧ್ಯವಿರುವ ಭೂಮಿ.

ಕೋಲ ಬಳಿಗಳು, ಬಲ್ಲಾಳರು, ಎಳಮೆಗಳು – ವಿಜಯನಗರ ಕಾಲದಲ್ಲಿ ಸ್ಥಳೀಯ ಆಡಳಿತಕ್ಕೆ ನೆರವು ನೀಡುತ್ತಿದ್ದವರು.

ಕೋಲು - ಭೂಮಿಯನ್ನು ಅಳೆಯುವ ಮಾಪಕ.

ಕೋವು – ವಿಸ್ತಾರವಾದ ಗದ್ದೆ.

ಕೌಲು – ಒಪ್ಪಂದ.

ಖಂಡಿ – ಒಂದು ಖಂಡಿ 260 ಕಿಲೋ. ಅಥವಾ 20 ಮಣ.

ಖಂಡುಗ – ಅಳತೆಯ ಒಂದು ಮಾಪಕ.

ಗಟ್ಟಿ ವರಹ – ಚಿನ್ನದ ಅಂಶವಿದ್ದ ಹಣ.

ಗಡ್ಯಾಣ – ಅಳುಪರ ಕಾಲದ ಒಂದು ನಾಣ್ಯ.

ಗರ್ಸೆ - ಸಾಮರ್ಥ್ಯದ ಮಾಪಕ. 400 ಮಕ್ರ್ಯೂಲ್ ಒಂದು ಗರ್ಸೆ.

ಗಾಯಿ – ದನಗಳ ಮೇಲಣ ತೆರಿಗೆ.

ಗೇಣಿಕಾರ - ಭೂಮಿಯನ್ನು ಗೇಣಿ ಅಥವಾ ಗುತ್ತಿಗೆ ಆಧಾರದಲ್ಲಿ ತನ್ನದಾಗಿಸಿಕೊಂಡವನು.

ಗುತ್ತು – ಕಂದಾಯ ಸಂಗ್ರಹದ ಅಧಿಕಾರವನ್ನು ಗುತ್ತಿಗೆಗೆ ಪಡೆಯುವ ಮನೆತನ.

ಚಾಲ ಗೇಣಿ - ಲಿಖಿತ ಒಪ್ಪಂದವಿಲ್ಲದೆ ಮೌಖಿಕವಾಗಿ ನಿರ್ಣಯವಾಗುತ್ತಿದ್ದ ಗೇಣಿ/ಭೂಮಿಯನ್ನು ತತ್ಕಾಲಕ್ಕೆ ಭೋಗ್ಯಕ್ಕೆ ಪಡೆಯುವ ವ್ಯವಸ್ಥೆ.

ಜಮಾ - ಸರಕಾರದ ಒಟ್ಟು ಕಂದಾಯ

ಜಮಾಬಂಧಿ	–	ಒಟ್ಟು ಕಂದಾಯ ಲೆಕ್ಕಾಚಾರ.
ಜಮ್ಮಾದಾರ	-	ಹಿಟ್ಟಿ ಬಿಟ್ಟಿ ಚಾಕರಿಗಾಗಿ ರಾಜನಿಂದ ಭೂಮಿ ಪಡೆದವನು.
ಜಮ್ಮಭೂಮಿ	-	ಪರಭಾರೆ ಮಾಡಲಾಗದ ಹುಟ್ಟಿನ ಕಾರಣವಾಗಿ ಕುಟುಂಬಕ್ಕೆ ರಾಜನಿಂದ ಸಿಗುವ ಭೂಮಿ.
ಜಹಗೀರು	–	ಒಂದು ಗೇಣಿ ವ್ಯವಸ್ಥೆ. ಇದರಲ್ಲಿ ಭೂಮಿಯ ಅಂತಿಮ ಅಧಿಕಾರ ರಾಜ್ಯದ ಕೈಯಲ್ಲಿರುತ್ತದೆ.
ಜೋಡಿ	-	ಹೊಸ ಭೂಮಿಯನ್ನು ಪಡೆಯುವವನು ಸರಕಾರಕ್ಕೆ ನೀಡಬೇಕಾದ ತೆರಿಗೆ.
ತಕ್ಕ	–	ಮುಖ್ಯಸ್ಥ ಅಥವಾ ಸಮರ್ಥ.
ತಕ್ಕಮೆ, ಜಾತಿ ಗೌಡಿಕೆ	–	ಅಧಿಕಾರ ಸೂಚಕ ಪದಗಳು.
ತಕ್ಕಾವಿ ಸಾಲ	-	ನೈಸರ್ಗಿಕ ಪ್ರಕೋಪಗಳಿಂದ ಬೆಳೆ ಹಾನಿಯಾದಾಗ ದೊರೆಯುವ ಸಾಲ.
ತಪ್ಪು	–	ಅಪರಾಧಗಳಿಗೆ ನೀಡಬೇಕಾದ ದಂಡ.
ತೆರಾವೋ	-	ಸ್ಥಿರ ಅಥವಾ ಪೂರ್ವ ನಿಗದಿತ ಗೇಣಿ.
ತಸದೀಕು	–	ವಿಜಯಗರ ಕಾಲದಲ್ಲಿ ಬ್ರಾಹ್ಮಣರಿಗೆ ಬರುತ್ತಿದ್ದ ರಾಜಾದಾಯ.
ತಾರು ಗದ್ದೆ	–	ಒಣ ಪ್ರದೇಶ.
ತಿಟ್ಟೆ	–	ಎತ್ತರದಲ್ಲಿರುವ ಒಣ ಪ್ರದೇಶ.
ತೆಂಗಿನ ಅಡಿಯ	–	ತೆಂಗು ಬೆಳೆಯುವ ಭೂಮಿ.
ತೇರು	-	ಸಾಮಾನ್ಯ ತೆರಿಗೆ.
ತೊರಾದು	-	ಹಣದ ಮುಗ್ಗಟ್ಟಿನಲ್ಲಿರುವ ರೈತರು ಬೆಳೆ ಕೊಯ್ಲಿಗೆ ಮೊದಲೇ ಅದನ್ನು ಅಡವಿಟ್ಟು ತ್ರಿಮೂರ್ತಿ ಸಮುದಾಯಗಳಿಂದ ಸಾಲ ಪಡೆಯುವ ಪದ್ಧತಿ.

ದುಃಖ	–	ರಾಜ್ಯ ಶೋಕಾಚಾರಣೆಯ ಕೊನೆಯಲ್ಲಿ ಪಾವತಿ ಮಾಡಬೇಕಾದ ತೆರಿಗೆ.
ಧೂಳೀ ಭತ್ತ	–	ಕಣದಲ್ಲಿ ಭತ್ತವನ್ನು ತೂರುವಾಗ ಜೊಳ್ಳಿನ ಜೊತೆ ನಷ್ಟವಾಗುವ ಭತ್ತದ ಕಾಳುಗಳು.
ದೇವತಕ್ಕ	–	ಊರ ದೇವಸ್ಥಾನದ ಮೇಲ್ವಿಚಾರಕ.
ದೇವರಕಾಡು	–	ಜನರು ಬಳಸದೆ ದೇವರ ಹೆಸರಲ್ಲಿ ರಕ್ಷಿಸುವ ಅರಣ್ಯ.
ನಖರ	–	ವಿಜಯ ನಗರ ಸಾಮ್ರಾಜ್ಯದ ಅಧೀನದಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಇದ್ದ ಸಂದರ್ಭದಲ್ಲಿ ಅಸ್ತಿತ್ವದಲ್ಲಿದ್ದ ವರ್ತಕ ಸಂಘ.
ನಡು ಅಥವಾ ನಟ್ಟು	–	ತೆರಿಗೆ ಪಾವತಿಯಲ್ಲಿನ ಹೊಸದಾಗಿ ನೆಟ್ಟ ಸಸಿಗಳ ಮೇಲಣ ತೆರಿಗೆ.
ನಾಡಪೊಳ್ದು	–	ಕದಿರು ಕೊಯ್ಯುವ ಹುತ್ತರಿ ಹಬ್ಬವನ್ನು ನಾಡಿನ ಜನರೆಲ್ಲಾ ಆಚರಿಸುವುದು.
ನೊಗಹಣ	–	ಉಳುಮೆಯ ಉಪಕರಣಕ್ಕೆ ಹೇರುವ ತೆರಿಗೆ.
ಪಟೇಲ	-	ಗ್ರಾಮ ಮುಖ್ಯಸ್ಥ ಮತ್ತು ನ್ಯಾಯಾಧಿಕಾರಿ.
ಪನ್ಯ ಭೂಮಿ	–	ಕೊಡಗಿನ ರಾಜರುಗಳ ಸ್ವಂತ ಅಧೀನದಲ್ಲಿ ಇದ್ದ ವಿಶಾಲವಾದ ನೀರಿನ ಆಶ್ರಯವಿರುವ ಭೂಮಿ.
ಫಸಲಿ	-	ಕಂದಾಯ ವರ್ಷ ಅಥವಾ ಹಣಕಾಸು ವರ್ಷ. ಫಸಲಿ ವರ್ಷಕ್ಕೆ 590 ಸೇರಿಸಿದರೆ ಕ್ರಿ. ಶ. ದೊರೆಯುತ್ತದೆ.
ಪಾಂಡ್ಯ	–	ತಮಿಳುನಾಡಿನ ಒಂದು ಸಮುದಾಯ.

ಪಾಟಪರೆ
ಪಾಟ ಆನೆ
ಹೊರೆ ಪರೆ
} ಕೊಡಗಿನಲ್ಲಿ ಅಸ್ತಿತ್ವದಲ್ಲಿದ್ದ ತೂಕ ಮತ್ತು ಅಳತೆಗಳ ಮಾನಕ.

ಪಾಟ ಮಣ

ಪಾಡ್ದನ – ಜಾನಪದ ಹಾಡು.

ಪಾರುಪತ್ಯಗಾರ – ಕಿರಿಯ ಅಧಿಕಾರಿ.

ಪಾಳೆಗಾರ - ಸ್ಥಳೀಯ ನಾಯಕ.

ಪೂಲ್ ಪಜ್ಜಡ – ಕಸೂತಿ ಹಾಕಿದ ಬಟ್ಟೆ.

ಪೆಶ್ಕೂ – ಊಳಿಗಮಾನ್ಯ ವ್ಯವಸ್ಥೆಯಲ್ಲಿ ಧನಿ ತನಗಿಂತ ಮೇಲಿನವನಿಗೆ ನೀಡುವ ಕಾಣಿಕೆ.

ಪೈಸ್ಕಾರ್ – ತಾಲೂಕಿನ ವಿಭಾಗವೊಂದರ ಕಂದಾಯ ಅಧಿಕಾರಿ. ಅವನಿಗೆ ಸುಮಾರು ತಹಶೀಲ್ದಾರರಷ್ಟೇ ಅಧಿಕಾರಗಳಿರುವುದು.

ಪೊಂದೇವಡಿ - ನ್ಯಾಯದ ಕಟ್ಟೆ.

ಪೊಗದಿ - ಕಂದಾಯ, ಕಾಣಿಕೆ.

ಬಯಲು – ಅಕ್ಕಿ ಬೆಳೆಯುವ ವಿಶಾಲವಾದ ಗದ್ದೆಗಳು.

ಬಹತ್ತರ – ವಿಜಯನಗರ ಕಾಲದಲ್ಲಿ ತುಳುನಾಡಿನ ಕಾರ್ಯಾಂಗದಲ್ಲಿ ಕೆಲಸ ಮಾಡುತ್ತಿದ್ದ ಸಹಾಯಕ ಅಧಿಕಾರಿ.

ಬಹಾದೂರಿ ಪಗೋಡ – ಈಗಿನ ನಾಲ್ಕು ರೂಪಾಯಿಗೆ ಸಮಾನವಾದ ನಾಣ್ಯ.

ಬಹಿರ್ ಗಡ್ಯಾಣ – ದಕ್ಷಿಣ ಕನ್ನಡದ ಹೊರಗಿನಿಂದ ಬಂದ ಗಡ್ಯಾಣ.

ಬಾಗಾಯಿತು – ತೆಂಗು ಮತ್ತು ಅಡಿಕೆ ಮಾತ್ರ ಬೆಳೆಯುವ ಭೂಮಿ.

ಬಿದಿರಡಿಯ - ಬಿದಿರು ಬೆಳೆಯುವ ಭೂಮಿ.

ಬೆಟ್ಟು ಭೂಮಿ - ಬಯಲಿಗಿಂತ ಎತ್ತರದ ಭೂಮಿ.

ಬೀಜಾವರಿ - ಬಿತ್ತನೆಗೆ ಬೇಕಾಗುವ ಬೀಜದ ಆಧಾರದಲ್ಲಿ ಲೆಕ್ಕ ಹಾಕುವ ಭೂಮಿಯ ವಿಸ್ತೀರ್ಣ .

ಬೀಳುಗದ್ದೆ - ಕೃಷಿ ಮಾಡದ ಭೂಮಿ.

ಭಟ್ಟಿ - ಭೂಮಿಯನ್ನು ಅಳೆಯುವ ಮಾಪಕ. ಒಂದು ಭಟ್ಟಿ - ೮೦ ಸೇರು.

ಭಂಡಾರ ತಕ್ಕ	-	ಹಣದ ಉಸ್ತುವಾರಿ ನಿರ್ವಹಿಸುವವನು.
ಬುದ್ಧಿವಂತ	–	ವಿಜಯನಗರ ಕಾಲದಲ್ಲಿ ತುಳುನಾಡನ್ನು ಆಳುತ್ತಿದ್ದ ರಾಜ್ಯಪಾಲರ ಕಾರ್ಯದರ್ಶಿ.
ಬೂದಿ ಚಾವಡಿ	-	ಹಾಲೇರಿಯ ಸಂಸ್ಥಾಪಕನಾದ ವೀರರಾಜನ ಆಶ್ರಮ.
ಬೇಡೆತ್ತು	–	ಉಳುಮೆಗೆ ಬಳಸುವ ಪ್ರಾಣಿಗಳ ಮೇಲೆ ವಿಧಿಸಲಾಗುವ ತೆರಿಗೆ.

ಬೇರಿಜ್ (ಖಾದಿಂ ಬೇರಿಜ್) - ಭೂಮಿಯ ಸ್ಥಿರ ಮೌಲ್ಯಮಾಪನ ಮೊತ್ತ.

ಮಕ್ಕಿ ಭೂಮಿ	–	ಉಸುರು ಭೂಮಿ.
ಮಜಲು	-	ಬಯಲು ಭೂಮಿಗಿಂತ ಎತ್ತರ ಮತ್ತು ಬೆಟ್ಟ ಭೂಮಿಗಿಂತ ತಗ್ಗು ಇರುವ ಭೂಮಿ.

ಮಣಿಗಾರ, ಶಾನುಭೋಗ, ಉಗ್ರಾಣಿ } ಗ್ರಾಮ ಮಟ್ಟದಲ್ಲಿ ಕಂದಾಯ ನಿರ್ವಹಣೆಯ ಅಧಿಕಾರಿಗಳು.

ಮನೆದೆರ	–	ಮನೆತೆರಿಗೆ .
ಮನೆ ಹಣ	–	ಖಾಯಂ ಮನೆತೆರಿಗೆ.
ಮರಿಮಕ್ಕ ತಾಯಂ	–	ಕೇರಳದಲ್ಲಿ ಅಸ್ತಿತ್ವದಲ್ಲಿದ್ದ ಅಳಿಯಕಟ್ಟು ಸಂತಾನ ಪದ್ಧತಿ.
ಮಾಗಣೆ	–	ತಾಲೂಕಿನ ಉಪ ವಿಭಾಗ.
ಮುತುರ್ಪ	–	ಗ್ರಾಮ ತೆರಿಗೆ.
ಮುಚಿಲ್ಕ	-	ಒಪ್ಪಂದ.
ಮುಯ್ಯಾಳು	-	ಸೇವಾ ವಿನಿಮಯ ವ್ಯವಸ್ಥೆ.
ಮೂಡೆ (ಮುಡಿ)	-	ಭತ್ತ ಅಥವಾ ಅಕ್ಕಿಯನ್ನು ಅಳೆಯುವ ಮಾಪಕ.

ಮೂಲಕಾರ	-	ಭೂಮಿಯ ನಿಜವಾದ ಯಜಮಾನನು ಅಥವಾ ಸರಕಾರದಿಂದ ಭೂಮಿಯನ್ನು ಶಾಶ್ವತ ಭೋಗ್ಯಕ್ಕೆ ಪಡಕೊಂಡವ.
ಮೂಲಗೇಣಿ	–	ಮೂಲ ವರ್ಗದಾರನು ಭೂಮಿಗೆ ಕೊಡಬೇಕಾಗಿದ್ದ ಗೇಣಿ.
ಮೂಲ ಪಟ್ಟ	-	ಪಾರಂಪರ್ಯ ಹಕ್ಕನ್ನು ಬೇಸಾಯಗಾರರಿಗೆ ನೀಡುವುದು.
ಮೂಲವರ್ಗ	–	ವಂಶ ಪಾರಂಪರ್ಯ ಹಕ್ಕು.
ಮೂಲವರ್ಗದಾರ	-	ಹೊಸ ಪಟ್ಟೆ ಇಲ್ಲದೆ ಭೂಮಿ ಕೊಂಡವ.
ಮೂಲಾದಿ	-	ಮೂಲಕಾರನಿಂದ ಸಂಗ್ರಹಿಸಲಾಗುತ್ತಿದ್ದ ತೆರಿಗೆ.
ಮೇಂದಲೆ	-	ಹಾಲಿನಂತೆ ಬೆಳ್ಳಗಿರುವ ಭತ್ತ.
ಮೈಸಾಲ	-	ಭೂಮಿಯನ್ನು ಅಡವು ಇಡದೆ ಪಡೆಯುವ ಸಾಲ.
ಮೊಕ್ತೇಸರ	–	ದೇವಸ್ಥಾನದ ನಿರ್ವಾಹಕ.
ವರಹ	-	ನಾಲ್ಕು ರೂಪಾಯಿಗಳಿಗೆ ಸಮನಾದ ನಾಣ್ಯ.
ವಾಯಿದೆ ಗೇಣಿ	-	ನಿರ್ದಿಷ್ಟ ಅವಧಿಯವರೆಗೆ ಲಿಖಿತ ಒಪ್ಪಂದದ ಮೂಲಕ ನಿರ್ಧಾರವಾಗುತ್ತಿದ್ದ ಗೇಣಿ. ನಿಗದಿತ ಅವಧಿಯವರೆಗೆ ಭೂಮಿಯನ್ನು ಭೋಗ್ಯಕ್ಕೆ ಕೊಡುವ ವ್ಯವಸ್ಥೆ.
ವೃತ್ತಿಕಾರ	-	ಭೂಮಿಯನ್ನು ದಾನವಾಗಿ ಪಡೆದವರು.
ಸಣ್ಣ ಪ್ರತಾಪ ಗಡ್ಯಾಣ	–	ರಾಜರೇ ಸ್ವಯಂ ಮುದ್ರಿಸುವ ಹಣ.
ಸಾಗುದಾರ	-	ನಿಗದಿತ ಕಂದಾಯ ದರದಲ್ಲಿ ಭೂ ವ್ಯವಸಾಯ ನಡೆಸುವ ಜಮೀನುದಾರ.
ಸಾಗುಭೂಮಿ	-	ಸಾಗುವಳಿ ಮಾಡುವ ಭೂಮಿ.
ಸ್ಟಾರ್ ಪಗೋಡ	-	ಮೂರುವರೆ ರೂಪಾಯಿಗೆ ಸಮಾನವಾದ ವಿನಿಮಯ ಮಾಧ್ಯಮ.
ಸಿದ್ಧಾಯ	-	ಸ್ಥಿರವಾದ ತೆರಿಗೆ ನಿರ್ಣಯ.

ಸೇಸ - ಸ್ಥಿರ ಉತ್ಪತ್ತಿಗಿಂತ ಹೆಚ್ಚುವರಿಯಾದ ಉತ್ಪತ್ತಿಯ ಮೇಲಣ ತೆರಿಗೆ.

ಸುಗ್ಗಿ ಭೂಮಿ – ಎರಡು ಬೆಳೆಗಳಿಗೆ ತಕ್ಕಷ್ಟು ನೀರಾವರಿ ವ್ಯವಸ್ಥೆ ಇರುವ ಭೂಮಿ.

ಶಾನುಭೋಗ – ಗ್ರಾಮಗಳಲ್ಲಿ ಕಂದಾಯ ವಸೂಲು ಮಾಡುವ ಅಧಿಕಾರಿ.

ಶಾಮಿಲ್ - ಶಿಸ್ತುಗೆ ಮಾಡಿದ ಸೇರ್ಪಡೆ.

ಕಿಸ್ತು - ಪ್ರಮಾಣ ಭೂತವಾದ ಭೂ ಕಂದಾಯದ ದರ.

ಶಿವಪ್ಪ ನಾಯಕನ ಶಿಸ್ತು – ಕೃಷಿ ಕಾರ್ಯಗಳ ವೆಚ್ಚ ಮತ್ತು ಒಟ್ಟು ಉತ್ಪತ್ತಿಯನ್ನು ಪರಿಗಣಿಸಿ ಕಂದಾಯ ನಿರ್ಣಯಿಸುವ ವೈಜ್ಞಾನಿಕ ವಿಧಾನ.

ಹಕ್ಕಲು – ಮಳೆ ನೀರನ್ನು ಅವಲಂಬಿಸಿದ ತರಕಾರಿ ಬೆಳೆಯುವ ಭೂಮಿ.

ಹಕ್ಕಲು ಬೆಳೆ – ವರ್ಗ ಭೂಮಿಯ ಒಂದುನೂರು ಗಜ ವ್ಯಾಪ್ತಿಯೊಳಗಿನ ಪರ್ವತ ಪ್ರದೇಶಗಳ ಪೊದೆಗಳನ್ನು ಸವರಿ ಮಾಡುತ್ತಿದ್ದ ಬೆಳೆ ಪದ್ಧತಿ.

ಹಡಗು ಭೂಮಿ – ಕೃಷಿ ಮಾಡದೆ ಬಿಟ್ಟ ಭತ್ತದ ಗದ್ದೆ.

ಹನೆ – ಒಣ ಮತ್ತು ದ್ರವ್ಯ ವಸ್ತುಗಳನ್ನು ಅಳೆಯುವ ಮಾಪಕ.

ಹಾಳಿ - ತುಂಡು ಗದ್ದೆ.

ಹಿಟ್ಟಿಬಿಟ್ಟಿ ಚಾಕರಿ - ಬರಿಯ ಊಟಕೊಟ್ಟು ಪ್ರಜೆಗಳನ್ನು ಬಿಟ್ಟಿಯಾಗಿ ದುಡಿಸಿಕೊಳ್ಳುತ್ತಿದ್ದ ಪದ್ಧತಿ.

ಹುಟ್ಟುವಳಿ - ಉತ್ಪಾದಿತ ವಸ್ತುಗಳು.

ಹುತ್ತರಿ ಹಬ್ಬ – ಕೊಡಗರ ಕದಿರು ಕೊಯ್ಯುವ ಹಬ್ಬ.

ಹುಣಸೆ ಅಡಿಯ - ಹುಳಿ ಬೆಳೆಯುವ ಭೂಮಿ.

ಹೆಣ್ಣಾಳುಗಳು – ಒಕ್ಕದವರ ಕೈಕೆಳಗೆ ದುಡಿಯಬೇಕಾದ ಕೆಳ ವರ್ಗ ಮತ್ತು ಕೆಳಜಾತಿಗೆ ಸೇರಿದ ಸ್ತ್ರೀಯರು.

ಹೊಡೆಕಟ್ಟು - ಬಿತ್ತನೆ ಮತ್ತು ಕೊಯ್ಲು ನಡುವಣ ಅವಧಿಯ ತೆರಿಗೆ.

ಹೊಲಗದ್ದೆ - ನೀರಾವರಿ ಮತ್ತು ಒಣ ಕೃಷಿ ಭೂಮಿ.

ಹೊಸಗಾಮೆ - ಹೊಸದಾಗಿ ಬೇಸಾಯಕ್ಕೆ ಅಳವಡಿಸಿದ ಭೂಮಿ.

ಅನುಬಂಧ ೩

ಛಾಯಾಚಿತ್ರಗಳು



ಚಿತ್ರ ೧ : ಕಾವೇರಿ ನದಿಯ ಉಗಮ ತಲಕಾವೇರಿ



ಚಿತ್ರ೨: ನಾಲ್ಕುನಾಡು ಅರಮನೆ



ಚಿತ್ರ೩: ಮಡಿಕೇರಿ ಕೋಟೆ ಹೊರ - ನೋಟ



ಚಿತ್ರ೪: ಮಡಿಕೇರಿ ಕೋಟೆ ಹೆಬ್ಬಾಗಿಲು.



ಚಿತ್ರ೫: ಮಡಿಕೇರಿ ಕೋಟೆ – ಒಳ ನೋಟ.



ಚಿತ್ರ೬: ರಾಜಾಸೀಟು ಮಡಿಕೇರಿ.



ಚಿತ್ರ ೭: ಮಡಿಕೇರಿಯ ಓಂಕಾರೇಶ್ವರ ದೇವಾಲಯ.



ಚಿತ್ರ೮: ಶಿಥಿಲ ದೇಗುಲ.



ಚಿತ್ರ೯: ರೈತ ದಂಡು ಸಿದ್ಧಗೊಂಡ ಅರಣ್ಯ.



ಚಿತ್ರ೧೦: ಸುಲ್ತಾನ್ ಬತ್ತೇರಿ ಮಂಗಳೂರು.



ಚಿತ್ರ೧೧: ಜಮಲಾಬಾದ್ ಗಡ ಬೆಳ್ತಂಗಡಿ.



ಚಿತ್ರ೧೨: ಬೇಕಲ ಕೋಟೆ – ಕರಾವಳಿ

ಪರಾಮರ್ಶನ ಗ್ರಂಥ ಸೂಚಿ

Books

Desai A.R, (ED),1985, Peasant Struggles in India, Oxford University Press, New Delhi.

Desai. S.S.M., 1990, Economic History of India, Himalaya Publishing House, Mumbai.

Dhanagare D N, 1983, Peasant Movements in India 1920 – 50, Oxford University Press, Delhi.

Dharma Kumar, 1982, The Cambridge, Economic History of India Vol II, 1757-1970. Cambridge University Press.

Eric Roll, 1974, A History of Economic Thought, Oxford University Press, New Delhi.

Ghurye. G.S, 1969, Caste and Race in India, Bombay Popular Prakashan.

Govindaraya Prabhu. S. & Nityananda Pai. M, 2007, The Alupus, Coinage & History Karnataka.

Gururaj Bhat. P 1967, A Political and Cultural History of Tulunad from the Earliest Times upto 1600 A.D. Mysore University.

Gururaj Bhat. P. 1975, Studies in Tuluva History and Culture, Manipal.

Gururaj Bhat, 2010, History & Culture of South India, Paduru Gururaj Bhat Memorial Trust Udupi.

Gururajachar S, 1974, Some Aspects of Economic & Social Life in Karntaka, Prasaranga, Mysore University.

Honey, L.H, 1949, History of Economic Thought, Oxford University Press, New Delhi.

Hayavada Rao C, 1946, History of Mysore 1399 – 1799 A.D, Vol II & III. Govt. Press Bangalore.

Hebbar & Malathi, 2003, History of India, Part-II Mangala Publications Mangalore.

Hebbar & Moorthy, 2003, History of India A D.1206-1856, Mangala Publications Mangalore.

Hutton,1973, Caste in India, Oxford University Press, Delhi.

Jacob.T.G., 1985, India Development and Deprivation; Neocolonial Transformation of the Economy in a Historical Perspective, Mass Line Press,New Delhi.

Javare Gowda (ed), 1973, Sri Kantika, Dr. S. Srikanta Shasthri Felicitation Volume, Geetha book house Mysore.

Jayapalan N, 2001, Economic History of India: Ancient to present Day. Atlantic Publishers and Distributors, New Delhi.

John Stokes, 1885, Reports on the Revision of Assessment and on the Disturbances Known as Koots in Kanara, 1830-31 Collectorate Press Mangalore.

Krishna Rao. M.V. & Halappa, 1962, History of Freedom Movement in Karnataka, Vol. I, Bangalore.

Mahajan V.D, 1992, A History of India, Vol -3, Chand & Company Limited, New Delhi.

Majumdar Ray Chaudhuri and Kaliknkar Datta, 2008, An Advanced History of India, Maximillan India Limited, New Delhi.

Moracs George M., 1927, Mangalore Historical Sketch , Mangalore.

Michel; H. Fisher, 1993, the Politics of the British Annexation of India, Oxford University Press, New Delhi.

Mishra and Puri, 2010, Indian Economy, Himalayan Publishing House, Mumbai.

Muthanna I. M., 1953, A Tiny Model State of South India, Habba publications, Mysore.

Narayana Ballal, 2006, Enchanting Land Karnataka, Rekha Prakashana, Deepa Kidiyur, Ambalapady Post, Udupi.

Paul R.R, 1979, History of Economic Thought, Kalyani Publications Ludhiyana, New Delhi.

Philips, 1961, the East India Company, 1786 -1834, Oxford University Press.

Pius Fidelis Pinto, 1999, Konkani Christians in Coastal Karnataka in Anglo Mysore Relations 1761-1799 A.D, Samanvaya Mangalore.

Prabhakara Shishila, 2011, Economic Thought, United Publisher's, Mangalore.

Ramesh. K. V.1970, A History of South Canara Karnataka University, Darwad.

Romila Thapar, 1978, Ancient Indian Social History, Orient Long Man Limited, New Delhi.

Shyama Bhat N, 1998, South Kanara 1799-1860. A study in Colonocal Administration and Regional Response – Mittal Publishers, New Delhi.

Saki - 2004,Making History Karnataka's People and Their Past Vol. II, Vimukthi, Bangalore.

Saletor B.A, 1936, Ancient Karnataka, Vol. I, History of Tuluva, Oriental book Agency, Poona.

Screpont and Zamagni, 2006, An Outline of the History of Economic Thought, Oxford University Press, New Delhi.

Suryanatha Kamath, 1965, Tuluva in Vijaya Nagara. Times, Bombay University.

Srivatsava, S.K. 1999, History of Economic Thought, S. Chand and Company, New Delhi.

Tapan Ryachaudhuri and Irfan Habib, 1982, the Cambridge Economic History of India Vol. I . 1200-1750, Cambridge University Press.

Vasantha Madhava K.G., 1985, Religions in Coastal Karnataka 1500-1763, Delhi.

Vasantha Madhava K.G., 1991, Western Karnataka It's Agrarian Relations Delhi.

Vijaya Poonacha Tambanda, 2004, Conflicting Identities in Karnataka, Prasaranga Kannada University Hampi.

Wahab Doddamane, 1993, Muslims in Dakshina Kannada, Mangalore.

ಪುಸ್ತಕಗಳು

ಅಮೃತ ಸೋಮೇಶ್ವರ(ಸಂ), ೨೦೧೧, ಅಬ್ಬಕ್ಕ ಸಂಕಥನ, ವೀರರಾಣಿ ಅಬ್ಬಕ್ಕ ಉತ್ಸವ ಸಮಿತಿ ಉಳ್ಳಾಲ, ಮಂಗಳೂರು.

ಅನಂತರಾಮು – ೧೯೯೭, ದಕ್ಷಿಣದ ಸಿರಿನಾಡು, ಅನಂತ ಪ್ರಕಾಶನ ದೇವಾಂಬಾ ಅಗ್ರಹಾರ. ಮೈಸೂರು.

ಅಂತೋನವ ಕತೋವಿಸ್ಕೀ, ೧೯೮೮, ಭಾರತದ ಇತಿಹಾಸ, ೧೮ ನೇ ಶತಮಾನದ ಮಧ್ಯ ಭಾಗದಿಂದ ನಮ್ಮ ಕಾಲದವರೆಗೆ, ನವ ಕರ್ನಾಟಕ ಪಬ್ಲಿಕೇಶನ್ಸ್, ಬೆಂಗಳೂರು.

ಆಲೆಟ್ಟಿ ರಾಮಣ್ಣ ಶಗ್ರಿತ್ತಾಯ, ೧೯೫೭, ಕಲ್ಯಾಣಪ್ಪನ ಕಾಟಕಾಯಿ ಯಕ್ಷಗಾನ ಪ್ರಸಂಗವು, ರಾಷ್ಟ್ರ ಬಂಧು ಪ್ರೆಸ್ ಮಂಗಳೂರು.

ಬಾರ್ಕೂರು ಉದಯ, ೨೦೦೩, ಹೈದರಾಲಿ ಟಿಪ್ಪು ಇತಿಹಾಸ ಕಥನ, ಮಾನವತಾ ವೇದಿಕೆ, ಮಂಗಳೂರು.

ಬಿಪಿನ್ ಚಂದ್ರ ಮತ್ತು ಇತರರು, ೨೦೦೧, ಸ್ವಾತಂತ್ರ್ಯದ ಹೋರಾಟ, ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ, ನವದೆಹಲಿ.

ಭೀಮಂಡ ಕುಶಾಲಪ್ಪ, ೧೯೫೫, ಕೊಡಗು ಚರಿತ್ರೆ, ಪಾಲೂರು ಕೊಡಗು.

ಚಂದ್ರ ಪೂಜಾರಿ ಮತ್ತು ನಿತ್ಯಾನಂದ ಶೆಟ್ಟಿ, ೨೦೦೮, ಕರಾವಳಿ ಕರ್ನಾಟಕದ ಕೋಮುವಾದ, ಪ್ರಸಾರಾಂಗ ಕನ್ನಡ ವಿ. ವಿ. ಹಂಪಿ.

ಚಂದ್ರಶೇಖರ್. ಟಿ.ಆರ್, ೨೦೦೩, ಕರ್ನಾಟಕ ಅಭಿವೃದ್ಧಿಯ ಸಾಮಾಜಿಕ ನೆಲೆಗಳು, ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು.

ಚಿನ್ನಪ್ಪ ಗೌಡ (ಸಂ), ೧೯೮೯, ಪನಿಯಾರ ನೆಂಪು ಸಂಚಿಕೆ, ಅಖಿಲ ಭಾರತ ತುಳು ಸಮ್ಮೇಳನ, ತುಳು ಕೂಟ, ಮಂಗಳೂರು.

ಧರ್ಮಪಾಲ್- ಕನ್ನಡಕ್ಕೆ ಚಕ್ರವರ್ತಿ, ೨೦೦೩, ಸ್ವದೇಶಿ ಮತ್ತು ಭಾರತೀಯತೆ, ಸ್ವರಾಜ ಪ್ರಕಾಶನ ಸಮೂಹ ಬೆಂಗಳೂರು.

ಧರ್ಮಪಾಲ, ೨೦೦೪, ಆಂಗ್ಲರ ಮೊದಲ ಭಾರತ, ಸ್ವರಾಜ ಪ್ರಕಾಶನ ಸಮೂಹ ಬೆಂಗಳೂರು.

ದೇವರ ಕೊಂಡಾ ರೆಡ್ಡಿ, ಜಯಪ್ರಕಾಶ ಮಾವಿನ ಕುಳಿ (ಸಂ), ೨೦೦೪, ತುಳುನಾಡಿನ ಜೈನ ಶಾಸನಗಳು, ಪ್ರಸಾರಾಂಗ ಕನ್ನಡ ವಿ. ವಿ. ಹಂಪಿ

ದೇವಿಪ್ರಸಾದ್ ಸಂಪಾಜೆ – ೧೯೯೯ ಅಮರಸುಳ್ಯದ ಸ್ವಾತಂತ್ರ್ಯ ಸಮರ, ಕನ್ನಡ ಪ್ರಪಂಚ ಪ್ರಕಾಶನ ಪುತ್ತೂರು.

ದೇವಿಪ್ರಸಾದ್ ಸಂಪಾಜೆ ೨೦೦೩, ಕೊಡಗಿನಲ್ಲಿ ಭಾಷಾ ಸಾಂಸ್ಕೃತಿಕ ಸಾಮರಸ್ಯ ಅಮರಕ್ರಾಂತಿ ಉತ್ಸವ ಸಮಿತಿ, ಸುಳ್ಯ.

ಎಪಿಗ್ರಾಫಿಯಾ ಕರ್ನಾಟಕ, ೧೯೭೨, ಕೊಡಗು ಜಿಲ್ಲೆ ಸಂಪುಟ ೧, ಕನ್ನಡ ಅಧ್ಯಯನ ಸಂಸ್ಥೆ ಮೈಸೂರು.

ಗಣಪತಿ ಐ. ಟಿ, ೧೯೯೭, 'ಕೊಡವರು' ಕೊಡಗು ಪ್ರೆಸ್ ಮಡಿಕೇರಿ, ಉತ್ತರ ಕೊಡಗು.

ಗಣಪತಿ ಭಟ್ಟ, ೨೦೧೦, ಪಂಜ ಸೀಮಾ ದರ್ಶನ, ಭಾರತಿ ಪ್ರಕಾಶನ ಬೆಂಗಳೂರು.

ಗಣಪತಿ ರಾವ್ ಐಗಳ್. ಎಂ., ೧೯೨೩, ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ, ದ್ವಿತಿಯ ಮುದ್ರಣ ೨೦೦೪, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ, ಉಡುಪಿ.

ಗೂಗಿ ವಾ ತಿಯೊಂಗೊ, ಕನ್ನಡಕ್ಕೆ ರೆಹಮತ್ ತರೀಕೆರೆ, ೧೯೯೬, ವಸಾಹತು ಪ್ರಜ್ಞೆ ಮತ್ತು ವಿಮೋಚನೆ, ಬೆಳ್ಳಿ ಚುಕ್ಕಿ ಪುಸ್ತಕಾಲಯ ಬೆಂಗಳೂರು.

ಗೋಪಾಲ ಬಾ.ರಾ, ೧೯೮೬, ಕರ್ನಾಟಕದ ಇತಿಹಾಸ, ಕನ್ನಡ ಅಧ್ಯಯನ ಸಂಸ್ಥೆ ಮೈಸೂರು.

ಗೋವಿಂದ ರಾಜು ಸಿ.ಆರ್. ೨೦೦೯, ನವಚಾರಿತ್ರಿಕವಾದ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಹೇಮಾವತಿ ವಿ. ಹೆಗ್ಗಡೆ (ಸಂ), ೨೦೦೯, ಕೊಡಿಪು, ವಿಶ್ವ ತುಳು ಸಮ್ಮೇಳನೊ ನೆಂಪು ಸಂಚಿ, ಬೊಳ್ತೇರಿ, ತುಳುನಾಡ್.

ಕಡವ ಶಂಭು, ಶರ್ಮ, ೧೯೭೦ ತುಳು ದೇಶ ಭಾಷಾ ವಿಚಾರವು, ಜನತಾ ಪವರ್ ಪ್ರೆಸ್, ವಿಟ್ಲ.

ಕನ್ನಡ ಸಾಹಿತ್ಯ ವಿಭಾಗದ ಸದಸ್ಯರು, ೧೯೯೯, ಕರ್ನಾಟಕ ಕನ್ನಡಿ, ಕನ್ನಡ ವಿಶ್ವವಿದ್ಯಾಲಯ ಹಂಪಿ.

ಕೇಶವ ಕೃಷ್ಣ ಕುಡ್ವ, ೧೯೪೮, ದಕ್ಷಿಣ ಕನ್ನಡದ ಇತಿಹಾಸ, ಮಂಗಳೂರು.

ಕೆ. ಜಿ. ಭಟ್ ಸೂರಿ (ಸಂ), ೨೦೦೯, ಕರ್ನಾಟಕ ಶಾಸನ ಸಂಶೋಧನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

ಕೆಮ್ಮೂರು ರಘುಪತಿ ಭಟ್ಟ, ೧೯೭೯, ತುಳುನಾಡಿನ ಸ್ಥಳ ನಾಮಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಕಿಲ್ಲೆ ಎಸ್. ಎನ್ ಮತ್ತು ಶೀನಪ್ಪ ಹೆಗ್ಡೆ ಎಸ್, ೧೯೫೪, ಪ್ರಾಚೀನ ತುಳುನಾಡು, ಮಂಗಳೂರು.

ಕೃಷ್ಣ ಭಟ್ ಹೆರಂಜೆ ಮತ್ತು ಎಸ್. ಡಿ. ಶೆಟ್ಟಿ (ಸಂ) ೨೦೦೦, ತುಳು ಕರ್ನಾಟಕದ ಅರಸು ಮನೆತನಗಳು, ಪ್ರಸಾರಾಂಗ, ಕನ್ನಡ ವಿ. ವಿ. ಹಂಪಿ.

ಕೃಷ್ಣ ಭಟ್ ಹೆರಂಜೆ ಮತ್ತು ಮುರಳೀಧರ ಉಪಾಧ್ಯ ಹಿರಿಯಡಕ, ೧೯೯೫, ಗೋವಿಂದ ಪೈ ಸಂಶೋಧನಾ ಸಂಪುಟ, ರಾಷ್ಟ್ರ ಕವಿ ಗೋವಿಂದ ಪೈ ಸಂಶೋಧನ ಕೇಂದ್ರ ಉಡುಪಿ.

ಕೃಷ್ಣಯ್ಯ, ೧೯೫೨, ರಾಜಾಭಿಯೋಗಿ ಕಲ್ಯಾಣ ಸ್ವಾಮಿ ಅಥವಾ ಅಮರ ಸುಳ್ಯದ ಕಾಟಕಾಯಿ, ಪಂಜೆ ಸ್ಮಾರಕ ಸಮಿತಿ ಪುತ್ತೂರು.

ಕೃಷ್ಣಯ್ಯ. ಡಿ. ಎನ್. ಮತ್ತು ಸುಬ್ಬರಾಯ ೧೯೫೭, ಕೊಡಗು ಸಂಸ್ಥಾನದ ರಾಜೇಂದ್ರ ನಾಮೆ, ಶ್ರೀ ಕಾವೇರಿ ಪ್ರಕಟಣಾಲಯ ಮಡಿಕೇರಿ

ಕೃಷ್ಣಯ್ಯ ಡಿ. ಎನ್, ೧೯೯೫, ಕೊಡಗಿನ ಇತಿಹಾಸ – ಮೈಸೂರು ವಿಶ್ವ ವಿದ್ಯಾಲಯ ಮೈಸೂರು.

ಕುಶಾಲಪ್ಪ ಗೌಡ. ಕೆ, ಚಿನ್ನಪ್ಪ ಗೌಡ. ಕೆ. ೧೯೮೩, ದಕ್ಷಿಣ ಕನ್ನಡ ಜಿಲ್ಲೆಯ ಕೃಷಿಯತ್ತುಗಳು, ಧರ್ಮಸ್ಥಳ ಮಂಜುನಾಥೇಶ್ವರ ಪುಸ್ತಕ ಪ್ರಕಾಶನ ಮಾಲೆ, ಉಜಿರೆ.

ಜೀವನ್ ಕುಮಾರ್, ೨೦೦೨, ಕರ್ನಾಟಕ ಮುನ್ನೋಟ, ಪ್ರಸಾರಾಂಗ, ಬೆಂಗಳೂರು.ವಿ. ವಿ.

ಜೋಷಿ ಜಿ. ವಿ., ೨೦೦೮, ಕರಾವಳಿ ಕರ್ನಾಟಕದ ಅಭಿವೃದ್ಧಿ, ಪ್ರಸಾರಾಂಗ ಮಂಗಳೂರು.ವಿ. ವಿ.

ಲಕ್ಷ್ಮಣ ತೆಲಗಾವಿ, ೧೯೮೧, ಕೆಲವು ವೀರಶೈವ ರಾಜಮನೆತನಗಳು, ಸಿದ್ಧ ಗಂಗಾ ಶ್ರೀ.

ಮಂಜುನಾಥ ಬೇವಿನಕಟ್ಟಿ (ಸಂ), ೨೦೦೯, ಸಾಂಸ್ಕೃತಿಕ ಅನನ್ಯತೆ ಮತ್ತು ಹಲಗು ಬಂಡಾಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

ಮೊಹಿಬ್ಬುಲ್ ಹಸನ್ (ಮೂಲ), ಕನ್ನಡಕ್ಕೆ : ಸಮೇತನ ಹಳ್ಳಿ ರಾಮರಾಯ, ೧೯೮೮, ಟಿಪ್ಪು ಸುಲ್ತಾನನ ಇತಿಹಾಸ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

ಮೋಹನ ಕೃಷ್ಣ ರೈ, ೨೦೦೬, ವಸಾಹತು ಪೂರ್ವ ಕರ್ನಾಟಕದ ನಗರ ಚರಿತ್ರೆ , ಪ್ರಸಾರಾಂಗ ಕನ್ನಡ ವಿ. ವಿ. ಹಂಪಿ.

ಮೋಹನ ಕೃಷ್ಣ ರೈ, ೨೦೦೭, ವಸಾಹತುಶಾಹಿ ಮತ್ತು ನಗರೀಕರಣ, ಪ್ರಸಾರಾಂಗ ಕನ್ನಡ ವಿ. ವಿ. ಹಂಪಿ.

ಮೋಹನ ಕೃಷ್ಣ ರೈ, ೨೦೧೦, ಕೆನರಾದ ವಿಭಜನೆ; ಹತ್ತಿ ರಾಜಕೀಯದ ವಿಶ್ಲೇಷಣೆ ಪ್ರಸಾರಾಂಗ ಕನ್ನಡ ವಿ. ವಿ. ಹಂಪಿ.

ಮುಕುಂದ ಪ್ರಭು (ಸಂ), ೨೦೦೦, ' ಪೊಲಿ' – ಕೆನರಾ ೨೦೦, ಜಿಲ್ಲಾಧಿಕಾರಗಳು, ದ. ಕ. ಜಿಲ್ಲೆ, ಮಂಗಳೂರು.

ಮುಜಾಫರ್ ಅಸ್ಸಾದಿ, ೨೦೦೯, ಐಡೆಂಟಿಟಿ ರಾಜಕೀಯ: ರೈತ, ರೈತ ಹೋರಾಟ ಹಾಗೂ ಸಾಮಾಜಿಕ ಚಳುವಳಿಗಳು, ಕೆ.ಎಸ್. ಮುದ್ದಪ್ಪ ಸ್ಮಾರಕ ಟ್ರಸ್ಟ್, ಕೃಷ್ಣಾಪುರ ದೊಡ್ಡಿ.

ಮುರಳೀಧರ ಉಪಾಧ್ಯ ಹಿರಿಯಡಕ , ಪಿ ಎನ್. ನರಸಿಂಹ ಮೂರ್ತಿ, ೨೦೦೦, ದಕ್ಷಿಣ ಕನ್ನಡ ಜಿಲ್ಲೆಯ ದೇವಾಲಯಗಳು, ಉಡುಪಿ.

ನಡಿಕೇರಿಯಂಡ ಚಿನ್ನಪ್ಪ, ೧೯೯೫, ಪಟ್ಟೋಲೆ ಪಳಮೆ, ಕರ್ನಾಟಕ ಸರಕಾರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

ನಡ್ಕ. ಡಿ. ಜಿ., ೨೦೦೪, ಅರಸು ದೈವಗಳು ಮತ್ತು ಇಕ್ಕೇರಿ ಅರಸರು, ಜಾನಪದ ಕೂಡುಗಟ್ಟು ಸುಳ್ಯ.

ನರಸಿಂಹ ಮೂರ್ತಿ, ೨೦೦೯, ಕರ್ನಾಟಕ ನಾಣ್ಯಗಳು, ನಿರ್ದೇಶಕರು ಪ್ರಸಾರಾಂಗ, ಮಾನಸ ಗಂಗೋತ್ರಿ, ಮೈಸೂರು ೬.

ನಾಗೇಶ್ ಹೆಚ್. ಕೆ, ೧೯೯೯, ಕೊಡವರ ಮದುವೆ, ಪ್ರಸಾರಾಂಗ ಕನ್ನಡ ವಿ.ವಿ. ಹಂಪಿ.

ನಾಗರಾಜ ಎಂ. ಜಿ. ೧೯೯೩, ಕೆಂಬಟ್ಟಿ ಹೊಲೆಯರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ನಾಗರಾಜ ಎಂ. ಜಿ. ೨೦೦೪, ಕೊಡಗಿನ ಹಾಲೇರಿ ರಾಜವಂಶವು, ಭಾಗ ೧, ಮತ್ತು ೨. ಕರ್ನಾಟಕ ಸರ್ಕಾರ ಪ್ರಾಚ್ಯ ವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ ಹೊಸಪೇಟೆ.

ನಾಗರಾಜ್ .ಎಂ.ಜಿ., ೨೦೦೯, ಕರ್ನಾಟಕ ರೈತ ಚಳುವಳಿ - ಸತ್ಯಾಗ್ರಹಗಳು ಸಹಸ್ರನಾಮ ಸಂಪುಟ ೧, ೨, ೩, ಕರ್ನಾಟಕ ವಿಧಾನ ಮಂಡಲದ ಗ್ರಂಥಾಲಯ ಸಮಿತಿ, ವಿಧಾನ ಸೌಧ, ಬೆಂಗಳೂರು.

ನಿರಂಜನ ೧೯೭೭, ಸ್ವಾಮಿ ಅಪರಂಪಾರ, ಕಥಾ ಸಾಹಿತ್ಯ ಬೆಂಗಳೂರು.

ನಿರಂಜನ,೨೦೦೩, ಕಲ್ಯಾಣ ಸ್ವಾಮಿ ಡಿ.ವಿ.ಕೆ. ಮೂರ್ತಿ ಮೈಸೂರು.

ಪಿಯುಸ್ ಫಿಡೆಲಿಸ್ ಪಿಂಟೋ, ೧೯೯೯, ಕರಾವಳಿ ಕರ್ನಾಟಕದ ಕ್ರೈಸ್ತರ ಇತಿಹಾಸ, ೧೫೦೦-೧೭೬೩, ಎ. ಡಿ. ಸಮನ್ವಯ, ಮಂಗಳೂರು.

ಪ್ರಭಾಕರ ನೀರಮಾರ್ಗ, ೨೦೦೯,ಮಂಗಳೂರ ಕ್ರಾಂತಿ, ಹೇಮಾವತಿ ಪ್ರಕಾಶನ, ಕುಲಶೇಖರ ಮಂಗಳೂರು.

ಪ್ರಭಾಕರ ಶಿಶಿಲ, ೧೯೮೫, ಶಿಕಾರಿಯ ಸೀಳುನೋಟ, ಬಡ್ಡಡ್ಕ ಪ್ರಕಾಶನ ಸುಳ್ಯ.

ಪ್ರಭಾಕರ ಶಿಶಿಲ,೨೦೦೨, ಆರ್ಥಿಕ ಚಿಂತನವಾಹಿನಿ, ಮಂಗಳ ಪ್ರಕಾಶನ, ಮಂಗಳೂರು.

ಪ್ರಭಾಕರ ಶಿಶಿಲ, ೨೦೦೫, ಅಮರಕ್ರಾಂತಿ ವೀರರು, ಪ್ರಗತಿ ಪ್ರಕಾಶನ ಸುಳ್ಯ.

ಪ್ರಭಾಕರ ಶಿಶಿಲ,೨೦೦೯, ನದಿ ಎರಡರ ನಡುವೆ, ವಸಂತ ಪ್ರಕಾಶನ, ಬೆಂಗಳೂರು.

ಪ್ರಭಾಕರ ಶಿಶಿಲ, ೨೦೦೯, ಭಾರತದ ಆರ್ಥಿಕತೆ, ಬಾವಿಕಟ್ಟಿ ಪ್ರಕಾಶನ, ಗುಲ್ಬರ್ಗಾ.

ಪ್ರಭಾಕರ ಶಿಶಿಲ, ೨೦೧೦, ಕೊಡಗಿನ ಐತಿಹ್ಯ ಕತೆಗಳು, ರಾಜ್ ಪ್ರಕಾಶನ ಮೈಸೂರು.

ಪ್ರಭಾಕರ ಶಿಶಿಲ, ೨೦೧೦, ನಿಸರ್ಗ ನಿನಾದ, ರಾಜ್ ಪ್ರಕಾಶನ, ಮೈಸೂರು.

ಪ್ರಭಾಕರ ಶಿಶಿಲ, ೨೦೧೦, ಸುವರ್ಣ ಕಥಾ ಸಂಪುಟ, ರಾಜ್ ಪ್ರಕಾಶನ, ಮೈಸೂರು.

ಪ್ರಭಾಕರ ಶಿಶಿಲ, ೨೦೧೦,ಮೂಡಣದ ಕೆಂಪುಕಿರಣ, ರಾಜ್ ಪ್ರಕಾಶನ, ಮೈಸೂರು.

ಪ್ರಭಾಕರ ಶಿಶಿಲ,೨೦೧೧, ಕೊಡಗು ಕಥನ, ಸುನಿಲ್ ಪ್ರಕಾಶನ, ಬೆಂಗಳೂರು.

ಪ್ರಭಾಕರ ಶಿಶಿಲ,೨೦೧೧, ಅಭಿವೃದ್ಧಿ, ಯೋಜನೆ ಮತ್ತು ಪರಿಸರ ಅರ್ಥಶಾಸ್ತ್ರ, ಸುನಿಲ್ ಪ್ರಕಾಶನ ಬೆಂಗಳೂರು.

ಪ್ರಭಾಕರ ಶಿಶಿಲ, ೨೦೧೧, ಮಹಾನ್ ಅರ್ಥಶಾಸ್ತ್ರಜ್ಞರು, ಸುನಿಲ್ ಪ್ರಕಾಶನ ಬೆಂಗಳೂರು.

ಪುಂಡಿಕೈ ಗಣಪಯ್ಯ ಭಟ್, ೧೯೯೭, ತೌಳವ, ಸಿಂಧೂರ ಪ್ರಕಾಶನ ಮೂಡಬಿದಿರೆ.

ಪುರುಷೋತ್ತಮ ಬಿಳಿಮಲೆ, ೧೯೯೦ ಕರಾವಳಿ ಜಾನಪದ – ಮಂಗಳೂರು ವಿಶ್ವವಿದ್ಯಾಲಯ ಮಂಗಳ ಗಂಗೋತ್ರಿ.

ಪುರುಷೋತ್ತಮ ಬಿಳಿಮಲೆ,೧೯೮೫, ಮೆಕೆಂಜಿ. ಕೈಫಿಯತ್‌ಗಳು, ಪ್ರೆಸ್ ಕಾಂಪ್ಲೆಕ್ಸ್ ಪುತ್ತೂರು.

ಪುರುಷೋತ್ತಮ ಬಿಳಿಮಲೆ, ೧೯೮೬, ಅಂಗರಾಜನ ಹುಕುಂನಾಮೆ ಒಂದು ಅಧ್ಯಯನ ಮೈಸೂರು ವಿ. ವಿ. ಮೈಸೂರು.

ರಮೇಶ ಕೆ. ವಿ. ಮತ್ತು ಶರ್ಮ. ಜೆ, ೧೯೭೮, ತುಳುನಾಡಿನ ಶಾಸನಗಳು, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ ಉಡುಪಿ.

ರಮೇಶ ಕೆ. ವಿ., ಶರ್ಮ ಎಂ. ಜೆ, ೧೯೮೫, ತುಳುನಾಡಿನ ಅರಸು ಮನೆತನಗಳು, ಧ. ಮಂ.ಪುಸ್ತಕ ಪ್ರಕಾಶನ ಮಾಲೆ.

ರಮೇಶ ಕೆ. ವಿ., ೧೯೬೮. ತುಳುನಾಡಿನ ಇತಿಹಾಸ, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ ಉಡುಪಿ.

ರಂಗಸ್ವಾಮಯ್ಯ, ವೈ. ಆರ್. ೧೯೯೨, ಕರ್ನಾಟಕದ ಸಂಕ್ಷಿಪ್ತ ಚರಿತ್ರೆ. ಅನಂತ ಪ್ರಕಾಶನ. ಸರಸ್ವತಿ ಪುರಂ – ಮೈಸೂರು.

ರಾಜಾರಾಮ ಹೆಗಡೆ, ೨೦೦೮, ವಸಾಹತುಪೂರ್ವ ಕರ್ನಾಟಕದ ರಾಜ್ಯ ಪದ್ಧತಿ, ಪ್ರಸಾರಾಂಗ ಕನ್ನಡ ವಿ. ವಿ ಹಂಪಿ.

ರಾಜಾರಾಮ ಹೆಗಡೆ ಮತ್ತು ಅಶೋಕ್ ಶೆಟ್ಟರ್, ೨೦೦೧, ಮಲೆ ಕರ್ನಾಟಕದ ಅರಸು ಮನೆತನಗಳು, ಪ್ರಸಾರಾಂಗ ಕನ್ನಡ ವಿ. ವಿ ಹಂಪಿ.

ರಾಮ ಭಟ್ ಉಪ್ಪಂಗಳ, ೧೯೯೪, ಗಡಿನಾಡು ಕಾಸರಗೋಡು, ಅಕಲಂಕ ಪ್ರಕಾಶನ ಉಡುಪಿ.

ರಾಮಚಂದ್ರಚಾರ್, ೧೯೯೮, ಕೊಡಗು ಒಂದು ನೋಟ - ಸುನಂದ ಪ್ರಕಾಶನ ವಿರಾಜಪೇಟೆ.

ರಾಮಕೃಷ್ಣ, ಆರ್., ೨೦೦೭, ಕರ್ನಾಟಕದ ಬುಡಕಟ್ಟುಗಳು, ಪ್ರಸಾರಾಂಗ ಮೈಸೂರು ವಿ. ವಿ. ಮೈಸೂರು.

ರೇಣುಕಾರ್ಯ ಸಿ.ಕೆ. ೧೯೮೭, ಆರ್ಥಿಕ ಚಿಂತನೆ ನಡೆದು ಬಂದ ಹಾದಿ, ಚೇತನ ಬುಕ್ ಹೌಸ್ ಮೈಸೂರು.

ರೊಮಿಲ್ಲಾ ಥಾಪರ್ ಮತ್ತಿತರರು, ಕನ್ನಡಕ್ಕೆ ಕೆ. ಎಲ್. ಗೋಪಾಲಕೃಷ್ಣ ರಾವ್ ೧೯೯೫, ಕೋಮುವಾದ ಹಾಗೂ ಭಾರತೀಯ ಇತಿಹಾಸ ಲೇಖನ, ನವ ಕರ್ನಾಟಕ ಪಬ್ಲಿಕೇಶನ್ಸ್, ಬೆಂಗಳೂರು.

ಶೆಟ್ಟಿ ಎಸ್. ಡಿ. ೧೯೯೯, ತುಳುನಾಡಿನ ಜೈನ ಧರ್ಮ, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ ಉಡುಪಿ.

ಶೆಟ್ಟಿ ಎಸ್. ಡಿ, ೨೦೦೦, ದ.ಕ. ಜಿಲ್ಲೆಯ ಜೈನ ಧರ್ಮ ಪರಂಪರೆ ಮತ್ತು ಅದರ ವಿಶಿಷ್ಟ ಸಂಪ್ರದಾಯಗಳು, ಉಜಿರೆ.

ಶಿವಾನಂದ ಬೇಕಲ, ೧೯೯೯, ಬೇಕಲಕೋಟೆ ಒಂದು ಚಾರಿತ್ರಿಕ ಅಧ್ಯಯನ, ಕ.ಸಾ.ಪ ಘಟಕ ಕಾಸರಗೋಡು.

ಶಿವರಾಮ ಕಾರಂತ, ೧೯೯೧, ದಕ್ಷಿಣ ಕನ್ನಡ ಅಂದು – ಇಂದು, ಎಸ್. ಬಿ. ಎಸ್. ಪಬ್ಲಿಷರ್ಸ್, ಡಿಸ್ಟ್ರಿಬ್ಯೂಟರ್ಸ್, ಬೆಂಗಳೂರು.

ಶೀನಪ್ಪ ಹೆಗ್ಡೆ, ನಂದೊಳ್ಗೆ ಅಮುಣಿಂಜೆಗುತ್ತು ೧೯೧೯, ದಕ್ಷಿಣ ಕನ್ನಡ ಜಿಲ್ಲೆಯ ಚರಿತ್ರೆ ಮತ್ತು ಭೂತಾಳ ಪಾಂಡ್ಯರಾಯನ ಅಳಿಯಕಟ್ಟು, ದ್ವಿತೀಯ ಮುದ್ರಣ ೧೯೮೧, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ ಉಡುಪಿ.

ಶರ್ಮ ತಿ.ತಾ ೧೯೫೭, ಕರ್ನಾಟಕದಲ್ಲಿ ಸ್ವಾತಂತ್ರ್ಯ ಸಂಗ್ರಾಮ, ೧೮೦೦–೧೮೫೭, ಮೈಸೂರು ಸಂಸ್ಥಾನದ ಸರಕಾರ ಬೆಂಗಳೂರು.

ಶರ್ಮ ತಿ.ತಾ, ೧೯೯೬, ಮೈಸೂರು ಇತಿಹಾಸದ ಹಳೆಯ ಪುಟಗಳು, ನವನೀತ ಪ್ರಕಾಶನ ಬೆಂಗಳೂರು.

ಶಾಸ್ತ್ರಿ, ಬಿ.ಎಸ್., ೧೯೭೨, ಕೆಳದಿ ಅರಸರು ಹಾಗೂ ಪೋರ್ಚುಗೀಸರು, ಕರ್ನಾಟಕ ವಿ.ವಿ. ಧಾರವಾಡ.

ಶೈಲಾಬಾಯಿ ಯು., ೨೦೦೨, ದ.ಕ. ಜಿಲ್ಲೆಯ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಜ್ಞಾನೋದಯ ಪಬ್ಲಿಕೇಶನ್, ಬೆಂಗಳೂರು.

ಶ್ರೀನಿವಾಸ – ೧೯೮೪ ಚಿಕ್ಕವೀರರಾಜೇಂದ್ರ - ಜೀವನ ಕಾರ್ಯಾಲಯ ಬೆಂಗಳೂರು.

ಶ್ರೀನಿವಾಸ ಮೂರ್ತಿ ಮತ್ತು ರಾಮಕೃಷ್ಣ, ೧೯೯೭, ಸಮಗ್ರ ಕರ್ನಾಟಕ ಚರಿತ್ರೆ, ಓರಿಯೆಂಟ್ ಲಾಂಗ್ ಮನ್, ಬೆಂಗಳೂರು.

ಸತ್ಯಮೂರ್ತಿ ಬಿ. ಜಿ , ೨೦೦೬ ಸುವರ್ಣ ಕರ್ನಾಟಕ ಸವಿನೆನಪು, ಸತ್ಯ ಮೂರ್ತಿ ಪ್ರಕಾಶನ ಬೆಂಗಳೂರು.

ಸಾಲೆತ್ತೊರೆ ಬಿ. ಎ. ಮತ್ತು ದೇಸಾಯಿ ಪಾಂಡು ರಂಗ ರಾಯರು, ೨೦೦೫, ಕನ್ನಡ ನಾಡಿನ ಚರಿತ್ರೆ, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು.

ಸಿರಿಗೆರೆ ಲಕ್ಷ್ಮೀ ನರಸಿಂಹ ಶಾಸ್ತ್ರಿ – ೧೯೩೬, ಐಗೂರ ಇತಿಹಾಸ, ಶ್ರೀನಿವಾಸ ಮುದ್ರಣಾಲಯ ಹಾಸನ.

ಸುಭಾಷ್ ಹೆಗ್ಗಡೆ (ಕನ್ನಡಕ್ಕೆ), ೨೦೦೩, ಆಂಗ್ಲರಿಂದ ಬಹು ರಾಷ್ಟ್ರೀಯ ಕಂಪೆನಿಗಳ ಗುಲಾಮಿಯವರೆಗೆ, ಸ್ವರಾಜ ಪ್ರಕಾಶನ ಸಮೂಹ, ಬೆಂಗಳೂರು.

ಸುರೇಂದ್ರದಾನಿ, ೧೧೧೮, ಕರ್ನಾಟಕದ ಹೋರಾಟ, ಪ್ರಕಾಶ ಸಾಹಿತ್ಯ, ಬೆಂಗಳೂರು.

ಸುರೇಂದ್ರ ರಾವ್, ೨೦೦೫, ಇತಿಹಾಸ ಮತ್ತು ಸಮಾಜ, ಪ್ರಸಾರಾಂಗ, ಕನ್ನಡ. ವಿ. ವಿ. ಹಂಪಿ.

ಸುರೇಶ್ .ಸಿ. ಎಸ್.,೨೦೦೦, ಕೊಡಗು ದೇವಾಲಯ ದರ್ಶನ, ಮಲೆನಾಡು ಕಲಾ ಸಾಹಿತ್ಯ ವೇದಿಕೆ, ಮಡಿಕೇರಿ.

ಸೂರ್ಯನಾಥ ಕಾಮತ್ (ಸಂ), ೧೯೯೨, ಕೊಡಗು ಜಿಲ್ಲಾ ಗಜೆಟಿಯರ್, ಬೆಂಗಳೂರು.

ಸೂರ್ಯನಾಥ ಕಾಮತ್ ೨೦೦೯, ಕರ್ನಾಟಕದ ಇತಿಹಾಸ ಹಲವು ಮುಖಗಳು, ಸುಮುಖ ಪ್ರಕಾಶನ ಬೆಂಗಳೂರು.

ಸೂರ್ಯನಾಥ ಕಾಮತ್, ೨೦೦೭, ಕರ್ನಾಟಕ ಕೈಗನ್ನಡಿ, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು.

ಉದಯವರ್ಮ ರಾಜ, ೧೯೯೮, ತುಳುನಾಡಿನ ಗತ ವೈಭವ, ಕ. ಸಾ. ಪ. ಘಟಕ, ಕಾಸರಗೋಡು.

ವಸಂತ ಮಾಧವ, ೧೯೯೮, ಅಬ್ಬಕ್ಕ ದೇವಿಯರು, ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಮಂಗಳೂರು.

ವಸಂತ ಮಾಧವ ಕೆ. ಜಿ. ೧೯೯೮, ಕರಾವಳಿ ಕರ್ನಾಟಕದ ರಾಜಕೀಯ ಇತಿಹಾಸ ಮತ್ತು ಸಂಶೋಧನೆ, ಮಂಗಳೂರು.

ವಸಂತ ಮಾಧವ ಕೆ. ಜಿ. ೧೯೯೮, ಅಬ್ಬಕ್ಕ ದೇವಿಯರು, ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಮಂಗಳೂರು.

ವಿದ್ಯಾಧರ ಬಡ್ಡಡ್ಕ, ೧೯೯೫, ಕೆದಂಬಾಡಿ ರಾಮಗೌಡ, ಬಂಟ ಮಲೆ ಪ್ರಕಾಶನ, ಗುತ್ತಿಗಾರು.

ವಿಜಯ ಪೂಣಚ್ಚ ತಂಬಂಡ (ಸಂ) ೨೦೦೧, ಕನ್ನಡ ವಿಶ್ವ ವಿದ್ಯಾಲಯ ವಿಶ್ವಕೋಶ ನಾಲ್ಕು ಚರಿತ್ರೆ - ಪ್ರಸಾರಾಂಗ – ಕನ್ನಡ ವಿಶ್ವವಿದ್ಯಾಲಯ ಹಂಪಿ.

ವಿಜಯ ಪೂಣಚ್ಚ ತಂಬಂಡ, ೨೦೦೪, ಪಳಮೆ, ಪ್ರಸಾರಾಂಗ, ಕನ್ನಡ ವಿ. ವಿ. ಹಂಪಿ.

ವಿಜಯ ಪೂಣಚ್ಚ ತಂಬಂಡ, ೨೦೦೫, ಕೊಡಗು ವಿವರಣೆ, ಕನ್ನಡ ವಿ. ವಿ. ಹಂಪಿ.

ವಿಜಯ ಪೂಣಚ್ಚ ತಂಬಂಡ (ಸಂ),೨೦೧೦, ಭಾರತ ಉಪಖಂಡದ ಆಧುನಿಕ ಚರಿತ್ರೆ, ವಿವಿಧ ಆಯಾಮಗಳು, ಕನ್ನಡ ವಿಶ್ವ ವಿದ್ಯಾಲಯ ಚರಿತ್ರೆ, ಸಂಪುಟ ಮೂರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

ವಿಜಯ ಪೂಣಚ್ಚ ತಂಬಂಡ (ಸಂ),೨೦೧೦, ಭಾರತ ಉಪಖಂಡದ ಆಧುನಿಕ ಪೂರ್ವ ಚರಿತ್ರೆ, ವಿವಿಧ ಆಯಾಮಗಳು, ಕನ್ನಡ ವಿಶ್ವ ವಿದ್ಯಾಲಯ ಚರಿತ್ರೆ, ಸಂಪುಟ ಎರಡು ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

ವಿಜಯ ಪೂಣಚ್ಚ ತಂಬಂಡ ಮತ್ತು ಚಿನ್ನಸ್ವಾಮಿ ಸೋಸಲೆ (ಸಂ), ೨೦೧೦, ಆಫ್ರಿಕಾ ಚರಿತ್ರೆಯ ವಿವಿಧ ಆಯಾಮಗಳು, ಕನ್ನಡ ವಿಶ್ವ ವಿದ್ಯಾಲಯ ಚರಿತ್ರೆ, ಸಂಪುಟ ಏಳು ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

ವಿಜಯ ಪೂಣಚ್ಚ ತಂಬಂಡ ಮತ್ತು ಚಿನ್ನಸ್ವಾಮಿ ಸೋಸಲೆ (ಸಂ), ೨೦೧೦, ಸಮಕಾಲೀನ ಕರ್ನಾಟಕ – ಚರಿತ್ರೆಯ ವಿವಿಧ ಆಯಾಮಗಳು, ಕನ್ನಡ ವಿಶ್ವ ವಿದ್ಯಾಲಯ ಸಂಪುಟ ಆರು ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

ವಿಜಯ ಪೂಣಚ್ಚ ತಂಬಂಡ ಮತ್ತು ಮೋಹನಕೃಷ್ಣ ರೈ (ಸಂ), ೨೦೧೦ ಏಷ್ಯಾ ಚರಿತ್ರೆಯ ವಿವಿಧ ಆಯಾಮಗಳು, ಕನ್ನಡ ವಿಶ್ವವಿದ್ಯಾಲಯ ಚರಿತ್ರೆ ಸಂಪುಟ ನಾಲ್ಕು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

ವಿಜಯ ಪೂಣಚ್ಚ ತಂಬಂಡ ಮತ್ತು ಮೋಹನಕೃಷ್ಣ ರೈ (ಸಂ), ೨೦೧೦ ಯುರೋಪ್ ಚರಿತ್ರೆಯ ವಿವಿಧ ಆಯಾಮಗಳು, ಕನ್ನಡ ವಿಶ್ವವಿದ್ಯಾಲಯ ಚರಿತ್ರೆ ಸಂಪುಟ ಐದು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

ವಿಜಯ ಪೂಣಚ್ಚ ತಂಬಂಡ ಮತ್ತು ವಿರೂಪಾಕ್ಷಿ ಪೂಜಾರಿ ಹಳ್ಳಿ (ಸಂ) ೨೦೧೦, ಚರಿತ್ರೆ, ಬರವಣಿಗೆ ಕ್ರಮಗಳು ಮತ್ತು ಸಂಶೋಧನಾ ವಿಧಾನ, ಕನ್ನಡ ವಿಶ್ವವಿದ್ಯಾಲಯ ಚರಿತ್ರೆ ಸಂಪುಟ ಒಂದು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

ವಿಜಯ ಪೂಣಚ್ಚ ತಂಬಂಡ ಮತ್ತು ವಿರೂಪಾಕ್ಷಿ ಪೂಜಾರಿ ಹಳ್ಳಿ (ಸಂ) ೨೦೧೦, ಅಮೇರಿಕಾ ಚರಿತ್ರೆಯ ವಿವಿಧ ಆಯಾಮಗಳು, ಕನ್ನಡ ವಿಶ್ವವಿದ್ಯಾಲಯ ಚರಿತ್ರೆ ಸಂಪುಟ ಎಂಟು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

ವಿವೇಕ ರೈ ಮತ್ತು ಇತರರು (ಸಂ), ೨೦೦೭, ತುಳುಸಾಹಿತ್ಯ ಚರಿತ್ರೆ, ಪ್ರಸಾರಾಂಗ, ಕನ್ನಡ ವಿ. ವಿ. ಹಂಪಿ.

III. Govt. Publications

Abhishankar K. (Ed), 1973, Karnataka State Gazeteer, South Canara, Government of Karnataka Bangalore.

Canara Disturbances, 6, 7, Judicial Index.

Cannor – 1870, Kodagu Memoir- Bangalore Central Jail Press.

Cotton. C. R , 1837, Report on the Insurrection in Canara and Coorg.

Cubbon, Mark, 1839, Observation on Cotton's Report on the Insurrection in Canara & Coorg.

Epigraphia Carnatica, 1972, Institute of Kannada Studies University of Mysore.

Gazeteer of the Bombay Presidency, 1883, Sagardeep Publications, Karawar.

Karnataka State Gazeteer, 1983, Part I & II, Government of Karnataka.

John Sturock & Harald A Stuart, 1894, Madras District Manual, South Canara, Reprint 2003, Karnataka Gazeteer Dept Bangalore.

Lewin. M, 1911, Report on the Insurrection Raised by Puttabasapah & others in the South Kanara District 1837, Collectorate Press, Mangalore.

Moegling. H, 1855, Coorg Memoirs Bangalore.

Proceeding of the Madras Board of Revenue (PMBR).

Proceeding of the Madras Revenue Department (PMRD) or Revenue Consultations

Proceedings of the Madras Judicial Department (PMJD), or Judicial Consultations.

Proceeding of the Madras Political Department (PMPD), or Judicial Consultations.

Richter, 1984, Gazeteer of Coorg.

Sturrock John, 2003, South Canara Govt. of Karnataka.

ನಿಯತಕಾಲಿಕಗಳು/ ಸ್ಮರಣ ಸಂಚಿಕೆಗಳು

ದುರ್ಗಾಕುಮಾರ್ ನಾಯರ್‌ಕೆರೆ, ೨೦೧೧,"ಅವಗಣನೆಗೆ ತುತ್ತಾದ ಅಮರಕ್ರಾಂತಿ" ಕನ್ನಡ ಪ್ರಭ, ೧೫ ಅಗೋಸ್ತು, ವಿಶೇಷ ಪುರವಣಿ.

ಕೋರನ ಸರಸ್ವತಿ ಪ್ರಕಾಶ್, ' ಕೊಡಗು ಗೌಡ ಸಂಸ್ಕೃತಿ' ಶಕ್ತಿ ದೈನಿಕ, ೭ ಜೂನ್ ೨೦೦೧, ಮಡಿಕೇರಿ ಕೊಡಗು.

ಪ್ರಭಾಕರ ಶಿಶಿಲ, "ಅಮರ ಸುಳ್ಯದ ರೈತ ಬಂಡಾಯ" ಜನವಾಹಿನಿ ೮ ಅಗೋಸ್ತು ೧೯೯೮.

ಪ್ರಭಾಕರ ಶಿಶಿಲ, "ಅಮರ ಸುಳ್ಯದ ರೈತ ಕ್ರಾಂತಿಯ ನೆನಪಿಗೆ", ಉದಯವಾಣಿ ೪ ಎಪ್ರಿಲ್ ೨೦೦೧.

ಪ್ರಭಾಕರ ಶಿಶಿಲ, "ಅಮರ ಸುಳ್ಯ: ದೇಶದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ, ತರಂಗ ೧೯ ಅಗೋಸ್ತು, ೨೦೦೭.

ಪ್ರಭಾಕರ ಶಿಶಿಲ, 'ಕೊಡಗಿನ ಕಥೆಗಳು ಮಾಲಿಕೆ' ಮಂಗಳ ಸಾಪ್ತಾಹಿಕ ೨೦ ಜುಲೈ ೨೦೧೧ – ೨೩ ನವೆಂಬರ್ ೨೦೧೧, ಮಂಗಳಾ ಪಬ್ಲಿಕೇಶನ್ಸ್ ಬೆಂಗಳೂರು.

ಪ್ರತಿಮಾ ಪಾನತ್ತಿಲ 'ಮರೆಯಲಾಗದ ಮಹಾನುಭಾವರು' ಕೊಡಗು ಕೆನರಾ ರೈತ ಬಂಡಾಯದ ಪ್ರಮುಖ ನಾಯಕರುಗಳ ಲೇಖನ ಮಾಲಿಕೆ, ಸುದ್ದಿ ಬಿಡುಗಡೆ ಸಾಪ್ತಾಹಿಕ ೮ ಆಗಸ್ಟ್ ೨೦೧೦ ರಿಂದ ೨೭ ಸೆಪ್ಟೆಂಬರ್ ೨೦೧೦ ಸುಳ್ಯ ದ. ಕ.

ಪ್ರತಿಮಾ ಪಾನತ್ತಿಲ , ೧೮೩೭ ರ ಕೊಡಗು ಕೆನರಾ ರೈತ ಬಂಡಾಯ' ಶೋಧ, ಸಂಪುಟ ೧ ಸಂಚಿಕೆ ೧, ಜುಲೈ ೨೦೧೧, ಡಾ. ಹಾ. ಮಾ. ನಾ. ಸಂಶೋಧನಾ ಕೇಂದ್ರ ಉಜಿರೆ.

ಪುರುಷೋತ್ತಮ ಬಿಳಿಮಲೆ, 'ಸ್ವಾತಂತ್ರ್ಯ ಸಂಗ್ರಾಮ; ಕರ್ನಾಟಕದ ಮೊದಲ ಹೆಜ್ಜೆಗಳು, ಗೆರಿಲ್ಲಾ ಮಾದರಿಯ ಅಮರ ಸುಳ್ಯ ದಂಗೆ' ಪ್ರಜಾವಾಣಿ ೧೫ ಆಗಸ್ಟ್ ೧೯೮೩.

ರಾಮ ಭಟ್, ' ಜೋಡು ಬಳೆಯೊಂದರ ಕಥೆ' ತರಂಗ ಸಾಪ್ತಾಹಿಕ, ೨೪ – ೩೦ ಅಗೋಸ್ತು ೧೯೮೭.

ವಸಂತ ಮಾಧವ, 'ಹೈದರಾಲಿ ಮತ್ತು ಕರ್ನಾಟಕ ಕರಾವಳಿ' ಉದಯವಾಣಿ ದೈನಿಕ ೧೯ ಜನವರಿ ೧೯೮೩.

ವಿದ್ಯಾಧರ ಬಡ್ಡಡ್ಕ, ಕುಡೆಕಲ್ಲು ಪುಟ್ಟ ಗೌಡರ ಕೇಸ್ ನಂ ೧/೧೮೩೭' ವಾರ್ತಾಭಾರತಿ ೦೫ ಏಪ್ರಿಲ್ ೨೦೦೯.

Krishnayya, D.N, 1957, the South Canara Insurrection 1837, the Quarterly Journal of Mythic Society Vol. XLVIII.

Venkatachala Shastri and Gururaja Rao(Ed), 1973, SRIKANTIKA, Dr.S.Srikanta Sastri Felicitation Volume, Geetha Book House Mysore.

ಅಭಿನಂದನಾ ಸಮಿತಿ, ೧೯೯೫. ಸಿರಿ, ಅಮೃತ ಸೋಮೇಶ್ವರ ಅಭಿನಂದನಾ ಸಂಪುಟ, ಕಲಾ ಗಂಗೋತ್ರಿ ಉಚ್ಚಿಲ.

ಮಹಾಬಲ ಕುಳ(ಸಂ), ೨೦೦೭, ಬೆಳ್ಳಾರೆ ಬೆಳಕು, ಕನ್ನಡ ಸಾಹಿತ್ಯ ಪರಿಷತ್ತು, ಸುಳ್ಯ ಘಟಕ ಸುಳ್ಯ.

ಪ್ರಭಾಕರ ಶಿಶಿಲ (ಸಂ) ೨೦೧೧, ಜಳಕ, ಕಾಂತಮಂಗಲ ಶಾಲಾ ಸುವರ್ಣ ಮಹೋತ್ಸವ ಸಂಚಿಕೆ, ಕಾಂತಮಂಗಲ, ಸುಳ್ಯ.

ರಶ್ಮಿ ತಂಟೆಪ್ಪಾಡಿ, ೨೦೦೯, ಕಲ್ಯಾಣಪ್ಪನ ಸ್ವಾತಂತ್ರ್ಯ ಸಮರ, ವಿಶೇಷ ಸಂಚಿಕೆ, ಪಡ್ಡಿನಂಗಡಿ ಸುಳ್ಯ.

ಸೀತಾರಾಮ ಕೇವಳ ಮತ್ತು ಸುಂದರ ಕೇನಾಜೆ (ಸಂ), ೨೦೦೩, ಹೆಜ್ಜೆ, ಡಾ। ಶಿಶಿಲ ಅಭಿನಂದನಾ ಸಮಿತಿ ಸುಳ್ಯ.

ಅಪ್ರಕಟಿತ ಸಂಶೋಧನೆಗಳು ಮತ್ತು ಸಾಹಿತ್ಯ.

Gowramma A. V, 2008, Problems and Prospects of Small Scale Planters: A Case Study of Virajpet Kodagu, Unpublished M.Phil disseratation Submitted to Annamalai University.

Malathi Moorthy 1991, Trade and Commerce in Colonial South Canara, 1799-1862, Mangalore University.

ಪುರುಷೋತ್ತಮ ಬಿಳಿಮಲೆ, ೧೯೮೫, ಸುಳ್ಯ ಪರಿಸರದ ಗೌಡ ಜನಾಂಗ , ಒಂದು ಸಾಂಸ್ಕೃತಿಕ ಅಧ್ಯಯನ, ಮಂಗಳೂರು ವಿಶ್ವವಿದ್ಯಾಲಯ.

Ravindra Chembu, 2008, Problems and Prospects of Small Scale planters: A Case Study of Madikeri Taluk, Kodagu. Unpublished M.Phil dissertation submitted to Tirupathi University.

Anon 1857, Coorg and its Rajahs Mimeo – London.

ಬೂನಲ್ಲಿ ಜವರೇ ಗೌಡ ೧೯೮೭, ಕಲ್ಯಾಣ ಸ್ವಾಮಿ, ಅಪ್ರಕಟಿತ ನಾಟಕ.